ಶ್ರೀಶಾಂಕರಭಾಷ್ಯಸಮೇತ

# ಸನತ್ಸುಜಾತೀಯಮ್

ಪ್ರಕರಣಗಳು- ಸಂಪುಟ

ಕಾರ್ಯಾಲಯ
ಸಂಖ್ಯೆ 170
22.2.0
ಪುಸ್ತಕ ಭಂಡಾರ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.

# ಶ್ರೀ ಶಂಕರಾಚಾರ್ಯರ ಕೃತಿಗಳು

ಇವುಗಳಲ್ಲಿ ಮೂಲ, ಭಾಷ್ಯ, ಟಿಪ್ಪಣಿ, ಸಾರ, ಶಬ್ದಾನುಕ್ರಮಣಿಕೆ– ಇವೆಲ್ಲವೂ ಇವೆ. ಅನುವಾದವನ್ನು ಪರಿಷ್ಕರಿಸಿ ಪೀಠಿಕೆ, ಟಿಪ್ಪಣಿ– ಮುಂತಾದವುಗಳನ್ನು ಹೊಸದಾಗಿಯೇ ಸೇರಿಸಿ ಸಂಸ್ಕೃತಮೂಲಕ್ಕೆ ಬಿಂಬಪ್ರತಿಬಿಂಬದಂತೆ ಅನುವಾದವನ್ನು ಕೊಟ್ಟಿರುವದರಿಂದ ಮೂಲ ಸಂಸ್ಕೃತಭಾಷ್ಯವನ್ನು ಓದುವದಕ್ಕೆ ಪ್ರಯತ್ನಿಸುವವರಿಗೂ, ಶಾಂಕರಭಾಷ್ಯವನ್ನು ಪ್ರಸ್ಥಾನ-ತ್ರಯಭಾಷ್ಯಗಳ ಮತ್ತು ಪ್ರಕರಣಗಳ ಪರಸ್ಪರ ಹೋಲಿಕೆಯಿಂದ ಅರ್ಥಮಾಡಿಕೊಳ್ಳಬೇಕೆನ್ನುವವರಿಗೂ ಈ ಗ್ರಂಥಗಳು ಅತ್ಯಮೂಲ್ಯವಾಗಿವೆ.

1. ಈಶಾವಾಸ್ಯೋಪನಿಷತ್ತು : ಇದರಲ್ಲಿ ಕರ್ಮ, ಉಪಾಸನೆ, ಜ್ಞಾನ– ಇವುಗಳ ಸಂಬಂಧವನ್ನು ಸ್ಪಷ್ಟಪಡಿಸಿರುತ್ತದೆ. ಮಾಧ್ಯಂದಿನಪಾಠವೂ ಇದೆ.

2. ಕೇನೋಪನಿಷತ್ತು : ಚೈತನ್ಯಸ್ವರೂಪವಾದ ಬ್ರಹ್ಮದ ಶಕ್ತಿಯಿಂದಲೇ ಎಲ್ಲವೂ ತಮ್ಮ ತಮ್ಮ ಕೆಲಸಗಳನ್ನು ಮಾಡುವವು – ಎಂಬುದನ್ನು ಸ್ಪಷ್ಟಪಡಿಸುತ್ತದೆ.

3. ಕಾಠಕೋಪನಿಷತ್ತು : ಧರ್ಮಾಧರ್ಮಗಳಿಗೂ ಕಾಲತ್ರಯಕ್ಕೂ ಕಾರ್ಯಕಾರಣಭಾವಕ್ಕೂ ಕಟ್ಟುಬೀಳದ ಬ್ರಹ್ಮವೇ ನಮ್ಮ ಆತ್ಮನು – ಎಂದು ತಿಳಿಸುತ್ತದೆ.

4. ಮುಂಡಕೋಪನಿಷತ್ತು : ವೇದೋಕ್ತವಾದ ವಿದ್ಯೆಯನ್ನು ಪರವಿದ್ಯೆ, ಅಪರವಿದ್ಯೆ – ಎಂದು ಎರಡು ವರ್ಗಗಳಾಗಿ ವಿಂಗಡಿಸಿ ಜಗತ್ಕಾರಣವಾದ ಅಕ್ಷರವೆಂಬ ಹೆಸರಿನ ಅದ್ವಿತೀಯಬ್ರಹ್ಮವನ್ನು ಅರಿತುಕೊಳ್ಳುವ ವಿದ್ಯೆಯೇ ಪರವಿದ್ಯೆ ಎಂದು ಇಲ್ಲಿ ತಿಳಿಸಿದೆ. ಎಲ್ಲವೂ ಬ್ರಹ್ಮವೊಂದೇ ಆಗಿರುವದರಿಂದ ಅದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದೆಂತಲೂ ಈ ಬ್ರಹ್ಮಜ್ಞಾನದಿಂದ ಜೀವನ್ಮುಕ್ತಿಯು ಲಭಿಸುವದೆಂತಲೂ ಪ್ರತಿಪಾದಿಸಿದೆ. ಜ್ಞಾನಕ್ಕೆ ಬೇಕಾದ ಸತ್ಯಾದಿಸಾಧನಗಳನ್ನು ಪ್ರತಿಪಾದಿಸಿರುವದೊಂದು ಇದರ ವಿಶೇಷ.

5. ಪ್ರಶ್ನೋಪನಿಷತ್ತು : ಮುಂಡಕೋಪನಿಷತ್ತಿನ ವಿಷಯವನ್ನು ಇಲ್ಲಿ ವಿವರಿಸಿದೆ. ಮುಂಡಕ-ಪ್ರಶ್ನಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷರಾಖ್ಯ ಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯೂ ಉಪಾಸನೆಯಿಂದ ಕ್ರಮಮುಕ್ತಿಯೂ ಆಗುವದೆಂದು ನಿರೂಪಿಸುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರವರು ಅವಸ್ಥಾತ್ರಯ, ಜ್ಞಾನಸ್ವರೂಪ, ಕರ್ತೃತ್ವಭೋಕ್ತೃತ್ವ – ಎಂಬ ಮೂರು ವಿಷಯಗಳನ್ನು ವಿಸ್ತಾರವಾಗಿ ಚರ್ಚಿಸಿರುತ್ತಾರೆ.

6. ಮಾಂಡೂಕ್ಯೋಪನಿಷತ್ತು : ಎಚ್ಚರ, ಕನಸು, ತನಿನಿದ್ರೆ– ಎಂಬ ಮೂರು ಅವಸ್ಥೆಗಳ ಸೋಂಕೂ ಇಲ್ಲದೆ ನಿರ್ಮಲವಾಗಿರುವ, ನಮ್ಮೆಲ್ಲರ ಆತ್ಮನಾಗಿರುವ ಅದ್ವಿತೀಯಬ್ರಹ್ಮದ ಸ್ವರೂಪವನ್ನು ಅನುಭವಾನುಸಾರವಾಗಿ ಇದರಲ್ಲಿ ವರ್ಣಿಸಿದೆ. ಗೌಡಪಾದರ ಮಾಂಡೂಕ್ಯಕಾರಿಕೆಗಳೂ ಭಾಷ್ಯಸಮೇತವಾಗಿ ಕೊಡಲ್ಪಟ್ಟಿವೆ.

ಅಧ್ಯಾತ್ಮಗ್ರಂಥಾವಳಿ

ಶ್ರೀ ಶಾಂಕರಭಾಷ್ಯಸಮೇತ

# ಸನತ್ಸುಜಾತೀಯಮ್

(ಶಾಂಕರಭಾಷ್ಯ ಮೂಲ, ಅನುವಾದ, ಟಿಪ್ಪಣಿ– ಮುಂತಾದವುಗಳೊಡನೆ)

ಬರೆದವರು :
ಅಧ್ಯಾತ್ಮವಿದ್ಯಾಪ್ರವೀಣ
ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ ೧೭೦

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ.
1976

ಮೊದಲನೆಯ ಮುದ್ರಣ

(೧೦೦೦ ಪ್ರತಿಗಳು)

( 'ಅಧ್ಯಾತ್ಮಪ್ರಕಾಶ'ದಿಂದ ತೆಗೆದಚ್ಚು )

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

( All Rights Reserved )

ಮುದ್ರಣಕಾರರು :

ವೈ. ನರಸಪ್ಪನವರು,

ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.

# ಮುನ್ನುಡಿ

ಶ್ರೀಶಂಕರಾಚಾರ್ಯರವರ ಪ್ರಕರಣಗ್ರಂಥಗಳ ಮಾಲೆಯಲ್ಲಿ- ಅವರಿಂದ ರಚಿತವಾದದ್ದೆಂದು ಪ್ರಸಿದ್ಧವಾಗಿರುವ - ಸನತ್ಸುಜಾತೀಯಭಾಷ್ಯವನ್ನು ಪ್ರಕಟಿಸಲು ನಮಗೆ ಹರ್ಷವಾಗಿದೆ.

ಒಂದೆರಡು ಪ್ರಕರಣಗಳು, ಕೆಲವೇ ಸ್ತೋತ್ರಗಳು- ಇವುಗಳನ್ನು ಬಿಟ್ಟರೆ ಬಹಳಮಟ್ಟಿಗೆ ಶ್ರೀಶಂಕರಾಚಾರ್ಯರವರ ಗ್ರಂಥಗಳನ್ನೆಲ್ಲ ಕಾರ್ಯಾಲಯದ ಮೂಲಕ ಈವರೆಗೆ ಪ್ರಕಟಿಸಿದಂತಾಗಿದೆ.

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ತಮ್ಮ -ವೃದ್ಧಾಪ್ಯ ನಿಮಿತ್ತ ಬರವಣಿಗೆ - ಮುಂತಾದವುಗಳನ್ನು ಸಂಪೂರ್ಣವಾಗಿ 1975ನೆಯ ಜನವರಿಯಿಂದ ನಿಲ್ಲಿಸಿಬಿಟ್ಟಿದ್ದರಿಂದ ಈ ಗ್ರಂಥವನ್ನು ಶ್ರೀಶ್ರೀಗಳವರಲ್ಲಿಯೇ ವೇದಾಂತಾಭ್ಯಾಸವನ್ನು ಮಾಡಿದವರೂ ಶ್ರೀಗಳವರ ವಿಚಾರಸರಣಿಯನ್ನು ತಕ್ಕ ಮಟ್ಟಿಗೆ ಅಳವಡಿಸಿಕೊಂಡವರೂ, ಕಳೆದ ಇಪ್ಪತ್ತುನಾಲ್ಕುವರ್ಷಗಳಿಂದಲೂ ಕಾರ್ಯಾಲಯದ ಪಂಡಿತರಾಗಿ ಸೇವೆಯನ್ನು ಸಲ್ಲಿಸುತ್ತಿರುವವರೂ ಆದ ಅಧ್ಯಾತ್ಮ ವಿದ್ಯಾಪ್ರವೀಣ ವೇ|| ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಸಿದ್ಧಗೊಳಿಸಿರುತ್ತಾರೆ. ಈಗಾಗಲೆ ಒಂದೆರಡು ಗ್ರಂಥಗಳನ್ನು ಬರೆದು ಅಧ್ಯಾತ್ಮಗ್ರಂಥ ರಚನೆಯ ಪ್ರಪಂಚಕ್ಕೆ ಪ್ರವೇಶಿಸಿರುವ ಇವರಿಗೆ ನಾವು ಪುರೋಭಿವೃದ್ಧಿಯನ್ನು ಕೋರುತ್ತೇವೆ. ಮಹಾಜನರು ಶ್ರೀಶ್ರೀಗಳವರ ಗ್ರಂಥಗಳಂತೆಯೇ ಇದನ್ನೂ ಪ್ರೋತ್ಸಾಹಿಸುವರಾಗಿ ನಂಬಿದ್ದೇವೆ.

ಲೇಖಕರು ಎಂದಿನಂತೆ ಈ ಗ್ರಂಥದ ಸಮಸ್ತಹಕ್ಕುಬಾಧ್ಯತೆಗಳನ್ನೂ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೇ ಸಮರ್ಪಿಸಿರುತ್ತಾರೆ.

ಅಧ್ಯಾತ್ಮಗ್ರಂಥಗಳ ಪ್ರಕಟನೆಯನ್ನೇ ಪ್ರಧಾನೋದ್ದೇಶವಾಗಿ ಹೊಂದಿ ಕಾರ್ಯನಿರತವಾಗಿರುವ ಈ ಸಂಸ್ಥೆಗೆ ಎಲ್ಲಾ ವಿಧವಾದ ಬೆಂಬಲವನ್ನೂ ಪ್ರೋತ್ಸಾಹವನ್ನೂ ನೀಡಬೇಕೆಂದು ಮಹಾಜನರಲ್ಲಿ ಈ ಮೂಲಕ ಪ್ರಾರ್ಥಿಸಲಾಗಿದೆ.

ಹೊಳೆನರಸೀಪುರ,
ತಾ|| 1-9-76

ವೈ. ನರಸಪ್ಪ,
ಕಾರ್ಯಕಾರಿಸಮಿತಿಯ ಅಧ್ಯಕ್ಷ

# ಪೀಠಿಕೆ

ಶ್ರೀಮನ್ಮಹಾಭಾರತಾಂತರ್ಗತವಾದ ಉದ್ಯೋಗಪರ್ವದಲ್ಲಿ ಧೃತರಾಷ್ಟ್ರನಿಗೆ ಸನತ್ಸುಜಾತಮಹರ್ಷಿಗಳು ಮಾಡಿರುವ ಅಧ್ಯಾತ್ಮೋಪದೇಶಗಳನ್ನುಳ್ಳ ಭಾಗಕ್ಕೆ 'ಸನತ್ಸುಜಾತೀಯ'ವೆಂದು ಹೆಸರು. ಇದು ಉದ್ಯೋಗಪರ್ವದ ೪೧ನೆಯ ಅಧ್ಯಾಯದಿಂದ ೪೬ನೆಯ ಅಧ್ಯಾಯಗಳವರೆಗಿನ ಆರು ಅಧ್ಯಾಯಗಳ ಭಾಗವಾಗಿದ್ದು 'ಸನತ್ಸುಜಾತಪರ್ವ'ವೆಂಬ ಉಪನಾಮವನ್ನೂ ಹೊಂದಿರುತ್ತದೆ. ಇದಕ್ಕೆ ಶ್ರೀಶಂಕರಾಚಾರ್ಯವಿರಚಿತವಾದದ್ದೆಂದು ಪ್ರಸಿದ್ಧವಾಗಿರುವ ಅದ್ವೈತ ಸಂಪ್ರದಾಯಪರವಾದ ಭಾಷ್ಯವೂ ಶ್ರೀ ವಾದಿರಾಜಭಗವತ್ಪಾದವಿರಚಿತವಾದ ದ್ವೈತಸಂಪ್ರದಾಯಪರವಾದ ಭಾಷ್ಯವೂ ಇವೆ. ಇನ್ನೂ ಬೇರೆಯ ಭಾಷ್ಯಗಳು ಇದ್ದರೂ ಇರಬಹುದು. ಪ್ರಕೃತ ಶ್ರೀಶಾಂಕರಭಾಷ್ಯಸಮೇತವಾದ ಸನತ್ಸುಜಾತೀಯವನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಳ್ಳಲಾಗಿದೆ.

## ಗ್ರಂಥಶರೀರ

ಮೂಲಗ್ರಂಥವು ಒಟ್ಟು ಆರು ಅಧ್ಯಾಯಗಳುಳ್ಳದ್ದಾಗಿದೆ. ಆದರೆ ಶ್ರೀಶಂಕರಾಚಾರ್ಯರ ಭಾಷ್ಯವು ಕೇವಲ ನಾಲ್ಕು ಅಧ್ಯಾಯಗಳಿಗೆ ಮಾತ್ರ ಸೀಮಿತವಾಗಿದೆ. ಒಂದನೆಯ ಮತ್ತು ಐದನೆಯ ಅಧ್ಯಾಯಗಳಿಗೆ ಭಾಷ್ಯಕಾರರು ಭಾಷ್ಯವನ್ನು ಬರೆದಿರುವದಿಲ್ಲ. ವಾದಿರಾಜಸ್ವಾಮಿಗಳವರೂ ಮೊದಲನೆಯ ಅಧ್ಯಾಯಕ್ಕೆ ಭಾಷ್ಯವನ್ನು ಬರೆದಿಲ್ಲವಾದರೂ ಎರಡನೆಯ ಅಧ್ಯಾಯದ ಪ್ರಾರಂಭದ ಇಪ್ಪತ್ತು ಪದ್ಯಗಳಿಗೇ ಒಂದು ಅಧ್ಯಾಯವೆಂತ ಪರಿಗಣಿಸಿ ಉಳಿದ ಪದ್ಯಗಳನ್ನು ಪ್ರತ್ಯೇಕವಾದ ಅಧ್ಯಾಯವಾಗಿ ವಿಂಗಡಿಸಿರುತ್ತಾರೆ. ಇದರಿಂದ ಒಟ್ಟು ಆರು ಅಧ್ಯಾಯಗಳಾಗಿವೆ. ಅಂತೂ ಐದನೆಯ ಅಧ್ಯಾಯದ ವಿಷಯದಲ್ಲಿ ಶಾಂಕರಭಾಷ್ಯಕ್ಕೂ ವಾದಿರಾಜರ ಭಾಷ್ಯಕ್ಕೂ ವ್ಯತ್ಯಾಸವು ಕಂಡುಬಂದಿರುತ್ತದೆ. ಇಡಿಯ ಮಹಾಭಾರತಕ್ಕೇ ವ್ಯಾಖ್ಯಾನವನ್ನು ಬರೆದಿರುವ ನೀಲಕಂಠರು ಕ್ರಮವಾಗಿ ಎಲ್ಲಾ ಅಧ್ಯಾಯಗಳಿಗೂ ವ್ಯಾಖ್ಯೆಯನ್ನು ಬರೆದಿರುತ್ತಾರೆ. ನಾವು ಪರಿಶಿಷ್ಟದಲ್ಲಿ ಕೊಟ್ಟಿರುವ ಐದನೆಯ ಅಧ್ಯಾಯದ ಶ್ಲೋಕಗಳನ್ನು ವಾಚಕರು ನೋಡಿದಲ್ಲಿ ಅವು ಒಂದಲ್ಲ ಒಂದು ರೀತಿಯಿಂದ ಉಳಿದ ನಾಲ್ಕು ಅಧ್ಯಾಯಗಳಲ್ಲೇ ಅಡಕವಾಗಿವೆಯೆಂದು ಊಹಿಸಬಹುದಾಗಿದೆ. ಆದ್ದರಿಂದಲೇ ಭಾಷ್ಯಕಾರರು ಐದನೆಯ ಅಧ್ಯಾಯವನ್ನು ಕೈಬಿಟ್ಟರಬಹುದೆಂತ ಕಲ್ಪಿಸಲೂ ಅವಕಾಶವಿದೆ.

ಇನ್ನು ಪಾಠಾಂತರಗಳ ವಿಷಯ: ಭಾಷ್ಯಕಾರರು ಅಂಗೀಕರಿಸಿರುವ ಪಾಠಕ್ಕೂ ಮೂಲಮಹಾಭಾರತದ ಪಾಠಕ್ಕೂ ತುಂಬ ವ್ಯತ್ಯಾಸಗಳು ಕಂಡು ಬರುತ್ತವೆ. ಬಹಳಮಟ್ಟಿಗೆ ನೀಲಕಂಠೀಯವ್ಯಾಖ್ಯಾಸಹಿತವಾದ ಮಹಾಭಾರತ ಪಾಠಾಂತರಗಳನ್ನು ನಾನು ಆಯಾ ಶ್ಲೋಕಗಳ ಕೆಳಗೇ ಅಡಿಟಿಪ್ಪಣಿಯಲ್ಲಿ ತೋರಿಸಿರುತ್ತೇನೆ. ಮೂಲಮಹಾಭಾರತದ ಬೇರೆಬೇರೆಯ ಮುದ್ರಣಗಳನ್ನು ಹುಡುಕಿದರೆ ಇನ್ನೂ ಹೆಚ್ಚಿನ ಪಾಠಾಂತರಗಳು ದೊರೆಯಬಹುದು. ಆದರೆ ನಾನು ಅಷ್ಟೊಂದು ಶೋಧನೆಗೆ ಹೋಗದೆ ಸುಲಭವಾಗಿ ದೊರಕಿದ ಪಾಠಾಂತರ ಗಳನ್ನು ಮಾತ್ರ ಕೊಟ್ಟಿರುತ್ತೇನೆ. ಇಂಥ ಸಂದರ್ಭಗಳಲ್ಲಿ ಮೂಲಗ್ರಂಥದ ಅಭಿಪ್ರಾಯವೇನೆಂಬುದನ್ನು ನಿರ್ಣಯಿಸಲು ಕಷ್ಟವಾಗಿದ್ದು ಆಯಾ ಭಾಷ್ಯಕಾರ ಸಮ್ಮತವಾದ ಅಭಿಪ್ರಾಯಗಳನ್ನೇ ಮೂಲಾಭಿಪ್ರಾಯವೆಂತ ಒಪ್ಪಿಕೊಳ್ಳ ಬೇಕಾಗುವದು. ಮಹಾಭಾರತದಲ್ಲಿ ಕೆಲವು ಗ್ರಂಥಗ್ರಂಥಿಗಳು ಇದ್ದುಕೊಂಡೇ ಇವೆಯೆಂದು ವಿದ್ವಾಂಸರಿಗೆಲ್ಲ ತಿಳಿದೇಇದೆ. 'ವ್ಯಾಸಗುಟ್ಟುಗಳು' ಎಂದೂ ಅವುಗಳನ್ನು ಕರೆಯುತ್ತಾರೆ. ಆದ್ದರಿಂದ ಅಂಥ ಗ್ರಂಥಿಗಳ ರಹಸ್ಯವನ್ನು ಬಿಡಿಸುವ ಕಾರ್ಯವನ್ನು ನಾನು ವಿದ್ವಾಂಸರಿಗೇ ಬಿಟ್ಟಿರುತ್ತೇನೆ.

## ಭಾಷ್ಯಕಾರರು

ಈ ಗ್ರಂಥದ ಭಾಷ್ಯಕಾರರು ಸುಪ್ರಸಿದ್ಧ ಪ್ರಸ್ಥಾನತ್ರಯಭಾಷ್ಯಗಳ ಕರ್ತೃ ಗಳಾದ ಶಂಕರಾಚಾರ್ಯರೇ ಆಗಿರಬೇಕೆಂಬುದಕ್ಕೆ ಕೆಲವು ಅಡಚಣೆಗಳು ಕಂಡು ಬರುತ್ತವೆ. ಈ ಅಭಿಪ್ರಾಯವನ್ನು ದಿ|| ಮಹದೇವಶಾಸ್ತ್ರಿಗಳೂ ಒಪ್ಪಿರುತ್ತಾರೆ. ಅವರು ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿ ಗ್ರಂಥಮಾಲೆಯಲ್ಲಿ ಪ್ರಕಟಿಸಿರುವ **'ಶ್ರೀ ಶಂಕರಭಗವತ್ಪಾದೀಯಪ್ರಕರಣಪ್ರಬನ್ಧಾವಳಿಃ– ಪ್ರಥಮ ಸಂಪುಟಮ್'** (1898) ಎಂಬ ಗ್ರಂಥದ ಆಂಗ್ಲಭಾಷೆಯ ಮುನ್ನುಡಿ ಯಲ್ಲಿ ಹೀಗೆಂದಿರುತ್ತಾರೆ: "There is no gurantee that all the works that go by his name are his genuine Productions" (ಶ್ರೀಶಂಕರಾಚಾರ್ಯರ ಹೆಸರಿನಲ್ಲಿ ಪ್ರಚಲಿತವಾಗಿರುವ ಕೃತಿಗಳೆಲ್ಲವೂ ಅವರ ಸ್ವಂತ ಲೇಖನಿಯಿಂದ ಬಂದವೇ– ಎಂಬ ವಿಷಯಕ್ಕೆ ಯಾವ ಭರವಸೆಯೂ ಇಲ್ಲ). ಈ ಮಾತು ನಿಜವೆನ್ನುವಷ್ಟುಮಟ್ಟಿಗೆ ಪ್ರಕೃತಭಾಷ್ಯ ದಲ್ಲಿ ಹಲವು ಸೂಚನೆಗಳು ದೊರೆಯುತ್ತವೆ. ಹೇಗೆಂದರೆ: (೧) 'ಚಿತ್ಸದಾನಂದಾ- ದ್ವಿತೀಯ' ಎಂಬ ಪದವೃಂದವು ಬಹಳಕಡೆ ಅಲ್ಲಲ್ಲಿ ಉಪಯೋಗಿಸಲ್ಪಟ್ಟಿದೆ. ಈ ಶಬ್ದಪ್ರಯೋಗವು ಈ ರೂಪದಿಂದ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಂಡುಬರು ವದಿಲ್ಲ. ಬ್ರಹ್ಮವು ಅವಿದ್ಯೆಗೆ ಆಶ್ರಯವೂ ವಿಷಯವೂ ಆಗಿದೆ– ಎಂಬ ಈಚಿನ ವ್ಯಾಖ್ಯಾನಪ್ರಸ್ಥಾನಗಳ ಪ್ರಕ್ರಿಯೆಯನ್ನು ಇಲ್ಲಿ ಸ್ವೀಕರಿಸಿದೆ. (೨) 'ಯಮಂ

ತ್ರೇಶೇ' ಎಂಬ ೫ರನೆಯ ಶ್ಲೋಕಕ್ಕೆ ಬರೆದಿರುವ ವಿಸ್ತಾರವಾದ ಭಾಷ್ಯದಲ್ಲಿಯೂ ಹಾಗೂ ಇತರ ಕಡೆಗಳಲ್ಲಿಯೂ ವಿಷಯಪ್ರತಿಪಾದನೆಗಾಗಿ ಉದಾಹರಿಸಿರುವ ಪ್ರಮಾಣವಚನಗಳಲ್ಲಿ ಬ್ರಹ್ಮಾಂಡಪುರಾಣ, ಲಿಂಗಪುರಾಣ, ವಸಿಷ್ಠಸ್ಮೃತಿ, ನಾಮಮಹೋದಧಿ, ಕಾವಷೇಯಗೀತಾ, ನಾರದಸ್ಮೃತಿ, ಬೃಹಸ್ಪತಿವಾಕ್ಯ, ಹೈರಣ್ಯಗರ್ಭಸ್ಮೃತಿ, ಉಶನವಾಕ್ಯ– ಮುಂತಾದ ಪ್ರಸ್ಥಾನತ್ರಯಭಾಷ್ಯಕಾರರು ಹೆಸರಿಸದೆ ಇರುವ ಅಪೂರ್ವಗ್ರಂಥಗಳ ಪರಾಮರ್ಶವು ಕಂಡುಬರುತ್ತಿದೆ. (೩) 'ದೋಷೋ ಮಹಾನತ್ರ' (೧–೨೦) ಎಂಬ ಇಪ್ಪತ್ತನೆಯ ಶ್ಲೋಕಭಾಷ್ಯದಲ್ಲಿ ಮಾಡಿರುವ ವಿಸ್ತಾರವಾದ ಜೀವೇಶ್ವರವ್ಯವಹಾರದ ಚರ್ಚೆಯಲ್ಲಿ ಬಹುಭಾಗವನ್ನು ಪ್ರಮಾಣವಚನಗಳಿಗೇ ಮೀಸಲಾಗಿರಿಸಲಾಗಿದೆ. ವಿಷ್ಣುಪುರಾಣದ ಸುಮಾರು ಇಪ್ಪತ್ತು ಶ್ಲೋಕಗಳನ್ನು ಒಂದೇಬಾರಿಗೆ ಉದಾಹರಿಸಿರುತ್ತದೆ. ವಿಷಯಪ್ರತಿಪಾದನೆಗೆ ಬೇಕಾದ ಸುಪ್ರಸಿದ್ಧವೇದಾಂತಪ್ರಕ್ರಿಯೆಗಳಾವುವನ್ನೂ ಇಲ್ಲಿ ಪರಾಮರ್ಶಿಸಿರುವದಿಲ್ಲ. ಕಾರ್ಯಕಾರಣ, ಅವಸ್ಥಾತ್ರಯ-ಗಳಂಥ ಪ್ರಕ್ರಿಯೆಗಳನ್ನು ಎಲ್ಲಿಯೂ ಬಳಸಿಕೊಂಡಿರುವದು ಕಂಡುಬರುವದಿಲ್ಲ. ಈ ತರಹದ ಶೈಲಿಯು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಂಡುಬರುವದಿಲ್ಲ. (೪) ಸುಪ್ರಸಿದ್ಧ ಪ್ರಸ್ಥಾನ-ತ್ರಯಭಾಷ್ಯಗಳಲ್ಲಿ ಕಂಡುಬರುವ ಪದಲಾಲಿತ್ಯ, ಅರ್ಥಗಾಂಭೀರ್ಯ, ಪ್ರಸನ್ನತೆ –ಮುಂತಾದ ಗುಣಗಳೂ ಅಷ್ಟಾಗಿ ಇದರಲ್ಲಿ ಕಂಡುಬರುವದಿಲ್ಲ.

ಆದರೆ ಈ ಸನತ್ಸುಜಾತೀಯಭಾಷ್ಯವು ಶಂಕರಾಚಾರ್ಯವಿರಚಿತವೇ ಆಗಿದೆ ಎಂದು ಹೇಳುವವರೂ ಇದ್ದಾರೆ. ಅವರ ಅಭಿಪ್ರಾಯದಂತೆ : ಮಾಧವೀಯ ಶಂಕರವಿಜಯದಲ್ಲಿರುವ ಒಂದು ಶ್ಲೋಕದಲ್ಲಿ "ತತೋ ಮಹಾಭಾರತ.... ಸನತ್ಸುಜಾತೀಯಮಸತ್ಸುದೂರಂ ತತೋ ನೃಸಿಂಹಸ್ಯ ಚ ತಾಪನೀ-ಯಮಪ್" ಎಂಬುದಾಗಿ ಆಚಾರ್ಯರು ಸನತ್ಸುಜಾತೀಯಭಾಷ್ಯವನ್ನು ರಚಿಸಿರುತ್ತಾರೆಂತ ಪರಾಮರ್ಶವಿರುವದೇ ಪ್ರಮಾಣವು. ಮತ್ತು ನಾರಾಯಣರೆಂಬ ಪಂಡಿತರಿಂದ ವಿರಚಿತವಾದ ಉಪನಿಷದ್ದೀಪಿಕೆಯಲ್ಲಿ 'ಶಂಕರೋಕ್ತ್ಯುಪಜೀವಿನಾ' ಎಂದು ಹೇಳಿರುವದೂ ಸಹ ನೃಸಿಂಹತಾಪನೀಯವೆಂಬ ಉಪನಿಷತ್ತಿನ ಭಾಷ್ಯವೂ ಶಂಕರಾಚಾರ್ಯವಿರಚಿತವೇ ಎಂಬುದಕ್ಕೆ ಪ್ರಮಾಣವು ಎಂದು ಹೇಳುತ್ತಾರೆ. ಮೇಲೆ ಕೊಟ್ಟಿರುವ ಶಂಕರವಿಜಯದ ಶ್ಲೋಕದಲ್ಲಿ ಸನತ್ಸುಜಾತೀಯ, ನೃಸಿಂಹತಾಪನೀಯಗಳನ್ನು ಹೆಸರಿಸಿರುವದರಿಂದ ಎರಡು ಭಾಷ್ಯಗಳೂ ಆಚಾರ್ಯಕೃತವೇ- ಎಂದು ಪೂನಾನಗರಿಯ ಆನಂದಾಶ್ರಮದ ಪಂಡಿತರುಗಳು ಅಭಿಪ್ರಾಯಪಡುತ್ತಾರೆ.

ಆದರೆ ಕೇವಲ ಶಂಕರವಿಜಯಶ್ಲೋಕಪ್ರಮಾಣದಿಂದಲೇ ಇದು ಆಚಾರ್ಯರ ಕೃತಿಯೆಂದು ಒಪ್ಪುವದು ಸರ್ವಸಮ್ಮತವಾಗಲಾರದು. ಆದ್ದರಿಂದ

ಇದೇತರಹದ ಶೈಲಿಯು ಬೇರೆಯ ಭಾಷ್ಯಗ್ರಂಥಗಳನ್ನು ಹುಡುಕಿ ನೋಡಿದಾಗ 'ಶ್ರೀಶಂಕರಾಚಾರ್ಯವಿರಚಿತ 'ಶ್ವೇತಾಶ್ವತರೋಪನಿಷದ್ಭಾಷ್ಯ'-ವೊಂದು ಗೋಚರವಾಯಿತು. ಅದರಲ್ಲಿ ಪ್ರಾರಂಭದಲ್ಲಿಯೇ 'ಚಿತ್ಸದಾನಂದಾದ್ವಿತೀಯಂ' ವೆಂಬ ಪದವೃಂದವೂ 'ಮಕರಾದಿಭಿರಿವ ರಾಗಾದಿಭಿಃ' ಎಂಬ ದೃಷ್ಟಾಂತವೂ ಕಂಡುಬಂತು. ಅವುಗಳನ್ನೇ ಇಲ್ಲಿಯೂ ಉಪಯೋಗಿಸಿರುವದರಿಂದಲೂ ಪ್ರಮಾಣ ವಾಕ್ಯಗಳನ್ನು ಉದಾಹರಿಸುವಾಗಲೂ ಶ್ವೇತಾಶ್ವತರಭಾಷ್ಯದ ಶೈಲಿಯನ್ನೇ ಅನು ಕರಿಸಿರುವದರಿಂದಲೂ ಈ ಗ್ರಂಥದ ಪುಟ ೨೩ರಲ್ಲಿ ಉದಾಹರಿಸಿರುವ ಶ್ಲೋಕವು ಶ್ವೇತಾಶ್ವತರೋಪನಿಷದ್ಭಾಷ್ಯದಲ್ಲಿಯೂ ಕಂಡುಬರುವದರಿಂದಲೂ ಈ ಎರಡೂ ಭಾಷ್ಯಗಳು ಒಬ್ಬ ಕರ್ತೃವಿನಿಂದಲೇ ರಚಿತವಾಗಿದ್ದು ಶಂಕರಾಚಾರ್ಯರ ಹೆಸರಿ ನಲ್ಲಿ ಪ್ರಸಿದ್ಧವಾಗಿದೆ- ಎಂದು ಊಹಿಸಬಹುದಾಗಿದೆ. ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆಯನ್ನು ನಾನು ವಿದ್ವಾಂಸರಿಗೇ ಬಿಟ್ಟಿರುತ್ತೇನೆ. ನಮ್ಮ ಗುರುಗಳು 'ವಿಷ್ಣುಸಹಸ್ರನಾಮಭಾಷ್ಯ'ಕ್ಕೆ[1] ಬರೆದಿರುವ ಪೀಠಿಕೆಯನ್ನೂ ನೋಡಿರಿ.

## ಗ್ರಂಥಪ್ರತಿಪಾದ್ಯವಿಷಯ

ಭಾಷ್ಯಕಾರರ ಅಭಿಪ್ರಾಯದಂತೆ ಗ್ರಂಥದಲ್ಲಿ ನಾಲ್ಕು ಅಧ್ಯಾಯಗಳಿವೆ. ಇವುಗಳಿಗೆ ಪೀಠಿಕೆಯಂತಿರುವ ಹಿಂದಿನ ಅಧ್ಯಾಯವನ್ನೂ ಭಾಷ್ಯಕಾರರು ಪರಾ ಮರ್ಶಮಾಡಿರುತ್ತಾರೆ. ಧೃತರಾಷ್ಟ್ರನಿಗೆ ಒಂದು ದಿನ ರಾತ್ರಿ ನಿದ್ರೆಬಾರದೆ ಹೋದದ್ದರಿಂದ ತನ್ನ ತಮ್ಮನಾದ ವಿದುರನನ್ನು ಕರೆಯಿಸಿಕೊಂಡು ಹಿತವಚನ ಗಳನ್ನು ಹೇಳುವಂತೆ ಕೋರುತ್ತಾನೆ. ಆಗ ವಿದುರನು ನೀತಿಯನ್ನು ಉಪದೇಶ ಮಾಡುತ್ತಾನೆ. ಇದೇ 'ವಿದುರನೀತಿ'ಯೆಂಬ ಹೆಸರಿನಿಂದ ಮಹಾಭಾರತದಲ್ಲಿ ಪ್ರಸಿದ್ಧವಾಗಿದೆ. ಅನಂತರ ಎಲ್ಲವನ್ನೂ ಕೇಳಿದ ಧೃತರಾಷ್ಟ್ರನು 'ವಿದುರನೆ, ನೀನು ಇನ್ನೂ ಹೇಳಬಹುದಾದದ್ದು ಏನಾದರೂ ಇದ್ದರೆ ಹೇಳು' ಎಂದು ಮತ್ತೆ ಪ್ರಶ್ನೆ ಮಾಡಿದಾಗ ವಿದುರನು 'ಸನತ್ಸುಜಾತನು ನಿನಗೆ ಇನ್ನೂ ಹೆಚ್ಚಿನ ರಹಸ್ಯಗಳನ್ನು ತಿಳಿಸಬಲ್ಲನು'- ಎಂದನು. ಆಗ ಧೃತರಾಷ್ಟ್ರನು 'ಅದೇಕೆ? ಆ ರಹಸ್ಯಗಳು ನಿನಗೆ ತಿಳಿಯದೆ? ಎಂದು ಕೇಳಿದ್ದಕ್ಕೆ ವಿದುರನು 'ಹಾಗಲ್ಲ, ನಾನು ಶೂದ್ರ ಜಾತಿಯಲ್ಲಿ ಹುಟ್ಟಿದವನು. ವೇದರಹಸ್ಯಗಳನ್ನು ನಾನು ಒಂದುವೇಳೆ ತಿಳಿದವ ನಾಗಿದ್ದರೂ ಮತ್ತೊಬ್ಬರಿಗೆ ಉಪದೇಶಮಾಡುವ ಯೋಗ್ಯತೆಯನ್ನು ಹೊಂದಿಲ್ಲ. ಏನಿದ್ದರೂ ಬ್ರಾಹ್ಮಣನಾದವನೇ ಉಪದೇಶಮಾಡಲು ಅರ್ಹನೆಂದು ದೇವತೆಗಳು ಅಭಿಪ್ರಾಯಪಡುತ್ತಾರೆ. ಆದ್ದರಿಂದ ನೀನು ಬ್ರಹ್ಮವಿದ್ಯೆಯನ್ನು ಸನತ್ಸುಜಾತ

---

1. 'ವಿಷ್ಣುಸಹಸ್ರನಾಮಭಾಷ್ಯ' ಶಾಂಕರಭಾಷ್ಯ ಮೂಲ, ಕನ್ನಡ ಅನುವಾದ ಸಮೇತ ಪ್ರಕಟವಾಗಿದ್ದು ಕಾರ್ಯಾಲಯದಲ್ಲಿ ದೊರೆಯುತ್ತದೆ.

ನಿಂದಲೇ ತಿಳಿಯುವವನಾಗು' ಎಂದನು. ಆಗ ಧೃತರಾಷ್ಟ್ರನು 'ಸರಿ, ಈ ಶರೀರದಿಂದಲೇ ಈಗಲೇ ಆ ಸನತ್ಸುಜಾತನನ್ನು ನಾನು ಹೇಗೆ ಹೊಂದಲಿ ?' ಎನ್ನಲು ವಿದುರನು ತನ್ನ ದಿವ್ಯವಾದ ಆತ್ಮಶಕ್ತಿಯಿಂದ ಸನತ್ಸುಜಾತರನ್ನು ಅಲ್ಲಿಗೇ ಕರೆಯಿಸಿದನು. ಸನತ್ಸುಜಾತರು ಪ್ರತ್ಯಕ್ಷರಾದಕೂಡಲೆ ವಿದುರನು ಧೃತರಾಷ್ಟ್ರನ ಸಂಶಯವನ್ನು ಪರಿಹರಿಸಿ ತತ್ತ್ವೋಪದೇಶವನ್ನು ಮಾಡಬೇಕೆಂದು ಅವರನ್ನು ಪ್ರಾರ್ಥಿಸಿಕೊಂಡನು. ಆಗ ಧೃತರಾಷ್ಟ್ರನು ಸನತ್ಸುಜಾತನನ್ನು ಸತ್ಕರಿಸಿ ಏಕಾಂತದಲ್ಲಿ ಕುಳಿತು ಪ್ರಶ್ನೆಮಾಡಿ ಬ್ರಹ್ಮವಿದ್ಯೆಯ ಉಪದೇಶವನ್ನು ಪಡೆದುಕೊಂಡನು– ಎಂದು ಪೀಠಿಕಾಧ್ಯಾಯದಲ್ಲಿ ತಿಳಿಸಿದೆ.

ಇದರಿಂದ ತಿಳಿಯಬರುವದೇನೆಂದರೆ : ವಿದುರನು ಬ್ರಹ್ಮಜ್ಞಾನಿಯೆಂಬುದು ನಿರ್ವಿವಾದವಾದ ವಿಷಯ. ಅವನ ಜಾತಿಯೇನೂ ಬ್ರಹ್ಮಜ್ಞಾನವನ್ನು ಪಡೆದುಕೊಳ್ಳಲು ಅಡ್ಡಿಯಾಗಲಿಲ್ಲ. ಆದರೆ ಬ್ರಹ್ಮೋಪದೇಶವನ್ನು ಮಾಡಲು ಜನ್ಮತಃ ಬ್ರಾಹ್ಮಣನಾಗಿರುವವನೇ ಅಧಿಕಾರಿಯೆಂಬುದು ವಿದುರನ ಮತ. ಅಧ್ಯಾಪನ (ಕಲಿಸುವದು) ಎಂಬ ಕರ್ಮವು ವೈದಿಕವಾದ್ದರಿಂದ ಷಟ್ಕರ್ಮಗಳಲ್ಲಿ ಪೂರ್ಣ ಅಧಿಕಾರವುಳ್ಳ ಬ್ರಾಹ್ಮಣನೇ ಬ್ರಹ್ಮವಿದ್ಯೆಯನ್ನು ತಿಳಿಸುವ ಗುರುವಾಗುವನು– ಎಂದು ವ್ಯಾಸಮಹರ್ಷಿಗಳು ಇಲ್ಲಿ ತಿಳಿಸಿರುತ್ತಾರೆ. ಇದು ವಿದುರನ ಗೌರವವನ್ನು ಮತ್ತಷ್ಟು ಹೆಚ್ಚಿಸುವದೇ ಹೊರತು ಬೇರೆಯಲ್ಲ. ಹೇಗೆಂದರೆ : ನಿವೃತ್ತಿಧರ್ಮನಿಷ್ಠರೂ ಯಾವಾಗಲೂ ಭಗವಚ್ಚಿಂತನೆಯಲ್ಲಿಯೇ ಮುಳುಗಿರುವವರೂ ಜ್ಞಾನವೈರಾಗ್ಯಸಂಪನ್ನರೂ ಆದ ಸನತ್ಸುಜಾತಮಹರ್ಷಿಗಳನ್ನು ವಿದುರನು ತನ್ನ ದಿವ್ಯಶಕ್ತಿಯಿಂದ ತಾನು ಇದ್ದಲ್ಲಿಗೇ ಬರಮಾಡಿಕೊಳ್ಳಬೇಕಾದರೆ ಅವನು ಎಂಥ ಮಹಾತ್ಮನಾಗಿರಬೇಕು ? ಬ್ರಹ್ಮವಿದ್ಯೆಯನ್ನು ಬಯಸುವವನು ನ್ಯಾಯವಾಗಿ ತಾನೇ ಗುರುಗಳಲ್ಲಿಗೆ ಹೋಗಬೇಕಾದದ್ದು ಸಂಪ್ರದಾಯವಾಗಿದೆ. ಆದರೆ ಶಿಷ್ಯನಿದ್ದಲ್ಲಿಗೇ ಗುರುಗಳು ಬರುವದಾದರೆ ಇದು ವಿದುರನಂಥ ಮಹಾತ್ಮನ ಅದ್ಭುತವಾದ ಬ್ರಹ್ಮವಿದ್ಯೆಯ ಮಹಿಮೆಯನ್ನು ಕೊಂಡಾಡಿದಂತಾಗುತ್ತದೆ. ಆಗ ಸನತ್ಸುಜಾತರು ದೊಡ್ಡವರೊ ? ವಿದುರನು ದೊಡ್ಡವನೊ, ? ಎಂಬ ಪ್ರಶ್ನೆಗೆ ನಾವೇ ಉತ್ತರವನ್ನು ಕಂಡುಕೊಳ್ಳಬೇಕಾದೀತು. ನಿಜವೇನೆಂದರೆ : ಬ್ರಹ್ಮಜ್ಞಾನಿಗಳೆಲ್ಲರೂ ಒಂದೇ ಮಟ್ಟದವರು; ಸರ್ವರೂ ಪೂಜ್ಯರು– ಎಂಬಿದೇ ಆಗಿದೆ. ಬ್ರಹ್ಮಜ್ಞಾನದ ಮಜಲನ್ನು ಮುಟ್ಟಿದಾಗ ಉಳಿದ ಭೇದಗಳೆಲ್ಲವೂ ಅಡಗಿಹೋಗುವವು ಎಂದು ಇದರಿಂದ ಸಿದ್ಧವಾಯಿತು.

ಹೀಗೆ ಸನತ್ಸುಜಾತರ ಸಂಪರ್ಕವನ್ನು ಬೆಳೆಸಿದ ಧೃತರಾಷ್ಟ್ರನು ಆ ಮಹನೀಯರಿಂದ ಪಡೆದುಕೊಂಡ ಉಪದೇಶವು ಮುಂದಿನ ನಾಲ್ಕು ಅಧ್ಯಾಯಗಳಲ್ಲಿದೆ. ಮೊದಲನೆಯ ಅಧ್ಯಾಯದ ಸಾರವೇನೆಂದರೆ : ಮೃತ್ಯುವೆಂದರೆ ಯಾರು ? ಅವನ

ಸ್ವರೂಪವೇನು ? ಎಂಬುದನ್ನು ವಿವರಿಸಿ ಪ್ರಮಾದವೇ ಮೃತ್ಯುವೆಂದೂ ಅದ ರಿಂದಲೇ ಅಸುರರು ಸೋತುಹೋದರೆಂದೂ ತಿಳಿಸಿದೆ. 'ಪ್ರಮಾದರೂಪವಾದ ಅವಿದ್ಯೆಯು ಕಾಮುಕರ್ಮಗಳ ಮೂಲಕ ಜೀವನಿಗೆ ಸಂಸಾರವನ್ನುಂಟುಮಾಡಿರು ತ್ತದೆ. ಅವಿದ್ಯೆಯನ್ನು ಕಳೆದುಕೊಳ್ಳಲು ಜ್ಞಾನವೇ ಸಾಧನವು. ಇಂಥ ಜ್ಞಾನವು ವೇದಗಳ ಮೂಲಕ ಉಂಟಾಗುವದು. ಆದರೆ ಜ್ಞಾನಕ್ಕಾಗಿ ಸಾಧನಗಳನ್ನು ಮಾಡುವವನು ಫಲದ ಆಶೆಯಿಂದ ಅವುಗಳನ್ನು ಮಾಡಬಾರದು. ಹಾಗೆ ಮಾಡಿದರೆ ಆ ಪುಣ್ಯಕರ್ಮಗಳ ಫಲವೂ ಜ್ಞಾನಕ್ಕೆ ಪ್ರತಿಬಂಧಕವೇ ಆದೀತು. ಆದ್ದರಿಂದ ನಿಷ್ಕಾಮನಾಗಿ ಮಾಡಬೇಕು. ಜ್ಞಾನಿಯು ಲೋಕದ ಜನರಿಗೆ ಗುರುತುಹತ್ತದಂತೆ ಇರಬೇಕು. ನಿಂದಾಸ್ತುತಿಗಳನ್ನೂ ಪೂಜಾವಮಾನಾದಿ ಗಳನ್ನೂ ಸಮನಾಗಿ ಕಾಣಬೇಕು. ಯಾವನೂ ತನ್ನ ಆತ್ಮನನ್ನು ಕಂಡುಕೊಳ್ಳದೆ ಆತ್ಮಾಪಹಾರಿಯಾಗಬಾರದು. ಗೂಢವಾದ ಚರ್ಯೆಯುಳ್ಳವನಾಗದಿದ್ದರೆ ವಾಂತಾಶಿಯಂತಾಗುವನು. ಆದ್ದರಿಂದ ಯಾರಿಗೂ ಗೊತ್ತಾಗದ ರೀತಿಯಲ್ಲಿರುವ ಮುನಿಯು ಬ್ರಹ್ಮವಿದನಾಗಿದ್ದು ಎಲ್ಲಾ ದೇವತೆಗಳಿಗಿಂತಲೂ ಮೇಲೆನಿಸುವನು. ಅವನು ಲೋಕವ್ಯವಹಾರವನ್ನು ಕಣ್ಣುರೆಪ್ಪೆಗಳು ಹೊಡೆದೂಬಿಟ್ಟೂ ಮಾಡು ವಂತೆ ಸ್ವಾಭಾವಿಕವಾಗಿ ಮಾಡುವನು. ಪ್ರಜ್ಞಾವಂತನೂ ಬ್ರಹ್ಮಶ್ರೀಸಂಪನ್ನನೂ ಆದ ಇಂಥವನು ದುರ್ಲಭನಾಗಿರುವನು'- ಎಂದೂ ತಿಳಿಸಿದೆ.

ಎರಡನೆಯ ಅಧ್ಯಾಯದಲ್ಲಿ : ಮೌನವೆಂದರೇನು ? ಅದು ಎಷು ವಿಧ ವಾಗಿದೆ ? ಎಂದು ಮುಂತಾದ ಪ್ರಶ್ನೆಗಳನ್ನು ಎಬ್ಬಿಸಿ ಉತ್ತರವನ್ನು ಹೇಳಿದೆ. ಪರಮಾತ್ಮನೇ ಮೌನವು ಎಂದು ತಿಳಿಸಿ ಮುಂದೆ ವಿವರಿಸಲಾಗಿದೆ. 'ಕೇವಲ ವೇದಾಧ್ಯಯನಮಾತ್ರದಿಂದ ಯಾವನೂ ಸಂಸಾರವನ್ನು ದಾಟಲಾರನು. ವೇದಗಳು ಶಾಖಾಚಂದ್ರನ್ಯಾಯದಂತೆ ಭಗವಂತನನ್ನು ತೋರಿಸಿಕೊಡುತ್ತವೆ ಯೆಂಬುದು ನಿಜ. ಆದರೆ ಸತ್ಯ, ತಪಸ್ಸು, ಜ್ಞಾನ- ಇವುಗಳಿಂದಲೇ ಪರ ಮಾತ್ಮನ ಪ್ರಾಪ್ತಿಯಾದೀತು. ಅದರಲ್ಲಿಯೂ ಮುಖ್ಯವಾಗಿ ತಪಸ್ಸೇ ಭಗವಂತನ ಪ್ರಾಪ್ತಿಗೆ ಸಾಧನವು. ಆ ತಪಸ್ಸು ಕ್ರೋಧಾದಿದೋಷಗಳಿಲ್ಲದೆ ನಿಷ್ಕಲ್ಮಷ ವಾಗಿರಬೇಕು. ಕೋಪವೇ ಮುಂತಾದವು ತಪಸ್ವಿಯಾದ ಸಾಧಕನನ್ನು ಸಮಯ ಕಾದು ನಾಶಗೊಳಿಸಲು ಸಿದ್ಧವಾಗಿರುತ್ತವೆ. ಆದ್ದರಿಂದ ಅವುಗಳ ಬಗ್ಗೆ ಎಚ್ಚರಿಕೆ ಯಿಂದಿರಬೇಕು. ದಮವೇ ಮುಂತಾದ ಸಾಧನಗಳನ್ನು ದೋಷಗಳಿಲ್ಲದಂತೆ ಮಾಡಬೇಕು ; ಆರು ವಿಧವಾದ ತ್ಯಾಗಗಳು ಬ್ರಹ್ಮಪ್ರಾಪ್ತಿಗೆ ಮುಖ್ಯವಾದವು ಗಳು. ಅವುಗಳಲ್ಲಿ ಕಾಮತ್ಯಾಗವೇ ಅತ್ಯಂತ ಹೆಚ್ಚಿನದು. ವೇದವೆಂದರೆ ಬ್ರಹ್ಮವೇ. ಅದನ್ನರಿಯದ್ದರಿಂದ ಬಹಳ ವೇದಗಳಾಗಿವೆ. ಆದ್ದರಿಂದ ಎಷ್ಟೇ ಸಂಖ್ಯೆಯ ವೇದಗಳನ್ನು ಓದಿದ್ದರೂ ಬ್ರಹ್ಮಜ್ಞಾನವಿಲ್ಲದೆ ಅವನು ಬ್ರಾಹ್ಮಣ

ನಾಗಲಾರನು ; ಪೂಜ್ಯನಾಗಲಾರನು. ಸತ್ಯವೇ ಪೂಜ್ಯತೆಗೆ ತಕ್ಕದ್ದು. ವೇದಗಳಿಗೂ ವೇದನೆನಿಸಿರುವ ಪರಮಾತ್ಮನನ್ನು ಬಲ್ಲವನು ವೇದ-ವೇದ್ಯಗಳೆರಡರ ತತ್ತ್ವವನ್ನೂ ಅರಿತವನಾಗುವನು. ಸುಮ್ಮನೆ ಕುಳಿತದ್ದರಿಂದಾಗಲಿ, ಅರಣ್ಯದಲ್ಲಿ ವಾಸಮಾಡುವದರಿಂದಲಾಗಲಿ, ಮುನಿಯಾಗಲಾರನು. ಅಕ್ಷರವಾದ ಆ ಪರಬ್ರಹ್ಮತತ್ತ್ವವನ್ನು ಬಲ್ಲವನೇ ಶ್ರೇಷ್ಠನಾದ ಮುನಿಯು. ಅವನೇ ವೈಯಾಕರಣನೂ ಆಗಿರುವನು. ಹೀಗೆ ಜ್ಞಾನಿಯು ಎಲ್ಲರಿಗಿಂತ ಹಿರಿಯವನಾಗಿರುವನು' -ಎಂದು ತಿಳಿಸಿದೆ.

ಮೂರನೆಯ ಅಧ್ಯಾಯದಲ್ಲಿ : ಬ್ರಹ್ಮೋಪದೇಶವನ್ನು ಮುಂದುವರಿಸಬೇಕೆಂದು ಮತ್ತೆ ಕೇಳಿಕೊಂಡ ಧೃತರಾಷ್ಟ್ರನಿಗೆ ಸನತ್ಸುಜಾತರು ತಿಳಿಸುವದೇನೆಂದರೆ : 'ಬ್ರಹ್ಮವನ್ನು ಪಡೆಯಲು ಆತುರಪಟ್ಟರೆ ಸಾಧ್ಯವಾಗುವದಿಲ್ಲ. ಏಕೆಂದರೆ ಇದಕ್ಕೆ ತಕ್ಕ ಸಾಧನಸಲಕರಣೆಗಳು ಬೇಕು. ಮುಖ್ಯವಾಗಿ ಬ್ರಹ್ಮಚರ್ಯವೂ ಆಚಾರ್ಯಸೇವೆಯೂ ಅವರ ಉಪದೇಶವೂ ಬೇಕೇಬೇಕು. ತಂದೆತಾಯಿಗಳು ಪಾಂಚಭೌತಿಕಶರೀರವನ್ನು ಮಾತ್ರ ಅನುಗ್ರಹಿಸುವರು. ಆದರೆ ಗುರುವು ವಿದ್ಯಾಶರೀರವನ್ನು ಕೊಟ್ಟು ಅಮೃತತ್ವಕ್ಕೆ ಕರೆದೊಯ್ಯುವನು. ಇಂಥ ಗುರುವಿನಲ್ಲಿ ಶಿಷ್ಯವೃತ್ತಿಯಿಂದಿದ್ದು ಬ್ರಹ್ಮಜ್ಞಾನವನ್ನು ಸಂಪಾದಿಸಬೇಕು. ಬ್ರಹ್ಮಚರ್ಯವೆಂಬುದು ನಾಲ್ಕು ಪಾದಗಳುಳ್ಳದ್ದಾಗಿದೆ. ಅದರ ಜೊತೆಗೆ ಜ್ಞಾನವೇ ಮುಂತಾದ ಹನ್ನೆರಡು ಗುಣಗಳೂ ಸೇರಿದರೆ ಅಮೃತತ್ವಪ್ರಾಪ್ತಿಯಾಗುವದು. ದೇವತೆಗಳು, ಋಷಿಗಳು, ಗಂಧರ್ವರು, ಸೂರ್ಯಚಂದ್ರಾದಿಗಳು- ಎಲ್ಲರೂ ಬ್ರಹ್ಮಚರ್ಯಬಲದಿಂದಲೇ ತಮ್ಮತಮ್ಮ ಸ್ಥಾನಗಳನ್ನು ಪಡೆದುಕೊಂಡಿರುವರು. ಬ್ರಹ್ಮದಲ್ಲಿ ಯಾವ ಬಣ್ಣವಾಗಲಿ, ಆಕಾರವಾಗಲಿ, ಇರುವದಿಲ್ಲ. ಅದು ಋಗಾದಿವೇದಗಳಲ್ಲಾಗಲಿ, ಪೃಥಿವ್ಯಾದಿಭೂತಗಳಲ್ಲಾಗಲಿ, ಪರಿಚ್ಛಿನ್ನವಾಗಿರುವದಿಲ್ಲ. ಅದು ಸೂಕ್ಷ್ಮಗಳಿಗಿಂತ ಸೂಕ್ಷ್ಮವಾಗಿಯೂ ಮಹತ್ತಿಗಿಂತ ಮಹತ್ತಾಗಿಯೂ ಇರುವದು. ಪ್ರಪಂಚವೆಲ್ಲವೂ ಅದರಲ್ಲಿಯೇ ಹಾಸುಹೊಕ್ಕಾಗಿರುವದು. ಇಂಥ ಬ್ರಹ್ಮವನ್ನು ಆಚಾರ್ಯರ ಉಪದೇಶದಿಂದಲೇ ಅರಿತುಕೊಳ್ಳಬೇಕು'- ಎಂದು ತಿಳಿಸಿದೆ.

ನಾಲ್ಕನೆಯ ಅಧ್ಯಾಯದಲ್ಲಿ : 'ಸನಾತನನಾದ ಆ ಭಗವಂತನನ್ನು ಯೋಗಿಗಳು ಕಾಣುವರು' ಎಂಬ ಪಲ್ಲವಿಯುತವಾದ ಹದಿನೆಂಟು ಪದ್ಯಗಳಿಂದ ಬ್ರಹ್ಮಸ್ವರೂಪವನ್ನು ವರ್ಣಿಸಿದೆ. ಬ್ರಹ್ಮವು ಜ್ಯೋತಿಃಸ್ವರೂಪವಾಗಿದೆ ; ಪೂರ್ಣವಾಗಿದೆ ; ದಿಕ್ಕುದಿಕ್ಕುಗಳನ್ನೆಲ್ಲ ವ್ಯಾಪಿಸಿಕೊಂಡಿದೆ ; ದೇಹವೆಂಬ ರಥದಲ್ಲಿಯೇ ಕುಳಿತಿದೆ. ಆದರೆ ಸಾಮಾನ್ಯವಾದ ಕಣ್ಣಿನಿಂದ ಅದನ್ನು ಕಾಣಲಾಗುವದಿಲ್ಲ. ಹೃದಯದಲ್ಲಿಯೇ ಸಂಸ್ಕೃತವಾದ ಮನಸ್ಸಿನಿಂದ ಕಂಡುಕೊಳ್ಳಬೇಕು. ಅದು ಇಂದ್ರಿಯಗಳಿಗೂ ವಿಷಯಗಳಿಗೂ ಪ್ರತ್ಯಗಾತ್ಮನಾಗಿದೆ. ಜೀವನೂ ಆದರ

ಸಾನ್ನಿಧ್ಯಬಲದಿಂದಲೇ ಸಂಸಾರಸುಖವನ್ನು ಅನುಭವಿಸುತ್ತಿರುವನು ; ಜ್ಞಾನವಿಲ್ಲದವರು ಅದನ್ನು ಕಾಣಲಾರದೆ ಹಿಂತಿರುಗುವರು. ಅದನ್ನು ಕಂಡುಕೊಳ್ಳಲು ಇಂದ್ರಿಯಮನೋಬುದ್ಧಿಗಳನ್ನು ಒಳಸರಿಯಿಸಿಕೊಳ್ಳುವ ಯೋಗವು ಬೇಕು. ಭಗವಂತನೇ ಮಾಯೆಯಿಂದ ಜೀವನಾಗಿ ತೋರುತ್ತಿರುವನು. ದೇಹಸಂಯೋಗದಿಂದ ಅವನೇ – ಅಂಗುಷ್ಠಮಾತ್ರನಾದ ಜೀವನಾಗಿ ಕಂಡುಬರುತ್ತಿದ್ದರೂ ಸ್ವರೂಪದಿಂದ ಪರಮೇಶ್ವರನೇ ಆಗಿರುತ್ತಾನೆ. ಇಂದ್ರಿಯಗಳನ್ನು ನಂಬಿದವರು ಹಾವಿನ ಕಡಿತದಿಂದ ಸಾಯುವಂತೆ ವಿನಾಶವನ್ನು ಹೊಂದುವರು. ಬ್ರಹ್ಮವು ಮಾತ ಅಜ್ಞರಲ್ಲಿಯೂ ಸುಜ್ಞರಲ್ಲಿಯೂ ಸಮಾನವಾಗಿರುವದು. ಕಾರ್ಯಕಾರಣಗಳೆಲ್ಲದರ ರೂಪದಿಂದ ಇದ್ದುಕೊಂಡಿರುವ ವಾಯು, ಆಕಾಶ– ಮುಂತಾದ ಭೂತಗಳಿಗೂ ಕಾರಣವಾದ ಅಮೃತವಾದ ಆ ಬ್ರಹ್ಮವನ್ನು ಯೋಗಿಗಳು ಕಂಡುಕೊಳ್ಳುವರು ; ಅನಂತವಾದ ಬ ಹ್ಮದ ತುದಿಯನ್ನು ಸಾವಿರಸಾವಿರರೆಕ್ಕೆಗಳಿಂದ ಕೂಡಿ ಹಾರಿದರೂ ಮುಟ್ಟಲಾಗುವದಿಲ್ಲ. ಆದ್ದರಿಂದ ಸರ್ವಭೂತಗಳಲ್ಲಿ ಜ್ಞಾನದಿಂದ ಅದನ್ನು ಕಂಡುಕೊಳ್ಳುವದೊಂದೇ ಮೋಕ್ಷಕ್ಕೆ ಉಪಾಯವು. ಹೀಗೆ ತಿಳಿದವನು ಶೋಕಿಸುವದಿಲ್ಲ. ಅಯ್ಯಾ ಧೃತರಾಷ್ಟ್ರನೆ, ಜ್ಞಾನದೃಷ್ಟಿಯಿಂದ ನೋಡಿದರೆ ನಾನೇ ತಂದೆ, ತಾಯಿ, ಮಗ– ಎಲ್ಲವೂ ಆಗಿದ್ದೇನೆ. ಹುಟ್ಟು, ನಾಶ, ಬದುಕು– ಎಲ್ಲವೂ ಆತ್ಮನೇ. ಸಕಲಪ್ರಾಣಿಗಳ ಹೃದಯದಲ್ಲಿ ನೆಲಸಿರುವ ಇಂಥ ಆತ್ಮನನ್ನು ಅರಿತು ನೀನು ಕೃತಕೃತ್ಯನಾಗು'– ಎಂದು ತಿಳಿಸಿದೆ.

ಹೀಗೆ ಸಿದ್ಧಾಂತ-ಸಾಧನಗಳೆರಡನ್ನೂ ಹಿತಮಿತವಾಗಿಯೂ ಹೃದಯಂಗಮವಾಗಿಯೂ ಬೋಧಿಸಿರುವ ಈ ಸನತ್ಸುಜಾತೀಯವು ಮುಮುಕ್ಷುಗಳಿಗೆ ಒಂದು ಅಲಭ್ಯಲಾಭವಾಗಿದೆ. ಮಹಾಭಾರತಾಂತರ್ಗತವಾದ 'ಪಂಚರತ್ನ'ಗಳಲ್ಲಿ ಇದೊಂದೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಅಂತೂ ಈ ಉಪದೇಶಗಳು ಅತ್ಯವಶ್ಯವಾಗಿ ಅಧ್ಯಾತ್ಮಪ್ರಿಯರೆಲ್ಲರೂ ಮನನಮಾಡಲು ಯೋಗ್ಯವಾದವುಗಳು –ಎಂದು ಧಾರಾಳವಾಗಿ ಹೇಳಬಹುದು.

## ಈ ಸಂಸ್ಕರಣದ ವಿಶೇಷ

ಈ ಸಂಸ್ಕರಣವನ್ನು ಮುಖ್ಯವಾಗಿ (೧) ವಾಣೀವಿಲಾಸ ಪ್ರೆಸ್– ಶ್ರೀರಂಗಮ್ ಇವರು ಪ್ರಕಟಿಸಿರುವ ಸನತ್ಸುಜಾತೀಯಭಾಷ್ಯ (೨) ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯವರು ಪ್ರಕಟಿಸಿರುವ ಗ್ರಂಥ– ಇವುಗಳ ಆಧಾರದಿಂದ ಸಿದ್ಧಗೊಳಿಸಲಾಗಿದೆ. ಇವೆರಡು ಪ್ರಕಟನೆಗಳಲ್ಲಿಯೂ ಒಂದೇ ರೀತಿಯಾದ ಪಾಠವಿದೆ. ವ್ಯತ್ಯಾಸಗಳು ಇಲ್ಲವೇಇಲ್ಲವೆನ್ನುವಂತಿದೆ. (೩) ಮೂಲಕೆ ಟಿಪ್ಪಣಿಯಲ್ಲಿ ಕೊಟ್ಟಿರುವ ಪಾಠಾಂತರಗಳನ್ನು ಪೂನಾದಲ್ಲಿ ಪ್ರಕಟವಾಗಿರುವ ನೀಲಕಂಠೀಯ ವ್ಯಾಖ್ಯಾಸಮೇತವಾದ ಮಹಾಭಾರತಗ್ರಂಥ

ದಿಂದ ತೆಗೆದುಕೊಳ್ಳಲಾಗಿದೆ. (೪) ಗೀತಾ ಪ್ರೆಸ್, ಗೋರಖಪುರ ಇವರು ಪ್ರಕಟಿಸಿರುವ ಮಹಾಭಾರತಪಾಠಗಳನ್ನೂ ಸ್ವಲ್ಪಮಟ್ಟಿಗೆ ಪರಾಮರ್ಶಿಸಿದೆ. (೫) ವಾದಿರಾಜಭಾಷ್ಯಸಹಿತವಾದ ಸನತ್ಸುಜಾತೀಯಗ್ರಂಥವನ್ನೂ (ಬೆಂಗಳೂರು ಮಾಧ್ವಸಂಘದವರ ಪ್ರಕಟನೆ) ಸ್ವಲ್ಪಮಟ್ಟಿಗೆ ಪರಾಮರ್ಶಿಸಿದೆ. ಆದರೆ ಅನುವಾದವನ್ನು ಮಾತ್ರ ಸಾಧ್ಯವಾದಮಟ್ಟಿಗೂ ಮೂಲಾನುಗುಣವಾಗಿ ಸ್ವತಂತ್ರವಾಗಿಯೇ ಮಾಡಿದ್ದು ಕೆಲವು ಕ್ಲಿಷ್ಟವಾದ ಸ್ಥಳಗಳಲ್ಲಿ ಭಾವಾರ್ಥವು ಹೊಂದದೆ ಇರುವಂತೆ ಕಂಡುಬಂದಾಗ ಟಿಪ್ಪಣಿಯಲ್ಲಿ ಸೂಚಿಸಲಾಗಿದೆ.

## ಉಪಸಂಹಾರ

ಈ ಗ್ರಂಥವು ಸಿದ್ಧವಾಗುತ್ತಿರುವಾಗಲೇ ಮುದ್ರಣಶಾಲೆಯನ್ನು ಪ್ರವೇಶಿಸಿದ್ದರಿಂದಲೂ ಗ್ರಂಥರಚನೆಯು ನಡೆಯುತ್ತಿದ್ದ ಸ್ಥಳದಲ್ಲಿ ಬೇರೆ ಯಾವ ವಿದ್ವಾಂಸರ ಸಹಾಯವೂ ದೊರೆಯದೆಇದ್ದುದರಿಂದಲೂ ಇದನ್ನು ಪಂಡಿತರುಗಳ ಶೋಧನೆಗೆ ಒಳಪಡಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಅನುವಾದವನ್ನು ಮಾಡುವದು, ಪಾಠಾಂತರಗಳನ್ನು ಗೊತ್ತುಪಡಿಸುವದು, ಟಿಪ್ಪಣಿಗಳನ್ನು ಜೋಡಿಸುವದು, ಪ್ರಮಾಣವಚನಗಳ ಸ್ಥಾನನಿರ್ದೇಶನ- ಮುಂತಾಗಿ ಎಲ್ಲಾ ಕೆಲಸಗಳನ್ನೂ ಅಸಹಾಯಶೂರನಾಗಿ ನಾನೊಬ್ಬನೇ ಮಾಡಿರುತ್ತೇನೆ. ಜೊತೆಗೆ ಅಚ್ಚಿನ ಕರಡುಗಳನ್ನು ತಿದ್ದುವದೇ ಮುಂತಾದ ಮುದ್ರಣಶಾಲೆಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನೂ ನಾನೇ ನಿರ್ವಹಿಸಿದ್ದೇನೆ. ಹೀಗೆ ಎಲ್ಲಾ ಭಾಗದಲ್ಲಿಯೂ ಬೇರೊಬ್ಬರ ಸಹಾಯವಿಲ್ಲದೆ ಹೊರಬಂದಿರುವ ಈ ಸಂಸ್ಕರಣದಲ್ಲಿ ನನ್ನ ಬುದ್ಧಿದೋಷದಿಂದಲೂ ಅನವಧಾನತೆಯಿಂದಲೂ ದೋಷಗಳು ಉಳಿದಿರುವದು ಸ್ವಾಭಾವಿಕವಾಗಿದೆ. ಕೃಪಾಳುಗಳಾದ, ವಿದ್ವಾಂಸರಾದ ವಾಚಕರುಗಳು ಅಂಥ ದೋಷಗಳನ್ನು ತೋರಿಸಿಕೊಟ್ಟಲ್ಲಿ ಮುಂದಿನ ಸಂಸ್ಕರಣದಲ್ಲಿ ಅವಶ್ಯವಾಗಿ ಅಳವಡಿಸಿಕೊಳ್ಳಲಾಗುವದು.

ಅಧ್ಯಾತ್ಮವಿದ್ಯಾದಾನವನ್ನು ಮಾಡಿ ಇಂಥ ಗ್ರಂಥರಚನೆಗೆ ಸಾಕಷ್ಟು ಶಕ್ತಿಯನ್ನು ಕೊಟ್ಟು ನನ್ನ ಹೃದಯಾಂತರಾಳದಲ್ಲಿದ್ದುಕೊಂಡು ಪ್ರೇರೇಪಣೆಯನ್ನಿತ್ತು ಈ ಕೃತಿಯು ಪೂರ್ಣವಾಗುವಂತೆ ಅನುಗ್ರಹಿಸಿರುವ ಪೂಜ್ಯ ಗುರುಗಳಾದ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕವಾಗಿ ನಮಿಸಿ ಈ ಪೀಠಿಕೆಯನ್ನು ಪೂರ್ಣಗೊಳಿಸುವೆನು.

ಹೊಳೆನರಸೀಪುರ,
ತಾ|| 30-8-76. ಅನುವಾದಕ.

# ವಿಷಯಾನುಕ್ರಮಣಿಕೆ

(ಸೂಚನೆ: ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಪುಟಗಳನ್ನು ಸೂಚಿಸುವವು.)

ಭಾಷ್ಯಕಾರರ ಮಂಗಲ (೧) ಅವತರಣಿಕೆ (೨) ಕಥೆಯ ಸಂಬಂಧ (೩)

ಪುಟಗಳು ೧–೬

## ಒಂದನೆಯ ಅಧ್ಯಾಯ

ಧೃತರಾಷ್ಟ್ರನ ಪ್ರಶ್ನೆ (೬) ಮೃತ್ಯುವು ಇದೆಯೋ? ಇಲ್ಲವೋ? (೮) ಉತ್ತರ: ಮೃತ್ಯುವು ನಿಜವಾಗಿ ಇಲ್ಲ (೧೦) ಪ್ರಮಾದವೇ ಮೃತ್ಯು, ಅಪ್ರಮಾದವೇ ಅಮೃತತ್ವ (೧೨) ಯಮನೇ ಮೃತ್ಯುವೆಂಬ ಕೆಲವರ ಮತ (೧೮) ಅಜ್ಞಾನವೇ ಮೃತ್ಯುವೆಂಬ ವಿಷಯದ ಚರ್ಚೆ (೧೮) ಜ್ಞಾನವೇ ಮೋಕ್ಷಕ್ಕೆ ಸಾಧನ (೧೯) ಜ್ಞಾನಿಗೆ ಕರ್ಮಾನುಷ್ಠಾನವಿಲ್ಲ (೨೨) ಅಜ್ಞಾನಿಯು ಕರ್ಮವನ್ನು ಮಾಡಬೇಕು (೨೪) ಕರ್ಮಗಳು ಚಿತ್ತಶುದ್ಧಿಗಾಗಿ ವಿಧಿಸಲ್ಪಟ್ಟಿವೆ (೨೪) ಜ್ಞಾನೋತ್ಪತ್ತಿಗೆ ಅಂತಃಕರಣಶುದ್ಧಿಯು ಅವಶ್ಯ (೨೯) ಯೋಗಾರೂಢನಾಗುವವರೆಗೆ ಕರ್ಮಗಳು ಅವಶ್ಯ (೩೧) ಯೋಗಾನುಷ್ಠಾನದ ಕ್ರಮ (೩೨) ಜ್ಞಾನದಿಂದಲೇ ಮೋಕ್ಷವೆಂಬ ಚರ್ಚೆಯ ಉಪಸಂಹಾರ (೩೬) ಶ್ಲೋಕದ ವ್ಯಾಖ್ಯಾನ (೩೮) ಮೃತ್ಯುವಿನ ರೂಪಾಂತರಗಳು (೩೮) ಮೃತ್ಯುವಶರಾದವರಿಗೆ ಸಂಸಾರವೇ ಗತಿ (೪೧) ಕರ್ಮಗಳೂ ಬಂಧಕಾರಣಗಳೇ (೪೩) ವಿಷಯಗಳ ಚಿಂತನೆಯೇ ಮೃತ್ಯುವಶನಾಗಲು ಕಾರಣ (೪೬) ಜ್ಞಾನಿಯು ಮೃತ್ಯುವಿಗೆ ಮೃತ್ಯುವು (೪೮) ದೇಹದ ಹೇಯತ್ವವರ್ಣನೆ (೫೧) ವಿಷಯಾಸಕ್ತರ ಜನ್ಮವು ವ್ಯರ್ಥ (೫೨) ಮೃತ್ಯುವನ್ನು ಗೆಲ್ಲುವ ಉಪಾಯ (೫೪) ಕರ್ಮಗಳು ಬಂಧಕಾರಣವೆಂಬುದು ಹೇಗೆ? (೫೬) ಈವರೆಗಿನ ಗ್ರಂಥಭಾಗದ ತಾತ್ಪರ್ಯ (೬೦) ಪ್ರಶ್ನೆ: ಆತ್ಮನನ್ನು ಸಂಸಾರಕ್ಕೆ ಪ್ರೇರಿಸುವವನು ಯಾರು? (೬೧) ಉತ್ತರ: ಆತ್ಮನ ಸಂಸಾರಿತ್ವವು ಮಾಯೆಯಿಂದ ಕಲ್ಪಿತವಾಗಿದೆ (೬೩) ಈಶ್ವರನು ಜಗತ್ಕಾರಣನೆಂಬುದೂ ಮಾಯೆಯಿಂದಲೇ (೮೦) ಕರ್ಮಗಳ ಸ್ವರೂಪದ ವಿವರ (೮೩) ಜ್ಞಾನಿಯ ಲೋಕವ್ಯವಹಾರ (೯೩) ಅಜ್ಞಾನಿಯು ಆತ್ಮಾಪಹಾರಿಯು (೧೦೨) ಜ್ಞಾನಿಯ ಸ್ವರೂಪವರ್ಣನೆ (೧೦೪) ಮಾನಮೌನಗಳ ತತ್ತ್ವ (೧೧೧) ಬ್ರಹ್ಮಶ್ರೀದ್ವಾರಗಳು (೧೧೩)

ಪುಟಗಳು ೬–೧೧೪

## ಎರಡನೆಯ ಅಧ್ಯಾಯ

ಧೃತರಾಷ್ಟ್ರನ ಪ್ರಶ್ನೆ (೧೧೫) ಪರಮಾತ್ಮನೇ ನಿಜವಾದ ಮೌನವು (೧೧೬) ವೇದಸ್ವಭಾವವಿಮರ್ಶೆ (೧೧೮) ನಿಷ್ಕಾಮನಿಗೂ ಸಕಾಮನಿಗೂ ಉಂಟಾಗುವ ಫಲಭೇದಗಳು (೧೨೬) ತಪಸ್ಸು ಸಮೃದ್ಧವಾಗುವ ಬಗೆ (೧೩೦) ತಪಸ್ಸಿನ ಗುಣದೋಷಗಳು (೧೩೧) ಮಹಾವ್ರತಗಳು (೧೩೮) ಗುಣಗಳ ಸ್ತುತಿ (೧೩೯) ದಮದ ದೋಷಗಳು (೧೪೦) ಆರು ತ್ಯಾಗಗಳು (೧೪೩) ಸತ್ಯದ ಸ್ತುತಿ (೧೪೮) ಸುಖಿಯಾಗುವ ಬಗೆ (೧೫೦) ವೇದ್ಯವು

ಯಾವದು ? (೧೫೧) ಬ್ರಾಹ್ಮಣನ ಲಕ್ಷಣ (೧೫೬) ವೇದಗಳು ಬ್ರಹ್ಮವನ್ನು ತಿಳಿಸುವ ರೀತಿ (೧೫೮) ಬ್ರಹ್ಮವಿದನೇ ಬ್ರಾಹ್ಮಣನು (೧೬೩) ಬ್ರಾಹ್ಮಣನು ವಿಷಯಭೋಗಪರನಾಗಿರಬಾರದು (೧೬೫) ಅಕ್ಷರಜ್ಞಾನಿಯೇ ಮುನಿ (೧೬೭) ಜ್ಞಾನಿಯೇ ವ್ಯಾಕರಣಜ್ಞನು (೧೬೮) ಜ್ಞಾನಿಯು ಸರ್ವಜ್ಞನು (೧೬೯) ಪುಟಗಳು ೧೧೫–೧೭೧

## ಮೂರನೆಯ ಅಧ್ಯಾಯ

ಧೃತರಾಷ್ಟ್ರನ ಪ್ರಶ್ನೆ (೧೭೨) ವಿದ್ಯೆಯು ಬ್ರಹ್ಮಚರ್ಯದಿಂದ ದೊರಕುತ್ತದೆ (೧೭೩) ಆಚಾರ್ಯನು ತಂದೆಗೆ ಸಮಾನನು (೧೭೮) ಆಚಾರ್ಯನಲ್ಲಿ ಭಕ್ತಿಯಿರಬೇಕು (೧೭೯) ಬ್ರಹ್ಮಚರ್ಯದ ನಾಲ್ಕು ಪಾದಗಳು (೧೮೧) ವಿದ್ಯೆಯ ನಾಲ್ಕು ಪಾದಗಳು (೧೮೩) ಗುರುಸೇವೆಯಿಂದ ವಿದ್ಯಾಫಲಪ್ರಾಪ್ತಿ (೧೮೪) ಬ್ರಹ್ಮಚರ್ಯದ ಸ್ತುತಿ (೧೮೬) ಜ್ಞಾನದಿಂದ ಬ್ರಹ್ಮಪ್ರಾಪ್ತಿ (೧೮೮) ಅಕ್ಷರವು ಯಾವರೂಪವಾಗಿದೆ ? (೧೮೯) ಬ್ರಹ್ಮವು ರೂಪರಹಿತವಾಗಿದೆ (೧೯೦) ಬ್ರಹ್ಮದ ಸ್ವರೂಪ (೧೯೩) ಪುಟಗಳು ೧೭೨–೧೯೫

## ನಾಲ್ಕನೆಯ ಅಧ್ಯಾಯ

ಯೋಗಿಗಳಿಗೆ ಗೋಚರವಾಗುವ ಬ್ರಹ್ಮ (೧೯೬) ಪರಮಾತ್ಮನಿಂದಲೇ ಹಿರಣ್ಯಗರ್ಭನ ಉತ್ಪತ್ತಿ (೧೯೮) ಪೂರ್ಣಬ್ರಹ್ಮವರ್ಣನೆ (೧೯೯) 'ದ್ವಾ ಸುಪರ್ಣಾ' ಎಂಬ ಮಂತ್ರದ ಅರ್ಥ (೨೦೧) ಜ್ಞಾನಿಯು ಬ್ರಹ್ಮವನ್ನೇ ಸೇರುವನು (೨೦೩) ಹೊರಮುಖವಾದ ಇಂದ್ರಿಯಗಳಿಂದ ಅನರ್ಥಪ್ರಾಪ್ತಿ (೨೦೭) ಜ್ಞಾನದಿಂದ ಸಂಸಾರಿಗಳೂ ಮುಕ್ತರಾಗುವರು (೨೦೯) ಯೋಗದ ವಿವರ (೨೧೧) ಪರಮಾತ್ಮನೇ ಜೀವನು (೨೧೨) ಜೀವನ ನಿಜಸ್ವರೂಪ (೨೧೪) ವಿಷಯೇಂದ್ರಿಯಸಂಯೋಗದಿಂದಾಗುವ ಅನರ್ಥ (೨೧೬) ಜ್ಞಾನಿಗಳಿಗೆ ದೊರಕುವ ಮೋಕ್ಷ (೨೧೭) ಆತ್ಮಸ್ವರೂಪ (೨೨೪) ಬ್ರಹ್ಮವು ಅನಂತವು (೨೨೬) ಆತ್ಮನನ್ನರಿತವನಿಗೆ ಶೋಕವಿಲ್ಲ (೨೨೮) ಬ್ರಹ್ಮಾತ್ಮಾನುಭವ (೨೩೦) ಉಪಸಂಹಾರ (೨೩೩)
ಪುಟಗಳು ೧೯೬–೨೩೪

ಪರಿಶಿಷ್ಟ ಪುಟ ೨೩೫–೨೩೭

ಶ್ಲೋಕಾನುಕ್ರಮಣಿಕೆ ಪುಟ ೨೩೮–೨೪೦

॥ ಓಮ್ ॥

॥ ಓಂ ನಮೋ ಭಗವತೇ ವಾಸುದೇವಾಯ ॥

# ಸನತ್ಸುಜಾತೀಯಮ್

## ಶಾಙ್ಕರಭಾಷ್ಯಸಮೇತಮ್

### ಭಾಷ್ಯಕಾರರ ಮಂಗಲ

(ಭಾಷ್ಯ)

ನಮಃ ಪುಂಸೇ ಪುರಾಣಾಯ ಪೂರ್ಣಾನನ್ದಾಯ ವಿಷ್ಣವೇ ।
ನಿರಸ್ತನಿಖಿಲಧ್ವಾನ್ತತೇಜಸೇ ವಿಶ್ವಹೇತವೇ ॥

(ಭಾಷ್ಯಾರ್ಥ)

ಪುರಾಣಪುರುಷನಾದ, ಪೂರ್ಣಾನಂದಸ್ವರೂಪನಾದ, ಎಲ್ಲಾ ಕತ್ತಲೆಯನ್ನೂ ನಾಶಗೊಳಿಸಿರುವ ತೇಜೋರೂಪನಾದ, ಪ್ರಪಂಚಕ್ಕೆ ಕಾರಣನಾದ ವಿಷ್ಣುವಿಗೆ ನಮಸ್ಕಾರವು.

(ಭಾಷ್ಯ)

ನಮ ಆಚಾರ್ಯೇಭ್ಯೋ ಬ್ರಹ್ಮವಿದ್ಯಾಸಂಪ್ರದಾಯಕರ್ತೃಭ್ಯಃ । ಸನತ್ಸುಜಾತೀಯವಿವರಣಂ ಸಂಕ್ಷೇಪತೋ ಬ್ರಹ್ಮಜಿಜ್ಞಾಸೂನಾಂ ಸುಖಾವಬೋಧಾಯ ಆರಭ್ಯತೇ ॥

(ಭಾಷ್ಯಾರ್ಥ)

ಬ್ರಹ್ಮವಿದ್ಯಾಸಂಪ್ರದಾಯಕರ್ತೃಗಳಾದ ಆಚಾರ್ಯರಿಗೆ ನಮಸ್ಕಾರವು. ಬ್ರಹ್ಮಜಿಜ್ಞಾಸುಗಳಿಗೆ ಸುಖವಾಗಿ ತಿಳಿವಳಿಕೆಯುಂಟಾಗುವದಕ್ಕಾಗಿ ಸಂಕ್ಷೇಪವಾಗಿ ಸನತ್ಸುಜಾತೀಯ[1] (ಉಪದೇಶಗಳಿಗೆ) ವಿವರಣವನ್ನು ಆರಂಭಿಸಲಾಗುತ್ತದೆ.

---

1. ಶ್ರೀಮಹಾಭಾರತದ ಉದ್ಯೋಗಪರ್ವದಲ್ಲಿ ಧೃತರಾಷ್ಟ್ರನಿಗೆ ಸನತ್ಸುಜಾತರೆಂಬ ಮುನಿಗಳು ಉಪದೇಶಮಾಡಿರುವ ಆಧ್ಯಾತ್ಮತತ್ತ್ವೋಪದೇಶಭಾಗಕ್ಕೆ 'ಸನತ್ಸುಜಾತೀಯ'ವೆಂದು ಹೆಸರು. ಇದು ಭಾಷ್ಯಕಾರರ ಮತದಂತೆ ನಾಲ್ಕು ಅಧ್ಯಾಯಗಳಿಂದ ಕೂಡಿದೆ. ಮೂಲಮಹಾಭಾರತದಲ್ಲಿ ಐದು ಅಧ್ಯಾಯಗಳಿವೆ. ಈ ವಿಷಯಕ್ಕೆ ಹೆಚ್ಚಿನ ವಿವರಗಳಿಗೆ ಪೀಠಿಕೆಯನ್ನು ನೋಡಿರಿ.

# ಅವತರಣಿಕೆ

(ಭಾಷ್ಯ)

ಸ್ವತಃ ಚಿತ್ಸದಾನನ್ದಾದ್ವಿತೀಯಬ್ರಹ್ಮಸ್ವರೂಪೋಽಪ್ಯಾತ್ಮಾ ಸ್ವಾಶ್ರಯಯಾ ಸ್ವವಿಷಯಯಾ ಽವಿದ್ಯಯಾ ಸ್ವಾನುಭವಗಮ್ಯಯಾ ಸಾಭಾಸಯಾ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮಭಾವಾತ್ ಪ್ರಚ್ಯುತಃ ಅನಾತ್ಮನಿ ದೇಹಾದೌ ಆತ್ಮಭಾವಮಾಪನ್ನಃ ಅಪ್ರಾಪ್ತಾಶೇಷಪುರುಷಾರ್ಥಃ ಪ್ರಾಪ್ತಾಶೇಷಾನರ್ಥಃ ಅವಿದ್ಯಾಕರ್ಮಪರಿಕಲ್ಪಿತೈರೇವ ಸಾಧನೈಃ ಇಷ್ಟಪ್ರಾಪ್ತಿಮ್ ಅನಿಷ್ಟಪರಿಹೃತಿಂ ಚ ಆಕಾಙ್ಕ್ಷನ್ ಲೌಕಿಕವೈದಿಕಸಾಧನೈಃ ಅನುಷ್ಠಿತೈರಪಿ ಪರಮಪುರುಷಾರ್ಥಂ ಮೋಕ್ಷಾಖ್ಯಮ್ ಅಲಭಮಾನಃ ಮಕರಾದಿಭಿರಿವ ರಾಗದ್ವೇಷಾದಿಭಿಃ ಇತಸ್ತತಃ ಆಕೃಷ್ಯಮಾಣಃ ಸುರನರತಿರ್ಯಗಾದಿಪ್ರಭೇದಭಿನ್ನಾಸು ನಾನಾಯೋನಿಷು ಪರಿವರ್ತಮಾನೋ ಮುಹ್ಯಮಾನಃ ಸಂಸರನ್ ಕಥಂಚಿತ್ ಪುಣ್ಯವಶಾತ್ ವೇದೋದಿತೇನ ಈಶ್ವರಾರ್ಥಕರ್ಮಾನುಷ್ಠಾನೇನ ಅಪಗತರಾಗಾದಿಮಲಃ ಅನಿತ್ಯಾದಿದೋಷದರ್ಶನೇನ ಉತ್ಪನ್ನೇಹಾಮುತ್ರಫಲಭೋಗವಿರಾಗಃ ವೇದಾನ್ತೇಭ್ಯಃ ಪ್ರತೀಯಮಾನಂ ಬ್ರಹ್ಮಾತ್ಮಭಾವಂ ಬುಭುತ್ಸುಃ ವೇದೋದಿತಶಮದಮಾದಿಸಾಧನಸಂಪನ್ನಃ ಬ್ರಹ್ಮವಿದಮ್ ಆಚಾರ್ಯಮುಪೇತ್ಯ ಆಚಾರ್ಯಾನುಸಾರೇಣ ವೇದಾನ್ತಶ್ರವಣಾದಿನಾ 'ಅಹಂ ಬ್ರಹ್ಮಾಸ್ಮಿ' (ಬೃ. ೧-೪-೧೦) ಇತಿ ಬ್ರಹ್ಮಾತ್ಮತತ್ತ್ವಮವಗಮ್ಯ ನಿವೃತ್ತಾಜ್ಞಾನತತ್ಕಾರ್ಯಃ ಬ್ರಹ್ಮರೂಪೋ ಅವತಿಷ್ಠತೇ ಇತೀಯಂ ವೇದಾನ್ತಾನಾಂ ಮರ್ಯಾದಾ । ಏತತ್ಸರ್ವಮ್ ಕ್ರಮೇಣ ದರ್ಶಯಿಷ್ಯತಿ ಭಗವಾನ್ ಸನತ್ಸುಜಾತಃ ॥

(ಭಾಷ್ಯಾರ್ಥ)

ಆತ್ಮನು ತನ್ನ (ನಿಜಸ್ವಭಾವದಿಂದ) ಚಿತ್ಸದಾನಂದಾದ್ವಿತೀಯಬ್ರಹ್ಮಸ್ವರೂಪನೇ[1] ಆಗಿದ್ದರೂ ತನಗೆ ಆಶ್ರಯವಾಗಿಯೂ ವಿಷಯವಾಗಿಯೂ ಇರುವ, (ಮತ್ತು) ತನ್ನ ಅನುಭವಗೋಚರವೇ ಆದ, ಆಭಾಸಸಹಿತವಾದ ಅವಿದ್ಯೆಯಿಂದ[2] ಸಹಜವೇ ಆದ ಚಿತ್ಸದಾನಂದಾದ್ವಿತೀಯಬ್ರಹ್ಮಾತ್ಮಭಾವದಿಂದ ಜಾರಿದವನಾಗಿ ದೇಹವೇ (ಮುಂತಾದ) ಅನಾತ್ಮ(ಗಳ)ಲ್ಲಿ ತಾನೆಂಬ ಭಾವ

---

1. ಚಿತ್ ಎಂದರೆ ಚೈತನ್ಯಸ್ವರೂಪನು ; ಸತ್ ಎಂದರೆ ಯಾವಾಗಲೂ ಇರುವವನು ; ಆನಂದವೆಂದರೆ ಸುಖರೂಪನು. ಇಂಥ ತನಗೆರಡನೆಯದಿಲ್ಲದ ಬ್ರಹ್ಮರೂಪನೇ ಆಗಿರುವ ಎಂದಭಿಪ್ರಾಯ.

2. ಅವಿದ್ಯೆಯು ಆತ್ಮನನ್ನೇ ಆಶ್ರಯಿಸಿದೆ. ಆತ್ಮನಿಗೇ ವಿಷಯವಾಗಿದೆ– ಎಂಬಿದು ವ್ಯಾಖ್ಯಾನಪ್ರಸ್ಥಾನದವರ ಪ್ರಕ್ರಿಯೆ. ಈ ಭಾಷ್ಯಕಾರರ ಬಗ್ಗೆ ಟೀಕೆಯನ್ನು ನೋಡಿರಿ.

ವನ್ನು ಹೊಂದಿ ಎಲ್ಲಾ ಪುರುಷಾರ್ಥಗಳನ್ನೂ ಪಡೆಯದವನಾಗಿಯೂ ಎಲ್ಲಾ ಅನರ್ಥಗಳನ್ನೂ ಹೊಂದಿದವನಾಗಿಯೂ (ಇದ್ದುಕೊಂಡು) ಅವಿದ್ಯೆ, ಕರ್ಮ- ಇವುಗಳಿಂದಲೇ ಪರಿಕಲ್ಪಿತವಾದ ಸಾಧನಗಳಿಂದ ಇಷ್ಟಪ್ರಾಪ್ತಿಯನ್ನೂ ಅನಿಷ್ಟ ಪರಿಹಾರವನ್ನೂ ಬಯಸುತ್ತಾ ಲೌಕಿಕ ಹಾಗೂ ವೈದಿಕ(ರೂಪ)ವಾದ ಸಾಧನ ಗಳನ್ನು ಅನುಷ್ಠಾನಮಾಡಿದಮೇಲೂ ಪರಮಪುರುಷಾರ್ಥವಾದ ಮೋಕ್ಷವೆಂಬ (ಪ್ರಯೋಜನವನ್ನು) ಪಡೆಯದೆ ಮೊಸಳೆಯೇ ಮೊದಲಾದವುಗಳಂತಿರುವ ರಾಗದ್ವೇಷಾದಿಗಳಿಂದ ಅತ್ತಿತ್ತ ಎಳೆಯಲ್ಪಡುವವನಾಗಿ ದೇವತೆ, ಮನುಷ್ಯ, ಮೂಕಪ್ರಾಣಿಗಳೇ- ಮುಂತಾದ ಬೇರೆಬೇರೆಯ ಅನೇಕಜನ್ಮಗಳಲ್ಲಿ ತಿರುಗುತ್ತಾ ಮೋಹಿತನಾಗಿ ಸಂಸಾರಮಾಡುತ್ತಾ[1] ಹೇಗೋ ಪುಣ್ಯ(ವಿಶೇಷ)ವಶದಿಂದ ವೇದದಲ್ಲಿ ಹೇಳಿರುವ, ಈಶ್ವರಪ್ರೀತಿಗಾಗಿ (ಮಾಡುವ) ಕರ್ಮಾನುಷ್ಠಾನಗಳಿಂದ ರಾಗ (ಕಾಮ)ವೇ ಮುಂತಾದ ದೋಷಗಳನ್ನು ಕಳೆದುಕೊಂಡವನಾಗಿ ಅನಿತ್ಯವೇ ಮುಂತಾದ ದೋಷಗಳುಳ್ಳ ಈ ಲೋಕ-ಪರಲೋಕಗಳ ಭೋಗಗಳಲ್ಲಿ ವಿರಕ್ತ ನಾಗಿ ವೇದಾಂತ (ಉಪನಿಷತ್ತು)ಗಳಿಂದ ತಿಳಿದುಬರುವ ಬ್ರಹ್ಮಾತ್ಮಭಾವವನ್ನು ಪಡೆದುಕೊಳ್ಳಲೆಳಸುವವನಾಗಿ ವೇದದಲ್ಲಿ ಹೇಳಿರುವ ಶಮ, ದಮ- ಮೊದಲಾದ ಸಾಧನಗಳಿಂದ ಕೂಡಿದವನಾಗಿ ಬ್ರಹ್ಮವಿದನಾದ ಆಚಾರ್ಯ (ಗುರು)ವನ್ನು ಬಳಿಸಾರಿ ಆಚಾರ್ಯನನ್ನು ಹಿಂಬಾಲಿಸಿ ವೇದಾಂತ(ವಿಚಾರ)ಶ್ರವಣಾದಿಗಳಿಂದ 'ನಾನೇ ಬ್ರಹ್ಮವಾಗಿದ್ದೇನೆ' ಎಂದು ಬ್ರಹ್ಮಾತ್ಮತತ್ತ್ವವನ್ನು ಅರಿತುಕೊಂಡು ಅವಿದ್ಯೆ (ಹಾಗೂ) ದರ ಕಾರ್ಯವಾದ (ಸಂಸಾರ)ವನ್ನು ಪರಿಹರಿಸಿಕೊಂಡವ ನಾಗಿ ಬ್ರಹ್ಮರೂಪನಾಗಿ ನೆಲೆನಿಲ್ಲುತ್ತಾನೆ. ಹೀಗೆಂಬುದೇ ವೇದಾಂತಗಳ (ಬೋಧೆಯ) ಎಲ್ಲೆಯಾಗಿರುತ್ತದೆ. ಇದೆಲ್ಲವನ್ನೂ ಕ್ರಮವಾಗಿ ಪೂಜ್ಯರಾದ ಸನತ್ಸುಜಾತರು (ತಮ್ಮ ಉಪದೇಶಗಳಲ್ಲಿ) ತಿಳಿಸಿಕೊಡಲಿದ್ದಾರೆ.

## ಕಥೆಯ ಸಂಬಂಧ

(ಭಾಷ್ಯ)

ಧೃತರಾಷ್ಟ್ರಃ ಶೋಕಮೋಹಾಭಿತಪ್ತಃ 'ತರತಿ ಶೋಕಮಾತ್ಮವಿತ್' (ಛಾಂ. ೭-೧-೩) ಇತಿ ವೇದಾನ್ತವಾದಮುಪಶ್ರುತ್ಯ ಬ್ರಹ್ಮವಿದ್ಯಯಾ ವಿನಾ ಶೋಕಾಪನಯನಮಶಕ್ಯಂ ಮನ್ವಾನಃ 'ಅನುಕ್ತಂ ಯದಿ ತೇ ಕಿಞ್ಚಿದ್ ವಾಚಾ ವಿದುರ ವಿದ್ಯತೇ । ತನ್ಮೇ ಶುಶ್ರೂಷವೇ ಬ್ರೂಹಿ ವಿಚಿತ್ರಾಣೀಹ ಭಾಷಸೇ' (ಉದ್ಯೋ. ೪೧-೧) ಇತಿ ವಿದುರಾಯೋಕ್ತವಾನ್ ।

1. ಸಂಸಾರವೆಂದರೆ ಸುಖದುಃಖಭೋಗವು. ಗೀ.ಭಾ. ೧೩-೨೦ನ್ನು ನೋಡಿರಿ.

ಸ ಚ ಶ್ರುತವಾಕ್ಯೋಽಪಿ ಪರಮಕಾರುಣಿಕಃ ಸರ್ವಜ್ಞಃ ಸನ್ ಬ್ರಹ್ಮವಿದ್ಯಾಂ ವಿಶಿಷ್ಟಾಧಿಕಾರಿವಿಷಯಾಂ ಮನ್ವಾನಃ 'ಶೂದ್ರಯೋನಾವಹಂ ಜಾತಃ ನಾತೋಽನ್ಯದ್ವಕ್ತುಮುತ್ಸಹೇ' (ಉದ್ಯೋ. ೪೧ ೫) ಇತಿ ಶೂದ್ರ ಯೋನಿಜತ್ವಾತ್ ಔಪನಿಷದಬ್ರಹ್ಮಾತ್ಮತತ್ತ್ವಜ್ಞಾನೇ ನಾಹಮ್ ಅಧಿಕೃತಃ ಇತ್ಯುಕ್ತ್ವಾ ಕಥಮೇನಂ ಬ್ರಹ್ಮವಿದ್ಯಯಾ ಪರಮೇ ಪದೇ ಪರಮಾತ್ಮನಿ ಪೂರ್ಣಾನನ್ದೇ ಸ್ವಾರಾಜ್ಯೇ ಸ್ಥಾಪಯಿಷ್ಯಾಮೀತಿ ಮನ್ವಾನಃ ಛಾನ್ದೋಗ್ಯೋಪನಿಷತ್ಪ್ರಸಿದ್ಧಮ್ ಇತಿಹಾಸಂ ಸ್ಮೃತ್ವಾ ನಾನ್ಯೋಽಸ್ಮಾತ್ ಅಸ್ಮೈ ಭೂಮಾನಂ ತಮಸಃ ಪರಂ ಪರಮಾತ್ಮಾನಂ ದರ್ಶಯಿತುಮ್ ಶಕ್ನುಯಾತ್ ಇತಿ ಮತ್ವಾ ತಮೇವ ಭಗವನ್ತಂ ಸನತ್ಸುಜಾತಂ ಯೋಗಬಲೇನ ಆಹೂಯ ಪ್ರತ್ಯುತ್ಥಾನಾದಿಭಿಃ ಭಗವನ್ತಂ ಪೂಜಯಿತ್ವಾ–

'ಭಗವನ್ ಸಂಶಯಃ ಕಶ್ಚಿದ್ ಧೃತರಾಷ್ಟ್ರಸ್ಯ ಮಾನಸೇ ।
ಯೋ ನ ಶಕ್ಯೋ ಮಯಾ ವಕ್ತುಂ ತ್ವಮಸ್ಮೈ ವಕ್ತುಮರ್ಹಸಿ ॥
ಶ್ರುತ್ವಾಽಯಂ ಯಂ ಮನುಷ್ಯೇನ್ದ್ರಃ ಸರ್ವದುಃಖಾತಿಗೋ ಭವೇತ್ ।
ಲಾಭಾಲಾಭೌ ಪ್ರಿಯದ್ವೇಷ್ಯೌ ತಥೈವ ಚ ಜರಾನ್ತಕೌ ।
ವಿಷಹೇತ ಮದೋನ್ಮಾದೌ ಕ್ಷುತ್ಪಿಪಾಸೇ ಭಯಾಭಯೇ ।
ಅರತಿಂ ಚೈವ ತನ್ದ್ರೀಂ ಚ ಕಾಮಕ್ರೋಧೌ ಕ್ಷಯೋದಯೌ ॥'
(ಉದ್ಯೋ. ೪೧–೧೦, ೧೧, ೧೨)

ಇತಿ; ಭಗವನ್, ಯೇನಾಸೌ ಸಕಲಸಂಸಾರಕಾರಣಧರ್ಮಾಧರ್ಮವಿವರ್ಜಿತಃ ಸುಖದುಃಖಾತಿಗೋ ಮುಕ್ತೋ ಭವೇತ್ ತಮಸ್ಮೈ ಧೃತರಾಷ್ಟ್ರಾಯ ವಕ್ತುಮರ್ಹಸಿ ಇತ್ಯುಕ್ತವಾನ್ ॥

(ಭಾಷ್ಯಾರ್ಥ)

ಧೃತರಾಷ್ಟ್ರನು ಶೋಕಮೋಹಗಳಿಂದ ತುಂಬ ವ್ಯಥೆಪಟ್ಟವನಾಗಿ 'ಆತ್ಮಜ್ಞಾನಿಯಾದವನು ಶೋಕವನ್ನು ದಾಟುವನು' ಎಂಬ ವೇದಾಂತವಾದವನ್ನು ಕೇಳಿ ಬ್ರಹ್ಮವಿದ್ಯೆಯ ಹೊರತು (ಬೇರೆಯ ಸಾಧನದಿಂದ) ಶೋಕವನ್ನು ಹೋಗಲಾಡಿಸಿಕೊಳ್ಳುವದು ಅಸಾಧ್ಯವೆಂದು ತಿಳಿದವನಾಗಿ 'ಎಲೈ ವಿದುರನೆ, ಇನ್ನೂ ಏನಾದರೂ ನೀನು ಹೇಳದೆಇರುವದು ಉಳಿದಿದ್ದರೆ[1] ಕೇಳಲಿಚ್ಛಿಸುವ ನನಗೆ ಹೇಳು; ವಿಚಿತ್ರವಾಗಿ (ನೀನು) ಮಾತನಾಡುತ್ತಿರುವೆ' ಎಂದು ವಿದುರನಿಗೆ ಹೇಳಿದನು.

---

1. ಇದುವರೆಗೆ ಧೃತರಾಷ್ಟ್ರನಿಗೆ ವಿದುರನು ನೀತಿಗಳನ್ನು ಉಪದೇಶಿಸಿರುತ್ತಾನೆ. ವಿದುರನ ನೀತಿವಾಕ್ಯಗಳು ವಿಚಿತ್ರವಾಗಿವೆಯೆಂದು ಹೊಗಳಿ 'ಇನ್ನೂ ಏನಾದರೂ ಇದ್ದರೆ ಹೇಳು' ಎಂದು ಧೃತರಾಷ್ಟ್ರನು ಕೇಳಿದ್ದಾನೆ.

ಆವನಾದರೋ ಪರಮಕಾರುಣಿಕನಾದ[1] ಶಾಸ್ತ್ರವನ್ನು ಬಲ್ಲ ಸರ್ವಜ್ಞನೇ ಆದರೂ ಬ್ರಹ್ಮವಿದ್ಯೆಯನ್ನು (ಉಪದೇಶಿಸುವದೆಂಬುದು) ವಿಶೇಷಾಧಿಕಾರಿಯಾದವನ[2] ವಿಷಯವೆಂಬುದನ್ನು ಬಲ್ಲವನಾಗಿ 'ನಾನು ಶೂದ್ರಯೋನಿಯಲ್ಲಿ ಹುಟ್ಟಿದವನು ; ಆದ್ದರಿಂದ ಹೆಚ್ಚಿನ ಬೇರೆಯುದನ್ನು ಹೇಳಲು ಇಷ್ಟಪಡಲಾರೆ' ಎಂದು (ತಾನು) ಶೂದ್ರಯೋನಿಯಲ್ಲಿ ಹುಟ್ಟಿರುವದರಿಂದ ಉಪನಿಷತ್ತುಗಳಲ್ಲಿ ಮಾತ್ರವೇ ತಿಳಿದುಬರುವ ಬ್ರಹ್ಮಾತ್ಮತತ್ತ್ವಜ್ಞಾನವನ್ನು (ಉಪದೇಶಿಸುವದಕ್ಕೆ) ನಾನು ಅನರ್ಹನು[3]– ಎಂದುಕೊಂಡು 'ಹಾಗಾದರೆ ಈ (ಧೃತರಾಷ್ಟ್ರನನ್ನು) ನಾನು ಹೇಗೆ ಬ್ರಹ್ಮವಿದ್ಯೆಯಿಂದ (ಮೇಲಕ್ಕೆತ್ತಿ) ಪೂರ್ಣಾನಂದಸ್ವರೂಪನಾದ ಪರಮಾತ್ಮನ ಸ್ವಾರಾಜ್ಯಪರಮಪದವಿಯಲ್ಲಿ ನೆಲೆನಿಲ್ಲಿಸಿಯೇನು ?' ಎಂದು ಆಲೋಚಿಸುತ್ತಾ ಛಾಂದೋಗ್ಯೋಪನಿಷತ್ತಿನಲ್ಲಿ ಪ್ರಸಿದ್ಧವಾಗಿರುವ ಇತಿಹಾಸ[4]ವನ್ನು ಸ್ಮರಿಸಿಕೊಂಡು 'ಈ (ರಾಜನಿಗೆ) ಇವನನ್ನು (ಸನತ್ಸುಜಾತನನ್ನು) ಬಿಟ್ಟರೆ ಮತ್ತೊಬ್ಬನು ಯಾವನೂ ಭೂಮವಾದ, ಕತ್ತಲೆಯ ಆಚೆಗಿರುವ ಪರಮಾತ್ಮನನ್ನು ತಿಳಿಸಿಕೊಡಲು ಸಮರ್ಥನಾಗಲಾರನು' ಎಂದು ಅರಿತು ಆ ಪೂಜ್ಯನಾದ (ಸನತ್ಸುಜಾತ)ನನ್ನೇ[5] ಯೋಗಬಲದಿಂದ ಬರಮಾಡಿಕೊಂಡು ಎದ್ದು ನಿಲ್ಲುವದೇ ಮುಂತಾದ[6] ರೀತಿಯಿಂದ ಪೂಜ್ಯನಾದ (ಈತನನ್ನು) ಸತ್ಕರಿಸಿ 'ಪೂಜ್ಯನೆ, ಧೃತರಾಷ್ಟ್ರನ ಮನಸ್ಸಿನಲ್ಲಿ ನನ್ನಿಂದ ಹೇಳಿ (ಪರಿಹರಿಸ)ಲಾಗದ ಒಂದು ಸಂಶಯ(ವಿದೆ) ನೀನು (ಅದನ್ನು ಹೋಗಲಾಡಿಸಿ) ತಿಳಿಸಬೇಕು. ಯಾವ

---

1. 'ಪರಮಕಾರುಣಿಕ' ಎಂಬ ವಿಶೇಷಣವನ್ನು ಶಂಕರಾಚಾರ್ಯರು ನಿಯತವಾಗಿ ಗುರುವಿಗೆ ಉಪಯೋಗಿಸುತ್ತಾರೆ. ಛಾಂ. ಭಾ. ೬-೧೪-೨ ; ಐ. ಭಾ. ೩-೧೩ ಇವುಗಳನ್ನು ನೋಡಿರಿ.

2. ಬ್ರಹ್ಮವಿದ್ಯೆಯು ಉಪನಿಷತ್ತುಗಳಲ್ಲಿ ಅಡಗಿರುವದರಿಂದ ವೇದಾಧಿಕಾರವುಳ್ಳ ಹಾಗೂ ಅಧ್ಯಾಪನಧರ್ಮವನ್ನು ಹೊಂದಿರುವ ಬ್ರಾಹ್ಮಣನಾದ ಆಚಾರ್ಯನೇ ಹೇಳತಕ್ಕದ್ದು– ಎಂಬಿದು ವಿಶೇಷಾಧಿಕಾರವೆಂಬುದರ ಅಭಿಪ್ರಾಯ.

3. ವಿದುರನು ಶೂದ್ರನಾಗಿದ್ದರೂ ಪೂರ್ವಜನ್ಮಸಂಸ್ಕಾರವಶದಿಂದ ಬ್ರಹ್ಮಜ್ಞಾನಿಯೇ ಆಗಿದ್ದನು. ಆದರೆ ಮತ್ತೊಬ್ಬರಿಗೆ ಬ್ರಹ್ಮೋಪದೇಶವನ್ನು ಮಾಡಲು ತಾನು ಅಧಿಕಾರಿಯಲ್ಲವೆಂದು ತಿಳಿದು ಹೀಗೆ ಹೇಳಿದ್ದಾನೆ. ಪೀಠಿಕೆಯನ್ನು ನೋಡಿ. ವಿದುರನು ಬ್ರಹ್ಮಜ್ಞಾನಿಯಾಗಿದ್ದನೆಂಬುದಕ್ಕೆ ಸೂ. ಭಾ. ೧-೩-೩೮ನ್ನು ನೋಡಿ.

4. ನಾರದಸನತ್ಕುಮಾರರ ಸಂವಾದರೂಪವಾದ ಇತಿಹಾಸವನ್ನು.

5. ಛಾಂದೋಗ್ಯೋಪನಿಷತ್ತಿನ ಕಥೆಯಂತೆ ನಾರದರಿಗೆ ಉಪದೇಶಮಾಡಿದವರು ಸನತ್ಕುಮಾರರು. ಇಲ್ಲಿ 'ತಮೇವ' (ಅವನನ್ನೇ) ಎಂದು ಪರಾಮರ್ಶಿಸಿರುವದೂ ಸನತ್ಕುಮಾರರನ್ನೇ. ಮುಂದೆ ೧ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಇದನ್ನು ಸ್ಪಷ್ಟಪಡಿಸಿದೆ.

6. ಮುಂತಾದ ಎಂದದ್ದರಿಂದ ನಮಸ್ಕರಿಸುವದು, ಕುಳ್ಳಿರಿಸುವದು–ಇವುಗಳನ್ನೂ ಗ್ರಹಿಸಬೇಕು.

(ವಿಷಯವನ್ನು) ಕೇಳಿದ್ದರಿಂದ ಈ ರಾಜನು ಲಾಭ-ಅಲಾಭಗಳನ್ನೂ ಪ್ರಿಯಾಪ್ರಿಯಗಳನ್ನೂ ಜರಾಮೃತ್ಯುಗಳನ್ನೂ ಮದೋನ್ಮಾದಗಳನ್ನೂ ಹಸಿವುಬಾಯಾರಿಕೆಗಳನ್ನೂ ಭಯಾಭಯಗಳನ್ನೂ ಬೇಜಾರು, ಆಲಸ್ಯ- ಇವುಗಳನ್ನೂ ಕಾಮಕ್ರೋಧಗಳನ್ನೂ ಏಳುಬೀಳುಗಳನ್ನೂ ಸಹಿಸಿಕೊಳ್ಳುವನೋ (ಮತ್ತು) ಎಲ್ಲಾ ದುಃಖಗಳನ್ನೂ ದಾಟಿದವನಾಗುವನೋ[1] (ಅದನ್ನು ಹೇಳಬೇಕು) ಎಂದು (ವಿಜ್ಞಾಪಿಸಿ) 'ಪೂಜ್ಯನೆ, ಯಾವದರಿಂದ ಈ (ರಾಜನು) ಎಲ್ಲಾ ರೀತಿಯ ಸಂಸಾರದಿಂದಲೂ ಅದರ ಕಾರಣವಾಗಿರುವ ಧರ್ಮದಿಂದಲೂ ಬಿಡಲ್ಪಟ್ಟು ಸುಖದುಃಖಗಳನ್ನು ಮೀರಿ ಮುಕ್ತನಾಗುವನೋ ಅದನ್ನು ಈ ಧೃತರಾಷ್ಟ್ರನಿಗೆ ಹೇಳಬೇಕು' ಎಂದು ತಿಳಿಸಿದನು.

---

1. ಬ್ರಹ್ಮಜ್ಞಾನವೊಂದರಿಂದ ಮಾತ್ರವೇ ಎಲ್ಲಾ ದುಃಖಗಳನ್ನೂ ದಾಟಿ ಅಮೃತನಾಗಲು ಸಾಧ್ಯ. ಶ್ವೇ. ೩-೮ನ್ನು ನೋಡಿರಿ.

# ಒಂದನೆಯ ಅಧ್ಯಾಯ

## ಧೃತರಾಷ್ಟ್ರನ ಪ್ರಶ್ನೆ

**ವೈಶಂಪಾಯನ ಉವಾಚ—**

**ತತೋ ರಾಜಾ ಧೃತರಾಷ್ಟ್ರೋ ಮನೀಷೀ ।**
**ಸಂಪೂಜ್ಯ ವಾಕ್ಯಂ ವಿದುರೇರಿತಂ ತತ್ ॥**
**ಸನತ್ಸುಜಾತಂ ರಹಿತೇ ಮಹಾತ್ಮಾ ।**
**ಪಪ್ರಚ್ಛ ಬುದ್ಧಿಂ ಪರಮಾಂ ಬುಭೂಷನ್ ॥ ೧ ॥**

೧. ವೈಶಂಪಾಯನಿಂತೆಂದನು : ಅನಂತರ ಜ್ಞಾನನಾದ ಬುದ್ಧಿವಂತನಾದ ಧೃತರಾಷ್ಟ್ರರಾಜನು ವಿದುರನು ಹೇಳಿದ ಆ ಮಾತನ್ನು ಪುರಸ್ಕರಿಸಿ ಏಕಾಂತದಲ್ಲಿ ಸನತ್ಸುಜಾತನನ್ನು (ಕುರಿತು) ಪರಮವಾದ ಜ್ಞಾನವನ್ನು ಬಯಸುವವನಾಗಿ ಕೇಳಿದನು.

(ಭಾಷ್ಯ)

ತತಃ ಏತದ್ವಾಕ್ಯಸಮನನ್ತರಂ ವಿದುರೇಣ ಸನತ್ಸುಜಾತಂ ಪ್ರತಿ ಈರಿತಮ್ ಉಕ್ತಂ ಯತ್ ವಾಕ್ಯಂ ತತ್ ಸಂಪೂಜ್ಯ ಸಂಮಾನ್ಯ ಸನತ್ಸುಜಾತಮ್, ಸನದಿತಿ ಸನಾತನಂ ಬ್ರಹ್ಮ ಉಚ್ಯತೇ ಹಿರಣ್ಯಗರ್ಭಾಖ್ಯಮ್, ತಸ್ಮಾತ್ ಸನಾತನಾದ್ ಬ್ರಹ್ಮಣಃ ಮಾನಸಾತ್ ಜ್ಞಾನವೈರಾಗ್ಯಾದಿಸಮನ್ವಿತಃ ಸುಷ್ಠು ಜಾತಃ ಇತಿ ಸನತ್ಸುಜಾತಃ ಇತ್ಯುಕ್ತೋ ಭಗವಾನ್ ಸನತ್ಕುಮಾರಃ । ತಂ ರಹಿತೇ ರಹಸಿ ಪ್ರಾಕೃತಜನವರ್ಜಿತೇ ದೇಶೇ ಮಹಾತ್ಮಾ ಮಹಾಬುದ್ಧಿಃ ಪಪ್ರಚ್ಛ ಪೃಷ್ಟವಾನ್ ಬುದ್ಧಿಂ ಪರಮಾಮ್ ಉತ್ತಮಾಂ ಪೂರ್ಣಾನನ್ದಾದ್ವಿತೀಯವಿಷಯಾಮ್। ಕಿಮರ್ಥಮ್? ಬುಭೂಷನ್ ಭವಿತುಮಿಚ್ಛನ್ ಬ್ರಹ್ಮವಿದ್ಯಯಾ ಅಪಹೃತಮಾತ್ಮಾನಂ ಲಬ್ಧುಮಿಚ್ಛನ್ ಇತ್ಯರ್ಥಃ ॥

(ಭಾಷ್ಯಾರ್ಥ)

ಅನಂತರ (ಎಂದರೆ) ಈ ವಾಕ್ಯವನ್ನು ಕೇಳಿದಮೇಲೆ, ವಿದುರನಿಂದ ಸನತ್ಸುಜಾತನನ್ನು ಕುರಿತು ಹೇಳಲ್ಪಟ್ಟ ಯಾವ ಮಾತು ಉಂಟೋ ಅದನ್ನು[1] ಪೂಜಿಸಿ ಗೌರವಿಸಿ ಸನತ್ಸುಜಾತನನ್ನು– ಸನತ್ ಎಂದರೆ ಸನಾತನವಾದ ಹಿರಣ್ಯಗರ್ಭನೆಂಬ ಬ್ರಹ್ಮವು ; ಆ ಸನಾತನವಾದ ಮನೋಮಯವಾದ ಬ್ರಹ್ಮದಿಂದ ಜ್ಞಾನವೈರಾಗ್ಯಾದಿಗಳಿಂದ ಕೂಡಿದವನಾಗಿ, ಚೆನ್ನಾಗಿ ಜನಿಸಿದವನು– ಎಂದರೆ

---

1. 'ತ್ವಮಸ್ಮೈ ವಕ್ತುಮರ್ಹಸಿ' ಎಂಬ ವಿದುರನ ವಾಕ್ಯವನ್ನು ಕೇಳಿದಮೇಲೆ.

ಸನತ್ಸುಜಾತನು–ಎಂಬುದಾಗಿ ಕರೆಯಲ್ಪಟ್ಟಿರುವ ಭಗವಾನ್ ಸನತ್ಕುಮಾರನು[1] ಆವನನ್ನು ಏಕಾಂತದಲ್ಲಿ ಎಂದರೆ ಲೌಕಿಕಜನರಿಂದ ದೂರವಾದ ಸ್ಥಳದಲ್ಲಿ, ಮಹಾತ್ಮನು– ಎಂದರೆ ಮಹಾಬುದ್ಧಿ(ಶಾಲಿ)ಯಾದ (ಧೃತರಾಷ್ಟ್ರನು) ಪರಮವಾದ ಎಂದರೆ ಉತ್ತಮವಾದ ಪೂರ್ಣಾನಂದಾದ್ವಿತೀಯವಿಷಯವಾದ ಬುದ್ಧಿ (ಜ್ಞಾನ)ವನ್ನು ಪಡೆಯಲು ; ಏತಕ್ಕಾಗಿ ? ಎಂದರೆ (ಅವಿದ್ಯೆಯಿಂದ) ಅಪಹರಿಸಲ್ಪಟ್ಟ ಆತ್ಮನನ್ನು ಬ್ರಹ್ಮವಿದ್ಯೆಯಿಂದ ಪಡೆಯಲಿಚ್ಛಿಸುವವನಾಗಿ (ಬ್ರಹ್ಮವೇ) ತಾನಾಗಲು (ಬಯಸಿ)ದವನಾಗಿ[2] (ಕೇಳಿದನು.)

## ಪ್ರಶ್ನೆ : ಮೃತ್ಯುವು ಇದ್ದಾನೆಯೊ ? ಇಲ್ಲವೊ ?

ಧೃತರಾಷ್ಟ್ರ ಉವಾಚ—

ಸನತ್ಸುಜಾತ ಯದಿದಂ ಶೃಣೋಮಿ ।
ಮೃತ್ಯುರ್ಹಿ ನಾಸ್ತೀತಿ ತವೋಪದೇಶಮ್ ।।[3]
ದೇವಾಸುರಾ ಆಚರನ್[4] ಬ್ರಹ್ಮಚರ್ಯಮ್ ।
ಅಮೃತ್ಯವೇ ತತ್ಕತರನ್ನು ಸತ್ಯಮ್ ।। ೨ ।।

೨. ಧೃತರಾಷ್ಟ್ರನಿಂತೆಂದನು : ಸನತ್ಸುಜಾತನೆ, 'ಮೃತ್ಯುವೆಂಬವನು ಇಲ್ಲ' ಎಂಬ ನಿನ್ನ ಉಪದೇಶವನ್ನು ಕೇಳಿರುತ್ತೇನೆ. (ಹಾಗಾದರೆ) ಮೃತ್ಯುವನ್ನು ಮೀರುವದಕ್ಕಾಗಿ ದೇವಾಸುರರು ಬ್ರಹ್ಮಚರ್ಯವನ್ನು ಮಾಡಿದರಷ್ಟೆ ! ಇವೆರಡರಲ್ಲಿ ನಿಜವು ಯಾವದು ?

(ಭಾಷ್ಯ)

ಹೇ ಸನತ್ಸುಜಾತ, ಯತ್ ಮೃತ್ಯುರ್ಹಿ ನಾಸ್ತಿ ಇತಿ ಶಿಷ್ಯಾನ್ ಪ್ರತಿ ಉಪದಿಷ್ಟಮ್ ಇತಿ ವಿದುರಃ ಪ್ರಾಹ ; ದೇವಾಸುರಾಃ ಪುನಃ ಅಮೃತ್ಯವೇ ಮೃತ್ಯೋಃ ಅಭಾವಾಯ ಅಮೃತತ್ವಪ್ರಾಪ್ತಯೇ ಬ್ರಹ್ಮಚರ್ಯಮ್ ಆಚರನ್ ಇನ್ದ್ರವಿರೋಚನಾದಯಃ ಗುರೌ ವಾಸಂ ಕೃತವನ್ತಃ । ಶ್ರೂಯತೇ ಚ

1. ಪುರಾಣಗಳಲ್ಲಿ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ– ಎಂಬ ನಾಲ್ವರು ಬ್ರಹ್ಮನ ಮಾನಸಪುತ್ರರು ಎಂದು ವರ್ಣಿಸಿಯದೆ. ಇಲ್ಲಿ ಸನತ್ಸುಜಾತನಾದ ಸನತ್ಕುಮಾರನು ಎಂದು ಎರಡನ್ನೂ ವಿಶೇಷಣವಿಶೇಷ್ಯಭಾವದಿಂದ ಹೇಳಿದೆ. ಇದರ ಔಚಿತ್ಯವನ್ನು ವಿದ್ವಾಂಸರು ವಿಮರ್ಶಿಸಬೇಕಾಗಿದೆ.

2. ಮುಂ. ೩-೨೯ರ ಸೂಚನೆ.

3. 'ನ ಮೃತ್ಯುರಸ್ತೀತಿ ತವ ಪ್ರವಾದಮ್' ಎಂದು ಮ॥ ಭಾ॥ ಪಾ॥

4. 'ಹ್ಯಾಚರನ್' ಮ॥ ಭಾ॥ ಪಾ॥

ಛಾನ್ದೋಗ್ಯೇ– 'ತದ್ಧೋಭಯೇ ದೇವಾಸುರಾ ಅನುಬುಬುಧಿರೇ' (ಛಾಂ. ೮-೭ ೨) ಇತ್ಯಾದ್ಯಾರಭ್ಯ 'ತೌ ಹ ದ್ವಾತ್ರಿಂಶತಂ ವರ್ಷಾಣಿ ಬ್ರಹ್ಮಚರ್ಯ ಮೂಷತುಃ' (ಛಾಂ. ೮-೭ ೩) ಇತ್ಯನ್ತೇನ ಇನ್ದ್ರವಿರೋಚನಯೋಃ ಪ್ರಜಾಪತೌ ಬ್ರಹ್ಮಚರ್ಯಚರಣಮ್ 'ಏಕಶತಂ ಹ ವೈ ವರ್ಷಾಣಿ ಮಘವಾ ಪ್ರಜಾಪತೌ ಬ್ರಹ್ಮಚರ್ಯಮುವಾಸ' (ಛಾಂ. ೮-೧೧-೩) ಇತಿ ಚ । ಯದಿ ಮೃತ್ಯುರ್ನಾಸ್ತೀತಿ ತವ ಪಕ್ಷಃ ಕಥಂ ತರ್ಹಿ ದೇವಾಸುರಾಣಾಮ್ ಅಮೃತ್ಯವೇ ಬ್ರಹ್ಮಚರ್ಯಚರಣಮ್ ? ತತ್ ತಯೋಃ ಮೃತ್ಯುಸದ್ಭಾವಾಸದ್ಭಾವಪಕ್ಷಯೋಃ ಕತರನ್ನು ಸತ್ಯಮ್ ; ಯತ್ ಸತ್ಯಂ ತದ್ ವಕ್ತುಮರ್ಹಸಿ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಎಲೈ ಸನತ್ಸುಜಾತನೆ, ಮೃತ್ಯುವೆಂಬುವನು ಇಲ್ಲವೆಂದು (ನೀನು) ಶಿಷ್ಯರಿಗೆ ಉಪದೇಶಮಾಡಿರುವೆಯಾಗಿ ವಿದುರನು (ನನಗೆ) ಹೇಳಿದ್ದಾನಷ್ಟೆ ! ಆದರೆ ದೇವತೆಗಳು ಮತ್ತು ಅಸುರರು- ಅಮೃತ್ಯುವಿಗಾಗಿ ಎಂದರೆ ಮೃತ್ಯುವನ್ನು ಹೋಗಲಾಡಿಸುವದಕ್ಕಾಗಿ-[1] ಅಮೃತತ್ವಪ್ರಾಪ್ತಿಗಾಗಿ ಇಂದ್ರವಿರೋಚನರೇ ಮೊದಲಾದವರು ಬ್ರಹ್ಮಚರ್ಯವನ್ನು ಆಚರಿಸಿದರು ; ಗುರು(ಕುಲ)ದಲ್ಲಿ ವಾಸ ಮಾಡಿದರು. ಛಾಂದೋಗ್ಯದಲ್ಲಿ : 'ಅದನ್ನು[2] ದೇವಾಸುರರಿಬ್ಬರೂ ತಿಳಿದುಕೊಂಡರು'- ಎಂಬಿದೇ ಮುಂತಾಗಿ ಆರಂಭಿಸಿ 'ಅವರಿಬ್ಬರೂ ಮೂವತ್ತೆರಡು ವರ್ಷಗಳವರೆಗೆ ಬ್ರಹ್ಮಚರ್ಯವಾಸವನ್ನು ಮಾಡಿಕೊಂಡಿದ್ದರು' ಎಂಬವರೆಗಿನ (ಗ್ರಂಥದಿಂದ ತಿಳಿದುಬರುವಂತೆ) ಇಂದ್ರವಿರೋಚನರಿಬ್ಬರೂ ಪ್ರಜಾಪತಿ (ಬ್ರಹ್ಮ)ನಲ್ಲಿ ಬ್ರಹ್ಮಚರ್ಯವನ್ನಾಚರಿಸಿದ್ದು, 'ನೂರೊಂದು ವರ್ಷಗಳ ಕಾಲ ದೇವೇಂದ್ರನು ಪ್ರಜಾಪತಿಯ (ಬಳಿ)ಯಲ್ಲಿ ಬ್ರಹ್ಮಚರ್ಯ(ವಾಸ ವನ್ನು ಮಾಡಿಕೊಂಡು) ಇದ್ದನು' ಎಂದೂ ಕೇಳಬರುತ್ತಿದೆ. ಒಂದುವೇಳೆ ಮೃತ್ಯುವಿಲ್ಲವೆಂಬುದೇ ನಿನ್ನ ಅಭಿಪ್ರಾಯವಾದರೆ ದೇವಾಸುರರು ಅಮೃತ್ಯುವಿಗಾಗಿ ಬ್ರಹ್ಮಚರ್ಯವನ್ನಾಚರಿಸಿದ್ದು ಹೇಗೆ ಸರಿ ? ಇದರಲ್ಲಿ- ಎಂದರೆ ಮೃತ್ಯುವಿನ ಇರುವಿಕೆ, ಇಲ್ಲದಿರುವಿಕೆ- ಎಂಬ ಎರಡುಪಕ್ಷಗಳಲ್ಲಿ ಯಾವದು ಸತ್ಯವು ? ಯಾವದು ನಿಜವೋ ಅದನ್ನು ಹೇಳುವವನಾಗು – ಎಂದಭಿಪ್ರಾಯ.

---

1. ಮೃತ್ಯುವೇ ಇಲ್ಲದಿದ್ದರೆ ಅದನ್ನು ಹೋಗಲಾಡಿಸುವ ಪ್ರಯತ್ನವಾದರೂ ಹೇಗೆ ಸಾರ್ಥಕವಾದೀತು ? ಇಲ್ಲದ್ದನ್ನು ಕಳೆದುಕೊಳ್ಳಲು ಯಾರುತಾನೆ ಪ್ರಯತ್ನಿಸುತ್ತಾರೆ ? ಎಂದಭಿಪ್ರಾಯ.

2. ಅಪಹತಪಾಪ್ಮನಾದ ಆತ್ಮನನ್ನರಿತವನು ಮೃತ್ಯುವನ್ನು ದಾಟಿ ಸರ್ವಕಾಮಗಳನ್ನೂ ಪಡೆಯುತ್ತಾನೆಂಬುದನ್ನು.

## ಉತ್ತರ: ಮೃತ್ಯುವು ನಿಜವಾಗಿ ಇಲ್ಲ

ಶ್ರೀಸನತ್ಸುಜಾತ ಉವಾಚ—

ಅಮೃತ್ಯುಃ ಕರ್ಮಣಾ ಕೇಚಿತ್[1] ಮೃತ್ಯುರ್ನಾಸ್ತೀತಿ ಚಾಪರೇ[2] ।
ಶೃಣು ಮೇ ಬ್ರುವತೋ ರಾಜನ್ ಯಥೈತನ್ಮಾ ವಿಶಙ್ಕಿಥಾಃ ॥ ೩ ॥

೩. ಶ್ರೀ ಸನತ್ಸುಜಾತನಿಂತೆಂದನು : ಕರ್ಮದಿಂದ ಅಮೃತ್ಯುವೆಂದು ಕೆಲವರು, ಮೃತ್ಯುವು ಇಲ್ಲವೆಂದೇ ಮತ್ತೊಬ್ಬರು, ಎಲೈ ರಾಜನೆ, ನಾನು ಹೇಳುವದನ್ನು ಕೇಳು. ಈ (ವಿಷಯದಲ್ಲಿ) ಸಂಶಯ ಪಡಬೇಡ.

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್ ಸನತ್ಸುಜಾತಃ ಕೇಚಿತ್ ಪುನಃ ಅವಿದ್ಯಾಧಿರೂಢಾಃ ಪರಮಾರ್ಥತೋ ಮೃತ್ಯುಸದ್ಭಾವಂ ಮನ್ಯಮಾನಾಃ ವೇದೋಕ್ತೇನ ಕರ್ಮಣಾ ಅಮೃತ್ಯುಃ ಅಮೃತತ್ವಂ ಭವತೀತಿ ಮತ್ವಾ ಅಮೃತ್ಯವೇ ಅಮೃತತ್ವಪ್ರಾಪ್ತಯೇ ವೇದೋಕ್ತಂ ಕರ್ಮ ಆಚರನ್ತಿ ; ತಥಾ ಅನ್ಯೇ ವಿಷಯವಿಷಾನ್ಧಾಃ ವಿಷಯವ್ಯತಿರೇಕೇಣ ನಿರ್ವಿಷಯಂ ಮೋಕ್ಷಮಮನ್ಯಮಾನಾಃ ಕರ್ಮಣೈವ ಅಮೃತ್ಯುಮ್ ಅಮರಣತ್ವಂ ದೇವಾದಿಭಾವಂ ವರ್ಣಯನ್ತಿ ; ತತ್ರೈವ ಚ ರಾಗಿಗೀತಂ ಶ್ಲೋಕಮುದಾಹರನ್ತಿ– 'ಅಪಿ ವೃನ್ದಾವನೇ ಶೂನ್ಯೇ ಸೃಗಾಲತ್ವಂ ಸ ಇಚ್ಛತು । ನ ತು ನಿರ್ವಿಷಯಂ ಮೋಕ್ಷಂ ಕದಾಚಿದಪಿ ಗೌತಮ' ಇತಿ । ತಥೈವ ಚ ಪರಮಾತ್ಮವ್ಯತಿರೇಕೇಣ ದ್ವಿತೀಯಮಪಶ್ಯನ್ತಃ ಜ್ಞಾನಕರ್ಮಭ್ಯಾಂ ಅಮೃತತ್ವಂ ವರ್ಣಯನ್ತಿ ॥

ಅಪರೇ ಪುನಃ ಅದ್ವಿತೀಯಾತ್ಮದರ್ಶಿನಃ ಆತ್ಮವ್ಯತಿರೇಕೇಣ ದ್ವಿತೀಯಮ್ ಅಪಶ್ಯನ್ತಃ ಮೃತ್ಯುಃ ನಾಸ್ತೀತಿ ವರ್ಣಯನ್ತಿ । ಹೇ ರಾಜನ್, ಯಥಾ ಏತತ್ಪಕ್ಷಯೋಃ ಅವಿರೋಧಃ ಸಂಭವತಿ ತಥಾ ಬ್ರುವತಃ ಮೇ ಮಮ ವಾಕ್ಯಂ ಶೃಣು ಮಾ ವಿಶಙ್ಕಿಥಾಃ ಮಯೋಕ್ತೇ ಅರ್ಥೇ ಶಙ್ಕಾಂ ಮಾ ಕೃಥಾಃ ॥

(ಭಾಷ್ಯಾರ್ಥ)

ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಪೂಜ್ಯನಾದ ಸನತ್ಸುಜಾತನು ಹೇಳುತ್ತಾನೆ : ಮತ್ತೆ ಕೆಲವರು ಅವಿದ್ಯೆಯಿಂದ ಕೂಡಿದವರು[3] ನಿಜವಾಗಿಯೂ

1. 'ಅಪೃಚ್ಛಃ ಕರ್ಮಣಾ ಯಚ್ಚ' ಮ॥ ಭಾ॥ ಪಾ॥
2. 'ಚಾಪರವರ್' ಮ॥ ಭಾ॥.ಪಾ॥
3. ಅವಿದ್ಯೆಯಿಂದ ಆವರಿಸಲ್ಪಟ್ಟವರು. ಅವಿದ್ಯಾವಂತರು – ಎಂದಭಿಪ್ರಾಯ.

ಮೃತ್ಯುವು ಇದಾನೆಂದು ಭಾವಿಸಿ ವೇದೋಕ್ತವಾದ ಕರ್ಮದಿಂದ ಅಮೃತ್ಯುವು- (ಎಂದರೆ) ಅಮೃತತ್ವವು ಉಂಟಾಗುತ್ತದೆ-[1] ಎಂದು ತಿಳಿದು ಅಮೃತ್ಯುವಿಗಾಗಿ ಅಮೃತತ್ವವನ್ನು ಪಡೆಯುವದಕ್ಕಾಗಿ ವೇದೋಕ್ತವಾದ ಕರ್ಮವನ್ನು ಆಚರಿಸುತ್ತಾರೆ. ಹಾಗೆಯೇ (ಇನ್ನು) ಕೆಲವರು ವಿಷಯಗಳೆಂಬ ವಿಷದಿಂದ ಕುರುಡರಾದವರು[2] ವಿಷಯಗಳ (ಭೋಗ)ಕ್ಕಿಂತ ಬೇರೆಯಾಗಿರುವ ನಿರ್ವಿಷಯವಾದ ಮೋಕ್ಷವನ್ನು[3] ಒಪ್ಪದವರಾಗಿ ಕರ್ಮದಿಂದಲೇ ಅಮೃತ್ಯುವನ್ನು, ಅಮರಣತ್ವರೂಪವಾದ ದೇವಾದಿಭಾವವನ್ನು ವರ್ಣಿಸುವರು. ಆ (ವಿಷಯದಲ್ಲಿ)ಯೇ ರಾಗಿಗೀತೆಯ ಶ್ಲೋಕವನ್ನೂ ಉದಾಹರಿಸುವರು: '(ಕೃಷ್ಣನಿಲ್ಲದ) ಶೂನ್ಯವಾದ ವೃಂದಾವನದಲ್ಲಿ(ಯಾದರೂ) ನರಿಯಾಗಿರುವಿಕೆಯನ್ನು ಅವನು ಇಷ್ಟಪಟ್ಟಾನು. ಎಲೈ ಗೌತಮನೆ, ನಿರ್ವಿಷಯವಾದ ಮೋಕ್ಷವನ್ನು (ಮಾತ್ರ) ಎಂದೆಂದಿಗೂ (ಬಯಸಲಾರನು)' ಎಂದು (ಹೇಳುವರು). ಹಾಗೆಯೇ ಪರಮಾತ್ಮನಿಗಿಂತ ವ್ಯತಿರಿಕ್ತವಾಗಿ ಎರಡನೆಯದನ್ನು ಕಾಣದ (ಕೆಲವರು)[4] ಜ್ಞಾನಕರ್ಮಗಳೆರಡರಿಂದ ಅಮೃತತ್ವವಾಗುವದೆಂದು ವರ್ಣಿಸುವರು.

ಅದ್ವಿತೀಯಾತ್ಮದರ್ಶಿಗಳಾದ ಮತ್ತೆ ಕೆಲವರು[5] ಆತ್ಮನಿಗಿಂತ ಬೇರೆಯಾದ ಎರಡನೆಯದನ್ನು ಕಾಣದೆಇರುವದರಿಂದ ಮೃತ್ಯುವು ಇಲ್ಲವೆಂದು ಹೇಳುವರು ಎಲೈ ರಾಜನೆ, ಈ (ಎರಡು) ವಿಷಯಗಳಿಗೆ[6] ವಿರೋಧವಿಲ್ಲದಿರುವದು ಹೇಗೆಂಬುದನ್ನು ತಿಳಿಸುವ ನನ್ನ ಮಾತನ್ನು ಕೇಳು. ನಾನು ಹೇಳುವ ಮಾತಿನಲ್ಲಿ ಸಂಶಯಪಡಬೇಡ- ಎಂದರೆ ಸಂದೇಹವನ್ನು ಮಾಡಿಕೊಳ್ಳಬೇಡ.

---

1. ಮುಂ ೧-೨-೧೦ನ್ನು ನೋಡಿರಿ.

2. ವಿಷಯಾಸಕ್ತರಾದವರು ; ಬಹಿರ್ಮುಖರಾದವರು- ಎಂದಭಿಪ್ರಾಯ.

3. ಮೋಕ್ಷವೆಂಬುದು ಕಲ್ಲಿನಂತೆ ದುಃಖಸುಖರಹಿತವಾದ ಸ್ಥಿತಿ- ಎಂಬ ನ್ಯಾಯದರ್ಶನದವರ ಅಭಿಪ್ರಾಯವಿದು.

4. ಇವರು ಯಾರೆಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಜ್ಞಾನಕರ್ಮಸಮುಚ್ಚಯದಿಂದ ಸತ್ತಮೇಲೆ ಮೋಕ್ಷಪ್ರಾಪ್ತಿಯಾಗುವದೆಂದು ಹೇಳುತ್ತಿದ್ದ ಜಾತಬ್ರಹ್ಮವಾದಿಗಳಿರಬಹುದು.

5. ಇದೇ ಸನತ್ಸುಜಾತರ ಮತವು- ಎಂದರೆ ವೇದಾಂತಾರ್ಥವನ್ನು ಬಲ್ಲ ಜ್ಞಾನಿಗಳ ಮತವು.

6. ಮೃತ್ಯುವು ನಿಜವಾಗಿದೆ, ಅದನ್ನು ಸಾಧನಗಳಿಂದ ಜಯಿಸಬೇಕು - ಎಂಬುದೊಂದು ಪಕ್ಷ ; ಮೃತ್ಯುವು ಇಲ್ಲವೇಇಲ್ಲ- ಎಂಬ ಪರಮಾರ್ಥಜ್ಞಾನಿಗಳ ಪಕ್ಷ ; ಇವುಗಳಿಗೆ ಎಂದಭಿಪ್ರಾಯ.

## ಪ್ರಮಾದವೇ ಮೃತ್ಯು, ಅಪ್ರಮಾದವೇ ಅಮೃತತ್ವ

ಉಭೇ ಸತ್ಯೇ ಕ್ಷತ್ರಿಯಾದ್ಯಪ್ರವೃತ್ತೇ[1] ।
ಮೋಹೋ ಮೃತ್ಯುಃ ಸಂಮತೋ ಯಃ[2] ಕವೀನಾಮ್ ॥
ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ ।
ಸದಾಽ[3]ಪ್ರಮಾದಮಮೃತತ್ವಂ ಬ್ರವೀಮಿ ॥ ೪ ॥

೪. ಎಲೈ ಕ್ಷತ್ರಿಯನೆ, ಇವೆರಡೂ ಮೊದಲಿನಿಂದಲೂ ಇದ್ದು ಕೊಂಡಿರುವವುಗಳು. ಕವಿಗಳಿಗೆ ಒಪ್ಪಾದಂತೆ ಮೋಹವೆಂಬುದೇ ಮೃತ್ಯುವು. ನಾನು ಪ್ರಮಾದವನ್ನು ಮೃತ್ಯುವೆಂದು ಹೇಳುವೆನು. ಯಾವಾಗಲೂ ಅಪ್ರಮಾದವನ್ನು ಅಮೃತತ್ವವೆಂದು ಹೇಳುವೆನು.

(ಭಾಷ್ಯ)

ಕಥಮ್ ? ಯೇ ಪೂರ್ವೋಕ್ತೇ ಮೃತ್ಯೋಃ ಅಸ್ತಿತ್ವನಾಸ್ತಿತ್ವೇ ತೇ ಉಭೇ ಹೇ ಕ್ಷತ್ರಿಯ, ಆದ್ಯಪ್ರವೃತ್ತೇ ಯಃ ಆದಿಸರ್ಗಃ ತಮಾರಭ್ಯ ಪ್ರವೃತ್ತೇ। ಅಥವಾ ಕ್ಷತ್ರಿಯಾದ್ಯ, ಕ್ಷತ್ರಿಯಪ್ರಧಾನ, ಪ್ರವೃತ್ತೇ ವರ್ತಮಾನೇ । ಕಥಂ ಪುನಃ ಉಭಯೋಃ ಪರಸ್ಪರವಿರುದ್ಧಯೋಃ ಅಸ್ತಿತ್ವನಾಸ್ತಿತ್ವಯೋಃ ಸತ್ಯತ್ವ ಮಿತಿ ? ತತ್ರಾಹ– ಮೋಹೋ ಮೃತ್ಯುಃ ಸಂಮತೋ ಯಃ ಕವೀನಾಮ್ ಇತಿ । ಭವೇದಯಂ ವಿರೋಧಃ ಅಸ್ತಿತ್ವನಾಸ್ತಿತ್ವಯೋಃ ಯದಿ ಪರಮಾರ್ಥ ರೂಪೋ ಮೃತ್ಯುಃ ಸ್ಯಾತ್ । ಕಸ್ತರ್ಹಿ ಮೃತ್ಯುಃ ಯಃ ಮೋಹಃ ಮಿಥ್ಯಾ ಜ್ಞಾನಮ್ ಅನಾತ್ಮನ್ಯಾತ್ಮಾಭಿಮಾನಃ, ಸ ಮೃತ್ಯುಃ ಕೇಷಾಞ್ಚಿತ್ ಕವೀನಾಂ ಮತಃ ; ಅಹಂ ತು ನ ತಥಾ ಮೃತ್ಯುಂ ಬ್ರವೀಮಿ । ಕಥಂ ತರ್ಹಿ ? ಪ್ರಮಾದಂ ವೈ ಮೃತ್ಯುಮ್ ಅಹಂ ಬ್ರವೀಮಿ । ಪ್ರಮಾದಃ ಪ್ರಚ್ಯುತಿಃ ಸ್ವಾಭಾವಿಕಬ್ರಹ್ಮ ಭಾವಾತ್ । ತಂ ಪ್ರಮಾದಂ ಮಿಥ್ಯಾಜ್ಞಾನಸ್ಯಾಪಿ ಕಾರಣಮ್ ಆತ್ಮಾನವ ಧಾರಣಮ್ ಆತ್ಮಾಜ್ಞಾನಂ ಮೃತ್ಯುಂ ಜನನಮರಣಾದಿಸರ್ವಾನರ್ಥಬೀಜಮ್ ಅಹಂ ಬ್ರವೀಮಿ । ತಥಾ ಸದಾಽಪ್ರಮಾದಂ ಸ್ವಾಭಾವಿಕಸ್ವರೂಪೇಣಾವ ಸ್ಥಾನಮ್ ಅಮೃತತ್ವಂ ಬ್ರವೀಮಿ ॥

(ಭಾಷ್ಯಾರ್ಥ)

ಹೇಗೆ ? ಎಂದರೆ, ಯಾವ ಹಿಂದೆ ಹೇಳಿದ ಮೃತ್ಯುವಿನ ಇರುವಿಕೆ, ಇಲ್ಲ ದಿರುವಿಕೆಗಳು ಆ ಎರಡೂ ಎಲೈ ಕ್ಷತ್ರಿಯನೆ, ಆದ್ಯಪ್ರವೃತ್ತಗಳು– ಎಂದರೆ

---

1. 'ಕ್ಷತ್ರಿಯೈತಸ್ಯ ವಿದ್ಧಿ' 2. 'ಸಂಮತೋಽಯಮ್'
3. 'ತಥಾ' ಎಂದು ಮ॥ ಭಾ॥ ಪಾಠಗಳು.

(ಮೊಟ್ಟ)ಮೊದಲನೆಯ ಸೃಷ್ಟಿಯ (ಕಾಲದಿಂದ) ಆರಂಭಿಸಿ ಪ್ರವೃತ್ತವಾಗಿರುವವುಗಳು.[1] ಅಥವಾ ಕ್ಷತ್ರಿಯಾದ್ಯ, ಎಲೈ ಕ್ಷತ್ರಿಯಶ್ರೇಷ್ಠನೆ, (ಇವು) ಪ್ರವೃತ್ತವಾಗಿವೆ, ಇದ್ದುಕೊಂಡಿವೆ (ಎಂದಾದರೂ ಆದ್ಯಶಬ್ದವನ್ನು ಕ್ಷತ್ರಿಯಶಬ್ದದೊಡನೆಯೇ ಸೇರಿಸಿ ಅರ್ಥಮಾಡಬಹುದು). ಒಂದಕ್ಕೊಂದು ವಿರುದ್ಧವಾಗಿರುವ ಅಸ್ತಿತ್ವ, ನಾಸ್ತಿತ್ವಗಳೆಂಬ- ಇವೆರಡೂ ಸತ್ಯವೆಂಬುದು ಹೇಗೆ ? ಎಂದರೆ 'ಕವಿಗಳಿಗೆ ಮೋಹವೇ ಮೃತ್ಯುವೆಂಬುದು ಒಪ್ಪಾಗಿದೆ'- ಮುಂತಾಗಿ ಹೇಳುತ್ತಾರೆ: ಒಂದುವೇಳೆ ಮೃತ್ಯುವು ನಿಜವಾಗಿಯೂ ಇದ್ದಿದ್ದರೆ ಈ ಅಸ್ತಿತ್ವನಾಸ್ತಿತ್ವಗಳ ವಿರೋಧವೆಂಬುದು ಉಂಟಾಗುತ್ತಿತ್ತು. (ಹಾಗಿಲ್ಲ). ಹಾಗಾದರೆ ಮೃತ್ಯುವೆಂಬುದು ಯಾವದು ? ಅನಾತ್ಮದಲ್ಲಿ ಆತ್ಮನೆಂಬ ಅಭಿಮಾನರೂಪವಾದ ಯಾವ ತಪ್ಪುತಿಳಿವಳಿಕೆಯುಂಟೋ ಅದು ಮೃತ್ಯುವೆಂದು ಕೆಲವರು ಕವಿಗಳ[2] ಅಭಿಪ್ರಾಯ. ನಾನಾದರೋ ಮೃತ್ಯುವನ್ನು ಹಾಗೆಂದು ಹೇಳುವದಿಲ್ಲ.[3] ಮತ್ತೆ ಹೇಗೆ ? ಎಂದರೆ ಪ್ರಮಾದವನ್ನೇ ಮೃತ್ಯುವೆಂದು ನಾನು ಹೇಳುವೆನು. ಪ್ರಮಾದವೆಂದರೆ ಸ್ವರೂಪಭೂತವಾದ ಬ್ರಹ್ಮಭಾವದಿಂದ ಜಾರುವದು. ಮಿಥ್ಯಾಜ್ಞಾನಕ್ಕೂ ಕಾರಣವಾದ ಆತ್ಮಸ್ವರೂಪವನ್ನು ನಿಶ್ಚಯಿಸದೆಇರುವದೆಂಬ ಆತ್ಮಾಜ್ಞಾನವು[4] ಮೃತ್ಯುವು ; ಜನನಮರಣವೇ ಮುಂತಾದ ಎಲ್ಲಾ ಅನರ್ಥಗಳಿಗೂ ಕಾರಣವಾದ ಆ ಪ್ರಮಾದವನ್ನೇ ನಾನು (ಮೃತ್ಯುವೆಂದು) ಹೇಳುತ್ತೇನೆ. ಹಾಗೆಯೇ ಸದಾ ಅಪ್ರಮಾದವನ್ನು ಎಂದರೆ ಸ್ವಾಭಾವಿಕವಾದ (ತನ್ನ ಆತ್ಮ) ಸ್ವರೂಪದಿಂದಲೇ ಇದ್ದುಕೊಂಡಿರುವದು ಅಮೃತತ್ವವೆಂದು ಹೇಳುತ್ತೇನೆ.

(ಭಾಷ್ಯ)

ತಥಾ ಚ ಶ್ರುತಿಃ ಸ್ವರೂಪಾವಸ್ಥಾನಮೇವ ಮೋಕ್ಷಪದಂ ದರ್ಶಯತಿ 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ' (ಛಾಂ. ೮-೩-೪) ಇತಿ । ತಥಾ ಅನುಗೀತಾಸು ಸ್ಪಷ್ಟಮಾಹ— 'ಏಕೋ ಯಜ್ಞೋ ನಾಸ್ತಿ ತತೋ ದ್ವಿತೀಯೋ ಯೋ ಹೃಚ್ಛಯಃ ತಮಹಮನುಬ್ರವೀಮಿ । ಯಸ್ಮಿನ್ ಇಷ್ಟ್ವಾ ಸರ್ವಮಿದಂ ಗ್ರಸಿತ್ವಾ ಸ್ವರೂಪಸಂಸ್ಥಾಶ್ಚ ಭವನ್ತಿ

---

1 ಮೃತ್ಯುವಿನ ವಿಷಯದಲ್ಲಿ ಅಭಿಪ್ರಾಯಭೇದಗಳು ಸೃಷ್ಟಿಯ ಆದಿಕಾಲದಿಂದಲೂ ಇದ್ದುಕೊಂಡಿವೆ- ಎಂದಭಿಪ್ರಾಯ.

2. ಕ್ರಾಂತದರ್ಶಿಗಳಾದ ಜ್ಞಾನಿಗಳ.

3. ಈ ಕೆಲವರ ಅಭಿಪ್ರಾಯವು ಸರಿಯಲ್ಲವೆಂದು ಇಲ್ಲಿ ಅರ್ಥವಲ್ಲ. ಮಿಥ್ಯಾಜ್ಞಾನಕ್ಕೂ ಕಾರಣವಾದ ಪ್ರಮಾದವು ಮೃತ್ಯುವೆಂದು ಹೇಳುವದು ಇಲ್ಲಿ ವಿವಕ್ಷಿತ.

4. ಗೌಡಪಾದಕಾರಿಕೆಯಲ್ಲಿ ಹೇಳಿರುವ ಅಗ್ರಹಣ, ಅನ್ಯಥಾಗ್ರಹಣಗಳನ್ನೇ ಇಲ್ಲಿ ಮಿಥ್ಯಾಜ್ಞಾನಪ್ರಮಾದಗಳೆಂದು ಹೆಸರಿಸಿ ಅಗ್ರಹಣವನ್ನು ಸಂಸಾರಮೂಲಕಾರಣವೆಂದು ವರ್ಣಿಸಿ ಅವನ್ನೇ ಪ್ರಮಾದ, ಮೃತ್ಯು- ಮುಂತಾದ ಶಬ್ದಗಳಿಂದ ಕರೆದಿದೆ.

ಮತ್ರ್ಯಾಃ[1] (?) ಇತಿ । ಯತ ಏವಂ ಸ್ವರೂಪಾವಸ್ಥಾನಲಕ್ಷಣೋ ಮೋಕ್ಷಃ ಅತ ಏವ ಚತುರ್ವಿಧಕ್ರಿಯಾಫಲವಿಲಕ್ಷಣತ್ವಾದೇವ ನ ಕರ್ಮಸಾಧ್ಯಮ್ ಅಮೃತತ್ವಮ್ । ನಾಪಿ ಸಮುಚ್ಚಿತಾಭ್ಯಾಂ ಜ್ಞಾನಕರ್ಮಭ್ಯಾಮ್ ಇತಿ 'ಅಮೃತ್ಯುಃ ಕರ್ಮಣಾ ಕೇಚಿತ್' (೩) ಇತ್ಯೇತತ್ ಅನುಪಪನ್ನಮೇವ ಇತ್ಯುಕ್ತಂ ಭವತಿ । ವಕ್ಷ್ಯತಿ ಚ ಅಸ್ಯ ಪಕ್ಷಸ್ಯ ಸ್ವಯಮೇವ ನಿರಾಕರಣಮ್- 'ಕರ್ಮೋದಯೇ ಕರ್ಮಫಲಾನುರಾಗಾತ್ ತತ್ರಾನುಯಾನ್ತಿ ನ ತರನ್ತಿ ಮೃತ್ಯುಮ್ । ಜ್ಞಾನೇನ ವಿದ್ವಾನ್ ತೇಜೋಽಭ್ಯೇತಿ ನಿತ್ಯಂ ನ ವಿದ್ಯತೇ ಹ್ಯನ್ಯಥಾ ತಸ್ಯ ಪನ್ಥಾಃ' (೧-೯) ಇತಿ ॥

(ಭಾಷ್ಯಾರ್ಥ)

ಹಾಗೆಯೇ ಶ್ರುತಿಯೂಕೂಡ ಸ್ವರೂಪದಲ್ಲಿ ನಿಲ್ಲುವದನ್ನೇ ಮೋಕ್ಷಪದವಿ ಎಂದು ತಿಳಿಸುತ್ತಿದೆ ; 'ಹೆಚ್ಚಿನ ಜ್ಯೋತಿಯನ್ನು ಸೇರಿ ತನ್ನ ರೂಪದಿಂದ ಸಿದ್ಧವಾಗುತ್ತಾನೆ' ಎಂದಿದೆ. ಹಾಗೆಯೇ ಅನುಗೀತೆಗಳಲ್ಲಿ[2] ಸ್ಪಷ್ಟವಾಗಿ ಹೀಗೆಂದಿದೆ : 'ಒಂದು (ಮುಖ್ಯವಾದ) ಯಜ್ಞವಿದೆ. (ಅದಕ್ಕೆ ಸಮಾನವಾದ ಎರಡನೆಯದು ಇಲ್ಲ ; ಹೃದಯದಲ್ಲಿ ಅಡಗಿರುವ ಅಭಿಪ್ರಾಯವನ್ನು ನಾನು ಹೇಳುವೆನು ; ಎಲ್ಲಿ ಯಜ್ಞವನ್ನು (ಅರ್ಪಿಸಿದರೆ) ಇದೆಲ್ಲವನ್ನೂ ನುಂಗಿ (ವ್ಯಾಪಿಸಿ ಕೊಂಡು) ಮನುಷ್ಯರು ಸ್ವರೂಪಸಂಸ್ಥರಾಗಿಬಿಡುವರೋ (ಅದನ್ನು ಕೇಳು' (?) ಎಂದು (ಹೇಳಿದೆ). ಹೀಗೆ ತನ್ನ ಸ್ವರೂಪದಲ್ಲಿ ನಿಲ್ಲುವದೆಂಬ (ರೂಪವಾದ) ಮೋಕ್ಷವು ನಾಲ್ಕು ವಿಧವಾದ ಕ್ರಿಯಾಫಲಗಳಿಗಿಂತ[3] ವಿಲಕ್ಷಣವಾಗಿರುವದರಿಂದಲೇ ಅಮೃತತ್ವವು ಕರ್ಮಸಾಧ್ಯವಲ್ಲ. ಜ್ಞಾನಕರ್ಮಗಳ ಸಮುಚ್ಚಯ ದಿಂದಲೂ (ಸಾಧ್ಯವಲ್ಲ)ವಾದ್ದರಿಂದ 'ಕೆಲವರು ಕರ್ಮದಿಂದ ಅಮೃತ್ಯುವೆನ್ನು ವರು' ಎಂಬಿದು ಸರಿಯುಲ್ಲವೆಂದೇ ಹೇಳಿದಂತಾಗಿದೆ. ಈ ವಿಷಯವನ್ನು ನಿರಾಕರಣೆಮಾಡಿ ಮುಂದೆ ತಾವೇ (ಸನತ್ಸುಜಾತರೇ) ಹೇಳಿದ್ದಾರೇನೆಂದರೆ : 'ಕರ್ಮವು ಮಾಡಲ್ಪಡಲು ಕರ್ಮಫಲದಮೇಲಿನ ಆಶೆಯಿಂದ (ಮೂಢರು) ಅದನ್ನು ಅನುಸರಿಸಿಹೋಗುತ್ತಾರೆ; ಮೃತ್ಯುವನ್ನು ದಾಟುವದಿಲ್ಲ. ವಿದ್ವಾಂಸನು ಜ್ಞಾನದಿಂದ ನಿತ್ಯವಾದ ತೇಜಸ್ಸನ್ನು ಹೊಂದುತ್ತಾನೆ. ಹಾಗಿಲ್ಲದೆ ಅದಕ್ಕೆ ಬೇರೆಯ ಮಾರ್ಗವಿರುವದಿಲ್ಲ.'

1. ಮಹಾಭಾರತ ಅಶ್ವಮೇಧಪರ್ವ ೨೭ನೆಯ ಅಧ್ಯಾಯದಲ್ಲಿ ಇಂಥ ಕೆಲವು ಶ್ಲೋಕಗಳಿವೆ. ಈ ಶ್ಲೋಕವು ಇಲ್ಲ.

2. ಮಹಾಭಾರತ ಅಶ್ವಮೇಧಪರ್ವದಲ್ಲಿ ೧೭ನೆಯ ಅಧ್ಯಾಯದಿಂದ ೫೨ನೆಯ ಅಧ್ಯಾಯದವರೆಗಿರುವ ಅಧ್ಯಾತ್ಮೋಪದೇಶಭಾಗಕ್ಕೆ ಅನುಗೀತೆಯೆಂದು ಹೆಸರು.

3. ಮೋಕ್ಷವು ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ- ಎಂಬ ನಾಲ್ಕು ವಿಧವಾದ ಕರ್ಮಫಲಗಳಿಗಿಂತ ವಿಲಕ್ಷಣವಾದದ್ದೆಂದು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅಲ್ಲಲ್ಲಿ ಶಂಕರಾಚಾರ್ಯರು ತಿಳಿಸಿದ್ದಾರೆ.

(ಭಾಷ್ಯ)

ಕಥಮೇತದವಗಮ್ಯತೇ 'ಪ್ರಮಾದೋ ಮೃತ್ಯುಃ, ಅಪ್ರಮಾದೋ ಅಮೃತತ್ವಮ್' ಇತಿ । ತತ್ರಾಹ—

(ಭಾಷ್ಯಾರ್ಥ)

'ಪ್ರಮಾದವೇ ಮೃತ್ಯು, ಅಪ್ರಮಾದವೇ ಅಮೃತತ್ವವು'- ಎಂದು ಹೇಗೆ ತಿಳಿಯಬರುತ್ತದೆ ? ಎಂದರೆ ಹೇಳುತ್ತಾನೆ :—

**ಪ್ರಮಾದಾದ್ವಾ ಅಸುರಾಃ ಪರಾಭವನ್ ।**
**ಅಪ್ರಮಾದಾದ್ ಬ್ರಹ್ಮಭೂತಾಃ ಸುರಾಶ್ಚ[1] ॥**
**ನ ವೈ[2] ಮೃತ್ಯುರ್ವ್ಯಾಘ್ರ ಇವಾತ್ತಿ ಜನ್ತೂನ್ ।**
**ನಾಪ್ಯಸ್ಯ[3] ರೂಪಮುಪಲಭ್ಯತೇ ಹಿ ॥ ೫ ॥**

೫. ಪ್ರಮಾದಿಂದಲೇ ಅಸುರರು ಪರಾಭೂತರಾದರು. ದೇವತೆಗಳಾದರೋ ಅಪ್ರಮಾದದಿಂದ ಬ್ರಹ್ಮಭೂತರಾದರು. ಮೃತ್ಯುವು ಹುಲಿಯಂತೆ ಪ್ರಾಣಿಗಳನ್ನು ತಿನ್ನುವದಿಲ್ಲ. ಇದರ ಆಕಾರವೂ ಗೋಚರವಾಗುವದಿಲ್ಲ.

(ಭಾಷ್ಯ)

ಪ್ರಮಾದಾತ್ ಸ್ವಾಭಾವಿಕಬ್ರಹ್ಮಭಾವಪ್ರಚ್ಯವನಾತ್ ಅನಾತ್ಮನಿ ದೇಹಾದೌ ಆತ್ಮಭಾವಾತ್ ಅಸುರಾಃ ವಿರೋಚನಪ್ರಭೃತಯಃ ಪರಾಭವನ್ ಪರಾಭೂತಾಃ । ತಥಾ ಚ ಶ್ರುತಿಃ- 'ಅನುಪಲಭ್ಯ ಆತ್ಮಾನಮ್' (ಛಾಂ. ೮-೮-೯) ಇತ್ಯಾರಭ್ಯ 'ದೇವಾ ವಾ ಅಸುರಾ ವಾ ತೇ ಪರಾಭವಿಷ್ಯನ್ತಿ' (ಛಾಂ. ೮-೮-೪) ಇತ್ಯನ್ತೇನ । ತಥಾ ಅಪ್ರಮಾದಾತ್ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನಾ ಅವಸ್ಥಾನಾತ್ ಬ್ರಹ್ಮಭೂತಾಃ ಸುರಾಶ್ಚ ಇನ್ದ್ರಾದಯಃ । ತಥಾ ಚ ಶ್ರುತಿಃ- 'ತಂ ವಾ ಏತಂ ದೇವಾ ಆತ್ಮಾನಮುಪಾಸತೇ ತಸ್ಮಾತ್ತೇಷಾಂ ಸರ್ವೇ ಲೋಕಾ ಆಪ್ತಾಃ[4] ಸರ್ವೇ ಚ ಕಾಮಾಃ' (ಛಾಂ. ೮-೧೨-೬) ಇತ್ಯಾದಿನಾ । ಅಥವಾ ಅಸುಷು ಪ್ರಾಣೇಷು ಇನ್ದ್ರಿಯೇಷ್ವೇವ ರಮನ್ತೇ ಇತ್ಯಸುರಾಃ, ಅನಾತ್ಮವಿದಃ ವೈಷಯಿಕಾಃ ಪ್ರಾಣಿನಃ ಅಸುರಾಃ । ತೇ ಸ್ವಾಭಾವಿಕಬ್ರಹ್ಮಭಾವಮತಿಕ್ರಮ್ಯ ಅನಾತ್ಮನಿ ದೇಹಾದೌ ಆತ್ಮಭಾವಮಾಪನ್ನಾಃ ಪರಾಭವನ್ ತಿರ್ಯಗಾದಿಯೋನಿಮಾಪನ್ನಾಃ । ತಥಾ ಚ

---

1. 'ಭವನ್ತಿ' 2. 'ನೈವ' 3. 'ನ ಹ್ಯಸ್ಯ' ಎಂದು ಮು॥ಭಾ॥ ಪಾಠಗಳು.
4. 'ಆತ್ತಾಃ' ಎಂದು ಉಪನಿಷತ್ತಿನ ಪಾಠ.

ಬಹ್ವೃಚಬ್ರಾಹ್ಮಣೋಪನಿಷತ್– 'ತಸ್ಮಾನ್ನ ಪ್ರಮಾದ್ಯೇತ್ ತನ್ನಾತೀಯಾತ್ ನ ಹ್ಯತ್ಯಾಯನ್ ಪೂರ್ವೇ ಯೇ ಅತ್ಯಾಯನ್ ತೇ ಪರಾಬಭೂವುಃ' ಇತ್ಯಾರಭ್ಯ 'ಯಾ ವೈ ತಾ ಇಮಾಃ ಪ್ರಜಾಸ್ತಿಸ್ರೋಽತ್ಯಾಯಮಾಯನ್' ತಾನೀಮಾನಿ ವಯಾಂಸಿ ವಙ್ಗಾ ವಗಧಾಶ್ಚೇರಪಾದಾಃ' (ಐ. ಆ. --೧-೧) ಇತಿ। ತಥಾ ಸ್ವಸ್ಮಿನ್ ಆತ್ಮನ್ಯೇವ ರಮನ್ತಿ ಇತ್ಯಾತ್ಮವಿದಃ ಸುರಾಃ। ತಥಾ ಚೋಕ್ತಮ್– 'ಆತ್ಮನ್ಯೇವ ರತಿರ್ಯೇಷಾಂ ಸ್ವಸ್ಮಿನ್ ಬ್ರಹ್ಮಣಿ ಚಾಚಲೇ। ತೇ ಸುರಾ ಇತಿ ವಿಖ್ಯಾತಾಃ ಸೂರಯಶ್ಚ ಸುರಾ ಮತಾಃ' (?) ಇತಿ। ತೇ ಅಪ್ರಮಾದಾತ್ ಸ್ವಾಭಾವಿಕಬ್ರಹ್ಮಾತ್ಮನಾ ಅವಸ್ಥಾನಾದ್ ಬ್ರಹ್ಮಭೂತಾಃ ನಿವೃತ್ತಮಿಥ್ಯಾಜ್ಞಾನತತ್ಕಾರ್ಯಾಃ ಬ್ರಹ್ಮೈವ ಸಂವೃತ್ತಾ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಮಾದದಿಂದ- ಎಂದರೆ ಸ್ವಾಭಾವಿಕವಾದ ಬ್ರಹ್ಮಭಾವದಿಂದ ಜಾರಿದ್ದರಿಂದ– ದೇಹವೇ ಮುಂತಾದ ಅನಾತ್ಮಗಳಲ್ಲಿ ತಾನೆಂದು (ಅಭಿಮಾನವನ್ನು) ಮಾಡಿಕೊಂಡದ್ದರಿಂದ–[1] ಅಸುರರು– ಎಂದರೆ ವಿರೋಚನನೇ[2] ಮುಂತಾದವರು ಪರಾಭವನ್– ಪರಾಭವವನ್ನು ಹೊಂದಿದರು. 'ಆತ್ಮನನ್ನು ಪಡೆದುಕೊಳ್ಳದೆ' ಎಂಬಲ್ಲಿಂದಾರಂಭಿಸಿ 'ದೇವತೆಗಳಾಗಲಿ, ಅಸುರರೇ ಆಗಲಿ ಅವರು ಪರಾಭೂತರಾಗುವರು' (ಛಾಂ. ೮-೯-೪) ಎಂಬವರೆಗಿನ (ಗ್ರಂಥದಿಂದ) ಶ್ರುತಿಯೂ (ಹೇಳುತ್ತಿದೆ). ಹಾಗೆಯೇ ಅಪ್ರಮಾದದಿಂದ- ಎಂದರೆ ಸ್ವಾಭಾವಿಕವಾದ ಚಿತ್ಸದಾನಂದಾದ್ವಿತೀಯಬ್ರಹ್ಮಾತ್ಮಭಾವದಿಂದ[3] ನಿಂತದ್ದರಿಂದ ಇಂದ್ರನೇ ಮೊದಲಾದ ದೇವತೆಗಳು ಬ್ರಹ್ಮಭೂತರಾದರು.[4] 'ಆ ಇವನನ್ನು ದೇವತೆಗಳು ಆತ್ಮನನ್ನಾಗಿ ಉಪಾಸನೆಮಾಡುತ್ತಾರೆ ; ಆದ್ದರಿಂದ ಅವರಿಗೆ ಎಲ್ಲಾ ಲೋಕಗಳೂ ಎಲ್ಲಾ ಕಾಮಗಳೂ ಪ್ರಾಪ್ತವಾಗಿರುತ್ತವೆ' ಎಂದು ಶ್ರುತಿಯು ಹೇಳುತ್ತಿದೆ. ಅಥವಾ ಅಸು ಎಂದರೆ ಪ್ರಾಣಗಳಲ್ಲಿ– ಇಂದ್ರಿಯಗಳಲ್ಲಿಯೇ ರಮಣ ಮಾಡುತ್ತಾರೆ. ಆದ್ದರಿಂದ ಅಸುರರು ; ಅನಾತ್ಮಜ್ಞರಾದ, ವಿಷಯಾಸಕ್ತರಾದ ಪ್ರಾಣಿಗಳೇ ಅಸುರರು. ಅವರು ಸ್ವಾಭಾವಿಕವಾದ ಬ್ರಹ್ಮಭಾವವನ್ನು ಮೀರಿ ದೇಹವೇ ಮುಂತಾದ ಅನಾತ್ಮದಲ್ಲಿ ಆತ್ಮಭಾವವನ್ನು ಹೊಂದಿದವರಾಗಿ ಪರಾಭವಗೊಂಡರು– ಎಂದರೆ ಮೂಕಪ್ರಾಣಿಗಳೇ ಮುಂತಾದ ಜನ್ಮಗಳನ್ನು ಪಡೆದರು.

---

1. 'ಅತಸ್ಮಿಂಸ್ತದ್ಬುದ್ಧಿಃ' ಎಂಬ ಅಧ್ಯಾಸಭಾಷ್ಯವಾಕ್ಯದ ಅಭಿಪ್ರಾಯವು ಇಲ್ಲಿದೆ.
2. ಅಸುರರಲ್ಲಿ ವಿರೋಚನನೂ ದೇವತೆಗಳಲ್ಲಿ ಇಂದ್ರನೂ ಮುಖ್ಯರು.
3. ಈ ಪದವೃಂದವು (Phrase) ಈ ಗ್ರಂಥಕಾರರಿಗೆ ತುಂಬ ಮೆಚ್ಚು.
4. ಬ್ರಹ್ಮಸ್ವರೂಪರೇ ಆದರು.

'ಆದ್ದರಿಂದ ಪ್ರಮಾದಮಾಡಬಾರದು ; ಮೀರಿಹೋಗಬಾರದು ;[1] ಹಿಂದಿನವರು ಮೀರಿಹೋಗಲಿಲ್ಲ ; ಯಾರು ಮೀರಿಹೋದರೋ ಅವರು ನಷ್ಟರಾದರು' ಎಂದಾರಂಭಿಸಿ 'ಯಾವ ಆ ಮೂವರು ಪ್ರಜೆಗಳುಂಟೋ ಆ ಇವರು ಎಂದರೆ ಹಕ್ಕಿಗಳು, ವಂಗವಗಧಗಳು, ಚೇರಪಾದಗಳು– ಇವು (ಪರಾಭೂತವಾದವು)' – ಎಂದು ಬಹ್ವೃಚಬ್ರಾಹ್ಮಣೋಪನಿಷತ್ತಿನಲ್ಲಿ (ಹೇಳಿದೆ). ಹಾಗೆಯೇ ತನ್ನ ಆತ್ಮನಲ್ಲಿಯೇ ರಮಣಮಾಡುತ್ತಾರಾದ್ದರಿಂದ ಆತ್ಮವಿದರು– ಸುರರು. ಯಾರಿಗೆ ಅಚಲವಾದ ಸ್ವರೂಪಭೂತವಾದ ಬ್ರಹ್ಮದಲ್ಲಿ ಆತ್ಮನಲ್ಲಿಯೇ ರತಿ(ಪ್ರೇಮ)ವಿರುವದೋ ಅವರು ಸುರರು ಎಂದು ಪ್ರಸಿದ್ಧರಾಗಿರುವರು. ಸೂರಿಗಳೂ[2] ಸುರರೆನಿಸಿಕೊಂಡಿದ್ದಾರೆ. ಅವರು ಅಪ್ರಮಾದದ (ಕಾರಣದಿಂದ) ಎಂದರೆ ಸ್ವಾಭಾವಿಕವಾದ ಬ್ರಹ್ಮಾತ್ಮ(ಭಾವ)ದಿಂದ ನಿಂತದ್ದರಿಂದ ಬ್ರಹ್ಮಭೂತರಾಗಿ ಮಿಥ್ಯಾಜ್ಞಾನ ಮತ್ತು ಅದರ ಕಾರ್ಯ(ವಾದ ಸಂಸಾರ)ದಿಂದ ದೂರರಾಗಿ ಬ್ರಹ್ಮವೇ ಆದರು– ಎಂದರ್ಥ.

(ಭಾಷ್ಯ)

ನನು ಅನ್ಯ ಏವ ಸರ್ವಜನ್ತೂನಾಮ್ ಉಪಸಂಹಾರಕಃ ಮೃತ್ಯುಃ ಪ್ರಸಿದ್ಧಃ, ಕಥಮ್ ಉಚ್ಯತೇ 'ಪ್ರಮಾದಂ ವೈ ಮೃತ್ಯುಮಹಮ್ ಬ್ರವೀಮಿ' (೪) ಇತಿ । ತತ್ರಾಹ– ನ ವೈ ಮೃತ್ಯುರಿತಿ । ನ ವೈ ಮೃತ್ಯುಃ ವ್ಯಾಘ್ರ ಇವ ಅತ್ತಿ ಭಕ್ಷಯತಿ ಪ್ರಾಣಿನಃ । ಯದಿ ಭಕ್ಷಯೇತ್ ವ್ಯಾಘ್ರಸ್ಯೇವ ಅಸ್ಯ ರೂಪಮ್ ಉಪಲಭ್ಯೇತ, ನ ಚ ಉಪಲಭ್ಯತೇ । ತಸ್ಮಾತ್ ನಾಸ್ತ್ಯೇವ ಮೃತ್ಯುಃ ॥

(ಭಾಷ್ಯಾರ್ಥ)

ಎಲ್ಲಾ ಪ್ರಾಣಿಗಳನ್ನೂ ಸಂಹಾರಮಾಡುವ ಪ್ರಸಿದ್ಧನಾದ ಮೃತ್ಯುವು ಬೇರೆಯಾಗಿದ್ದಾನಲ್ಲ ? 'ಪ್ರಮಾದವೇ ಮೃತ್ಯುವೆಂದು ನಾನು ಹೇಳುವೆನು' ಎಂದು ಹೇಳಿದ್ದು ಹೇಗೆ ಸರಿ ? ಎಂದರೆ ಹೇಳುತ್ತಾರೆ : 'ನ ವೈ ಮೃತ್ಯುಃ' (ಇದರ ಅಭಿಪ್ರಾಯವೇನೆಂದರೆ) ಮೃತ್ಯುವು ಪ್ರಾಣಿಗಳನ್ನು ಹುಲಿಯಂತೆ ತಿನ್ನುವದಿಲ್ಲ. ಒಂದುವೇಳೆ ತಿನ್ನುವದಾಗಿದ್ದರೆ ಹುಲಿಯಂತೆ ಅದರ ಆಕಾರವು ಕಂಡುಬರಬೇಕಾಗಿತ್ತು.[3] ಹಾಗೆ ಕಂಡುಬರುವದಿಲ್ಲ. ಆದ್ದರಿಂದ ಮೃತ್ಯುವು (ಪ್ರಮಾದಕ್ಕಿಂತ ಬೇರೆಯಾಗಿ) ಇಲ್ಲವೇಇಲ್ಲ.

---

1. ಆತ್ಮನನ್ನು ಮೀರುವದೆಂದರೆ ತನ್ನ ಪ್ರತ್ಯಕ್‌ಸ್ವರೂಪವನ್ನು ಲೆಕ್ಕಿಸದೆ ಬಹಿರ್ದೃಷ್ಟಿಯುಳ್ಳವನಾಗಿ ಅನಾತ್ಮಗಳಲ್ಲಿಯೇ ರತರಾಗಿರುವದು, ಆತ್ಮನನ್ನು ಮರೆತುಬಿಡುವದು– ಎಂದಭಿಪ್ರಾಯ. 2. ಪರಮಾತ್ಮಜ್ಞಾನಸಂಪನ್ನರು.

3. ಪ್ರತಿಯೊಂದು ಪ್ರಾಣಿಯೂ ಮೃತ್ಯುವಶವಾಗುತ್ತದೆಯಾದರೂ ಮೃತ್ಯುವನ್ನು ಸಾಕಾರವಾಗಿ ಯಾರೂ ನೋಡಿಲ್ಲ– ಎಂದಭಿಪ್ರಾಯ.

## ಯಮನೇ ಮೃತ್ಯುವೆಂಬ ಕೆಲವರ ಮತ

ಯಮಂ ತ್ವೇಕೇ ಮೃತ್ಯುಮತೋಽನ್ಯಮಾಹುಃ ।
ಆತ್ಮಾವಾಸಮ[1]ಮೃತಂ ಬ್ರಹ್ಮಚರ್ಯಮ್ ॥
ಪಿತೃಲೋಕೇ ರಾಜ್ಯಮನುಶಾಸ್ತಿ ದೇವಃ ।
ಶಿವಃ ಶಿವಾನಾಮಶಿವೋಽಶಿವಾನಾಮ್ ॥ ೬ ॥

೬ ಕೆಲವರು ಅಮೃತನಾದ ಬ್ರಹ್ಮಚರ್ಯ(ನಿಷ್ಠ)ನಾದ ಮತ್ತು ಬುದ್ಧಿಯಲ್ಲಿ ವಾಸಮಾಡುವ ಯಮನನ್ನು (ಪ್ರಮಾದಕ್ಕಿಂತ) ಬೇರೆಯ ಮೃತ್ಯುವನ್ನಾಗಿ ಹೇಳುವರು. ಹಾಗೂ ಈ ದೇವನು ಪಿತೃಲೋಕದಲ್ಲಿ ರಾಜ್ಯವನ್ನಾಳುತ್ತಿರುವನು. ಪುಣ್ಯಕರ್ಮಿಗಳಿಗೆ ಶಿವನೂ ಪಾಪಿಗಳಿಗೆ ಅಶಿವನೂ ಆಗಿರುವನು.

(ಭಾಷ್ಯ)

ನನು ಉಪಲಭ್ಯತೇ ಸಾವಿತ್ರ್ಯುಪಾಖ್ಯಾನೇ- 'ಅಥ ಸತ್ಯವತಃ ಕಾಯಾತ್ ಪಾಶಬದ್ಧಂ ವಶಂ ಗತಮ್ । ಅಙ್ಗುಷ್ಠಮಾತ್ರಂ ಪುರುಷಂ ನಿಶ್ಚಕರ್ಷ ಯಮೋ ಬಲಾತ್' (ಮಹಾ. ಭಾ. ವನ. ೨೯೭ ೧೭) ಇತಿ । ಕಥಮುಚ್ಯತೇ ನಾಸ್ಯ ರೂಪಮುಪಲಭ್ಯತೇ ಇತಿ ? ತತ್ರಾಹ- ಸತ್ಯಮುಪಲಭ್ಯತೇ । ತಥಾಪಿ ನ ಅಸೌ ಸಾಕ್ಷಾತ್ ಮೃತ್ಯುಃ ॥

(ಭಾಷ್ಯಾರ್ಥ)

ಸಾವಿತ್ರಿಯ ಕಥೆಯಲ್ಲಿ 'ಬಳಿಕ ಸತ್ಯವಾನನ ಶರೀರದಿಂದ ಅಂಗುಷ್ಠಮಾತ್ರನಾದ ಪುರುಷನನ್ನು ಪಾಶದಿಂದ ಬಿಗಿದು ವಶಪಡಿಸಿಕೊಂಡು ಯಮನು ಬಲಾತ್ಕಾರದಿಂದ ಎಳೆದನು' ಎಂದು ಕಂಡುಬರುತ್ತಿದೆಯಲ್ಲ ? ಇವನ ರೂಪವು ಕಂಡುಬರುವದಿಲ್ಲ- ಎಂದು ಹೇಗೆ ಹೇಳುತ್ತೀರಿ ? ಎಂದರೆ ತಿಳಿಸುತ್ತಾರೆ- ಕಂಡುಬರುವದು ನಿಜ; ಆದರೆ ಅವನೇ ನೇರಾದ (ಮುಖ್ಯ)ಮೃತ್ಯುವಲ್ಲ.

## ಅಜ್ಞಾನವೇ ಮೃತ್ಯುವೆಂಬ ವಿಷಯದ ಚರ್ಚೆ

(ಭಾಷ್ಯ)

ಕಸ್ತರ್ಹಿ ? ಯಃ ಪ್ರಮಾದಾಖ್ಯೋ ಮೃತ್ಯುಃ ಅಜ್ಞಾನಂ ಸ ಏವ । ಸಾಕ್ಷಾದ್ ವಿನಾಶಹೇತುತ್ವಾತ್ । ತಥಾ ಅಜ್ಞಾನಸ್ಯ ವಿನಾಶಹೇತುತ್ವಂ ಶ್ರೂಯತೇ- 'ನ ಚೇದಿಹಾವೇದೀನ್ಮಹತೀ ವಿನಷ್ಟಿಃ' (ಕೇ. ೨-೫) ಇತಿ । ಬೃಹದಾರಣ್ಯಕೇ ಪ್ರಮಾದಾಖ್ಯಸ್ಯ ಅಜ್ಞಾನಸ್ಯ ಸಾಕ್ಷಾತ್ ಮೃತ್ಯುತ್ವಂ

1. 'ಆತ್ಮಾವಸನ್ನಮ್' ಎಂದು ವ॥ ಭಾ॥ ಪಾ॥

ದರ್ಶಿತಮ್ 'ಮೃತ್ಯೋರ್ಮಾ ತಮಃ ಜ್ಯೋತಿರಮೃತಮ್' (ಬೃ. ೧-೩-೨೮) ಇತಿ | ಯಸ್ಮಾತ್ ಪ್ರಮಾದ ಏವ ಸಾಕ್ಷಾತ್ ಸರ್ವಾನರ್ಥಬೀಜಮ್, ತಸ್ಮಾತ್ ನ ಪ್ರಮಾದ್ಯೇತ ಚಿತ್ಸದಾನನ್ದಾದ್ವಿತೀಯಬ್ರಹ್ಮಭಾವೇನ ಅವತಿಷ್ಠೇತ-ಇತ್ಯರ್ಥಃ | ತಥಾ ಚ ಅಜ್ಞಾನಸ್ಯ ಬನ್ಧಹೇತುತ್ವಂ ವಿಜ್ಞಾನಸ್ಯ ಮೋಕ್ಷಹೇತುತ್ವಮ್ ಉಕ್ತಂ ಭಗವತಾ- 'ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯನ್ತಿ ಜನ್ತವಃ' (ಗೀ. ೫-೧೫) ಇತಿ |

(ಭಾಷ್ಯಾರ್ಥ)

ಹಾಗಾದರೆ (ಮೃತ್ಯುವು) ಯಾರು ? ಪ್ರಮಾದವೆಂಬ ಯಾವ ಅಜ್ಞಾನವುಂಟೋ ಅದೇ ; ಏಕೆಂದರೆ ನೇರಾಗಿ (ಅದು) ವಿನಾಶಕಾರಣವಾಗಿದೆ. ಅಜ್ಞಾನವು ವಿನಾಶಕಾರಣವೆಂದು (ಶ್ರುತಿಯು) 'ಇಲ್ಲಿ ಅರಿತುಕೊಳ್ಳದಿದ್ದರೆ ದೊಡ್ಡ ವಿನಾಶವು' ಎಂದು (ಹೇಳುತ್ತಿದೆ) ಬೃಹದಾರಣ್ಯಕದಲ್ಲಿ ಪ್ರಮಾದವೆಂಬ ಅಜ್ಞಾನವು ನೇರಾಗಿ ಮೃತ್ಯುವೆಂಬುದನ್ನು 'ತಮಸ್ಸೇ ಮೃತ್ಯುವು; ಜ್ಯೋತಿಯೇ ಅಮೃತವು' ಎಂದು ತಿಳಿಸಿರುತ್ತದೆ.[1] ಪ್ರಮಾದವೇ ಎಲ್ಲಾ ಅನರ್ಥಗಳಿಗೂ ಕಾರಣವಾಗಿರುವದರಿಂದ ಪ್ರಮಾದ(ವಶ)ನಾಗಬಾರದು. ಚಿತ್ಸದಾನಂದಾದ್ವಿತೀಯಬ್ರಹ್ಮಭಾವದಿಂದಲೇ ಇದ್ದುಕೊಂಡಿರಬೇಕು. ಹಾಗೆಯೇ ಅಜ್ಞಾನವು ಬಂಧಕಾರಣವೆಂದೂ ವಿಜ್ಞಾನವು ಮೋಕ್ಷಕಾರಣವೆಂದೂ ಭಗವಂತನಿಂದ 'ಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿದೆ ; ಅದರಿಂದ ಪ್ರಾಣಿಗಳು ಮೋಹಿತರಾಗಿರುವರು' ಎಂದು ಹೇಳಲ್ಪಟ್ಟಿದೆ.

## ಜ್ಞಾನವೇ ಮೋಕ್ಷಕ್ಕೆ ಸಾಧನ

(ಭಾಷ್ಯ)

ಯಸ್ಮಾತ್ ಪ್ರಮಾದ ಏವ ಮೃತ್ಯುಃ ಅಪ್ರಮಾದಃ ಅಮೃತತ್ವಮ್, ಅತ ಏವ ನ ಕರ್ಮಸಾಧ್ಯಂ ನಾಪಿ ಕರ್ಮಪ್ರಾಪ್ಯಮ್ ; ನಿತ್ಯಸಿದ್ಧತ್ವಾತ್ ; ನಿತ್ಯಪ್ರಾಪ್ತತ್ವಾಚ್ಚ | ತಥಾ ಚ ಶ್ರುತಿಃ- 'ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ನ ವರ್ಧತೇ ಕರ್ಮಣಾ ನೋ ಕನೀಯಾನ್ | ತಸ್ಯೈವ ಸ್ಯಾತ್ ಪದವಿತ್ ತಂ ವಿದಿತ್ವಾ ನ ಲಿಪ್ಯತೇ ಕರ್ಮಣಾ ಪಾಪಕೇನ' (ಬೃ. ೪-೪-೨೩) ಇತಿ | ತಥಾ 'ತಮೇವ ವಿದಿತ್ವಾ ಅತಿಮೃತ್ಯುಮೇತಿ ನಾನ್ಯಃ ಪನ್ಥಾಃ ವಿದ್ಯತೇಽಯನಾಯ' (ಶ್ವೇ. ೬-೧೫) 'ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ

1. ಉಪನಿಷತ್ತಿನಲ್ಲಿ ಅಜ್ಞಾನವನ್ನು ಪ್ರಮಾದವೆಂಬ ಶಬ್ದದಿಂದಲೇ ಹೇಳಿಲ್ಲ. ತಮಸ್ಸೆಂದು ಹೇಳಿದೆ. ಭ. ಗೀ. (೧೪-೧೭)ಯಲ್ಲಿ ಪ್ರಮಾದಮೋಹಗಳು ತಮೋಗುಣದ ಕಾರ್ಯಗಳೆಂದು ವರ್ಣಿಸಿದೆ. ಅಜ್ಞಾನದಿಂದಲೇ ಪ್ರಮಾದ(ಎಚ್ಚರತಪ್ಪುವದು)ಉಂಟಾಗುವದರಿಂದ ಈ ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸಿದೆಯೆಂದು ತಿಳಿಯಬೇಕು.

ಬ್ರಾಹ್ಮಣಃ' (ಬೃ. ೪-೪-೨೧) ಇತಿ ಜ್ಞಾನಸ್ಯೈವ ಮೋಕ್ಷಸಾಧನತ್ವಂ ದರ್ಶಿತಮ್ । ತಥಾ- 'ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ ನಾನ್ಯೈರ್ದೇವೈಃ ತಪಸಾ ಕರ್ಮಣಾ ವಾ । ಜ್ಞಾನಪ್ರಸಾದೇನ ವಿಶುದ್ಧಸತ್ತ್ವಃ ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ' (ಮುಂ. ೩-೧-೮) ಇತಿ । ವಕ್ಷ್ಯತಿ ಚ ಭಗವಾನ್ ಜ್ಞಾನಸ್ಯೈವ ಮೋಕ್ಷಸಾಧನತ್ವಮ್- 'ಅನ್ತವನ್ತಃ ಕ್ಷತ್ರಿಯ ತೇ ಜಯನ್ತಿ ಲೋಕಾನ್ ಜನಾಃ ಕರ್ಮಣಾ ನಿರ್ಮಿತೇನ' (೩-೧೨) ಇತಿ । 'ಏವಂ ಮೃತ್ಯುಂ ಜಾಯಮಾನಂ ವಿದಿತ್ವಾ ಜ್ಞಾನೇನ ತಿಷ್ಠನ್ ನ ಬಿಭೇತಿ ಮೃತ್ಯೋಃ' (೧-೧೬) ಇತಿ ಚ । ತಥಾ ಚ ಮೋಕ್ಷಧರ್ಮೇ- 'ಕರ್ಮಣಾ ಬಧ್ಯತೇ ಜನ್ತುಃ ವಿದ್ಯಯಾ ಚ ವಿಮುಚ್ಯತೇ । ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ' (ಮೋ. ಧ. ೨೪೧-೭) ಇತಿ । 'ಜ್ಞಾನಂ ವಿಶಿಷ್ಟಂ ನ ತಥಾ ಹಿ ಯಜ್ಞಾ ಜ್ಞಾನೇನ ದುರ್ಗಂ ತರತೇ ನ ಯಜ್ಞೈಃ' (?) ಇತಿ ಚ ॥

(ಭಾಷ್ಯಾರ್ಥ)

ಪ್ರಮಾದವೇ ಮೃತ್ಯು ; ಅಪ್ರಮಾದವೇ ಅಮೃತತ್ವವೆಂದದ್ದರಿಂದ (ಮೋಕ್ಷವು) ಕರ್ಮದಿಂದ ಸಾಧ್ಯವಲ್ಲ ; ಕರ್ಮದಿಂದ ಪಡೆಯತಕ್ಕದ್ದೂ ಅಲ್ಲ ; (ಏಕೆಂದರೆ) ನಿತ್ಯಸಿದ್ಧವಾಗಿದೆ ; ನಿತ್ಯಪ್ರಾಪ್ತವೂ ಆಗಿದೆ. ಈ (ವಿಷಯದಲ್ಲಿ ಶ್ರುತಿಯು 'ಇದು ಬ್ರಾಹ್ಮಣನ ನಿತ್ಯವಾದ ಮಹಿಮೆಯು ; ಕರ್ಮದಿಂದ ವೃದ್ಧಿಯಾಗುವದಿಲ್ಲ ; ಕಿರಿದೂ (ಆಗು)ವದಿಲ್ಲ ; ಅದರದ್ದೇ ಪದವನ್ನು ಬಲ್ಲವನಾಗಬೇಕು. ಅದನ್ನು ಅರಿತುಕೊಂಡರೆ ಪಾಪಕರ್ಮದಿಂದ ಲಿಪ್ತನಾಗುವದಿಲ್ಲ' ಎಂದು (ಹೇಳಿದೆ). ಹಾಗೆಯೇ 'ಆ (ಪರಮಾತ್ಮ)ನನ್ನು ಅರಿತುಕೊಂಡರೇ ಮೃತ್ಯುವನ್ನು ದಾಟುವನು ; (ಮೋಕ್ಷ)ಪದವಿಗೆ ಬೇರೊಂದು ದಾರಿಯಿರುವದಿಲ್ಲ', 'ಧೀರನಾದ ಬ್ರಾಹ್ಮಣನು ಆ (ಆತ್ಮನನ್ನೇ) ಅರಿತುಕೊಂಡು ಪ್ರಜ್ಞೆಯನ್ನು ಮಾಡಿಕೊಳ್ಳಬೇಕು' ಎಂದು ಜ್ಞಾನಕ್ಕೇ ಮೋಕ್ಷಸಾಧನತ್ವವನ್ನು ಹೇಳಿದೆ. ಹಾಗೆಯೇ 'ಕಣ್ಣಿನಿಂದ ಗ್ರಹಿಸಲಾಗುವದಿಲ್ಲ ; ಮಾತಿನಿಂದಲೂ ಆಗುವದಿಲ್ಲ ; ಉಳಿದ ದೇವತೆಗಳಿಂದಲೂ[1] ಆಗುವದಿಲ್ಲ ; ತಪಸ್ಸಿನಿಂದಾಗಲಿ ಕರ್ಮದಿಂದಾಗಲಿ (ಆಗುವದಿಲ್ಲ). ಆದರೆ ಜ್ಞಾನಪ್ರಸಾದದಿಂದ ಚಿತ್ತಶುದ್ಧಿಯನ್ನು ಮಾಡಿಕೊಂಡು ಧ್ಯಾನಮಾಡುವಾತನು ಅದರಿಂದ ನಿಷ್ಕಲನಾದ ಆತನನ್ನು ಕಂಡುಕೊಳ್ಳುತ್ತಾನೆ' ಎಂದು (ಹೇಳಿದೆ). ಪೂಜ್ಯನಾದ (ಸನತ್ಸುಜಾತನೂ) ಮುಂದೆ ಜ್ಞಾನವೇ ಮೋಕ್ಷಸಾಧನವೆಂದು ಹೇಳುವನು. 'ಎಲೈ ಕ್ಷತ್ರಿಯನೆ, ಕರ್ಮದಿಂದ ಸಿದ್ಧವಾದ ಲೋಕಗಳನ್ನು ಜನರು ಗೆಲ್ಲುವರು ; ಅವು ಕೊನೆಯುಳ್ಳವು' (ಎನ್ನುವರು). ಮತ್ತು 'ಮೃತ್ಯುವು ಹೀಗೆ ಹುಟ್ಟುವವನೆಂಬುದನ್ನು

1. ಇಂದ್ರಿಯಗಳಿಂದಲೂ.

ಅರಿತ(ವನು) ಜ್ಞಾನದಿಂದ (ಆತ್ಮನಲ್ಲಿ) ನಿಂತವನಾಗಿ ಮೃತ್ಯುವಿಗೆ ಹೆದರುವದಿಲ್ಲ' (ಎಂದೂ ಹೇಳಿದ್ದಾನೆ.) ಹಾಗೆಯೇ ಮೋಕ್ಷಧರ್ಮದಲ್ಲಿಯೂ 'ಜಂತುವು ಕರ್ಮದಿಂದ ಬದ್ಧನಾಗುವನು ; ವಿದ್ಯೆಯಿಂದ ಬಿಡುಗಡೆಯನ್ನು ಹೊಂದುವನು ; ಆದ್ದರಿಂದ ಪಾರದರ್ಶಿಗಳಾದ[1] ಯತಿಗಳು ಕರ್ಮವನ್ನು ಮಾಡುವದಿಲ್ಲ' ಎಂದೂ 'ಜ್ಞಾನವು ಹೆಚ್ಚಿನದು ; ಯಜ್ಞಗಳು ಹಾಗಲ್ಲ ; ಜ್ಞಾನದಿಂದ (ಅಜ್ಞಾನವೆಂಬ) ದುರ್ಗವನ್ನು ದಾಟುವನು ; ಯಜ್ಞಗಳಿಂದ ಅಲ್ಲ' ಎಂದೂ (ಹೇಳಿದೆ.)

(ಭಾಷ್ಯ)

ತಥಾ ಚ ಜ್ಞಾನಸ್ಯೈವ ಮೋಕ್ಷಸಾಧನತ್ವಂ ಮನ್ಯಮಾನಃ ಸರ್ವಕರ್ಮಪರಿತ್ಯಾಗಮಾಹ ಭಗವಾನ್ ವೇದಾಚಾರ್ಯೋ ಮನುಃ– 'ಯಥೋಕ್ತಾನ್ಯಪಿ ಕರ್ಮಾಣಿ ಪರಿಹಾಪ್ಯ[2] ದ್ವಿಜೋತ್ತಮಃ । ಆತ್ಮಜ್ಞಾನೇ ಶಮೇ ಚ ಸ್ಯಾದ್ ವೇದಾಭ್ಯಾಸೇ ಚ ಯತ್ನವಾನ್' (ಮನು. ೧೨-೯೨) ಇತಿ । ತಥಾಹ ಭಗವಾನ್ ಪರಮೇಶ್ವರಃ—

ಜ್ಞಾನಂ ತು ಕೇವಲಂ ಸಮ್ಯಗಪವರ್ಗಫಲಪ್ರದಮ್ ।
ತಸ್ಮಾದ್ ಭವದ್ಭಿರ್ವಿಮಲಂ ಜ್ಞಾನಂ ಕೈವಲ್ಯಸಾಧನಮ್ ॥
ವಿಜ್ಞಾತವ್ಯಂ ಪ್ರಯತ್ನೇನ ಶ್ರೋತವ್ಯಂ ದೃಶ್ಯಮೇವ ಚ ।
ಏಕಃ ಸರ್ವತ್ರಗೋ ಹ್ಯಾತ್ಮಾ ಕೇವಲಶ್ಚಿತಿಮಾತ್ರಕಃ ॥
ಆನನ್ದೋ ನಿರ್ಮಲೋ ನಿತ್ಯಂ ಸ್ಯಾದೇತತ್ ಸಾಙ್ಖ್ಯದರ್ಶನಮ್ ।
ಏತದೇವ ಪರಂ ಜ್ಞಾನಮೇಷ ಮೋಕ್ಷೋಽನುಗೀಯತೇ ॥
ಏತತ್ ಕೈವಲ್ಯಮಮಲಂ ಬ್ರಹ್ಮಭಾವಶ್ಚ ವರ್ಣಿತಃ ।
ಆಶ್ರಿತ್ಯೈತತ್ ಪರಂ ತತ್ತ್ವಂ ತನ್ನಿಷ್ಠಾಸ್ತತ್ಪರಾಯಣಾಃ ॥
ಗಚ್ಛನ್ತಿ ಮಾಂ ಮಹಾತ್ಮಾನೋ ಯತಯೋ ವೀತಮತ್ಸರಾಃ ॥[3]

ಇತಿ ॥

(ಭಾಷ್ಯಾರ್ಥ)

ಹಾಗೆಯೇ ಜ್ಞಾನಕ್ಕೇ ಮೋಕ್ಷಸಾಧನತ್ವವನ್ನು ಅಂಗೀಕರಿಸುವ ವೇದಾಚಾರ್ಯನಾದ ಪೂಜ್ಯನಾದ ಮನುವು ಸರ್ವಕರ್ಮಪರಿತ್ಯಾಗವನ್ನು (ಕುರಿತು) 'ಬ್ರಾಹ್ಮಣೋತ್ತಮನು (ತನಗೆ) ವಿಹಿತವಾದ ಕರ್ಮಗಳನ್ನೂ ಕೂಡ ಬಿಟ್ಟು ವೇದಾಭ್ಯಾಸ, ಶಮ, ಆತ್ಮಜ್ಞಾನಗಳಲ್ಲಿ ಪ್ರಯತ್ನಮಾಡುವವನಾಗಬೇಕು'

1. ಮೋಕ್ಷವೆಂಬ ದಡವನ್ನು ಹೊಂದಿದ.

2 'ಪರಿಹಾಯ' ಎಂದು ಅಚ್ಚಿನಪಾಠ.

3. ಈ ಶ್ಲೋಕಗಳ ಮೂಲವು ಯಾವದೆಂಬುದು ತಿಳಿಯಲಿಲ್ಲ.

ಎಂದು ಹೇಳುತ್ತಾನೆ. ಭಗವಾನ್ ಪರಮೇಶ್ವರನೂ ಸಹ 'ಕೇವಲ ಸಮ್ಯಗ್ ಜ್ಞಾನವೊಂದೇ ಮೋಕ್ಷಫಲವನ್ನು ಕೊಡುವದಾಗಿದೆ. ಆದ್ದರಿಂದ ಕೈವಲ್ಯ ಸಾಧನನಾವ ಜ್ಞಾನವು ನಿಮ್ಮಿಂದ ಪ್ರಯತ್ನಪೂರ್ವಕವಾಗಿ ಅರಿಯಲ್ಪಡಬೇಕು; ಕೇಳಲ್ಪಡಬೇಕು; ಕಂಡುಕೊಳ್ಳಲ್ಪಡಬೇಕು; ಆತ್ಮನು ಏಕನು; ಸರ್ವವ್ಯಾಪಿಯು; ಕೇವಲ ಚಿನ್ಮಾತ್ರನು ; ಆನಂದ(ಸ್ವರೂಪ)ನು ; ನಿರ್ಮಲನು ; ನಿತ್ಯನು ; ಇದೇ ಸಾಂಖ್ಯದರ್ಶನವೆಂದಾಗಲಿ :[1] ಇದೇ ಪರಮವಾದ ಜ್ಞಾನವು ; ಇದೇ ಮೋಕ್ಷ ವೆಂದು ಹೇಳಲ್ಪಡುತ್ತದೆ. ಪರಿಶುದ್ಧವಾದ ಈ ಕೈವಲ್ಯವೂ ಬ್ರಹ್ಮಭಾವವೂ ವರ್ಣಿಸಲ್ಪಟ್ಟಿತು. ಈ ಪರತತ್ತ್ವವನ್ನೇ ಆಶ್ರಯಿಸಿ ನಿಂತವರೂ ಇದನ್ನೇ ಪರಮಗತಿಯೆಂದು ನಂಬಿದವರೂ ಆದ ಮಹಾತ್ಮರಾದ, ಮಾತ್ಸರ್ಯರಹಿತ ರಾದ ಯತಿಗಳು ನನ್ನನ್ನು ಪಡೆಯುವರು' (?) ಎಂದು ಹೇಳಿದ್ದಾನೆ.

## ಜ್ಞಾನಿಗೆ ಕರ್ಮಾನುಷ್ಠಾನವಿಲ್ಲ

(ಭಾಷ್ಯ)

ನನು ಏವಂ ಚೇತ್ ತರ್ಹಿ ಕರ್ಮಾಣಿ ನಾನುಷ್ಠೇಯಾನಿ ? ನ ನಾನುಷ್ಠೇಯಾನಿ ; ಕಿಂ ತು ಜ್ಞಾನಿನಾ ಅನನುಷ್ಠೇಯಾನ್ಯೇವ | ತಥಾ ಚ ಆಹ ಭಗವಾನ್ ವಾಸುದೇವಃ– 'ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ | ಆತ್ಮನ್ಯೇವ ಚ ಸನ್ತುಷ್ಟಃ ತಸ್ಯ ಕಾರ್ಯಂ ನ ವಿದ್ಯತೇ' (ಗೀ. ೩–೧೭) ಇತಿ | ತಥಾ ಚ ಬ್ರಹ್ಮಾಣ್ಡಪುರಾಣೇ ಕಾವಷೇಯಾಃ– 'ಕಿಮದ್ಯ ನಶ್ಚಾಧ್ಯಯನೇನ ಕಾರ್ಯಂ ಕಿಮರ್ಥವನ್ತಶ್ಚ ಮಖೈರ್ಯಜಾಮಃ | ಪ್ರಾಣಂ ಹಿ ವಾಚ್ಯನಲೇ ಜೋಹವೀಮಃ ಪ್ರಾಣಾನಲೇ ಜುಹವೀಮಾತಿ ವಾಚಮ್' (?) ಇತಿ | ತಥಾ ಚ ಬಹ್ವೃಚಬ್ರಾಹ್ಮಣೋಪನಿಷತ್– 'ಕಿಮರ್ಥಂ ವಯಮಧ್ಯೇಷ್ಯಾಮಹೇ' ಇತಿ | ತಥಾ ಚ ಬೃಹದಾರಣ್ಯಕೇ ವಿದುಷಃ ಕರ್ಮಸಂನ್ಯಾಸಂ ದರ್ಶಯತಿ 'ಏತದ್ಧ ಸ್ಮ ವೈ ತತ್ಪೂರ್ವೇ ವಿದ್ವಾಂಸಃ ಪ್ರಜಾಂ ನ ಕಾಮಯನ್ತೇ ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಽಯಂ ಲೋಕಃ ಇತಿ ತೇ ಹ ಸ್ಮ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ' (ಬೃ. ೪–೪–೨೨) ಇತಿ | ತಥಾ ಲೈಙ್ಗೇ 'ಜ್ಞಾನಾಮೃತೇನ ತೃಪ್ತಸ್ಯ ಕೃತಕೃತ್ಯಸ್ಯ ಯೋಗಿನಃ | ನೈವಾಸ್ತಿ ಕಿಞ್ಚಿತ್ ಕರ್ತವ್ಯಮಸ್ತಿ ಚೇನ್ನ ಸ ತತ್ತ್ವವಿತ್'[2] (?) ಇತಿ | ತಥಾ

---

1. ಸಾಂಖ್ಯವೆಂದರೆ ತತ್ತ್ವವಿಚಾರವೆಂದರ್ಥ. ವೇದಾಂತದರ್ಶನಕ್ಕೂ ಈ ಹೆಸರು ಹೊಂದುತ್ತದೆ. ಭ. ಗೀ. ೧೮–೧೩ನ್ನು ನೋಡಿರಿ.

2. ಶ್ವೇತಾಶ್ವತರೋಪನಿಷದ್ಭಾಷ್ಯದಲ್ಲಿ ಇದೇ ಶ್ಲೋಕವನ್ನು ಉದಾಹರಿಸಿ 'ಶಿವಧರ್ಮೋತ್ತರ'ದಲ್ಲಿದೆಯೆಂದು ಉಲ್ಲೇಖಿಸಿದೆ.

**ಆಥರ್ವಣೀ ಶ್ರುತಿಃ– 'ನೈತದ್ ವಿದ್ವಾನ್ ಋಷಿಣಾ ವಿಧೇಯೋ ನ ರುಧ್ಯತೇ ವಿಧಿನಾ ಶಬ್ದಕಾರಃ'[1] ಇತಿ ||**

(ಭಾಷ್ಯಾರ್ಥ)

(ಪ್ರ.) ಹಾಗಾದರೆ ಕರ್ಮಗಳನ್ನು ಅನುಷ್ಠಾನಮಾಡಬಾರದೇನು ? (ಉ.) ಅನುಷ್ಠಾನಮಾಡಬಾರದೆಂದಲ್ಲ ; ಆದರೆ ಜ್ಞಾನಿಯಿಂದ ಮಾಡಲ್ಪಡಲೇಬೇಕಾಗಿಲ್ಲ. ಭಗವಾನ್ ವಾಸುದೇವನೂಕೂಡ– 'ಯಾವ ಮಾನವನು ಆತ್ಮರತನೇ ಆಗಿರುವನೋ ಆತ್ಮತೃಪ್ತನೂ ಆಗಿರುವನೋ ಮತ್ತು ಆತ್ಮನಲ್ಲಿಯೇ ಸಂತುಷ್ಟನಾಗಿರುವನೋ ಅವನಿಗೆ ಕಾರ್ಯವು ಇರುವದಿಲ್ಲ' ಎಂದು ಹೇಳಿದ್ದಾನೆ. ಮತ್ತು ಕಾವಷೇಯರು ಬ್ರಹ್ಮಾಂಡಪುರಾಣದಲ್ಲಿ– 'ಈಗ ನಮಗೆ ಅಧ್ಯಯನದಿಂದೇನು ಪ್ರಯೋಜನ ? ಯಾವ ಪ್ರಯೋಜನವನ್ನು ಬಯಸಿ ಯಜ್ಞಗಳಿಂದ (ದೇವತೆಗಳನ್ನು) ಆರಾಧಿಸೋಣ ? ಪ್ರಾಣವೆಂಬ ಅಗ್ನಿಯಲ್ಲಿ ಹೋಮಮಾಡುವೆನು– ಎಂದು ವಾಕ್ಕನ್ನು ಉಚ್ಚರಿಸುತ್ತಾ ಪ್ರಾಣವನ್ನು (ಪ್ರಾಣಾ)ಗ್ನಿಯಲ್ಲಿ ಹೋಮಮಾಡುವೆವು'[2] (?) ಎಂದು (ಹೇಳಿದ್ದಾರೆ). ಹಾಗೆಯೇ ಬಹ್ವೃಚಬ್ರಾಹ್ಮಣೋಪನಿಷತ್ತಿನಲ್ಲಿಯೂ 'ನಾನು ಏತಕ್ಕಾಗಿ ಅಧ್ಯಯನಮಾಡೋಣ ?' ಎಂದು (ಹೇಳಿದೆ). ಮತ್ತು ಬೃಹದಾರಣ್ಯಕದಲ್ಲಿ ಜ್ಞಾನಿಗೆ ಕರ್ಮಸಂನ್ಯಾಸವನ್ನು ತಿಳಿಸುತ್ತಾರೆ : 'ಇದೇ ಅದು ; ಪೂರ್ವದ ವಿದ್ವಾಂಸರು 'ನಮಗೆ ಇವನೇ ಆತ್ಮನು, ಇವನೇ ಲೋಕವು, ಅಲ್ಲವೆ ? ಆ ನಾವು ಪ್ರಜೆಯಿಂದ ಏನುಮಾಡಿಕೊಳ್ಳೋಣ ? ಎಂದು ಪ್ರಜೆಯನ್ನು ಕಾಮಿಸಲಿಲ್ಲವಂತೆ. ಅವರು ಪುತ್ರೈಷಣೆಯಿಂದಲೂ ವಿತ್ತೈಷಣೆಯಿಂದಲೂ ಲೋಕೈಷಣೆಯಿಂದಲೂ ಎದ್ದು ಇನ್ನು ಭಿಕ್ಷಾಚರ್ಯವನ್ನು ಆಚರಿಸಿದರಂತೆ'; ಮತ್ತು ಲಿಂಗಪುರಾಣದಲ್ಲಿ– 'ಜ್ಞಾನವೆಂಬ ಅಮೃತದಿಂದ ತೃಪ್ತನಾದ ಕೃತಕೃತ್ಯನಾದ ಯೋಗಿಗೆ ಏನೊಂದು ಕರ್ತವ್ಯವೂ ಯಾವದೂ ಇರುವದಿಲ್ಲ. ಹಾಗೇನಾದರೂ ಇದ್ದರೆ ಆವನು ತತ್ತ್ವಜ್ಞಾನಿಯಲ್ಲ' ಎಂದು ಹೇಳಿದೆ. ಹಾಗೆಯೇ ಆಥರ್ವಣಶ್ರುತಿಯು– 'ಶಬ್ದಕಾರನಾದ ಈ (ತತ್ತ್ವವನ್ನು) ಬಲ್ಲ ವಿದ್ವಾಂಸನು ಋಷಿಯಿಂದ ವಿಧಿಸಲ್ಪಡುವವನಲ್ಲ, ವಿಧಿಯಿಂದ (ಕರ್ಮಗಳಿಂದ) ಕಟ್ಟಲ್ಪಡುವದಿಲ್ಲ'[3] ಎಂದು ಹೇಳಿದೆ.

---

1. ಅನುವಾದದ ಟಿಪ್ಪಣಿಯನ್ನು ನೋಡಿರಿ.

2. 'ಪ್ರಾಣಾನ್ ಪ್ರಾಣೇಷು ಜುಹ್ವತಿ' ಎಂಬ ಭ. ಗೀ. (೪–೩೦) ವಾಕ್ಯವನು ಇದಕ್ಕೆ ಹೋಲಿಸಿರಿ.

3. ಈ ವಾಕ್ಯದ ಮೂಲವಾಗಲಿ ಇದರ ಸರಿಯಾದ ಅರ್ಥವಾಗಲಿ ನಮಗೆ ತಿಳಿಯಲಿಲ್ಲ. ಮೈ|| ಪಾಠದಲ್ಲಿಯೂ ಇದಕ್ಕೆ ಸ್ಥಾನನಿರ್ದೇಶಮಾಡಿಲ್ಲ. 'ವಿಧೇಯೋ' ಎಂಬುದನ್ನು ವಿಧೇಯಃ ಎಂದು ತಿರುಗಿಸಿಕೊಂಡು 'ಶಬ್ದಕಾರಃ ಏತದ್ ವಿದ್ವಾನ್ ಋಷಿಣಾ ನ ವಿಧೇಯಃ, ವಿಧಿನಾ ನ ರುಧ್ಯತೇ' ಎಂ ಅನ್ವಯಿಸಿಕೊಂಡು ಸಂದರ್ಭಕ್ಕೆ ಅನುಗುಣವಾಗಿ ಹೇಗೋ ಅರ್ಥಮಾಡಿವೆ ವೇದಗಳಿಗೂ ದೊಡ್ಡವನಾದ ಜ್ಞಾನಿಯು ವಿಧಿನಿಷೇಧಗಳಿಗೆ ಕಟ್ಟುಬೀಳುವವನಲ್ಲ– ಎಂದಭಿಪ್ರಾಯಮಾಡಿಕೊಂಡು ಕನ್ನಡಿಸಿದೆ.

## ಅಜ್ಞಾನಿಯು ಕರ್ಮವನ್ನು ಮಾಡಬೇಕು

(ಭಾಷ್ಯ)

ಕೇನ ತರ್ಹಿ ಅನುಷ್ಠೇಯಾನಿ? ಅಜ್ಞಾನಿನಾ ಆರುರುಕ್ಷುಣಾ ಸರ್ವ ಕರ್ಮಾಣಿ ಸರ್ವದಾ ಅನುಷ್ಠೇಯಾನಿ । ನ ಜ್ಞಾನಿನಾ । ತಥಾ ಚ ಆಹ ಭಗವಾನ್- 'ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾಽನಘ । ಜ್ಞಾನಯೋಗೇನ ಸಾಙ್ಖ್ಯಾನಾಂ ಕರ್ಮಯೋಗೇನ ಯೋಗಿನಾಮ್' (ಗೀ. ೩-೩) ಇತಿ। 'ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ। ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ' (ಗೀ. ೬-೩) ಇತಿ ಚ । ತಥಾ ಚ ಆಹ ಭಗವಾನ್ ಸತ್ಯವತೀಸುತಃ- 'ದ್ವಾವಿಮಾವಥ ಪನ್ಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ । ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತೌ ಚ ವ್ಯವಸ್ಥಿತಃ'[1] (ಮೋ. ಧ. ೨೪೧-೬) ಇತಿ ॥

(ಭಾಷ್ಯಾರ್ಥ)

ಹಾಗಾದರೆ (ಕರ್ಮಗಳು) ಯಾವನಿಂದ ಮಾಡಲ್ಪಡಬೇಕು? ಎಂದರೆ ಆರುರುಕ್ಷುವಾದ[2] ಅಜ್ಞಾನಿಯಿಂದ ಎಲ್ಲಾ ಕರ್ಮಗಳೂ ಯಾವಾಗಲೂ ಮಾಡಲ್ಪಡತಕ್ಕವು. ಜ್ಞಾನಿಯಿಂದಲ್ಲ. ಹಾಗೆಯೇ ಭಗವಂತನೂ ಸಹ- 'ಎಲೈ ಪಾಪರಹಿತನೆ, ಈ ಲೋಕದಲ್ಲಿ ಎರಡುಬಗೆಯ ನಿಷ್ಠೆಯನ್ನು ನಾನು ಪೂರ್ವದಲ್ಲಿ- ಜ್ಞಾನಯೋಗದಿಂದ ಸಾಂಖ್ಯರಿಗೆ, ಕರ್ಮಯೋಗದಿಂದ ಕರ್ಮಿಗಳಿಗೆ - ಎಂದು ಹೇಳಿರುವೆನು. 'ಯೋಗವನ್ನು ಏರಲೆಳಸುವ ಮುನಿಗೆ ಕರ್ಮವು ಕಾರಣವೆನಿಸುವದು, ಯೋಗಾರೂಢನಾದ ಅವನಿಗೇ ಶಮವು[3] ಕಾರಣವೆನಿಸುವದು' ಎಂದೂ ಹೇಳಿರುತ್ತಾನೆ. ಮತ್ತು ಸತ್ಯವತೀಪುತ್ರರಾದ ಪೂಜ್ಯರಾದ ವ್ಯಾಸರು- 'ಎಲ್ಲಿ ವೇದಗಳು (ತಾತ್ಪರ್ಯವುಳ್ಳವಾಗಿ) ನಿಂತಿವೆಯೋ ಇವೆರಡೇ ಆ ಮಾರ್ಗಗಳು. ಪ್ರವೃತ್ತಿಲಕ್ಷಣಧರ್ಮ, ನಿವೃತ್ತಿ(ಲಕ್ಷಣಧರ್ಮ) (ಎಂಬಿವೇ) ಇದ್ದುಕೊಂಡಿರುವವುಗಳು'- ಎಂದು (ಹೇಳಿದ್ದಾರೆ).

## ಕರ್ಮಗಳು ಚಿತ್ತಶುದ್ಧಿಗಾಗಿ ವಿಧಿಸಲ್ಪಟ್ಟಿವೆ

(ಭಾಷ್ಯ)

ನನು ಏವಮ್ ಆರುರುಕ್ಷೂಣಾಮಪಿ ಕರ್ಮಾಣಿ ನಾನುಷ್ಠೇಯಾನಿ, ಕರ್ಮಣಾಂ ಬನ್ಧಹೇತುತ್ವಾತ್ । ತಥಾ ಚೋಕ್ತಮ್- 'ಕರ್ಮಣಾ ಬಧ್ಯತೇ

---

1. 'ಸುಭಾಷಿತಃ' ಎಂದು ಅಚ್ಚಿನ ಮಹಾಭಾರತದ ಪಾಠ.
2. ಯೋಗದ ಮೆಟ್ಟಿಲನ್ನು ಹತ್ತಲಿರುವ.
3. ಎಲ್ಲಾ ಕರ್ಮಗಳಿಂದಲೂ ನಿವೃತ್ತಿಯು.

ಜನ್ತುರ್ವಿದ್ಯಯಾ ಚ ವಿಮುಚ್ಯತೇ' | (ಮೋ. ಧ. ೨೪೧-೭) ಇತಿ | ಸತ್ಯಮ್, ತಥಾಪಿ ಈಶ್ವರಾರ್ಥತಯಾ ಫಲನಿರಪೇಕ್ಷಮನುಷ್ಠೀಯಮಾನಾನಿ ನ ಬನ್ಧಹೇತೂನಿ | ತಥಾ ಚ ಉಕ್ತಂ ಭಗವತಾ 'ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬನ್ಧನಃ | ತದರ್ಥಂ ಕರ್ಮ ಕೌನ್ತೇಯ ಮುಕ್ತಸಙ್ಗಃ ಸಮಾಚರ' (ಗೀ. ೩-೯) ಇತಿ | ಕಿಮರ್ಥಂ ತರ್ಹಿ ತೇಷಾಮ್ ಅನುಷ್ಠಾನಮ್? ಸತ್ತ್ವಶುದ್ಧ್ಯರ್ಥಮಿತಿ ಬ್ರೂಮಃ | ತಥಾ ಚೋಕ್ತಂ ಭಗವತಾ- 'ಕಾಯೇನ ಮನಸಾ ಬುದ್ಧ್ಯಾ ಕೇವಲೈರಿನ್ದ್ರಿಯೈರಪಿ | ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾಽಽತ್ಮಶುದ್ಧಯೇ' (ಗೀ. ೫-೧೧) ಇತಿ | 'ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್' (ಗೀ. ೧೮-೫) ಇತಿ ; 'ಗತಸಙ್ಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ | ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ' (ಗೀ. ೪-೨೩) ಇತಿ ಚ | ತಥಾ ಚ- 'ಕಷಾಯಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ | ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ'[1] (ಮೋ. ಧ. ೨೭೦-೩೮) ಇತಿ ||

(ಭಾಷ್ಯಾರ್ಥ)

ಹಾಗಾದರೆ ಆರುರುಕ್ಷುಗಳಿಗೂ ಕರ್ಮಗಳು ಅನುಷ್ಠೇಯವಲ್ಲ ; (ಏಕೆಂದರೆ) ಕರ್ಮಗಳು ಬಂಧಕ್ಕೆ ಕಾರಣವಾಗಿವೆ ; 'ಜಂತುವು ಕರ್ಮದಿಂದ ಬದ್ಧನಾಗುವನು ; ವಿದ್ಯೆಯಿಂದ ಬಿಡುಗಡೆಯನ್ನು ಹೊಂದುವನು' ಎಂದು ಹೇಳಿಯೂ ಇದೆ ; ಎಂದರೆ ನಿಜ. ಹಾಗಾದರೂ ಈಶ್ವರನ ಪ್ರೀತಿಗಾಗಿ ಫಲವನ್ನು ಬಯಸದೆ ಅನುಷ್ಠಾನಮಾಡಲ್ಪಡುವ (ಕರ್ಮಗಳು) ಬಂಧಕ್ಕೆ ಕಾರಣವಲ್ಲ. ಭಗವಂತನು ಕೂಡ 'ಯಜ್ಞಾರ್ಥವಾಗಿ (ಮಾಡುವ) ಕರ್ಮವನ್ನು ಬಿಟ್ಟರೆ ಮಿಕ್ಕಕಡೆಯಲ್ಲಿ ಲೋಕವು ಕರ್ಮಬಂಧನವಾಗಿರುತ್ತದೆ. ಆದ್ದರಿಂದ ಎಲೈ ಕೌಂತೇಯನೆ, ಅದಕ್ಕಾಗಿ ಕರ್ಮವನ್ನು ಸಂಗರಹಿತನಾಗಿ ಮಾಡು' ಎಂದು ಹೇಳಿದ್ದಾನೆ. ಹಾಗಾದರೆ ಅವುಗಳ ಅನುಷ್ಠಾನವು ಏತಕ್ಕಾಗಿ ? ಚಿತ್ತಶುದ್ಧಿಗಾಗಿ- ಎಂದು ಹೇಳುತ್ತೇವೆ. ಭಗವಂತನೂ ಸಹ- 'ಶರೀರದಿಂದಲೂ ಮನಸ್ಸಿನಿಂದಲೂ ಬುದ್ಧಿಯಿಂದಲೂ ಕೇವಲ ಇಂದ್ರಿಯಗಳಿಂದಲೂ ಯೋಗಿಗಳು ಸಂಗವನ್ನು ಬಿಟ್ಟು ಆತ್ಮಶುದ್ಧಿಗಾಗಿ ಕರ್ಮವನ್ನು ಮಾಡುತ್ತಿರುವರು' ಎಂದೂ 'ಯಜ್ಞವೂ ದಾನವೂ ತಪಸ್ಸೂ ತಿಳಿದವರಿಗೆ ಪಾವನಗಳಾಗಿರುತ್ತವೆ' ಎಂಬುದಾಗಿಯೂ, 'ಸಂಗವು ಹೋಗಿ ಮುಕ್ತನಾಗಿ ಜ್ಞಾನದಲ್ಲಿ ನಿಂತುಕೊಂಡಿರುವ ಚಿತ್ತವುಳ್ಳವನಾಗಿ ಯಜ್ಞಕ್ಕೋಸ್ಕರವಾಗಿ (ಕರ್ಮವನ್ನು) ಮಾಡುತ್ತಿರುವವನಿಗೆ ಕರ್ಮವು ಸಮಗ್ರವಾಗಿ ಅಡಗಿಹೋಗುವದು' ಎಂದೂ ಹೇಳಿರುತ್ತಾನೆ. ಮತ್ತು 'ಕರ್ಮಗಳು (ಮನಸ್ಸಿನ)

1. 'ಶರೀರಪಕ್ತಿಃ... ರಸಜ್ಞಾನೇ ಚ ತಿಷ್ಠತಿ' ಎಂದು ಮು. ಭಾ. ಪಾಠ.

ಕಷಾಯವನ್ನು ನಾಶಗೊಳಿಸುವದಕ್ಕೆ (ಹೇಳಲ್ಪಟ್ಟವೆ). ಜ್ಞಾನವಾದರೋ ಪರಮಗತಿಯು, ಕಷಾಯವು[1] ಕರ್ಮಗಳಿಂದ ಪಕ್ವವಾಗಲು ಅನಂತರ ಜ್ಞಾನ ವುಂಟಾಗುವದು' ಎಂದು (ಹೇಳಿದೆ.)

(ಭಾಷ್ಯ)

ನನು ಕರ್ಮಣಾಮಪಿ ಮೋಕ್ಷಹೇತುತ್ವಂ ಶ್ರೂಯತೇ – 'ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ' ಇತಿ, 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಗ್ಂ ಸಮಾಃ' (ಈ. ೨) ಇತಿ ಚ | ತಥಾ ಚ ಮನುಃ– 'ತಪೋ ವಿದ್ಯಾ ಚ ವಿಪ್ರಸ್ಯ ನಿಃಶ್ರೇಯಸಕರೇ ಉಭೇ' (ಮನು. ೧೨-೧೦೪) ಇತಿ | ನೈತತ್ ; ಪೂರ್ವಾಪರಾನನುಸನ್ಧಾನನಿಬನ್ಧನೋಽಯಂ ಭ್ರಮಃ | ತಥಾ ಹಿ– 'ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ' (ಈ. ೧೧) ಇತ್ಯುಕ್ತ್ವಾ 'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ' (ಈ. ೧೧) ಇತಿ ವಿದ್ಯಾವಿದ್ಯಯೋಃ ಭಿನ್ನವಿಷಯತ್ವೇನ ಸಮುಚ್ಚಯಾಭಾವಃ ಶ್ರುತ್ಯೈವ ದರ್ಶಿತಃ | ಇಮಮೇವ ಅರ್ಥಂ ಸ್ಪಷ್ಟಯನ್ ಭಗವಾನ್ ಮನುಃ– 'ತಪೋ ವಿದ್ಯಾ ಚ ವಿಪ್ರಸ್ಯ ನಿಃಶ್ರೇಯಸಕರೇ ಉಭೇ' (ಮನು. ೧೨-೧೦೪) ಇತ್ಯುಕ್ತೇ ಸಮುಚ್ಚಯಾಶಙ್ಕಾ ಮಾಭೂತ್ ಇತಿ 'ತಪಸಾ ಕಲ್ಮಷಂ ಹನ್ತಿ ವಿದ್ಯಯಾಽಮೃತಮಶ್ನುತೇ' (ಮನು. ೧೨-೧೦೪) ಇತಿ ತಪಸೋ ನಿತ್ಯನೈಮಿತ್ತಿಕಲಕ್ಷಣಸ್ಯ ಕರ್ಮಣಃ ಅನ್ತಃಕರಣಶುದ್ಧಾವೇವ ವಿನಿಯೋಗಂ ದರ್ಶಿತವಾನ್ | ತಥಾ 'ಈಶಾವಾಸ್ಯಮಿದಗ್ಂ ಸರ್ವಮ್' (ಈ. ೧) ಇತಿ ಸರ್ವಸ್ಯ ತಾವನ್ಮಾತ್ರತ್ವಮುಕ್ತ್ವಾ ತದಾತ್ಮಭೂತಸ್ಯ ಸರ್ವಸ್ಯ ತಾವನ್ಮಾತ್ರತ್ವಂ ಪಶ್ಯತಃ ತದ್ದರ್ಶನೇನೈವ ಕೃತಾರ್ಥಸ್ಯ ಸಾಧ್ಯಾನ್ತರಮಪಶ್ಯತಃ 'ತೇನ ತ್ಯಕ್ತೇನ ಭುಞ್ಜೀಥಾಃ' (ಈ. ೧) ಇತಿ ತ್ಯಾಗೇನೈವ ಆತ್ಮಪರಿಪಾಲನ ಮುಕ್ತ್ವಾ ಅತದಾತ್ಮವೇದಿನಃ ಕೇನ ತರ್ಹಿ ಆತ್ಮಪರಿಪಾಲನಮಿತ್ಯಾಶಙ್ಕ್ಯ ಆಹ– 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಗ್ಂ ಸಮಾಃ | ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ' (ಈ. ೨) ಇತಿ | ಏವಂ ಭೂತೇ ತ್ವಯಿ ನರಮಾತ್ರಾಭಿಮಾನಿನಿ ಅಜ್ಞೇ ಅವಿದ್ಯಾನಿಮಿತ್ತೋತ್ತರ ಪೂರ್ವಾಘಯೋರಶ್ಲೇಷವಿನಾಶಾಭಾವಾತ್ ಕುರ್ವನ್ನೇವ ಸದಾ ಯಾವ ಜ್ಜೀವಂ ಕರ್ಮ ಜಿಜೀವಿಷೇತ್ ಇತ್ಯಜ್ಞಸ್ಯ ನರಮಾತ್ರಾಭಿಮಾನಿನಃ ಶುದ್ಧ್ಯರ್ಥಂ ಯಾವಜ್ಜೀವಂ ಕರ್ಮಾಣಿ ದರ್ಶಯತಿ | ಅತಃ ಏಭಿರಪಿ ವಾಕ್ಯೈಃ ಶುದ್ಧಿ ಸಾಧನತ್ವಮೇವ ಅವಗಮ್ಯತೇ, ನ ಮೋಕ್ಷಸಾಧನತ್ವಮ್ ||

(ಭಾಷ್ಯಾರ್ಥ)

ಕರ್ಮಗಳಿಗೂ ಮೋಕ್ಷಸಾಧನತ್ವವನ್ನು ಹೇಳಿರುವದು ಕೇಳಬಂದಿದೆಯಲ್ಲ? 'ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವನು ಈ ಎರಡನ್ನೂ ಸೇರಿಸಿ ತಿಳಿಯು

1. ಅಂತಃಕರಣದಲ್ಲಿರುವ ರಾಗದ್ವೇಷಾದಿದೋಷಸಮೂಹವು.

ತ್ತಾನೋ' (ಈ. ೧೧) ಎಂದೂ 'ಕರ್ಮಗಳನ್ನು ಮಾಡುತ್ತಲೇ ಇಲ್ಲಿ ನೂರು ವರ್ಷಗಳು ಬಾಳುವದಕ್ಕೆ ಬಯಸಬೇಕು' (ಈ. ೨) ಎಂದೂ (ಹೇಳಿದೆಯಲ್ಲ ?) ಮತ್ತು ಮನುವೂಕೂಡ– 'ತಪಸ್ಸು, ವಿದ್ಯೆ– ಇವೆರಡೂ ಬ್ರಾಹ್ಮಣನಿಗೆ ಮೋಕ್ಷ ಸಾಧನಗಳು' ಎಂದು (ಹೇಳಿರುತ್ತಾನಲ್ಲವೆ ?) ಎಂದರೆ : ಇದು ಸರಿಯಲ್ಲ. ಹಿಂದುಮುಂದಿನ (ಸಂದರ್ಭಗಳನ್ನು) ಆಲೋಚನೆಮಾಡದೆಇರುವದರಿಂದ ಉಂಟಾಗಿರುವ ಭ್ರಾಂತಿಯೇ ಇದು. ಹೇಗೆಂದರೆ: 'ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವನು ಎರಡನ್ನೂ ಸೇರಿಸಿ ತಿಳಿಯುತ್ತಾನೋ' ಎಂದು ಹೇಳಿ 'ಅವಿದ್ಯೆಯಿಂದ[1] ಮೃತ್ಯುವನ್ನು[2] ದಾಟಿ ವಿದ್ಯೆಯಿಂದ ಅಮೃತತ್ವವನ್ನು ಪಡೆಯುವನು' ಎಂದು ವಿದ್ಯಾವಿದ್ಯೆಗಳಿಗೆ ಬೇರೆಬೇರೆಯ ಪ್ರಯೋಜನಗಳು ಇವೆಯಾದ್ದರಿಂದ ಸಮುಚ್ಚಯವು ಇಲ್ಲವೆಂದು ಶ್ರುತಿಯಿಂದಲೇ ತೋರಿಸಲ್ಪಟ್ಟಿದೆ. ಇದೇ ಅಭಿಪ್ರಾಯವನ್ನೇ ಸ್ಪಷ್ಟಪಡಿಸುತ್ತಾ ಪೂಜ್ಯನಾದ ಮನುವೂಕೂಡ– 'ತಪಸ್ಸು, ವಿದ್ಯೆ– ಇವೆರಡೂ ಬ್ರಾಹ್ಮಣನಿಗೆ ಮೋಕ್ಷಸಾಧನಗಳು' ಎಂದು ಹೇಳಿದಮೇಲೆ ಸಮುಚ್ಚಯವು (ಉಂಟೆಂಬ) ಸಂದೇಹವು ಉಂಟಾಗದಿರಲೆಂದು 'ತಪಸ್ಸಿನಿಂದ ಪಾಪವನ್ನು ಕಳೆದುಕೊಳ್ಳುತ್ತಾನೆ ; ವಿದ್ಯೆಯಿಂದ ಅಮೃತತ್ವವನ್ನು ಹೊಂದುವನು' ಎಂದು ನಿತ್ಯನೈಮಿತ್ತಿಕರೂಪವಾದ ಕರ್ಮವೆಂಬ ತಪಸ್ಸಿಗೆ ಅಂತಃಕರಣ ಶುದ್ಧಿಯಲ್ಲಿಯೇ ವಿನಿಯೋಗವನ್ನು[3] ತೋರಿಸಿರುತ್ತಾನೆ. ಹಾಗೆಯೇ– 'ಇದೆಲ್ಲವೂ ಈಶನಿಂದ ಮುಚ್ಚಲ್ಪಡತಕ್ಕದ್ದು' ಎಂದು ಎಲ್ಲವೂ ಆ (ಬ್ರಹ್ಮವೇ) ಎಂದು ಹೇಳಿ ಆ (ಬ್ರಹ್ಮಮಯ)ವಾದ ಎಲ್ಲವನ್ನೂ ಅದಾಗಿಯೇ ಕಂಡುಕೊಂಡಿರುವವನಿಗೆ– ಆ ದರ್ಶನಮಾತ್ರದಿಂದಲೇ ಕೃತಾರ್ಥನಾದವನಿಗೆ– ಬೇರೊಂದು ಸಾಧ್ಯವಾದದ್ದು ಕಂಡುಬರದಿರುವದರಿಂದ 'ಆ ತ್ಯಾಗದಿಂದ ಕಾಪಾಡಿಕೊ' ಎಂದು ತ್ಯಾಗಮಾತ್ರದಿಂದಲೇ ಆತ್ಮಪರಿಪಾಲನೆಯನ್ನು ಹೇಳಿ ಆತ್ಮನನ್ನರಿಯದವನಿಗೆ ಏತರಿಂದ ಆತ್ಮಪರಿಪಾಲನೆಯಾದೀತೆಂದು ಶಂಕಿಸಿ ಹೇಳುತ್ತಾನೆ– 'ಕರ್ಮಗಳನ್ನು ಮಾಡುತ್ತಲೇ ಇಲ್ಲಿ ನೂರು ವರ್ಷಗಳು ಬಾಳುವದಕ್ಕೆ ಬಯಸಬೇಕು. ಹೀಗಿರುವ ಮನುಷ್ಯನಾದ ನಿನಗೆ ಇದಕ್ಕಿಂತ ಬೇರೆಯಾಗಿ ಕರ್ಮವು ಲೇಪವಾಗದ (ಯಾವ ಮಾರ್ಗವೂ) ಇರುವದಿಲ್ಲ' ಎಂದು (ಹೇಳಿದೆ.) ಹೀಗಿರುವ ನಿನಗೆ ನಾನು ಬರಿಯ ಮನುಷ್ಯನೇ ಎಂಬ ತಿಳಿವಳಿಕೆಯಿರುವ– ಅಜ್ಞನಿಗೆ ಅವಿದ್ಯೆಯ ಕಾರಣದಿಂದ ಮುಂದಿನ (ಪಾಪಗಳು) ಅಂಟದಿರುವದು, ಹಿಂದಿನ

1. ಶಾಸ್ತ್ರೀಯಕರ್ಮಗಳಿಂದ.
2. ಸ್ವಾಭಾವಿಕವಾದ ಬಂಧಕವಾದ ಕರ್ಮಗಳನ್ನು.
3. ಜ್ಞಾನದೊಡನೆ ಮೋಕ್ಷಪ್ರಾಪ್ತಿಯಲ್ಲಲ್ಲ– ಎಂದಭಿಪ್ರಾಯ.
4. ಪಡೆದುಕೊಳ್ಳಬೇಕಾದದ್ದು.

ಪಾಪಗಳು ನಾಶವಾಗುವದು- ಇವು ಇಲ್ಲದಿರುವದರಿಂದ[1] 'ಬದುಕಿರುವವರೆಗೂ ಯಾವಾಗಲೂ ಕರ್ಮಗಳನ್ನು ಮಾಡಿಕೊಂಡೇ ಜೀವಿಸಲು ಇಚ್ಛಿಸಬೇಕು'- ಎಂದು ನರಮಾತ್ರಾಭಿಮಾನಿಯಾದ ಅಜ್ಞನಿಗೆ ಅಂತಃಕರಣಶುದ್ಧಿಗಾಗಿ ಬದುಕಿರುವವರೆಗೂ ಕರ್ಮಗಳನ್ನು (ಮಾಡಬೇಕೆಂದು) ಹೇಳಿರುತ್ತಾರೆ. ಆದ್ದರಿಂದ ಈ ವಾಕ್ಯಗಳಿಂದಲೂ (ಕರ್ಮಗಳಿಗೆ) (ಚಿತ್ತ)ಶುದ್ಧಿಸಾಧನತ್ವವೇ ಕಂಡುಬಂದಿದೆ. ಮೋಕ್ಷಸಾಧನತ್ವವು (ಕಂಡುಬಂದಿರುವದಿಲ್ಲ.)

(ಭಾಷ್ಯ)

ಯದಪ್ಯುಕ್ತಮ್- 'ತೇನೈತಿ ಬ್ರಹ್ಮವಿತ್ ಪುಣ್ಯಕೃತ್ ತೈಜಸಶ್ಚ' (ಬೃ. ೪-೪-೯) ಇತಿ ಚಶಬ್ದಾತ್ ಸಮುಚ್ಚಯೋ ಅವಗಮ್ಯತೇ ಇತಿ । ತದಪಿ ಪ್ರಸಿದ್ಧಶ್ರುತಿವಿನಿಯೋಗಾನುಸಾರೇಣೈವ ಯೋಜಯಿತವ್ಯಮ್ । ತಥಾ ಚ ಅನುಗೀತಾಸು ಸ್ಪಷ್ಟಮಾಹ ಭಗವಾನ್ ಕರ್ಮಣಾಂ ಶುದ್ಧಿದ್ವಾರೇಣೈವ ಮೋಕ್ಷಸಾಧನತ್ವಮ್-

' ನಿತ್ಯನೈಮಿತ್ತಿಕೈಃ ಶುದ್ಧೈಃ ಫಲಸಙ್ಗವಿವರ್ಜಿತೈಃ ।
ಸತ್ತ್ವಶುದ್ಧಿಮವಾಪ್ಯಾಥ ಯೋಗಾರೂಢೋ ಭವಿಷ್ಯತಿ ॥
ಯೋಗಾರೂಢಸ್ತತೋ ಯಾತಿ ತದ್ವಿಷ್ಣೋಃ ಪರಮಂ ಪದಮ್ ।
ಗುರುಭಕ್ತ್ಯಾ ಚ ಧೃತ್ಯಾ ಚ ಧರ್ಮಭಕ್ತ್ಯಾ ಶ್ರುತೇನ ಚ ॥
ವಿಷ್ಣುಭಕ್ತ್ಯಾ ಚ ಸತತಂ ಜ್ಞಾನಮುತ್ಪದ್ಯತೇಽಮಲಮ್ ।
ತಸ್ಮಾದ್ಧರ್ಮಪರೋ ಭೂತ್ವಾ ವೇದಾಸ್ತಿಕ್ಯಸಮನ್ವಿತಃ ॥
ಕುರ್ವನ್ ವೈ ನಿತ್ಯಕರ್ಮಾಣಿ ಯಥಾಶಕ್ತಿ ಸ ಬುದ್ಧಿಮಾನ್ ।
ಫಲಾನಿ ಪರ ಆಸಾದ್ಯ ವಾಸುದೇವೇ ಪರಾತ್ಮನಿ ।
ಶುದ್ಧಸತ್ತ್ವೋ ಭವತ್ಯೇವ ಯೋಗಾರೂಢಶ್ಚ ಜಾಯತೇ ' ॥

ಇತಿ ॥ ವಕ್ಷ್ಯತಿ ಚ ಭಗವಾನ್ ಸನತ್ಸುಜಾತಃ ಶುದ್ಧಿದ್ವಾರೇಣೈವ ಮೋಕ್ಷಸಾಧನತ್ವಮ್ 'ತದರ್ಥಮುಕ್ತಂ ತಪಸ್ತೈವ ಕರ್ಮಣಾ ತಾಭ್ಯಾಮಸೌ ಪುಣ್ಯಮುಪೈತಿ ವಿದ್ವಾನ್ । ಪುಣ್ಯೇನ ಪಾಪಂ ವಿನಿಹತ್ಯ ಪಶ್ಚಾತ್ ಸ ಜಾಯತೇ ಜ್ಞಾನವಿದೀಪಿತಾತ್ಮಾ' (೨-೫) 'ಜ್ಞಾನೇನ ಚಾತ್ಮಾನಮುಪೈತಿ ವಿದ್ವಾನ್' (೨-೯) ಇತಿ ॥

(ಭಾಷ್ಯಾರ್ಥ)

"ಬ್ರಹ್ಮಜ್ಞಾನಿಯೂ ಪುಣ್ಯವನ್ನು ಮಾಡಿದವನೂ ತೈಜಸನೂ (ಈ ಮಾರ್ಗದಿಂದ ಹೋಗುತ್ತಾರೆ") ಎಂದು ಚಶಬ್ದದಿಂದ ಸಮುಚ್ಚಯವಮಾಡಿ ಹೇಳಿರುವದು

1. ಆತ್ಮಜ್ಞಾನಿಗೆ ಹೀಗೆ ಅಶ್ಲೇಷವಿನಾಶಗಳಾಗುವವು. ಸೂ.ಭಾ. ೪-೧-೧೩ನ್ನು ನೋಡಿರಿ.

ಕಂಡುಬಂದಿದೆ- ಎಂದು ಹೇಳಲಾಗಿತ್ತಷ್ಟೆ ![1] ಅದನ್ನು ಪ್ರಸಿದ್ಧವಾದ ಶ್ರುತಿಯ ತಾತ್ಪರ್ಯದ ಅಭಿಪ್ರಾಯವನ್ನು ಅನುಸರಿಸಿಯೇ ಯೋಜನೆಮಾಡಬೇಕು.[2] ಮತ್ತು ಅನುಗೀತೆಗಳಲ್ಲಿ ಭಗವಂತನು ಕರ್ಮಗಳಿಗೆ ಚಿತ್ತಶುದ್ಧಿಯಮೂಲಕವೇ ಮೋಕ್ಷಸಾಧನತ್ವವೆಂದು ಸ್ಪಷ್ಟವಾಗಿ ಹೇಳಿದ್ದಾನೆ. "ಫಲಾಸಕ್ತಿ, ಸಂಗ- ಇವುಗಳಿಂದ ರಹಿತವಾದ ಶುದ್ಧವಾದ ನಿತ್ಯಕರ್ಮಗಳಿಂದ ಅಂತಃಕರಣಶುದ್ಧಿಯನ್ನು ಹೊಂದಿ ಯೋಗಾರೂಢನಾಗುವನು. ಯೋಗಾರೂಢನಾದಮೇಲೆ ಆ ವಿಷ್ಣುವಿನ ಪರಮಪದವನ್ನು ಸೇರುತ್ತಾನೆ. ಗುರುಭಕ್ತಿ, ಧೃತಿ, ಧರ್ಮಭಕ್ತಿ, ಮತ್ತು ಶ್ರವಣ, ವಿಷ್ಣುಭಕ್ತಿ- ಇವುಗಳ ಸತತವಾದ (ಅಭ್ಯಾಸದಿಂದ) ಪವಿತ್ರವಾದ ಜ್ಞಾನವುಂಟಾಗುತ್ತದೆ. ಆದ್ದರಿಂದ ವೇದದಲ್ಲಿ ನಂಬಿಕೆಯಿಂದ ಕೂಡಿದವನಾಗಿ ಧರ್ಮಪರನಾಗಿ ಬುದ್ಧಿವಂತನಾದ ಆ (ಸಾಧಕನು) ನಿತ್ಯಕರ್ಮಗಳನ್ನು ಮಾಡುತ್ತಾ ಫಲಗಳನ್ನು ಪರಮಾತ್ಮನಾದ ಮತ್ತು ಹೆಚ್ಚಿನವನಾದ ವಾಸುದೇವನಲ್ಲಿ ಇಟ್ಟು ಶುದ್ಧಸತ್ತ್ವನೂ ಯೋಗಾರೂಢನೂ ಆಗಿಬಿಡುತ್ತಾನೆ' ಎಂದು (ಹೇಳಿದ್ದಾನೆ). ಪೂಜ್ಯರಾದ ಸನತ್ಸುಜಾತರೂ ಸಹ (ಅಂತಃಕರಣ)ಶುದ್ಧಿಯ ಮೂಲಕವೇ (ಕರ್ಮಗಳಿಗೆ) ಮೋಕ್ಷಸಾಧನತ್ವವನ್ನು ಹೇಳುತ್ತಾ - 'ಅದಕ್ಕಾಗಿಯೇ ತಪಸ್ಸು- ಕರ್ಮಗಳು ಹೇಳಲ್ಪಟ್ಟಿವೆ. ಆ ತಪಸ್ಸು ಕರ್ಮಗಳಿಂದಲೇ ಈ ವಿವೇಕಿಯು ಪುಣ್ಯವನ್ನು ಪಡೆದುಕೊಳ್ಳುತ್ತಾನೆ. ಪುಣ್ಯದಿಂದ ಪಾಪವನ್ನು ನಾಶಗೊಳಿಸಿಕೊಂಡು ಅನಂತರ ಜ್ಞಾನದಿಂದ ಬೆಳಗಲ್ಪಟ್ಟ ಸ್ವರೂಪವುಳ್ಳವನಾಗಿ ಆಗುವನು'. 'ಜ್ಞಾನದಿಂದ ಆತ್ಮನನ್ನು ಪಡೆಯುವನು' ಎಂದೂ (ಹೇಳಿದ್ದಾರೆ.)

## ಜ್ಞಾನೋತ್ಪತ್ತಿಗೆ ಅಂತಃಕರಣಶುದ್ಧಿಯು ಅವಶ್ಯ

(ಭಾಷ್ಯ)

ನನು ಕಥಂ ಸತ್ತ್ವಶುದ್ಧಿದ್ವಾರೇಣೈವ ಮೋಕ್ಷಸಾಧನತ್ವಮ್ ? ವಿನಾಪಿ ಸತ್ತ್ವಶುದ್ಧಿಂ ಜ್ಞಾನೇನೈವ ಮೋಕ್ಷಃ ಸಿಧ್ಯತ್ಯೇವ । ಸತ್ಯಮ್ । ಜ್ಞಾನೇನೈವ ಮೋಕ್ಷಃ ಸಿಧ್ಯತಿ ; ಕಿಂ ತು ತದೇವ ಜ್ಞಾನಂ ಸತ್ತ್ವಶುದ್ಧಿಂ ವಿನಾ ನೋತ್ಪದ್ಯತ ಇತಿ ವಯಂ ಬ್ರೂಮಃ । ತಥಾ ಚೋಕ್ತಮ್- 'ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ' (ಮೋ. ಧ. ೨೦೪-೮) ಇತಿ । ತಥಾ- 'ಅನೇಕಜನ್ಮಸಂಸಾರಚಿತೇ ಪಾಪಸಮುಚ್ಚಯೇ । ನಾಕ್ಷೀಣೇ ಜಾಯತೇ ಪುಂಸಾಂ

---

1. ಬ್ರಹ್ಮಜ್ಞಾನಿಯ ಜೊತೆಗೆ ಪುಣ್ಯವಂತನನ್ನೂ ಸೇರಿಸಿರುವದರಿಂದ ಪುಣ್ಯಕರ್ಮವು ನೇರಾಗಿ ಮೋಕ್ಷಸಾಧನವೆಂದಾಯಿತಲ್ಲ ! ಎಂದಭಿಪ್ರಾಯ.

2. ಜ್ಞಾನವೊಂದರಿಂದಲೇ ಮೋಕ್ಷವೆಂದು ಹೇಳುವ 'ತಮೇವಂ ವಿದ್ವಾನ್...' ಮುಂತಾದವು ಪ್ರಸಿದ್ಧಶ್ರುತಿಗಳು. ಅವಕ್ಕನುಗುಣವಾಗಿ ಪುಣ್ಯವಂತನೂ ಚಿತ್ತಶುದ್ಧಿದ್ವಾರದಿಂದ ಜ್ಞಾನವನ್ನು ಹೊಂದಿ ಮೋಕ್ಷವನ್ನು ಪಡೆಯುತ್ತಾನೆಂದು ಅರ್ಥಮಾಡಬೇಕು- ಎಂದು ಭಾವ.

ಗೋವಿನ್ದಾಭಿಮುಖೀ ಮತಿಃ । ಜನ್ಮಾನ್ತರಸಹಸ್ರೇಷು ತಪೋಧ್ಯಾನಸಮಾಧಿಭಿಃ। ನರಾಣಾಂ ಕ್ಷೀಣಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ' ಇತಿ । ತಥಾ ಚೋಕ್ತಂ ಭಗವತಾ–

'ಅನೇಕಜನ್ಮಸಂಸಿದ್ಧಃ ತತೋ ಯಾತಿ ಪರಾಂ ಗತಿಮ್ ।
ತಪಸ್ವಿಭ್ಯೋಽಧಿಕೋ ಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ ।
ಕರ್ಮಿಭ್ಯಶ್ಚಾಧಿಕೋ ಯೋಗೀ ತಸ್ಮಾದ್ ಯೋಗೀ ಭವಾರ್ಜುನ' ।

(ಗೀ. ೬–೪೫, ೪೬) ಇತಿ ॥

'ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ ।
ಸ್ವಕರ್ಮನಿರತಃ ಸಿದ್ಧಿಂ ಯಥಾ ವಿನ್ದತಿ ತಚ್ಛೃಣು ॥
ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥ (ಗೀ. ೧೮–೪೫, ೪೬)

ಇತಿ ॥ ತಥಾ ಚ ಆಹ ಯಾಜ್ಞವಲ್ಕ್ಯಃ– 'ತಥಾಽವಿಪಕ್ವಕರಣ ಆತ್ಮಜ್ಞಾನಸ್ಯ ನ ಕ್ಷಮಃ' (ಯಾ. ಸ್ಮೃ. ಯತಿ. ೧೪೧) ಇತಿ ॥

(ಭಾಷ್ಯಾರ್ಥ)

ಅಂತಃಕರಣಶುದ್ಧಿಯ ಮೂಲಕವೇ (ಕರ್ಮಗಳಿಗೆ) ಮೋಕ್ಷಸಾಧನತ್ವವೆಂಬುದು ಹೇಗೆ? ಸತ್ತ್ವಶುದ್ಧಿಯಿಲ್ಲದೆಇದ್ದರೂ ಜ್ಞಾನದಿಂದಲೇ ಮೋಕ್ಷವು ಸಿಕ್ಕುತ್ತದೆಯಲ್ಲ? ಎಂದರೆ ನಿಜ. ಜ್ಞಾನದಿಂದಲೇ ಮೋಕ್ಷವು ಪ್ರಾಪ್ತವಾಗುತ್ತದೆ; ಆದರೆ ಆ ಜ್ಞಾನವು ಅಂತಃಕರಣಶುದ್ಧಿಯಿಲ್ಲದೆ ಉಂಟಾಗುವದಿಲ್ಲವೆಂದು ನಾವು ಹೇಳುತ್ತೇವೆ. 'ಪಾಪಕರ್ಮಗಳ ಕ್ಷಯದಿಂದ ಮನುಷ್ಯರಿಗೆ ಜ್ಞಾನವು ಉಂಟಾಗುತ್ತದೆ' ಎಂದು ಹೇಳಲ್ಪಟ್ಟದೆ. ಹಾಗೆಯೇ– 'ಅನೇಕಜನ್ಮಗಳಲ್ಲಿ ಹುಟ್ಟಿ (ಕರ್ಮಗಳನ್ನು ಮಾಡಿ) ಕೂಡಿಹಾಕಿರುವ ಪಾಪಗಳ ರಾಶಿಯು ಕ್ಷೀಣವಾಗದೆ ಮನುಷ್ಯರಿಗೆ ಗೋವಿಂದನ ಕಡೆಗೆ ಬುದ್ಧಿಯು ಹುಟ್ಟುವದಿಲ್ಲ' 'ಸಹಸ್ರಾರು ಜನ್ಮಗಳಲ್ಲಿ ತಪಸ್ಸು, ಧ್ಯಾನ, ಸಮಾಧಿಗಳಿಂದ ಪಾಪವನ್ನು ಕಳೆದುಕೊಂಡಿರುವ ಮನುಷ್ಯರಿಗೆ ಕೃಷ್ಣನಲ್ಲಿ ಭಕ್ತಿಯು ಉಂಟಾಗುವದು' ಎಂದೂ (ಹೇಳಿದೆ.) ಮತ್ತು ಭಗವಂತನಿಂದಲೂ ಕೂಡ– '(ಯೋಗಿಯು) ಅನೇಕಜನ್ಮಗಳಲ್ಲಿ (ಮಾಡಿರುವ ಜ್ಞಾನಸಾಧನಗಳಿಂದ) ಸಂಸಿದ್ಧನಾಗಿ ಅನಂತರ ಪರಗತಿಯನ್ನೈದುವನು' 'ತಪಸ್ವಿಗಳಿಗಿಂತಲೂ ಯೋಗಿಯು ಹೆಚ್ಚಿನವನು; ಜ್ಞಾನಿಗಳಿಗಿಂತಲೂ ಹೆಚ್ಚಿನವನೆಂದು (ನನ್ನ) ಮತವು; ಯೋಗಿಯು ಕರ್ಮಿಗಳಿಗಿಂತಲೂ ಹೆಚ್ಚಿನವನು; ಆದ್ದರಿಂದ ಎಲೈ ಅರ್ಜುನನೆ, ಯೋಗಿಯಾಗು. 'ತನ್ನತನ್ನ ಕರ್ಮದಲ್ಲಿ ತೊಡಗಿರುವ ಮನುಷ್ಯನು ಸಂಸಿದ್ಧಿಯನ್ನು ಹೊಂದುತ್ತಾನೆ. ಸ್ವಕರ್ಮನಿರತನಾದವನು, ಹೇಗೆ ಸಿದ್ಧಿಯನ್ನು ಹೊಂದುತ್ತಾನೋ ಅದನ್ನು ಹೇಳುವೆನು. ಯಾವಾತನಿಂದ (ಈ)

ಪ್ರಾಣಿಗಳ ವ್ಯಾಪಾರಗಳು (ಆಗುತ್ತಿರುವವೋ) ಯಾವಾತನಿಂದ ಇದೆಲ್ಲವೂ ವ್ಯಾಪ್ತವಾಗಿರುವದೋ ಆತನನ್ನು ಸ್ವಕರ್ಮದಿಂದ ಅಭ್ಯರ್ಚನೆಮಾಡಿದರೆ ಮಾನವನು ಸಿದ್ಧಿಯನ್ನು ಹೊಂದುತ್ತಾನೆ ಎಂದು ಭಗವಂತನೂ ಹೇಳಿದ್ದಾನೆ. ಯಾಜ್ಞವಲ್ಕ್ಯನೂಕೂಡ– 'ಹಾಗೆಯೇ ಪಕ್ವವಾಗದ (ಅಂತಃಕರಣವುಳ್ಳವನು ಆತ್ಮಜ್ಞಾನಕ್ಕೆ ಸಮರ್ಥನಾಗಲಾರನು'[1] ಎಂದು (ಹೇಳಿದ್ದಾನೆ.)

## ಯೋಗಾರೂಢನಾಗುವವರೆಗೆ ಕರ್ಮಗಳು ಅವಶ್ಯ

(ಭಾಷ್ಯ)

ಯಸ್ಮಾತ್ ವಿಶುದ್ಧಸತ್ತ್ವಸ್ಯೈವ ನಿತ್ಯಾನಿತ್ಯವಿವೇಕದ್ವಾರೇಣ ಮೋಕ್ಷಸಾಧನಜ್ಞಾನನಿಷ್ಪತ್ತಿಃ ತಸ್ಮಾತ್ ಸತ್ತ್ವಶುದ್ಧ್ಯರ್ಥಂ ಸರ್ವೇಶ್ವರಮುದ್ದಿಶ್ಯ ಸರ್ವಾಣಿ ವಾಙ್ಮನಃಕಾಯಲಕ್ಷಣಾನಿ ಶ್ರೌತಸ್ಮಾರ್ತಾನಿ ಕರ್ಮಾಣಿ ಸಮಾಚರೇತ್ ಯಾವದ್ ವಿಶುದ್ಧಸತ್ತ್ವ ಇಹಾಮುತ್ರಫಲಭೋಗವಿರಾಗೋ ಯೋಗಾರೂಢೋ ಭವತಿ । ತಥಾ ಚಾಹ ಭಗವಾನ್– 'ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ', 'ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ' ಇತಿ । ತಸ್ಯ ಲಕ್ಷಣಮ್ ಉಕ್ತಮ್– 'ಯದಾ ಹಿ ನೇನ್ದ್ರಿಯಾರ್ಥೇಷು ನ ಕರ್ಮಸ್ವನುಷಜ್ಜತೇ । ಸರ್ವಸಂಕಲ್ಪಸಂನ್ಯಾಸೀ ಯೋಗಾರೂಢಸ್ತದೋಚ್ಯತೇ' ಇತಿ । ಯಸ್ತು ಪುನರೇವಂ ಯಜ್ಞದಾನಾದಿನಾ ವಿಶುದ್ಧಸತ್ತ್ವ ಇಹಾಮುತ್ರಫಲಭೋಗವಿರಾಗೋ ಯೋಗಾರೂಢೋ ಭವತಿ, ತಸ್ಯ ಶಮ ಏವ ಕಾರಣಂ ನ ಕರ್ಮ । ತಥಾ ಚೋಕ್ತಮ್– 'ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ' ಇತಿ । ಯಸ್ಮಾದ್ ಯೋಗಾರೂಢಸ್ಯ ಶಮ ಏವ ಕಾರಣಂ ನ ಕರ್ಮ, ತಸ್ಮಾತ್ ಶಮದಮಾದಿಸಾಧನಸಂಪನ್ನಃ ಶ್ರವಣಾದಿಸಮನ್ವಿತಃ 'ಯೋಗೀ ಯುಞ್ಜೀತ ಸತತಮಾತ್ಮಾನಂ ರಹಸಿ ಸ್ಥಿತಃ । ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ' ಇತಿ ॥

(ಭಾಷ್ಯಾರ್ಥ)

ವಿಶುದ್ಧಸತ್ತ್ವನಾದವನಿಗೇ ನಿತ್ಯಾನಿತ್ಯ(ವಸ್ತು)ವಿವೇಕದ ಮೂಲಕ ಮೋಕ್ಷಕ್ಕೆ ಸಾಧನವಾದ ಜ್ಞಾನವು ಹುಟ್ಟುತ್ತದೆಯಾದ್ದರಿಂದ ಅಂತಃಕರಣಶುದ್ಧಿಗಾಗಿ ಸರ್ವೇಶ್ವರನನ್ನು ಉದ್ದೇಶಿಸಿ ಶರೀರ, ವಾಕ್ಕು, ಮನಸ್ಸುಗಳಿಂದ (ಮಾಡಲ್ಪಡುವ) ಎಲ್ಲಾ ಶ್ರೌತಸ್ಮಾರ್ತಕರ್ಮಗಳನ್ನೂ ವಿಶುದ್ಧಸತ್ತ್ವನಾಗಿ ಇಹಲೋಕಪರಲೋಕದ (ಸುಖ)ಭೋಗದಲ್ಲಿ ವಿರಕ್ತಿಯುಂಟಾಗಿ ಯೋಗಾರೂಢ

1. 'ಮಲಿನೋ ಹಿ ಯಥಾऽऽದರ್ಶೋ ರೂಪಾಲೋಕಸ್ಯ ನ ಕ್ಷಮಃ' ಎಂದು ಈ ಶ್ಲೋಕದ ಪೂರ್ವಾರ್ಧ. 'ಕೊಳೆಯಾದ ಕನ್ನಡಿಯು ಹೇಗೆ (ಮುಖದ) ರೂಪವನ್ನು ನೋಡಿಕೊಳ್ಳಲು ಸಮರ್ಥವಲ್ಲವೋ' ಎಂದರ್ಥ.

ನಾಗುವವರೆಗೂ ಮಾಡಬೇಕು ಭಗವಂತನುಕೂಡ– 'ಯೋಗವನ್ನು ಏರಲೆಳಸುವ ಮುನಿಗೆ ಕರ್ಮವು ಕಾರಣವೆನಿಸುವದು' ಎಂದೂ 'ಎಲೈ ಮಹಾಬಾಹುವೆ, ಯೋಗವಿಲ್ಲದೆ, ಸಂನ್ಯಾಸವು ದೊರಕುವದು ತುಂಬ ಕಷ್ಟ' ಎಂದೂ ಹೇಳಿದ್ದಾನೆ. ಅವರ ಲಕ್ಷಣವನ್ನು ಹೀಗೆ ಹೇಳಿದೆ : 'ಯಾವಾಗ ಇಂದ್ರಿಯಾರ್ಥಗಳಲ್ಲಾಗಲಿ, ಕರ್ಮಗಳಲ್ಲಾಗಲಿ ಆಸಕ್ತಿಯುಳ್ಳವನಾಗಿರುವದಿಲ್ಲವೋ (ಯಾವಾಗ) ಸರ್ವಸಂಕಲ್ಪಸಂನ್ಯಾಸಿಯಾಗಿರುವನೋ ಆಗ ಯೋಗಾರೂಢನಾಗುವನು' ಎಂದಿದೆ. ಆವರೆ ಯಾವನು ಯಜ್ಞದಾನಾದಿ(ಗಳಿಂದ) ವಿಶುದ್ಧಸತ್ತ್ವನಾಗಿ ಇಹಲೋಕ ಪರಲೋಕದ (ಸುಖ)ಭೋಗಗಳಲ್ಲಿ ವಿರಕ್ತನಾಗಿ ಯೋಗಾರೂಢನಾಗುವನೋ ಅವನಿಗೆ ಶಮವೇ ಕಾರಣವು ; ಕರ್ಮವಲ್ಲ. ಹಾಗೆಂದು ಹೇಳಿಯೂ ಇದೆ. ('ಯೋಗಾರೂಢನಾದ) ಅವನಿಗೇ ಶಮವು ಮೋಕ್ಷಕಾರಣವು' ಎಂದಿದೆ. 'ಯೋಗಾರೂಢನಿಗೆ ಶಮವೇ ಕಾರಣವು ; ಕರ್ಮವಲ್ಲ– ಆದ್ದರಿಂದಲೇ ಶಮದಮಾದಿಸಾಧನಗಳಿಂದ ಕೂಡಿದವನಾಗಿ ಶ್ರವಣಾದಿಗಳಿಂದ ಸಮನ್ವಿತನಾಗಿ 'ಯೋಗಿಯಾದವನು ರಹಸ್ಯದಲ್ಲಿದ್ದುಕೊಂಡು ಆತ್ಮನನ್ನು ಸತತವಾಗಿ ಯೋಗದಲ್ಲಿಡಬೇಕು. ಏಕಾಕಿಯಾಗಿ ಯತಚಿತ್ತಾತ್ಮನಾಗಿ ನಿರಾಶಿಯಾಗಿ ಅಪರಿಗ್ರಹನಾಗಿರಬೇಕು' (ಎಂದಭಿಪ್ರಾಯ.)

## ಯೋಗಾನುಷ್ಠಾನದ ಕ್ರಮ

(ಭಾಷ್ಯ)

ಕಥಂ ತರ್ಹಿ ಯೋಗಾನುಷ್ಠಾನಮ್ ? ಶೃಣು । ಸಮೇ ದೇಶೇ ಶರ್ಕರಾವಹ್ನಿವಾಲುಕಾಶಬ್ದಜಲಾಶಯಾದಿವರ್ಜಿತೇ ಮನೋನುಕೂಲೇ ಶುಚೌ ನಾತ್ಯುಚ್ಛ್ರಿತಂ ನಾತಿನೀಚಂ ಚೇಲಾಜಿನಕುಶೋತ್ತರಂ ಸ್ಥಿರಮ್ ಆಸನಂ ಪ್ರತಿಷ್ಠಾಪ್ಯ ತತ್ರೋಪವಿಶ್ಯ ಆಸನಂ ಸ್ವಸ್ತಿಕಂ ಪದ್ಮಾಸನಂ ವಾ ಲಬ್ಧ್ವಾ, ಸಮಂ ಕಾಯಶಿರೋಗ್ರೀವಂ ಧಾರಯನ್ ವಿಶ್ವಾದೀನ್ ಕ್ರಮೇಣ ಕಾರ್ಯಕಾರಣವಿನಿರ್ಮುಕ್ತೇ ಪೂರ್ಣಾತ್ಮನಿ ಉಪಸಂಹೃತ್ಯ ಪೂರ್ಣಾತ್ಮನಾ ಸ್ಥಿತ್ವಾ ಧ್ಯಾಯೇತ್ ಪುರಿಶಯಂ ದೇವಂ ಪೂರ್ಣಾನನ್ದಂ ನಿರಞ್ಜನಮ್ ಅಪೂರ್ವಮನಪರಂ ಬ್ರಹ್ಮ ನೇತಿನೇತ್ಯಾದಿಲಕ್ಷಣಮ್ ಅಶನಾಯಾದ್ಯಸಂಸ್ಪೃಷ್ಟಮ್ ಅನುದಿತಾನಸ್ತಮಿತಜ್ಞಾನಾತ್ಮನಾ ಅವಸ್ಥಿತಂ ಪರಮಾತ್ಮಾನಮ್ ಓಂ ಇತಿ । ತಥಾ ಚ ಉಕ್ತಂ ಬ್ರಹ್ಮಾಣ್ಡಪುರಾಣೇ ಕಾವಷೇಯಗೀತಾಸು– 'ತಸ್ಮಾದ್ ವಿಮೋಕ್ಷಾಯ ಕುರು ಪ್ರಯತ್ನಂ ದುಃಖಾದ್ ವಿಮುಕ್ತೋ ಭವಿತಾಸಿ ಯೇನ । ಓಂ ಬ್ರಹ್ಮ ಶೂನ್ಯಂ ಪರಮಂ ಪ್ರಧಾನಮಾನನ್ದಮಾತ್ರಂ ಪ್ರಣವಂ ಜುಷಸ್ವ' ಇತಿ । ಏವಂ ಯುಞ್ಜನ್ ಸದಾತ್ಮಾನಂ ಪರಮಾತ್ಮತ್ವೇನ ಯದಾ ಸಾಕ್ಷಾಜ್ಜಾನಾತಿ, ತದಾ ನಿರಸ್ತಾಜ್ಞಾನತತ್ಕಾರ್ಯೋ ವೀತಶೋಕಃ ಕೃತಕೃತ್ಯೋ ಭವತಿ ॥

(ಭಾಷ್ಯಾರ್ಥ)

ಯೋಗವನ್ನು ಮಾಡುವದು ಹೇಗೆ ? (ಎಂದರೆ) ಕೇಳು; ಸಮ(ಮಟ್ಟ)ವಾದ ಜಾಗದಲ್ಲಿ, ಕಲ್ಲುಹರಳು, ಬೆಂಕಿ, ಮರಳು, ಸದ್ದು, ನೀರಿನಕೊಳ- ಮುಂತಾದವುಗಳಿಲ್ಲದ[1], ಮನಸ್ಸಿಗೆ ಆಹ್ಲಾದಕರವಾದ ಶುಚಿಯಾದ (ಸ್ಥಳದಲ್ಲಿ) ತೀರ ಎತ್ತರವಾಗಿಲ್ಲದ ತೀರ ತಗ್ಗಾಗಿಲ್ಲದ (ಜಾಗದಲ್ಲಿ) ದರ್ಭೆ, ಕೃಷ್ಣಾಜಿನ, ಬಟ್ಟೆಗಳಿಂದ (ಹಾಸಿ ಸುಖಕರವಾಗಿ) ಮಾಡಲ್ಪಟ್ಟ[2] ಸ್ಥಿರವಾದ ಆಸನವನ್ನು[3] ಸಿದ್ಧಪಡಿಸಿಕೊಂಡು ಅದರಲ್ಲಿ ಕುಳಿತು ಸ್ವಸ್ತಿಕ ಅಥವಾ ಪದ್ಮಾಸನವನ್ನು ಹಾಕಿಕೊಂಡು ಶರೀರ, ತಲೆ, ಕತ್ತುಗಳನ್ನು ನೆಟ್ಟಗೆ ಇಟ್ಟುಕೊಂಡು[4] ವಿಶ್ವನೇ ಮೊದಲಾದವರನ್ನು[5] ಕಾರ್ಯಕಾರಣವರ್ಜಿತನಾದ ಪೂರ್ಣಾತ್ಮನಲ್ಲಿ ಕ್ರಮವಾಗಿ ಲಯಮಾಡಿಕೊಂಡು ಪೂರ್ಣಾತ್ಮರೂಪದಿಂದ ನಿಂತವನಾಗಿ ಪುರದಲ್ಲಿ[6] ಇದ್ದುಕೊಂಡಿರುವ ಪೂರ್ಣಾನಂದಸ್ವರೂಪನೂ ನಿರಂಜನನೂ[7] ಹಿಂದುಮುಂದುಗಳಿಲ್ಲದವನೂ ಹಸಿವು (ಬಾಯಾರಿಕೆ) ಮುಂತಾದ (ಸಂಸಾರ)ಧರ್ಮಗಳ ಸಂಪರ್ಕವಿಲ್ಲದವನೂ ಹೊಸದಾಗಿ ಹುಟ್ಟದ ಹಾಗೂ ಮರೆಯಾಗದ (ನಿತ್ಯ)ಜ್ಞಾನರೂಪದಿಂದ ಇರುವವನೂ ಆದ ನೇತಿ ನೇತಿ ಎಂಬ (ಶ್ರುತಿವಾಕ್ಯದಿಂದ ತಿಳಿದುಬರುವ) ಲಕ್ಷಣವುಳ್ಳ ದೇವನಾದ ಪರಮಾತ್ಮನನ್ನು 'ಓಂ' ಎಂದು (ಚಿಂತಿಸಬೇಕು), ಮತ್ತು ಬ್ರಹ್ಮಾಂಡಪುರಾಣದ ಕಾವಷೇಯಗೀತೆಗಳಲ್ಲಿಯೂ - 'ಏತರಿಂದ ನೀನು ದುಃಖದಿಂದ ಬಿಡುಗಡೆಹೊಂದಿದವನಾಗುವೆಯೋ (ಆ ಯೋಗವನ್ನು) ಮೋಕ್ಷಪ್ರಾಪ್ತಿಗಾಗಿ ಮಾಡುವ ಪ್ರಯತ್ನವನ್ನು ಕೈಗೊಳ್ಳುವನಾಗು. ಓಂ (ಎಂಬ) ಶೂನ್ಯವಾದ[8] ಪರಮವಾದ ಪ್ರಧಾನವಾದ ಆನಂದಮಾತ್ರವಾದ ಪ್ರಣವ(ರೂಪವಾದ) ಬ್ರಹ್ಮವನ್ನು ಸೇವಿಸು' (?) ಎಂದು ಹೇಳಿದೆ. ಹೀಗೆ ಯೋಗಮಾಡುತ್ತಾ ಸದ್ರೂಪನಾದ (ತನ್ನ) ಆತ್ಮನನ್ನು ಪರಮಾತ್ಮನೆಂದು ಯಾವಾಗ ನೇರಾಗಿ ಅರಿಯುವನೋ ಆಗ ಅಜ್ಞಾನ ಮತ್ತು ಅದರ ಕಾರ್ಯವಾದ ಸಂಸಾರವನ್ನು ಕಳೆದುಕೊಂಡವನಾಗಿ ಶೋಕವನ್ನು ಹೋಗಲಾಡಿಸಿಕೊಂಡು ಕೃತಕೃತ್ಯನಾಗುವನು.

---

1. ಶ್ವೇ. ೨-೧೦ರ ಸೂಚನೆ. ಕುಳಿತುಕೊಳ್ಳುವದಕ್ಕೆ ಯೋಗ್ಯವಾಗಿದ್ದು ಭಯ, ಗದ್ದಲ- ಮುಂತಾದವುಗಳಿಲ್ಲದ ಏಕಾಂತಸ್ಥಳದಲ್ಲಿ- ಎಂದಭಿಪ್ರಾಯ.
2. ಗೀ. ೬-೧೧ರ ಸೂಚನೆ.
3. ಯೋ.ಸೂ. ೨-೪೬ನ್ನು ನೋಡಿ.
4. ಗೀ. ೬-೧೩ರ ಸೂಚನೆ.
5. ವಿಶ್ವತೈಜಸಪ್ರಾಜ್ಞ- ಆತ್ಮರುಗಳನ್ನು.
6. ಹೃದಯಾಕಾಶದಲ್ಲಿ.
7. ಪುಣ್ಯಪಾಪಗಳ ಅಂಟಿಲ್ಲದವನು.
8. ನಿರಾಕಾರವಾದ- ಎಂದಭಿಪ್ರಾಯವಿರಬಹುದು.

(ಭಾಷ್ಯ)

ತಥಾ ಚ ಬೃಹದಾರಣ್ಯಕೇ– 'ಆತ್ಮಾನಂ ಚೇದ್ ವಿಜಾನೀಯಾತ್ ಅಯಮಸ್ಮೀತಿ ಪೂರುಷಃ । ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನು ಸಂಜ್ವರೇತ್' (ಬೃ. ೪–೪– ೧೨) ಇತಿ । ತಥಾ ಚ ಈಶಾವಾಸ್ಯೇ 'ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ । ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ' (ಈ. ೭) ಇತಿ । ತಥಾ ಚ ಕಠವಲ್ಲೀಷು- 'ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾಹಿತಂ ಗಹ್ವರೇಷ್ಠಂ ಪುರಾಣಮ್ । ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ ಧೀರೋ ಹರ್ಷಶೋಕೌ ಜಹಾತಿ' (ಕಾ. ೧–೨–೧೨), 'ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' (ಕಾ. ೧–೩–೧೫) ಇತಿ । 'ಆನನ್ದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ' (ತೈ. ೨–೯) ಇತಿ । 'ಭಿದ್ಯತೇ ಹೃದಯಗ್ರನ್ಥಿಃ ಛಿದ್ಯನ್ತೇ ಸರ್ವಸಂಶಯಾಃ । ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ' (ಮುಂ. ೨–೨–೯) ತಥಾ ಚ ಆಹ ಭಗವಾನ್– 'ಅವ್ಯಕ್ತೋಽಯಮಚಿನ್ತ್ಯೋಽಯಮವಿಕಾರ್ಯೋಽ ಯಮುಚ್ಯತೇ । ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ' (ಗೀ. ೨–೨೫), 'ಏತದ್ ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ' (ಗೀ. ೧೫–೨೦) ಇತಿ ॥

(ಭಾಷ್ಯಾರ್ಥ)

ಮತ್ತು ಬೃಹದಾರಣ್ಯಕದಲ್ಲಿ– '(ಇಗೋ) ಇವನೇ ನಾನು– ಎಂದು ಪುರುಷನು ಆತ್ಮನನ್ನು ಅರಿತುಕೊಂಡನಾದರೆ ಏನನ್ನು ಇಚ್ಛಿಸುವವನಾಗಿ ಯಾರ ಕಾಮ ಕ್ಕಾಗಿ ಶರೀರವನ್ನು ಅನುಸರಿಸಿ ಸಂಜ್ವರಿತನಾದಾನು ?' ಎಂದಿದೆ. 'ಹಾಗೆಯೇ ಈಶಾವಾಸ್ಯದಲ್ಲಿ– ಎಲ್ಲಿ ಎಲ್ಲಾ ಭೂತಗಳೂ ತಿಳಿದವನಿಗೆ ಆತ್ಮನೇ ಆಯಿತೋ (ಅಲ್ಲಿ) ಎಲ್ಲವೂ ಒಂದೆಂಬುದನ್ನು ಕಂಡುಕೊಂಡವನಿಗೆ ಯಾವ ಮೋಹವು ? ಯಾವ ಶೋಕವು ?' (ಎಂದು ಹೇಳಿದೆ.) ಹಾಗೆಯೇ ಕಠವಲ್ಲಿಗಳಲ್ಲಿ– 'ಆ ದುರ್ದರ್ಶನಾದ ಗೂಢವನ್ನು ಹೊಕ್ಕಿರುವ ಗುಹಾಹಿತನಾದ ಗಹ್ವರದಲ್ಲಿರುವ ಪುರಾಣನಾದ ದೇವನನ್ನು ಅಧ್ಯಾತ್ಮಯೋಗದ ಪ್ರಾಪ್ತಿಯಿಂದ ತಿಳಿದುಕೊಂಡ ಧೀರನು ಹರ್ಷಶೋಕಗಳನ್ನು ಬಿಡುತ್ತಾನೆ', 'ಅವನನ್ನು ಅರಿತುಕೊಂಡರೆ ಮೃತ್ಯುವಿನ ಬಾಯಿಂದ ಬಿಡುಗಡೆಯಾಗುವನು', 'ಬ್ರಹ್ಮದ ಆನಂದವನ್ನು ತಿಳಿದವನು ಏತಕ್ಕೂ ಅಂಜುವದಿಲ್ಲ' ಎಂದು ಹೇಳಿದೆ. 'ಆ ಪರಾವರನನ್ನು ಕಂಡುಕೊಂಡರೆ ಹೃದಯಗ್ರಂಥಿಯು ಭೇದವಾಗುತ್ತದೆ ; ಸರ್ವಸಂಶಯಗಳೂ ಛೇದವಾಗುವವು. ಇವನ ಕರ್ಮಗಳೂ ಕ್ಷಯವಾಗುವವು' ಎಂದು (ಹೇಳಿದೆ) ಮತ್ತು ಭಗವಂತನುಕೂಡ – 'ಈತನು ಅವ್ಯಕ್ತನು ; ಈತನು ಅಚಿಂತ್ಯನು

ಅವಿಕಾರ್ಯನೆನಿಸಿರುತ್ತಾನೆ ; ಆದ್ದರಿಂದ ಈತನನ್ನು ಹೀಗೆಂದರಿತು ನೀನು ಶೋಕಿಸದಿರು', 'ಎಲೈ ಭಾರತನೆ, ಇದನ್ನರಿತುಕೊಂಡವನು ಬುದ್ಧಿವಂತನೂ ಕೃತಕೃತ್ಯನೂ ಆಗುವನು' ಎಂದು ಹೇಳಿರುತ್ತಾನೆ.

(ಭಾಷ್ಯ)

ತಥಾ ಕಾವಷೇಯಗೀತಾಸು–

" ಆತ್ಮಜ್ಞಃ[1] ಶೋಕಸಂತೀರ್ಣೋ ನ ಬಿಭೇತಿ ಕುತಶ್ಚನ |
ಮೃತ್ಯೋಃ ಸಕಾಶಾನ್ಮರಣಾದಥವಾಽನ್ಯಕೃತಾತ್ ಭಯಾತ್ ||
ನ ಜಾಯತೇ ನ ಮ್ರಿಯತೇ ನ ವಧ್ಯೋ ನ ಚ ಘಾತಕಃ |
ನ ಬದ್ಧೋ ಬನ್ಧಕಾರೀ ವಾ ನ ಮುಕ್ತೋ ನ ಚ ಮೋಕ್ಷದಃ ||
ಪುರುಷಃ ಪರಮಾತ್ಮಾಽಯಂ ಯತ್ತತೋಽನ್ಯದಸಚ್ಚ ತತ್ |
ಅಜ್ಞಾನಪಾಶೇ ನಿರ್ಭಿನ್ನೇ ಛಿನ್ನೇ ಮಹತಿ ಸಂಶಯೇ ||
ಶುಭಾಶುಭೇ ಚ ಸಂಕೀರ್ಣೇ ದಗ್ಧೇ ಬೀಜೇ ಚ ಜನ್ಮನಾಮ್ |
ಪ್ರಯಾತಿ ಪರಮಾನನ್ದಂ ತದ್ವಿಷ್ಣೋಃ ಪರಮಂ ಪದಮ್ " || ಇತಿ |

ತಥಾ ಚ ಆಹ ಭಗವಾನ್ ಮನುಃ—

" ಸರ್ವೇಷಾಮಪಿ ಚೈತೇಷಾಮಾತ್ಮಜ್ಞಾನಂ ಪರಂ ಸ್ಮೃತಮ್ |
ತದ್ಧ್ಯಗ್ರ್ಯಂ ಸರ್ವವಿದ್ಯಾನಾಂ ಪ್ರಾಪ್ಯತೇ ಹ್ಯಮೃತಂ ತತಃ ||
ಏತದ್ಧಿ ಜನ್ಮಸಾಫಲ್ಯಂ ಬ್ರಾಹ್ಮಣಸ್ಯ ವಿಶೇಷತಃ |
ಪ್ರಾಪ್ಯೈತತ್ ಕೃತಕೃತ್ಯೋ ಹಿ ದ್ವಿಜೋ ಭವತಿ ನಾನ್ಯಥಾ " ||

ಇತಿ || (ಮನು. ೧೨-೮೫, ೯೩)

(ಭಾಷ್ಯಾರ್ಥ)

ಮತ್ತು ಕಾವಷೇಯಗೀತೆಗಳಲ್ಲಿ- 'ಆತ್ಮಜ್ಞನು ಶೋಕವನ್ನು ದಾಟಿದವನಾಗಿ ಏತಕ್ಕೂ ಅಂಜುವದಿಲ್ಲ. ಮೃತ್ಯುವಿನ ಸಾಮಿಪ್ಯಕ್ಕಾಗಲಿ, ಮರಣಕ್ಕಾಗಲಿ ಅಥವಾ ಮತ್ತೊಂದರಿಂದಾಗಬಹುದಾದ ಭಯದಿಂದಲಾಗಲಿ (ಹೆದರುವದಿಲ್ಲ) ; ಈ ಪುರುಷನು ಪರಮಾತ್ಮನೇ ; (ಆದ್ದರಿಂದ) ಹುಟ್ಟುವದಿಲ್ಲ, ಸಾಯುವದಿಲ್ಲ, ಕೊಲ್ಲಲ್ಪಡುವವನಿಲ್ಲ, ಕೊಲ್ಲುವವನೂ ಇಲ್ಲ, ಬಂಧನಮಾಡುವವನಾಗಲಿ, ಮುಕ್ತನಾಗಲಿ, ಮೋಕ್ಷವನ್ನು ಕೊಡುವವನಾಗಲಿ ಇಲ್ಲ, ಈ (ಆತ್ಮನಿಗಿಂತ) ಬೇರೆಯಾದದ್ದೆಲ್ಲವೂ ಅಸತ್ತು. ಅಜ್ಞಾನದ ಪಾಶವು ಕತ್ತರಿಸಲಾಗಿ ಮಹತ್ತಾದ ಸಂಶಯವು ನಾಶವಾಗಲಾಗಿ ಶುಭಾಶುಭಗಳೆಲ್ಲ ಚದರಿಹೋಗಲಾಗಿ ಹುಟ್ಟುಗಳ ಬೀಜವು ಸುಟ್ಟುಹೋಗಲಾಗಿ ಪರಮಾನಂದವನ್ನು ಹೊಂದಿ

1. ಆತ್ಮನಃ ಎಂಬ ಅಚ್ಚಿನಪಾಠವನ್ನು ಹೀಗೆ ತಿದ್ದಿಕೊಂಡಿದೆ.

ವಿಷ್ಣುವಿನ ಪರಮಪದವನ್ನು ಸೇರುವನು' ( ? ) ಎಂದು ಹೇಳಿದೆ. ಮತ್ತು ಪೂಜ್ಯನಾದ ಮನುವೂಕೂಡ– 'ಇವುಗಳೆಲ್ಲದರೊಳಗೆ[1] ಆತ್ಮಜ್ಞಾನವೇ ಹೆಚ್ಚಿನ ದೆಂದು ಸ್ಮರಿಸಲ್ಪಟ್ಟಿದೆ. ಅದೇ ಎಲ್ಲಾ ವಿದ್ಯೆಗ(ಳೊಳಗೆ) ಮೊದಲನೆಯದು. ಅದರಿಂದಲೇ ಅಲ್ಲವೆ ? ಅಮೃತ(ಮೋಕ್ಷ)ವು ಸಿಕ್ಕುವದು ? ಬ್ರಾಹ್ಮಣನಿಗೆ ವಿಶೇಷವಾಗಿ ಇದೇ ಜನ್ಮಸಾರ್ಥಕ್ಯವು ; ಇದನ್ನು[2] ಪಡೆದುಕೊಂಡು ದ್ವಿಜನೆನಿಸಿ ಕೃತಕೃತ್ಯನಾಗುವನು. ಬೇರೆ ರೀತಿಯಿಂದಲ್ಲ' ಎಂದು ಹೇಳಿರುತ್ತದೆ.

## ಜ್ಞಾನದಿಂದಲೇ ಮೋಕ್ಷವೆಂಬ ಚರ್ಚೆಯ ಉಪಸಂಹಾರ

(ಭಾಷ್ಯ)

ಯಸ್ಮಾತ್ ತದ್ವಿಜ್ಞಾನಾದೇವ ಪರಮಪುರುಷಾರ್ಥಪ್ರಾಪ್ತಿಃ ತಸ್ಮಾತ್ ತಮೇವ ಚ ಪರಮಾತ್ಮಾನಂ ಪೂರ್ಣಾನನ್ದಮ್ ಆತ್ಮತ್ವೇನ ಜಾನೀಯಾತ್ 'ಅಹಮಸ್ಮಿ' ಇತಿ ; ನ ಕಿಞ್ಚಿತ್ ಅನ್ಯಚ್ಚಿನ್ತಯೇತ್ । ತಥಾ ಚ ಶ್ರುತಿಃ 'ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ । ನಾನು ಧ್ಯಾಯಾದ್ ಬಹೂನ್ ಶಬ್ದಾನ್ ವಾಚೋ ವಿಗ್ಲಾಪನಂ ಹಿ ತತ್' (ಬೃ. ೪-೪-೨೧) ಇತಿ । 'ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮು ಞ್ಚಥ' (ಮುಂ. ೨-೨-೫) ಇತಿ । 'ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃ ಪರಂ ವೇದಿತವ್ಯಂ ಹಿ ಕಿಞ್ಚಿತ್' (ಶ್ವೇ. ೧-೧೨) ಇತಿ । ತಥಾ ಚ ಭಗವಾನ್ ವಾಸುದೇವಃ—

"ಸಂಕಲ್ಪಪ್ರಭವಾನ್ ಕಾಮಾಂಸ್ತ್ಯಕ್ತ್ವಾ ಸರ್ವಾನಶೇಷತಃ ।
ಮನಸೈವೇನ್ದ್ರಿಯಗ್ರಾಮಂ ವಿನಿಯಮ್ಯ ಸಮನ್ತತಃ ॥
ಶನೈಃ ಶನೈರುಪರಮೇದ್ ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಞ್ಚಿದಪಿ ಚಿನ್ತಯೇತ್ " ॥

(ಗೀ. ೬–೨೪, ೨೫)

ಇತಿ । ಏವಂ ಪ್ರಸಂಗಾತ್ ಸರ್ವಶಾಸ್ತ್ರಾರ್ಥಃ ಸಂಕ್ಷೇಪತಃ ಪ್ರದರ್ಶಿತಃ ॥

(ಭಾಷ್ಯಾರ್ಥ)

ಆ (ಬ್ರಹ್ಮ)ವಿಜ್ಞಾನದಿಂದಲೇ ಪರಮಪುರುಷಾರ್ಥಪ್ರಾಪ್ತಿಯು (ಉಂಟಾ ಗುತ್ತದೆಯಾಗಿ) ಆ ಪೂರ್ಣಾನಂದನಾದ ಪರಮಾತ್ಮನನ್ನೇ ಆತ್ಮನೆಂದರಿಯ ಬೇಕು. ನಾನಾಗಿರುತ್ತೇನೆ ಎಂದು (ಅರಿಯಬೇಕು) ಬೇರೇನನ್ನೂ ಸ್ವಲ್ಪವೂ ಚಿಂತಿಸಬಾರದು. ಶ್ರುತಿಯೂಕೂಡ– 'ಧೀರನಾದ ಬ್ರಾಹ್ಮಣನು ಆ (ಆತ್ಮ

1. ವೇದಾಭ್ಯಾಸ, ತಪಸ್ಸು– ಮುಂತಾದ ಎಲ್ಲಾ ಶುಭಕರ್ಮಗಳೊಳಗೆ.
2. ಆತ್ಮಜ್ಞಾನವನ್ನು.

ನನ್ನೇ) ಅರಿತುಕೊಂಡು ಪ್ರಜ್ಞೆಯನ್ನು ಮಾಡಿಕೊಳ್ಳಬೇಕು. ಬಹಳ ಶಬ್ದ ಗಳನ್ನು ಅನುಧ್ಯಾನಮಾಡಬಾರದು ; ಏಕೆಂದರೆ ಅದು ವಾಕ್ಕಿಗೆ ಶ್ರಮಕರವೇ ಆಗಿದೆ.' 'ಆ ಆತ್ಮನೊಬ್ಬನನ್ನೇ ಅರಿತುಕೊಳ್ಳಿರಿ ; ಬೇರೆಯ ಮಾತುಗಳನ್ನು ಬಿಡಿರಿ ; ಅಮೃತಕ್ಕೆ ಇದೇ ಸೇತು' ಎಂದೂ 'ಇದೇ ನಿತ್ಯವಾಗಿರುವ ಆತ್ಮನಲ್ಲಿ ರುವ ತಿಳಿಯಬೇಕಾದ (ವಸ್ತು). ಇದಕ್ಕಿಂತ ಹೆಚ್ಚಿನದು ತಿಳಿಯಬೇಕಾದದ್ದು ಏನೂ ಇರುವದಿಲ್ಲ' ಎಂದೂ (ಹೇಳುತ್ತಿದೆ) ಮತ್ತು ಭಗವಾನ್ ವಾಸುದೇವನೂ ಕೂಡ– 'ಸಂಕಲ್ಪಗಳಿಂದುಂಟಾದ ಕಾಮಗಳನ್ನು ಒಂದೂ ಉಳಿಯದಂತೆ ಎಲ್ಲವನ್ನೂ ಬಿಟ್ಟು ಮನಸ್ಸಿನಿಂದಲೇ ಇಂದ್ರಿಯಗಳ ಸಮೂಹವನ್ನು ಎಲ್ಲಾ ಕಡೆಯಿಂದಲೂ ಹಿಡಿತಕ್ಕೆ ತಂದುಕೊಂಡು ಧೃತಿಯಿಂದ ಹಿಡಿದ ಬುದ್ಧಿಯಿಂದ ಮೆಲ್ಲಮೆಲ್ಲನೆ ಹಿಂತಿರುಗಬೇಕು. ಮನಸ್ಸನ್ನು ಆತ್ಮನಲ್ಲಿರಿಸಿಕೊಂಡು ಏನನ್ನೂ ಚಿಂತಿಸದೆ ಇರಬೇಕು' ಎಂದು (ಹೇಳಿದ್ದಾನೆ.) ಹೀಗೆ ಸಂದರ್ಭ(ವಶ)ದಿಂದ ಎಲ್ಲಾ ಶಾಸ್ತ್ರಾರ್ಥವನ್ನೂ ಸಂಕ್ಷೇಪವಾಗಿ ತಿಳಿಸಿರುತ್ತದೆ.

## ಶ್ಲೋಕದ ವ್ಯಾಖ್ಯಾನ

(ಭಾಷ್ಯ)

ಅಥೇದಾನೀಂ ಪ್ರಕೃತಮನುಸರಾಮಃ । ಯಸ್ಮಾತ್ ಪ್ರಮಾದ ಏವ ಸರ್ವಾನರ್ಥಬೀಜಂ ತಸ್ಮಾತ್ ಪ್ರಮಾದಂ ವೈ ಮೃತ್ಯುಮ್ ಅಹಂ ಬ್ರವೀಮಿ ನ ಯಮಮ್ । ಯಮಂ ತು ಪುನಃ ಏಕೇ ವಿಷಯವಿಷಾನ್ಧಾಃ ಅವಿದ್ಯಾರೂಢಾಃ ಸ್ವಾತ್ಮವ್ಯತಿರೇಕೇಣ ದ್ವಿತೀಯಂ ಪಶ್ಯನ್ತಃ ಮೃತ್ಯುಮ್ ಅತಃ ಮಯೋಕ್ತಾತ್ ಮೃತ್ಯೋಃ ಪ್ರಮಾದಾಖ್ಯಾತ್ ಅನ್ಯಂ ಮೃತ್ಯುಮನ್ತರಂ ವೈವಸ್ವತಮ್ ಆಹುಃ ಆತ್ಮಾವಾಸಮ್ ಆತ್ಮನಿ ಬುದ್ಧೌ ವಸತೀತ್ಯಾತ್ಮಾವಾಸಃ ತಮ್ । ತಥಾ ಚ ಆಹ ಮನುಃ– 'ಯಮೋ ವೈವಸ್ವತೋ ರಾಜಾ[1] ಯಸ್ತವೈಷ ಹೃದಿ ಸ್ಥಿತಃ । ತೇನ ಚೇದವಿವಾದಸ್ತೇ ಮಾ ಗಙ್ಗಾಂ ಮಾ ಕುರೂನ್ ಗಮಃ' (ಮನು. ೮–೯೨) ಇತಿ । ಅಮೃತಮ್ ಅಮರಣಧರ್ಮಾಣಂ ಬ್ರಹ್ಮಚರ್ಯಂ ಬ್ರಹ್ಮಣಿ ಸ್ವಾತ್ಮಭೂತೇ ರಮಮಾಣಂ ಬ್ರಹ್ಮನಿಷ್ಠಮ್ ಇತ್ಯರ್ಥಃ । ಶ್ರೂಯತೇ ಕಠ ವಲ್ಲೀಷು– 'ಕಸ್ತಂ ಮದಾಮದಂ ದೇವಂ ಮದನ್ಯೋ ಜ್ಞಾತುಮರ್ಹತಿ' (ಕಾ. ೧–೨–೨೧) ಇತಿ । ಕಿಂ ಚ ಪಿತೃಲೋಕೇ ರಾಜ್ಯಮನುಶಾಸ್ತಿ ದೇವಃ । ಕಥ ಮನುಶಾಸ್ತಿ ? ಶಿವಃ ಸುಖಪ್ರದಃ ಶಿವಾನಾಂ ಪುಣ್ಯಕರ್ಮಣಾಮ್, ಅಶಿವಃ ಅಸುಖಪ್ರದಃ ಅಶಿವಾನಾಂ ಪಾಪಕರ್ಮಣಾಮ್ ॥

1. 'ದೇವಃ' ಎಂದು ಮನುಸ್ಮೃತಿಯ ಪಾಠ.

(ಭಾಷ್ಯಾರ್ಥ)

ಇನ್ನು ಈಗ ಪ್ರಕೃತ(ವಿಚಾರಕ್ಕೆ) ಬರೋಣ. ಪ್ರಮಾದವೇ ಎಲ್ಲಾ ಅನರ್ಥಗಳಿಗೂ ಕಾರಣವಾಗಿದೆಯಾಗಿ, ನಾನು ಪ್ರಮಾದವನ್ನೇ ಮೃತ್ಯುವೆಂದು ಹೇಳುವೆನು ಯಮನನ್ನಲ್ಲ. ವಿಷಯವಿಷದಿಂದ ಕುರುಡರಾದ, ಅವಿದ್ಯೆಯನ್ನು ಏರಿರುವ, ತನಗಿಂತ ಬೇರೆಯದನ್ನು ಕಾಣುತ್ತಿರುವ (ಅಜ್ಞರಾದ) ಕೆಲವರಾದರೋ, ಯಮನನ್ನು ಮೃತ್ಯುವೆಂದು, (ಎಂದರೆ) ನಾನು ಹೇಳಿವ ಪ್ರಮಾದವೆಂಬ ಹೆಸರಿನ ಮೃತ್ಯುವಿಗಿಂತ ಬೇರೊಂದು ಮೃತ್ಯುವನ್ನಾಗಿ- ಆತ್ಮಾವಾಸನಾದ ಆತ್ಮನಲ್ಲಿ ಎಂದರೆ ಬುದ್ಧಿಯಲ್ಲಿ ವಾಸಮಾಡುವದರಿಂದ ಆತ್ಮಾವಾಸನು-ವೈವಸ್ವತನೆಂಬ ಅವನನ್ನು- ಹೇಳುವರು.[1] ಮನುವೂಕೂಡ- 'ನಿನ್ನ ಹೃದಯದಲ್ಲಿರುವ ಈ ವೈವಸ್ವತರಾಜನಾದ ಯಮನೊಡನೆ ನಿನಗೆ ವಿವಾದವಿಲ್ಲದಿದ್ದರೆ ಗಂಗೆಯನ್ನು ಕುರಿತಾಗಲಿ ಕುರುಕ್ಷೇತ್ರಕ್ಕಾಗಲಿ ಹೋಗಬೇಡ' ಎಂದು ಹೇಳಿದ್ದಾನೆ. ಅಮೃತನೆಂದರೆ ಸಾವಿಲ್ಲದವನು ; ಬ್ರಹ್ಮಚರ್ಯನು ಎಂದರೆ ತನ್ನ ಆತ್ಮನೇ ಆಗಿರುವ ಬ್ರಹ್ಮದಲ್ಲಿ ರಮಿಸುತ್ತಿರುವ ಬ್ರಹ್ಮನಿಷ್ಠನೆಂದರ್ಥ. ಕಠವಲ್ಲಿಗಳಲ್ಲಿ- 'ಮದಾಮದಸ್ವರೂಪನಾದ ಆ ದೇವನನ್ನು ನನಗಿಂತ ಬೇರೆಯವನು ಯಾವನು ತಿಳಿದಾನು ?' ಎಂದು ಕೇಳಬರುತ್ತದೆ.[2] ಮತ್ತು ಆ ದೇವನು ಪಿತೃಲೋಕದಲ್ಲಿದ್ದುಕೊಂಡು ರಾಜ್ಯವನ್ನಾಳುತ್ತಿರುವನು. ಹೇಗೆ ಆಳುತ್ತಾನೆ ? ಎಂದರೆ ಶಿವರಿಗೆ ಎಂದರೆ ಪುಣ್ಯಕರ್ಮಿಗಳಿಗೆ ಶಿವನು- ಎಂದರೆ ಸುಖಪ್ರದನು. ಅಶಿವರಿಗೆ ಎಂದರೆ ಪಾಪಕರ್ಮಿಗಳಿಗೆ ಅಶಿವನು, ದುಃಖಪ್ರದನು- ಎಂದರ್ಥ.

## ಮೃತ್ಯುವಿನ ರೂಪಾಂತರಗಳು

(ಭಾಷ್ಯ)

ಏವಂ ತಾವತ್ 'ಪ್ರಮಾದಂ ವೈ ಮೃತ್ಯುಮ್' (೪) ಇತಿ ಮೃತ್ಯೋಃ ಸ್ವರೂಪಂ ನಿರ್ಧಾರಿತಮ್ । ಅಥ ಇದಾನೀಂ ತಸ್ಯೈವ ಕಾರ್ಯಾತ್ಮನಾ ಅವಸ್ಥಾನಂ ದರ್ಶಯತಿ ॥

---

1. ಇಲ್ಲಿ ಹೃದಯದೊಳಗಿರುವ ಯಮನೆಂದರೆ ಪರಮಾತ್ಮನೆಂದೇ ಅಭಿಪ್ರಾಯ. ತನಗಿಂತ ಬೇರೆಯಾಗಿ ಬ್ರಹ್ಮವನ್ನು ತಿಳಿಯುವವನು ಮೃತ್ಯುವಶನಾಗುವನು ಎಂಬ ಅರ್ಥವನ್ನು ಇಲ್ಲಿ ತೆಗೆದಿದೆ. 'ಮೃತ್ಯೋಃ ಸ ಮೃತ್ಯುಮಾಪ್ನೋತಿ' (ಕಾ. ೪-೧೧) ಎಂಬ ವಾಕ್ಯವನ್ನು ನೋಡಿರಿ. ಮನುಸ್ಮೃತಿವಾಕ್ಯವೂ ಇದನ್ನೇ ಸಮರ್ಥಿಸುತ್ತದೆ.

2. ವೈವಸ್ವತಯಮನು ಬ್ರಹ್ಮಜ್ಞಾನಿಯು, ಬ್ರಹ್ಮವಿದ್ಯಾಚಾರ್ಯನೂ ಹೌದು. ಇವನು ಪರಮಾತ್ಮನ ಅಪ್ಪಣೆಯಂತೆ ಯಮನ ಸ್ಥಾನದಲ್ಲಿ ನೇಮಿತನಾಗಿದ್ದು ತನ್ನ ಕಾರ್ಯವನ್ನು ನಿರ್ವಹಿಸುತ್ತಾನೆ. ಒಂದು ಮನ್ವಂತರಕಾಲದವರೆಗೆ ಇವನು ಆ ಸ್ಥಾನದಲ್ಲಿರುವನು. ಪರಮಾರ್ಥದೃಷ್ಟಿಯಿಂದ ಇವನು ಪರಮಾತ್ಮನೇ ಎಂದಭಿಪ್ರಾಯ.

(ಭಾಷ್ಯಾರ್ಥ)

ಈರೀತಿಯಾಗಿ 'ಪ್ರಮಾದವೇ ಮೃತ್ಯು' ಎಂದು ಮೃತ್ಯುವಿನ ಸ್ವರೂಪವನ್ನು ನಿಶ್ಚಯಿಸಿದ್ದಾಯಿತು. ಇನ್ನು ಈಗ ಅದನ್ನೇ ಕಾರ್ಯರೂಪದಿಂದ ಇರುವದನ್ನು ತೋರಿಸುತ್ತಾರೆ :—

**ಅಸ್ಯಾದೇಷ[1] ನಿಃಸರತೇ ನರಾಣಾಂ**
**ಕ್ರೋಧಃ ಪ್ರಮಾದೋ ಮೋಹ[2]ರೂಪಶ್ಚ ಮೃತ್ಯುಃ ||**
**ಅಹಂಗತೇನೈವ ಚರನ್ ವಿಮಾರ್ಗಾನ್ |**
**ನ ಚಾತ್ಮನೋ ಯೋಗಮುಪೈತಿ ಕಿಂಚಿತ್[3] || ೭ ||**

೭. ಈ (ಪ್ರಮಾದರೂಪನಾದ) ಮೃತ್ಯುವು ಮನುಷ್ಯರಿಗೆ ಅಹಂಕಾರರೂಪದಿಂದ ಮೊದಲು ಹೊರಬಂದು ಸಿಟ್ಟು, ಪ್ರಮಾದ, ಮೋಹ(ಗಳೆಂಬ) ರೂಪನಾಗುತ್ತಾನೆ. ಅಹಂರೂಪವನ್ನು ಹೊಂದಿದ (ಈ ಅಜ್ಞಾನದಿಂದ) ವಿಪರೀತವಾದ ಮಾರ್ಗಗಳಲ್ಲಿ ಸಂಚರಿಸುತ್ತಾ ಆತ್ಮನ ಯೋಗವನ್ನು ಸ್ವಲ್ಪವೂ ಹೊಂದದೆ ಇರುವನು.

(ಭಾಷ್ಯ)

ಯಃ ಪ್ರಮಾದಾಖ್ಯಃ ಅಜ್ಞಾನಮೃತ್ಯುಃ ಸಃ ಪ್ರಥಮಮ್ ಅಸ್ಯಾತ್ಮನಾ ಪರಿಣಮತೇ | ಅಸ್ಯಃ ಅಭಿಮಾನಾತ್ಮಕೋಽಹಙ್ಕಾರಃ | ತಥಾ ಚೋಕ್ತಮ್– 'ಸರ್ವಾರ್ಥಾಕ್ಷೇಪಸಂಯೋಗಾತ್ ಅಸುಧಾತುಸಮನ್ವಯಾತ್ | ಅಸ್ಯ ಇತ್ಯುಚ್ಯತೇ ಘೋರೋ ಹ್ಯಹಂಕಾರೋ ಗುಣೋ ಮಹಾನ್' (?) ಇತಿ | ಏವಮ್ ಅಹಂಕಾರಾತ್ಮನಾ ಸ್ಥಿತ್ವಾ ತತೋ ಅಹಂಕಾರಾತ್ ನಿಃಸರತೇ ನಿರ್ಗಚ್ಛತಿ ಕಾಮಾತ್ಮನಾ | ತತಃ ಕಾಮಃ ಸ್ವವಿಷಯೇ ಪ್ರವರ್ತಮಾನಃ ಪ್ರತಿಹತಃ ಕ್ರೋಧಃ ಪ್ರಮಾದೋ ಮೋಹರೂಪಶ್ಚ ಭವತಿ | ತತಃ ಅಹಂಗತೇನ ಅಹಂರೂಪಮಾಪನ್ನೇನ ಅಹಂಕಾರಾದ್ಯಾತ್ಮನಾ ಅವಸ್ಥಿತೇನ ಅಜ್ಞಾನೇನ ತದಾತ್ಮಭಾವಮಾಪನ್ನಃ 'ಬ್ರಾಹ್ಮಣೋಽಹಮ್' 'ಕ್ಷತ್ರಿಯೋಽಹಮ್' ಕೃಶೋಽಹಮ್, ಸ್ಥೂಲೋಽಹಮ್, ಅಮುಷ್ಯ ಪುತ್ರಃ, ಅಸ್ಯ ನಪ್ತಾ, ಇತ್ಯೇವಮಾತ್ಮಕಃ ರಾಗದ್ವೇಷಾದಿಸಮನ್ವಿತಃ ಚರನ್ ವಿಮಾರ್ಗಾನ್ ಶ್ರೌತಸ್ಮಾರ್ತವಿಪರೀತಮಾರ್ಗಾನ್ ನ ಚಾತ್ಮನಃ ಪರಮಾತ್ಮನಃ ಯೋಗಂ ಸಮಾಧಿಲಕ್ಷಣಮ್ ಉಪೈತಿ ಕಿಞ್ಚಿದಪಿ | ಅಥವಾ ಅವಿದ್ಯಾಕಾಮಕರ್ಮಾಣಿ ಸಂಸಾರಸ್ಯ ಪ್ರಯೋಜಕಭೂತಾನಿ | ಪೂರ್ವತ್ರ ಮೋಹೋ ಮೃತ್ಯುಃ ಸಂಮತೋ ಯಃ

1. 'ಅಸ್ಯಾದೇಶಾತ್' 2. 'ಲೋಭ' 3. 'ಕಶ್ಚಿತ್'- ಎಂದು ಮಾ||ಭಾ|| ಪಾಠಗಳು.

ಇತ್ಯನೇನ ಅಗ್ರಹಣಾನ್ಯಥಾಗ್ರಹಣಾತ್ಮಿಕಾ ಅವಿದ್ಯೋಕ್ತಾ ; ಉತ್ತರತ್ರ ಕರ್ಮೋದಯೇ ಇತಿ ಕರ್ಮ ವಕ್ಷ್ಯತಿ ||

(ಭಾಷ್ಯಾರ್ಥ)

ಪ್ರಮಾದವೆಂಬ ಹೆಸರಿನ ಅಜ್ಞಾನ(ರೂಪ)ಮೃತ್ಯುವು ಮೊದಲು ಆಸ್ಯ ರೂಪದಿಂದ ಪರಿಣಮಿಸುತ್ತಾನೆ. ಆಸ್ಯವೆಂದರೆ ಅಭಿಮಾನಾತ್ಮಕವಾದ ಅಹಂಕಾರವು. ಹಾಗೆಂದು ಹೇಳಿಯೂ ಇದೆ- 'ಎಲ್ಲ ವಸ್ತುಗಳನ್ನೂ ಹೊರಪಡಿಸುವದರಿಂದಲೂ ಅಸುಧಾತುವಿನ ಅರ್ಥಕ್ಕೆ[1] ಹೊಂದುಗೆಯಾಗಿರುವದರಿಂದಲೂ ಘೋರಗುಣವಾದ ಅಹಂಕಾರವು ಆಸ್ಯವೆಂದು ಕರೆಯಲ್ಪಡುತ್ತದೆ' (?)[2] (ಎಂಬ ಶ್ಲೋಕದಿಂದ ಹೀಗೆ ಸಿದ್ಧವಾಗುತ್ತದೆ. ಹೀಗೆ ಅಹಂಕಾರರೂಪದಿಂದಿದ್ದುಕೊಂಡು ಅನಂತರ ಕಾಮವೆಂಬ ರೂಪದಿಂದ ಅಹಂಕಾರದಿಂದಲೇ ಹೊರಬರುತ್ತದೆ. ಅನಂತರ ತನ್ನ ವಿಷಯದಲ್ಲಿ ಪ್ರವರ್ತಿಸುವ ಕಾಮವು ತಡೆಯಲ್ಪಟ್ಟರೆ (ಅಡ್ಡಿಮಾಡಲ್ಪಟ್ಟರೆ) ಕ್ರೋಧ, ಪ್ರಮಾದ ಮತ್ತು ಮೋಹರೂಪದಿಂದ ಉಂಟಾಗುವದು.[3] ಅನಂತರ ಅಹಂಗತವಾದ- ಅಹಂರೂಪವನ್ನು ಹೊಂದಿದ- ಅಹಂಕಾರವೇ ಮುಂತಾದ ರೂಪದಿಂದಿರುವ ಅಜ್ಞಾನದೊಡನೆ ಸೇರಿ ಒಂದಾಗಿ 'ನಾನು ಬ್ರಾಹ್ಮಣನು', 'ನಾನು ಕ್ಷತ್ರಿಯನು', 'ನಾನು ಬಡಕಲಾಗಿದೇನೆ', 'ನಾನು ದಪ್ಪವಾಗಿದೇನೆ', 'ಇಂಥವನ ಮಗನು', 'ಇಂಥವನ ಮರಿಮಗನು'- ಎಂಬಿದೇ ರೂಪವಾದ ರಾಗದ್ವೇಷಾದಿಗಳಿಂದ ಕೂಡಿ ವಿಮಾರ್ಗಗಳನ್ನು- ಎಂದರೆ ಶ್ರೌತಸ್ಮಾರ್ತಗಳಿಗೆ ವಿರುದ್ಧವಾದ[4] ಮಾರ್ಗಗಳನ್ನು ಸಂಚರಿಸುತ್ತಾ ಆತ್ಮನ- ಎಂದರೆ ಪರಮಾತ್ಮನ ಸಮಾಧಿಲಕ್ಷಣವಾದ ಯೋಗವನ್ನು ಸ್ವಲ್ಪವೂ ಹೊಂದುವದಿಲ್ಲ ಅಥವಾ ಅವಿದ್ಯಾಕಾಮಕರ್ಮಗಳು ಸಂಸಾರಕ್ಕೆ ನಿಮಿತ್ತವಾಗಿರುವವುಗಳು. ಹಿಂದೆ 'ಮೋಹೋ ಮೃತ್ಯುಃ ಸಂಮತಃ' ಎಂಬುದರಿಂದ ಅಗ್ರಹಣ, ಅನ್ಯಥಾಗ್ರಹಣಗಳೆಂಬ ಅವಿದ್ಯೆಯು ಹೇಳಲ್ಪಟ್ಟಿತು. ಮುಂದೆ 'ಕರ್ಮೋದಯೇ' ಎಂಬಲ್ಲಿ (ಕಾಮಕರ್ಮಗಳನ್ನು) ಹೇಳುತ್ತಾರೆ-ಎಂದೂ (ಅರ್ಥಮಾಡಬಹುದು.)

(ಭಾಷ್ಯ)

ಅಥ ಇದಾನೀಂ ಕಾಮಃ ಅಭಿಧೀಯತೇ:| ಆಸ್ಯನ್ತೇ ಕ್ಷಿಪ್ಯನ್ತೇ ಅನೇನ ಸಂಸಾರೇ ಪ್ರಾಣಿನಃ ಇತ್ಯಾಸ್ಯಃ ಕಾಮಃ | ಅಥವಾ ಆಸ್ಯವದಾಸ್ಯಂ ಸರ್ವಜಗದ್ಗ್ರಸ್ತತ್ವಾತ್ | ತಥಾ ಚೋಕ್ತಂ ಭಗವತಾ- 'ಕಾಮ ಏಷಃ ಕ್ರೋಧ ಏಷಃ'

1. 'ಅಸು ಕ್ಷೇಪಣೇ' ಎಂದು ಧಾತುಪಾಠ.
2. ಈ ಶ್ಲೋಕವು ಎಲ್ಲಿಯದೆಂಬುದು ತಿಳಿಯಲಿಲ್ಲ.
3. ಗೀ. ೨-೬೨, ೬೩ರ ಸೂಚನೆ.
4. ಶ್ರುತಿಸ್ಮೃತಿರೂಪವಾದ ಶಾಸ್ತ್ರಮಾರ್ಗಕ್ಕೆ ವಿರುದ್ಧವಾದ.

(ಗೀ. ೩-೩೭) ಇತಿ । ಏಷ ಮೃತ್ಯುಃ ಆಸ್ಯಾತ್ಮನಾ ಕಾಮಾತ್ಮನಾ ಸ್ಥಿತ್ವಾ ತತಃ ಕ್ರೋಧಾತ್ಮನಾ ಪರಿಣಮತೇ । ಉಕ್ತಂ ಚ– 'ಕಾಮಾತ್ ಕ್ರೋಧೋಽಭಿಜಾಯತೇ' (ಗೀ. ೨-೬೨) ಇತಿ । ತತಃ ಅಹಂಗತೇನ ಅಹಂಕಾರಮಾಪನ್ನೇನ ಅಜ್ಞಾನೇನ ಅಹಂಕಾರಮಮಕಾರಫಲಕಾರೂಢೇನ ಚಿದಾಭಾಸೇನ ಚರನ್ ವಿಮಾರ್ಗಾನ್ ನ ಚ ಆತ್ಮನಃ ಯೋಗಮ್ ಉಪೈತಿ ಕಿಞ್ಚಿತ್ ॥

(ಭಾಷ್ಯಾರ್ಥ)

ಇನ್ನು ಈಗ ಕಾಮವನ್ನು ಹೇಳಲಾಗುತ್ತದೆ.[1] ಇವನಿಂದ ಪ್ರಾಣಿಗಳು ಸಂಸಾರಕ್ಕೆ ಅಸ್ಯನ್ತೇ– ಎಸೆಯಲ್ಪಡುತ್ತವೆ– ಆದ್ದರಿಂದ ಆಸ್ಯನೆಂದರೆ **ಕಾಮನು.** ಅಥವಾ ಮುಖದಂತಿರುವವನು– ಏಕೆಂದರೆ ಎಲ್ಲವನ್ನೂ ತಿನ್ನುತ್ತಾನಾದ್ದರಿಂದ (ಎಂದೂ ಅರ್ಥಮಾಡಬಹುದು). ಭಗವಂತನೂಕೂಡ– 'ಇವನೇ ಕಾಮನು, ಇವನೇ ಕ್ರೋಧವು'[2] ಎಂದು ಹೇಳಿದ್ದಾನೆ. ಈ ಮೃತ್ಯುವು ಆಸ್ಯಾತ್ಮನಾಗಿ ಎಂದರೆ ಕಾಮರೂಪದಿಂದಿದ್ದುಕೊಂಡು ಅನಂತರ ಕ್ರೋಧವಾಗಿ ಪರಿಣಮಿಸುತ್ತಾನೆ. 'ಕಾಮದಿಂದ ಕ್ರೋಧವುಂಟಾಗುತ್ತದೆ' ಎಂದು ಹೇಳಿಯೂ ಇದೆ. ಅನಂತರ ಅಹಂಕಾರರೂಪವಾಗಿ ಪರಿಣಮಿಸಿದ ಅಜ್ಞಾನದಿಂದ ಎಂದರೆ ನಾನು, ನನ್ನದು– ಎಂಬ ಉಪಾಧಿರೂಪವಾಗಿ ತೋರಿಕೊಂಡ ಚಿದಾಭಾಸದಿಂದ ವಿಮಾರ್ಗಗಳನ್ನು ಸುತ್ತುತ್ತಾ (ಪರ)ಮಾತ್ಮನ ಯೋಗವನ್ನು ಸ್ವಲ್ಪವೂ ಹೊಂದುವದಿಲ್ಲ.

## ಮೃತ್ಯುವಶರಾದವರಿಗೆ ಸಂಸಾರವೇ ಗತಿ

**ತೇ ಮೋಹಿತಾಃ ತದ್ವಶೇ ವರ್ತಮಾನಾಃ**
**ಇತಃ ಪ್ರೇತಾಸ್ತತ್ರ ಪುನಃ ಪತನ್ತಿ ।**
**ತತಸ್ತಂ[3] ದೇವಾ ಅನು ಪರಿಪ್ಲವನ್ತೇ[4]**
**ಅತೋ ಮೃತ್ಯುಂ[5] ಮರಣಾದ[6]ಭ್ಯುಪೈತಿ** ॥ ೮ ॥

೮. ಅವರು ಮೋಹಿತರಾಗಿ ಅವನ (ಮೃತ್ಯುವಿನ) ವಶದಲ್ಲಿರುವವರಾಗಿ ಇಲ್ಲಿಂದ ಹೋದಮೇಲೆ ಮತ್ತೆ ಹಿಂತಿರುಗಿಬರುವರು. ಅನಂತರ ಅವನನ್ನು ಇಂದ್ರಿಯಗಳು ಸುತ್ತುಗಟ್ಟುವವು, ದರಿಂದ ಅ ಮೃತ್ಯುವನ್ನು

1. ಆಸ್ಯಶಬ್ದಕ್ಕೆ ಅಹಂಕಾರವೆಂಬರ್ಥದ ಬದಲು ಕಾಮವೆಂದು ಅರ್ಥಮಾಡಿ ವ್ಯಾಖ್ಯಾನಮಾಡಲಾಗುತ್ತದೆ– ಎಂದಭಿಪ್ರಾಯ.

2. ಮಹಾಶನನು, ಮಹಾಪಾಪಿಯು– ಎಂದು ಸೇರಿಸಿಕೊಳ್ಳಬೇಕು.

3. 'ತಾನ್' 4. 'ವಿಪ್ಲವನ್ತೇ'

5. 'ಮೃತ್ಯುಃ' 6. 'ಮರಣಾಖ್ಯಾಮ್'– ಎಂದು ಮ॥ ಭಾ॥ ಪಾ॥

(ಪಡೆಯುವವನು). ಮರಣದ ನಂತರ (ಜನ್ಮಾಂತರವನ್ನು ಮತ್ತೆ) ಪಡೆಯುವವನು.

(ಭಾಷ್ಯ)

ಕಿಂ ಚ- ತೇನ ಅಹಂಕಾರಾದಿರೂಪೇಣ ಪರಿಣತಾಜ್ಞಾನೇನ ತೇ ಮೋಹಿತಾಃ ದೇಹಾದಿಷು ಆತ್ಮಭಾವಮ್ ಆಪಾದಿತಾಃ ತದ್ವಶೇ ಅಹಂಕಾರಾದ್ಯಾತ್ಮನಾ ಪರಿಣತಪ್ರಮಾದಾಖ್ಯಮೃತ್ಯುವಶೇ ವರ್ತಮಾನಾಃ ಇತಃ ಅಸ್ಮಾತ್ ಪ್ರೇತಾ ಧೂಮಾದಿಮಾರ್ಗೇಣ ಗತ್ವಾ ತತ್ರ ಪರಲೋಕೇ ಯಾವತ್ ಸಂಪಾತಮುಷಿತ್ವಾ ಪುನಃ ಆಕಾಶವಾಯುವೃಷ್ಟಿಸಸ್ಯಾನ್ನಶುಕ್ಲಶೋಣಿತಾದಿಕ್ರಮೇಣ ದೇಹಗ್ರಹಣಾಯ ಪತನ್ತಿ ನಿಪತನ್ತಿ । ಶ್ರೂಯತೇ ಚ- 'ತಸ್ಮಿನ್ ಯಾವತ್ಸಂಪಾತಮುಷಿತ್ವಾ ಅಥೈತಮೇವ ಅಧ್ವಾನಂ ಪುನರ್ನಿವರ್ತನ್ತೇ' (ಛಾಂ. ೫-೧೦-೫) ಇತಿ । ತತಃ ಅನನ್ತರಂ ಪುನಃ ದೇಹಗ್ರಹಣಾವಸ್ಥಾಯಾಂ ತಂ ದೇವಾ ಇನ್ದ್ರಿಯಾಣಿ ಅನುಸೃತ್ಯ ಕರ್ಮಾಣಿ ಪರಿ ಸಮನ್ತಾತ್ ಪ್ಲವನ್ತೇ ಸಮನ್ತತಃ ಪರಿವರ್ತನ್ತೇ ಇತ್ಯರ್ಥಃ । ಅತಃ ಅಸ್ಮಾತ್ ಕಾರಣಾತ್ ಇನ್ದ್ರಿಯಗುಣಾನುಸರಣಾತ್ ಮೃತ್ಯುಂ ಮರಣಂ ಯಾತಿ । ತತೋ ಮರಣಾತ್ ಜನ್ಮಾನ್ತರಮ್ ಅಭ್ಯುಪೈತಿ । ತತೋ ಮೃತ್ಯುಮ್ [1] ಏವಂ ಜನನಮರಣಪ್ರಬನ್ಧಾಧಿರೂಢೋ ನ ಕದಾಚಿತ್ ವಿಮುಚ್ಯತೇ ಇತ್ಯರ್ಥಃ। ಆತ್ಮಾಜ್ಞಾನನಿಮಿತ್ತತ್ವಾತ್ ಸಂಸಾರಸ್ಯ ಯಾವತ್ ಪರಮಾತ್ಮಾನಮಾತ್ಮತ್ವೇನ ಸಾಕ್ಷಾತ್ ನ ವಿಜಾನಾತಿ ತಾವದಯಂ ತಾಪತ್ರಯಾಭಿಭೂತಃ ಮಕರಾದಿಭಿರಿವ ರಾಗಾದಿಭಿಃ ಇತಸ್ತತಃ ಸಮಾಕೃಷ್ಯಮಾಣಃ ಮೋಮುಹ್ಯಮಾನಃ ಸಂಸರನ್ ಅವತಿಷ್ಠತೇ ಇತ್ಯರ್ಥಃ ॥

(ಭಾಷ್ಯಾರ್ಥ)

ಮತ್ತು ಅಹಂಕಾರಾದಿಗಳ ರೂಪದಿಂದ ಪರಿಣಮಿಸಿದ ಅಜ್ಞಾನದಿಂದ ಅವರು ಮೋಹಿತರಾಗಿ- ಎಂದರೆ ದೇಹಾದಿಗಳಲ್ಲಿ ತಾನೆಂಬ ಭಾವವನ್ನು ಹೊಂದಿದವರಾಗಿ ಅಹಂಕಾರಾದಿರೂಪದಿಂದ ಪರಿಣಮಿಸಿದ ಯಾವ ಪ್ರಮಾದವೆಂಬ ಮೃತ್ಯುವುಂಟೋ ಅದರ ವಶದಲ್ಲಿ ಇದ್ದುಕೊಂಡವರಾಗಿ ಇಲ್ಲಿಂದ ಈ (ಲೋಕದಿಂದ ಬಿಟ್ಟಿದ್ದವರಾಗಿ ಧೂಮಾದಿಮಾರ್ಗದಿಂದ ಹೋಗಿ ಅಲ್ಲಿ ಪರಲೋಕದಲ್ಲಿ ಕರ್ಮವು ಕ್ಷಯವಾಗುವವರೆಗೆ[2] ಇದ್ದುಕೊಂಡಿದ್ದು ಮತ್ತೆ ಆಕಾಶ, ವಾಯು, ಮಳೆ, ಪೈರು, ಅನ್ನ, ಶುಕ್ಲ, ಶೋಣಿತ- ಮುಂತಾದ ಕ್ರಮದಿಂದ ದೇಹವನ್ನು ಪಡೆಯುವದಕ್ಕಾಗಿ ಪತನ್ತಿ- ಕೆಳಗೆ ಬೀಳುತ್ತಾರೆ (ಹಿಂತಿರುಗುತ್ತಾರೆ.) 'ಅಲ್ಲಿ ಕರ್ಮವು ಕ್ಷಯವಾಗುವವರೆಗೂ ಇದ್ದು ಇನ್ನು ಇದೇ ದಾರಿಯಲ್ಲಿ ಮತ್ತೆ ಹಿಂತಿರುಗುವರು' ಎಂದು ಶ್ರುತಿಯೂ ಹೇಳುತ್ತಿದೆ. ಅನಂತರ ಮತ್ತೆ ದೇಹವನ್ನು

1. ಗೀ. ೮-೨೫ ರ ಸೂಚನೆ. 2. ಛಾಂ. ೫-೧೦-೫ ರ ಸೂಚನೆ.

ಹೊಂದುವ ಸ್ಥಿತಿಯಲ್ಲಿ ಅವನನ್ನು ದೇವತೆಗಳು ಎಂದರೆ ಇಂದ್ರಿಯಗಳು ಅನುಸರಿಸಿಕೊಂಡುಬರಲಾಗಿ ಕರ್ಮಗಳು ಪರಿ=ಸುತ್ತಲೂ ಪ್ಲವಂತೇ=ಎಲ್ಲೆಲ್ಲಿಯೂ ಸುತ್ತುಗಟ್ಟುತ್ತವೆ. ಆದ್ದರಿಂದ- ಈ ಕಾರಣದಿಂದ ಎಂದರೆ ಇಂದ್ರಿಯಗಳ ಗುಣಗಳನ್ನು ಅನುಸರಿಸಿದ್ದರಿಂದ ಮೃತ್ಯುವನ್ನು- ಮರಣವನ್ನು ಹೊಂದುತ್ತಾನೆ. ಆಮೇಲೆ ಮರಣದ ಅನಂತರ ಬೇರೊಂದು ಜನ್ಮವನ್ನೂ ಮತ್ತೆ ಮೃತ್ಯುವನ್ನೂ ಪಡೆಯುವನು. ಹೀಗೆ ಜನನಮರಣಗಳ ಸಾಲನ್ನು ಏರಿದವನಾಗಿ (ಸಂಸಾರ ಮಾಡುತ್ತಾ) ಯಾವಾಗಲೂ ಬಿಡುಗಡೆಯನ್ನು ಹೊಂದುವದೇ ಇಲ್ಲ. ಸಂಸಾರವು ಆತ್ಮನನ್ನರಿಯದ್ದರಿಂದ ಉಂಟಾಗಿರುವದರಿಂದ ಎಲ್ಲಿಯವರೆಗೆ ಪರಮಾತ್ಮನನ್ನು ತನ್ನ ಆತ್ಮನೆಂದು ನೇರಾಗಿ ಅರಿಯುವದಿಲ್ಲವೋ ಅಲ್ಲಿಯವರೆಗೂ ಇವನು ತಾಪತ್ರಯಗಳಿಂದ ಪೀಡಿತನಾಗಿ ಮೊಸಳೆಯೇ ಮುಂತಾದವುಗಳಂತೆ ಇರುವ ರಾಗಾದಿಗಳಿಂದ ಅಲ್ಲಿಂದಿಲ್ಲಿಗೆ ಎಳೆದಾಡಲ್ಪಡುತ್ತಾ ಮೋಹದಿಂದ ದಿಕ್ಕುಗಾಣದವನಾಗಿ ಸಂಸಾರಮಾಡುತ್ತಾ ಇದ್ದುಕೊಂಡಿರುತ್ತಾನೆ.

## ಕರ್ಮಗಳೂ ಬಂಧಕಾರಣಗಳೇ

**ಕರ್ಮೋದಯೇ ಕರ್ಮಫಲಾನುರಾಗಾಃ**
**ತತ್ರಾನುಯಾನ್ತಿ[1] ನ ತರನ್ತಿ ಮೃತ್ಯುಮ್ ।**
**ಸದರ್ಥಯೋಗಾನವಗಮಾತ್ ಸಮನ್ತಾತ್**
**ಪ್ರವರ್ತತೇ ಭೋಗಯೋಗೇನ ದೇಹೀ ॥ ೯ ॥**

೯. ಕರ್ಮಗಳು ತೋರಿಕೊಳ್ಳಲು ಕರ್ಮಫಲಗಳ ಆಶೆಯಿಂದ (ಅಜ್ಞರು) ಅದನ್ನು ಅನುಸರಿಸಿ ಹೋಗುತ್ತಾರೆ. ಆದ್ದರಿಂದ ಮೃತ್ಯುವನ್ನು ದಾಟುವದಿಲ್ಲ. ಸದರ್ಥಯೋಗವನ್ನರಿಯದ್ದರಿಂದ ದೇಹಿಯು ಭೋಗಯೋಗದಿಂದ ಪ್ರವರ್ತಿಸುತ್ತಾನೆ.

(ಭಾಷ್ಯ)

**ಏವಂ ತಾವತ್ ಅವಿದ್ಯಾಕಾಮಯೋಃ ಬನ್ಧಹೇತುತ್ವಮಭಿಹಿತಮ್ । ಅಥೇದಾನೀಂ ಕರ್ಮಣಾಂ ಬನ್ಧಹೇತುತ್ವಮಾಹ । 'ಅಮೃತ್ಯುಃ ಕರ್ಮಣಾ ಕೇಚಿತ್' ಇತಿ ಕರ್ಮಣಾ ಅಮೃತತ್ವಂ ಭವತಿ ಇತಿ ಯತ್ ಮತಾನ್ತರಮ್ ಉಪನ್ಯಸ್ತಮ್- ತನ್ನಿರಾಕರೋತಿ- ನ ಕೇವಲಂ ಕರ್ಮಣಾ ಅಮೃತತ್ವಂ ಭವತಿ, ಅಪಿ ತು ಕರ್ಮೋದಯೇ ಕರ್ಮಣಾಮ್ ಉತ್ಪತ್ತೌ ಕರ್ಮಫಲಾನುರಾಗಾಃ ಸನ್ತಃ ತತ್ರ ತಸ್ಮಿನ್ ಕರ್ಮಫಲೇ ಅನುಯಾನ್ತಿ । ಯಸ್ಮಾತ್ ತತ್ರೈವ ಅನುಯಾನ್ತಿ, ಅತಃ ನ ತರನ್ತಿ ಮೃತ್ಯುಂ ಪುನಃ ಪುನಃ ಜನನ**

---

1. **'ತತ್ರಾನು ತೇ ಯಾನ್ತಿ' ಎಂದು ಮ॥ ಭಾ॥ ಪಾಠ.**

ಮರಣಾತ್ಮಕೇ ಸಂಸಾರೇ ಪರಿವರ್ತನ್ತೇ ಇತ್ಯರ್ಥಃ | ಕಸ್ಮಾತ್ ಪುನಃ ಕರ್ಮೋದಯೇ ಕರ್ಮಫಲಾನುರಾಗಾಃ ತತ್ರೈವ ಪರಿವರ್ತನ್ತೇ ? ಸದರ್ಥಯೋಗಾನವಗಮಾತ್ ಸದರ್ಥೇನ ಯೋಗಃ ಸದರ್ಥಯೋಗಃ ಪರಮಾತ್ಮನಾ ಯೋಗಃ ತಸ್ಯ ಸದರ್ಥಯೋಗಸ್ಯ ಏಕತ್ವಸ್ಯ ಅನವಗಮಾತ್ ಸ್ವಾತ್ಮನಃ ಚಿದಾನನ್ದಾದ್ವಿತೀಯ ಬ್ರಹ್ಮಭಾವಾನವಗಮಾತ್ ಇತ್ಯರ್ಥಃ | ಸಮನ್ತಾತ್ ಸಮನ್ತತಃ ಪ್ರವರ್ತತೇ ಭೋಗಯೋಗೇನ ವಿಷಯರಸಬುದ್ಧ್ಯಾ ದೇಹೀ| ಯಥಾ ಹಿ ಅನ್ಧಃ ನಿಮ್ನೋನ್ನತ ಕಣ್ಟಕಸ್ಥಲಾದಿಷು ಪರಿಭ್ರಮತಿ ಏವಮ್ ಅಸಾವಪಿ ವಿವೇಕಹೀನಃ ಸರ್ವತ್ರ ವಿಷಯಸುಖಾಕಾಙ್ಕ್ಷಯಾ ಪರಿಭ್ರಮತಿ ||

(ಭಾಷ್ಯಾರ್ಥ)

ಈ ರೀತಿಯಾಗಿ ಅವಿದ್ಯಾಕಾಮಗಳು ಬಂಧಕ್ಕೆ ಕಾರಣಗಳೆಂಬುದನ್ನು ಹೇಳಿದ್ದಾಯಿತು. ಇನ್ನು ಈಗ ಕರ್ಮಗಳು ಬಂಧಕಾರಣಗಳೆಂಬುದನ್ನು ಹೇಳುತ್ತಾರೆ:-

'ಕರ್ಮದಿಂದಲೇ ಅಮೃತತ್ವವೆಂದು ಕೆಲವರು' ಎಂದು ಕರ್ಮದಿಂದ ಅಮೃತತ್ವವು ಉಂಟಾಗುವದೆಂದು ಒಂದು ಮತವನ್ನು ಹಿಂದೆ ಪ್ರಸ್ತಾಪಿಸಲಾಗಿತ್ತಷ್ಟೆ ? ಅದನ್ನು ಈಗ ನಿರಾಕರಣೆಮಾಡುತ್ತಾರೆ:- ಕೇವಲ ಕರ್ಮದಿಂದ ಅಮೃತತ್ವವುಂಟಾಗುವದಿಲ್ಲ. ಮತ್ತೇನೆಂದರೆ : ಕರ್ಮವು ತೋರಿಕೊಳ್ಳಲಾಗಿ ಎಂದರೆ ಕರ್ಮಗಳು ಉಂಟಾಗಲಾಗಿ ಕರ್ಮಫಲದಲ್ಲಿ ಆಶೆಯುಳ್ಳವರಾಗಿ ಅಲ್ಲಿ ಎಂದರೆ ಆ ಕರ್ಮಫಲದಲ್ಲಿ (ಆಶೆಯಿಂದ) ಅನುಸರಿಸಿಹೋಗುತ್ತಾರೆ. ಅದರಲ್ಲಿಯೇ ಹೋಗುತ್ತಾರಾದ್ದರಿಂದಲೇ ಮೃತ್ಯುವನ್ನು ದಾಟುವದಿಲ್ಲ. ಮತ್ತೆಮತ್ತೆ ಜನನ ಮರಣರೂಪವಾದ ಸಂಸಾರದಲ್ಲಿ ತಿರುಗುತ್ತಿರುವರು- ಎಂದಭಿಪ್ರಾಯ. ಕರ್ಮವು ತೋರಿಕೊಳ್ಳಲು ಕರ್ಮಫಲಾನುರಾಗದಿಂದ ಅಲ್ಲಿಯೇ ತಿರುಗಲು ಕಾರಣವಾದರೂ ಏನು ? ಎಂದರೆ ಸದರ್ಥಯೋಗವನ್ನು ಅರಿಯದ್ದರಿಂದ. ಸದರ್ಥದೊಡನೆ ಯೋಗವು ಎಂದರೆ ಪರಮಾತ್ಮನೊಡನೆ ಯೋಗವು ಸದರ್ಥಯೋಗವು. ಆ ಸದರ್ಥಯೋಗದ- ಏಕತ್ವದ ಅರಿವಿಲ್ಲದ್ದರಿಂದ- ಎಂದರೆ ತನ್ನ ಆತ್ಮನು ಚಿದಾನಂದಾದ್ವಿತೀಯಬ್ರಹ್ಮವೇ ಎಂಬ ತಿಳಿವಳಿಕೆಯಿಲ್ಲದ್ದರಿಂದ- ಎಂದರ್ಥ. ಸಮನ್ತಾತ್- ಸುತ್ತಲೂ ಭೋಗಯೋಗದಿಂದ- ಎಂದರೆ ವಿಷಯರಸ(ಸುಖ)ದಲ್ಲಿಯ ಅಭಿಲಾಷೆಯ ಬುದ್ಧಿಯಿಂದ ದೇಹಿಯು (ತೊಡಗುತ್ತಾನೆ). ಹೇಗೆ ಕುರುಡನು ತಗ್ಗು, ತಿಟ್ಟು, ಎತ್ತರ, ಮುಳ್ಳು- ಮುಂತಾದ ಸ್ಥಳಗಳಲ್ಲಿ (ದಾರಿಗಾಣದೆ ಹೇಗೆ ಸುತ್ತಾಡುತ್ತಾನೋ ಹಾಗೆಯೇ ಇವನೂಕೂಡ ವಿವೇಕರಹಿತನಾಗಿ ವಿಷಯ ಸುಖದ ಆಶೆಯಿಂದ ಎಲ್ಲೆಲ್ಲಿಯೂ ತಿರುಗುತ್ತಾನೆ.

ತದ್ವೈ ಮಹಾಮೋಹನಮಿನ್ದ್ರಿಯಾಣಾಂ
ಮಿಥ್ಯಾರ್ಥಯೋಗೇಽಸ್ಯ[1] ಗತಿರ್ಹಿ ನಿತ್ಯಾ ।
ಮಿಥ್ಯಾರ್ಥಯೋಗಾಭಿಹತಾನ್ತರಾತ್ಮಾ ।
ಸ್ಮರನ್ ಉಪಾಸ್ತೇ ವಿಷಯಾನ್ ಸಮನ್ತಾತ್ ॥೧೦॥

೧೦. ಅದೇ ಇಂದ್ರಿಯಗಳಿಗೆ ಮಹಾಮೋಹವು. (ಹೀಗೆ) ಸುಳ್ಳಾಗಿರುವ ವಿಷಯಗಳ ಸಂಬಂಧದಿಂದ ಇವನಿಗೆ ಸಂಸಾರಗತಿಯು ನಿತ್ಯವಾಗಿದೆ. ಮಿಥ್ಯಾರ್ಥಯೋಗದಿಂದ ಅಭಿಹತವಾದ (ಬ್ರಹ್ಮ)ಭಾವವುಳ್ಳವನಾಗಿ ವಿಷಯಗಳನ್ನು ಸುತ್ತಲೂ ಸ್ಮರಿಸುತ್ತಾ (ಅವುಗಳನ್ನೇ) ಚಿಂತಿಸುತ್ತಿರುವನು.

(ಭಾಷ್ಯ)

ಕಿಂ ಚ– ಯದ್ ರಾಗಾಭಿಭೂತಸ್ಯ ಇನ್ದ್ರಿಯಾಣಾಂ ವಿಷಯೇಷು ವರ್ತನಂ ತತ್ ಮಹಾಮೋಹನಮ್ । ಏತದುಕ್ತಂ ಭವತಿ– ಯಸ್ಯ ವಿಷಯೇಷು ಅವಾಸ್ತವಬುದ್ಧಿಃ ತಸ್ಯ ಇನ್ದ್ರಿಯಾಣಿ ವಿಷಯೇಷು ನ ಪ್ರವರ್ತನ್ತೇ । ತಸ್ಯ ವಿಷಯೇಷು ಪ್ರವೃತ್ತ್ಯಭಾವಾತ್ ಪ್ರತ್ಯಗಾತ್ಮನ್ಯೇವ ಪ್ರವೃತ್ತಿಃ, ತತಶ್ಚ ಮೋಹನ ನಿವೃತ್ತಿಃ । ಯಸ್ಯ ವಿಷಯೇಷು ವಾಸ್ತವಬುದ್ಧಿಃ ತಸ್ಯ ಇನ್ದ್ರಿಯಾಣಾಂ ಪರಾಗ್ಭೂತೇಷು ವಿಷಯೇಷು ಪ್ರವೃತ್ತತ್ವಾತ್ ನ ಸ ಇಮಂ ಸದದ್ವಿತೀಯಂ ಪ್ರತ್ಯಗ್ಭೂತಂ ಪರಮಾತ್ಮಾನಮ್ ಆತ್ಮತ್ವೇನ ಸಾಕ್ಷಾಜ್ಜಾನಾತಿ । ತಥಾ ಚೋಕ್ತಮ್– 'ಸ್ತ್ರೀಪಿಣ್ಡಸಂಪರ್ಕಕಲುಷೀಕೃತಚೇತಸೋ ವಿಷಯವಿಷಾನ್ಧಾ ಬ್ರಹ್ಮ ನ ಜಾನನ್ತಿ' (?) ಇತಿ । ತತಶ್ಚ ಮಹಾಮೋಹನಂ ಪುನಃ ಪುನಃ ವಿಷಯೇಷು ಪ್ರವೃತ್ತಿಃ । ತಥಾ ಚ ಆಹ ಭಗವಾನ್ ಮನುಃ 'ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ । ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ' (ಮನು. ೨–೯೪) ಇತಿ । ತತಶ್ಚ ಮಿಥ್ಯಾರ್ಥೈಃ ಅವಿದ್ಯಾ ಪರಿಕಲ್ಪಿತೈಃ ಶಬ್ದಾದಿವಿಷಯೈಃ ಯೋಗೋ ಭವತಿ; ತಸ್ಮಿನ್ ಮಿಥ್ಯಾರ್ಥ ಯೋಗೇ ಅಸ್ಯ ದೇಹಿನಃ ಗತಿಃ ಸಂಸಾರಗತಿಃ ನಿತ್ಯಾ ನಿಯತಾ । ಪ್ರಸಿದ್ಧಂ ಹ್ಯೇತತ್– ಸ್ವಾತ್ಮಭೂತಂ ಪರಮಾತ್ಮಾನಮನವಗಮ್ಯ ವಿಷಯೇಷು ಪ್ರವರ್ತ ಮಾನಾಃ ಪರಾಗ್ಭೂತಾಃ, ತಿರ್ಯಗಾದಿಯೋನಿಂ ಪ್ರಾಪ್ನುವನ್ತೀತಿ । ತಥಾ ಚ ಬಹ್ವೃಚಬ್ರಾಹ್ಮಣೋಪನಿಷತ್– 'ಯಾ ವೈ ತಾ ಇಮಾ ಪ್ರಜಾಃ ತಿಸ್ರಃ ಅತ್ಯಾಯಮಾಯನ್ ತಾನೀಮಾನಿ ವಯಾಂಸಿ ವಙ್ಗಾ ವಗಧಾಶ್ಚೇರಪಾದಾಃ' (ಐ.ಆ. ೨–೧–೧) ಇತಿ । ವಕ್ಷ್ಯತಿ ಚ– 'ಕಾಮಾನುಸಾರೀ ಪುರುಷಃ ಕಾಮಾನನು

1. '...ಯೋಗಸ್ಯ' ಪಾ॥ ಭಾ॥ ಪಾ॥

ವಿನಶ್ಯತಿ' (೧೨) ಇತಿ | ಕಸ್ಮಾತ್ ಪುನಃ ಮಿಥ್ಯಾರ್ಥಯೋಗೇಽಸ್ಯ ಗತಿರ್ಹಿ ನಿತ್ಯಾ ಇತಿ ? ತತ್ರಾಹ 'ಮಿಥ್ಯಾರ್ಥಯೋಗಾಭಿಹತಾನ್ತರಾತ್ಮಾ' ಇತಿ | ಮಿಥ್ಯಾಭೂತವಿಷಯಸಂಯೋಗೇನ ಅಭಿಹತಾನ್ತರಾತ್ಮಾ ಅಭಿಹತಸ್ವಾಭಾವಿಕ ಬ್ರಹ್ಮಾತ್ಮಭಾವಃ ಸ್ಮರನ್ ಸ್ತ್ರ್ಯಾದಿವಿಷಯಾನ್ ತಾನೇವ ಉಪಾಸ್ತೇ, ನ ಪರಮಾತ್ಮಾನಂ ಸಮನ್ತಾತ್ ಸಮನ್ತತಃ ||

(ಭಾಷ್ಯಾರ್ಥ)

ಮತ್ತು ರಾಗದಿಂದ ಮರೆಮಾಡಲ್ಪಟ್ಟ (ಆತ್ಮವುಳ್ಳವನಿಗೆ)[1] ವಿಷಯಗಳಲ್ಲಿ ಇಂದ್ರಿಯಗಳ ವ್ಯಾಪಾರವೆಂಬುದು ಮಹಾಮೋಹನವು. ಇಷ್ಟನ್ನು ಹೇಳಿದಂತಾಗಿದೆ ಯಾವನಿಗೆ ವಿಷಯಗಳಲ್ಲಿ ಅನೃತಬುದ್ಧಿಯಿರುವದೋ ಅವನ ಇಂದ್ರಿಯಗಳು ವಿಷಯಗಳಲ್ಲಿ ಪ್ರವರ್ತಿಸುವದಿಲ್ಲ. ಅವನಿಗೆ ವಿಷಯಗಳಲ್ಲಿ ಪ್ರವೃತ್ತಿಯಿಲ್ಲವಾದ್ದರಿಂದ ಪ್ರತ್ಯಗಾತ್ಮನಲ್ಲೇ ಪ್ರವೃತ್ತಿಯುಂಟಾಗುತ್ತದೆ. ಅದರಿಂದ ಮೋಹನನಿವೃತ್ತಿಯಾಗುವದು. (ಆದರೆ) ಯಾವನಿಗೆ ವಿಷಯಗಳಲ್ಲಿ ಸತ್ಯವಾದ ಬುದ್ಧಿಯಿರುವದೋ ಅವನ ಇಂದ್ರಿಯಗಳಿಗೆ ಹೊರಗಿನ ವಿಷಯಗಳಲ್ಲಿ ಪ್ರವೃತ್ತಿಯಾಗುವದರಿಂದ ಅವನು ಈ ಸದ್ರೂಪನೂ ಅದ್ವಿತೀಯನೂ ಒಳಗಿರುವವನೂ ಆದ ಪರಮಾತ್ಮನನ್ನು ಆತ್ಮನೆಂದು ನೇರಾಗಿ ತಿಳಿಯುವದಿಲ್ಲ. 'ಸ್ತ್ರೀಶರೀರದ ಸಂಬಂಧದಿಂದ ಕದಡಿದ ಮನಸ್ಸಿನವರಾಗಿ ವಿಷಯವಿಷದಿಂದ ಕುರುಡರಾದವರು ಬ್ರಹ್ಮವನ್ನು ಅರಿಯಲಾರರು'[2] (?) ಎಂದು ಹೇಳಿಯೂ ಇದೆ. ಅನಂತರ ಮತ್ತೆ ಮತ್ತೆ ವಿಷಯಗಳಲ್ಲಿ ಪ್ರವೃತ್ತಿರೂಪವಾದ ಮಹಾಮೋಹವು (ಉಂಟಾಗುವದು.) ಪೂಜ್ಯನಾದ ಮನುವೂಕೂಡ- 'ವಿಷಯಗಳ ಉಪಭೋಗದಿಂದ ಕಾಮವು ಯಾವಾಗಲೂ ತಣ್ಣಗಾಗುವದಿಲ್ಲ. ಹವಿಸ್ಸಿನಿಂದೆದ್ದುರಿಯುವ ಬೆಂಕಿಯಂತೆ ಮತ್ತೆ ಬೆಳೆಯುತ್ತಲೇ ಇರುತ್ತದೆ' ಎಂದು ಹೇಳಿದ್ದಾನೆ. ಅನಂತರ ಅವಿದ್ಯಾಪರಿಕಲ್ಪಿತವಾದ ಸುಳ್ಳುವಿಷಯಗಳಾದ ಶಬ್ದವೇ ಮುಂತಾದವುಗಳೊಡನೆ ಸಂಬಂಧವಾಗುತ್ತದೆ. ಆ ಮಿಥ್ಯಾವಸ್ತುಗಳ ಸಂಬಂಧದಿಂದ ದೇಹಿಯಾದ ಇವನ ಸಂಸಾರ ಗತಿಯು ನಿತ್ಯವು ಎಂದರೆ ನಿಯತವು. ತನ್ನ ಆತ್ಮನೇ ಆಗಿರುವ ಪರಮಾತ್ಮನನ್ನರಿಯದೆ ವಿಷಯಗಳಲ್ಲಿ ತೊಡಗಿರುವವನು ಪರಾಭವವನ್ನು ಹೊಂದಿ ತಿರ್ಯಕ್ (ಜಂತುಗಳೇ) ಮೊದಲಾದ ಜನ್ಮವನ್ನು ಪಡೆಯುತ್ತಾರೆಂಬುದು ಪ್ರಸಿದ್ಧವೂ ಆಗಿದೆ. ಬಹ್ವೃಚಬ್ರಾಹ್ಮಣೋಪನಿಷತ್ತಿನಲ್ಲಿಯೂ ಸಹ- 'ಯಾವ ಆ ಪ್ರಜೆಗಳಿದ್ದಾರೋ ಇವರು ಮೂವರು ಎಂದರೆ ಹಕ್ಕಿಗಳು, ವಂಗವಗಧಗಳು, ಚೇರಪಾದಗಳು- ಇವು ಪರಾಭೂತವಾದವು'[3] ಎಂದು ಹೇಳಿದೆ. 'ಕಾಮಗಳನ್ನು ಹಿಂಬಾಲಿಸಿದ

1. ವಿಷಯಾಸಕ್ತನಿಗೆ.
2. ಈ ವಾಕ್ಯದ ಮೂಲವು ಯಾವದೆಂಬುದು ತಿಳಿದಿಲ್ಲ.
3. ಐದನೆಯ ಶ್ಲೋಕದ ಭಾಷ್ಯದಲ್ಲಿಯೂ ಇದೇ ಶ್ರುತಿಯನ್ನು ಉದಾಹರಿಸಿದೆ.

ಪುರುಷನು ಕಾಮುಗಳೊಡನೆ ನಾಶವಾಗುತ್ತಾನೆ' (೧೩) ಎಂದು ಮುಂದೆ (ಸನತ್ಸು ಜಾತನೂ) ಹೇಳುತ್ತಾನೆ. ಮಿಥ್ಯಾವಸ್ತುಗಳ ಸಂಯೋಗದಿಂದ ಇವನಿಗೆ (ಸಂಸಾರ ದಲ್ಲಿಯೇ) ನಿತ್ಯವಾದ ಗತಿಯೆಂಬುದಕ್ಕೆ ಕಾರಣವೇನು ? ಎಂದರೆ ಹೇಳುತ್ತಾನೆ : ಮಿಥ್ಯಾರ್ಥಯೋಗಾಭಿಹತಾಂತರಾತ್ಮನಾಗಿರುವದರಿಂದ – ( ಎಂದಭಿಪ್ರಾಯ. ) ಸುಳ್ಳಾಗಿರುವ ವಿಷಯಗಳ ಸಂಯೋಗದಿಂದ ಅಭಿಹತಾಂತರಾತ್ಮನಾಗಿ ಎಂದರೆ ತಿರಸ್ಕರಿಸಲ್ಪಟ್ಟ ಸ್ವಾಭಾವಿಕಬ್ರಹ್ಮಾತ್ಮಭಾವನಾಗಿ ಸ್ತ್ರೀ– ಮುಂತಾದ ವಿಷಯ ಗಳನ್ನು ನೆನೆಯುತ್ತಾ ಅವುಗಳನ್ನೇ ಚಿಂತಿಸುತ್ತಿರುತ್ತಾನೆ ; ಎಲ್ಲೆಲ್ಲೂ ವ್ಯಾಪಿಸಿರುವ ಪರಮಾತ್ಮನನ್ನು (ಚಿಂತಿಸುವದಿಲ್ಲ.)

(ಭಾಷ್ಯ)

ತತಃ ಕಿಮಿತಿ ಚೇತ್ ತತ್ರ ಯದ್ಭವತಿ ತತ್ ಶೃಣು–

(ಭಾಷ್ಯಾರ್ಥ)

ಅದರಿಂದೇನು ? ಎಂದರೆ ಅದರಿಂದೇನಾಗುವದೆಂಬುದನ್ನು ಕೇಳು :—

## ವಿಷಯಗಳ ಚಿಂತನೆಯೇ ಮೃತ್ಯುವಶನಾಗಲು ಕಾರಣ

ಅಭಿಧ್ಯಾ ವೈ ಪ್ರಥಮಂ ಹನ್ತಿ ಚೈನಂ[1]
ಕಾಮಕ್ರೋಧೌ ಗೃಹ್ಯ ಚೈನಂ ತು[2] ಪಶ್ಚಾತ್ ।
ಏತೇ ಬಾಲಾನ್ ಮೃತ್ಯವೇ ಪ್ರಾಪಯನ್ತಿ
ಧೀರಾಸ್ತು ಧೈರ್ಯೇಣ ತರನ್ತಿ ಮೃತ್ಯುಮ್ ॥ ೧೧ ॥

೧೧. ವಿಷಯಗಳ ಚಿಂತನೆಯು ಮೊದಲು ಇವನನ್ನು ದಾರಿ ತಪ್ಪಿಸುತ್ತದೆ. ಅನಂತರ ಕಾಮಕ್ರೋಧಗಳು ಇವನನ್ನು ಹಿಡಿಯುವವು. ಈ (ಮೂರೂ) ಮೂಢರನ್ನು ಮೃತ್ಯುವಿಗೆ ಎಸೆಯುವವು. ಧೀರರಾದರೊ, ಧೈರ್ಯದಿಂದ ಮೃತ್ಯುವನ್ನು ದಾಟುವರು.

(ಭಾಷ್ಯ)

ಅಭಿಧ್ಯಾ ವಿಷಯಾಭಿಧ್ಯಾನಂ ಪ್ರಥಮಮ್ ಹನ್ತಿ ವಿನಾಶಯತಿ ಸ್ವರೂಪಾತ್ ಪ್ರಚ್ಯುತಿಂ ಕರೋತಿ । ತತೋ ವಿಷಯಧ್ಯಾನಾಭಿಹತಮ್ ಏನಂ ವಿಷಯಸನ್ನಿಧೌ ಶೀಘ್ರಂ ಪ್ರಗೃಹ್ಯ ಕಾಮಶ್ಚ ಹನ್ತಿ, ತತಃ ಕಾಮಾಭಿ ಹತಮೇನಂ ಪ್ರಗೃಹ್ಯ ಕ್ರೋಧಶ್ಚ ಹನ್ತಿ । ತತ ಏತೇ ಅಭಿಧ್ಯಾದಯಃ ತಾನ್

1. 'ಲೋಕಾನ್' 2. 'ಕಾಮಕ್ರೋಧಾವನುಗೃಹ್ಯಾಶು' ಎಂದು ಮ॥ಭಾ॥ ಪಾಠ.

ಅಭಿಧ್ಯಾಕಾಮಕ್ರೋಧವಶಂ ಗತಾನ್ ಬಾಲಾನ್ ವಿವೇಕಹೀನಾನ್ ಮೂಢಾನ್ ಮೃತ್ಯವೇ ಪ್ರಾಪಯನ್ತಿ ಪ್ರಕ್ಷಿಪನ್ತಿ । ಶ್ರೂಯತೇ ಚ ಕಠವಲ್ಲೀಷು– 'ಪರಾಚಃ ಕಾಮಾನನುಯನ್ತಿ ಬಾಲಾಃ ತೇ ಮೃತ್ಯೋರ್ಯನ್ತಿ ವಿತತಸ್ಯ ಪಾಶಮ್ । ಅಥ ಧೀರಾ ಅಮೃತತ್ವಂ ವಿದಿತ್ವಾ ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯನ್ತೇ' (ಕಾ. ೨-೧-೨) ಇತಿ । ಧೀರಾಸ್ತು ಪುನಃ ಧೈರ್ಯೇಣ ವಿಷಯಾನ್ ಜಿತ್ವಾ ಪರಮಾತ್ಮಾನಮ್ ಆತ್ಮತ್ವೇನ ಅವಗಮ್ಯ ತರನ್ತಿ ಮೃತ್ಯುಮ್ । ಶ್ರೂಯತೇ ಚ– 'ನಿಚಾಯ್ಯ ತಂ ಮೃತ್ಯುಮುಖಾತ್ ಪ್ರಮುಚ್ಯತೇ' (ಕಾ. ೧-೩-೧೫) ಇತಿ॥

(ಭಾಷ್ಯಾರ್ಥ)

ಅಭಿಧ್ಯಾ– ಎಂದರೆ ವಿಷಯಗಳ ಚಿಂತನೆಯು ಮೊದಲು ಹನ್ತಿ– ಎಂದರೆ ನಾಶಮಾಡುತ್ತದೆ. ಸ್ವರೂಪದಿಂದ (ಇವನನ್ನು) ಜಾರಿಸಿಬಿಡುತ್ತದೆ. ಅನಂತರ ವಿಷಯಗಳ ಚಿಂತನೆಯಿಂದ ದಾರಿತಪ್ಪಿದ ಇವನನ್ನು ಕೂಡಲೇ ಹಿಡಿದು ಕಾಮವು ವಿಷಯಗಳ ಸಮೀಪಕ್ಕೆ ಒಯ್ದುಬಿಡುತ್ತದೆ. ಅನಂತರ ಕಾಮವಶನಾದ ಇವನನ್ನು ಹಿಡಿದುಕೊಂಡು ಕ್ರೋಧವು ನಾಶಗೊಳಿಸುತ್ತದೆ. ಅನಂತರ ಈ ಅಭಿಧ್ಯೆ ಮೊದಲಾದವುಗಳು ಅವರನ್ನು ಎಂದರೆ ಅಭಿಧ್ಯೆ ಕಾಮ-ಕ್ರೋಧಗಳಿಗೆ ವಶರಾದ ಬಾಲಕರಾದ- ವಿವೇಕವಿಲ್ಲದ ಮೂಢರನ್ನು ಮೃತ್ಯುವಿನ (ಬಳಿಗೆ) ಒಯ್ಯುವವು ; ಒಯ್ದು ಎಸೆಯುವವು. ಕಠವಲ್ಲಿಗಳಲ್ಲಿ– 'ಹೊರಮುಖವಾಗಿರುವ ಕಾಮಗಳನ್ನು ಬಾಲರು ಅನುಸರಿಸುತ್ತಿರುವರು ; ಅವರು ಹರಡಿಕೊಂಡಿರುವ ಮೃತ್ಯುವಿನ ಪಾಶವನ್ನು ಪಡೆಯುತ್ತಾರೆ. ಇನ್ನು ಧೀರರಾದವರು ಅಮೃತತ್ವವನ್ನು ಅರಿತುಕೊಂಡು ಅಧ್ರುವವಾದವುಗಳಲ್ಲಿ ಧ್ರುವವೆಂಬ (ಬುದ್ಧಿಮಾಡದೆ) ಬಯಸದೆಇರುತ್ತಾರೆ' ಎಂದು ಕೇಳಬರುತ್ತಿದೆ. ಆದರೆ ಧೀರರಾದರೊ, ಧೈರ್ಯದಿಂದ ವಿಷಯಗಳನ್ನು ಗೆದ್ದು ಪರಮಾತ್ಮನನ್ನು ಆತ್ಮನೆಂದು ಅರಿತು ಮೃತ್ಯುವನ್ನು ದಾಟುವರು. 'ಅದನ್ನು ಅರಿತುಕೊಂಡರೆ ಮೃತ್ಯುಮುಖದಿಂದ ಬಿಡುಗಡೆಯನ್ನು ಹೊಂದುವನು' ಎಂದು ಕೇಳಿಯೂ ಬರುತ್ತಿದೆ.

## ಜ್ಞಾನಿಯು ಮೃತ್ಯುವಿಗೆ ಮೃತ್ಯುವು

(ಭಾಷ್ಯ)

ಕಥಂ ಪುನಃ ಧೀರಾಸ್ತು ಧೈರ್ಯೇಣ ವಿಷಯಾನ್ ಜಿತ್ವಾ ಮೃತ್ಯುಂ ತರನ್ತೀತ್ಯಾಹ—

(ಭಾಷ್ಯಾರ್ಥ)

ಧೀರರಾದರೋ ಧೈರ್ಯದಿಂದ ವಿಷಯಗಳನ್ನು ಗೆದ್ದು ಮೃತ್ಯುವನ್ನು ಹೇಗೆ ದಾಟುತ್ತಾರೆ ?– ಎಂಬುದನ್ನು ಹೇಳುತ್ತಾರೆ :—

**ಯೋಽ[1]ಭಿಧ್ಯಾಯನ್ ಉತ್ಪತಿಷ್ಣೂನ್[2] ನಿಹನ್ಯಾತ್**
**ಅನಾಚಾರೇಣಾ[3]ಪ್ರತಿಬುಧ್ಯಮಾನಃ ।**
**ಸ ವೈ ಮೃತ್ಯುಂ[4] ಮೃತ್ಯುರಿವಾತ್ತಿ ಭೂತ್ವಾ**
**ಹ್ಯೇವಂ[5] ವಿದ್ವಾನ್ ಯೋಽಭಿಹನ್ತೀಹ[6] ಕಾಮಾನ್ ॥ ೧೨ ॥**

೧೨. ಯಾವನು (ಕಾಮಾದಿಗಳ ಅನಿತ್ಯತ್ವಾದಿದೋಷಗಳನ್ನು) ಚಿಂತಿಸುತ್ತಾ ಮೇಲಕ್ಕೆದ್ದ (ವಿಷಯಗಳನ್ನು) ಅನಾದರದಿಂದ ಮನಸ್ಸಿಗೆ ತಂದುಕೊಳ್ಳದೆ ಇರುವನೋ, ಹೀಗೆ ಯಾವನು ಕಾಮಗಳನ್ನು ನಾಶ ಗೊಳಿಸುವನೋ ಅವನೇ ಮೃತ್ಯುವಿಗೂ ಮೃತ್ಯುವಾಗಿ (ಅವನನ್ನೇ) ತಿನ್ನುವನು.

(ಭಾಷ್ಯ)

ಯಃ ಅಭಿಧ್ಯಾಯನ್ ಅನಿತ್ಯಾಶುಚಿದುಃಖಾನುವಿದ್ಧತಯಾ ಚಿನ್ತಯನ್ ಉತ್ಪತಿಷ್ಣೂನ್ ಉತ್ಪತ್ಯೋತ್ಪತ್ಯ ಪತನ್ತಿ ಇತ್ಯುತ್ಪತನಶೀಲಾ ಉತ್ಪತಿಷ್ಣವಃ ವಿಷಯಾಃ ತಾನ್ ನಿಹನ್ಯಾತ್ ಪರಿತ್ಯಜೇತ್ ಅನಾಚಾರೇಣ ಅನಾದರೇಣ ಔದಾಸೀನ್ಯೇನ ಅಮೇಧ್ಯದರ್ಶನ ಇವ ಅಪ್ರತಿಬುಧ್ಯಮಾನಃ ಪುನಃ ಅಚಿನ್ತಯನ್ ಸ ವೈ ಪುರುಷಃ ಮೃತ್ಯೋರಪಿ ಮೃತ್ಯುಃ ಭೂತ್ವಾ ಮೃತ್ಯುರಿವ ಅತ್ತಿ ಮೃತ್ಯುಮ್। ಉಕ್ತಂ ಚ– 'ವಿಷಯಪ್ರತಿಸಂಹಾರಂ ಯಃ ಕರೋತಿ ವಿವೇಕತಃ। ಮೃತ್ಯೋರ್ಮೃತ್ಯುರಿತಿ ಖ್ಯಾತಃ ಸ ವಿದ್ವಾನಾತ್ಮವಿತ್ ಕವಿಃ' (?) ಇತಿ ॥

(ಭಾಷ್ಯಾರ್ಥ)

ಯಾವನು ಅನಿತ್ಯ, ಅಶುಚಿ, ದುಃಖಮಿಶ್ರವಾಗಿರುವದರಿಂದ ಎದ್ದೆದ್ದು ಬೀಳುವ– ಉತ್ಪತನಸ್ವಭಾವಗಳಾದವುಗಳು ಉತ್ಪತಿಷ್ಣುಗಳು, ಆ ಉತ್ಪತಿಷ್ಣುಗಳಾದ ವಿಷಯಗಳನ್ನು ಚಿಂತಿಸುತ್ತಾ[7] ಅವುಗಳನ್ನು ಅನಾಚಾರದಿಂದ ಎಂದರೆ ಅನಾದರದಿಂದ, ಔದಾಸೀನ್ಯದಿಂದ ಹೋಗಲಾಡಿಸಿಕೊಳ್ಳುವನೋ – ಎಂದರೆ ಕೈಬಿಡುತ್ತಾನೋ ಅಮೇಧ್ಯವನ್ನು ಕಂಡರೆ ಹೇಗೋಹಾಗೆ ಅಪ್ರತಿಬುಧ್ಯಮಾನನಾಗಿ ಎಂದರೆ ಮತ್ತೆ ಆಲೋಚಿಸದೆ ಇರುವನೋ ಆ ಪುರುಷನೇ ಮೃತ್ಯುವಿಗೂ ಮೃತ್ಯುವೆನಿಸಿ ಮೃತ್ಯುವು (ಎಲ್ಲರನ್ನೂ ತಿನ್ನುವಂತೆ ಇವನು) ಮೃತ್ಯುವನ್ನೇ ತಿನ್ನುತ್ತಾನೆ.[8] "ಯಾವನು ವಿವೇಕದಿಂದ ವಿಷಯಗಳಿಂದ ಹಿಮ್ಮೆಟ್ಟುವಿಕೆಯನ್ನು

1. 'ಸೋಽಭಿ' 2. 'ಉತ್ಪತ್ತಿತಾನ್' 3. 'ಅನಾದರೇಣ'
4. 'ನೈನಂ ಮೃತ್ಯುಃ' 5. 'ಏವಂ'
6. 'ವಿನಿಹನ್ತಿ' ಎಂದು ಅಚ್ಚಿನ ಮಹಾಭಾರತದ ಪಾಠಗಳು.
7. ಅವುಗಳಲ್ಲಿರುವ ದೋಷಗಳನ್ನು ಕಂಡುಕೊಳ್ಳುತ್ತಾ.
8. ಮೃತ್ಯುವನ್ನು ಮೀರುತ್ತಾನೆ. ಮರಳಿ ಸಂಸಾರಕ್ಕೆ ಬರುವದಿಲ್ಲ.

ಕೈಗೊಳ್ಳುವನೋ ಮೃತ್ಯುವಿಗೆ ಮೃತ್ಯುವೆಂದು ಪ್ರಸಿದ್ಧನಾದ ಆ ವಿವೇಕಿಯು ಕವಿಯಾದ ಆತ್ಮಜ್ಞಾನಿಯು" (?)[1] ಎಂದು ಹೇಳಿಯೂ ಇದೆ.

(ಭಾಷ್ಯ)

ಏವಮ್ ಅನಿತ್ಯಾದಿರೂಪೇಣ ವಿದ್ವಾನ್ ಅನಾದರಾದಿನಾ ಅಭಿಹನ್ತಿ ಕಾಮಾನ್ । ಯಸ್ತು ಪುನಃ ಅನಾದರಾದಿನಾ ನಾಭಿಹನ್ತಿ ಸ ಕಿಂ ಕರೋತಿ? ಇತ್ಯಾಹ—

(ಭಾಷ್ಯಾರ್ಥ)

ಹೀಗೆ ವಿವೇಕಿಯು ಕಾಮಗಳನ್ನು ಅನಿತ್ಯಾದಿರೂಪದಿಂದ ಅನಾದರಮಾಡಿ ನಾಶಗೊಳಿಸುತ್ತಾನೆ, ಆದರೆ ಯಾವನು ಅನಾದರಾದಿಗಳಿಂದ ನಾಶಗೊಳಿಸು ವದಿಲ್ಲವೋ ಅವನು ಏನು ಮಾಡುತ್ತಾನೆ ?– ಎಂದರೆ ಹೇಳುತ್ತಾರೆ :—

**ಕಾಮಾನುಸಾರೀ ಪುರುಷಃ ಕಾಮಾನನು ವಿನಶ್ಯತಿ ।**
**ಕಾಮಾನ್ ವ್ಯುದಸ್ಯ ಧುನುತೇ ಯತ್ಕಿಞ್ಚಿತ್ ಪುರುಷೋ ರಜಃ ॥೧೩॥**

೧೩. ಕಾಮವನ್ನು ಅನುಸರಿಸಿಹೋಗುವ ಪುರುಷನು ಕಾಮ ಗಳೊಡನೆ ನಾಶವಾಗುತ್ತಾನೆ. (ಆದರೆ) ಕಾಮಗಳನ್ನು ತ್ಯಾಗಮಾಡಿದ ಪುರುಷನು ಎಲ್ಲಾ ಪಾಪವನ್ನೂ ನಾಶಗೊಳಿಸಿಕೊಳ್ಳುತ್ತಾನೆ.

(ಭಾಷ್ಯ)

ಯಸ್ತು ಪುನಃ ವಿಷಯಾಭಿಧ್ಯಾನೇನ ಕಾಮಾನುಸಾರೀ ಭವತಿ ಸಃ ಕಾಮಾನನು ವಿನಶ್ಯತಿ, ಕಾಮವಿಷಯೇ ನಷ್ಟೇ ಕಾಮಾನನು ಕಾಮೈಸ್ಸಹ ವಿನಶ್ಯತಿ, ಅನಿತ್ಯಾಃ ಕಾಮಗುಣಾಃ ಪ್ರತಿಕ್ಷಣಂ ವಿನಾಶಾನ್ವಿತಾಃ ತದ್ವತ್ ಕಾಮೀ ವಿಶೀರ್ಣೋ ಭವತಿ । ಯಸ್ತು ಪುನಃ ವಿಷಯದೋಷದರ್ಶನೇನ ಕಾಮಾನ್ ಪರಿತ್ಯಜತಿ ಸಃ ಕಾಮಾನ್ ವ್ಯುದಸ್ಯ ಪರಿತ್ಯಜ್ಯ ಧುನುತೇ ವಿವೇಕ ಬುದ್ಧ್ಯಾ ಧ್ವಂಸಯತಿ ಯತ್ಕಿಂಚಿತ್ ಇಹ ಜನ್ಮನಿ ಜನ್ಮಾನ್ತರೇ ವಾ ಉಪಾರ್ಜಿತಂ ರಜಃ ಪುಣ್ಯಪಾಪಾದಿಲಕ್ಷಣಂ ಕರ್ಮ ॥

(ಭಾಷ್ಯಾರ್ಥ)

ಆದರೆ ಯಾವನು ವಿಷಯಗಳನ್ನೇ ಚಿಂತಿಸುವದರಿಂದ ಕಾಮಗಳನ್ನು ಹಿಂಬಾಲಿಸುವನೋ ಅವನು ಕಾಮಗಳೊಡನೆ ನಾಶವಾಗುವನು. ಕಾಮಕ್ಕೆ ವಿಷಯ(ವಾದ ವಸ್ತುವು) ಹಾಳಾಗಲಾಗಿ ಕಾಮಗಳ ಜೊತೆಗೆ– ಕಾಮಗಳ ಸಮೇತವಾಗಿ ನಾಶವಾಗುವನು. ಅನಿತ್ಯವಾಗಿರುವ ಕಾಮದ ಗುಣಗಳು ಪ್ರತಿ

1. ಈ ಶ್ಲೋಕದ ಮೂಲವು ಯಾವದೆಂಬುದು ತಿಳಿದಿಲ್ಲ.

ಕ್ಷಣವೂ ನಾಶಸ್ವಭಾವವುಳ್ಳವುಗಳು ; ಆದರಂತೆ ಕಾಮಿಯು ನಾಶವಾಗಿ ಹೋಗುವನು. ಆದರೆ ಯಾವನು ವಿಷಯಗಳ (ಅನಿತ್ಯತ್ವ)ದೋಷವನ್ನು ಕಂಡುಕೊಂಡದ್ದರಿಂದ ಕಾಮಗಳನ್ನು ತ್ಯಾಗಮಾಡುವನೋ ಅವನು ಕಾಮಗಳನ್ನು ಅನಾದರಮಾಡಿ ಬಿಟ್ಟಿದ್ದು ಕೊಡವಿಬಿಡುತ್ತಾನೆ. ವಿವೇಕಬುದ್ಧಿಯಿಂದ ನಾಶಮಾಡಿಬಿಡುತ್ತಾನೆ. ಈ ಜನ್ಮದಲ್ಲಾಗಲಿ ಜನ್ಮಾಂತರದಲ್ಲಾಗಲಿ ಸಂಪಾದಿಸಿದ್ದ ಪುಣ್ಯಪಾಪರೂಪವಾದ ಕರ್ಮವೆಂಬ ಕೊಳೆಯನ್ನು (ನಾಶಮಾಡಿಕೊಳ್ಳುತ್ತಾನೆ.)

## ದೇಹದ ಹೇಯತ್ವವರ್ಣನೆ

(ಭಾಷ್ಯ)

ಕಥಂ ಪುನಃ ಅಸ್ಯ ದೇಹಸ್ಯ ಕಾಮ್ಯಮಾನಸ್ಯ ಹೇಯತ್ವಮಿತ್ಯಾಶಙ್ಕ್ಯ ಆಹ—

(ಭಾಷ್ಯಾರ್ಥ)

ಬಯಸಲು ಯೋಗ್ಯವಾಗಿರುವ ಈ ದೇಹಕ್ಕೆ ಹೇಯತ್ವವೆಂಬುದಾದರೂ ಹೇಗೆ ? ಎಂದು ಆಶಂಕಿಸಿ ಹೇಳುತ್ತಾರೆ :—

**ದೇಹೋಽ[1]ಪ್ರಕಾಶೋ ಭೂತಾನಾಂ ನರಕೋಽಯಂ ಪ್ರದೃಶ್ಯತೇ ।**
**ಗೃಧ್ಯನ್ತ ಏವ[2] ಧಾವನ್ತಿ ಗಚ್ಛನ್ತಃ ಶ್ವಭ್ರಮುನ್ಮುಖಾಃ[3] ॥ ೧೪ ॥**

೧೪. ಈ ಪ್ರಾಣಿಗಳ ದೇಹವು ಜಡವು. ದುಃಖಮಯವಾಗಿ ಕಂಡುಬರುತ್ತಿದೆ. (ಹೀಗಿದ್ದರೂ ಇದನ್ನು) ಬಯಸಿಕೊಂಡೇ (ಜನರು) ಗುಂಡಿ(ಕೊರಕಲು)ಗಳನ್ನು ಕುರಿತು ಹೋಗುವ (ಕುರುಡರಂತೆ) ಓಡುತ್ತಲೇ ಇರುವರು.

(ಭಾಷ್ಯ)

ಯಃ ಅಯಂ ಭೂತಾನಾಂ ದೇಹಃ ದೃಶ್ಯತೇ ಸಃ ಅಪ್ರಕಾಶಃ ತಮಃ ಅಚಿದ್ ಘನಃ ಕೇವಲಂ ನರಕಃ ಶ್ಲೇಷ್ಮಾಸೃಕ್‌ಪೂಯಕ್ರಿಮಿವಿಣ್ಮೂತ್ರಪರಿಪೂರ್ಣತ್ವಾತ್ । ತಚ್ಚಾಹ ಭಗವಾನ್ ಮನುಃ—

ಅಸ್ಥಿಸ್ಥೂಣಂ ಸ್ನಾಯುಬದ್ಧಂ[4] ಮಾಂಸಶೋಣಿತವೇಷ್ಟಿತಮ್[5] ।
ಚರ್ಮಾಪಿನದ್ಧಂ[6] ದುರ್ಗನ್ಧಿ ಪೂರ್ಣಂ ಮೂತ್ರಪುರೀಷಯೋಃ ॥

---

1. 'ತಮೋಽ...' 2. 'ಮುಹ್ಯನ್ತ ಇವ'
3. 'ಶ್ವಭ್ರವತ್ ಸುಖಮ್' ಮ॥ ಭಾ॥ ಪಾಠ. 4. 'ಸ್ನಾಯುಯುತಂ'
5. 'ಲೇಪನಮ್' 6. 'ಚರ್ಮಾವನದ್ಧಂ' ಎಂದು ಮುದ್ರಿತಪಾಠ.

ಜರಾಶೋಕಸಮಾವಿಷ್ಟಂ ರೋಗಾಯತನಮಾತುರಮ್ ।
ರಜಸ್ವಲಮನಿತ್ಯಂ ಚ ಭೂತಾವಾಸಮಿಮಂ ತ್ಯಜೇತ್॥(ಮನು. ೭-೭೬, ೭೭)
ಏವಮ್ ಅತ್ಯನ್ತಬೀಭತ್ಸಿತಮಪಿ ಸ್ತ್ರ್ಯಾದಿದೇಹಂ ಕಮನೀಯಬುದ್ಧ್ಯಾ ಗೃಧ್ಯನ್ತಃ ಅಭಿಕಾಙ್ಕ್ಷನ್ತ ಏವ ಧಾವನ್ತಿ ಅನುಧಾವನ್ತಿ । ಗಚ್ಛನ್ತಃ ಶ್ವಭ್ರಮುನ್ಮುಖಾಃ ಯಥಾ ಅನ್ಧಾಃ ಕೂಪಾದಿಕಂ ವಿವೇಕ್ತುಮಶಕ್ತಾಃ ಕೂಪಾದಿಷು ಉನ್ಮುಖಾಃ ಪತನ್ತಿ ಏವಂ ಸ್ತ್ರ್ಯಾದಿಕಮ್ ಅಭಿಕಾಙ್ಕ್ಷನ್ತೋ ವಿಷಯವಿಷಾನ್ಧಾಃ ಉನ್ಮುಖಾಃ ನರಕೇಷ್ವೇವ ಪತನ್ತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಪ್ರಾಣಿಗಳ ಯಾವ ಈ ದೇಹವು ಕಂಡುಬರುತ್ತಿದೆಯಷ್ಟೆ ? ಅದು ಅಪ್ರಕಾಶವು; ತಮಸ್ಸು, ಅಚೇತನದ ಗಟ್ಟಿಯು. ಕೇವಲ ನರಕವು (ಅಸಹ್ಯವು). ಕಫ, ರಕ್ತ, ಕೀವು, ಕ್ರಿಮಿ, ಮಲ, ಮೂತ್ರ- ಇವುಗಳಿಂದ ತುಂಬಿದೆಯಾಗಿ (ಹೊಲಸಾಗಿದೆ). ಪೂಜ್ಯನಾದ ಮನುವುಕೂಡ- 'ಅಸ್ಥಿಯೆಂಬ ಕಂಬವುಳ್ಳ, ನರಗಳಿಂದ ಬಿಗಿಯಲ್ಪಟ್ಟ, ಮಾಂಸರಕ್ತಗಳಿಂದ ಬಳಿಯಲ್ಪಟ್ಟ, ಚರ್ಮದಿಂದ ಮುಚ್ಚಿರುವ, ದುರ್ವಾಸನೆಯುಳ್ಳ, ಮೂತ್ರಪುರೀಷಗಳಿಂದ ತುಂಬಿದ, ಮುಪ್ಪು ದುಃಖಗಳಿಂದ ಕೂಡಿದ, ರೋಗಕ್ಕೆ ಆಶ್ರಯವಾದ, ಶೀತೋಷ್ಣಾದಿಗಳಿಂದ ಜರ್ಝರಿತವಾದ, ರಜಸ್ಸಿನಿಂದ ತುಂಬಿದ ಅನಿತ್ಯವಾದ ಈ ದೇಹವನ್ನು[1] ಬಿಡಬೇಕು' ಎಂದು ಹೇಳಿದ್ದಾನೆ. ಹೀಗೆ ತೀರ ಅಸಹ್ಯವಾದದ್ದಾದರೂ ರಮಣೀಯವಾಗಿದೆ ಯೆಂಬ ಬುದ್ಧಿಯಿಂದ ಸ್ತ್ರೀಶರೀರಾದಿಗಳನ್ನು ಬಯಸುವ- ಕಾಮಿಸುವವರಾಗಿಯೇ (ಅಜ್ಞರು ಅವುಗಳಕಡೆಗೇ) ಓಡುತ್ತಾರೆ, ಪ್ರವರ್ತಿಸುತ್ತಾರೆ. ಹೇಗೆ ಕುರುಡರು ಭಾವಿ- ಮುಂತಾದ (ಅಪಾಯದ ಜಾಗಗಳನ್ನು) ವಿವೇಕಮಾಡಿ ಅರಿಯಲಾರದೆ ಗುಂಡಿ- ಮುಂತಾದವುಗಳಿಗೆ ಇದಿರಾಗಿ ಹೋಗುತ್ತಾ (ಅವುಗಳಲ್ಲಿ) ಬೀಳುವರೋ ಹಾಗೆಯೇ ಸ್ತ್ರೀ ಮುಂತಾದವನ್ನು ಬಯಸುವ ವಿಷಯವಿಷಾಂಧರು ಮುನ್ನುಗ್ಗುತ್ತಾ ನರಕಗಳಲ್ಲಿಯೇ ಬೀಳುವರು- ಎಂದರ್ಥ.

## ವಿಷಯಾಸಕ್ತರ ಜನ್ಮವು ವ್ಯರ್ಥ

(ಭಾಷ್ಯ)

ಏವಂ ಗೃಧ್ಯನ್ತ ಏವ ಧಾವನ್ತಿ ತೇಷಾಂ ದೇಹೋ ನಿರರ್ಥಕ ಇತ್ಯಾಹ-

(ಭಾಷ್ಯಾರ್ಥ)

ಹೀಗೆ ಬಯಸುತ್ತಲೇ (ವಿಷಯಗಳ ಕಡೆಗೆ) ಪ್ರವರ್ತಿಸುವರಲ್ಲ, ಅವರ ಹುಟ್ಟು ವ್ಯರ್ಥವೆಂದು ಹೇಳುತ್ತಾರೆ-

---

1. ದೇಹಾಭಿಮಾನವನ್ನು ಬಿಟ್ಟು ವೈರಾಗ್ಯವನ್ನು ತಾಳಬೇಕು.

ಅಮನ್ಯಮಾನಃ ಕ್ಷತ್ರಿಯ ಕಶ್ಚಿದನ್ಯಂ
ನಾಧೀಯತೇ ತಾರ್ಣ ಇವಾಸ್ಯ ವ್ಯಾಘ್ರಃ ।
ಕ್ರೋಧಾಲ್ಲೋಭಾನ್ಮೋಹಭಯಾನ್ತರಾತ್ಮಾ
ಸ ವೈ ಮೃತ್ಯುಸ್ತ್ವಚ್ಛರೀರೇ ಯ ಏಷಃ[1] ॥ ೧೫ ॥

೧೫. ಎಲೈ ಕ್ಷತ್ರಿಯನೆ, (ಯಾವನು) ಮತ್ತೊಬ್ಬನಾದ (ವಿಷಯಗಳಿಗಿಂತ ಬೇರೆಯಾದ) ಪರಮಾತ್ಮನನ್ನರಿಯದೆ (ಅಧ್ಯಾತ್ಮ)ಶಾಸ್ತ್ರವನ್ನು ಅಧ್ಯಯನಮಾಡದೆ ಇರುವನೋ ಅವನ ದೇಹವು ಹುಲ್ಲಿನ ಹುಲಿಯ (ದೇಹದಂತೆ) ವ್ಯರ್ಥವು. ಕ್ರೋಧಲೋಭಮೋಹಭಯಗಳಿಗೆ ಸಿಲುಕಿರುವ ಆತ್ಮನಿದಾನಲ್ಲ ! ನಿನ್ನ ಶರೀರದಲ್ಲಿ(ಯೂ) ಇರುವ ಈ ಅವನೇ ಮೃತ್ಯುವು.

(ಭಾಷ್ಯ)

ಯಃ ಸ್ತ್ರ್ಯಾದಿಕಮ್ ಅಭಿಕಾಙ್ಕ್ಷನ್ ಅನುಧಾವತಿ ಸ ವಿಷಯವಿಷಾನ್ಧಃ ತದ್ವ್ಯತಿರಿಕ್ತಂ ಸ್ವಾತ್ಮಭೂತಂ ಪರಮಾತ್ಮಾನಮ್ ಅಮನ್ಯಮಾನಃ ಅಪ್ರತಿಬುಧ್ಯಮಾನಃ ನಾಧೀಯತೇ ತದ್ವಿಷಯಮ್ ಅಧ್ಯಾತ್ಮಶಾಸ್ತ್ರಂ ನಾಧಿಗಚ್ಛತಿ । ತಸ್ಯ ಅಸ್ಯ ವಿಷಯವಿಷಾನ್ಧಸ್ಯ ಷಡಙ್ಗವೇದವಿದುಷೋಽಪಿ ದೇಹಃ ತೃಣನಿರ್ಮಿತೋ ವ್ಯಾಘ್ರ ಇವ ನಿರರ್ಥಕೋ ಭವತಿ । ತಥಾ ಚ ಆಹ ಭಗವಾನ್ ವಸಿಷ್ಠಃ— 'ಚತುರ್ವೇದ್ಯಪಿ ಯೋ ವಿಪ್ರಃ ಸೂಕ್ಷ್ಮಂ ಬ್ರಹ್ಮ ನ ವಿನ್ದತಿ । ವೇದಭಾರಭರಾಕ್ರಾನ್ತಃ ಸ ವೈ ಬ್ರಾಹ್ಮಣಗರ್ದಭಃ' (?) ಇತಿ । ನ ಕೇವಲಂ ದೇಹೋ ನಿರರ್ಥಕಃ, ಯ ಏವಂಭೂತಂ ಸ ಏವ ತಸ್ಯ ಮೃತ್ಯುಃ ಇತ್ಯಾಹ— 'ಕ್ರೋಧಾಲ್ಲೋಭಾನ್ಮೋಹಭಯಾನ್ತರಾತ್ಮಾ' ಇತಿ । ಕ್ರೋಧಲೋಭಾಭ್ಯಾಂ ಹೇತುಭ್ಯಾಂ ಮೋಹಭಯಸಮನ್ವಿತಃ ಅನ್ತರಾತ್ಮಾ ತ್ವಚ್ಛರೀರೇ ಯ ಏಷಃ ತವ ಆತ್ಮಾ ದೃಶ್ಯತೇ ಸ ಏವ ತವ ಮೃತ್ಯುಃ । ಯಸ್ತು ಪುನಃ ಅಜಿತೇನ್ದ್ರಿಯಃ ಕ್ರೋಧಲೋಭಾದಿಸಮನ್ವಿತಃ ವಿಷಯೇಷು ಪ್ರವರ್ತತೇ ಸ ಏವ ತಸ್ಯ ಮೃತ್ಯುಃ

1. ಅಚ್ಚಿನ ಮಹಾಭಾರತದಲ್ಲಿ ಈ ಶ್ಲೋಕವು ಹೀಗಿದೆ :—

ಅಮೂಢವೃತ್ತೇಃ ಪುರುಷಸ್ಯೇಹ ಕುರ್ಯಾತ್ ।
ಕಿಂ ವೈ ಮೃತ್ಯುಸ್ತಾರ್ಣ ಇವಾಸ್ಯ ವ್ಯಾಘ್ರಃ ॥
ಅಮನ್ಯಮಾನಃ ಕ್ಷತ್ರಿಯ ಕಿಞ್ಚಿದನ್ಯತ್ ।
ನಾಧೀಯೀತ ನಿರ್ಣುದನ್ನಿವಾಸ್ಯ ಚಾಯುಃ ॥
ಸಕ್ರೋಧಲೋಭೌ ಮೋಹವಾನನ್ತರಾತ್ಮಾ ।
ಸ ವೈ ಮೃತ್ಯುಸ್ತ್ವಚ್ಛರೀರೇ ಯ ಏಷಃ ॥ ೧೫ ॥

ವಿನಾಶಹೇತುತ್ವಾತ್ | ಉಕ್ತಂ ಚ– 'ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವ ರಿಪುರಾತ್ಮನಃ (ಗೀ. ೬–೫) ಇತಿ ||

(ಭಾಷ್ಯಾರ್ಥ)

ಯಾವನು ಸ್ತ್ರೀ ಮುಂತಾದ (ವಿಷಯಗಳನ್ನು) ಬಯಸಿ ಹಿಂಬಾಲಿಸುವನೋ ವಿಷಯಗಳೆಂಬ ವಿಷದಿಂದ ಕುರುಡನಾದ ಅವನು ಅವುಗಳಿಗಿಂತ ಬೇರೆಯಾದ ತನ್ನ ಆತ್ಮನೇ ಆಗಿರುವ ಪರಮಾತ್ಮನನ್ನರಿಯದೆ– ತಿಳಿದುಕೊಳ್ಳದೆ– (ಮತ್ತು) ಆ (ಪರಮಾತ್ಮನ) ವಿಷಯವಾದ ಅಧ್ಯಾತ್ಮಶಾಸ್ತ್ರವನ್ನೂ ಅರಿಯುವದಿಲ್ಲವೋ, ಆರು ಅಂಗಗಳಿಂದೊಡಗೂಡಿದ ವೇದವನ್ನು ಬಲ್ಲವನಾಗಿದ್ದರೂ ವಿಷಯವಿಷಾಂಧನಾದ[1] ಅವನ ದೇಹವು ಹುಲ್ಲಿನಿಂದಮಾಡಿದ ಹುಲಿಯಂತೆ ವ್ಯರ್ಥವಾಗುವದು.[2] ಪೂಜ್ಯರಾದ ವಸಿಷ್ಠರೂ ಕೂಡ– 'ಯಾವ ಬ್ರಾಹ್ಮಣನು ನಾಲ್ಕು ವೇದಗಳನ್ನು ಬಲ್ಲವನಾದರೂ ಸೂಕ್ಷ್ಮವಾದ ಬ್ರಹ್ಮವನ್ನು ಅರಿಯನೋ ವೇದಭಾರದಿಂದ ಬಳಲಿದ ಅವನು ಬ್ರಾಹ್ಮಣ(ವೇಷದ) ಕತ್ತೆಯೇ ಸರಿ' (?) ಎಂದು ಹೇಳಿದ್ದಾರೆ. ದೇಹವು ವ್ಯರ್ಥವೆಂಬುದಿಷ್ಟೇ ಅಲ್ಲ; ಹೀಗಿರುವ ಅವನೇ ತನಗೇ (ತಾನು) ಮೃತ್ಯುವೆಂದು ಹೇಳುತ್ತಾರೆ – 'ಕ್ರೋಧಲೋಭಮೋಹಭಯಾಂತರಾತ್ಮನು–' ಎಂಬುದರಿಂದ ಇದನ್ನು (ವಿವರಿಸಲಾಗುತ್ತದೆ). ಕ್ರೋಧಲೋಭಗಳೆಂಬ ಕಾರಣಗಳ ಜೊತೆಗೂಡಿ ಮೋಹಭಯಗಳಿಂದ ಸಮನ್ವಿತನಾದ ಅಂತರಾತ್ಮನು ಈ ನಿನ್ನ ಶರೀರದಲ್ಲೇ ಇರುವ ಯಾವ ಇವನು ಕಂಡುಬರುತ್ತಿದಾನೋ ಅವನೇ ನಿನಗೆ ಮೃತ್ಯುವು. ಅಂದರೆ ಯಾವನು ಇಂದ್ರಿಯಗಳನ್ನು ಜಯಿಸದೆ ಕ್ರೋಧಲೋಭಾದಿಗಳಿಂದ ಕೂಡಿದವನಾಗಿ ವಿಷಯಗಳಲ್ಲಿ ಪ್ರವರ್ತಿಸುವನೋ ಅವನಿಗೆ ಅವನೇ ಮೃತ್ಯುವು.[3] 'ತನಗೆ ತಾನೇ ಬಂಧುವು, ತನಗೆ ತಾನೇ ಶತ್ರುವು' ಎಂದು ಹೇಳಿಯೂ ಇದೆ.

## ಮೃತ್ಯುವನ್ನು ಗೆಲ್ಲುವ ಉಪಾಯ

**ಏವಂ ಮೃತ್ಯುಂ ಜಾಯಮಾನಂ ವಿದಿತ್ವಾ**
**ಜ್ಞಾನೇನ[4] ತಿಷ್ಠನ್ ನ ಬಿಭೇತಿ[5] ಮೃತ್ಯೋಃ |**

---

1. ಈ ಶಬ್ದವು ಗ್ರಂಥಕಾರರಿಗೆ ತುಂಬ ಮೆಚ್ಚು.

2. ಹುಲ್ಲಿನ ಹುಲಿ, ಕಾಗದದ ಹುಲಿ- ಇವು ಹೇಗೆ ಕಾರ್ಯಕಾರಿಯಲ್ಲವೋ ಹಾಗೆ ಆತ್ಮನನ್ನರಿಯದವನ ಹುಟ್ಟು ವ್ಯರ್ಥವೆಂದು ಅಭಿಪ್ರಾಯ.

3. ತನ್ನನ್ನರಿಯದವನು ತನ್ನನ್ನೇ ನಾಶಮಾಡಿಕೊಂಡವನಾಗುತ್ತಾನೆ. ಈ. ೩ನೆಯ ಮಂತ್ರವನ್ನು ನೋಡಿರಿ.

4. 'ಜ್ಞಾನೇ' 5. 'ಬಿಭೇತೀಹ'

**ವಿನಶ್ಯತೇ ವಿಷಯೇ ಯಸ್ಯ[1] ಮೃತ್ಯುಃ**
**ಮೃತ್ಯೋರ್ಯಥಾ ವಿಷಯಂ ಪ್ರಾಪ್ಯ ಮರ್ತ್ಯಃ ॥ ೧೬ ॥**

೧೬. ಈ ರೀತಿಯಾಗಿ (ಕ್ರೋಧಾದಿರೂಪದಿಂದ) ಉಂಟಾಗುವ ಮೃತ್ಯುವನ್ನು ಅರಿತುಕೊಂಡು ಜ್ಞಾನದಿಂದ (ನೆಲೆ)ನಿಂತವನಾಗಿ ಮೃತ್ಯುವಿಗೆ ಹೆದರುವದಿಲ್ಲ. (ಏಕೆಂದರೆ) ಅವನ ವಿಷಯದಲ್ಲಿ ಮೃತ್ಯುವು ನಾಶವಾಗುತ್ತಾನೆ. ಹೇಗೆ ಸಂಸಾರವನ್ನು ಪಡೆದ ಮನುಷ್ಯನು ಮೃತ್ಯುವಶನಾಗವನೋ ಹಾಗೆ ಮೃತ್ಯುವೇ ಜ್ಞಾನಿಗೆ ವಿಷಯನಾದಾಗ ನಷ್ಟನಾಗುವನು.

**(ಭಾಷ್ಯ)**

**ಕೇನ ತರ್ಹಿ ಉಪಾಯೇನ ಮೃತ್ಯೋಃ ವಿನಾಶ ಇತ್ಯಾಹ– ಏವಂ ಕ್ರೋಧಾದಿರೂಪೇಣ ಜಾಯಮಾನಂ ಪ್ರಮಾದಾಖ್ಯಂ ಮೃತ್ಯುಂ ಜನನಮರಣಾದಿಸರ್ವಾನರ್ಥಬೀಜಂ ವಿದಿತ್ವಾ ಕ್ರೋಧಾದೀನ್ ಭೂತದಾಹೀಯಾನ್ ದೋಷಾನ್ ಪರಿತ್ಯಜ್ಯ ಅಕ್ರೋಧಾದೀನ್ ಸಂಪಾದ್ಯ ಜ್ಞಾನೇನ ಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನಾ ತಿಷ್ಠನ್ ನ ಬಿಭೇತಿ ಮೃತ್ಯೋಃ ತಥಾ ಚ ಶ್ರುತಿಃ 'ಆನನ್ದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕುತಶ್ಚನ' (ತೈ. ೨-೯) ಇತಿ । ಕಸ್ಮಾತ್ ಪುನಃ ಜ್ಞಾನೇನ ತಿಷ್ಠನ್ ನ ಬಿಭೇತಿ ಮೃತ್ಯೋಃ ಇತಿ ? ತತ್ರಾಹ– ವಿನಶ್ಯತೇ ತಸ್ಯ ಜ್ಞಾನಿನೋ ವಿಷಯೇ ಗೋಚರೇ ಪರಮಾತ್ಮನಿ ಸಾಕ್ಷಾತ್ ಕ್ರಿಯಮಾಣೇ ಪ್ರಮಾದಾಖ್ಯೋ ಅಜ್ಞಾನಮೃತ್ಯುಃ । ಯಥಾ ಮೃತ್ಯೋಃ ವಿಷಯಂ ಸಂಸಾರಮಾಗತಃ ಮೃತ್ಯುನಾ ಅಭಿಭೂತಃ ನಷ್ಟೋ ಭವತಿ ಮರ್ತ್ಯಃ ಏವಮ್ ಆತ್ಮವೇದಿನಃ ವಿಷಯಮ್ ಆಗತಃ ಅಜ್ಞಾನಮೃತ್ಯುಃ ನಷ್ಟೋ ಭವತಿ । ಉಕ್ತಂ ಚ ನಾಮಮಹೋದಧೌ[2]– 'ಜ್ಞಾನಸಂಸ್ಥಾನಸದ್ಭಾವೋ ಜ್ಞಾನಾಗ್ನಿ ಜ್ಞಾನವಜ್ರಭೃತ್ । ಮೃತ್ಯುಹನ್ತೇತಿ ವಿಖ್ಯಾತಃ ಸ ವೀರೋ ವೀತಮತ್ಸರಃ' (?) ಇತಿ ॥**

**(ಭಾಷ್ಯಾರ್ಥ)**

ಹಾಗಾದರೆ ಯಾವ ಉಪಾಯದಿಂದ ಮೃತ್ಯುವಿನ ನಾಶವಾದೀತು ? ಎಂದರೆ ಹೇಳುತ್ತಾರೆ :– ಹೀಗೆ ಕ್ರೋಧಾದಿರೂಪದಿಂದ ಉಂಟಾಗುವ ಪ್ರಮಾದವೆಂಬ ಹೆಸರಿನ ಮೃತ್ಯುವನ್ನು ಜನನ-ಮರಣಗಳೇ ಮುಂತಾದ ಎಲ್ಲಾ ಅನರ್ಥಗಳಿಗೂ

---

1. 'ತಸ್ಯ' ಎಂದು ಮ॥ಭಾ॥ ಪಾಠಗಳು.

2. ಈ ಅಪೂರ್ವಗ್ರಂಥವು ಯಾವದೆಂಬುದು ತಿಳಿದಿಲ್ಲ. 'ಜ್ಞಾನಮಹೋದಧೌ' ಎಂದೂ ಪಾಠಾಂತರವಿರುವದಾಗಿ ಮೈ॥ ಪಾಠದ ಟಿಪ್ಪಣಿಯಲ್ಲಿದೆ.

ಕಾರಣವೆಂದು ತಿಳಿದು ಭೂತದಾಹೀಯಗಳಾದ[1] ದೋಷಗಳನ್ನು ಬಿಟ್ಟು ಅಕ್ರೋಧವೇ ಮುಂತಾದವುಗಳನ್ನು ಪಡೆದುಕೊಂಡು ಚಿತ್ಸದಾನಂದಾದ್ವಿತೀಯ ಬ್ರಹ್ಮವೇ ತಾನು ಎಂಬ ಜ್ಞಾನದಿಂದ ನಿಂತವನು ಮೃತ್ಯುವಿಗೆ ಹೆದರುವದಿಲ್ಲ. ಶ್ರುತಿಯೂ ಕೂಡ– 'ಬ್ರಹ್ಮದ ಆನಂದವನ್ನು ಬಲ್ಲ ವಿದ್ವಾಂಸನು ಏತಕ್ಕೂ ಹೆದರುವದಿಲ್ಲ' ಎಂದು (ಹೇಳುತ್ತಿದೆ.) ಜ್ಞಾನದಲ್ಲಿ ನೆಲೆನಿಂತವನು ಮೃತ್ಯುವಿಗೆ ಹೆದರುವದಿಲ್ಲವೆಂಬುದಕ್ಕೇನು ಕಾರಣ ? ಎಂದರೆ ಹೇಳುತ್ತಾರೆ :- ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿದ ಜ್ಞಾನಿಯ ವಿಷಯದಲ್ಲಿ ಪ್ರಮಾದವೆಂಬ ಹೆಸರಿನ ಅಜ್ಞಾನಮೃತ್ಯುವು ನಾಶವಾಗಿರುತ್ತಾನೆ. ಹೇಗೆ ಮೃತ್ಯುವಿಗೆ ಗೋಚರನಾಗಿ ಸಂಸಾರವನ್ನು ಹೊಂದಿದ ಮನುಷ್ಯನು ಮೃತ್ಯುವಿನಿಂದ ಹಿಮ್ಮೆಟ್ಟಿಸಲ್ಪಟ್ಟವನಾಗಿ ನಷ್ಟವಾಗುವನೋ ಹಾಗೆ ಆತ್ಮಜ್ಞಾನಿಗೆ ವಿಷಯನಾದ ಅಜ್ಞಾನವೆಂಬ ಮೃತ್ಯುವು ನಷ್ಟನಾಗುವನು. '**ನಾಮುಮಹೋದಧಿ**'ಯೆಂಬ (ಗ್ರಂಥದಲ್ಲಿ) 'ಜ್ಞಾನವೆಂಬ ಸಂಸ್ಥಿತಿಯಲ್ಲಿ ಇದ್ದುಕೊಂಡಿರುವ, ಜ್ಞಾನಾಗ್ನಿಯಾದ, ಜ್ಞಾನವೆಂಬ ವಜ್ರಾಯುಧ ವನ್ನು ಹಿಡಿದಿರುವ, ಮಾತ್ಸರ್ಯರಹಿತನಾದ ವೀರನಾದ ಜ್ಞಾನಿಯು ಮೃತ್ಯು ವನ್ನು ಕೊಲ್ಲುವವನೆಂದು ಪ್ರಸಿದ್ಧನಾಗಿರುವನು' (?) ಎಂದು ಹೇಳಿದೆ.

## ಕರ್ಮಗಳು ಬಂಧಕಾರಣವೆಂಬುದು ಹೇಗೆ ?

**ಧೃತರಾಷ್ಟ್ರ ಉವಾಚ—**

**ಯಾನೇವಾಹುರಿಜ್ಯಯಾ ಸಾಧುಲೋಕಾನ್**
**ದ್ವಿಜಾತೀನಾಂ ಪುಣ್ಯತಮಾನ್ ಸನಾತನಾನ್[2] ।**
**ತೇಷಾಂ ಪರಾರ್ಥಂ ಕಥಯನ್ತೀಹ ವೇದಾಃ**
**ಏತದ್ವಿದ್ವಾನ್ ನೈತಿ[3] ಕಥಂ ನು ಕರ್ಮ** ॥ ೧೭ ॥

೧೭. ಧೃತರಾಷ್ಟ್ರನು ಹೇಳುತ್ತಾನೆ : ಯಜ್ಞದಿಂದ ಧಾರ್ಮಿಕರು ಪಡೆಯುವ (ಮತ್ತು) ದ್ವಿಜರಿಗೆ ಪುಣ್ಯತಮವಾಗಿಯೂ ಸನಾತನವಾಗಿಯೂ ಇರುವ ಯಾವ ಲೋಕಗಳುಂಟೋ ಅವುಗಳಿಗೆ ವೇದಗಳು ಪರಮ ಪುರುಷಾರ್ಥತ್ವವನ್ನು ಹೇಳುವವು. ಜ್ಞಾನಿಯು ಈ ತತ್ತ್ವವನ್ನು ಬಲ್ಲವನಾಗಿದ್ದರೂ ಕರ್ಮವನ್ನೇಕೆ ಮಾಡುವದಿಲ್ಲ ?

---

1. ಆಪಸ್ತಂಬಧರ್ಮಸೂತ್ರ ೧–೨೩–೫ನ್ನು ನೋಡಿರಿ.
2. 'ಸನಾತನಾತ್' ಎಂದು ಪಾ॥
3. 'ನೋಪೈತಿ' ಎಂದು ಪಾ॥

(ಭಾಷ್ಯ)

ಏವಂ ತಾವತ್ ಕರ್ಮೋದಯೇ ಇತ್ಯಾದಿನಾ ಕರ್ಮಣಾಂ ಬನ್ಧಹೇತುತ್ವ ಮುಕ್ತ್ವಾ 'ಜ್ಞಾನೇನ ತಿಷ್ಠನ್ ನ ಬಿಭೇತಿ ಮೃತ್ಯೋಃ' (೧೬) ಇತಿ ಜ್ಞಾನಸ್ಯೈವ ಮೋಕ್ಷಸಾಧನತ್ವಮಭಿಹಿತಮ್ | ತತ್ರ ಚೋದಯತಿ ಧೃತರಾಷ್ಟ್ರಃ-

ನನು ಕಥಂ ಕರ್ಮಣಾಂ ಬನ್ಧಹೇತುತ್ವಮ್ ? ಯಾವತಾ ಯಾನೇವ ಆಹುಃ ಇಜ್ಯಯಾ ಜ್ಯೋತಿಷ್ಟೋಮಾದಿನಾ ಸಾಧುಲೋಕಾನ್ ಸಾಧುಭಿಃ ಧಾರ್ಮಿಕೈಃ ಆರೂಢಾನ್ ಪುಣ್ಯತಮಾನ್ ಪವಿತ್ರಾನ್ ಸನಾತನಾನ್ | ತೇಷಾಂ ಬ್ರಹ್ಮಲೋಕಪರ್ಯನ್ತಾನಾಂ ಲೋಕಾನಾಂ ಪರಾರ್ಥಂ ಪರಮಪುರುಷಾರ್ಥತ್ವಂ ಕಥಯನ್ತಿ ಇಹ ಅಸ್ಮಿನ್ ಸಂಸಾರಮಣ್ಡಲೇ ವೇದಾಃ | ಏತತ್ ಲೋಕಾನಾಂ ಪರಮಪುರುಷಾರ್ಥತ್ವಂ ವಿದ್ವಾನ್ ಕಥಂ ನು ಸಾಧನಂ ಕರ್ಮ ನೈತಿ ನಾನು ತಿಷ್ಠತಿ | ಅಥವಾ ಏತತ್ ಬ್ರಹ್ಮಲೋಕಪರ್ಯನ್ತಾನಾಂ ಲೋಕಾನಾಂ ಸಾಧನ ಭೂತಂ ಕರ್ಮ ವಿದ್ವಾನ್ ಬ್ರಹ್ಮವಿತ್ ಕಥಂ ನೈತಿ ನ ಗಚ್ಛತಿ ||

(ಭಾಷ್ಯಾರ್ಥ)

ಈ ರೀತಿಯಾಗಿ 'ಕರ್ಮೋದಯೇ' ಮುಂತಾದ (ಶ್ಲೋಕದಿಂದ) ಕರ್ಮಗಳು ಬಂಧಕಾರಣವೆಂದು ಹೇಳಿ 'ಜ್ಞಾನದಲ್ಲಿ ನಿಂತವನು ಮೃತ್ಯುವಿಗೆ ಹೆದರುವದಿಲ್ಲ' (೧೬) ಎಂದು ಜ್ಞಾನವೇ ಮೋಕ್ಷಸಾಧನವೆಂಬುದನ್ನು ಹೇಳಿದ್ದಾಯಿತು. ಇಲ್ಲಿ ಧೃತರಾಷ್ಟ್ರನು ಪ್ರಶ್ನೆಮಾಡುತ್ತಾನೆ :

ಕರ್ಮಗಳು ಬಂಧಕ್ಕೆ ಕಾರಣವೆಂಬುದು ಹೇಗೆ ? ಏಕೆಂದರೆ ಜ್ಯೋತಿಷ್ಟೋಮಾದಿಯಜ್ಞಗಳಿಂದ- ಧಾರ್ಮಿಕರಾದ ಸಾಧುಗಳು ಏರುವ, ಪುಣ್ಯತಮವಾದ ಪವಿತ್ರವಾದ, ಸನಾತನವಾದ ಯಾವ ಸಾಧುಲೋಕಗಳನ್ನು ಹೇಳುವರೋ, ಬ್ರಹ್ಮಲೋಕಪರ್ಯಂತವಾದ ಆ ಲೋಕಗಳಿಗೆ ಪರಾರ್ಥತೆ- ಎಂದರೆ ಪರಮಪುರುಷಾರ್ಥತ್ವವನ್ನು ಇಲ್ಲಿ- ಎಂದರೆ ಈ ಸಂಸಾರಮಂಡಲದಲ್ಲಿ ವೇದಗಳು ಹೇಳುತ್ತವೆ. ಲೋಕಗಳು ಪರಮಪುರುಷಾರ್ಥವೆಂಬಿದನ್ನು ಬಲ್ಲ ಜ್ಞಾನಿಯು ಸಾಧನವಾದ ಈ ಕರ್ಮವನ್ನು ಏಕೆ ಮಾಡುವದಿಲ್ಲ, ಅನುಷ್ಠಿಸುವದಿಲ್ಲ ? ಅಥವಾ ಬ್ರಹ್ಮಲೋಕದವರೆಗಿನ (ಎಲ್ಲಾ) ಲೋಕಗಳಿಗೂ ಸಾಧನವಾಗಿರುವ ಕರ್ಮವನ್ನು, ಬ್ರಹ್ಮವನ್ನು ಬಲ್ಲ ವಿದ್ವಾಂಸನು ಏಕೆ ಪಡೆಯುವದಿಲ್ಲ ?[1]

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್—

1. ಜ್ಞಾನಿಗೇಕೆ ಕರ್ಮವಿಲ್ಲ ? ಎಂದಭಿಪ್ರಾಯ.

(ಭಾಷ್ಯಾರ್ಥ)

ಈ ರೀತಿಯಾಗಿ ಪ್ರಶ್ನೆಮಾಡಲ್ಪಟ್ಟ ಭಗವಾನ್ (ಸನತ್ಸುಜಾತನು) ಹೇಳುತ್ತಾನೆ—

ಸನತ್ಸುಜಾತ ಉವಾಚ—

ಏವಂ ಹ್ಯವಿದ್ವಾನ್ ಪರಿಯಾತಿ[1] ತತ್ರ
ತಥಾರ್ಥಜಾತಂ[2] ಚ ವದನ್ತಿ ವೇದಾಃ ।
ಸ ನೇಹ ಆಯಾತಿ[3] ಪರಂ ಪರಾತ್ಮಾ
ಪ್ರಯಾತಿ ಮಾರ್ಗೇಣ ನಿಹನ್ತ್ಯಮಾರ್ಗಾನ್[4] ॥ ೧೮ ॥

೧೮. ಸನತ್ಸುಜಾತನಿಂತೆಂದನು : ಅವಿದ್ವಾಂಸನು ಹೀಗೆ ಅಲ್ಲಿಗೆ ಹೋಗುವನು. ವೇದಗಳು ಅವನಿಗೇ ಪ್ರಯೋಜನಗಳನ್ನು ಆ (ಕರ್ಮಗಳಿಗೆ) ಹೇಳುತ್ತವೆ. ಆದರೆ ವಿದ್ವಾಂಸನು ಅದರಲ್ಲಿ ತೊಡಗುವದಿಲ್ಲ. ಪರಮಾತ್ಮನೇ ತಾನಾಗಿ ಬ್ರಹ್ಮವನ್ನು ಸೇರುವನು. ಅಮಾರ್ಗಗಳನ್ನು (ಜ್ಞಾನ)ಮಾರ್ಗದಿಂದ ನಾಶಗೊಳಿಸುವನು.

(ಭಾಷ್ಯ)

ಸತ್ಯಮ್, ಏವಂ ಬ್ರಹ್ಮಲೋಕಾದಿಸಾಧ್ಯಂ ಸುಖಂ ಮನ್ಯಮಾನಃ ವಿಷಯವಿಷಾನ್ಧೋ ಹಿ ಅವಿದ್ವಾನ್ ಪರಿಯಾತಿ ತತ್ರ ತಸ್ಮಿನ್ ಬ್ರಹ್ಮಲೋಕಾದಿಸಾಧನಭೂತೇ ಕರ್ಮಣಿ, ನ ವಿದ್ವಾನ್ : ಅವಿದ್ಯಾದಿದೋಷದರ್ಶನಾತ್ । ತಥಾ ಚ ಬೃಹದಾರಣ್ಯಕೇ – 'ಅನನ್ದಾ ನಾಮ ತೇ ಲೋಕಾ ಅನ್ಧೇನ ತಮಸಾಽಽವೃತಾಃ । ತಾಂಸ್ತೇ ಪ್ರೇತ್ಯಾಽಭಿಗಚ್ಛನ್ತಿ ಅವಿದ್ವಾಂಸೋಽಬುಧಾ ಜನಾಃ' (ಬೃ. ೪–೪–೧೧) ಇತಿ । ತಥಾ ಅರ್ಥಜಾತಂ ಪ್ರಯೋಜನಜಾತಂ ಚ ತಸ್ಯೈವ ಅವಿದುಷೋ ವದನ್ತಿ ವೇದಾಃ । ಯಸ್ಮಾತ್ ಅವಿದುಷ ಏವ ವದನ್ತಿ ನ ವಿದುಷಃ ತಸ್ಮಾತ್ ನೇಹ ಸಃ ವಿದ್ವಾನ್ ಬ್ರಹ್ಮಲೋಕಾದ್ಯನಿತ್ಯಸುಖೇ ತತ್ಸಾಧನೇ ವಾ ಕರ್ಮಣಿ ಆಯಾತಿ ಪ್ರವರ್ತತೇ । ಕಿಂ ತರ್ಹಿ ಕರೋತಿ ? ಪರಮಾತ್ಮಾನಮ್ ಆತ್ಮತ್ವೇನ ಅವಗಮ್ಯ ಪರಾತ್ಮಾ ಸನ್ ಬ್ರಹ್ಮೈವ ಸನ್ ಪರಂ ಪ್ರಯಾತಿ । ಮಾರ್ಗೇಣ ನಿಹನ್ತಿ ಚ ಅಮಾರ್ಗಾನ್ ಸಂಸಾರಹೇತುಭೂತಾನ್ ಆತ್ಮನಃ ವಿರುದ್ಧಮಾರ್ಗಾನ್ ಧರ್ಮಾಧರ್ಮೋಪಾಸನಾರೂಪಾನ್ । ಅಥವಾ 'ಏವಂ ಹಿ ವಿದ್ವಾನ್ ಪರಿಯಾತಿ ತತ್ರ' ಇತಿ ಪಾಠೇ ಸಗುಣಂ ಬ್ರಹ್ಮ ವಿದ್ವಾನ್ ತತ್ರ ಬ್ರಹ್ಮಲೋಕಾದೌ ಉಪಾಸನಾಫಲಂ ಪರಿಯಾತಿ ಪ್ರಾಪ್ನೋತಿ ।

1. 'ಉಪಯಾತಿ' 2. 'ತತ್ರಾರ್ಥಜಾತಂ' 3. 'ಅನೀಹಯಾ ಯಾತಿ'
4. 'ನಿಹತ್ಯ ಮಾರ್ಗಾನ್' ಎಂದು ಮ॥ ಭಾ॥ ಪಾಠಗಳು.

ತಥಾ ಅರ್ಥಜಾತಂ ಚ ಅಸ್ಯ ವದನ್ತಿ ವೇದಾಃ । ಕೀದೃಶಂ ವದನ್ತಿ ? ಸ ನೇಹ ಆಯಾತಿ ಸ ವಿದ್ವಾನ್ ಇಹ ಅಸ್ಮಿನ್ ಲೋಕೇ ಕರ್ಮಿವತ್ ನಾಯಾತಿ ನ ಜಾಯತೇ, ಕಿಂ ತು ಬ್ರಹ್ಮೋಪಾಸನಯಾ ಅಮಾರ್ಗಾನ್ ವಿರುದ್ಧ ಮಾರ್ಗಾನ್ ನಿಹನ್ತಿ । ಏವಂ ತತ್ರ ಗತ್ವಾ ಸಂಸಾರಹೇತೂನ್ ಅಮಾರ್ಗಾನ್ ನಿಹತ್ಯ ಪರಾತ್ಮಾ ಸನ್ ಕಾಲೇನ ಪರಂ ಬ್ರಹ್ಮ ಪ್ರಯಾತಿ ಇತ್ಯರ್ಥಃ ॥

(ಭಾಷ್ಯಾರ್ಥ)

ನಿಜ ; ವಿಷಯವಿಷಾಂಧನಾದ ಅಜ್ಞಾನಿಯು[1] ಬ್ರಹ್ಮಲೋಕಾದಿಗಳಲ್ಲಿ ಪಡೆಯಬಹುದಾದ್ದನ್ನೇ (ಪರಮ)ಸುಖವೆಂದು ತಿಳಿದವನಾಗಿ ಆ ಬ್ರಹ್ಮಲೋಕವೇ ಮುಂತಾದವುಗಳಿಗೆ ಸಾಧನವಾದ ಕರ್ಮದಲ್ಲಿ ತೊಡಗುವನು. ಜ್ಞಾನಿಯು ಹಾಗಲ್ಲ ; (ಏಕೆಂದರೆ) ಅವಿದ್ಯೆಯೇ ಮುಂತಾದ ದೋಷಗಳನ್ನು[2] ಕಂಡುಕೊಂಡಿರುತ್ತಾನೆ. ಬೃಹದಾರಣ್ಯಕದಲ್ಲಿಯೂ– 'ಅವಿದ್ವಾಂಸರೂ ಅಬುಧರೂ ಆದ ಜನರು (ಇಲ್ಲಿಂದ) ಹೋಗಿ ಅನಂದವೆಂಬ ಅಂಧಂತಮಸ್ಸಿನಿಂದ ಆವೃತವಾಗಿರುವ ಆ ಲೋಕಗಳನ್ನು ಪಡೆಯುವರು' ಎಂದು ಹೇಳಿದೆ. ಹಾಗೆಯೇ ಅರ್ಥಜಾತವನ್ನೂ ಎಂದರೆ ಪ್ರಯೋಜನಗಳನ್ನೂ ವೇದಗಳು ಆ ಅಜ್ಞಾನಿಗೇ ಹೇಳುತ್ತವೆ. ವಿದ್ವಾಂಸನಿಗೆ ಹೇಳದೆ ಅವಿದ್ವಾಂಸನಿಗೇ ಹೇಳುವದರಿಂದ ಆ ವಿದ್ವಾಂಸನು ಬ್ರಹ್ಮಲೋಕವೇ ಮುಂತಾದ ಅನಿತ್ಯವಾದ ಸುಖದಲ್ಲಿಯಾಗಲಿ ಅದರ ಸಾಧನವಾದ ಕರ್ಮದಲ್ಲಿಯಾಗಲಿ ತೊಡಗುವದಿಲ್ಲ, ಪ್ರವರ್ತಿಸುವದಿಲ್ಲ. ಮತ್ತೇನು ಮಾಡುತ್ತಾನೆ ? ಪರಮಾತ್ಮನನ್ನೇ ತನ್ನ ಆತ್ಮನೆಂದರಿತು (ತಾನೂ) ಪರಾತ್ಮನಾಗಿ ಬ್ರಹ್ಮವೇ ಆಗಿ ಪರ(ಬ್ರಹ್ಮ)ವನ್ನು ಸೇರುವನು. ಸಂಸಾರಕ್ಕೆ ಕಾರಣವಾದ ತನಗೆ ಅಡ್ಡಿಯಾಗಿರುವ ಧರ್ಮಾಧರ್ಮಗಳ ಚಿಂತನರೂಪವಾದ ಅಮಾರ್ಗಗಳನ್ನು[3] ಎಂದರೆ ವಿರುದ್ಧಮಾರ್ಗಗಳನ್ನು (ಜ್ಞಾನ)ವೆಂಬ ಮಾರ್ಗದಿಂದ ನಾಶಗೊಳಿಸುತ್ತಾನೆ. ಅಥವಾ 'ಏವಂ ಹಿ ವಿದ್ವಾನ್ ಪರಿಯಾತಿ ತತ್ರ' ಎಂಬ ಪಾಠದಂತೆ ಸಗುಣಬ್ರಹ್ಮವನ್ನು ಉಪಾಸನೆಮಾಡಿದವನು ಆ ಬ್ರಹ್ಮಲೋಕಾದಿಗಳಲ್ಲಿ ಉಪಾಸನೆಯ ಫಲವನ್ನು ಪಡೆಯುತ್ತಾನೆ ; ಹೊಂದುತ್ತಾನೆ. ಅವನಿಗೆ ವೇದಗಳು ಪ್ರಯೋಜನ(ಫಲ)ಗಳನ್ನೂ ಹೇಳುತ್ತವೆ. ಹೇಗೆ ಹೇಳುತ್ತವೆ ?

---

1. ಇಲ್ಲಿ 'ಅವಿದ್ವಾನ್' ಎಂಬುದಕ್ಕೆ 'ಅಜ್ಞಾನಿ' ಎಂದು ಅನುವಾದಮಾಡಿದೆ. ಪರಮಾತ್ಮಜ್ಞಾನವಿಲ್ಲದವನು ; ಕರ್ಮಿಯು ಎಂದು ಅರ್ಥವೇ ಹೊರತು ಪ್ರಾಕೃತನೆಂದಲ್ಲ.

2. ಬ್ರಹ್ಮಲೋಕಪರ್ಯಂತವಾದ ಸುಖಗಳೆಲ್ಲವೂ ಅನಿತ್ಯವು– ಎಂದು ತಿಳಿದವನಾಗಿ ಅವುಗಳಿಗೆ ಸಾಧನವಾದ ಕರ್ಮದಲ್ಲಿ ತೊಡಗುವದಿಲ್ಲ– ಎಂದಭಿಪ್ರಾಯ.

3. ಧರ್ಮಾಧರ್ಮಗಳೆರಡೂ ಮುಮುಕ್ಷುವಿಗೆ ಬಂಧಕವೇ. ಆದ್ದರಿಂದ ಮೋಕ್ಷವನ್ನೇ ಬಯಸುವವನು ಎರಡನ್ನೂ ಕೈಬಿಡುತ್ತಾನೆ– ಎಂದಭಿಪ್ರಾಯ.

ಎಂದರೆ ಆ ಉಪಾಸಕನು ಈ ಲೋಕಕ್ಕೆ ಕರ್ಮಿಯಂತೆ ಹಿಂತಿರುಗುವದಿಲ್ಲ- ಎಂದರೆ ಹುಟ್ಟುವದಿಲ್ಲ. ಮತ್ತೇನೆಂದರೆ : ಬ್ರಹ್ಮೋಪಾಸನೆಯಿಂದ ಅಮಾರ್ಗಗಳನ್ನು- ಎಂದರೆ ವಿರುದ್ಧಮಾರ್ಗಗಳನ್ನು ನಾಶಮಾಡುತ್ತಾನೆ. ಹೀಗೆ ಆ ಬ್ರಹ್ಮಲೋಕಕ್ಕೆ ಹೋಗಿ ಸಂಸಾರಕಾರಣಗಳಾದ ಅಮಾರ್ಗಗಳನ್ನು ನಾಶಗೊಳಿಸಿಕೊಂಡು ಕಾಲಾನುಕ್ರಮದಲ್ಲಿ ಪರಬ್ರಹ್ಮವನ್ನು ಸೇರುವನು ಎಂದಭಿಪ್ರಾಯ.[1]

## ಈ ವರೆಗಿನ ಗ್ರಂಥಭಾಗದ ತಾತ್ಪರ್ಯ

### (ಭಾಷ್ಯ)

ಏವಂ ತಾವತ್ ಪ್ರಮಾದಾಖ್ಯಸ್ಯ ಅಜ್ಞಾನಸ್ಯ ಮೃತ್ಯುತ್ವಮ್, ಅಪ್ರಮಾದಸ್ಯ ಸ್ವರೂಪಾವಸ್ಥಾನಲಕ್ಷಣಸ್ಯ ಅಮೃತತ್ವಮ್ 'ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ' ಇತ್ಯಾದಿನಾ ದರ್ಶಯಿತ್ವಾ 'ಆಸ್ಯಾದೇಷ ನಿಃಸರತೇ' ಇತ್ಯಾದಿನಾ 'ಸ ವೈ ಮೃತ್ಯುಃ ತ್ವಚ್ಛರೀರೇ ಯ ಏಷಃ' ಇತ್ಯನ್ತೇನ ತಸ್ಯೈವ ಕಾರ್ಯಾತ್ಮನಾ ಪರಿಣತಸ್ಯ ಸರ್ವಾನರ್ಥಹೇತುತ್ವಂ ದರ್ಶಯಿತ್ವಾ ಕಥಮಸ್ಯ ಮೃತ್ಯೋರ್ವಿನಾಶಃ ಇತ್ಯಾಶಙ್ಕ್ಯ 'ಏವಂ ಮೃತ್ಯುಂ ಜಾಯಮಾನಂ ವಿದಿತ್ವಾ ಜ್ಞಾನೇನ ತಿಷ್ಠನ್ ನ ಬಿಭೇತಿ ಮೃತ್ಯೋಃ' ಇತ್ಯಾತ್ಮಜ್ಞಾನೇನ ಮೃತ್ಯುವಿನಾಶಂ ದರ್ಶಯಿತ್ವಾ 'ಯಾನೇವಾಹುರಿಜ್ಯಯಾ' ಇತ್ಯಾದಿನಾ ಬ್ರಹ್ಮಲೋಕಾದೇಃ ಪುರುಷಾರ್ಥತ್ವಮ್ ಆಶಙ್ಕ್ಯ, 'ಏವಂ ಹ್ಯವಿದ್ವಾನ್' ಇತ್ಯಾದಿನಾ ತೇಷಾಮವಿದ್ಯಾವದ್ವಿಷಯತ್ವೇನ ಅಪುರುಷಾರ್ಥತ್ವಮ್ ಉಕ್ತ್ವಾ 'ಪರಂ ಪರಾತ್ಮಾ ಪ್ರಯಾತಿ ಮಾರ್ಗೇಣ' ಇತಿ ಜ್ಞಾನಮಾರ್ಗೇಣ ಮೋಕ್ಷಃ ಉಪದಿಷ್ಟಃ॥

### (ಭಾಷ್ಯಾರ್ಥ)

ಈ ರೀತಿಯಾಗಿ ಪ್ರಮಾದವೆಂಬ ಹೆಸರಿನ ಅಜ್ಞಾನವೇ ಮೃತ್ಯುವೆಂಬುದನ್ನೂ ಸ್ವರೂಪದಲ್ಲಿ ನೆಲೆನಿಲ್ಲುವದೆಂಬ ಅಪ್ರಮಾದವೇ ಅಮೃತತ್ವವೆಂಬುದನ್ನೂ 'ಪ್ರಮಾದವೇ ಮೃತ್ಯುವೆಂದು ನಾನು ಹೇಳುವೆನು'– ಮುಂತಾದವುಗಳಿಂದ ತೋರಿಸಿಕೊಟ್ಟು 'ಇದು ಅಹಂಕಾರದಿಂದ ಹೊರತೋರಿಕೊಳ್ಳುವದು ಮುಂತಾದವುಗಳಿಂದ 'ಆ ಇವನೇ ನಿನ್ನ ಶರೀರದಲ್ಲಿರುವ ಮೃತ್ಯುವು' ಎಂಬವರೆಗಿನ (ಗ್ರಂಥ

---

1. ಮೊದಲನೆಯ ವ್ಯಾಖ್ಯಾನದಲ್ಲಿ ಧರ್ಮಾಧರ್ಮಗಳನ್ನು ಜ್ಞಾನದಿಂದ ಮೀರಿದ ಜ್ಞಾನಿಯು ಇಲ್ಲಿಯೇ ಮುಕ್ತನಾಗಿದ್ದು ಶರೀರವು ಬಿದ್ದಬಳಿಕ ಬ್ರಹ್ಮದಲ್ಲಿ ಒಂದಾಗಿಬಿಡುವನು- ಎಂದರ್ಥ. ಎರಡನೆಯ ವ್ಯಾಖ್ಯಾನದಲ್ಲಿ ಬ್ರಹ್ಮೋಪಾಸಕನು ಬ್ರಹ್ಮಲೋಕಕ್ಕೇ ತೆರಳಿ ಅಲ್ಲಿ ಕಾಲಕ್ರಮದಲ್ಲಿ ಜ್ಞಾನವನ್ನು ಪಡೆದು ವಿಮುಕ್ತನಾಗುತ್ತಾನೆ– ಕ್ರಮಮುಕ್ತಿಯನ್ನು ಪಡೆಯುತ್ತಾನೆ– ಎಂದಭಿಪ್ರಾಯ. ಇವರಿಬ್ಬರೂ ಕರ್ಮಿಯಂತೆ ಮರಳಿ ಸಂಸಾರಕ್ಕೆ ಬರುವದಿಲ್ಲ ಎಂದು ತಾತ್ಪರ್ಯ.

ದಿಂದ) ಕಾರ್ಯರೂಪದಿಂದ ಪರಿಣಮಿಸಿರುವ ಅದೇ ಎಲ್ಲಾ ಅನರ್ಥಗಳಿಗೂ ಕಾರಣವೆಂಬುದನ್ನು ತೋರಿಸಿಕೊಟ್ಟು ಈ ಮೃತ್ಯುವಿನ ನಾಶವು ಹೇಗೆ ? ಎಂದು ಶಂಕೆಮಾಡಿ 'ಹೀಗೆ ಮೃತ್ಯುವು ಉಂಟಾಗುತ್ತಾನೆಂಬುದನ್ನರಿತು ಜ್ಞಾನದಲ್ಲಿ ನಿಂತವನಾಗಿ ಮೃತ್ಯುವಿಗೆ ಹೆದರುವದಿಲ್ಲ' ಎಂದು ಆತ್ಮಜ್ಞಾನದಿಂದ ಮೃತ್ಯುನಾಶ ವನ್ನು ಹೇಳಿದ ಅನಂತರ 'ಯಜ್ಞದಿಂದ ಯಾವ ಲೋಕಗಳನ್ನು ಹೇಳುವರೋ' ಮುಂತಾದದ್ದರಿಂದ ಬ್ರಹ್ಮಲೋಕವೇ ಮುಂತಾದವುಗಳೇ (ಪರಮ)ಪುರುಷಾರ್ಥ ಗಳೆಂದು ಶಂಕೆಮಾಡಿ ' ಹೀಗೆ ಅ ಜ್ಞಾ ನಿ ಯು ' ಮುಂತಾದದ್ದರಿಂದ ಅವು ಅವಿದ್ಯಾವಂತರ ವಿಷಯಗಳಾದ್ದರಿಂದ (ಪರಮ)ಪುರುಷಾರ್ಥವಲ್ಲವೆಂತ ಹೇಳಿ 'ಪರಮಾತ್ಮನೇ ಆಗಿ (ಜ್ಞಾನ)ಮಾರ್ಗದಿಂದ ಪರ(ಬ್ರಹ್ಮ)ವನ್ನೇ ಸೇರುವನು' ಎಂದು ಜ್ಞಾನಮಾರ್ಗದಿಂದ ಮೋಕ್ಷವನ್ನು ಉಪದೇಶಿಸಿದ್ದಾಗಿದೆ.

## ಪ್ರಶ್ನೆ : ಆತ್ಮನನ್ನು ಸಂಸಾರಕ್ಕೆ ಪ್ರೇರಿಸುವವನು ಯಾರು ?

**ಧೃತರಾಷ್ಟ್ರ ಉವಾಚ—**

**ಕೋಽಸೌ ನಿಯುಙ್ಕ್ತೇ ತಮಜಂ ಪುರಾಣಂ**
**ಸ ಚೇದಿದಂ ಸರ್ವಮನುಕ್ರಮೇಣ ।**
**ಕಿಂ ವಾಽಸ್ಯ ಕಾರ್ಯಮಥವಾ ಸುಖಂ ಚ**
**ತನ್ಮೇ ವಿದ್ವನ್ ಬ್ರೂಹಿ ಸರ್ವಂ ಯಥಾವತ್ ॥ ೧೯ ॥**

೧೯. ಇದೆಲ್ಲವನ್ನೂ ಕ್ರಮವಾಗಿ (ಸೃಷ್ಟಿಸಿ ಒಳಹೊಕ್ಕಿರುವ) ಅವನೇ (ಸಂಸಾರಿಯೆಂದಾದರೆ) ಅಜನೂ ಪುರಾಣನೂ ಆದ ಅವನನ್ನು (ಹಾಗೆ) ಪ್ರೇರಿಸುವವರು ಯಾರು ? ಅವನಿಗೆ ಪ್ರಯೋಜನವಾದರೂ ಏನು ? ಅಥವಾ (ಪ್ರವೇಶಿಸದಿದ್ದರೆ) ಅನರ್ಥವಾದರೂ ಏನು ? ಎಲೈ ಜ್ಞಾನಿಯೆ, ಇದೆಲ್ಲವನ್ನೂ ಇದ್ದದ್ದು ಇದ್ದಂತೆ ನನಗೆ ಹೇಳು.

(ಭಾಷ್ಯ)

ತತ್ರ 'ಪರಂ ಪರಾತ್ಮಾ ಪ್ರಯಾತಿ' ಇತಿ ಜೀವಪರಯೋಃ ಏಕತ್ವ ಮುಕ್ತಮ್ । ತದಸಹಮಾನಃ ಚೋದಯತಿ ಧೃತರಾಷ್ಟ್ರಃ– ನನು ಯದಿ ಸ ಏವ ಸತ್ಯಾದಿಲಕ್ಷಣಃ ಪರಮಾತ್ಮಾ ಕ್ರಮೇಣ ಆಕಾಶಾದಿ ಧರಿತ್ರ್ಯನ್ತಂ ಜಗತ್ ಸೃಷ್ಟ್ವಾ ತದನುಪ್ರವಿಶ್ಯ ಅನ್ನಮಯಾದ್ಯಾತ್ಮನಾ ಅವಸ್ಥಿತಃ ಸಂಸರತಿ ಚೇತ್ ಕೋಽಸೌ ತಂ ಸತ್ಯಾದಿಲಕ್ಷಣಂ ಪುರಾಣಮ್ ಅಜಂ ಸಂಸಾರೇ ನಿಯುಙ್ಕ್ತೇ ಪ್ರೇರಯತಿ । ಕಿಮನ್ಯೇನ, ಸ್ವಯಮೇವೇತಿ ಚೇತ್, ಕಿಂ ವಾ ಅಸ್ಯ ನಾನಾ ಯೋನಿಷು ವರ್ತಮಾನಸ್ಯ ಕಾರ್ಯಂ ಪ್ರಯೋಜನಮ್ ? ಅಥವಾ ನಾನಾ

ಯೋನಿಷು ಅಪ್ರವರ್ತಮಾನಸ್ಯ ತೂಷ್ಣೀಂಭೂತಸ್ಯ ಸ್ವೇ ಮಹಿಮ್ನಿ ವ್ಯವಸ್ಥಿತಸ್ಯ ಸಂಸಾರಾನನುಪ್ರವೇಶೇ ಅಸುಖಂ ಅನರ್ಥಜಾತಂ ವಾ ಕಿಂ ಭವತಿ? ಹೇ ವಿದ್ವನ್, ಮೇ ಬ್ರೂಹಿ ಸರ್ವಂ ಯಥಾವತ್ | ತಥಾ ಚ ಬ್ರಹ್ಮವಿದಾಮ್ ಏಕಃ ಪುಣ್ಡರೀಕೋ ಭಗವಾನ್ ಯಾಜ್ಞವಲ್ಕ್ಯಃ ತತ ಏವ ಸರ್ವಸ್ಯ ಸೃಷ್ಟಿಮ್ ಉಕ್ತ್ವಾ ತಸ್ಯೈವ ಜೀವತ್ವಮ್ ಅಭ್ಯುಪಗಮ್ಯ– 'ಯದ್ಯೇವಂ ಸ ಕಥಂ ಬ್ರಹ್ಮ ಪಾಪಯೋನಿಷು ಜಾಯತೇ | ಸ ಈಶ್ವರಃ ಕಥಂ ಭಾವೈರನಿಷ್ಟೈಃ ಸಂಪ್ರಯುಜ್ಯತೇ' (ಯಾಜ್ಞ. ಸ್ಮೃ. ಯತಿ. ೧೨೯) ಇತಿ | 'ಕೋಽಸೌ ನಿಯುಙ್ಕ್ತೇ' ಇತ್ಯನೇನ ಭಗವತ್ಪೋಕ್ತಮೇವ ಬ್ರಹ್ಮಜೀವವಾದಪಕ್ಷೇ ಪಾಪದೂಕಚೋದ್ಯಂ ಸ್ಪಷ್ಟಮುಕ್ತವಾನ್ ||

(ಭಾಷ್ಯಾರ್ಥ)

'ಪರಮಾತ್ಮನನ್ನು ಬಲ್ಲವನು ಪರ(ಬ್ರಹ್ಮ)ವನ್ನೇ ಹೊಂದುತ್ತಾನೆ. ಎಂದು ಹೇಳುವಾಗ ಜೀವ(ಪರ)ಬ್ರಹ್ಮರಿಗೆ ಐಕ್ಯವನ್ನು ಹೇಳಿದ್ದಾಗಿದೆ. ಇದನ್ನು ಸಹಿಸದೆ ಧೃತರಾಷ್ಟ್ರನು ಆಕ್ಷೇಪಿಸುತ್ತಾನೆ : ಸತ್ಯಾದಿಲಕ್ಷಣಗಳುಳ್ಳ ಪರಮಾತ್ಮನು ಕ್ರಮವಾಗಿ ಆಕಾಶದಿಂದ ಭೂಮಿಯುವರೆಗಿನ ಜಗತ್ತನ್ನು ಸೃಷ್ಟಿಸಿ ಅದನ್ನು ಒಳಹೊಕ್ಕು ಅನ್ನಮಯಾದಿರೂಪದಿಂದ ಇದ್ದುಕೊಂಡಿರುವನಾಗಿ ಅವನೇ ಸಂಸಾರಿಯಾಗಿ ಓಡಾಡುತ್ತಾನೆ– ಎಂದಾದರೆ[1] ಸತ್ಯಾದಿಲಕ್ಷಣನೂ ಪುರಾಣನೂ ಅಜನೂ ಆದ ಅವನನ್ನು ಸಂಸಾರಕ್ಕೆ ನಿಯೋಜನಮಾಡುವವನು ಯಾರು ? ಪ್ರೇರಿಸುವವನು ಯಾರು? (ಹಾಗಲ್ಲದೆ) ಮತ್ತೊಬ್ಬನೇಕೆ ಬೇಕು? ತಾನೇ ಸಂಸಾರಿಯಾಗಿದ್ದಾನೆ– ಎಂದರೆ ನಾನಾಜನ್ಮಗಳಲ್ಲಿ ಇದ್ದುಕೊಂಡಿರುವದರಿಂದ ಇವನಿಗೆ ಪ್ರಯೋಜನವಾದರೂ ಏನು? ಅಥವಾ ಅನೇಕಜನ್ಮಗಳಲ್ಲಿ ಪ್ರವರ್ತಿಸದೆ ಸುಮ್ಮನೆ ತನ್ನ ಮಹಿಮೆಯಲ್ಲಿಯೇ ಇದ್ದುಕೊಂಡಿರುವ, ಸಂಸಾರವನ್ನು ಒಳಹೊಗದೆ ಇರುವ (ಇವನಿಗೆ) ಅಸುಖವು– ಎಂದರೆ ಅನರ್ಥಗಳ ಸಾಲು ಏಕೆ ಉಂಟಾಗುತ್ತದೆ? ಎಲೈ ಜ್ಞಾನಿಯೆ, ಎಲ್ಲವನ್ನೂ ನಿಜವಾಗಿ ನನಗೆ ಹೇಳು (ಎಂದು ಪ್ರಶ್ನೆಯ ಅಭಿಪ್ರಾಯ). ಪೂಜ್ಯನೂ ಬ್ರಹ್ಮಜ್ಞಾನಿಗಳೆಂಬ (ಹೂಗಳಲ್ಲಿ) ತಾವರೆಯಂತೆ ಮುಖ್ಯನಾದವನೂ ಆದ ಯಾಜ್ಞವಲ್ಕ್ಯನು– ಆ (ಆತ್ಮ)ನಿಂದಲೇ ಎಲ್ಲಾ (ಜಗತ್ತಿನ) ಸೃಷ್ಟಿಯನ್ನೂ ಹೇಳಿ ಅವನಿಗೇ ಜೀವತ್ವವನ್ನು ಒಪ್ಪಿ 'ಬ್ರಹ್ಮವಿದನೆ, ಆ ಬ್ರಹ್ಮವು ಪಾಪಯೋನಿಗಳಲ್ಲಿ ಏಕೆ ಹುಟ್ಟುತ್ತದೆ ? ಈಶ್ವರನಾದ ಅವನು ಅನಿಷ್ಟವಾದ ವಸ್ತುಗಳೊಡನೆ ಹೇಗೆ ಸೇರಿಕೊಳ್ಳುತ್ತಾನೆ?' ಎಂದು– 'ಕೋಽಸೌ ನಿಯುಙ್ಕ್ತೇ' ಎಂಬುದರಿಂದ

---

1. ಜೀವಬ್ರಹ್ಮರುಗಳಿಗೆ ಐಕ್ಯವನ್ನು ಒಪ್ಪಿದರೆ ಈ ದೋಷವು ಬರುತ್ತದೆ. ಗೀ. ಭಾ. ೧೩–೨ರಲ್ಲಿರುವ 'ಈಶ್ವರಸ್ಯೈವ ಸಂಸಾರಿತ್ವಮ್, ಸಂಸಾರಾಭಾವೋ ವಾ' ಎಂಬ ಚರ್ಚೆಯನ್ನು ನೋಡಿರಿ.

ಭಗವಾನ್ (ಸನತ್ಸುಜಾತನು) ತಿಳಿಸಿದ ಬ್ರಹ್ಮವೂ ಜೀವನೂ ಒಂದೇ ಎಂಬ ವಾದದಲ್ಲಿ ಚೋದಕನು ಪ್ರಶ್ನಿಸಿದ್ದನ್ನೇ (ಪರಾಮರ್ಶಿಸಿ) ಸ್ಪಷ್ಟವಾಗಿ ತಾನೂ ಹೇಳಿರುತ್ತಾನೆ.

## ಉತ್ತರ: ಆತ್ಮನ ಸಂಸಾರಿತ್ವವು ಮಾಯೆಯಿಂದ ಕಲ್ಪಿತವಾಗಿದೆ

**ಸನತ್ಸುಜಾತ ಉವಾಚ—**

**ದೋಷೋ ಮಹಾನತ್ರ ವಿಭೇದಯೋಗೇ**
**ಹ್ಯನಾದಿಯೋಗೇನ ಭವನ್ತಿ ನಿತ್ಯಾಃ ।**
**ತಥಾಸ್ಯ ನಾಧಿಕ್ಯಮುಪೈತಿ ಕಿಞ್ಚಿತ್**
**ಅನಾದಿಯೋಗೇನ ಭವನ್ತಿ ಪುಂಸಃ ॥ ೨೦ ॥**

೨೦. (ಬ್ರಹ್ಮವು) ಅನೇಕವಾಗಿದೆಯೆಂದರೆ ಮಹಾದೋಷವು. (ಜೀವರು) ಆನಾದಿ(ಮಾಯಾ)ಯೋಗದಿಂದ ನಿತ್ಯರಾಗಿರುತ್ತಾರೆ. ಹೀಗಿದ್ದರೂ (ಬ್ರಹ್ಮಕ್ಕೆ) ಸ್ವಲ್ಪವೂ ಆಧಿಕ್ಯವು ಉಂಟಾಗಲಾರದು. (ಪುರಾಣ)ಪುರುಷನಾದ (ಆತ್ಮನಿಗೆ) ಅನಾದಿಯೋಗದಿಂದ ಅನೇಕ (ರೂಪ)ಗಳುಂಟಾಗುವವು.

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್- ಯದ್ಯೇವಂ ಚೋದಯತಃ ಏಷಃ ಅಭಿಪ್ರಾಯಃ ನಿಯೋಜ್ಯನಿಯೋಜಕತ್ವಾದಿಭೇದದರ್ಶನಾತ್ ಏಕಸ್ಯ ಕೂಟಸ್ಥಸ್ಯ ತದಸಂಭವಾತ್ ಭೇದೇನ ಭವಿತವ್ಯಮ್ ಇತಿ । ತತ್ರ ಯದಿ ಬ್ರಹ್ಮಣ ಏವ ನಾನಾತ್ವಮ್ ಅಭ್ಯುಪಗಮ್ಯತೇ, ತದಾ ಅತ್ರ ಅಸ್ಮಿನ್ ವಿಭೇದಯೋಗೇ, ಬ್ರಹ್ಮಣೋ ನಾನಾತ್ವಯೋಗೇ ದೋಷೋ ಮಹಾನ್ ; ಕೋ ದೋಷಃ ? ಅದ್ವೈತಿನೋ ಹಿ ಅತಥ್ಯವಾದಿನೋ ಅವೈದಿಕಾ ಭವೇಯುಃ, ವೇದಹೃದಯಂ ಪರಮಾರ್ಥಮದ್ವೈತಂ ಚ ಬಾಧ್ಯಂ ಸ್ಯಾತ್ । ಕಿಂಚ ನಾನಾರೂಪೇಣ ಪರಿಣತತ್ವಾತ್ ಅನಿತ್ಯತ್ವಾದಿದೋಷಃ, ಅಸ್ಥೂಲತ್ವಾದಿವಾಕ್ಯವಿರೋಧಶ್ಚ ಪ್ರಸಜ್ಯೇತ॥

ಅಥೋಚ್ಯತೇ- ಬ್ರಹ್ಮಣೋ ನಾನಾತ್ವಂ ನಾಸ್ಮಾಭಿರಭ್ಯುಪಗಮ್ಯತೇ; ಅಪಿ ತು ಜೀವಪರಯೋಃ ಭೇದೋ ಅಭ್ಯುಪಗಮ್ಯತ ಇತಿ । ತತ್ರಾಪಿ ಮಹಾನ್ ದೋಷಃ ವಿನಾಶಃ ಪ್ರಾಪ್ನೋತಿ । ಶ್ರೂಯತೇ ಚ- 'ಯದಾ ಹ್ಯೇವೈಷ ಏತಸ್ಮಿನ್ ಉದರಮನ್ತರಂ ಕುರುತೇ । ಅಥ ತಸ್ಯ ಭಯಂ ಭವತಿ' (ತೈ. ೨-೭), 'ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' (ಕಾ. ೨-೧-೧೦), 'ಅಥ ಯೋಽನ್ಯಾಂ ದೇವತಾಮುಪಾಸ್ತೇ ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುಃ' (ಬೃ. ೧-೪-೧೦), 'ಅಥ ಯೇಽನ್ಯಥಾತೋ

ವಿದುರನ್ಯರಾಜಾನಃ ತೇ ಕ್ಷಯ್ಯಲೋಕಾ ಭವನ್ತಿ' (ಛಾಂ. ೭-೨೫-೨), 'ಸರ್ವಂ ತಂ ಪರಾದಾತ್ ಯೋಽನ್ಯತ್ರಾತ್ಮನಃ ಸರ್ವಂ ವೇದ' (ಬೃ. ೨-೪-೬) ಇತಿ ಅಥವಾ ಜೀವಪರಯೋಃ ಭೇದೇ ಅಭ್ಯುಪಗಮ್ಯಮಾನೇ 'ತತ್ತ್ವಮಸಿ' (ಛಾಂ. ೬ ೮-೭), 'ಅಹಂ ಬ್ರಹ್ಮಾಸ್ಮಿ' (ಬೃ. ೧-೪-೧೦), 'ಅಯಮಾತ್ಮಾ ಬ್ರಹ್ಮ' (ಬೃ. ೨-೫-೧೯), 'ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ' (ಬೃ. ೩-೪-೧), 'ಏಷ ತ ಆತ್ಮಾಽನ್ತರ್ಯಾಮ್ಯಮೃತಃ' (ಬೃ. ೩-೭-೩), 'ಅಯಮೇವ ಸಃ ಯೋಽಯಮಾತ್ಮಾ ಇದಮಮೃತಮಿದಂ ಬ್ರಹ್ಮೇದಂ ಸರ್ವಮ್' (ಬೃ. ೨-೫-೩), 'ಇದಂ ಸರ್ವಂ ಯದಯಮಾತ್ಮಾ' (ಬೃ. ೨-೪-೬), ಏಷ ತ ಆತ್ಮಾ ಸರ್ವಾನ್ತರಃ' (ಬೃ. ೩-೪-೨), ಇತಿ । 'ತ್ವಂ ವಾ ಅಹಮಸ್ಮಿ ಭಗವೋ ದೇವತೇ ಅಹಂ ವೈ ತ್ವಮಸಿ' (ಜಾ. ? ), ಇತಿ । 'ಸ ವಾ ಏಷ ಮಹಾನಜ ಆತ್ಮಾ ಅಜರೋಽಮರೋಽಮೃತೋಽಭಯೋ ಬ್ರಹ್ಮಾಭಯಂವೈ ಬ್ರಹ್ಮಾಭಯಂ ಹಿ ವೈ ಬ್ರಹ್ಮ ಭವತಿ' (ಬೃ. ೪-೪-೨೫) ಇತ್ಯೇವಮಾದಿಶ್ರುತಿ ಸ್ಮೃತೀತಿಹಾಸಪುರಾಣವಿರುದ್ಧಭಾಷಿತತ್ವಾತ್ ಅವೈದಿಕತ್ವಂ ನಾಮ ಮಹಾನ್ ದೋಷೋ ಭವತಿ ॥

(ಭಾಷ್ಯಾರ್ಥ)

ಹೀಗೆ ಕೇಳಲ್ಪಟ್ಟ ಪೂಜ್ಯನಾದ (ಸನತ್ಸುಜಾತನು) ಹೇಳುತ್ತಾನೆ :- ಚೋದನೆಮಾಡುವವನ ಅಭಿಪ್ರಾಯವು ಹೀಗಿದೆಯೆನ್ನುವದಾದರೆ- (ಇದರ ವಿವರ) ನಿಯೋಜ್ಯ. ನಿಯೋಜಕ- ಮುಂತಾದ ಭೇದಗಳು ಕಂಡುಬಂದಿರುವದರಿಂದ ಕೂಟಸ್ಥನಿತ್ಯನೂ ಏಕನೂ ಆದ ಆತ್ಮನಿಗೆ ಅದು ಸಂಭವಿಸುವದಿಲ್ಲವಾದ್ದರಿಂದ (ಜೀವಪರಮಾತ್ಮರಿಗೆ) ಭೇದವಿರಬೇಕೆಂದಾಗುತ್ತದೆ. ಒಂದುವೇಳೆ ಬ್ರಹ್ಮಕ್ಕೇ ನಾನಾತ್ವವನ್ನು ಒಪ್ಪುವದಾದರೆ ಈ ಭೇದಯೋಗದಲ್ಲಿ- ಎಂದರೆ ಬ್ರಹ್ಮದ ನಾನಾತ್ವವನ್ನು (ಹೇಳುವ) ಪಕ್ಷದಲ್ಲಿ ಹೆಚ್ಚಿನ ದೋಷವುಂಟಾಗುವದು. (ಆ) ದೋಷವು ಯಾವದು ? ಅದ್ವೈತಿಗಳು ಸುಳ್ಳುಹೇಳುವವರೆಂದೂ ವೇದವಿರುದ್ಧವಾದ ಮತದವರೆಂದೂ ಆದೀತು. ವೇದದ ಹೃದಯವಾದ ಪರಮಾರ್ಥವಾದ ಅದ್ವೈತವು ಬಾಧಿತವೂ ಆದೀತು. ಮತ್ತು ಅನೇಕರೂಪದಿಂದ (ಬ್ರಹ್ಮವು) ಪರಿಣಮಿಸುವದರಿಂದ ಅನಿತ್ಯವೇ ಮುಂತಾದ ದೋಷಗಳೂ ಬರುವವು, 'ಅಸ್ಥೂಲಮ್' ಮುಂತಾದ (ವೇದ)ವಾಕ್ಯಗಳಿಗೆ ವಿರೋಧವೂ ಆದೀತು.

ಇನ್ನು (ಪೂರ್ವಪಕ್ಷಿಯ) ಅಭಿಪ್ರಾಯವು ಹೀಗಿರಬಹುದು : ಬ್ರಹ್ಮದ ನಾನಾತ್ವವನ್ನು ನಾವು ಒಪ್ಪಿರುವದಿಲ್ಲ. ಆದರೆ ಜೀವಪರಮಾತ್ಮರುಗಳ ಭೇದವನ್ನು ಒಪ್ಪಿರುತ್ತೇವೆ. ಹೀಗಾದರೂ ಹೆಚ್ಚಿನ ವಿನಾಶವೇ ಪ್ರಾಪ್ತವಾಗುತ್ತದೆ. 'ಯಾವಾಗಲೂ ಈತನು ಇದರಲ್ಲಿ ಸ್ವಲ್ಪವಾದರೂ ಅಂತರವನ್ನು ಮಾಡಿಕೊಳ್ಳು

ತ್ತಾನೋ ಅದರಿಂದ ಇವನಿಗೆ ಭಯವು ಆಗುತ್ತದೆ', 'ಇಲ್ಲಿ ಬೇರೆಬೇರೆಯಾಗಿರುವಂತೆ ಯಾವನು ಕಾಣುವನೋ ಅವನು ಮೃತ್ಯುವಿನಿಂದ ಮೃತ್ಯುವನ್ನು ಪಡೆಯುವನು', "ಇನ್ನು ಯಾವನು 'ಇದು ಬೇರೆ, ನಾನು ಬೇರೆಯಾಗಿರುವೆನು' ಎಂದು ಅನ್ಯದೇವತೆಯನ್ನು ಉಪಾಸನೆಮಾಡುತ್ತಾನೋ ಅವನು ಅರಿಯನು ; ಅವನು ದೇವತೆಗಳಿಗೆ ಪಶುವು ಹೇಗೋ ಹಾಗೆ", 'ಇನ್ನು ಯಾರು ಇದಕ್ಕಿಂತ ಬೇರೆಯಾಗಿ ತಿಳಿದುಕೊಂಡಿರುವರೋ (ಅವರು) ಮತ್ತೊಬ್ಬ ರಾಜನಿರುವವರು ; ಅವರು ಕ್ಷಯ್ಯಲೋಕರಾಗುವರು', 'ಯಾವನು ಯಾವದನ್ನೇ ಆಗಲಿ ಆತ್ಮನಿಗಿಂತ ಬೇರೆಯಾಗಿ ಅರಿಯುತ್ತಾನೋ ಅವನನ್ನು ಆದೆಲ್ಲವೂ ಹೊರದೂಡುವದು' –ಎಂದು (ಶ್ರುತಿಯಲ್ಲಿ) ಕೇಳಿಯೂಬಂದಿದೆ. ಅಥವಾ ಜೀವಪರಮಾತ್ಮರುಗಳಿಗೆ ಭೇದವನ್ನು ಒಪ್ಪಿದರೆ 'ಅದೇ ನೀನಾಗಿರುವೆ', 'ನಾನು ಬ್ರಹ್ಮವಾಗಿದೇನೆ', 'ಈ ಆತ್ಮನೇ ಬ್ರಹ್ಮವು', 'ಯಾವದು ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವೋ ಯಾವನು ಸರ್ವಾಂತರನಾದ ಆತ್ಮನೋ', 'ಅವನೇ ನಿನ್ನ ಆತ್ಮನಾದ ಅಮೃತನಾದ ಅಂತರ್ಯಾಮಿಯು', 'ಯಾವ ಈ ಆತ್ಮನಿರುವನೋ ಇವನೇ ಅವನು ; 'ಇದೆಲ್ಲವೂ ಅಮೃತವಾದ ಬ್ರಹ್ಮವೇ' 'ಈ ಎಲ್ಲವೂ ಆತ್ಮನೆಂಬುದೇ', 'ಇವನೇ ನಿನ್ನ ಸರ್ವಾಂತರನಾದ ಆತ್ಮನು', 'ಪೂಜ್ಯಳಾದ ಎಲೈ ದೇವತೆಯೆ, ನೀನೇ ನಾನಾಗಿರುವೆನು ; ನಾನೇ ನೀನಾಗಿರುತ್ತೀಯೆ' ( ? ) ಎಂದೂ 'ಆ ಈತನೇ ಮಹಾನ್ ಅಜ ಆತ್ಮನು, ಅಜರನು, ಅಮರನು, ಅಮೃತನು, ಅಭಯನು, ಬ್ರಹ್ಮವು ; ಬ್ರಹ್ಮವು ಅಭಯವಷ್ಟೆ ?'– ಇವೇ ಮುಂತಾದ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳಿಗೆ[1] ವಿರುದ್ಧವಾದ ಮಾತಾಗುವದರಿಂದ ಅವೈದಿಕತ್ವವೆಂಬ ಮಹಾದೋಷವುಂಟಾಗುವದು.

(ಭಾಷ್ಯ)

ಕಥಂ ತರ್ಹಿ ತ್ವತ್ಪಕ್ಷೇ ಜೀವೇಶ್ವರಾದಿವ್ಯವಹಾರಭೇದಃ ? ಕಥಂ ವಾ ತೇಷಾಂ ನಿತ್ಯತ್ವಮ್, ಇತಿ । ತತ್ರಾಹ– 'ಅನಾದಿಯೋಗೇನ ಭವನ್ತಿ ನಿತ್ಯಾಃ' ಇತಿ । ಅನಾದಿರವಿದ್ಯಾಖ್ಯಾ ಮಾಯಾ । ತಥಾ ಚೋಕ್ತಂ ಭಗವತಾ– 'ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ' (ಗೀ. ೧೩–೧೯) ಇತಿ । 'ಇಯಂ ಹಿ ಸಾಕ್ಷಾತ್ ಜಗತೋ ಯೋನಿರೇಕಾ ಸರ್ವಾತ್ಮಿಕಾ ಸರ್ವನಿಯಾಮಿಕಾ ಚ । ಮಾಹೇಶ್ವರೀ ಶಕ್ತಿರನಾದಿಸಿದ್ಧಾ ವ್ಯೋಮಾಭಿಧಾನಾ ದಿವಿ

1. ಇತಿಹಾಸಪುರಾಣವಾಕ್ಯಗಳನ್ನು ಮುಂದೆ ಕೊಟ್ಟಿದೆ. ಇಲ್ಲಿಯವರೆಗೆ ಉದಾಹರಿಸಿರುವವುಗಳೆಲ್ಲ ಶ್ರುತಿಗಳೇ.

ರಾಜತೀವ' (?) ಇತಿ ಚ । ತದ್ಯೋಗೇನ ಅನಾದಿಮಾಯಾಯೋಗೇನ ಭವನ್ತಿ ಜೀವಾದಯಃ ನಿತ್ಯಾಃ, ಅದ್ವಿತೀಯಸ್ಯಾಪಿ ಪರಮಾತ್ಮನೋ ಮಾಯಯಾ ಬಹುರೂಪತ್ವಮ್ ಉಪಪದ್ಯತ ಏವ ಇತ್ಯರ್ಥಃ । ಶ್ರೂಯತೇ ಚ- ಏಕಸ್ಯ ಮಾಯಯಾ ಬಹುರೂಪತ್ವಮ್- 'ರೂಪಂ ರೂಪಂ ಪ್ರತಿರೂಪೋ ಬಭೂವ' (ಬೃ. ೨-೫-೧೯), 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫ ೧೯), 'ಏಕೋ ದೇವಃ ಸರ್ವಭೂತೇಷು ಗೂಢಃ' (ಶ್ವೇ. ೬-೧೧) 'ಏಕಂ ಸದ್ವಿಪ್ರಾ ಬಹುಧಾ ವದನ್ತಿ' (ಋ. ೧-೨೨-೧೬೪-೪೬), 'ಏಕಂ ಸನ್ತಂ ಬಹುಧಾ ಕಲ್ಪಯನ್ತಿ' (ಋ. ೧೦-೧೨-೧೧೪-೫), 'ಏಕೋ ದೇವೋ ಬಹುಧಾ ನಿವಿಷ್ಟಃ' (ತೈ. ಆ. ೩-೧೪-೪೧), 'ಏಕಃ ಸನ್ ಬಹುಧಾ ವಿಚಾರಃ' (ತೈ. ಆ. ೩-೧೧-೨೦), 'ತ್ವಮೇಕೋಽಸಿ ಬಹೂನನುಪ್ರವಿಷ್ಟಃ' (ತೈ. ಆ. ೩-೧೪-೪೩), 'ಅಜಾಯಮಾನೋ ಬಹುಧಾ ವಿಜಾಯತೇ' (ತೈ. ಆ. ೩-೧೩-೩೯), ಇತಿ । ತಥಾ ಚ ಮೋಕ್ಷಧರ್ಮೇ- 'ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ । ಏಕಧಾ ಬಹುಧಾ ಚೈವ ದೃಶ್ಯತೇ ಜಲಚನ್ದ್ರವತ್' ಇತಿ । ತಥಾ ಚ ಯಾಜ್ಞವಲ್ಕ್ಯಃ- 'ಆಕಾಶಮೇಕಂ ಹಿ ಯಥಾ ಘಟಾದಿಷು ಪೃಥಗ್ ಭವೇತ್ । ತಥಾತ್ಮೈಕೋಽಪ್ಯನೇಕಶ್ಚ ಜಲಾಧಾರೇಷ್ವಿವಾಂಶುಮಾನ್' ಇತಿ । ತಥಾ ಚ ಕಾವಷೇಯಗೀತಾಸು- 'ಏಕಶ್ಚ ಸೂರ್ಯೋ ಬಹುಧಾ ಜಲಾಧಾರೇಷು ದೃಶ್ಯತೇ । ಆಭಾತಿ ಪರಮಾತ್ಮಾಪಿ ಸರ್ವೋಪಾಧಿಷು ಸಂಸ್ಥಿತಃ ॥ ಬ್ರಹ್ಮ ಸರ್ವಶರೀರೇಷು ಬಾಹ್ಯೇ ಚಾಭ್ಯನ್ತರೇ ಸ್ಥಿತಮ್ । ಆಕಾಶಮಿವ ಕುಮ್ಭೇಷು ಬುದ್ಧಿಗಮ್ಯೋ ನ ಚಾನ್ಯಥಾ'॥ ಇತಿ। ತಥಾ ಚ ಆಹ ಪರಮೇಶ್ವರಃ- 'ನಿತ್ಯಂ ಸರ್ವಗತೋ ಹ್ಯಾತ್ಮಾ ಕೂಟಸ್ಥೋ ದೋಷವರ್ಜಿತಃ । ಏಕಃ ಸನ್ ಭಿದ್ಯತೇ ಶಕ್ತ್ಯಾ ಮಾಯಯಾ ಸರ್ವಭಾವತಃ' ಇತಿ ॥

(ಭಾಷ್ಯಾರ್ಥ)

ಹಾಗಾದರೆ ನಿನ್ನ ಮತನಲ್ಲಿ ಜೀವೇಶ್ವರಾದಿಭೇದವ್ಯವಹಾರವು ಹೇಗೆ ? ಅವರುಗಳಿಗೆ ನಿತ್ಯತ್ವವಾದರೂ ಹೇಗೆ (ಸಿದ್ಧಿಸುವದು ?) ಎಂದರೆ ಹೇಳುತ್ತಾನೆ- ಅನಾದಿಯೋಗದಿಂದ ನಿತ್ಯರಾಗಿರುತ್ತಾರೆ. 'ಅನಾದಿ' ಎಂದರೆ 'ಅವಿದ್ಯೆ' ಎಂಬ ಹೆಸರಿನ ಮಾಯೆ. ಭಗವಂತನೂ ಕೂಡ- 'ಪ್ರಕೃತಿ, ಪುರುಷ- ಇವೆರಡನ್ನೂ ಅನಾದಿಯೆಂದು ತಿಳಿ' ಎಂದು (ಹೇಳಿರುತ್ತಾನೆ). 'ಪ್ರಪಂಚಕ್ಕೆಲ್ಲ ಒಂದೇ ಕಾರಣವಾದ ಸರ್ವಾತ್ಮಕವೂ ಎಲ್ಲವನ್ನೂ ನಿಯಮನಮಾಡತಕ್ಕದ್ದೂ, ಅನಾದಿಸಿದ್ಧವೂ ಆಕಾಶವೆಂಬ ಹೆಸರುಳ್ಳದ್ದೂ ಆದ ಮಹೇಶ್ವರನ ಶಕ್ತಿಯು ಆಕಾಶದಲ್ಲಿ ಹೊಳೆಯುತ್ತಿರುವಂತೆ ಸಾಕ್ಷಾತ್ತಾಗಿ ( ತೋರುತ್ತಿರುವದು ? ) ಎಂದೂ ಹೇಳಿದೆ. ಅದರ ಯೋಗ(ಸಂಬಂಧ)ದಿಂದ ಜೀವರೇ ಮುಂತಾದವರು ನಿತ್ಯರಾಗಿರುತ್ತಾರೆ.

ಅದ್ವಿತೀಯನಾದ ಪರಮಾತ್ಮನಿಗೂ ಮಾಯೆಯಿಂದ ಅನೇಕರೂಪಗಳಾಗುವದು ಹೊಂದುತ್ತದೆಯೆಂದೇ ಅಭಿಪ್ರಾಯ. ಒಬ್ಬನಿಗೇ ಮಾಯೆಯಿಂದ ಅನೇಕ ರೂಪತ್ವವು ಶ್ರುತಿಯಲ್ಲಿಯೂ ಕೇಳಬರುತ್ತಿದೆ- 'ರೂಪರೂಪಕ್ಕೂ ಪ್ರತಿರೂಪ ನಾದನು', 'ಇಂದ್ರನು[1] ಮಾಯೆಗಳಿಂದ ಬಹುರೂಪನಾಗಿ ಕಾಣುತ್ತಾನೆ', 'ಒಬ್ಬನೇ ದೇವನು ಎಲ್ಲಾ ಭೂತಗಳಲ್ಲಿಯೂ ಗೂಢನಾಗಿರುವನು', 'ಇರುವ ದೊಂದನ್ನೇ ವಿಪ್ರರು ಬಗೆಬಗೆಯಾಗಿ ಕರೆಯುತ್ತಿರುವರು', 'ಒಬ್ಬನೇ ಆಗಿರು ವವನನ್ನು ಬಹುವಿಧವಾಗಿ ಕಲ್ಪಿಸುತ್ತಿರುವರು', 'ಒಬ್ಬನೇ ದೇವನು ಬಹುವಿಧ ವಾಗಿ ಇದ್ದುಕೊಂಡಿರುವನು', 'ಒಬ್ಬನೇ ಆಗಿದ್ದು ನಾನಾರೀತಿಯಿಂದ ನಡೆಯು ತ್ತಿರುವನು', 'ನೀನೊಬ್ಬನೇ ಬಹು(ಶರೀರ)ಗಳನ್ನು ಪ್ರವೇಶಿಸಿರುತ್ತೀಯೆ', 'ಹುಟ್ಟದೆಇರುವ (ಆತ್ಮನು) ನಾನಾರೂಪನಾಗಿ (ಮಾಯೆಯಿಂದ) ಹುಟ್ಟುತ್ತಾನೆ' –ಎಂದು ಹೇಳಿರುತ್ತದೆ. ಮತ್ತು ಮೋಕ್ಷಧರ್ಮದಲ್ಲಿ – 'ಒಬ್ಬನೇ ಆಗಿರುವ ಭೂತಾತ್ಮನು ಒಂದೊಂದು ಭೂತದಲ್ಲಿಯೂ ಇದ್ದುಕೊಂಡು ನೀರಿನಲ್ಲಿ ಕಾಣುವ ಚಂದ್ರನಂತೆ ಒಂದೇ ರೂಪನಾಗಿಯೂ ನಾನಾರೂಪನಾಗಿಯೂ ಕಂಡುಬರು ತ್ತಿರುವನು' ಎಂದು ಹೇಳಿದೆ. ಯಾಜ್ಞವಲ್ಕ್ಯರೂ ಕೂಡ- 'ಆಕಾಶವೊಂದೇ ಮಡಕೆ ಮುಂತಾದವುಗಳಲ್ಲಿ ಹೇಗೆ ಬೇರೆಬೇರೆಯಾಗಿರುವಂತೆ ಕಾಣುವದೋ, ಸೂರ್ಯನು ನೀರಿನ ಪಾತ್ರೆಗಳಲ್ಲಿ ಹೇಗೆ (ಬೇರೆಬೇರೆಯಾಗಿ) ತೋರುವನೋ ಹಾಗೆ ಆತ್ಮನೊಬ್ಬನೇ ಅನೇಕವಾಗಿ ತೋರುತ್ತಿರುವನು' ಎಂದು ಹೇಳಿದೆ. ಕಾವಷೇಯಗೀತೆಗಳಲ್ಲಿಯೂ 'ಒಬ್ಬನೇ ಸೂರ್ಯನು ನೀರಿನ ಪಾತ್ರೆಗಳಲ್ಲಿ ನಾನಾರೂಪನಾಗಿ ಕಾಣುತ್ತಾನೆ. ಹಾಗೆಯೇ ಪರಮಾತ್ಮನೂ ಎಲ್ಲಾ ಉಪಾಧಿ ಗಳಲ್ಲಿಯೂ ಇದ್ದುಕೊಂಡು (ನಾನಾರೂಪನಾಗಿ ತೋರುವನು). ಎಲ್ಲಾ ಶರೀರ ಗಳಲ್ಲಿಯೂ ಒಳಗೂ ಹೊರಗೂ ಬ್ರಹ್ಮವು- ಆಕಾಶವು ಮಡಕೆಗಳಲ್ಲಿರುವಂತೆ ಇದ್ದುಕೊಂಡಿರುವದು- ಬುದ್ಧಿಗೆಮಾತ್ರ ಕಂಡುಬರುವದೇ ಹೊರತು ಬೇರೆ ರೀತಿಯಿಂದ (ನೋಡಲಾಗುವದಿಲ್ಲ') (?) ಪರಮೇಶ್ವರನೂ 'ನಿತ್ಯನೂ ಸರ್ವ ವ್ಯಾಪಿಯೂ ಕೂಟಸ್ಥನೂ ದೋಷರಹಿತನೂ ಒಬ್ಬನೇ ಆಗಿರುವ ಆತ್ಮನು ಮಾಯೆಯ ಶಕ್ತಿಯಿಂದ ಎಲ್ಲಾ ಪದಾರ್ಥಗಳ ರೂಪದಲ್ಲಿಯೂ ಭೇದದಿಂದ (ಕಂಡುಬರುತ್ತಾನೆ) ಎಂದು ಹೇಳಿರುತ್ತಾನೆ.

(ಭಾಷ್ಯ)

ಯಸ್ಮಾತ್ ಏಕಸ್ಯೈವ ಮಾಯಯಾ ಬಹುರೂಪತ್ವಂ ತಸ್ಮಾತ್ ಸ ಏವ ಕಾರಣಾತ್ಮಾ ಪರಮೇಶ್ವರಃ ಕಾರ್ಯಾತ್ಮಾನಂ ಜೀವಾತ್ಮಾನಂ ನಿಯುಙ್ಕ್ತೇ ಕೃತಪ್ರಯತ್ನಾಪೇಕ್ಷಃ ಸನ್ ಮಾಯಯಾ, ನ ಪರಮಾರ್ಥತಃ ಸಂಸರತಿ

1. ಪರಮೇಶ್ವರನು.

ಸಂಸಾರಯತಿ ವಾ । ತಥಾ ಚೋಕ್ತಂ ಕಾವಷೇಯಗೀತಾಸು– 'ನ ಜಾಯತೇ ನ ಮ್ರಿಯತೇ ನ ವಧ್ಯೋ ನ ಚ ಘಾತುಕಃ । ನ ಬದ್ಧೋ ಬನ್ಧಕಾರೀ ವಾ ನ ಮುಕ್ತೋ ನ ಚ ಮೋಕ್ಷದಃ ॥ ಪುರುಷಃ ಪರಮಾತ್ಮಾ ತು ಯತ್ತತೋಽನ್ಯದಸಚ್ಚ ತತ್ ॥' ಇತಿ । ತಥಾ ಚ ಆಹ ಭಗವಾನ್ ಪರಮೇಶ್ವರಃ– 'ಅಹಂ ಪ್ರಶಾಸ್ತಾ ಸರ್ವಸ್ಯ ಮಾಯಾತೀತಸ್ವಭಾವತಃ । ನ ಚಾಪ್ಯಯಂ ಸಂಸರತಿ ನ ಚ ಸಂಸಾರಯೇತ್ ಪ್ರಭುಃ' । ಇತಿ । ಕಿಂ ಚ ಮಾಯಾನಿಮಿತ್ತಭೇದೇಽಭ್ಯುಪಗಮ್ಯಮಾನೇ ಅಸ್ಯ ಪರಮಾತ್ಮನಃ ಕಾರ್ಯಕಾರಣಾತ್ಮನಾ ಅವಸ್ಥಿತಸ್ಯಾಪಿ ಆಧಿಕ್ಯಂ ಸ್ವರೂಪಾಧಿಕ್ಯಂ ನಾಪ್ನೋತಿ ಕಿಞ್ಚಿತ್ ಕಿಞ್ಚಿದಪಿ ಮಾಯಾತ್ಮಕತ್ವಾತ್ ಸಂಸಾರಸ್ಯ ಪೂರ್ವವತ್ ಕೂಟಸ್ಥ ಏವ ಭವತಿ ಇತ್ಯರ್ಥಃ ॥

(ಭಾಷ್ಯಾರ್ಥ)

ಒಬ್ಬನೇ (ಆಗಿರುವ) ಆತ್ಮನಿಗೇ ಮಾಯೆಯಿಂದ ಬಹುರೂಪತ್ವವು ಉಂಟಾಗಿರುವದರಿಂದ ಕಾರಣಾತ್ಮನಾದ ಆ ಪರಮೇಶ್ವರನೇ ಕಾರ್ಯಾತ್ಮನಾದ ಜೀವನನ್ನು ಮಾಯೆಯಿಂದ ಕೃತಪ್ರಯತ್ನಾಪೇಕ್ಷನಾಗಿ[1] ನಿಯಮನಮಾಡುತ್ತಾನೆ. ಪರಮಾರ್ಥವಾಗಿ ಸಂಸಾರಮಾಡುವದೂ ಇಲ್ಲ ; ಸಂಸಾರಮಾಡಿಸುವದೂ ಇಲ್ಲ. ಕಾವಷೇಯಗೀತೆಗಳಲ್ಲಿಯೂ – '(ಆತ್ಮನು) ಹುಟ್ಟುವದಿಲ್ಲ, ಸಾಯುವದಿಲ್ಲ, ಕೊಲ್ಲಲ್ಪಡುವವನೂ ಇಲ್ಲ, ಕೊಲ್ಲುವವನೂ ಇಲ್ಲ, ಬದ್ಧನೂ ಇಲ್ಲ, ಬಂಧನಮಾಡುವವನೂ ಇಲ್ಲ, ಮುಕ್ತನೂ ಇಲ್ಲ, ಮೋಕ್ಷವನ್ನು ಕೊಡುವವನೂ ಇಲ್ಲ. ಇದೆಲ್ಲವೂ ಪರಮಾತ್ಮನಾದ ಪುರುಷನೇ ; ಅವನಿಗಿಂತ ಬೇರೆಯಾದದ್ದೆಲ್ಲವೂ ಅಸತ್ತೇ' (?) ಎಂದು ಹೇಳಿದೆ. ಪೂಜ್ಯನಾದ ಪರಮೇಶ್ವರನೂ ಸಹ– 'ಮಾಯೆಯನ್ನು ಮೀರಿದ ಸ್ವಭಾವದವನಾದ್ದರಿಂದ ನಾನು ಎಲ್ಲವನ್ನೂ ಆಳುವವನು, ಈ (ಆತ್ಮನು) ಸಂಸಾರಿಯಲ್ಲ, ಪ್ರಭುವು (ಯಾರನ್ನೂ) ಸಂಸಾರಿಯಾಗಿ ಮಾಡುವದಿಲ್ಲ' ಎಂದು (ಹೇಳಿದ್ದಾನೆ.) ಮತ್ತು ಮಾಯೆಯು ನಿಮಿತ್ತದಿಂದಾಗಿರುವ ಭೇದವನ್ನು ಒಪ್ಪಿದಾಗ ಈ ಪರಮಾತ್ಮನಿಗೆ ಕಾರ್ಯಕಾರಣರೂಪದಿಂದ ಇದ್ದುಕೊಂಡಿರುವಾಗಲೂ ಸ್ವಲ್ಪವೂ ಆಧಿಕ್ಯವು ಎಂದರೆ ಸ್ವಲ್ಪವೂ ಸ್ವರೂಪದಲ್ಲಿ ಹೆಚ್ಚುಗಾರಿಕೆಯು ಉಂಟಾಗಲಾರದು. (ಏಕೆಂದರೆ) ಸಂಸಾರವು ಮಾಯಾರೂಪವಾಗಿರುವದರಿಂದ ಹಿಂದಿನಂತೆ ಕೂಟಸ್ಥನಾಗಿಯೇ ಇದ್ದುಕೊಂಡಿರುತ್ತಾನೆ.

(ಭಾಷ್ಯ)

ಯಸ್ಮಾದೇವಂ ತಸ್ಮಾತ್ ಅನಾದಿಯೋಗೇನ ಅನಾದ್ಯವಿದ್ಯಾಯೋಗೇನ ಭವನ್ತಿ ಪುಂಸಃ ಪುಮಾಂಸೋ ಜೀವಾಃ ಬಹವೋ ಭವನ್ತಿ । ಅಥವಾ ಪುಂಸಃ

---

1. ಜೀವನ ಧರ್ಮಾಧರ್ಮರೂಪವಾದ ಪ್ರಯತ್ನಕ್ಕೆ ಅನುಗುಣವಾಗಿ ಈಶ್ವರನು ಪ್ರೇರಕನಾಗಿರುತ್ತಾನೆ– ಎಂದಭಿಪ್ರಾಯ. ಸೂ. ಭಾ. ೨–೩–೪೨ನ್ನು ನೋಡಿರಿ,

ಪುರುಷಸ್ಯ ಪೂರ್ಣಸ್ಯ ಪರಮಾತ್ಮನೋ ಯಾ ಮಾಯಾ ಅನಾದಿಸಿದ್ಧಾ ತದ್ಯೋಗೇನ ಬಹವೋ ಭವನ್ತಿ । ತಥಾ ಚ ಏತತ್ಸರ್ವಮ್ ಅನುಗೀತಾಸು ಸ್ಪಷ್ಟಮಾಹ -

ಅಜ್ಞಾನಗುಣರೂಪೇಣ ತತ್ತ್ವರೂಪೇಣ ಚ ಸ್ಥಿತಮ್ ।
ಮಮತ್ವೇ ಯದಿ ಸಂಸಾರೋ ನೋಚ್ಛಿದ್ಯೇತ ಕಥಂಚನ ॥
ಅವಿದ್ಯಾಶಕ್ತಿಸಂಪನ್ನಃ ಸರ್ವಯೋನಿಷು ವರ್ತತೇ ।
ತತ್ತ್ಯಾಜ್ಯಂ ಸರ್ವವಿದುಷಾಂ ಮೋಹನಂ ಸರ್ವದೇಹಿನಾಮ್ ॥
ತನ್ನಾಶೇನ ಮಹಾನಾತ್ಮಾ ರಾಜತೇ ನಾತ್ರ ಸಂಶಯಃ ।
ಅಹಂಕಾರಸ್ಯ ವಿಜಯೇ ಹ್ಯಾತ್ಮಾ ಸಿದ್ಧೋ ಭವಿಷ್ಯತಿ ॥
ಸಿದ್ಧೇ ಚಾತ್ಮನಿ ನಿರ್ದುಃಖೀ ಪೂರ್ಣಬೋಧೋ ಭವಿಷ್ಯತಿ ।
ಪೂರ್ಣಬೋಧಂ ಪರಾನನ್ದಮನನ್ತಂ ಲೋಕಭಾವನಮ್ ॥
ಭಜತ್ಯವ್ಯಭಿಚಾರೇಣ ಪರಮಾತ್ಮಾನಮಚ್ಯುತಮ್ ।
ತದ್ಭಕ್ತಸ್ತತ್ಪ್ರಸಾದೇನ ಜ್ಞಾನಾನಲಸಮನ್ವಿತಃ ॥
ಅಖಿಲಂ ಕರ್ಮ ದಗ್ಧ್ವಾನ್ತೇ ವಿಷ್ಣ್ವಾಖ್ಯಮಮೃತಂ ಶುಭಮ್ ।
ಪ್ರಾಪ್ನೋತಿ ಸರ್ವಸಿದ್ಧಾರ್ಥಮಿತಿ ವೇದಾನುಶಾಸನಮ್ ॥

ಇತಿ ॥

(ಭಾಷ್ಯಾರ್ಥ)

ಹೀಗಿರುವದರಿಂದ ಅನಾದಿಯೋಗದಿಂದ ಎಂದರೆ ಅನಾದಿಯಾದ ಅವಿದ್ಯೆಯ ಸಂಬಂಧದಿಂದ ಪುಂಸರು– ಪುರುಷರು ಎಂದರೆ ಅನೇಕಜೀವರು ಉಂಟಾಗುತ್ತಾರೆ. ಅಥವಾ ಪುಂಸನ ಎಂದರೆ ಪುರುಷನ, ಪೂರ್ಣನಾದ ಪರಮಾತ್ಮನ ಅನಾದಿ ಸಿದ್ಧವಾದ ಯಾವ ಮಾಯೆಯುಂಟೋ ಅದರ ಯೋಗದಿಂದ ಬಹುವಾಗಿ ಆಗುತ್ತಾರೆ. ಇದೆಲ್ಲವನ್ನೂ ಅನುಗೀತೆಗಳಲ್ಲಿ[1] (ಹೀಗೆ) ಸ್ಪಷ್ಟವಾಗಿ ಹೇಳಿದೆ : 'ನನ್ನದೆಂಬ (ಅಭಿಮಾನನಿಮಿತ್ತ)ವಾದ ಸಂಸಾರವು ಅಜ್ಞಾನದಿಂದ (ತೋರುವ ಸತ್ತ್ವವೇ ಮುಂತಾದ) ಗುಣಗಳ ರೂಪದಿಂದ ನಿಜವಾಗಿಯೂ ಇದ್ದುಕೊಂಡೇ ಇರುವದಾದರೆ ಹೇಗೂ ನಾಶವಾಗಲಾರದು. (ಆತ್ಮನು) ಅವಿದ್ಯಾಶಕ್ತಿಯಿಂದ ಕೂಡಿದವನಾಗಿ ಎಲ್ಲಾ ಜನ್ಮಗಳಲ್ಲಿಯೂ ಇದ್ದುಕೊಂಡಿರುತ್ತಾನೆ. ಎಲ್ಲಾ ಪ್ರಾಣಿಗಳಿಗೂ ಮೋಹಕವಾಗಿರುವ ಅದು ಎಲ್ಲಾ ವಿವೇಕಿಗಳಿಂದಲೂ ಬಿಡಲ್ಪಡ ತಕ್ಕದ್ದು. ಆದರ ವಿನಾಶದಿಂದ ಮಹಾಂತನಾದ ಆತ್ಮನು ಬೆಳಗುವನು.

1. ಈ ಶ್ಲೋಕಗಳು ಅನುಗೀತೆಯಲ್ಲಿ ಈಗ ಉಪಲಬ್ಧವಿಲ್ಲವೆಂತ ಮೈ॥ ಪಾಠದ ಟಿಪ್ಪಣಿಯಲ್ಲಿ ಸೂಚಿಸಿದೆ. ಶ್ಲೋಕಗಳೂ ಸಹ ಸರಿಯಾಗಿ ಅನ್ವಯಾರ್ಥಗಳನ್ನು ಕೊಡುತ್ತಿಲ್ಲ. ಇದ್ದುದರಲ್ಲಿ ಹೊಂದಿಸಿಕೊಂಡು ಅನುವಾದಮಾಡಿದೆ.

ಇದರಲ್ಲಿ ಸಂಶಯುವಿಲ್ಲ. ಅಹಂಕಾರವನ್ನು ಗೆಲ್ಲುವದರಿಂದ ಆತ್ಮನು ಸಿದ್ಧನಾಗುತ್ತಾನೆ. ಆತ್ಮನು ಸಿದ್ಧನಾಗಲಾಗಿ ದುಃಖಗಳನ್ನು ಕಳೆದುಕೊಂಡು ಪೂರ್ಣಜ್ಞಾನವನ್ನು[1] ಪಡೆಯುವನು. ಪೂರ್ಣಬೋಧನೂ, ಪರಾನಂದಸ್ವರೂಪನೂ ಅನಂತನೂ ಲೋಕಭಾವನನೂ ಆದ ಅಚ್ಯುತಪರಮಾತ್ಮನನ್ನು ಅನನ್ಯನಾಗಿ ಅವನ ಭಕ್ತನು ಭಜಿಸುವನು. ಆ (ಭಗವಂತನ) ಅನುಗ್ರಹದಿಂದ ಜ್ಞಾನವೆಂಬ ಬೆಂಕಿಯಿಂದ ಎಲ್ಲಾ ಕರ್ಮಗಳನ್ನೂ ಸುಟ್ಟು ಉಳಿವ (ಭಕ್ತರೊಡನೆ) ವಿಷ್ಣುವೆಂಬ ಹೆಸರಿನ ಶುಭನಾದ ಸರ್ವಸಿದ್ಧವಾದ ಮೃತ(ವೆಂಬ) ಪ್ರಯೋಜನವನ್ನು ಪಡೆಯುತ್ತಾನೆ. ಹೀಗೆಂದು ವೇದದ ಅನುಶಾಸನವಿದೆ.

(ಭಾಷ್ಯ)

ತಥಾ ಹಿ - ಭಗವಾನ್ ಪರಮಗುರುಃ ಪರಾಶರಃ ಆತ್ಮವ್ಯತಿರಿಕ್ತಸ್ಯ ಸರ್ವಸ್ಯ ಮಿಥ್ಯಾತ್ವಂ ದರ್ಶಯತಿ ।

"ಜ್ಞಾನಸ್ವರೂಪಮತ್ಯನ್ತನಿರ್ಮಲಂ ಪರಮಾರ್ಥತಃ ।
ತಮೇವಾರ್ಥಸ್ವರೂಪೇಣ ಭ್ರಾನ್ತಿದರ್ಶನತಃ ಸ್ಥಿತಮ್ ॥
ಜ್ಞಾನಸ್ವರೂಪಮಖಿಲಂ ಜಗದೇತದಬುದ್ಧಯಃ ।
ಅರ್ಥಸ್ವರೂಪಂ ಪಶ್ಯನ್ತೋ ಭ್ರಾಮ್ಯನ್ತೇ ಮೋಹಸಂಪ್ಲವೇ ॥
ಯೇ ತು ಜ್ಞಾನವಿದಃ ಶುದ್ಧಚೇತಸಸ್ತೇಽಖಿಲಂ ಜಗತ್ ।
ಜ್ಞಾನಾತ್ಮಕಂ ಪ್ರಪಶ್ಯನ್ತಿ ತ್ವದ್ರೂಪಂ ಪರಮೇಶ್ವರ ॥
ಜ್ಞಾನಸ್ವರೂಪೋ ಭಗವಾನ್ ಯತೋಽಸೌ
ಅಶೇಷಮೂರ್ತಿರ್ನ ತು ವಸ್ತುಭೂತಃ ।
ತತೋ ಹಿ ಶೈಲಾಬ್ಧಿಧರಾದಿಭೇದಾನ್
ಜಾನೀಹಿ ವಿಜ್ಞಾನವಿಜೃಮ್ಭಿತಾನಿ ॥
ಯದಾ ತು ಶುದ್ಧಂ ನಿಜರೂಪಿ ಸರ್ವ-
ಕರ್ಮಕ್ಷಯೇ ಜ್ಞಾನಮಪಾಸ್ತದೋಷಮ್ ।
ತದಾ ಹಿ ಸಂಕಲ್ಪತರೋಃ ಫಲಾನಿ
ಭವನ್ತಿ ನೋ ವಸ್ತುಷು ವಸ್ತುಭೇದಾಃ ॥
ವಸ್ತ್ವಸ್ತಿ ಕಿಂ ಕುತ್ರಚಿದಾದಿಮಧ್ಯ-
ಪರ್ಯನ್ತಹೀನಂ ಸತತೈಕರೂಪಮ್ ।
ಯಚ್ಚಾನ್ಯಥಾತ್ವಂ ದ್ವಿಜ ಯಾತಿ ಭೂಯೋ
ನ ತತ್ತಥಾ ತಸ್ಯ ಕುತೋ ಹಿ ತತ್ತ್ವಮ್ ॥

---

1. 'ಪೂರ್ವಬೋಧ' ಎಂಬುದನ್ನು 'ಪೂರ್ಣಬೋಧ' ಎಂದಿಟ್ಟುಕೊಂಡು ಅನುವಾದಮಾಡಿದೆ.

ಮಹೀ ಘಟತ್ವಂ ಘಟತಃ ಕಪಾಲಿಕಾ
ಕಪಾಲಿಕಾ ಚೂರ್ಣರಜಸ್ತತೋಽಣುಃ ।
ಜನ್ಯೈಃ ಸ್ವಕರ್ಮಸ್ತಿಮಿತಾತ್ಮನಿಶ್ಚಯೈ-
ರಾಲಕ್ಷ್ಯತೇ ಬ್ರೂಹಿ ಕಿಮತ್ರ ವಸ್ತು ॥

ತಸ್ಮಾನ್ನ ವಿಜ್ಞಾನಮೃತೇಽಸ್ತಿ ಕಿಞ್ಚಿತ್
ಕ್ವಚಿತ್ ಕದಾಚಿತ್ ದ್ವಿಜ ವಸ್ತುಜಾತಮ್ ।
ವಿಜ್ಞಾನಮೇಕಂ ನಿಜಕರ್ಮಭೇದ-
ವಿಭಿನ್ನಚಿತ್ತೈರ್ಬಹುಧಾಭ್ಯುಪೇತಮ್ ॥

ಜ್ಞಾನಂ ವಿಶುದ್ಧಂ ವಿಮಲಂ ವಿಶೋಕಮ್
ಅಶೇಷದೋಷಾದಿನಿರಸ್ತಸಙ್ಗಮ್ ।
ಏಕಂ ಸದೈಕಂ ಪರಮಃ ಪರೇಶಃ
ಸ ವಾಸುದೇವೋ ನ ಯತೋಽನ್ಯದಸ್ತಿ ॥

ಸದ್ಭಾವ ಏವಂ ಭವತೋ ಮಯೋಕ್ತೋ
ಜ್ಞಾನಂ ಯಥಾ ಸತ್ಯಮಸತ್ಯಮನ್ಯತ್ ।
ಏತತ್ತು ಯತ್ಸಂವ್ಯವಹಾರಭೂತ-
ಮತ್ರಾಪಿ ಚೋಕ್ತಂ ಭುವನಾಶ್ರಯಂ ತೇ ॥

ಪರಮಾರ್ಥಸ್ತು ಭೂಪಾಲ ಸಂಕ್ಷೇಪಾತ್ ಶ್ರೂಯತಾಂ ಮಮ ।
ಏಕೋ ವ್ಯಾಪೀ ಸಮಃ ಶುದ್ಧೋ ನಿರ್ಗುಣಃ ಪ್ರಕೃತೇಃ ಪರಃ ॥
ಜನ್ಮವೃದ್ಧ್ಯಾದಿರಹಿತೋ ಹ್ಯಾತ್ಮಾ ಸರ್ವಗತೋಽವ್ಯಯಃ ।
ಪರಜ್ಞಾನಮಯೋಽಸದ್ಭಿಃ ನಾಮಜಾತ್ಯಾದಿಭಿರ್ವಿಭುಃ ॥
ನ ಯೋಗವಾನ್ ನ ಯುಕ್ತೋಽಭೂನ್ನೈವ ಪಾರ್ಥಿವ ಯೋಕ್ಷ್ಯತಿ ।
ತಸ್ಯಾತ್ಮಪರದೇಹೇಷು ಸತೋಽಪ್ಯೇಕಮಯಂ ಹಿ ತತ್ ॥
ವಿಜ್ಞಾನಂ ಪರಮಾರ್ಥೋಽಸೌ ದ್ವೈತಿನೋಽತಥ್ಯದರ್ಶಿನಃ ।
ತದೇತದುಪದಿಷ್ಟಂ ತೇ ಸಂಕ್ಷೇಪೇಣ ಮಹಾಮತೇ ॥
ಪರಮಾರ್ಥಸಾರಭೂತಂ ಯತ್ತದದ್ವೈತಮಶೇಷತಃ ।
ಸಿತನೀಲಾದಿಭೇದೇನ ಯಥೈಕಂ ದೃಶ್ಯತೇ ನಭಃ ।
ಭ್ರಾನ್ತಿದೃಷ್ಟಿಭಿರಾತ್ಮಾಪಿ ತಥೈಕಃ ಸನ್ ಪೃಥಕ್ ಕೃತಃ ॥

ಏಕಃ ಸಮಸ್ತಂ ಯದಿಹಾಸ್ತಿ ಕಿಞ್ಚಿತ್
ತದಚ್ಯುತೋ ನಾಸ್ತಿ ಪರಂ ತತೋಽನ್ಯತ್ ।
ಸೋಽಹಂ ಸ ಚ ತ್ವಂ ಸ ಚ ಸರ್ವಮೇತ-
ದಾತ್ಮಸ್ವರೂಪಂ ತ್ಯಜ ಭೇದಮೋಹಮ್ ॥

ಇತೀರಿತಸ್ತೇನ ಸ ರಾಜವರ್ಯಃ
ತತ್ಯಾಜ ಭೇದಂ ಪರಮಾರ್ಥದೃಷ್ಟಿಃ ।
ಸ ಚಾಪಿ ಜಾತಿಸ್ಮರಣಾಪ್ತಬೋಧಃ
ತತ್ರೈವ ಜನ್ಮನ್ಯಪವರ್ಗಮಾಪ ॥
ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುಃ
ವನಾನಿ ವಿಷ್ಣುರ್ಗಿರಯೋ ದಿಶಶ್ಚ ।
ನದ್ಯಃ ಸಮುದ್ರಾಶ್ಚ ಸ ಏವ ಸರ್ವಂ
ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥

ವಿಸ್ತಾರಃ ಸರ್ವಭೂತಸ್ಯ ವಿಷ್ಣೋರ್ವಿಶ್ವಮಿದಂ ಜಗತ್ ।
ದ್ರಷ್ಟವ್ಯಮಾತ್ಮನಃ ತಸ್ಮಾತ್ ಅಭೇದೇನ ವಿಚಕ್ಷಣೈಃ ॥
ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ ।
ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ ॥
ತದ್ಭಾವಭಾವಮಾಪನ್ನಸ್ತದಾಸೌ ಪರಮಾತ್ಮನಾ ।
ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋ ಭವೇತ್ ॥
ಜ್ಞಾನಮೇವ ಪರಂ ಬ್ರಹ್ಮ ಜ್ಞಾನಂ ಬನ್ಧಾಯ ಚೇಷ್ಯತೇ ।
ಜ್ಞಾನಾತ್ಮಕಮಿದಂ ಸರ್ವಂ ನ ಜ್ಞಾನಾದ್ ವಿದ್ಯತೇ ಪರಮ್ ॥
ವಿದ್ಯಾವಿದ್ಯೇ ಚ ಮೈತ್ರೇಯ ಜ್ಞಾನಮೇವೋಪಧಾರಯ" ॥

ಇತಿ ॥

(ಭಾಷ್ಯಾರ್ಥ)

ಹೇಗೆಂದರೆ ಪೂಜ್ಯರೂ ಪರಮಗುರುಗಳೂ ಆದ ಪರಾಶರರು ಆತ್ಮನೊಬ್ಬನನ್ನುಳಿದು ಮಿಕ್ಕ ಪದಾರ್ಥಗಳೆಲ್ಲವೂ ಮಿಥ್ಯೆಯೆಂಬುದನ್ನು ಹೀಗೆ ತಿಳಿಸಿದ್ದಾರೆ : 'ಪರಮಾರ್ಥವಾಗಿ ಜ್ಞಾನಸ್ವರೂಪನೂ ಅತ್ಯಂತನಿರ್ಮಲನೂ ಆಗಿದ್ದು ಭ್ರಾಂತಿಯಿಂದ ಕಾಣುವದರಿಂದ ಅರ್ಥಸ್ವರೂಪನಾಗಿಯೂ ತೋರುತ್ತಿರುವ ಆವನನ್ನೇ ನಮಸ್ಕರಿಸುತ್ತೇನೆ'. ಜ್ಞಾನಸ್ವರೂಪವಾಗಿರುವ ಈ ಜಗತ್ತೆಲ್ಲವನ್ನೂ ಅಜ್ಞಾನಿಗಳು ಅರ್ಥಸ್ವರೂಪದಿಂದ[1] ಕಾಣುತ್ತಿರುವವರಾಗಿ ಮೋಹಸಮುದ್ರದಲ್ಲಿ ಜಾರಿಬೀಳುತ್ತಿರುವರು. ಆದರೆ ಶುದ್ಧಚಿತ್ತರಾದ ಜ್ಞಾನವಂತರಾದ ಯಾವ (ಜನರಿರುವರೋ) ಅವರು ಎಲ್ಲೈ ಪರಮೇಶ್ವರನೆ, ಈ ಜಗತ್ತೆಲ್ಲವನ್ನೂ ಜ್ಞಾನಾತ್ಮಕವಾಗಿ ಕಾಣುತ್ತಾರೆ', 'ಈ ಭಗವಂತನು ಜ್ಞಾನಸ್ವರೂಪನಾಗಿರುವದರಿಂದ ಎಲ್ಲಾ ಸ್ವರೂಪನಾಗಿರುತ್ತಾನೆ. ಪದಾರ್ಥಗಳ ರೂಪದಿಂದ ಇರುವದಿಲ್ಲ. ಅವನಿಂದಲೇ ಬೆಟ್ಟಗಳು, ಸಮುದ್ರಗಳು, ಭೂಮಿ– ಮುಂತಾದ ಭೇದಗಳೆಲ್ಲವೂ ವಿಜ್ಞಾನದ

1. ಪದಾರ್ಥಗಳ ರೂಪದಿಂದ.

ವಿಸ್ತಾರವೆಂದೇ ತಿಳಿ. 'ಯಾವಾಗ ನಿಜರೂಪವಾದ ದೋಷರಹಿತವಾದ ಶುದ್ಧ ಜ್ಞಾನವು ಎಲ್ಲಾ ಕರ್ಮಗಳೂ ಕ್ಷಯವಾಗಲಾಗಿ (ಉಂಟಾಗುವದೋ) ಆಗ ಸಂಕಲ್ಪವೆಂಬ ವೃಕ್ಷದ ಹಣ್ಣುಗಳು ಉಂಟಾಗುವದಿಲ್ಲ. ವಸ್ತುಗಳಲ್ಲಿ ಪದಾರ್ಥಭೇದವೂ (ಇರಲಾರದು). (ಮಡಕೆ- ಮುಂತಾದ) ವಸ್ತುವಿದೆ- ಎನ್ನುವದಾದರೆ ಎಲ್ಲಿದೆ ? ಮೊದಲು, ಮಧ್ಯ, ಕೊನೆಗಳಿಲ್ಲದ ಯಾವಾಗಲೂ ಒಂದೇರೂಪವಾಗಿರುವ (ಬ್ರಹ್ಮವೇ) ಇದ್ದುಕೊಂಡಿದೆ. ಮತ್ತು ಎಲೈ ದ್ವಿಜನೆ, ಯಾವದು ತನ್ನ ಸ್ವರೂಪವನ್ನು ಬದಲಾಯಿಸುವದೋ ಅದು ನಿಜವಲ್ಲ. ಅದಕ್ಕೆ ಸ್ವರೂಪವಾದರೂ ಏನಿದ್ದೀತು ? ತಮ್ಮ ಕರ್ಮಗಳಿಂದ ಮರೆಯಾಗಿರುವ ಆತ್ಮನಿಶ್ಚಯವುಳ್ಳ ಜನರು ಭೂಮಿಯನ್ನೇ ಮಡಕೆಯೆನ್ನುವರು. ಅದರಿಂದ ಕಪಾಲಗಳು, ಕಪಾಲಗಳಿಂದ ಹುಡಿಮಣ್ಣು, ಅದರಿಂದ ಅಣುಗಳು- ಹೀಗೆ ಕೊನೆಯಲ್ಲಿ. ವಸ್ತುವಾದರೂ ಏನಿದ್ದೀತು ? ಹೇಳು.[1] ಆದ್ದರಿಂದ ಎಲೈ ದ್ವಿಜನೆ, ವಿಜ್ಞಾನಕ್ಕಿಂತ ಬೇರೆಯಾಗಿ ಯಾವಾಗಲೂ ಎಲ್ಲಿಯೂ ಏನೊಂದು ವಸ್ತುವೂ ಇರುವದಿಲ್ಲ. ತಮ್ಮ ಕರ್ಮಭೇದಗಳ ನಿಮಿತ್ತದಿಂದ ನಾನಾವಿಧವಾದ ಚಿತ್ತವುಳ್ಳ ಅಜ್ಞಾನಿಗಳಿಂದ ನಾನಾರೂಪವಾಗಿ ವಿಜ್ಞಾನವೊಂದೇ ವ್ಯವಹರಿಸಲ್ಪಡುತ್ತಿರುವದು. ಪರಿಶುದ್ಧವೂ ನಿರ್ಮಲವೂ ಶೋಕರಹಿತವೂ ಎಲ್ಲಾ ದೋಷಗಳ ಅಂಟಿನಿಂದಲೂ ದೂರವಾದದ್ದೂ ತಾನೊಂದೇ ಆಗಿ ಸದ್ರೂಪವಾಗಿದ್ದುಕೊಂಡಿರುವದೂ ಆದ ಜ್ಞಾನವು ಪರಮೇಶ್ವರನೂ ಪರನೂ ಆದ ಆ ವಾಸುದೇವನೇ ಆಗಿರುತ್ತದೆ. ಅವನಿಗಿಂತ ಬೇರೆಯಾದದ್ದು ಏನೂ ಇರುವದಿಲ್ಲ. ಈರೀತಿಯಾಗಿ ನಿನಗೆ ಜ್ಞಾನವು ಹೇಗೆ ಸತ್ಯವಾಗಿದೆಯೆಂಬುದನ್ನೂ ಅದರ ಸದ್ಭಾವವನ್ನೂ ಹೇಳಿರುತ್ತೇನೆ. ಉಳಿದದ್ದೆಲ್ಲವೂ ಅಸತ್ಯವು. ಯಾವದು ಕೇವಲ ವ್ಯವಹಾರಮಾತ್ರವೋ ಪ್ರಪಂಚದ ವಿಷಯವಾದದ್ದೋ ಅದನ್ನೂ ನಿನಗೆ ಹೇಳಿರುತ್ತೇನೆ', 'ಎಲೈ ರಾಜನೆ, ಪರಮಾರ್ಥವನ್ನು ಸಂಕ್ಷೇಪವಾಗಿ ನನ್ನಿಂದ ಕೇಳುವವನಾಗು ; ಏಕನೂ ವ್ಯಾಪಿಯೂ ಸಮನೂ ಶುದ್ಧನೂ ನಿರ್ಗುಣನೂ ಪ್ರಕೃತಿಗಿಂತ ವಿಲಕ್ಷಣನೂ ಜನ್ಮ, ಬೆಳವಣಿಗೆ ಮುಂತಾದವುಗಳಿಂದ ದೂರನೂ ಸರ್ವಗತನೂ ಅವ್ಯಯನೂ ಆಗಿರುವ ಆತ್ಮನಿದಾನನಷ್ಟೆ ! ಪರಮಜ್ಞಾನಮಯನಾದ ವಿಭುವಾದ ಅವನು ಅಸತ್ತಾಗಿರುವ ನಾಮ, ಜಾತಿ- ಇವುಗಳಿಂದ ಹಿಂದೆ ಎಂದಿಗೂ ಕೂಡಿದವನಾಗಿರಲಿಲ್ಲ. ಈಗಲೂ ಕೂಡಿಲ್ಲ. ಎಲೈ ರಾಜನೆ, ಮುಂದೆಯೂ ಕೂಡಿಕೊಳ್ಳುವ ಸಂಭವವಿಲ್ಲ. ಅವನು ತನ್ನ(ದೆಂದುಕೊಂಡಿರುವ) ಹಾಗೂ ಮತ್ತೊಬ್ಬರ ದೇಹ

1. ಮಣ್ಣು ತಾನೊಂದೇ ನಾನಾರೂಪಗಳಿಂದ ಅಜ್ಞರಿಗೆ ತೋರುತ್ತಿದೆ. ಮಣ್ಣಿಗಿಂತ ಬೇರೆಯಾಗಿ ಮಡಕೆ, ಕಪಾಲ, ಅಣು- ಯಾವದೂ ಇಲ್ಲ. ಅದರಂತೆ ವಿಜ್ಞಾನವೊಂದೇ ನಾನಾರೂಪವಾಗಿ ತೋರುತ್ತಿದೆ. ವಿಜ್ಞಾನಕ್ಕಿಂತ ಬೇರೆಯಾಗಿ ಯಾವ ವಸ್ತುವೂ ಇಲ್ಲ- ಎಂದಭಿಪ್ರಾಯ.

ಗಳಲ್ಲಿದ್ದುಕೊಂಡಿದ್ದರೂ ಏಕನಾಗಿಯೇ ಇದ್ದಾನೆ. ಹೀಗೆ ವಿಜ್ಞಾನವೊಂದೇ ಪರಮಾರ್ಥವಾಗಿದೆ. ದ್ವೈತವನ್ನು ಕಾಣುವವರು ಮಿಥ್ಯಾದರ್ಶನವುಳ್ಳವರು, ಎಲೈ ಮಹಾಮತಿಯೆ, ಪರಮಾರ್ಥಸಾರಭೂತವಾದ ಯಾವ ಅದ್ವೈತವಿದೆಯೋ ಅದನ್ನು ಸಂಗ್ರಹವಾಗಿ ಪೂರ್ತಿಯಾಗಿ ನಿನಗೆ ಉಪದೇಶಮಾಡುತ್ತೇನೆ. ಒಂದೇ ಆಕಾಶವು ಬಿಳುಪು, ಕಪ್ಪು- ಮುಂತಾದ ರೂಪದಿಂದ (ಸಾಮಾನ್ಯರಿಗೆ) ಹೇಗೆ ಕಂಡುಬರುತ್ತಿದೆಯೋ ಹಾಗೆಯೇ ಒಬ್ಬನೇ ಆಗಿರುವ ಆತ್ಮನೂ ಭ್ರಾಂತಿದೃಷ್ಟಿಯುಳ್ಳವರಿಗೆ ಬಿಡಿಬಿಡಿಯಾಗಿ ಕಂಡುಬರುತ್ತಿರುವನು. ಇಲ್ಲಿ ಏನೇನಿದೆಯೋ ಅದೆಲ್ಲವೂ ಒಬ್ಬನೇ ಆದ ಅಚ್ಯುತನೇ. ಅವನಿಗಿಂತ ಬೇರೆಯಾಗಿ ಏನೂ ಇರುವದಿಲ್ಲ. ನಾನು, ನೀನು, ಅವನು, ಇದೆಲ್ಲವೂ ಆತ್ಮಸ್ವರೂಪನಾದ ಅವನೇ. ಭೇದಮೋಹವನ್ನು ಬಿಡು. ಈ ರೀತಿಯಾಗಿ ಅವನಿಂದ ಉಪದೇಶವನ್ನು ಹೊಂದಿದ ಆ ರಾಜಶ್ರೇಷ್ಠನು ಪರಮಾರ್ಥದೃಷ್ಟಿಯನ್ನು ಪಡೆದುಕೊಂಡವನಾಗಿ ಭೇದವನ್ನು ಬಿಟ್ಟನು. ಆ (ಬ್ರಾಹ್ಮಣನೂ) ಕೂಡ ಜಾತಿಸ್ಮರಣದಿಂದ ಜ್ಞಾನವನ್ನು ಹೊಂದಿ ಅದೇ ಜನ್ಮದಲ್ಲಿಯೇ ಮೋಕ್ಷವನ್ನು ಹೊಂದಿದನು'. 'ಎಲೈ ಬ್ರಾಹ್ಮಣಶ್ರೇಷ್ಠನೆ, ನಕ್ಷತ್ರಗಳೂ ವಿಷ್ಣುವೇ, ಲೋಕಗಳೂ ವಿಷ್ಣುವೇ ; ಕಾಡುಗಳು, ಬೆಟ್ಟಗಳು, ದಿಕ್ಕುಗಳು ಎಲ್ಲವೂ ವಿಷ್ಣುವೇ ; ನದಿಗಳು, ಸಮುದ್ರಗಳು- ಇದೆ ಎಂಬುದೂ ಇಲ್ಲ- ಎಂಬುದೂ ಸರ್ವವೂ ಅವನೇ;' 'ಈ ಜಗತ್ತೆಲ್ಲವೂ ಸರ್ವಭೂತಮಯನಾದ ವಿಷ್ಣುವಿನ ವಿಸ್ತಾರವೇ. ಅಪ್ಪ, ಆದ್ದರಿಂದ ವಿವೇಕಿಗಳಾದವರು ತಮಗಿಂತ ಇದನ್ನು ಅನನ್ಯವಾಗಿ ಅರಿತುಕೊಳ್ಳಬೇಕು' 'ಭೇದವನ್ನುಂಟುಮಾಡುವ ಅಜ್ಞಾನವು ಸಂಪೂರ್ಣವಾಗಿ ನಾಶವಾಗಲಾಗಿ ಆತ್ಮನಿಗೂ ಬ್ರಹ್ಮಕ್ಕೂ ಇಲ್ಲದೆ ಇರುವ ಭೇದವನ್ನು ಯಾವನುತಾನೆ ಮಾಡಿಯಾನು ? ಪರಮಾತ್ಮನೊಡನೆ ತದ್ಭಾವವನ್ನು ಹೊಂದಿದ ಅನಂತರ ಅವನು ಭೇದವಿಲ್ಲದವನಾಗುತ್ತಾನೆ. ಅವನಿಗೆ ಭೇದವೆಂಬುದು ಅಜ್ಞಾನದಿಂದಾದದ್ದೆಂದೂ ಗೊತ್ತಾಗುವದು' 'ಜ್ಞಾನವೇ ಪರಬ್ರಹ್ಮವು. (ಅವಿದ್ಯೆಯ ನಿಮಿತ್ತದಿಂದ) ಜ್ಞಾನರೂಪವಾದ ಬ್ರಹ್ಮವೇ) ಬಂಧಕ್ಕೆ ಕಾರಣವಾಗಿರುತ್ತದೆ. ಇಡಿಯ ಜಗತ್ತೆಲ್ಲವೂ ಜ್ಞಾನಾತ್ಮಕವೇ ; ಜ್ಞಾನಕ್ಕಿಂತ ಹೆಚ್ಚಿನದು ಇರುವದಿಲ್ಲ. ಎಲೈ ಮೈತ್ರೇಯನೆ, ವಿದ್ಯಾವಿದ್ಯೆಗಳನ್ನು ನೀನು ಜ್ಞಾನವೆಂದೇ ತಿಳಿ'- ಎಂದು (ಹೇಳಿರುತ್ತಾರೆ.)

(ಭಾಷ್ಯ)

ತಥಾ ಚ ಏತತ್ಸರ್ವಂ ಸ್ಪಷ್ಟಮಾಹ ಭಗವಾನ್ ಸನತ್ಸುಜಾತಃ ಬ್ರಹ್ಮಾಣಪುರಾಣೇ ಕಾವಷೇಯಗೀತಾಪ್ರಸಙ್ಗೇ-'ವೇದಾನ್ ಪಠಧ್ವಂ ವಿಧಿವದ್ ವ್ರತಾನಿ ಕೃತ್ವಾ ವಿವಾಹಂ ಚ ಮಖೈರ್ಯಜಧ್ವಮ್ । ಉತ್ಪಾದ್ಯ ಪುತ್ರಾನ್ ವಯಸೋ ವಿರಾಮೇ ದೇಹಂ ತ್ಯಜಧ್ವಂ ನಿಯತಾಸ್ತಪೋಭಿಃ'॥ ಇತಿ । 'ಕಿಮದ್ಯ ನಶ್ಚಾಧ್ಯ-

ಯನೇನ ಕಾರ್ಯಂ ಕಿಮರ್ಥವನ್ತಶ್ಚ ಮಖ್ಯೈರ್ಯಜಾಮಃ । ಪ್ರಾಣಂ ಹಿ ವಾಪ್ಯನಲೇ ಜೋಹವೀಮಃ ಪ್ರಾಣಾನಲೇ ಜೋಹವೀಮಿತಿ ವಾಚಮ್' । ಇತಿ ಕೃತಕೃತ್ಯತ್ವೇನ ಯಜ್ಞಾದ್ಯನುಷ್ಠಾನೇನ ಆತ್ಮನಃ ಪ್ರಯೋಜನಾಭಾವಂ ದರ್ಶಯಿತ್ವಾ 'ಸ್ವರ್ಗಾತ್ತು ವೇಶ್ಯಾಗೃಹಸಂನಿವೇಶಾತ್ ಪುಣ್ಯಕ್ಷಯಾನ್ತೇ ಪತನಂ ಸ್ಯಾದವಶ್ಯಮ್ । ಮನುಷ್ಯಲೋಕೇ ವಿಜರಾ ವಿದುಃಖಮ್....' ಇತಿ ಯಜ್ಞಾದಿಸಾಧ್ಯಸ್ಯ ಲೋಕಸ್ಯ ಅನಿತ್ಯತ್ವಾದಿದೋಷದುಷ್ಟತ್ವೇನ ಹೇಯತ್ವಂ ದರ್ಶಯಿತ್ವಾ ಯಜುರ್ವೇದೋಪನಿಷದಿ 'ಸತ್ಯಂ ಪರಂ ಪರಮ್' (ತೈ. ನಾ. ೭೮) ಇತ್ಯಾರಭ್ಯ ಸತ್ಯಾದೀನಾಂ ಮಾಹಾತ್ಮ್ಯಂ ದರ್ಶಯಿತ್ವಾ 'ನ್ಯಾಸಃ' ಇತ್ಯಾರಭ್ಯ 'ತಾನಿ ವಾ ಏತಾನ್ಯವರಾಣಿ ತಪಾಗ್ಂಸಿ, ನ್ಯಾಸ ಏವಾತ್ಯರೇಚಯತ್' ಇತ್ಯನ್ತೇನ ನಿತ್ಯಸಿದ್ಧನಿರತಿಶಯಾನನ್ದಬ್ರಹ್ಮಪ್ರಾಪ್ತಿಸಾಧನಸ್ಯ ತತ್ಸಾಧನತ್ವೇನ ಅಪರಾನ್ ಅನಿತ್ಯಫಲಸಾಧನಾದ್ ಯಜ್ಞಾದೇಃ ಸರ್ವಸ್ಮಾತ್ ಉತ್ಕೃಷ್ಟತ್ವಂ ಸಂನ್ಯಾಸಸ್ಯೋಕ್ತಂ ತತ್ರೈವ ಶ್ರೂಯತೇ- 'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ । ಪರೇಣ ನಾಕಂ ನಿಹಿತಂ ಗುಹಾಯಾಂ ವಿಭ್ರಾಜತೇ ಯದ್ಯತಯೋ ವಿಶನ್ತಿ । ವೇದಾನ್ತವಿಜ್ಞಾನ ಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ತ್ವಾಃ । ತೇ ಬ್ರಹ್ಮಲೋಕೇಷು ಪರಾನ್ತಕಾಲೇ ಪರಾಮೃತಾತ್ ಪರಿಮುಚ್ಯನ್ತಿ ಸರ್ವೇ' । (ತೈ. ನಾ. ೧೨ ೩೮) ಇತಿ । ತಥಾ ಚ ಬೃಹದಾರಣ್ಯಕೇ ಸರ್ವಕರ್ಮ ಸಂನ್ಯಾಸಂ ದರ್ಶಯತಿ- 'ಏತಂ ವೈ ತಮಾತ್ಮಾನಂ ವಿದಿತ್ವಾ ಬ್ರಾಹ್ಮಣಾಃ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ' (ಬೃ. ೩-೫-೧) ಇತಿ ॥

(ಭಾಷ್ಯಾರ್ಥ)

ಮತ್ತು ಇದೆಲ್ಲವನ್ನೂ ಭಗವಾನ್ ಸನತ್ಸುಜಾತನು ಬ್ರಹ್ಮಾಂಡಪುರಾಣದಲ್ಲಿ ಕಾವಷೇಯಗೀತೆಯನ್ನು ಹೇಳುವ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. (ಏನೆಂದರೆ) : 'ವಿಧಿಪೂರ್ವಕವಾಗಿ ವೇದಗಳನ್ನು ಅಧ್ಯಯನಮಾಡಿರಿ. ವ್ರತಗಳನ್ನು[1] ಪೂರೈಸಿ ವಿವಾಹಮಾಡಿಕೊಂಡು ಯಜ್ಞಗಳನ್ನು ಮಾಡಿರಿ. ಪುತ್ರರನ್ನೂ ಪಡೆದುಕೊಂಡು ಮುಪ್ಪಿನಕಾಲದಲ್ಲಿ ಶರೀರವನ್ನು ತಪಸ್ಸುಗಳಿಂದ (ಶುದ್ಧಿಗೊಳಿಸಿ) ಅನಂತರ ತ್ಯಾಗಮಾಡಿರಿ' ಎಂದು (ಹೇಳಿದೆ). 'ಈಗ ನಮಗೆ ವೇದಾಧ್ಯಯನದಿಂದೇನು ಪ್ರಯೋಜನ ? ಯಾವ ಪ್ರಯೋಜನಕ್ಕಾಗಿ ಯಜ್ಞಗಳನ್ನು ಮಾಡೋಣ ? ಪ್ರಾಣವೆಂಬ ಅಗ್ನಿಯಲ್ಲಿ (ಅಪಾನವನ್ನು) ಹೋಮಮಾಡುವೆವು- ಎಂಬ ವಾಕ್ಯವನ್ನು (ಹೇಳುತ್ತಾ) ಹೋಮಮಾಡೋಣ ! ಅಥವಾ

1. ಪ್ರಾಜಾಪತ್ಯಾದಿವ್ರತಗಳನ್ನು.

ಪ್ರಾಣವನ್ನೇ (ಪ್ರಾಣನೆಂಬ) ಅಗ್ನಿಯಲ್ಲಿ ಹೋಮಮಾಡೋಣ! ಹೀಗೆಂದು ತಾವು ಕೃತಕೃತ್ಯರು, ಯಜ್ಞವೇ ಮುಂತಾದ (ಕರ್ಮಗಳನ್ನು) ಮಾಡುವದರಿಂದ ತಮಗೆ ಪ್ರಯೋಜನವೇನೂ ಇಲ್ಲ- ಎಂಬುದನ್ನು ತೋರಿಸಿಕೊಟ್ಟು 'ವೇಶ್ಯಾಗೃಹಕ್ಕೆ (ಸಮಾನವಾದ) ಸಂನಿವೇಶವುಳ್ಳ ಸ್ವರ್ಗದಿಂದಲಾದರೊ, ಪುಣ್ಯವು ಸವೆಯಲಾಗಿ ಕೊನೆಯಲ್ಲಿ ಅವಶ್ಯವಾಗಿ ಬೀಳುವಿಕೆಯು ಆದೀತು ! ಮನುಷ್ಯಲೋಕವಲ್ಲಿಯಾದರೋ ಮುಪ್ಪಿಲ್ಲದ ಸಾವಿಲ್ಲದ (ಸುಖವನ್ನು ಕೊಡುವ ಯಾವ ಉಪಾಯವೂ ಜ್ಞಾನಕ್ಕಿಂತ ಬೇರೊಂದಿಲ್ಲ') ಎಂದು ಯಜ್ಞಾದಿಗಳಿಂದ ಸಿಕ್ಕುವ ಲೋಕಗಳು ಅನಿತ್ಯವೆಂಬ ದೋಷವುಳ್ಳವುಗಳಾದ್ದರಿಂದ ಬಿಡಲ್ಪಡತಕ್ಕವೆಂದು ತಿಳಿಸಿಕೊಟ್ಟಿರುತ್ತದೆ. ಯಜುರ್ವೇದೋಪನಿಷತ್ತಿನಲ್ಲಿ 'ಸತ್ಯವೇ ಹೆಚ್ಚಿನದು, ಸತ್ಯವೇ ಹೆಚ್ಚಿನದು'- ಎಂದಾರಂಭಿಸಿ ಸತ್ಯ, (ತಪಸ್ಸು-) ಮುಂತಾದವುಗಳ ಮಹಿಮೆಯನ್ನು ತೋರಿಸಿಕೊಟ್ಟ ಅನಂತರ 'ನ್ಯಾಸಃ' (ಸಂನ್ಯಾಸವು) ಎಂದಾರಂಭಿಸಿ 'ಆ ಇವುಗಳೆಲ್ಲವೂ[1] ಕಡಿಮೆಯ ತಪಸ್ಸುಗಳು ; (ಸಂ)ನ್ಯಾಸವೊಂದೇ ಎಲ್ಲಕ್ಕಿಂತಲೂ ಹೆಚ್ಚಿನದಾಗಿರುವದು' ಎಂಬಲ್ಲಿಯವರೆಗಿನ (ಭಾಗದಿಂದ) ನಿತ್ಯಸಿದ್ಧವೂ ನಿರತಿಶಯಾನಂದಸ್ವರೂಪವೂ ಆಗಿರುವ ಬ್ರಹ್ಮದ ಪ್ರಾಪ್ತಿಗೆ ಅದು (ಸಂನ್ಯಾಸವು) ಸಾಧನವೆಂದು ಹೇಳಿ ಅನಿತ್ಯವಾದ ಫಲಗಳಿಗೆ ಸಾಧನಗಳಾದ ಯಜ್ಞಾದಿಗಳೆಲ್ಲಕ್ಕಿಂತಲೂ ಸಂನ್ಯಾಸವು ಉತ್ಕೃಷ್ಟವಾದದ್ದೆಂದು ಹೇಳುವ (ಮಂತ್ರವು) ಅಲ್ಲಿಯೇ ಕೇಳಬರುತ್ತಿದೆ. "ಕರ್ಮದಿಂದಲ್ಲ, ಪ್ರಜೆಯಿಂದಲ್ಲ; ಹಣದಿಂದಲ್ಲ ; ತ್ಯಾಗವೊಂದರಿಂದಲೇ (ಋಷಿಗಳು) ಅಮೃತತ್ವವನ್ನು ಹೊಂದಿದರು. ಸ್ವರ್ಗದಿಂದಲೂ ಆಚೆಗೆ (ಇರುವ), ಯತಿಗಳು ಪಡೆಯುವಂಥ ಯಾವ ಪದವಿಯುಂಟೋ (ಅದು) ಹೃದಯಗುಹೆಯಲ್ಲೇ ವಿರಾಜಮಾನವಾಗಿದೆ. ವೇದಾಂತವಿಜ್ಞಾನದ ಅರ್ಥವನ್ನು ಚೆನ್ನಾಗಿ ನಿಶ್ಚಯಿಸಿಕೊಂಡವರಾಗಿ ಸಂನ್ಯಾಸಯೋಗದಿಂದ ಶುದ್ಧಸತ್ತ್ವರಾಗಿ ಅವರು ಬ್ರಹ್ಮಲೋಕಗಳಲ್ಲಿ ಪರಾಂತಕಾಲದಲ್ಲಿ ಹೆಚ್ಚಿನ ಅಮೃತರಾಗಿ ಎಲ್ಲರೂ ಪರಿಮುಕ್ತರಾಗುವರು" ಎಂದು ಹೇಳಿದೆ. ಮತ್ತು ಬೃಹದಾರಣ್ಯಕದಲ್ಲಿಯೂ ಸರ್ವಕರ್ಮಸಂನ್ಯಾಸವನ್ನು ಹೇಳಿರುತ್ತದೆ. (ಹೇಗೆಂದರೆ) : 'ಆ ಈ ಆತ್ಮನನ್ನೇ ಅರಿತುಕೊಂಡು ಬ್ರಾಹ್ಮಣರು ಪುತ್ರೈಷಣೆಯಿಂದಲೂ ವಿತ್ತೈಷಣೆಯಿಂದಲೂ ಲೋಕೈಷಣೆಯಿಂದಲೂ ಬಿಟ್ಟಿದ್ದು ಇನ್ನು ಭಿಕ್ಷಾಚರ್ಯೆಯನ್ನು ಮಾಡುತ್ತಿದ್ದರು'- ಎಂದು (ಹೇಳಿದೆ.)

(ಭಾಷ್ಯ)

ತಥಾ ಚ ಭಗವಾನ್ ವಾಸುದೇವಃ ಸರ್ವಕರ್ಮಸಂನ್ಯಾಸಂ ದರ್ಶಯತಿ

"ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ |
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್" || ಗೀ. ೪-೨೧

1. ಭ. ಗೀ. ೪-೨೯, ೩೦ನ್ನು ನೋಡಿರಿ.

"ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ |
ಸರ್ವಾರಮ್ಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ || ಗೀ. ೧೨-೧೬
ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಙ್ಕ್ಷತಿ |
ಶುಭಾಶುಭಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ || ಗೀ. ೧೨-೧೭
ಮಾನಾಪಮಾನಯೋಸ್ತುಲ್ಯಃ ತುಲ್ಯೋ ಮಿತ್ರಾರಿಪಕ್ಷಯೋಃ |
ಸರ್ವಾರಮ್ಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ || ಗೀ. ೧೪-೨೫
ಅಸಕ್ತಬುದ್ಧಿಃ ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ |
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ || ಗೀ. ೧೮-೪೯
ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ |
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ"|| ೧೮-೬೬

ಇತಿ | ತಥಾ ಚಾನುಗೀತಾಸು ಕರ್ಮಣಿ ಪ್ರಯೋಜನಾಭಾವಂ ದರ್ಶಯತಿ ಭಗವಾನ್—

'ನೈವ ಧರ್ಮೀ ನ ಚಾಧರ್ಮೀ ನ ಚೈವ ಹಿ ಶುಭಾಶುಭೀ' | ಅಶ್ವ ೧೯-೭
'ಯಃ ಸ್ಯಾದೇಕಾಸನೇ ಲೀನಃ ತೂಷ್ಣೀಂ ಕಿಞ್ಚಿದಚಿನ್ತಯನ್||' ಅ. ೧೯-೧

ಇತಿ |

'ಪ್ರವೃತ್ತಿಲಕ್ಷಣೋ ಯೋಗೋ ಜ್ಞಾನಂ ಸಂನ್ಯಾಸಲಕ್ಷಣಮ್ |
ತಸ್ಮಾಜ್ಜ್ಞಾನಂ ಪುರಸ್ಕೃತ್ಯ ಸಂನ್ಯಸೇದಿಹ ಬುದ್ಧಿಮಾನ್' ||

ಇತಿ | ತಥಾ ಚ ಶಾನ್ತಿಪರ್ವಣಿ ಶುಕಂ ಪ್ರತ್ಯುಪದಿಷ್ಟವಾನ್ ಭಗವಾನ್ ವ್ಯಾಸಃ—

'ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ಚ ವಿಮುಚ್ಯತೇ |
ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ'||ಮೋ.ಧ. ೨೪೧-೭
'ಏಷಾ ವೈ ವಿಹಿತಾ ವೃತ್ತಿಃ ಪುರಸ್ತಾದ್ ಬ್ರಹ್ಮಣಾ ಸ್ವಯಮ್ |
ಏಷಾ ಪೂರ್ವತರೈಃ ಸದ್ಭಿರಾಚೀರ್ಣಾ ಪರಮರ್ಷಿಭಿಃ ||
ಪ್ರವ್ರಜೇಚ್ಚ ಪರಂ ಸ್ಥಾನಂ ಪಾರಿವ್ರಾಜ್ಯಮನುತ್ತಮಮ್ |
ತದ್ಭವಾನೇವಮಭ್ಯಸ್ಯ ವರ್ತತಾಂ ಶ್ರೂಯತಾಂ ತಥಾ' ||

ಇತಿ ||

(ಭಾಷ್ಯಾರ್ಥ)

ಮತ್ತು ಪೂಜ್ಯನಾದ ವಾಸುದೇವನು ಸರ್ವಕರ್ಮಸಂನ್ಯಾಸವನ್ನು ಹೇಳಿರುತ್ತಾನೆ. (ಹೇಗೆಂದರೆ) : "ಆಶೆಯಿಲ್ಲದವನಾಗಿ ಅಂತಃಕರಣಬಹಿಃಕರಣಗಳನ್ನು ಬಿಗಿಹಿಡಿದುಕೊಂಡು ಎಲ್ಲಾ ಪರಿಗ್ರಹಗಳನ್ನೂ ಬಿಟ್ಟು ಕೇವಲ ಶರೀರವು ಇದ್ದುಕೊಂಡಿರುವದಕ್ಕೆ ಅವಶ್ಯವಾದಷ್ಟು ಮಾತ್ರ ಕರ್ಮವನ್ನು ಮಾಡುತ್ತಿರು

ವನನಿಗೆ ಯಾವ ಪಾಪವೂ ಬಂದೊದಗುವದಿಲ್ಲ." "ನಿಃಸ್ಪೃಹನೂ, ಶುಚಿಯೂ, ಸಮರ್ಥನೂ, ಭಯವಿಲ್ಲವನನೂ, ಎಲ್ಲಾ ಕರ್ಮಗಳನ್ನೂ ಬಿಟ್ಟವನೂ (ಆಗಿರುವ) ಯಾವ ನನ್ನ ಭಕ್ತನಿರುವನೋ ಅವನು ನನಗೆ ಪ್ರಿಯನು." "ಯಾವನು ಇಷ್ಟವು ಬಂದೊದಗಿದಾಗ ಹರ್ಷಗೊಳ್ಳುವದಿಲ್ಲವೋ ಅನಿಷ್ಟವು ಒದಗಿದಾದ ಹಗೆಮಾಡುವದಿಲ್ಲವೋ ಪ್ರಿಯವಾದ ವಸ್ತು ಅಗಲಿದರೆ ಶೋಕಿಸುವದಿಲ್ಲವೋ ದೊರೆಯದ್ದನ್ನು ಹಂಬಲಿಸುವದಿಲ್ಲವೋ ಒಳ್ಳೆಯ ಮತ್ತು ಕೆಟ್ಟ ಕರ್ಮಗಳೆರಡನ್ನೂ ಕೈಬಿಟ್ಟಿರುವನೋ (ನನ್ನಲ್ಲಿ) ಭಕ್ತಿಯುಳ್ಳವನಾಗಿರುವನೋ ಅವನು ನನಗೆ ಪ್ರಿಯನು." "ಮಾನ, ಅಪಮಾನ ಇವುಗಳಲ್ಲಿ ಸಮಾನನಾಗಿ ಮಿತ್ರ, ಶತ್ರು- ಎರಡುಕಡೆಯಲ್ಲಿಯೂ ಸಮಾನನಾಗಿ ಎಲ್ಲಾ ಕರ್ಮಗಳನ್ನೂ ಸಂನ್ಯಾಸಮಾಡಿದವನಾಗಿರುವವನು ಯಾವನೋ ಅವನು ಗುಣಾತೀತನೆನಿಸುವನು." "ಎಲ್ಲೆಲ್ಲೂ ಸಂಗರಹಿತವಾದ ಮನಸ್ಸುಳ್ಳವನೂ ವಶವಾಗಿರುವ ಅಂತಃಕರಣವುಳ್ಳವನೂ ಆಶೆಯನ್ನು ಬಿಟ್ಟಿರುವವನೂ ಆಗಿ ಪರಮವಾದ ನೈಷ್ಕರ್ಮ್ಯಸಿದ್ಧಿಯನ್ನು ಸಂನ್ಯಾಸದಿಂದ ಪಡೆದುಕೊಳ್ಳುವನು," "ಸರ್ವಧರ್ಮಗಳನ್ನೂ ಬಿಟ್ಟು ನನ್ನನ್ನೊಬ್ಬನನ್ನೇ ಶರಣುಹೊಂದು ; ನಾನು ನಿನ್ನನ್ನು ಸರ್ವಪಾಪಗಳಿಂದಲೂ ಬಿಡುಗಡೆಮಾಡಿಸುವೆನು; ಶೋಕಿಸಬೇಡ" ಎಂದು (ಹೇಳಿರುತ್ತಾನೆ.)

ಮತ್ತು ಭಗವಂತನು ಅನುಗೀತೆಯಲ್ಲಿ (ಜ್ಞಾನಿಗಳಿಗೆ) ಕರ್ಮದಲ್ಲಿ ಪ್ರಯೋಜನವೇನೂ ಇಲ್ಲವೆಂಬುದನ್ನು ತಿಳಿಸಿರುತ್ತಾನೆ- "ಧರ್ಮವನ್ನು ಅನುಸರಿಸದೆ ಅಧರ್ಮವನ್ನು ಅನುಸರಿಸದೆ 'ಇದು ಒಳ್ಳೆಯದು, ಇದು ಕೆಟ್ಟದ್ದು' (ಎಂಬ ಬುದ್ಧಿಯನ್ನು ಅನುಸರಿಸದೆ ಇರುವವನು ಮುಕ್ತನಾಗುವನು ;) "ಯಾವನು ಒಂದೇ ಆಸನದಲ್ಲಿ ಕುಳಿತು ಮನೋಲಯವನ್ನು ಹೊಂದಿ ಏನನ್ನೂ ಚಿಂತಿಸದೆ ಸುಮ್ಮನಿರುವನೋ ಅವನು ಮುಕ್ತನಾಗುವನು" ಎಂದು (ಹೇಳಿದೆ.) 'ಯೋಗವೆಂಬುದು ಪ್ರಕೃತಿರೂಪವಾದದ್ದು ; ಜ್ಞಾನವು ಸಂನ್ಯಾಸರೂಪವಾದದ್ದು; ಆದ್ದರಿಂದ ಜ್ಞಾನವನ್ನು ಆಶ್ರಯಿಸಿ ಜಾಣನಾದವನು ಇಲ್ಲಿ(ಯೇ) ಸಂನ್ಯಾಸಮಾಡಬೇಕು' ಎಂದು (ಹೇಳಿದೆ.) ಮತ್ತು ಪೂಜರಾದ ವ್ಯಾಸರು ಶಾಂತಿಪರ್ವದಲ್ಲಿ ಶುಕನನ್ನು ಕುರಿತು ಹೀಗೆ ಉಪದೇಶಿಸಿದ್ದಾರೆ: 'ಜೀವನು ಕರ್ಮದಿಂದ ಬದ್ಧನಾಗುವನು ; ಜ್ಞಾನದಿಂದ ಬಿಡುಗಡೆಯಾಗುವನು ; ಆದ್ದರಿಂದ (ಸಂಸಾರದ) ಪಾರವನ್ನು ಕಂಡ ಯತಿಗಳು ಕರ್ಮವನ್ನು ಮಾಡುವದಿಲ್ಲ' 'ಹಿಂದೆ ಸ್ವತಃ ಬ್ರಹ್ಮನಿಂದ ಈ ವೃತ್ತಿಯು ವಿಧಿಸಲ್ಪಟ್ಟಿತು. ಹಿಂದಿನವರಾದ ಶ್ರೇಷ್ಠಋಷಿಗಳಿಂದ ಇದು ಆಚರಿಸಲ್ಪಟ್ಟಿದೆ. ಪರಮಸ್ಥಾನವಾದ (ಮೋಕ್ಷವನ್ನು ಕುರಿತು) ಹೊರಡಬೇಕು. ಹೆಚ್ಚಿನದಾದ ಪಾರಿವ್ರಾಜ್ಯ(ವೆಂಬ ಆಶ್ರಮವನ್ನು ಹೊಂದಬೇಕು) ಆ ನೀನು ಹೀಗೆ ಅಭ್ಯಾಸಮಾಡಿ ನಡೆಯುವವನಾಗು ಮತ್ತು (ನಾನು) ಹೇಳಿದಂತೆ ಕೇಳುವವನಾಗು" ಎಂದೂ (ಹೇಳಿದ್ದಾರೆ.)

(ಭಾಷ್ಯ)

ತಥಾ ಚ ಸರ್ವಕರ್ಮಸಂನ್ಯಾಸಂ ದರ್ಶಯತಿ ಭಗವಾನ್ ನಾರದಃ-
'ಸಂನ್ಯಸ್ಯ ಸರ್ವಕರ್ಮಾಣಿ ಸಂನ್ಯಸ್ಯ ವಿಪುಲಂ ತಪಃ ।
ಸಂನ್ಯಸ್ಯ ವಿವಿಧಾ ವಿದ್ಯಾಃ ಸರ್ವಂ ಸಂನ್ಯಸ್ಯ ಚೈವ ಹಿ ॥
ಶಕ್ಯಂ ತ್ವೇಕೇನ ಮುಕ್ತೇನ ಕೃತಕೃತ್ಯೇನ ಸರ್ವಶಃ ।
ಪಿಣ್ಡಮಾತ್ರಮುಪಾಶ್ರಿತ್ಯ ಚರಿತುಂ ಸರ್ವತೋ ದಿಶಮ್ ॥
ಹಿತ್ವಾ ಗುಣಮಯಂ ಪಾಶಂ ಕರ್ಮ ಹಿತ್ವಾ ಶುಭಾಶುಭಮ್ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಏವಂ ಭವತಿ ನಿರ್ಗುಣಃ ॥
ಪರಿಗ್ರಹಂ ಪರಿತ್ಯಜ್ಯ ಭವ ತಾತ ಜಿತೇನ್ದ್ರಿಯಃ ।
ಅಶೋಕಸ್ಥಾನಮಾತಿಷ್ಠ ಇಹ ಚಾಮುತ್ರ ಚಾಭಯಮ್' ॥

ಇತಿ ॥ ತಥಾಚ ಸರ್ವಕರ್ಮಸಂನ್ಯಾಸಿನ ಏವ ಜ್ಞಾನೇ ಅಧಿಕಾರಃ ನೇತರಸ್ಯ ಇತ್ಯಾಹ ಭಗವಾನ್ ಬೃಹಸ್ಪತಿಃ- 'ಪ್ರಸಕ್ತೈರಿನ್ದ್ರಿಯೈರ್ದುಃಖೀ ತೈರೇವ ನಿಯತಃ ಸುಖೀ । ರಾಗವಾನ್ ಪ್ರಕೃತಿಂ ಹ್ಯೇತಿ ವಿರಕ್ತೋ ಜ್ಞಾನವಾನ್ಭವೇತ್' ಇತಿ । ತಥಾ ಚಾಶ್ವಮೇಧಿಕೇ ಬ್ರಹ್ಮಣಾ ಸಮ್ಯಗುಕ್ತಂ ಮುನೀನ್ ಪ್ರತಿ ಸರ್ವಾಶ್ರಮಿಣಾಂ ಸರ್ವಕರ್ಮಸಂನ್ಯಾಸೇ ಅಧಿಕಾರ ಇತಿ- 'ಗೃಹಸ್ಥೋ ಬ್ರಹ್ಮಚಾರೀ ವಾ ವಾನಪ್ರಸ್ಥೋಽಥವಾ ಪುನಃ। ಯ ಇಚ್ಛೇನ್ಮೋಕ್ಷಮಾಸ್ಥಾತುಮುತ್ತಮಾಂ ವೃತ್ತಿಮಾಶ್ರಯೇತ್' ಇತಿ । 'ಏತತ್ತು ಬ್ರಾಹ್ಮಣಂ ವೃತ್ತಮಾಹುರೇಕಪದಂ ಸುಖಮ್ । ಏಷಾ ಗತಿರ್ವಿರಕ್ತಾನಾಮೇಷ ಧರ್ಮಃ ಸನಾತನಃ' ಇತಿ । ಯಸ್ಮಾದೇವಂ ತಸ್ಮಾದ್ ವಿವಿದುಷೋಮುಮುಕ್ಷೋಶ್ಚ ಸರ್ವಕರ್ಮಸಂನ್ಯಾಸ ಏವಾಧಿಕಾರಃ ॥

(ಭಾಷ್ಯಾರ್ಥ)

ಮತ್ತು ಪೂಜ್ಯರಾದ ನಾರದರು ಸಹ ಸರ್ವಕರ್ಮಸಂನ್ಯಾಸವನ್ನು ಹೇಳಿರುತ್ತಾರೆ. (ಹೇಗೆಂದರೆ) "ಎಲ್ಲಾ ಕರ್ಮಗಳನ್ನೂ ಬಿಟ್ಟು, ಬಹಳವಾದ ತಪಸ್ಸನ್ನೂ ಬಿಟ್ಟು ಅನೇಕಪ್ರಕಾರವಾದ ವಿದ್ಯೆಗಳನ್ನೂ ಬಿಟ್ಟು, ಅಂತೂ ಎಲ್ಲವನ್ನೂ ಸಂನ್ಯಾಸಮಾಡಿ ಶರೀರವನ್ನು ಮಾತ್ರ ಆಶ್ರಯಿಸಿ ಎಲ್ಲಾ ದಿಕ್ಕುಗಳಲ್ಲಿಯೂ ಸಂಚರಿಸುವದಕ್ಕೆ ಕೃತಕೃತ್ಯನಾದ, ಮುಕ್ತನೊಬ್ಬನಿಂದ ಮಾತ್ರ ಎಲ್ಲಾ ರೀತಿಯಿಂದಲೂ ಸಾಧ್ಯವು. ಗುಣಮಯವಾದ (ಮಾಯೆಯ) ಪಾಶವನ್ನು ಬಿಟ್ಟು ಶುಭಾಶುಭಕರ್ಮಗಳನ್ನು ಬಿಟ್ಟು ಸತ್ಯ, ಅನೃತಗಳೆರಡನ್ನೂ ತ್ಯಾಗಮಾಡಿ[1]

---

1. ಮಹಾಭಾರತದಲ್ಲಿರುವ 'ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ। ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ತ್ಯಜ' (ಶಾಂತಿ. ೩೨೯-೪೦) ಎಂಬ ಶ್ಲೋಕವನ್ನು ಇದಕ್ಕೆ ಹೋಲಿಸಿರಿ.

ನಿರ್ಗುಣನಾಗುವನು. "ಅಪ್ಪ, ಪರಿಗ್ರಹವನ್ನು ಬಿಟ್ಟು ಜಿತೇಂದ್ರಿಯನಾಗು; (ಅನಂತರ) ಇಲ್ಲಿಯೂ ಪರಲೋಕದಲ್ಲಿಯೂ ಅಭಯವಾಗಿರುವ ಶೋಕರಹಿತವಾದ ಪದವಿಯನ್ನು ಹೊಂದುವನಾಗು" ಎಂದು (ಹೇಳಿದೆ.)

ಮತ್ತು ಎಲ್ಲಾ ಕರ್ಮಗಳನ್ನೂ ತ್ಯಾಗಮಾಡಿರುವವನಿಗೇ ಜ್ಞಾನದಲ್ಲಿ ಅಧಿಕಾರವು; ಬೇರೆಯವನಿಗೆ ಇಲ್ಲ- ಎಂದು ಭಗವಂತನಾದ ಬೃಹಸ್ಪತಿಯೂ ಹೇಳುತ್ತಾನೆ. (ಹೇಗೆಂದರೆ): "ಹೊರಕ್ಕೆ ಚಾಚಿರುವ ಇಂದ್ರಿಯಗಳಿಂದ (ಮನುಷ್ಯನು) ದುಃಖಿಯಾಗುವನು. ಅವೇ (ಇಂದ್ರಿಯಗಳನ್ನು) ಹಿಡಿತದಲ್ಲಿಟ್ಟುಕೊಳ್ಳುವವರಿಂದ ಸುಖಿಯಾಗುವನು. (ವಿಷಯಗಳಲ್ಲಿ) ಅನುರಾಗವುಳ್ಳವನು ಪ್ರಕೃತಿ(ಸಂಸಾರ)ವನ್ನು ಹೊಂದುವನು. ವಿರಕ್ತನಾದವನು ಜ್ಞಾನವನ್ನು ಪಡೆಯುವನು- ಎಂದು (ಹೇಳಿದೆ.) ಮತ್ತು ಅಶ್ವಮೇಧಪರ್ವದಲ್ಲಿ ಋಷಿಗಳನ್ನು ಕುರಿತು ಎಲ್ಲಾ ಆಶ್ರಮಿಗಳಿಗೂ ಸರ್ವಕರ್ಮಸಂನ್ಯಾಸದಲ್ಲಿ ಅಧಿಕಾರವಿದೆ- ಎಂದು ಬ್ರಹ್ಮನಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. (ಹೇಗೆಂದರೆ) "ಗೃಹಸ್ಥನಾಗಲಿ, ಬ್ರಹ್ಮಚಾರಿಯಾಗಲಿ, ವಾನಪ್ರಸ್ಥನಾಗಲಿ- ಯಾವನೇ ಆದರೂ ಮೋಕ್ಷವನ್ನು ಪಡೆಯಲಿಚ್ಛಿಸುವವನಾದರೆ ಉತ್ತಮವಾದ ವೃತ್ತಿಯನ್ನು ಆಶ್ರಯಿಸಬೇಕು. ಈ (ಸಂನ್ಯಾಸವಾದರೋ) ಬ್ರಹ್ಮದ (ಪ್ರಾಪ್ತಿಗೆ ಸಾಧನವಾದ) ನಡತೆಯು. ಇದು ಮುಖ್ಯವಾದ ಪದವು. ಸುಖವಾದದ್ದು. ವಿರಕ್ತರಿಗೆ ಇದೇ ಗತಿಯು. ಸನಾತನವಾದ ಧರ್ಮವೆಂಬುದು ಇದೇ"- ಎಂದು (ಹೇಳಿದೆ). ಹೀಗಿರುವದರಿಂದ ತತ್ತ್ವವನ್ನು ತಿಳಿಯಲಿಚ್ಛಿಸುವವನಿಗೂ ಮೋಕ್ಷವನ್ನು ಪಡೆಯಲಿಚ್ಛಿಸುವವನಿಗೂ ಸರ್ವಕರ್ಮಸಂನ್ಯಾಸದಲ್ಲಿಯೇ ಅಧಿಕಾರವೆಂದು (ಸಿದ್ಧವಾಯಿತು.)

## ಈಶ್ವರನು ಜಗತ್ಕಾರಣನೆಂಬುದೂ ಮಾಯೆಯಿಂದಲೇ

(ಭಾಷ್ಯ)

ಏವಂ ತಾವತ್ ಏಕಸ್ಯೈವ ಪರಮಾತ್ಮನಃ ಅನಾದಿಮಾಯಾಯೋಗೇನ ಬಹುರೂಪತ್ವಮುಕ್ತಮ್ । ಇದಾನೀಂ ಯದೀಶ್ವರಸ್ಯ ಜಗತ್ಕಾರಣತ್ವಂ ತದಪಿ ಮಾಯೋಪಾಧಿಕಮಿತ್ಯಾಹ ॥

(ಭಾಷ್ಯಾರ್ಥ)

ಈ ರೀತಿಯಾಗಿ ಒಬ್ಬನೇ ಆಗಿರುವ ಪರಮಾತ್ಮನಿಗೆ ಅನಾದಿಮಾಯಾ ಸಂಬಂಧದಿಂದ ಅನೇಕರೂಪಗಳಾಗಿರುವಿಕೆಯನ್ನು ಹೇಳಿದ್ದಾಗಿದೆ. ಈಗ ಈಶ್ವರನಿಗೆ ಜಗತ್ಕಾರಣತ್ವವನ್ನು (ಹೇಳುತ್ತಾರಲ್ಲವೆ?) ಅದೂ ಸಹ ಮಾಯೆಯೆಂಬ ಉಪಾಧಿನಿಮಿತ್ತವೇ- ಎಂಬುದನ್ನು ತಿಳಿಸುತ್ತಾನೆ-

**ಯತೋತದದ್ಧಾ[1] ಭಗವಾನ್ ಸ ನಿತ್ಯಂ[2]**
**ವಿಕಾರಯೋಗೇನ ಕರೋತಿ ವಿಶ್ವಮ್ ।**
**ತಥಾ ಚ ತಚ್ಛಕ್ತಿರಿತಿ ಸ್ಮ ಮನ್ಯೇ**
**ತದರ್ಥಯೋಗೇ[3] ಚ ಭವನ್ತಿ ವೇದಾಃ ॥ ೨೧ ॥**

೨೧. ಅದೇನೆಂದರೆ : ಆ ಭಗವಂತನು ಯಾವಾಗಲೂ ವಿಕಾರ ಯೋಗದಿಂದ ಪ್ರಪಂಚವನ್ನು ಸೃಷ್ಟಿಮಾಡುವನು. ಮತ್ತು ಆ (ಮಾಯೆಯು) ಅವನ ಶಕ್ತಿಯೆಂದೇ (ನಾನು) ತಿಳಿದಿದ್ದೇನೆ. ಆ ವಿಷಯದಲ್ಲಿ ವೇದಗಳು ಪ್ರಮಾಣವಾಗಿರುತ್ತವೆ.

(ಭಾಷ್ಯ)

ಯದೇತದದ್ಧಾ ಪರಮಾರ್ಥಭೂತೋ ಭಗವಾನ್ ಐಶ್ವರ್ಯಾದಿಸಮನ್ವಿತಃ ಸಃ ಪರಮೇಶ್ವರೋ ನಿತ್ಯಂ ವಿಕಾರಯೋಗೇನ ಈಕ್ಷಣಾದಿಪೂರ್ವಕಂ ವಿಶ್ವಂ ಕರೋತಿ ಇತಿ ತತ್ಸರ್ವಂ ತಥಾ ತಚ್ಛಕ್ತಿಃ ಪರಮಾತ್ಮನಃ ಶಕ್ತಿಃ ಮಾಯೈವ ಕರೋತಿ ನ ಪರಮಾತ್ಮಾ ಅಪೂರ್ವಾದಿಲಕ್ಷಣಃ ಇತಿ ಸ್ಮ ಮನ್ಯೇ । ನ ಸ್ವತಃ ಚಿದಾನನ್ದಾದ್ವಿತೀಯಸ್ಯ ಕಾರಣತ್ವಮ್, ಕಿಂ ತು ಮಾಯಾವೇಶವಶಾದ್ ಇತ್ಯರ್ಥಃ । ಕಿಂ ತರ್ಹ್ಯಸ್ಯ ತಥಾಭೂತಶಕ್ತಿಯೋಗೇ ಪ್ರಮಾಣಮಿತಿ ಚೇತ್, ತತ್ರಾಹ– ತದರ್ಥಯೋಗೇ ತಸ್ಯ ಪರಮಾತ್ಮನೋ ಜಗದುಪಾದಾನಭೂತಮಾಯಾರ್ಥಯೋಗೇ ಚ ಭವನ್ತಿ ವೇದಾಃ । ತಸ್ಯ ಮಾಯಾಸದ್ಭಾವೇ ವೇದಾಃ ಪ್ರಮಾಣಂ ಭವನ್ತಿ ಇತ್ಯರ್ಥಃ । ತಥಾ ಚ ಶ್ರುತಿಃ– 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫-೧೯) 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್' (ಶ್ವೇ ೪-೯) 'ಮಾಯಿನಂ ತು ಮಹೇಶ್ವರಮ್' (ಶ್ವೇ. ೪-೧೦) 'ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಮ್' (ಶ್ವೇ. ೧-೩) ಇತಿ । ತಥಾ ಚಾಹ ಭಗವಾನ್ ವಾಸುದೇವಃ– 'ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ' (ಗೀ. ೭-೧೪) 'ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ । ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ' (ಗೀ. ೪-೬) 'ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್' (ಗೀ. ೯-೧೦) ಇತಿ । ತಥಾ ಚ–

ಮಾಯಾ ತವೇಯಮಜ್ಞಾತಪದಾರ್ಥಾನತಿಮೋಹಿನೀ ।
ಅನಾತ್ಮನ್ಯಾತ್ಮವಿಜ್ಞಾನಂ ಯಯಾ ಮೂಢೋಽಧಿರೋಹತಿ ॥

---

1. 'ಯ ಏತದ್ವಾ' 2. 'ನಿತ್ಯೋ'
3. 'ತಥಾರ್ಥಯೋಗೇ' ಎಂದು ಮ. ಭಾ. ಪಾಠಗಳು.

ಇಯಮಸ್ಯ ಜಗದ್ಧಾತುರ್ಮಾಯಾ ಕೃಷ್ಣಸ್ಯ ಗಹ್ವರೀ ।
ಧಾರ್ಯಧಾರಕಭಾವೇನ ಯಯಾ ಸಂಪೀಡಿತಂ ಜಗತ್ ॥
ಅಹೋ ಸ್ಮ ದುಸ್ತರಾ ವಿಷ್ಣೋರ್ಮಾಯೇಯಮತಿಗಹ್ವರೀ ।
ಯಯಾ ಮೋಹಿತಚಿತ್ತಸ್ತು ನ ವೇತ್ತಿ ಪರಮೇಶ್ವರಮ್ ॥ (?)

ಇತಿ ॥

( ಭಾಷ್ಯಾರ್ಥ )

ಅದೇನೆಂದರೆ : ಪರಮಾರ್ಥಸ್ವರೂಪನಾದ ಭಗವಂತನು, ಐಶ್ವರ್ಯಾದಿ ಗುಣಗಳಿಂದ ಕೂಡಿರುವ ಆ ಪರಮೇಶ್ವರನು ಯಾವಾಗಲೂ ವಿಕಾರಯೋಗದಿಂದ ಎಂದರೆ ನೋಡುವದೇ ಮುಂತಾದವುಗಳ ಮೂಲಕ ಜಗತ್ತನ್ನು ಉಂಟುಮಾಡುತ್ತಾನೆ; ಹೀಗೆಂಬುದೆಲ್ಲವೂ ಅವನ ಶಕ್ತಿಯು- ಎಂದರೆ ಪರಮಾತ್ಮನ ಶಕ್ತಿ (ರೂಪ)ವಾದ ಮಾಯೆಯೇ ಎಲ್ಲವನ್ನೂ ಮಾಡುತ್ತದೆ. ಅಪೂರ್ವವೇ ಮುಂತಾದ[1] ಲಕ್ಷಣಗಳುಳ್ಳ ಪರಮಾತ್ಮನಲ್ಲ- ಎಂದು ತಿಳಿದಿದ್ದೇನೆ. ಚಿದಾನಂದಸ್ವರೂಪನೂ ಅದ್ವಿತೀಯನೂ ಆಗಿರುವ (ಭಗವಂತನು) ಸ್ವತಃ ಕಾರಣನಲ್ಲ ; ಮತ್ತೇನೆಂದರೆ ಮಾಯೆಯೆಂಬ ಉಪಾಧಿಯ ಸಂಬಂಧದಿಂದಲೇ- ಎಂದರ್ಥ. ಹಾಗಾದರೆ ಆ (ಈಶ್ವರನಿಗೆ) ಅಂಥ ಶಕ್ತಿಯ ಸಂಬಂಧವು ಇದೆಯೆಂಬುದಕ್ಕೆ ಪ್ರಮಾಣವಾದರೂ ಏನಿದೆ ?-ಎಂದರೆ- ಹೇಳುತ್ತಾನೆ ; ಆ ಪರಮಾತ್ಮನಿಗೆ ಜಗತ್ತನ್ನು (ಉಂಟುಮಾಡುವಂಥ) ಉಪಾದಾನರೂಪವಾದ ಮಾಯೆಯೆಂಬ ವಸ್ತುವಿನ ಸಂಬಂಧವು ತದರ್ಥಯೋಗವು ; ಅದು ಉಂಟೆಂಬ ವಿಷಯದಲ್ಲಿ ಎಂದರೆ ಮಾಯೆಯು ಇದೆ ಎಂಬ ವಿಚಾರದಲ್ಲಿ ವೇದಗಳು ಪ್ರಮಾಣವಾಗಿರುತ್ತದೆ- ಎಂದಭಿಪ್ರಾಯ. ಹಾಗೂ ಶ್ರುತಿಯು- 'ಇಂದ್ರನು ಮಾಯೆಗಳಿಂದ ಬಹುರೂಪನಾಗಿ ಕಾಣುತ್ತಾನೆ', 'ಮಾಯಾವಿಯಾದ (ಈತನು) ಈ (ಮಾಯೆಯಿಂದ) ಈ ಜಗತ್ತೆಲ್ಲವನ್ನೂ ಸೃಷ್ಟಿಸುತ್ತಾನೆ', 'ಪರಮೇಶ್ವರನನ್ನು (ಮಾಯೆಯುಳ್ಳವನೆಂದು) ತಿಳಿಯಬೇಕು' 'ತನ್ನ ಗುಣಗಳಿಂದ ಒಳಗೆ ಗೂಢವಾಗಿರುವ ದೇವಾತ್ಮಶಕ್ತಿಯನ್ನು ಕಂಡುಕೊಂಡು' ಎಂದು ಹೇಳುತ್ತಿದೆ. ಹಾಗೂ ಭಗವಂತನಾದ ವಾಸುದೇವನೂ ಕೂಡ- 'ದೇವನಾದ ನನ್ನ ಗುಣಮಯವಾದ ಈ ಮಾಯೆಯು ದಾಟಲಸಾಧ್ಯವಾದದ್ದು', 'ಅಜನೂ ಅವ್ಯಯಾತ್ಮನೂ ಪ್ರಾಣಿಗಳಿಗೆಲ್ಲ ಒಡೆಯನಾಗಿರುವವನೂ ಆಗಿದ್ದರೂ ನನ್ನ ಪ್ರಕೃತಿಯನ್ನು ಆಶ್ರಯಿಸಿ ಆತ್ಮಮಾಯೆಯಿಂದ ಹುಟ್ಟುವೆನು', 'ಅಧ್ಯಕ್ಷನಾಗಿರುವ ನನ್ನ (ಸನ್ನಿಧಾನಮಾತ್ರದಿಂದ) ಪ್ರಕೃತಿಯು ಚರಾಚರಾತ್ಮಕವಾದದ್ದೆಲ್ಲವನ್ನೂ ಹಡೆಯುವದು' ಎಂದು ಹೇಳಿರುತ್ತಾನೆ. ಮತ್ತು-ಅನಾತ್ಮದಲ್ಲಿ ಆತ್ಮನೆಂಬ ಬುದ್ಧಿರೂಪವಾದ, (ನಿಜವನ್ನು) ತಿಳಿಯದೇ ಇರುವ ಪದಾರ್ಥ

1. 'ತದೇತತ್ ಬ್ರಹ್ಮ ಅಪೂರ್ವಮನಪರಮ್' ಎಂಬ ಬೃಹದಾರಣ್ಯಕಶ್ರುತಿಯ ಸೂಚನೆ.

ಗಳನ್ನು ಅತಿಯಾಗಿ ಪ್ರೀತಿಸುವ ಈ ಮಾಯೆಯೆಂಬುದು ನಿನ್ನದೇ. ಇದರಿಂದಲೇ ಮೂಢನು (ಸಂಸಾರವನ್ನು) ಏರಿಸುವನು. ಜಗತ್ತಿಗೆಲ್ಲ ಕಾರಣನಾದ ಈ ಕೃಷ್ಣನ ದಾಟಲಸಾಧ್ಯವಾದ ಮಾಯೆಯೆಂಬುದು ಇದೇ ಧರಿಸುವದು, ಧರಿಸಲ್ಪಡುವದು– ಎಂಬ ರೀತಿಯಿಂದ ತೋರಿಕೊಳ್ಳುತ್ತಿರುವ ಇದರಿಂದಲೇ ಜಗತ್ತೆಲ್ಲವೂ ಪೀಡಿಸಲ್ಪಟ್ಟಿರುವದು. ಆಶ್ಚರ್ಯವು ! ಈ ದಾಟಲಸಾಧ್ಯವಾದ ವಿಷ್ಣುವಿನ ಮಾಯೆಯು ಬಹಳ ಗಹನವಾದುದು. ಯಾವ ಇದರಿಂದ ಮೋಹಿತವಾದ ಮನಸ್ಸುಳ್ಳವನು ಪರಮೇಶ್ವರನನ್ನು ಅರಿಯಲಾರನು'[1]– ಎಂದು ಹೇಳಿದೆ.

## ಕರ್ಮಗಳ ಸ್ವರೂಪದ ವಿವರ

(ಭಾಷ್ಯ)

ಏವಂ ತಾವತ್ 'ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ' ಇತ್ಯಾದಿನಾ ಮೃತ್ಯೋಃ ಸ್ವರೂಪಂ ತಸ್ಯ ಕಾರ್ಯಾತ್ಮನಾವಸ್ಥಾನಂ ತನ್ನಿಮಿತ್ತಂ ಚ ಅನೇಕಾನರ್ಥಂ ದರ್ಶಯಿತ್ವಾ ಕೇನ ತರ್ಹ್ಯಸ್ಯ ವಿನಾಶ ಇತ್ಯಾಶಙ್ಕ್ಯ 'ಏವಂ ಮೃತ್ಯುಂ ಜಾಯಮಾನಂ ವಿದಿತ್ವಾ ಜ್ಞಾನೇನ ತಿಷ್ಠನ್ ನ ಬಿಭೇತಿ ಮೃತ್ಯೋಃ' ಇತ್ಯಾದಿನಾ ಆತ್ಮಜ್ಞಾನಾದೇವಾಭಯಪ್ರಾಪ್ತಿಂ ದರ್ಶಿತಾಂ ಶ್ರುತ್ವಾ ಪ್ರಾಸಙ್ಗಿಕೇ ಚೋದ್ಯದ್ವಯೇ ಪರಿಹೃತೇ ಕರ್ಮಸ್ವರೂಪವಿಜ್ಞಾನಾಯ ಪ್ರಾಹ ಧೃತರಾಷ್ಟ್ರಃ—

(ಭಾಷ್ಯಾರ್ಥ)

ಈ ರೀತಿಯಾಗಿ 'ನಾನು ಪ್ರಮಾದವನ್ನೇ ಮೃತ್ಯುವೆಂದು ಹೇಳುವೆನು' ಎಂಬಿದೇ ಮುಂತಾದದ್ದರಿಂದ ಮೃತ್ಯುವಿನ ಸ್ವರೂಪವನ್ನೂ ಕಾರ್ಯರೂಪದಿಂದ ಅದರ ಇರುವಿಕೆಯನ್ನೂ ಅದರ ನಿಮಿತ್ತದಿಂದಲೇ ಅನೇಕಸಂಕಟಗಳು (ಉಂಟಾಗುವದೆಂಬುದನ್ನೂ) ತಿಳಿಸಿಕೊಟ್ಟು 'ಹಾಗಾದರೆ ಇದರ ನಾಶವು ಏತರಿಂದಾದೀತು ?' ಎಂದು ಶಂಕಿಸಿ 'ಹೀಗೆ ಮೃತ್ಯುವು ಹುಟ್ಟುತ್ತಾನೆಂಬುದನ್ನು ಅರಿತು ಜ್ಞಾನದಿಂದ (ನೆಲೆ)ನಿಂತವನು ಮೃತ್ಯುವಿಗೆ ಹೆದರುವದಿಲ್ಲ' ಎಂಬಿದೇ ಮುಂತಾದ (ವಾಕ್ಯ)ಗಳಿಂದ ಜ್ಞಾನದಿಂದಲೇ ಅಭಯಪ್ರಾಪ್ತಿಯೆಂದು ತಿಳಿಸಿರುವದನ್ನು ಕೇಳಿದಮೇಲೆ– ಪ್ರಾಸಂಗಿಕವಾದ ಎರಡು ಪ್ರಶ್ನೆಗಳಿಗೂ ಉತ್ತರಿಸಲ್ಪಡಲಾಗಿ– ಧೃತರಾಷ್ಟ್ರನು ಕರ್ಮಸ್ವರೂಪವನ್ನು ಅರಿಯುವದಕ್ಕಾಗಿ ಹೇಳುತ್ತಾನೆ :—

---

1. ಈ ವಾಕ್ಯಗಳು ಎಲ್ಲಿಯವೆಂಬುದು ತಿಳಿದಿಲ್ಲ.

ಧೃತರಾಷ್ಟ್ರ ಉವಾಚ—

ಯಸ್ಮಾದ್ಧರ್ಮಾನಾಚರನ್ತೀಹ[1] ಕೇಚಿತ್
ತಥಾಧರ್ಮಾನ್ ಕೇಚಿದಿಹಾಚರನ್ತಿ ।
ಧರ್ಮಃ ಪಾಪೇನ ಪ್ರತಿಹನ್ಯತೇ ವಾ[2]
ಉತಾಹೋ ಧರ್ಮಃ ಪ್ರತಿಹನ್ತಿ ಪಾಪಮ್ ॥ ೨೨ ॥

೨೨. ಧೃತರಾಷ್ಟ್ರನಿಂತೆಂದನು : ಕೆಲವರು ಧರ್ಮವನ್ನು ಆಚರಿಸುವರಷ್ಟೆ ! ಹಾಗೆಯೇ (ಮತ್ತೆ) ಕೆಲವರು ಇಲ್ಲಿ ಅಧರ್ಮವನ್ನು ಆಚರಿಸುವರು. (ಆದರೆ) ಧರ್ಮವು ಪಾಪದಿಂದ ಹಿಮ್ಮೆಟ್ಟಿಸಲ್ಪಡುವದೊ, ಅಥವಾ ಧರ್ಮವೇ ಪಾಪವನ್ನು ನಾಶಗೊಳಿಸುತ್ತದೆಯೊ ?

( ಭಾಷ್ಯ )

ಯಸ್ಮಾದ್ ಧರ್ಮಾನ್ ಅಗ್ನಿಹೋತ್ರಾದೀನ್ ಆಚರನ್ತಿ ಇಹ ಲೋಕೇ ಕೇಚಿತ್ । ತಥಾ ಅಧರ್ಮಾನ್ ಇಹ ಆಚರನ್ತಿ । ಕಿಂ ತೇಷಾಂ ಧರ್ಮಃ ಪಾಪೇನ ಪ್ರತಿಹನ್ಯತೇ ವಾ ? ಉತಾಹೋ ಸ್ವಿತ್ ಧರ್ಮಃ ಪ್ರತಿಹನ್ತಿ ಪಾಪಮ್ ? ಅಥವಾ ತುಲ್ಯಬಲತ್ವೇನಾನ್ಯತರೇಣಾನ್ಯತರಸ್ಯಾಪಿ ನಾಶಃ ? ಇತಿ ॥

( ಭಾಷ್ಯಾರ್ಥ )

ಈ ಲೋಕದಲ್ಲಿ ಕೆಲವರು ಅಗ್ನಿಹೋತ್ರವೇ ಮುಂತಾದ ಧರ್ಮಗಳನ್ನು (ಅನುಷ್ಠಾನ)ಮಾಡುತ್ತಾರೆ. ( ಹಾಗೆಯೇ ) ( ಪ್ರಾಣಿಹಿಂಸೆ- ಮುಂತಾದ ) ಅಧರ್ಮಗಳನ್ನೂ ಆಚರಿಸುತ್ತಾರೆ. ಹೀಗಿರುವಲ್ಲಿ ಅವರ ಧರ್ಮವು ಪಾಪದಿಂದ ಹಿಮ್ಮೆಟ್ಟಿಸಲ್ಪಡುವದೊ ? ಅಥವಾ ಹಾಗಿಲ್ಲದೆ ಪಾಪವನ್ನು ಧರ್ಮವು ನಾಶಗೊಳಿಸುವದೊ ? ಅಥವಾ ಸಮಾನಬಲವುಳ್ಳ ಎರಡೂ ಒಂದನ್ನೊಂದು ನಾಶಮಾಡುವವೊ, ಹೇಗೆ ?- ಎಂದು (ಪ್ರಶ್ನೆ).[3]

---

1. 'ಯೇಽಸ್ಮಿನ್ ಧರ್ಮಾನ್ ಆಚರನ್ತೀಹ'

2. 'ಸ್ವಿತ್' ಎಂದು ಪಾಠಾಂತರಗಳು.

3. ಧರ್ಮಾನುಷ್ಠಾನದಿಂದ ಅಧರ್ಮವು ನಾಶಮಾಡಲ್ಪಡುವದೊ ? ಅಥವಾ ಅಧರ್ಮವೇ ಧರ್ಮವನ್ನು ಹಿಮ್ಮೆಟ್ಟಿಸುವವೊ ? ಎಂದು ಒಂದು ಅಭಿಪ್ರಾಯ. ನೀಲಕಂಠೀಯವ್ಯಾಖ್ಯಾನದಲ್ಲಿ ಒಬ್ಬನೇ ಬೇರೆಬೇರೆಯ ಕಾಲಗಳಲ್ಲಿ ಧರ್ಮ, ಅಧರ್ಮ- ಎರಡನ್ನೂ ಮಾಡಿರಬಹುದು. ಆದ್ದರಿಂದ ಅಂಥವನು ಮೋಕ್ಷಕ್ಕಾಗಿ ಅಲ್ಪವಾದ ಅಗ್ನಿಹೋತ್ರಾದಿಧರ್ಮಗಳಲ್ಲಿ ಪ್ರವೃತ್ತನಾದಾಗ ರಾಗದ್ವೇಷರೂಪವಾದ ಅವನಲ್ಲಿಯೇ ಇರುವ ಅಧರ್ಮಗಳು ಅವನನ್ನು ಹಿಮ್ಮೆಟ್ಟಿಸುವವೊ ? ಅಥವಾ ಧರ್ಮವು ಅವನ ಪಾಪವನ್ನು ನಾಶಮಾಡಿ ಮೋಕ್ಷಕ್ಕೆ ಅಧಿಕಾರಿಯನ್ನಾಗಿ ಮಾಡಬಲ್ಲದೊ ?' ಎಂಬ ಅರ್ಥಸ್ವಾರಸ್ಯವನ್ನು ತೆಗೆದಿದೆ. ನಾವು ಮೂಲಾನುಸಾರವಾಗಿ ಅನುವಾದಮಾಡಿದ್ದೇವೆ.

(ಭಾಷ್ಯ)

ಅವಿದುಷ ಉಭಯೋರನುಭವ ಏವ । ನಾನ್ಯತರೇಣಾನ್ಯತರಸ್ಯ ನಾಶಃ । ವಿದುಷಃ ಪುನಃ ಉಭಯೋರಪಿ ಜ್ಞಾನಾಗ್ನಿನಾ ನಾಶ ಇತ್ಯುತ್ತರಮಾಹ–

(ಭಾಷ್ಯಾರ್ಥ)

ಅಜ್ಞಾನಿಯಾದವನಿಗೆ (ಧರ್ಮಾಧರ್ಮಗಳೆರಡರ) ಫಲವೂ ಅನುಭವಿಸ ತಕ್ಕದ್ದೇ ಆಗಿದೆ. ಒಂದರಿಂದ ಮತ್ತೊಂದು ನಾಶವಾಗಲಾರದು ; ಆದರೆ ಜ್ಞಾನಿಯಾದವನಿಗೆ ಇವೆರಡೂ ಜ್ಞಾನಾಗ್ನಿಯಿಂದ ನಾಶವಾಗಿಬಿಡುತ್ತವೆ– ಎಂಬ ಉತ್ತರವನ್ನು (ಸನತ್ಸುಜಾತನು) ಹೇಳುತ್ತಾನೆ :

**ಸನತ್ಸುಜಾತ ಉವಾಚ[1]—**

**ತಸ್ಮಿನ್ ಸ್ಥಿತೋ ವಾಪ್ಯುಭಯಂ ಹಿ ನಿತ್ಯಂ**
**ಜ್ಞಾನೇನ ವಿದ್ವಾನ್ ಪ್ರತಿಹನ್ತಿ ಸಿದ್ಧಮ್ ।**
**ಅಥಾನ್ಯಥಾ[2] ಪುಣ್ಯಮುಪೈತಿ ದೇಹೀ**
**ತಥಾಗತಂ ಪಾಪಮುಪೈತಿ ಸಿದ್ಧಮ್ ॥ ೨೩ ॥**

೨೩. ಸನತ್ಸುಜಾತನಿಂತೆಂದನು : ಆ (ಕರ್ಮದಲ್ಲಿ)ದ್ದುಕೊಂಡಿರುವನಾದರೂ ವಿದ್ವಾಂಸನು (ಆತ್ಮ)ಜ್ಞಾನದಿಂದ ನಿಯತವಾಗಿ ಅವೆರಡನ್ನೂ ನಾಶಗೊಳಿಸುವನು. ಇದು (ಶ್ರುತಿಸ್ಮೃತಿಗಳಲ್ಲಿ) ಪ್ರಸಿದ್ಧವಾಗಿದೆ. ಇನ್ನು ಜ್ಞಾನವಿಲ್ಲದವನು ದೇಹವನ್ನು ಧರಿಸಿದವನಾಗಿ ಪುಣ್ಯವನ್ನೂ ಮತ್ತು ಪಾಪವನ್ನೂ ಅನುಭವಿಸುವನು. ಇದೂ (ಶ್ರುತಿ)ಪ್ರಸಿದ್ಧವಾಗಿದೆ.

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್ ಸನತ್ಸುಜಾತಃ- ತಸ್ಮಿನ್ ಪುಣ್ಯಾಪುಣ್ಯಾತ್ಮಕೇ ಕರ್ಮಣಿ ಸ್ಥಿತೋಽಪಿ ಕುರ್ವನ್ನಪಿ ಉಭಯಂ ಪುಣ್ಯಾಪುಣ್ಯಲಕ್ಷಣಂ ಕರ್ಮ ನಿತ್ಯಂ ನಿಯಮೇನ ವಿದ್ವಾನ್ ಜ್ಞಾನೇನ ಪ್ರತಿಹನ್ತಿ ವಿನಾಶಯತಿ । ಕಥಮೇತದವಗಮ್ಯತೇ ಜ್ಞಾನೇನ ವಿದ್ವಾನ್ ಪ್ರತಿಹನ್ತೀತಿ । ತತ್ರಾಹ- ಸಿದ್ಧಂ ಪ್ರಸಿದ್ಧಂ ಹ್ಯೇತತ್ ಶ್ರುತಿಸ್ಮೃತೀತಿಹಾಸಪುರಾಣೇಷು । ತಥಾ ಚ ಶ್ರುತಿಃ– 'ಭಿದ್ಯತೇ ಹೃದಯಗ್ರನ್ಥಿಃ' (ಮುಂ. ೨–೨–೮) ಇತ್ಯಾದಿ । 'ಯಥಾ ಪುಷ್ಕರಪಲಾಶ ಆಪೋ ನ ಶ್ಲಿಷ್ಯನ್ತ ಏವಮ್ ಏವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' (ಛಾಂ. ೪–೧೪–೩) ಇತಿ । 'ತದ್ಯಥೇಷೀಕಾತೂಲಮಗ್ನೌ ಪ್ರೋತಂ

---

1. ಇದಾದಮೇಲೆ : 'ಉಭಯಮೇವ ತತ್ರೋಪಯುಜ್ಯತೇ ಫಲಂ ಧರ್ಮಸ್ಯೈವೇತರಸ್ಯ ಚ' ಎಂದು ಹೆಚ್ಚಾಗಿ ಪಾ॥
2. 'ತಥಾನ್ಯಥಾ ' ಎಂದು ಪಾ॥

ಪ್ರದೂಯೇತ ಏವಂ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯನ್ತೇ' (ಛಾಂ. ೫-೨೪-೩) ಇತಿ । 'ತಥಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಞ್ಜನಃ ಪರಮಂ ಸಾಮ್ಯಮುಪೈತಿ' (ಮುಂ. ೩-೧ ೩) ಇತಿ । 'ಅಶ್ವ ಇವ ರೋಮಾಣಿ ವಿಧೂಯ ಪಾಪಮ್' (ಛಾಂ. ೮-೧೩ ೧) ಇತಿ । 'ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ ಕುರುತೇಽರ್ಜುನ' (ಗೀ. ೪-೩೭) ಇತಿ ॥

(ಭಾಷ್ಯಾರ್ಥ)

ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಪೂಜ್ಯನಾದ ಸನತ್ಸುಜಾತನು ಹೇಳುತ್ತಾನೆ- ಪುಣ್ಯಪಾಪಗಳ ರೂಪವಾದ ಆ ಕರ್ಮದಲ್ಲಿದ್ದುಕೊಂಡಿದ್ದರೂ ಎಂದರೆ ಪುಣ್ಯಪಾಪ ರೂಪವಾದ ಕರ್ಮಗಳನ್ನು ಮಾಡುತ್ತಿದ್ದರೂ ನಿತ್ಯವೂ ಎಂದರೆ-ನಿಯತವಾಗಿ ವಿದ್ವಾಂಸನು ಜ್ಞಾನದಿಂದ (ಅವುಗಳನ್ನು) (ಪ್ರತಿಹನ್ತಿ-ವಿನಾಶಯತಿ-) ನಾಶ ಮಾಡಿಕೊಳ್ಳುತ್ತಾನೆ. ಹೀಗೆ ಜ್ಞಾನದಿಂದ ಜ್ಞಾನಿಯು (ಕರ್ಮಗಳನ್ನು) ನಾಶಮಾಡಿಕೊಳ್ಳುವದೆಂಬುದು ಹೇಗೆ ಗೊತ್ತಾಗುತ್ತದೆ ? ಎಂದರೆ ಹೇಳುತ್ತಾರೆ: ಇದು ಶ್ರುತಿಸ್ಮೃತೀತಿಹಾಸಪುರಾಣಗಳಲ್ಲಿ ಸಿದ್ಧವಾಗಿದೆ- ಎಂದರೆ ಪ್ರಸಿದ್ಧವಾಗಿದೆ. ಶ್ರುತಿಯು ಕೂಡ 'ಹೃದಯಗ್ರಂಥಿಯು ಬಿಚ್ಚಿಕೊಳ್ಳುತ್ತದೆ' ಎಂದು ಮುಂತಾಗಿ ಹೇಳುತ್ತಿದೆ. 'ಹೇಗೆ ತಾವರೆಯ ಎಲೆಯಲ್ಲಿ ನೀರು ಅಂಟಿಕೊಳ್ಳುವದಿಲ್ಲವೋ ಹಾಗೆಯೇ ಹೀಗೆಂದು ಅರಿತಿರುವವನಲ್ಲಿ ಪಾಪಕರ್ಮವು ಅಂಟಿಕೊಳ್ಳುವದಿಲ್ಲ' ಎಂದೂ, 'ಹೇಗೆ ನೊದೆಯಹುಲ್ಲಿನ ಹತ್ತಿಯನ್ನು ಬೆಂಕಿಯಲ್ಲಿ ಹಾಕಿದರೆ ಸುಡುವದೋ ಹಾಗೆಯೇ ಇವನ ಎಲ್ಲಾ ಪಾಪಗಳೂ ಸುಡುತ್ತವೆ' ಎಂದೂ, 'ಹಾಗೆಯೇ ಜ್ಞಾನಿಯು ಪುಣ್ಯಪಾಪಗಳನ್ನು ಕೊಡವಿದವನಾಗಿ ನಿರಂಜನನಾಗಿ ಪರಮಸಾಮ್ಯವನ್ನು ಹೊಂದುವನು' ಎಂದೂ 'ಕುದುರೆಯು ಮೈಗೂದಲುಗಳನ್ನು ಹೇಗೋ ಹಾಗೆ- ಪಾಪಗಳನ್ನು ಕೊಡವಿಹಾಕಿ' ಎಂದೂ (ಶ್ರುತಿಯಲ್ಲಿ) ಹೇಳಿದೆ. ಹೇಗೆ ಹೊತ್ತಿ ಉರಿಯುತ್ತಿರುವ ಬೆಂಕಿಯು ಕಟ್ಟಿಗೆಗಳನ್ನೆಲ್ಲ ಸುಟ್ಟು ಬೂದಿ ಮಾಡುವದೋ (ಹಾಗೆ ಜ್ಞಾನವೆಂಬ ಅಗ್ನಿಯು ಎಲ್ಲಾ ಕರ್ಮಗಳನ್ನೂ ಸುಟ್ಟು ಬೂದಿಮಾಡುವದು)' ಎಂದು (ಗೀತೆಯಲ್ಲಿ ಹೇಳಿದೆ.)

ಭಾಷ್ಯ

ಅಥಾನ್ಯಥಾ ಜ್ಞಾನವಿಹೀನಶ್ಚೇತ್ ಪುಣ್ಯಮುಪೈತಿ ದೇಹೀ ತಥಾಗತಂ ಪಾಪಮುಪೈತಿ ತತ್ಫಲಂ ಚೋಪಭುಙ್ಕ್ತೇ । ಕಥಮೇತದವಗಮ್ಯತ ಇತಿ ಚೇತ್ ತತ್ರಾಹ- ಸಿದ್ಧಂ ಪ್ರಸಿದ್ಧಂ ಹ್ಯೇತದಪಿ ಶ್ರುತಿಸ್ಮೃತೀತಿಹಾಸಪುರಾಣಾದಿಷು । ತಥಾ ಚ ಶ್ರುತಿಃ-'ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ ನಾನ್ಯಚ್ಛ್ರೇಯೋ ವೇದಯನ್ತೇ ಪ್ರಮೂಢಾಃ । ನಾಕಸ್ಯ ಪೃಷ್ಠೇ ಸುಕೃತೇನ

ಭೂತ್ವಾ ಇಮಂ ಲೋಕಂ ಪುನರೇವಾವಿಶನ್ತಿ'[1] (ಮುಂ. ೧–೨–೧೦) ಇತಿ | 'ಅನನ್ದಾ ನಾಮ ತೇ ಲೋಕಾ ಅನ್ಧೇನ ತಮಸಾಽಽವೃತಾಃ | ತಾಂಸ್ತೇ ಪ್ರೇತ್ಯಾಭಿಗಚ್ಛನ್ತಿ ಯೇ ಕೇ ಚಾತ್ಮಹನೋ ಜನಾಃ'[2] (ಬೃ. ೪–೪–೧೧) ಇತಿ | ತಥೈವ ವಾಸುದೇವಃ 'ತ್ರೈವಿದ್ಯಾ ಮಾಮ್' (ಗೀ. ೯–೨೦) ಇತಿ | 'ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಮ್' ಗೀ. ೯–೨೧) ಇತಿ ಚ ||

( ಭಾಷ್ಯಾರ್ಥ )

ಇನ್ನು ಹಾಗಿಲ್ಲದೆ ಜ್ಞಾನವಿಲ್ಲದವನಾದರೆ ದೇಹಿಯು ಪುಣ್ಯವನ್ನು ಹೊಂದು) ವಂತೆಯೇ ಪಾಪವನ್ನೂ ಹೊಂದುತ್ತಾನೆ; ಅದರ ಫಲವನ್ನೂ ಅನುಭವಿಸುತ್ತಾನೆ. ಇದು ಹೇಗೆ ಗೊತ್ತಾಗುವದೆಂದರೆ: ಹೇಳುತ್ತಾನೆ– ಇದೂ ಕೂಡ ಶ್ರುತಿಸ್ಮೃತೀತಿಹಾಸಪುರಾಣಾದಿಗಳಲ್ಲಿ ಸಿದ್ಧವು– ಎಂದರೆ ಪ್ರಸಿದ್ಧವಾಗಿದೆ. ಶ್ರುತಿಯು ಕೂಡ– 'ಇಷ್ಟಾಪೂರ್ತಗಳನ್ನು[3] ಅತ್ಯಂತ ಹೆಚ್ಚಿನದೆಂದು ತಿಳಿದವರಾಗಿ ಈ ದಡ್ಡರು ಇನ್ನೊಂದು ಶ್ರೇಯಸ್ಸನ್ನು ತಿಳಿಯದೆ ಇರುವರು. ಸ್ವರ್ಗದ ಮೇಲುಗಡೆಯಲ್ಲಿ ಅವರು ಪುಣ್ಯವನ್ನು ಅನುಭವಿಸಿ ಮತ್ತೆ ಈ ಲೋಕಕ್ಕೆ ಹಿಂತಿರುಗುವರು' ಎಂದೂ, 'ಮತ್ತೆ ಕೆಲವರು ಆತ್ಮಘಾತುಕರಾದ ಜನರು (ಇಲ್ಲಿಂದ ಹೋಗಿ) ಆನಂದವಿಲ್ಲದ ಅಂಧಂತಮಸ್ಸಿನಿಂದ ಆವೃತವಾಗಿರುವ ಆ ಲೋಕಗಳನ್ನು ಪಡೆಯುವರು' ಎಂದೂ ಹೇಳಿದೆ. ಹಾಗೆಯೇ ವಾಸುದೇವನೂ ಕೂಡ– 'ತ್ರೈವಿದ್ಯರು ನನ್ನನ್ನು (ಯಜ್ಞಗಳಿಂದ ಆರಾಧಿಸಿ ಸ್ವರ್ಗವನ್ನು ಪ್ರಾರ್ಥಿಸುವರು') ಎಂದೂ 'ಅವರು ವಿಶಾಲವಾದ ಸ್ವರ್ಗವನ್ನು ಅನುಭವಿಸಿ (ಪುಣ್ಯವು ಸವೆಯಲು ಮತ್ತೆ ಮನುಷ್ಯಲೋಕಕ್ಕೆ ಬರುವರು)' ಎಂದೂ ಹೇಳಿರುತ್ತಾರೆ.

(ಭಾಷ್ಯ)

ಕಿಮವಿದುಷಃ ಅನುಭವ ಏವೋಭಯೋಃ, ಉತಾನ್ಯತರೇಣಾನ್ಯತರನಾಶ ಇತಿ, ತತ್ರಾಹ—

( ಭಾಷ್ಯಾರ್ಥ )

ಅಜ್ಞಾನಿಯಾದವನಿಗೆ (ಪಾಪಪುಣ್ಯ)ಗಳೆರಡರ ಭೋಗವೂ (ನಿಯತವೋ ?) ಅಥವಾ ಒಂದರಿಂದ ಮತ್ತೊಂದು ನಾಶವಾಗುವದೊ ? ಎಂದರೆ ಹೇಳುತ್ತಾನೆ—

---

1. 'ಹೀನತರಂ ವಾವಿಶನ್ತಿ' ಎಂದು ಉಪನಿಷತ್ತಿನ ಪಾಠ.

2. 'ಅವಿದ್ವಾಂಸೋಽಬುಧೋ ಜನಾಃ' ಎಂದು ಉಪನಿಷತ್ತಿನ ಪಾಠ. ಈ ಮಂತ್ರವು ಈಶಾವಾಸ್ಯೋಪನಿಷತ್ತಿನಿಂದ ಆರಿಸಿದ್ದು ಎಂದು ಭಾವಿಸುವದಾದರೆ ಪ್ರಾರಂಭದಲ್ಲಿ 'ಅಸುರ್ಯಾ ನಾಮ' ಎಂದಿರಬೇಕಾಗುವದು.

3. ಇಷ್ಟವೆಂದರೆ ಯಜ್ಞಯಾಗಾದಿ ಶ್ರೌತಕರ್ಮಗಳು. ಪೂರ್ತವೆಂದರೆ ಕೆರೆ, ಭಾವಿ, ತೋಪು– ಮುಂತಾದವುಗಳನ್ನು ನಿರ್ಮಿಸುವದು.

ಗತ್ವೋಭಯಂ ಕರ್ಮಣಾ ಭುಜ್ಯತೇಽ[1]ಸ್ಥಿರಂ
ಶುಭಸ್ಯ ಪಾಪಸ್ಯ ಸ ಚಾಪಿ ಕರ್ಮಣಾ ।
ಧರ್ಮೇಣ ಪಾಪಂ ಪ್ರಣುದತೀಹ ವಿದ್ವಾನ್
ಧರ್ಮೋ ಬಲೀಯಾನಿತಿ ತಸ್ಯ ವಿದ್ಧಿ[2] ॥ ೨೪ ॥

೨೪. ಅವನಾದರೊ, ಪಾಪ ಮತ್ತು ಪುಣ್ಯಕರ್ಮಗಳ ಅನುಷ್ಠಾನ ದಿಂದ ಆಯಾ ಲೋಕಕ್ಕೆ ಹೋಗಿ ಎರಡನ್ನೂ ಅಸ್ಥಿರವಾದ ತನ್ನ ಕರ್ಮ (ನಿಮಿತ್ತವಾಗಿ) ಅನುಭವಿಸುವನು. ಜ್ಞಾನಿಯಾದರೊ, ಧರ್ಮದಿಂದ ಪಾಪವನ್ನು ಇಲ್ಲಿ ಹೋಗಲಾಡಿಸಿಕೊಂಡು (ಜ್ಞಾನದಿಂದ ಎರಡನ್ನೂ ದಾಟುವನು.) ಆದ್ದರಿಂದ ವಿವೇಕಿಗೆ ಧರ್ಮವು ಬಲಿಷ್ಠವಾದುದು- ಎಂದು ತಿಳಿಯುವನಾಗು.

(ಭಾಷ್ಯ)

ಗತ್ವಾ ಪರಲೋಕಂ ಪ್ರಾಪ್ಯ ಉಭಯಂ ಪುಣ್ಯಾಪುಣ್ಯಸಾಧ್ಯಂ ಫಲಂ ಪುಣ್ಯಾಪುಣ್ಯಲಕ್ಷಣೇನ ಕರ್ಮಣಾ ಭುಜ್ಯತೇ ಅಸ್ಥಿರಮ್ । ಶ್ರೂಯತೇ ಚ ಬೃಹದಾರಣ್ಯಕೇ 'ಯೋ ವಾ ಏತದಕ್ಷರಂ ಗಾರ್ಗ್ಯವಿದಿತ್ವಾ ಅಸ್ಮಿಂ ಲೋಕೇ ಜುಹೋತಿ' (ಬೃ. ೩-೮-೧೦) ಇತಿ । 'ಅಥ ಯೇ ಅನ್ಯಥಾತೋ ವಿದುರನ್ಯ ರಾಜಾನಃ ತೇ ಕ್ಷಯ್ಯಲೋಕಾ ಭವನ್ತಿ' (ಛಾಂ. ೭-೨೫-೨) ಇತಿ ಛಾನ್ದೋಗ್ಯೇ। ಸ ಚಾಪಿ ಸೋಽಪಿ ವಿದ್ವಾನ್ ಕರ್ಮಣಾ ಧರ್ಮೇಣ ಪಾಪಂ ಪ್ರಣುದತಿ ವಿನಾಶಯತಿ ವಿನಾಶಯತಿ ಇಹ ಲೋಕೇ ವಿದ್ವಾನ್ ವಕ್ಷ್ಯಮಾಣಲಕ್ಷಣೋ ವಿನಿಯೋಗಜ್ಞಃ ಈಶ್ವರಾರ್ಥಂ ಕರ್ಮಾನುತಿಷ್ಠನ್ । ತಥಾ ಚ ವಕ್ಷ್ಯತಿ- 'ತದರ್ಥಮುಕ್ತಂ ತಪ ಏತದಿಜ್ಯಾ ತಾಭ್ಯಾಮಸೌ ಪುಣ್ಯಮುಪೈತಿ ವಿದ್ವಾನ್ । ಪುಣ್ಯೇನ ಪಾಪಂ ವಿನಿಹತ್ಯ ಪಶ್ಚಾತ್ ಸ ಜಾಯತೇ ಜ್ಞಾನವಿದೀಪಿತಾತ್ಮಾ ॥ ಜ್ಞಾನೇನ ಚಾತ್ಮಾನಮುಪೈತಿ ವಿದ್ವಾನಥಾನ್ಯಥಾ ಸ್ವರ್ಗಫಲಾನುಕಾಙ್ಕ್ಷೀ । ಅಸ್ಮಿನ್ ಕೃತಂ ತತ್ ಪರಿಗೃಹ್ಯ ಸರ್ವಮಮುತ್ರ ಭುಙ್ಕ್ತೇ ಪುನರೇತಿ ಮಾರ್ಗಮ್ ॥' ಇತಿ । 'ಯೇಷಾಂ ಧರ್ಮೇ ಚ ವಿಸ್ಪರ್ಧಾ ನ ತದ್ವಿಜ್ಞಾನ ಸಾಧನಮ್ । ಯೇಷಾಂ ಧರ್ಮೇ ನ ಚ ಸ್ಪರ್ಧಾ ತೇಷಾಂ ತಜ್ಜ್ಞಾನ ಸಾಧನಮ್' ॥ ಇತಿ । ಯಶ್ಚೈವಂ ವಿನಿಯೋಗಜ್ಞಃ ಈಶ್ವರಾರ್ಥಂ ಕರ್ಮಾನು ತಿಷ್ಠತಿ, ತಸ್ಯ ವಿದುಷೋ ಧರ್ಮಃ ಪಾಪಾತ್ ಬಲೀಯಾನ್ ಇತಿ ವಿದ್ಧಿ ವಿಜಾನೀಹಿ । ತಸ್ಯ ಪುನಃ ಕೇವಲಕರ್ಮಿಣೋ ನ ಬಲೀಯಾನ್ । ತಸ್ಯೋ ಭಯೋರನುಭವ ಏವ ನಾನ್ಯತರೇಣಾನ್ಯತರಸ್ಯ ವಿನಾಶಃ ॥

1. 'ಯುಜ್ಯತೇ' 2. 'ಸಿದ್ಧಿಃ' ಎಂದು ಪಾಠಾಂತರಗಳು.

ಪರಲೋಕವನ್ನು (ಗತ್ವಾ-ಪ್ರಾಪ್ಯ) ಪಡೆದು ಧರ್ಮಾಧರ್ಮಗಳಿಂದ ಸಂಪಾದಿಸಿದ ಪುಣ್ಯಪಾಪರೂಪವಾದ ಕರ್ಮದಿಂದ ಅಸ್ಥಿರವಾದ ಫಲವು ಅನುಭವಿಸಲ್ಪಡುತ್ತದೆ. ಬೃಹದಾರಣ್ಯಕದಲ್ಲಿ ಹೇಳಿದೆಯೇನೆಂದರೆ :– 'ಎಲೈ ಗಾರ್ಗಿಯೆ, ಯಾವನೇ (ಆಗಲಿ) ಈ ಅಕ್ಷರವನ್ನು ಅರಿಯದೆ ಈ ಲೋಕದಲ್ಲಿ ಹೋಮಮಾಡುವನೋ....'[1] (ಎಂದು ಹೇಳಿದೆ). 'ಇನ್ನು ಯಾರು ಇದಕ್ಕಿಂತ ಬೇರೆಯಾಗಿ ತಿಳಿದುಕೊಂಡಿರುವರೋ (ಅವರು) ಮತ್ತೊಬ್ಬ ರಾಜನಿರುವವರು, ಅವರು ಕ್ಷಯ್ಯಲೋಕರಾಗುವರು'ಎಂದು ಛಾಂದೋಗ್ಯದಲ್ಲಿಯೂ (ಹೇಳಿದೆ). ಆ ವಿದ್ವಾಂಸನಾದವನೋ, ಧರ್ಮವೆಂಬ (ಕರ್ಮ)ದಿಂದ ಪಾಪವನ್ನು ನಾಶಮಾಡಿಕೊಳ್ಳುತ್ತಾನೆ, ಇಲ್ಲವಾಗಿಸಿಕೊಳ್ಳುತ್ತಾನೆ ;[2] ಈ ಲೋಕದಲ್ಲಿ ವಿದ್ವಾಂಸನು ಎಂದರೆ ಮುಂದೆ ಹೇಳುವ ಲಕ್ಷಣದಿಂದ ಕೂಡಿದ ವಿನಿಯೋಗವನ್ನು ಬಲ್ಲ ಜಾಣನು ಈಶ್ವರನ ಪ್ರೀತಿಗಾಗಿ ಕರ್ಮಾನುಷ್ಠಾನವನ್ನು ಮಾಡುತ್ತಾ (ಪಾಪರಹಿತನಾಗುವನು). ಹೀಗೆಂದು ಮುಂದೆ (ಸನತ್ಸುಜಾತನು) ಹೇಳಿಯೂ ಇದ್ದಾನೆ : "ಆ ಬ್ರಹ್ಮ(ಪ್ರಾಪ್ತಿ)ಗಾಗಿ ವೇದದಲ್ಲಿ ತಪಸ್ಸು, ಯಜ್ಞಗಳನ್ನು ಹೇಳಿದೆ. ಅವುಗಳಿಂದ ಈ ಸಾಧಕನು ಪುಣ್ಯವನ್ನು ಪಡೆಯುತ್ತಾನೆ. (ಹೀಗೆ) ಪುಣ್ಯದಿಂದ ಪಾಪವನ್ನು ನಾಶಗೊಳಿಸಿ ಅನಂತರ ಜ್ಞಾನದಿಂದ ಬೆಳಗಲ್ಪಟ್ಟ ಸ್ವರೂಪವುಳ್ಳವನಾಗುವನು. ಜ್ಞಾನದಿಂದ ವಿದ್ವಾಂಸನು ಆತ್ಮನನ್ನು ಪಡೆಯುವನು ; ಹಾಗಿಲ್ಲದೆ ಇಂದ್ರಿಯಗಳಿಗೆ (ಇಷ್ಟವಾದ) ಕಾಮಫಲಗಳನ್ನು ಬಯಸುವವನು ಇಲ್ಲಿ ಮಾಡಿದ ಕರ್ಮವನ್ನೆಲ್ಲ ಒಯ್ದು ಪರಲೋಕದಲ್ಲಿ ಅನುಭವಿಸಿ ಮತ್ತೆ ಸಂಸಾರಮಾರ್ಗವನ್ನು ಪಡೆಯುವನು" ಎಂದು (ಹೇಳಿದೆ). 'ಯಾರಿಗೆ (ಯಜ್ಞವೇ ಮುಂತಾದ) ಧರ್ಮಗಳಲ್ಲಿ ಹೆಚ್ಚಿನ ಸ್ಪರ್ಧೆಯಿರುವದೋ[3] ಅದು ಎಂದಿಗೂ ಜ್ಞಾನಕ್ಕೆ ಸಾಧನವಾಗಲಾರದು. ಯಾರಿಗೆ (ಹೀಗೆ) ಧರ್ಮದಲ್ಲಿ (ಫಲಾಶೆ)ಯಿರುವದಿಲ್ಲವೋ ಅಂಥವರಿಗೆ ಅದು ಜ್ಞಾನಕ್ಕೆ ಸಾಧನವಾಗುವದು' ಎಂದೂ (ಹೇಳಿದೆ). ಯಾವನು ಹೀಗೆ ವಿನಿಯೋಗವನ್ನು ಬಲ್ಲವನಾಗಿ ಈಶ್ವರ(ಪ್ರೀತಿ)ಗಾಗಿ ಕರ್ಮವನ್ನು ಮಾಡುವನೋ ಅಂಥ ವಿವೇಕಿಗೆ ಧರ್ಮವೇ ಪಾಪಕ್ಕಿಂತ ಬಲಿಷ್ಠವಾದುದೆಂದು ತಿಳಿ, ಅರಿಯುವನಾಗು. ಆ ಕೇವಲ ಕರ್ಮನಿಷ್ಠನಿಗಾದರೋ (ಇಷ್ಟು) ಬಲಿಷ್ಠವಲ್ಲ. ಅವನಿಗೆ ಎರಡರ ಫಲವೂ ಅನುಭವ(ಗೋಚರವಾಗುವವು); ಒಂದರಿಂದ ಮತ್ತೊಂದು ನಾಶವಾಗುವದಿಲ್ಲ.

---

1. ಯಜ್ಞ, ದಾನ, ತಪಸ್ಸುಗಳನ್ನು ಮಾಡುವನೋ ಅವೆಲ್ಲವೂ ಸಹಸ್ರಾರು ವರ್ಷಗಳಮೇಲೂ ಕೊನೆಯುಳ್ಳವೇ ಆಗುವವು- ಎಂದರೆ ನಿತ್ಯವಲ್ಲ – ಎಂದು ಈ ವಾಕ್ಯದ ಪೂರ್ಣ ಅಭಿಪ್ರಾಯ.

2. ತೈತ್ತಿರೀಯನಾರಾಯಣಪನ್ನದ 'ಧರ್ಮೇಣ ಪಾಪಮಪನುದತಿ....' ಎಂಬ ಮಂತ್ರವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

3. ಧರ್ಮದಲ್ಲಿ ಸ್ಪರ್ಧೆಯೆಂದರೆ–ಎಲ್ಲರಿಗಿಂತ ಹೆಚ್ಚಿನ ಪುಣ್ಯಕರ್ಮಗಳನ್ನು ಮಾಡಿ ಇಂದ್ರಾದಿಲೋಕಗಳಲ್ಲಿ ದೊರೆಯುವ ಭೋಗಗಳನ್ನು ಪಡೆದುಕೊಳ್ಳುವೆನೆಂಬ ಆಶೆ.

( ಭಾಷ್ಯ )

ಕೇಷಾಂ ತರ್ಹಿ ಸ್ವರ್ಗಾದಿಸಾಧನಮ್, ಕೇಷಾಂ ವಾ ಚಿತ್ತಶುದ್ಧಿದ್ವಾರೇಣ ಜ್ಞಾನಸಾಧನಮ್ ? ಇತಿ ; ತತ್ರಾಹ ಶ್ಲೋಕದ್ವಯೇನ—

**ಯೇಷಾಂ ಧರ್ಮೇಷು[1] ವಿಸ್ಪರ್ಧಾ ಬಲೇ ಬಲವತಾಮಿವ |**
**ತೇ ಬ್ರಾಹ್ಮಣಾ ಇತಃ ಪ್ರೇತ್ಯ ಸ್ವರ್ಗೇ ಯಾನ್ತಿ ಪ್ರಕಾಶತಾಮ್[2] ||೨೫||**
**ಯೇಷಾಂ ಧರ್ಮೇ ನ ಚ ಸ್ಪರ್ಧಾ[3] ತೇಷಾಂ ತಜ್ಜ್ಞಾನಸಾಧನಮ್ |**
**ತೇ ಬ್ರಾಹ್ಮಣಾ ಇತೋ ಮುಕ್ತಾಃ ಸ್ವರ್ಗಂ ಯಾನ್ತಿ ತ್ರಿವಿಷ್ಟಪಮ್ ||**

೨೫–೨೬. ಯಾರಿಗೆ– ಬಲಿಷ್ಠರಾದವರಿಗೆ ಬಲದಲ್ಲಿರುವಂತೆ– ಧರ್ಮಾನುಷ್ಠಾನದಲ್ಲಿ ಸ್ಪರ್ಧೆಯು ಇರುವದೋ ಆ ಬ್ರಾಹ್ಮಣರು ಇಲ್ಲಿಂದ ಬಿಟ್ಟಿದ್ದು ಸ್ವರ್ಗದಲ್ಲಿ ಬೆಳಗುವರು. (ಆದರೆ) ಯಾರಿಗೆ ಧರ್ಮದಲ್ಲಿ ಸ್ಪರ್ಧೆಯಿರುವದಿಲ್ಲವೋ ಅವರಿಗೆ ಆ ಜ್ಞಾನವು ಸಾಧನವು. ಆ ಬ್ರಾಹ್ಮಣರು ಇಲ್ಲಿಂದ ಬಿಡುಗಡೆಹೊಂದಿದವರಾಗಿ ತ್ರಿವಿಷ್ಟಪವೆಂಬ ಸ್ವರ್ಗವನ್ನು ಹೊಂದುವರು.

(ಭಾಷ್ಯ)

ಯೇಷಾಂ ವಿಷಯಪರಾಣಾಂ ಸ್ವರ್ಗಾದಿವಾಸೇ ಊರ್ವಶ್ಯಾದಿಭೋಗ ಶ್ರವಣಾತ್ ತತ್ಸಾಧನಭೂತೇಷು ಜ್ಯೋತಿಷ್ಟೋಮಾದಿಷು ಧರ್ಮೇಷು ವಿಸ್ಪರ್ಧಾ ಸಂಘರ್ಷೋ ವರ್ತತೇ ಅಸ್ಮಾದಹಮುತ್ಕೃಷ್ಟತರಂ ಧರ್ಮಂ ಕೃತ್ವಾ ಅಸ್ಮಾದಪಿ ಸುಖೀ ಭೂಯಾಸಮ್ ಇತಿ | ಬಲೇ ಬಲವತಾಮಿವ ಯಥಾ ಬಲವತೋ ರಾಜ್ಞಃ ಬಲವನ್ತಂ ರಾಜಾನಂ ದೃಷ್ಟ್ವಾ ಅಹಮಸ್ಮಾದಪಿ ಬಲವತ್ತ್ವಂ ಸಂಪಾದ್ಯ ಏನಂ ಜಿತ್ವಾ ಅಸ್ಮಾದಪಿ ಸುಖೀ ಭೂಯಾಸಮಿತಿ ಸಂಘರ್ಷೋ ವರ್ತತೇ ತದ್ವತ್ | ತೇ ಫಲಸಙ್ಗಸಹಿತಾಃ ಬ್ರಾಹ್ಮಣಾಃ ಯಜ್ಞಾಧಿಕಾರಿಣಃ ಇತಃ ಪ್ರೇತ್ಯ ಧೂಮಾದಿಮಾರ್ಗೇಣ ಗತ್ವಾ ಸ್ವರ್ಗೇ ನಕ್ಷತ್ರಾದಿ ರೂಪೇಣ ಯಾನ್ತಿ ಪ್ರಾಪ್ನುವನ್ತಿ ಪ್ರಕಾಶತಾಮ್ | ಶ್ರೂಯತೇ ಚ– 'ಅಥ ಯ ಇಮೇ ಇಷ್ಟಾಪೂರ್ತೇ ದತ್ತಮಿತ್ಯುಪಾಸತೇ ತೇ ಧೂಮಮಭಿಸಂಭವನ್ತಿ' (ಛಾಂ. ೫–೧೦–೩) ಇತ್ಯಾರಭ್ಯ 'ಏಷ ಸೋಮೋ ರಾಜಾ ತದ್ದೇವಾನಾಮನ್ನಂ ತಂ ದೇವಾ ಭಕ್ಷಯನ್ತಿ.... ಯಾವತ್ಸಂಪಾತಮುಷಿತ್ವಾಽಥೈತಮೇವಾಧ್ವಾನಂ ಪುನರ್ನಿವರ್ತನ್ತೇ' (ಛಾಂ. ೫–೧೦–೫) ಇತಿ ||

1. 'ವ್ರತೇಷು' 2. 'ಬ್ರಹ್ಮಲೋಕಪ್ರಕಾಶಕಾಃ'
3. 'ವಿಸ್ಪರ್ಧಾ' ಎಂದು ಪಾಠಾಂತರಗಳು.

( ಭಾಷ್ಯಾರ್ಥ )

ವಿಷಯಾಸಕ್ತರಾದ ಯಾರಿಗೆ ಸ್ವರ್ಗವೇ (ಮುಂತಾದ ಲೋಕಗಳಲ್ಲಿ) ವಾಸಿಸುವದರಿಂದ ಊರ್ವಶೀ ಮೊದಲಾದಂಥ (ಸ್ತ್ರೀ)ಸುಖಗಳು ಸಿಕ್ಕುವವೆಂತ ಕೇಳಬರುವದರಿಂದ[1] ಅದಕ್ಕೆ ಸಾಧನಗಳಾದ ಜ್ಯೋತಿಷ್ಟೋಮವೇ ಮುಂತಾದ ಧರ್ಮಗಳಲ್ಲಿ ಸ್ಪರ್ಧೆಯು ಎಂದರೆ ಪೈಪೋಟಿಯು ಇರುತ್ತದೆಯೋ ಹೇಗೆಂದರೆ 'ನಾನು ಇನ್ನೊಬ್ಬನಿಗಿಂತ ಹೆಚ್ಚಿನ ಧರ್ಮಾನುಷ್ಠಾನವನ್ನು ಮಾಡಿ ಅವನಿಗಿಂತಲೂ ಸುಖಿಯಾಗುವೆನು' ಎಂಬೀ ರೀತಿಯ (ಮನೋಭಾವವಿರುವದೋ) ಬಲಿಷ್ಠರಿಗೆ ಬಲದಲ್ಲಿರುವಂತೆ– ಹೇಗೆ ಬಲಿಷ್ಠನಾದ ರಾಜನೊಬ್ಬನಿಗೆ ಮತ್ತೊಬ್ಬ ಬಲವುಳ್ಳ ರಾಜನನ್ನು ಕಂಡಾಗ 'ನಾನು ಇವನಿಗಿಂತ ಹೆಚ್ಚಿನ ಬಲವನ್ನು ಸಂಪಾದಿಸಿ ಇವನನ್ನು ಗೆದ್ದು ಇವನಿಗಿಂತಲೂ ಸುಖಿಯಾಗುವೆನು' ಎಂದು ಪೈಪೋಟಿಯಿರುವದೋ ಅದರಂತೆ (ಎಂದಭಿಪ್ರಾಯ). ಆ ಫಲಸಂಗದಿಂದ ಕೂಡಿದ ಯಜ್ಞಾಧಿಕಾರಿಗಳಾದ ಬ್ರಾಹ್ಮಣರು ಇಲ್ಲಿಂದ ಹೊರಟು ಧೂಮಾದಿ ಮಾರ್ಗದಿಂದ[2] ಹೋಗಿ ಸ್ವರ್ಗದಲ್ಲಿ ನಕ್ಷತ್ರಾದಿಗಳ ರೂಪದಿಂದ ಪ್ರಕಾಶಿಸುತ್ತಾರೆ. ಶ್ರುತಿಯಲ್ಲಿಯೂ ಕೂಡ– 'ಇನ್ನು ಯಾವ ಇವರು ಇಷ್ಟಾಪೂರ್ತಗಳು, ದತ್ತ– ಇಂಥವನ್ನು ಉಪಾಸನೆಮಾಡುತ್ತಾರೋ ಅವರು ಧೂಮವನ್ನು ಸೇರಿಕೊಳ್ಳುತ್ತಾರೆ' ಎಂದಾರಂಭಿಸಿ 'ಇವನೇ ಸೋಮರಾಜನು , ಅದೇ ದೇವತೆಗಳಿಗೆ ಅನ್ನವು; ಅವನನ್ನು ದೇವತೆಗಳು ತಿನ್ನುತ್ತಾರೆ. ಅದರಲ್ಲಿ ಕರ್ಮವು ಕ್ಷಯವಾಗುವವರೆಗೂ ಇದ್ದುಕೊಂಡಿದ್ದು ಇನ್ನು ಇದೇ ಮಾರ್ಗದಲ್ಲಿ ಹೋಗಿದ್ದರೀತಿಯಿಂದ ಮತ್ತೆ ಹಿಂತಿರುಗುವರು' ಎಂದೂ ಹೇಳಿದೆ.

ಭಾಷ್ಯ

ಯೇಷಾಂ ವಿಷಯಾನಾಕೃಷ್ಟಚೇತಸಾಮ್ ಅನಿತ್ಯಫಲಸಾಧನಜ್ಯೋತಿಷ್ಟೋಮಾದೌ ಧರ್ಮೇ ನ ಚ ಸ್ಪರ್ಧಾ ಸಂಘರ್ಷೋ ನ ವರ್ತತೇ ತೇಷಾಂ ಫಲನಿರಪೇಕ್ಷಮೀಶ್ವರಾರ್ಥಂ ಕರ್ಮಾನುತಿಷ್ಠತಾಂ ತತ್ ಯಜ್ಞಾದಿಕಂ ಕರ್ಮ ಶುದ್ಧಿದ್ವಾರೇಣ ಜ್ಞಾನಸಾಧನಮ್ । ವಕ್ಷ್ಯತಿ ಚ ಸ್ವಯಮೇವ ಭಗವಾನ್ ಶುದ್ಧಿದ್ವಾರೇಣೈವ ಜ್ಞಾನಸಾಧನತ್ವಮ್– 'ಪುಣ್ಯೇನ ಪಾಪಂ ವಿನಿಹತ್ಯ ಪಶ್ಚಾತ್ ಸ ಜಾಯತೇ ಜ್ಞಾನವಿದೀಪಿತಾತ್ಮಾ' (೨–೮) ಇತಿ। ಯೇ ಯಜ್ಞಾದಿಭಿಃ ವಿಶುದ್ಧಸತ್ತ್ವಾಃ ಪರಮಾತ್ಮಾನಮಾತ್ಮತ್ವೇನಾವಗಚ್ಛನ್ತಿ, ತೇ ಬ್ರಾಹ್ಮಣಾಃ ಇತಃ ಅಸ್ಮಾತ್ ಕಾರ್ಯಕಾರಣಲಕ್ಷಣಾತ್ ಲೋಕಾತ್ ಪ್ರೇತ್ಯ ಮುಕ್ತಾಃ ಸ್ವರ್ಗಂ ಸುಖಲಕ್ಷಣಂ ಪೂರ್ಣಾನನ್ದಂ ಬ್ರಹ್ಮ ಯಾನ್ತಿ ಪ್ರಾಪ್ನುವನ್ತಿ । ಇತರಸ್ಮಾತ್

---

1. ಕಠೋಪನಿಷತ್ತಿನ 'ಇಮಾ ರಾಮಾಃ....' ಎಂಬ ಮಂತ್ರದ ಅರ್ಥವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು. 2. ಗೀ. ೮–೨೫ರ ಸೂಚನೆ.

ಸ್ವರ್ಗಾದಸ್ಯ ವೈಲಕ್ಷಣ್ಯಮಾಹ- ತ್ರಿವಿಷ್ಟಪಮಿತಿ । ತ್ರಿಭಿರಾಧ್ಯಾತ್ಮಿಕಾದಿತಾಪೈಃ, ಸತ್ತ್ವಾದಿಭಿರ್ವಾ, ಜಾಗ್ರದಾದಿಭಿರ್ವಾ, ವಿಮುಕ್ತಂ ಸ್ವರೂಪಾವಿಷ್ಟಂ ಪಾತೀತಿ ತ್ರಿವಿಷ್ಟಪಮ್ । ತ್ರೈರ್ವಿಷ್ಟಮಧಿಕಾರಿಣಂ ಪಾತೀತಿ ತ್ರಿವಿಷ್ಟಪಮ್ ॥

( ಭಾಷ್ಯಾರ್ಥ )

ಯಾರಿಗೆ- ಎಂದರೆ ವಿಷಯಗಳಿಂದ ಎಳೆಯಲ್ಪಡದೆಇರುವ ಮನಸ್ಸುಳ್ಳವರಿಗೆ ಅನಿತ್ಯವಾದ ಫಲವನ್ನುಂಟುಮಾಡುವ ಜ್ಯೋತಿಷ್ಟೋಮಾದಿ(ಕರ್ಮರೂಪವಾದ) ಧರ್ಮಗಳಲ್ಲಿ ಸ್ಪರ್ಧೆಯು ಎಂದರೆ ಪೈಪೋಟಿಯು ಇರುವದಿಲ್ಲವೋ ಅವರಿಗೆ, ಫಲಾಪೇಕ್ಷೆಯಿಲ್ಲದೆ ಈಶ್ವರ(ಪ್ರೀತಿ)ಗಾಗಿ ಕರ್ಮಾನುಷ್ಠಾನಮಾಡುವವರಿಗೆ, ಆ ಯಜ್ಞವೇ ಮುಂತಾದ ಕರ್ಮವು (ಚಿತ್ತ)ಶುದ್ಧಿಯಮೂಲಕ ಜ್ಞಾನಕ್ಕೆ ಸಾಧನವಾಗಿರುತ್ತದೆ. ಭಗವಂತನಾದ (ಸನತ್ಸುಜಾತನು) ತಾನೇ ಮುಂದೆ ಅಂತಃಕರಣಶುದ್ಧಿಯ ಮೂಲಕವೇ (ಕರ್ಮವು) ಜ್ಞಾನಸಾಧನವೆಂದು ಹೇಳುತ್ತಾನೆ : (ಹೇಗೆಂದರೆ) 'ಪುಣ್ಯದಿಂದ ಪಾಪವನ್ನು ನಾಶಗೊಳಿಸಿ ಅನಂತರ ಜ್ಞಾನದಿಂದ ಬೆಳಗಲ್ಪಟ್ಟ ಅಂತಃಕರಣವುಳ್ಳವನಾಗಿ ಆಗುತ್ತಾನೆ' ಎಂದು (ಹೇಳುವನು). ಯಾರು ಯಜ್ಞವೇ ಮುಂತಾದವುಗಳಿಂದ ಶುದ್ಧಮನಸ್ಕರಾಗಿ ಪರಮಾತ್ಮನನ್ನು ತಮ್ಮ ಆತ್ಮನನ್ನಾಗಿ ಅರಿತುಕೊಳ್ಳುವರೋ ಆ ಬ್ರಾಹ್ಮಣರು ಇಲ್ಲಿಂದ ಎಂದರೆ ಈ ಕಾರ್ಯಕಾರಣರೂಪವಾದ ಲೋಕದಿಂದ ಬಿಟ್ಟಿದ್ದು-ಬಿಡುಗಡೆಹೊಂದಿ ಸುಖರೂಪವಾದ ಸ್ವರ್ಗವೆಂಬ ಪೂರ್ಣಾನಂದರೂಪವಾದ ಬ್ರಹ್ಮವನ್ನು ಹೊಂದುವರು, ಪಡೆಯುವರು. ಬೇರೊಂದು (ಪ್ರಸಿದ್ಧವಾದ) ಸ್ವರ್ಗಕ್ಕಿಂತಲೂ ಇದು ವಿಲಕ್ಷಣವೆಂಬುದನ್ನು ಹೇಳುತ್ತಾನೆ. ತ್ರಿವಿಷ್ಟಪವು-ಎಂದರೆ ಆಧ್ಯಾತ್ಮಿಕಾದಿ ಮೂರು ತಾಪಗಳಿಂದ[1] ಅಥವಾ, ಸತ್ತ್ವಾದಿ ಮೂರು ಗುಣಗಳಿಂದ, ಅಥವಾ ಎಚ್ಚರವೇ ಮುಂತಾದ ಮೂರವಸ್ಥೆಗಳಿಂದ ಬಿಡಲ್ಪಟ್ಟವನ್ನಾಗಿ ಸ್ವರೂಪದಲ್ಲಿ ನಿಂತವನನ್ನು ಕಾಪಾಡುವದರಿಂದ ತ್ರಿವಿಷ್ಟಪವು.[2] ಅಥವಾ ಅವುಗಳಿಂದ ಸುತ್ತುವರೆಯಲ್ಪಟ್ಟ ಅಧಿಕಾರಿಯನ್ನು (ಬಿಡಿಸಿ) ಕಾಪಾಡುತ್ತದೆ ಯಾದ್ದರಿಂದ ತ್ರಿವಿಷ್ಟಪವು (ಬ್ರಹ್ಮವು) ಎಂದರ್ಥ.

---

1. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂಬಿವೇ ಮೂರು ತಾಪಗಳು.

2. ಕೋಶದಲ್ಲಿ 'ತ್ರಿವಿಷ್ಟಪಮ್' ಎಂಬ ಶಬ್ದವನ್ನೂ ಸ್ವರ್ಗವೆಂಬರ್ಥದಲ್ಲಿಯೇ ಹೇಳಿದೆ. ಇಲ್ಲಿ ತ್ರಿ- ಮೂರು ದೋಷಗಳಿಂದ ವಿ- ವಿಮುಕ್ತವಾಗಿದ್ದು ಪ- ಕಾಪಾಡುತ್ತದೆ -ಎಂದು ಅವಯವಾರ್ಥದಿಂದ ಬ್ರಹ್ಮಕ್ಕೆ ಹೊಂದಿಸಿ ವ್ಯಾಖ್ಯಾನಮಾಡಿದೆ.

## ಜ್ಞಾನಿಯ ಲೋಕವ್ಯವಹಾರ

( ಭಾಷ್ಯ )

ಇದಾನೀಂ [ಬ್ರಹ್ಮಚರ್ಯಾದೇವ ಸರ್ವಾಣಿ ಕರ್ಮಾಣಿ ಸಂನ್ಯಸ್ಯ ವೇದಾನ್ತಶ್ರವಣಾದಿಕಂ ಕೃತ್ವಾ ಸ್ವೇ ಮಹಿಮ್ನಿ ವ್ಯವಸ್ಥಿತಸ್ಯ ಪರಮಹಂಸಪರಿವ್ರಾಜಕಾಚಾರ್ಯಸ್ಯ][1] ವಿದುಷಃ ಸಮಾಚಾರಮಾಹ-

(ಭಾಷ್ಯಾರ್ಥ)

ಈಗ ಬ್ರಹ್ಮಚರ್ಯಾಶ್ರಮದಿಂದಲೇ ಎಲ್ಲಾ ಕರ್ಮಗಳನ್ನೂ ಸಂನ್ಯಾಸಮಾಡಿ ವೇದಾಂತಶ್ರವಣಾದಿಗಳನ್ನು ಮಾಡಿ ತನ್ನ ಮಹಿಮೆಯಲ್ಲೇ ನಿಂತಿರುವ ಪರಮಹಂಸಪರಿವ್ರಾಜಕಾಚಾರ್ಯನಾದ ಜ್ಞಾನಿಯ ನಡೆವಳಿಕೆಯನ್ನು ಹೇಳುತ್ತಾರೆ :-

**ತಸ್ಯ ಸಮ್ಯಕ್ ಸಮಾಚಾರಮಾಹುರ್ವೇದವಿದೋ ಜನಾಃ ।**
**ನೈನಂ ಮನ್ಯೇತ ಭೂಯಿಷ್ಠಂ ಬಾಹ್ಯಮಾಭ್ಯನ್ತರಂ ಜನಮ್ ॥೨೭॥**

೨೭. ವೇದಜ್ಞರಾದ ಜನರು ಅವನ (ನಡೆವಳಿಕೆಯನ್ನು) ಒಳ್ಳೆಯ ಆಚಾರವೆಂದು ಹೇಳುವರು. ತನ್ನವರು, ಪರರು- ಎಂಬ (ಭಾವನೆಯಿಲ್ಲದ) ಈತನನ್ನು ಜನರು ಗುರುತಿಸಲಾರರು.

(ಭಾಷ್ಯ)

ತಸ್ಯ ವಿರಕ್ತಸ್ಯ ವಿದುಷಃ ಸಮ್ಯಕ್‌ಸಮಾಚಾರಮಾಹುಃ ವೇದವಿದೋ ಜನಾಃ ನೈನಂ ಯೋಗಿನಂ ಮನ್ಯೇತ ಚಿನ್ತಯೇತ್ ಭೂಯಿಷ್ಠಂ ಬಹು ಬಾಹ್ಯಮಾಭ್ಯನ್ತರಂ ಜನಂ ಪುತ್ರಮಿತ್ರಕಲತ್ರಾದಿ ಆಭ್ಯನ್ತರಮ್, ಇತರದ್ ಬಾಹ್ಯಮ್ । ಯಥಾ ಪುತ್ರಮಿತ್ರಾದಯೋ ನ ಗೃಹ್ಣನ್ತಿ ತಥಾ ತೇಷಾಮ್ ಅಗೋಚರ ಏವ ವರ್ತತೇ ಇತ್ಯರ್ಥಃ ॥

( ಭಾಷ್ಯಾರ್ಥ )

ವಿರಕ್ತನೂ ವಿದ್ವಾಂಸನೂ ಆದ ಅವನ ಒಳ್ಳೆಯ ಸಮಾಚಾರ (ನಡತೆ) ಗಳನ್ನು ವೇದಜ್ಞರಾದ ಜನರು (ಸದಾಚಾರಗಳೆಂದು) ಹೇಳುವರು. ಈ ಯೋಗಿಯಾದವನನ್ನು ಬಹಳವಾಗಿ ಯಾವನೂ ತಿಳಿಯಲಾರನು, ಆಲೋಚಿಸಲಾರನು. ಒಳಗಿನ ಎಂದರೆ ಮಕ್ಕಳು, ಸ್ನೇಹಿತರು, ಹೆಂಡತಿ ಮುಂತಾದ ಹತ್ತಿರದ ಜನರು ಹೊರಗಿನ- ಎಂದರೆ (ಸಂಬಂಧಿಗಳಲ್ಲದ ಅಪರಿಚಿತರಾದ) ಸಾಮಾನ್ಯಜನರು- ಇವರು ಯಾರೂ (ತಿಳಿಯಲಾರರು ಎಂದರ್ಥ.) ಮಗ, ಸ್ನೇಹಿತನೇ ಮೊದ

1. ಕಂಸದಲ್ಲಿರುವಷ್ಟು ಭಾಗವು ಬಹಳ ಕೋಶಗಳಲ್ಲಿ ಕಂಡುಬರುವದಿಲ್ಲವೆಂತ ಮೈ॥ ಪಾಠದ ಟಿಪ್ಪಣಿಯಲ್ಲಿದೆ.

ಲಾದವರು ಯಾರೂ ಗುರುತುಹಿಡಿಯದಂತೆ ಅವರುಗಳಿಗೆ ಕಾಣಿಸಿಕೊಳ್ಳದೆಯೇ[1] ಇವನು ಇರುತ್ತಾನೆ- ಎಂದರ್ಥ.

**ಯತ್ರ ಮನ್ಯೇತ ಭೂಯಿಷ್ಠಂ ಪ್ರಾವೃಷೀವ ತೃಣೋದಕಮ್[2] ।**
**ಅನ್ನಪಾನಂ[3] ಚ ಬ್ರಾಹ್ಮಣಸ್ತ[4]ಜ್ಜೀವೇನ್ನಾನುಸಂಜ್ವರೇತ್ ॥೨೮॥**

೨೮. ಎಲ್ಲಿ-ಮಳೆಗಾಲದಲ್ಲಿ ಹುಲ್ಲುನೀರುಗಳು (ದೊರೆಯುವಂತೆ)- ಅನ್ನಪಾನಗಳು ಹೆಚ್ಚಾಗಿ ದೊರಕುವವೆಂತ ತಿಳಿಯುವದೋ ಅಲ್ಲಿ ಅವುಗಳಿಂದ ಬ್ರಾಹ್ಮಣನು ದೇಹಯಾತ್ರೆಯನ್ನು ನಡೆಸಬೇಕು, ಶರೀರವನ್ನು ಸಂತಾಪಗೊಳಿಸಬಾರದು.

( ಭಾಷ್ಯ )

ಕೀದೃಶೇ ದೇಶೇ ಅಸ್ಯ ವಾಸ ಇತ್ಯಾಹ ಯತ್ರ ಯಸ್ಮಿನ್ ಮೃಗಗೋಚರಾದಿಪೀಡಾರಹಿತೇ ದೇಶೇ ಅನ್ನಪಾನಾದಿ ಭೂಯಿಷ್ಠಂ ಬಹುಲಂ ವಿದ್ಯತೇ ಇತಿ ಮನ್ಯೇತ ಪ್ರಾವೃಷೀವ ವರ್ಷಾಕಾಲೇ ತೃಣೋದಕಂ ಬಹುಲಂ ವಿದ್ಯತೇ ತದ್ವತ್ । ತೃಣೋಲಪಮಿತಿ ಕೇಚಿತ್- 'ತೃಣೋಲಪಮಿತಿ ಖ್ಯಾತೋ ಮುನಿಭೋಜ್ಯಾದನಾದಿಷು'(?) ಇತಿ ವದನ್ತಿ। ಪೂಜ್ಯದೂರ್ವಾವಿಶೇಷ ಇತಿ ಕೇಚಿತ್। ತತ್ರ ಸ್ಥಿತ್ವಾ ತತ್ ಅನ್ನಪಾನಾದಿಕಮುಪಜೀವೇತ್ । ನಾನುಸಂಜ್ವರೇತ್ ಸಂತಪ್ತೋ ನ ಭವೇತ್, ಅನ್ಯಥಾ ಅನ್ನಪಾನಾದಿರಹಿತೇ ದೇಶೇ ಕಥಂ ನಾಮ ದೇಹಯಾತ್ರಾ ಸಿಧ್ಯೇದಿತಿ ಸಂತಪ್ತೋ ಭವೇತ್ ತತಶ್ಚ ನ ಯೋಗಸಿದ್ಧಿಃ ॥

(ಭಾಷ್ಯಾರ್ಥ)

ಎಂಥ ಸ್ಥಳದಲ್ಲಿ ಇವನು ವಾಸಮಾಡಬೇಕು ? ಎಂಬಿದನ್ನು ಹೇಳುತ್ತಾರೆ: ಎಲ್ಲಿ ಎಂದರೆ (ಕಾಡು)ಮೃಗಗಳ ಕಾಣಿಸುವಿಕೆ ಮುಂತಾದ ತೊಂದರೆಗಳಿಲ್ಲದ ಜಾಗದಲ್ಲಿ ಅನ್ನ, ನೀರು- ಮುಂತಾದದ್ದು ಚೆನ್ನಾಗಿ ಸಮೃದ್ಧಿಯಾಗಿ ಇದೆಯೆಂತ ತಿಳಿಯುತ್ತಾನೋ, ಎಂದರೆ ಮಳೆಗಾಲದಲ್ಲಿ ಹುಲ್ಲುನೀರುಗಳು ಚೆನ್ನಾಗಿರುವ ಸ್ಥಳಗಳಂತೆ- ಎಂದಭಿಪ್ರಾಯ. (ಇಲ್ಲಿ) 'ತೃಣೋಲಪಮ್' ಎಂದು (ಪಾಠಾಂತರವಿದೆ)ಯಾಗಿ 'ತೃಣೋಲಪವೆಂದರೆ ಮುನಿಗಳು ತಿನ್ನುವ ಆಹಾರವೇ ಮುಂತಾದದ್ದು ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು (ತೃಣೋಲಪ)ವೆಂದರೆ

1. ಜ್ಞಾನಿಯಾದವನಿಗೆ ತನ್ನವರು ಪರರು ಎಂಬ ಭೇದವೇ ಇರುವದಿಲ್ಲ. ಅಭಿಮಾನರಹಿತನಾದ ಅವನನ್ನು ತಮ್ಮವನೆಂದು ಯಾರೂ ಹೇಳಿಕೊಳ್ಳಲಾಗುವದಿಲ್ಲ ಎಂದರ್ಥ. ಮಹಾಭಾರತ ಶಾಂತಿಪರ್ವದ 'ಶಕುನೀನಾಮಿವಾಕಾಶೇ...' ಎಂಬ ಶ್ಲೋಕಾರ್ಥವನ್ನು ಇಲ್ಲಿ ಹೋಲಿಸಿರಿ. 2. 'ತೃಣೋಲಪಮ್' 3. 'ಅನ್ನಪಾನಂ'
4. 'ಬ್ರಾಹ್ಮಣಸ್ಯ' ಎಂದು ಮಹಾಭಾರತದ ಪಾಠಗಳು.

ಪೂಜ್ಯವಾದ ಹುಲ್ಲು[1] ಎಂದೂ (ಅಭಿಪ್ರಾಯಪಡುವರು). ಅಂಥ (ಸ್ಥಳ)ದಲ್ಲಿದ್ದುಕೊಂಡು ಅನ್ನಪಾನಾದಿಗಳಿಂದ ಜೀವಿಸಿರಬೇಕು. ಸಂಜ್ವರಿತನಾಗಬಾರದು–ಎಂದರೆ ಸಂಕಟಪಡಬಾರದು. ಹಾಗಿಲ್ಲದಿದ್ದರೆ 'ಅನ್ನಪಾನಾದಿಗಳಿಲ್ಲದ ಸ್ಥಳದಲ್ಲಿ ದೇಹಯಾತ್ರೆಯು ಹೇಗೆತಾನೆ ನಡೆದೀತು ? ಎಂದು ದುಃಖಪಡಬಹುದು. ಆಗ ಯೋಗವು ಸಿದ್ಧಿಸಲಾರದು.

ಯತ್ರಾಕಥಯಮಾನಸ್ಯ ಪ್ರಯಚ್ಛತ್ಯಶಿವಂ ಭಯಮ್ ।
ಅತಿರಿಕ್ತಮಿವಾಕುರ್ವನ್ ಸ ಶ್ರೇಯಾನ್ ನೇತರೋ ಜನಃ ॥೨೯॥

೨೯. ಎಲ್ಲಿ ತನ್ನನ್ನು ಪ್ರಕಟಮಾಡಿಕೊಳ್ಳದೆ ಸುಮ್ಮನೆ ಇರುವ ಜ್ಞಾನಿಗೆ (ಲೋಕದ ಜನವು) ಅಶಿವವನ್ನೂ ಭಯವನ್ನೂ ಉಂಟುಮಾಡುವದೋ ಇದಕ್ಕೆ ವಿರುದ್ಧವಾದ (ಪೂಜಾ–ಗೌರವಾದಿಗಳನ್ನು) ಮಾಡುವದಿಲ್ಲವೋ ಅಂಥವನೇ ಒಳ್ಳೆಯವನು, ಬೇರೆಯವನಲ್ಲ.

(ಭಾಷ್ಯ)

ತತ್ರಾಪಿ ಏವಂವಿಧಜನಸಮೀಪೇ ವಾಸ ಇತ್ಯಾಹ– ಯತ್ರ ಯಸ್ಮಿನ್ ದೇಶೇ ಅಕಥಯಮಾನಸ್ಯ ತೂಷ್ಣೀಂಭೂತಸ್ಯ ಸ್ವಮಾಹಾತ್ಮ್ಯಂ ಪ್ರಚ್ಛಾದಯತೋ ಯೇನಕೇನಚಿದಾಚ್ಛನ್ನಸ್ಯ ಯೇನಕೇನಚಿದಾಶಿತಸ್ಯ ಯತ್ರ ಕ್ವಚನ ಶಾಯಿನ ಆತ್ಮಾನಮೇವ ಲೋಕಂ ಪಶ್ಯತಃ ಜಡಮೂಕಬಾಲಪಿಶಾಚಾದಿವತ್ ಸಂಚರತಃ ಪರಮಹಂಸಪರಿವ್ರಾಜಕಾಚಾರ್ಯಸ್ಯ ಪ್ರಯಚ್ಛತಿ ಅಶಿವಂ ಭಯಂ ಅಕಲ್ಯಾಣಮ್ ಅವಮಾನಾದಿಕಂ ಪ್ರಯಚ್ಛತಿ । ತಥಾ ಅತಿರಿಕ್ತಮಿವಾಕುರ್ವನ್ ಯಥಾ ಕಶ್ಚಿತ್ ಸ್ಥಿತಪ್ರಜ್ಞಲಕ್ಷಣಜ್ಞೋ ಬ್ರಹ್ಮವಿದಿತಿ ಜ್ಞಾತ್ವಾ ಪ್ರಣಿಪಾತನಮಸ್ಕಾರಾದಿಪೂರ್ವಕಮೀಶ್ವರಬುದ್ಧ್ಯಾ ಪೂಜಯತಿ ತದ್ವದಜ್ಞಾತತಯಾ ಅತಿರಿಕ್ತಂ ಬ್ರಾಹ್ಮಣಜಾತಿಮಾತ್ರಪ್ರಯುಕ್ತಪೂಜಾತಿರಿಕ್ತಂ ಪೂಜಾಂತರಂ ಬ್ರಹ್ಮವಿದನುರೂಪಮಕುರ್ವನ್ ಅವಮಾನಾದಿಕಮೇವ ಕುರ್ವನ್ ಯೋ ಜನಃ, ಸಃ ಅಸ್ಯ ವಿದುಷಃ ಶ್ರೇಯಾನ್, ನೇತರಃ ಯಃ ಪ್ರಣಿಪಾತಾದಿಪೂರ್ವಕಮೀಶ್ವರಬುದ್ಧ್ಯಾ ಸಂಪೂಜಯತಿ । ತಥಾ ಚಾಹ ಭಗವಾನ್ ಮನುಃ– 'ಸಂಮಾನಾದ್ ಬ್ರಾಹ್ಮಣೋ ವಿದ್ವಾನು[2]ದ್ವಿಜೇತ ವಿಷಾದಿವ । ಅಮೃತಸ್ಯೇವ ಚಾಕಾಙ್ಕ್ಷೇದವಮಾನಸ್ಯ ಸರ್ವದಾ' (ಮನು. ೨–೧೬೨) ಇತಿ । ತಥಾ ಚಾಹ ಭಗವಾನ್ ಪರಾಶರಃ– 'ಸಂಮಾನನಾ ಪರಾಂ ಹಾನಿಂ ಯೋಗರ್ದ್ಧೇಃ

---

1. ದರ್ಭೆ– ಎಂದಭಿಪ್ರಾಯವಿರಬಹುದು.
2. 'ನಿತ್ಯಮ್' ಎಂದು ಮನುಸ್ಮೃತಿಯ ಪಾಠ.

ಕುರುತೇ ಯತಃ । ಜನೇನಾವಮತೋ ಯೋಗೀ ಯೋಗಸಿದ್ಧಿಂ ಚ ವಿನ್ದತಿ' (ವಿ. ಪು. ೨-೧೩-೪೨) ಇತಿ ॥

( ಭಾಷ್ಯಾರ್ಥ )

ಅಲ್ಲಿಯೂ ಈ (ಗುಣವುಳ್ಳ) ಜನರ ಸಮೀಪದಲ್ಲಿ ವಾಸಮಾಡಬೇಕು ಎಂಬುದನ್ನು ಹೇಳುತ್ತಾರೆ :- (ಎಂಥ ಜನರು ? ಎಂದರೆ) ಎಲ್ಲಿ, ಯಾವ ಸ್ಥಳದಲ್ಲಿ- ತನ್ನ ಮಹಿಮೆಯನ್ನು ಬಚ್ಚಿಟ್ಟುಕೊಂಡು ಏತರಿಂದಲೋ ಮೈಮುಚ್ಚಿಕೊಂಡು ಏನನ್ನೋ ತಿಂದುಕೊಂಡು ಎಲ್ಲಿಯೋ ಮಲಗಿರುವ,[1] ಜಗತ್ತೆಲ್ಲವನ್ನೂ ತಾನಾಗಿಯೇ ನೋಡುತ್ತಿರುವ ಜಡ, ಮೂಕ, ಬಾಲಕ, ಪಿಶಾಚ- ಮುಂತಾದವರಂತೆ (ಮೈಮರೆತು) ಸಂಚರಿಸುತ್ತಿರುವ ಪರಮಹಂಸಪರಿವ್ರಾಜಕಾಚಾರ್ಯನಾದ, ತನ್ನನ್ನು ಹೇಳಿಕೊಳ್ಳದೆ ಸುಮ್ಮನೆ ಇದ್ದುಕೊಂಡಿರುವ (ಜ್ಞಾನಿಗೆ) ಅಶಿವ-ಭಯಗಳನ್ನು ಎಂದರೆ ತೊಂದರೆ, ಅಪಮಾನಾದಿಗಳನ್ನು (ಲೋಕವು) ಮಾಡುವದೋ (ಅಂಥ ಸ್ಥಳದಲ್ಲಿರಬೇಕು). ಹಾಗೆಯೇ ಅದಕ್ಕೆ ಬೇರೆಯಾದ್ದನ್ನು ಮಾಡದೆಇರುವಂತೆ- ಎಂದರೆ ಯಾವನಾದರೊಬ್ಬನು ಸ್ಥಿತಪ್ರಜ್ಞನ ಲಕ್ಷಣವನ್ನು ಬಲ್ಲವನು (ಇವನು) ಬ್ರಹ್ಮಜ್ಞಾನಿಯೆಂದರಿತು ಈಶ್ವರಭಾವನೆಯಿಂದ ವಂದನ-ನಮಸ್ಕಾರವೇ ಮುಂತಾದ (ರೂಪದಿಂದ) ಗೌರವಿಸುವನೋ (ಅಂಥವನಿಗಿಂತಲೂ) ಬೇರೆಯಾದ ಎಂದರೆ (ಬ್ರಹ್ಮಜ್ಞಾನಿಯ ಸ್ವರೂಪವನ್ನರಿಯದೆ) ಬ್ರಾಹ್ಮಣಜಾತಿಗೆ ಅನುರೂಪವಾದ ಬ್ರಹ್ಮಜ್ಞಾನಿಗೆ ತಕ್ಕ ಪೂಜಾದಿಗಳನ್ನು ಮಾಡದೆ- ವ್ಯತಿರಿಕ್ತವಾಗಿ ಅಪಮಾನವೇ ಮುಂತಾದದ್ದನ್ನು ಮಾಡುವ ಯಾವ ಜನವುಂಟೋ ಅವನೇ ಈ ವಿದ್ವಾಂಸನಿಗೆ ಒಳ್ಳೆಯವನು.[2] ಇನ್ನೊಬ್ಬ (ನಾದ) ಈಶ್ವರಬುದ್ಧಿಯಿಂದ ನಮಸ್ಕಾರಾದಿಪೂರ್ವಕವಾಗಿ ಪೂಜಿಸುವವನಲ್ಲ. ಪೂಜ್ಯನಾದ ಮನುವೂಕೂಡ- 'ವಿದ್ವಾಂಸನಾದ ಬ್ರಾಹ್ಮಣನು ತನಗೆ ಸಂಮಾನಮಾಡುವ ಅವಕಾಶವನ್ನು ವಿಷದಂತೆ ತಿರಸ್ಕರಿಸಬೇಕು. ಯಾವಾಗಲೂ ಅಪಮಾನದ (ಅವಕಾಶವನ್ನು) ಅಮೃತದಂತೆ ಬಯಸಬೇಕು' ಎಂದು ಹೇಳಿದ್ದಾನೆ. ಭಗವಂತನಾದ ಪರಾಶರನೂಕೂಡ- 'ಸಂಮಾನವು ಯೋಗದ ಅಭಿವೃದ್ಧಿಗೆ ಹೆಚ್ಚಿನ ಕೇಡನ್ನುಂಟುಮಾಡುವದು ; ಆದ್ದರಿಂದ ಜನರಿಂದ ಅವಮಾನಿತನಾದ ಯೋಗಿಯು ಯೋಗಸಿದ್ಧಿಯನ್ನು ಹೊಂದುವನು' ಎಂದು ಹೇಳಿದ್ದಾನೆ.

---

1. ಮಹಾಭಾರತ ಶಾಂತಿಪರ್ವ ೨೪೫-೧೨ನ್ನು ನೋಡಿರಿ.

2. ಬ್ರಹ್ಮಜ್ಞಾನಿಯನ್ನು ಗುರುತಿಸಿ ಗೌರವಿಸುವವನಿಗಿಂತಲೂ ಗುರುತಿಸಲಾರದೆ ಅಪಮಾನಮಾಡುವವನೇ ಉತ್ತಮ. ಏಕೆಂದರೆ ಇವನಿಗೆ ತಾನು ಬ್ರಹ್ಮಜ್ಞಾನಿಯೆಂಬ ಅಹಂಕಾರ ಬರದಿರಲು ಇದೊಂದು ಸಾಧನ.

**ಯೋ ವಾಽಕಥಯಮಾನಸ್ಯ ಹ್ಯಾತ್ಮಾನಂ ನಾನುಸಂಜ್ವರೇತ್ ।**
**ಬ್ರಹ್ಮಸ್ವಂ ನೋಪಹನ್ಯಾದ್ವಾ[1] ತದನ್ನಂ ಸಂಮತಂ ಸತಾಮ್ ॥೩೦॥**

೩೦. (ಹೀಗೆ) ತನ್ನನ್ನು ಪ್ರಕಟಮಾಡಿಕೊಳ್ಳದೆ ಇರುವ(ಜ್ಞಾನಿಯ)ನ್ನು ಯಾವನು ಸಂತಾಪಗೊಳಿಸುವದಿಲ್ಲವೋ ಬ್ರಾಹ್ಮಣರ ಧನವನ್ನು ಹಾಳುಮಾಡಿ (ಅಪಹರಿಸುವದಿಲ್ಲವೋ) ಅಂಥವನ (ಮನೆ)ಯ ಅನ್ನವು ಶ್ರೇಷ್ಠವೆಂದು ಬಲ್ಲವರ ಅಭಿಪ್ರಾಯ.

( ಭಾಷ್ಯ )

ಕೀದೃಶಸ್ಯ ತರ್ಹ್ಯನ್ನಂ ಭೋಜ್ಯಮಿತಿ, ಅತ್ರಾಹ- ಯೋ ವಾ ಅಕಥಯಮಾನಸ್ಯ ತೂಷ್ಣೀಂಭೂತಸ್ಯ ಸರ್ವೋಪಸಂಹಾರಂ ಕೃತ್ವಾ ಪೂರ್ಣಾನನ್ದಾತ್ಮನಾ ಅವಸ್ಥಿತಸ್ಯ ಆತ್ಮಾನಂ ನಾನುಸಂಜ್ವರೇತ್ ನ ತಾಪಯೇತ್ ಬ್ರಹ್ಮಸ್ವಂ ನೋಪಹನ್ಯಾದ್ವಾ ಬ್ರಹ್ಮನಿಷ್ಠಾಸಾಧನಭೂತಂ ಚೇಲಾಜಿನಕುಶಪುಸ್ತಕಾದಿಕಂ ನೋಪಹನ್ಯಾದ್ವಾ । ತಥಾ ಚೋಕ್ತಮ್- 'ರತ್ನಹೇಮಾದಿಕಂ ನಾಸ್ತಿ ಯೋಗಿನಃ ಸ್ವಂ ಪ್ರಚಕ್ಷತೇ । ಕುಶವಲ್ಕಲಚೇಲಾದ್ಯಂ ಬ್ರಹ್ಮಸ್ವಂ ಯೋಗಿನೋ ವಿದುಃ'[2] (?) ಇತಿ । ಅನ್ಯದಪಿ ಬ್ರಹ್ಮಸ್ವಂ ಬ್ರಾಹ್ಮಣಸ್ವಂ ನೋಪಹನ್ಯಾದ್ವಾ ತದನ್ನಂ ತಸ್ಯಾನ್ನಂ ಸಂಮತಂ ಸತಾಂ ಭೋಜ್ಯತ್ವೇನ ॥

( ಭಾಷ್ಯಾರ್ಥ )

ಹಾಗಾದರೆ ಎಂಥವನ ಅನ್ನವು ತಿನ್ನಲು (ಯೋಗ್ಯವಾದದ್ದು ?) ಎಂದರೆ ಹೇಳುತ್ತಾನೆ : ತನ್ನನ್ನು ಪರಿಚಯಮಾಡಿಕೊಳ್ಳದೆ ಸುಮ್ಮನೆ ಇರುವ- ಎಂದರೆ ಎಲ್ಲ (ವ್ಯವಹಾರಗಳನ್ನೂ) ಕೈಬಿಟ್ಟು ಪೂರ್ಣಾನಂದಸ್ವರೂಪನೇ ತಾನಾಗಿರುವ (ಜ್ಞಾನಿಯ) ಮನಸ್ಸನ್ನು ಯಾವನು ದುಃಖಗೊಳಿಸುವದಿಲ್ಲವೋ- ತಾಪಗೊಳಿಸುವದಿಲ್ಲವೋ ಅಥವಾ ಬ್ರಹ್ಮಸ್ವ[3]ವನ್ನು ನಾಶಗೊಳಿಸುವದಿಲ್ಲವೋ, (ಎಂದರೆ) ಬ್ರಹ್ಮನಿಷ್ಠೆಗೆ ಸಾಧನಗಳಾದ ಬಟ್ಟೆ, ಚರ್ಮ, ದರ್ಭೆ, ಪುಸ್ತಕ- ಮುಂತಾದವುಗಳನ್ನು ಅಪಹರಿಸುವದಿಲ್ಲವೋ (ಎಂದಭಿಪ್ರಾಯ). 'ಯೋಗಿಯಾದವನಿಗೆ ರತ್ನ, ಚಿನ್ನ- ಮುಂತಾದವುಗಳನ್ನು ಸ್ವತ್ತು ಎಂದು (ಬಲ್ಲವರು) ಹೇಳುವದಿಲ್ಲ. ದರ್ಭೆ, ತೊಗಟೆ, ಬಟ್ಟೆ- ಮುಂತಾದವುಗಳನ್ನು ಯೋಗಿಯ ಬ್ರಹ್ಮಸ್ವವೆಂದು ಹೇಳುವರು'- ಎಂದು ಹೇಳಿದೆ. ಬೇರೆಯ ಬ್ರಹ್ಮಸ್ವವನ್ನು- ಎಂದರೆ ಬ್ರಾಹ್ಮಣನ

1. 'ನೋಪಭುಞ್ಜೀತ' ಎಂದು ಮಹಾಭಾರತದ ಪಾಠ.
2. ಇದು ಯಾವ ಸ್ಮೃತಿವಚನವೆಂಬುದು ತಿಳಿಯಲಿಲ್ಲ.
3. 'ಬ್ರಹ್ಮಸ್ವ'ವೆಂದರೆ ಬ್ರಾಹ್ಮಣನ ಸ್ವತ್ತು ಎಂದಭಿಪ್ರಾಯ.

ಸ್ವತ್ತನ್ನು[1] ಅಪಹರಿಸುವದಿಲ್ಲವೋ ಅವನ ಅನ್ನವು ಊಟಮಾಡುವದಕ್ಕೆ ಯೋಗ್ಯವೆಂದು ಸತ್ಪುರುಷರ ಅಭಿಪ್ರಾಯವು.

ನಿತ್ಯಮಜ್ಞಾತಚರ್ಯಾ ಮ ಇತಿ ಮನ್ಯೇತ ಬ್ರಾಹ್ಮಣಃ ।
ಜ್ಞಾತೀನಾಂ ತು ವಸನ್ ಮಧ್ಯೇ ನೈವ ವಿನ್ದೇತ ಕಿಂಚನ[2] ॥ ೩೧ ॥

೩೧. ಯಾವಾಗಲೂ ಬ್ರಾಹ್ಮಣನು ತನ್ನ ನಡತೆಯು ಗೊತ್ತಾಗದಂತೆ ಇರಬೇಕೆಂದು ತಿಳಿಯಬೇಕು. ಬಂಧುಗಳ ನಡುವೆ ವಾಸಮಾಡುವಾಗ ಏನನ್ನೂ ಪಡೆದುಕೊಳ್ಳಬಾರದು.

(ಭಾಷ್ಯ)

ಪುನರಪಿ ತಸ್ಯೈವ ಸಮಾಚಾರಮಾಹ । ನಿತ್ಯಂ ನಿಯಮೇನ ಅಜ್ಞಾತಚರ್ಯಾ ಗೂಢಚರ್ಯಾ ಮೇ ಮಮ ಕರ್ತವ್ಯಾ ಇತಿ ಮನ್ಯೇತ ಬ್ರಾಹ್ಮಣಃ ಬ್ರಹ್ಮವಿತ್ । ಜ್ಞಾತೀನಾಂ ಪುತ್ರಮಿತ್ರಕಲತ್ರಾದೀನಾಂ ಮಧ್ಯೇ ಸಂನಿಧೌ ವಸನ್ ನೈವ ವಿನ್ದೇತ ನ ಪ್ರತಿಪದ್ಯೇತ ಕಿಂಚನ ಕಿಞ್ಚಿದಪಿ । ಕಶ್ಚನೇತಿ ಕೇಚಿತ್ । ಯೋಗೀ ನೈವ ವಿನ್ದೇತ ಪುತ್ರಮಿತ್ರಕಲತ್ರಾದಿಕಂ ಪರಿತ್ಯಜ್ಯ ಕೇವಲಂ ಸ್ವಾತ್ಮನಿಷ್ಠೋ ಗೂಢಚರ್ಯೋ ಭವೇತ್ ಇತ್ಯರ್ಥಃ । ತಥಾ ಚ ಶ್ರುತಿಃ- 'ಕುಟುಮ್ಬಂ ಪುತ್ರದಾರಾಂಶ್ಚ ವೇದಾಙ್ಗಾನಿ ಚ ಸರ್ವಶಃ । ಯಜ್ಞಂ ಯಜ್ಞೋಪವೀತಂ ಚ ತ್ಯಕ್ತ್ವಾ ಗೂಢಶ್ಚರೇನ್ಮುನಿಃ' ಇತಿ । ತಥಾ ಚಾಹ ಭಗವಾನ್ ವಸಿಷ್ಠಃ- 'ಯನ್ನ ಸನ್ತಂ ನ ಚಾಸನ್ತಂ ನಾಶ್ರುತಂ ನ ಬಹುಶ್ರುತಮ್ । ನ ಸುವೃತ್ತಂ ನ ದುರ್ವೃತ್ತಂ ವೇದ ಕಶ್ಚಿತ್ ಸ ಬ್ರಾಹ್ಮಣಃ ॥ ಜಾನನ್ನಪಿ ಚ ಮೇಧಾವೀ ಜಡವಲ್ಲೋಕ ಆಚರೇತ್' । ಇತಿ । ಈದೃಶಸ್ಯೈವ ಜ್ಞಾನನಿಷ್ಠಾಪ್ರಾಪ್ತಿಲಕ್ಷಣೋ ಮೋಕ್ಷಃ, ನಾನ್ಯಸ್ಯ, ವಿಕ್ಷೇಪಬಾಹುಲ್ಯಾದಿತಿ ಭಾವಃ ॥

(ಭಾಷ್ಯಾರ್ಥ)

ಮತ್ತು ಆ (ಜ್ಞಾನಿಯ) ಚರ್ಯೆಯನ್ನೇ ಹೇಳುತ್ತಾರೆ : ನಿತ್ಯವಾಗಿ ಎಂದರೆ ಸದಾಕಾಲವೂ ಅಜ್ಞಾತಚರ್ಯೆ- ಗೂಢವಾಗಿ ವ್ಯವಹರಿಸುವದು ನನ್ನ ಕರ್ತವ್ಯವು ಎಂದು ಬ್ರಹ್ಮವಿದನಾದ ಬ್ರಾಹ್ಮಣನು ತಿಳಿಯಬೇಕು. ಮಗ, ಸ್ನೇಹಿತ, ಹೆಂಡತಿ ಮೊದಲಾದವರ ನಡುವೆ ವಾಸಮಾಡಿಕೊಂಡಿದ್ದರೂ ಏನನ್ನೂ

---

1. ಇಲ್ಲಿ ಬ್ರಾಹ್ಮಣಸ್ವತ್ತು ಎಂದರೆ ಗೃಹಸ್ಥನು ಯತಿಗೆ ಕೊಡಬೇಕಾದ ಭಿಕ್ಷೆ-ಮುಂತಾದವು. ಹಾಗೆ ಕೊಡದೆ ತಾನೇ ತಿನ್ನುವವನು ಬ್ರಹ್ಮಸ್ವವನ್ನು ಅಪಹಾರ ಮಾಡಿದಂತೆ ಎಂದಭಿಪ್ರಾಯ. ಗೀ. ೩-೧೨ನ್ನು ನೋಡಿರಿ.

2. 'ತಂ ವಿದುರ್ಬ್ರಾಹ್ಮಣಂ ಬುಧಾಃ' ಎಂದು ಮಹಾಭಾರತದ ಪಾಠ.

ಸ್ವಲ್ಪವೂ ಹೊಂದಬಾರದು, ಪಡೆಯಬಾರದು.[1] ಯಾವನನ್ನೂ (ಸೇವಿಸ ಬಾರದು) ಎಂದೂ ಕೆಲವರು (ವ್ಯಾಖ್ಯಾನಮಾಡುವರು). ಯೋಗಿಯಾದವನು ಮಗ, ಸ್ನೇಹಿತ, ಹೆಂಡತಿ- ಮುಂತಾದವರನ್ನು ಕೈಬಿಟ್ಟು ಕೇವಲ ತನ್ನ ಆತ್ಮನಲ್ಲೇ ನೆಲೆನಿಂತವನಾಗಿ (ಯಾರೊಬ್ಬರಿಗೂ) ತಿಳಿಯದಂತೆ ನಡೆದುಕೊಳ್ಳಬೇಕು- ಎಂದರ್ಥ. ಶ್ರುತಿಯೂ[2]ಕೂಡ 'ಕುಟುಂಬವನ್ನೂ ಮಗ, ಹೆಂಡತಿ (ಮುಂತಾ ದವರನ್ನೂ) ವೇದಾಂಗಗಳನ್ನೂ, ಯಜ್ಞವನ್ನೂ, ಯಜ್ಞೋಪವೀತವನ್ನೂ ಪೂರ್ತಿಯಾಗಿ ತ್ಯಾಗಮಾಡಿ ಮುನಿಯಾದವನು ಗೂಢನಾಗಿ ಚರಿಸಬೇಕು' ಎಂದು ಹೇಳುತ್ತಿದೆ. ಪೂಜ್ಯರಾದ ವಸಿಷ್ಠರುಕೂಡ- "ಇದ್ದುಕೊಂಡಿರುವ ಅಥವಾ (ಜನರಿಗೆ) ಕಾಣಿಸಿಕೊಳ್ಳದೆ ಇರುವ, ಏನೂ ಅರಿಯದ, ಅಥವಾ (ಎಲ್ಲ ವನ್ನೂ) ಹೆಚ್ಚಾಗಿ ಬಲ್ಲ, ಮತ್ತು ಒಳ್ಳೆಯ ನಡತೆಯ, ಅಥವಾ ಕೆಟ್ಟನಡತೆಯ ಯಾವದೇ ಆಚಾರವುಳ್ಳವನೆಂದು ಯಾವನನ್ನು ಯಾರೊಬ್ಬರೂ ಅರಿಯರೋ ಆವನೇ ಬ್ರಾಹ್ಮಣನು. ಮೇಧಾಶಾಲಿಯಾದ (ಅವನು) ಎಲ್ಲವನ್ನೂ ಬಲ್ಲವ ನಾಗಿದ್ದರೂ ಜಡನಂತೆ ಲೋಕದಲ್ಲಿ ನಡೆದುಕೊಳ್ಳಬೇಕು" (ಎಂದು ತಿಳಿಸಿದ್ದಾರೆ). ಇಂಥವನಿಗೇ ಜ್ಞಾನನಿಷ್ಠೆಯಿಂದ ಮೋಕ್ಷವು ದೊರಕುವದು; ಬೇರೆಯವನಿಗಲ್ಲ ಏಕೆಂದರೆ (ಉಳಿದವರಿಗೆ) ಮನಸ್ಸಿನ ಚಾಂಚಲ್ಯವು ಹೆಚ್ಚಾಗಿರುವದು ಎಂದಭಿಪ್ರಾಯ.

(ಭಾಷ್ಯ)

ಅಥವಾ, 'ನಿತ್ಯಮಜ್ಞಾತಚರ್ಯಾ ಮೇ ಅಜ್ಞಾತೇ ಚಕ್ಷುರಾದ್ಯವಿಷಯ ಭೂತೇ ವಾಚಾಮಗೋಚರೇ ಅನುದಿತಾನಸ್ತಮಿತಜ್ಞಾನಾತ್ಮನಾವಸ್ಥಿತೇ ಅಶನಾಯಾದ್ಯಸಂಸ್ಪೃಷ್ಟೇ ಪೂರ್ಣಾನನ್ದಸ್ವರೂಪೇ ಸರ್ವಾನ್ತರೇ ಪ್ರತ್ಯಗ್ ಭೂತೇ ಬ್ರಹ್ಮಣಿ ಚರ್ಯಾ ನಿಷ್ಠಾ ಸಮಾಧಿಲಕ್ಷಣಾ ಮೇ ಮಮ ಕರ್ತವ್ಯಾ, ನ ಪರಾಗ್ಭೂತದೇಹೇನ್ದ್ರಿಯಪುತ್ರಮಿತ್ರಕಲತ್ರಾದೌ ಸ್ಥೂಲೋಽಹಂ, ಕೃಶೋಽ- ಹಂ, ಗಚ್ಛಾಮಿ, ತಿಷ್ಠಾಮಿ, ಕ್ಲೀಬಃ, ಕಾಣಃ, ಮೂಕಃ, ಬಧಿರಃ, ಅಮುಷ್ಯ ಪುತ್ರಃ, ಅಸ್ಯ ನಪ್ತಾ, ಬ್ರಾಹ್ಮಣೋಽಹಂ, ಕ್ಷತ್ರಿಯೋಽಹಂ, ಭಾರ್ಯಾ ಮೇ, ಪುತ್ರೋ ಮೇ, ವಿಭವೋ ಮೇ, ಸ್ನಿಗ್ಧಬನ್ಧುಸುಹೃದಃ ಇತ್ಯೇವಮಾತ್ಮಿಕಾ ಕರ್ತವ್ಯಾ' ಇತಿ ಮನ್ಯೇತ ಬ್ರಾಹ್ಮಣೋ ಬ್ರಹ್ಮವಿತ್ । ತಥಾ ಚ ಶ್ರುತಿಃ- 'ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ । ತದೇವ ಬ್ರಹ್ಮ'- ಇತಿ । ಯಸ್ಮಾದೇವಮಜ್ಞಾತ ಏವ ಬ್ರಹ್ಮಣಿ ನಿಷ್ಠಾ ಕರ್ತವ್ಯಾ, ತಸ್ಮಾತ್ ಜ್ಞಾತೀನಾಂ ಕ್ರೋಧಮಾನಾದಯೋ ದೋಷಾ ವಿಷಯಾಶ್ಚೇನ್ದ್ರಿಯಾಣಿ

1. ಪುತ್ರಮಿತ್ರಾದಿಗಳಲ್ಲಿ ಅನಾಸಕ್ತನಾಗಿ ಏನನ್ನೂ ಪರಿಗ್ರಹಮಾಡದೆ ಉದಾಸೀನ ನಾಗಿದ್ದುಕೊಂಡಿರಬೇಕು.

2. ಇದು ಯಾವ ಶ್ರುತಿಯೆಂಬುದು ತಿಳಿದಿಲ್ಲ. ಸ್ಮೃತಿವಾಕ್ಯವಿದ್ದಂತಿದೆ.

ಚ । ಏತ ಏವ ಸಮಾಖ್ಯಾತಾ ಜ್ಞಾತಯೋ ದೇಹಿನಸ್ತವ' ಇತೀನ್ದ್ರಿಯಾದೀನಾಂ ಜ್ಞಾತಿಶಬ್ದೇನೋಕ್ತತ್ವಾತ್ ಇನ್ದ್ರಿಯಾದೀನಾಂ ಮಧ್ಯೇ ವಸನ್, ಪಶ್ಯನ್, ಶೃಣ್ವನ್, ಸ್ಪೃಶನ್, ಜಿಘ್ರನ್, ಗಚ್ಛನ್, ಅಶ್ನನ್, ಮನ್ಯಮಾನೋ ವಿಜಾನನ್ನಪಿ ನೈವಮಾತ್ಮಾನಂ ಪ್ರಮಾತ್ರಾದಿರೂಪೇಣ ವಿನ್ದೇತ ಪ್ರತಿಪದ್ಯೇತ, ತತ್ಸಾಕ್ಷಿತ್ವಾದಾತ್ಮನಃ । ತಥಾ ಚ ಶ್ರುತಿಃ– 'ಅಥ ಯೋ ವೇದೇದಂ ಜಿಘ್ರಾಣೀತಿ ಸ ಆತ್ಮಾ' (ಛಾಂ. ೮-೧೨-೪) ಇತಿ । ದೇಹದ್ವಯ ತದ್ಧರ್ಮಾನಾತ್ಮತ್ವೇನ ನ ಗೃಹ್ಣೀಯಾದ್ ಇತ್ಯರ್ಥಃ ॥

( ಭಾಷ್ಯಾರ್ಥ )

ಅಥವಾ 'ನನ್ನ ಚರ್ಯೆಯು ಕಣ್ಣೇ ಮುಂತಾದವುಗಳಿಗೆ ವಿಷಯವಲ್ಲದ ವಾಕ್ಕುಗಳಿಗೂ ಗೋಚರವಾಗದ, ಹುಟ್ಟದೆ ನಾಶವಾಗದೆ ಇರುವ ಜ್ಞಾನರೂಪದಿಂದ ಇದ್ದುಕೊಂಡಿರುವ, ಹಸಿವು ಮುಂತಾದವುಗಳ ಸೋಂಕಿಲ್ಲದ, ಪೂರ್ಣಾನಂದಸ್ವರೂಪವೂ ಸರ್ವಾಂತರವೂ (ಎಲ್ಲಕ್ಕೂ) ಒಳಗಿರುವದೂ ಆದ ಬ್ರಹ್ಮದಲ್ಲಿ ಚರ್ಯೆಯು ಎಂದರೆ ಸಮಾಧಿರೂಪವಾದ ನಿಷ್ಠೆಯು ನನಗೆ ಕರ್ತವ್ಯವು; ಹಾಗಲ್ಲದೆ (ನನಗಿಂತ) ಹೊರಗಿನದಾದ ದೇಹ, ಇಂದ್ರಿಯಗಳು, ಮಗ, ಸ್ನೇಹಿತ, ಹೆಂಡತಿ– ಮುಂತಾದವರ(ಲ್ಲಲ್ಲ; ಮತ್ತು) ದಪ್ಪವಾಗಿದ್ದೇನೆ,[1] ಕೃಶವಾಗಿದ್ದೇನೆ, ಹೋಗುತ್ತೇನೆ, ನಿಲ್ಲುತ್ತೇನೆ, ನಪುಂಸಕನು, ಕುರುಡನು, ಮೂಕನು ಕಿವುಡನು, ಇಂಥವನ ಮಗನು, ಇವನ ಮೊಮ್ಮಗನು, ನಾನು ಬ್ರಾಹ್ಮಣನು, ಕ್ಷತ್ರಿಯನು, ನನಗೆ ಹೆಂಡತಿ (ಇದ್ದಾಳೆ), ಮಗನಿದ್ದಾನೆ, ಐಶ್ವರ್ಯವು (ನನ್ನದು), ಪ್ರೀತಿಪಾತ್ರರಾದ ಬಂಧುಗಳು, ಸ್ನೇಹಿತರು (ನನಗೆ ಇದ್ದಾರೆ) ಇವೇ– ಮುಂತಾದ ರೀತಿಯ (ಚರ್ಯೆಯನ್ನು) ಮಾಡಬಾರದು – ಎಂದು ಬ್ರಹ್ಮವಿದನಾದ ಬ್ರಾಹ್ಮಣನು ತಿಳಿಯಬೇಕು. ಶ್ರುತಿಯೂಕೂಡ– 'ಕಣ್ಣಿನಿಂದ ಯಾವದನ್ನು ಕಾಣುವದಾಗಲಾರದೋ ಯಾವದರ ಬೆಳಕಿನಿಂದಲೇ ಕಣ್ಣುಗಳನ್ನು ಕಾಣುತ್ತಾನೋ ಅದೇ ಬ್ರಹ್ಮವು' ಎಂದು ಹೇಳಿದೆ. ಆದ್ದರಿಂದ ಅರಿವಿಲ್ಲದಂತೆಯೇ[2] ಬ್ರಹ್ಮದಲ್ಲಿ ನಿಷ್ಠೆಯನ್ನು ಮಾಡತಕ್ಕದ್ದು. ಅಂತೂ ಜ್ಞಾತಿಗಳ ಎಂದರೆ– 'ಕೋಪ, ಅಭಿಮಾನ, ಮುಂತಾದ ದೋಷಗಳು, ವಿಷಯಗಳು, ಇಂದ್ರಿಯಗಳು– ಇವುಗಳೇ ದೇಹಿಯಾದ ನಿನಗೆ ಜ್ಞಾತಿಗಳೆಂದು ಹೇಳಲ್ಪಟ್ಟವೆ'– ಎಂದು ಇಂದ್ರಿಯಗಳೇ ಮುಂತಾ

1. ದಪ್ಪವಾಗಿದ್ದೇನೆ– ಮುಂತಾಗಿ ದೇಹವಲ್ಲಿ, ಕುರುಡನು- ಮುಂತಾಗಿ ಇಂದ್ರಿಯಗಳಲ್ಲಿ, ನನ್ನ ಮಗ– ಮುಂತಾಗಿ ಪುತ್ರಾದಿಗಳಲ್ಲಿ ಅಧ್ಯಾಸಮಾಡಿಕೊಂಡು ಜ್ಞಾನಿಯು ಎಂದಿಗೂ ವ್ಯವಹರಿಸುವದಿಲ್ಲ ಎಂದಭಿಪ್ರಾಯ.

2. ಯಾರೊಬ್ಬರೂ ಇವನು ಬ್ರಹ್ಮನಿಷ್ಠೆಯನ್ನು ಮಾಡುತ್ತಾನೆಂದು ಗುರುತಿಸದಂತೆ– ಎಂದರ್ಥ.

ದವುಗಳ ನಡುವೆ ವಾಸಮಾಡುತ್ತಿದ್ದು ನೋಡುತ್ತಾ, ಕೇಳುತ್ತಾ, ಮುಟ್ಟುತ್ತಾ, ಮೂಸುತ್ತಾ, ಓಡಾಡುತ್ತಾ, ತಿನ್ನುತ್ತಾ, ಅರಿತುಕೊಳ್ಳುತ್ತಾ ಜ್ಞಾನವನ್ನುಂಟು ಮಾಡಿಕೊಳ್ಳುತ್ತಿದ್ದರೂ ತನ್ನನ್ನು ಪ್ರಮಾತೃ ಮುಂತಾದ ರೀತಿಯಿಂದ ಎಂದಿಗೂ ತಿಳಿಯಬಾರದು, ಏಕೆಂದರೆ ಆತ್ಮನು ಅವುಗಳಿಗೆ ಸಾಕ್ಷಿಯಾಗಿರುತ್ತಾನೆ. ಶ್ರುತಿಯೂಕೂಡ– 'ಇದನ್ನು ಮೂಸುವೆನು ಎಂದು ಯಾವನು ತಿಳಿಯುವನೋ ಅವನು ಆತ್ಮನು' ಎಂದು ಹೇಳಿದೆ. ಎರಡು ದೇಹಗಳು[1] ಹಾಗೂ ಅವುಗಳ ಧರ್ಮಗಳನ್ನು ತನ್ನದೆಂದು ಅರಿಯಬಾರದು– ಎಂದಭಿಪ್ರಾಯ:

**ಕೋ ಹ್ಯೇವಮನ್ತರಾತ್ಮಾನಂ[2] ಬ್ರಾಹ್ಮಣೋ ಮನ್ತುಮರ್ಹತಿ[3] ।**
**ನಿರ್ಲಿಙ್ಗಮಚಲಂ ಶುದ್ಧಂ ಸರ್ವದ್ವನ್ದ್ವ[4]ವಿವರ್ಜಿತಮ್ ॥ ೩೨ ॥**

೩೨. ಲಿಂಗರಹಿತನೂ ಅಚಲನೂ ಶುದ್ಧನೂ ಎಲ್ಲಾ ದ್ವಂದ್ವಗಳಿಂದ ದೂರನೂ ಆದ ಅಂತರಾತ್ಮನನ್ನು ಯಾವ ಬ್ರಾಹ್ಮಣನುತಾನೆ (ಪ್ರಮಾಣಗಳಿಂದ) ಅರಿತುಕೊಳ್ಳಲಿಚ್ಛಿಸಿಯಾನು ?

(ಭಾಷ್ಯ)

ಕಸ್ಮಾತ್ ಪುನರೇವಂ ನ ಗೃಹ್ಯತೇ ಇತಿ ಅತ್ರಾಹ– ಕೋ ಹಿ ನಿರ್ಲಿಙ್ಗಂ ಸ್ಥೂಲಸೂಕ್ಷ್ಮವಿವರ್ಜಿತಮ್ ಅಚಲಂ ಕ್ರಿಯಾಕರ್ತ್ರಾದಿಶೂನ್ಯಂ ಶುದ್ಧಮ್ ಅವಿದ್ಯಾದೋಷರಹಿತಂ ಸರ್ವದ್ವನ್ದ್ವವಿವರ್ಜಿತಮ್ ಅಶನಾಯಾಪಿಪಾಸಾಶೋಕಮೋಹಜರಾಮೃತ್ಯುಶೀತೋಷ್ಣಸುಖದುಃಖಾದಿಧರ್ಮವಿವರ್ಜಿತಮ್ ಅನ್ತರಾತ್ಮಾನಂ ಸರ್ವಾನ್ತರಂ ಪ್ರಮಾತ್ರಾದಿಸಾಕ್ಷಿಣಮಾತ್ಮಾನಂ ಮಾನಾವಿಷಯಭೂತಮ್ ಏವಮ್ ಉಕ್ತೇನ ಪ್ರಕಾರೇಣ ದೇಹದ್ವಯತದ್ಧರ್ಮತಯಾ 'ಸ್ಥೂಲೋಽಹಂ, ಕೃಶೋಽಹಮ್, ಗಚ್ಛಾಮಿ, ಪಶ್ಯಾಮಿ, ಮೂಕಃ, ಬಧಿರಃ, ಕಾಣಃ, ಸುಖ್ಯಹಮ್, ದುಃಖ್ಯಹಮ್– ಇತಿ ಬ್ರಾಹ್ಮಣಃ ಸನ್ ಅರ್ಹತಿ ಮನ್ತುಮ್ । ತಥಾ ಸತಿ ಬ್ರಾಹ್ಮಣತ್ವಮೇವ ಹೀಯೇತೇತ್ಯರ್ಥಃ । ವಕ್ಷ್ಯತಿ ಚ– 'ಯ ಏವ ಸತ್ಯಾನ್ನಾಪೈತಿ ಸ ಜ್ಞೇಯೋ ಬ್ರಾಹ್ಮಣಸ್ತ್ವಯಾ' (೨–೪೦) ಇತಿ॥

( ಭಾಷ್ಯಾರ್ಥ )

ಹೀಗೆ ಏತಕ್ಕಾಗಿ ಅರಿಯಲ್ಪಡುವದಿಲ್ಲ ? ಎಂದರೆ ಹೇಳುತ್ತಾನೆ. ಲಿಂಗವಿಲ್ಲದವನೂ[5] ಸ್ಥೂಲ-ಸೂಕ್ಷ್ಮ (ಗಳೆಂಬ) ಪರಿಮಾಣವಿಲ್ಲದವನೂ ಚಲನೆಯಿಲ್ಲ

1. ಸ್ಥೂಲದೇಹ ಹಾಗೂ ಸೂಕ್ಷ್ಮವಾದ ಇಂದ್ರಿಯಗಳು– ಎಂದಭಿಪ್ರಾಯವಿರಬಹುದು. 2. 'ಹ್ಯನನ್ತರಮಾತ್ಮಾನಮ್'

3. 'ಹನ್ತುಮರ್ಹತಿ' 4. 'ಸರ್ವದ್ವೈತ'– ಎಂದು ಮಾ॥ಭಾ॥ ಪಾಠಗಳು.

5. ಲಿಂಗವೆಂದರೆ ಗುರುತು. ಆಶ್ರಮಚಿಹ್ನೆಗಳಿಲ್ಲದ ಎಂದರ್ಥ.

ದವನೂ ಕ್ರಿಯೆ, ಕರ್ತೃ(ತ್ವ)ಗಳಿಲ್ಲದವನೂ ಆದ ಶುದ್ಧನಾದ ಅವಿದ್ಯಾದೋಷ ದೂರನಾದ ಎಲ್ಲಾ ದ್ವಂದ್ವಗಳಿಂದಲೂ ಬಿಡಲ್ಪಟ್ಟ, ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು, ಸಾವು, ಶೀತ, ಉಷ್ಣ, ಸುಖ, ದುಃಖವೇ ಮುಂತಾದ ಧರ್ಮಗಳಿಲ್ಲದೆಇರುವ, ಒಳಗಿನ ಆತ್ಮನಾದ, ಸರ್ವಾಂತರನಾದ, ಪ್ರಮಾತೃವೇ ಮೊದಲಾದವರಿಗೆ ಸಾಕ್ಷಿಯಾಗಿರುವ, ಪ್ರಮಾಣಗಳಿಗೆ ನಿಲುಕದ ಆತ್ಮನನ್ನು ಹೀಗೆ ಎಂದರೆ ಹಿಂದೆ ಹೇಳಿದಂತೆ ಎರಡು ದೇಹಗಳ ಧರ್ಮಗಳಿಂದ ಕೂಡಿದವ ನನ್ನಾಗಿ 'ನಾನು ದಪ್ಪಗಿದೇನೆ, ತೆಳ್ಳಗಿದೇನೆ, ಹೋಗುತ್ತೇನೆ, ನೋಡುತ್ತೇನೆ, ಮೂಕನು, ಕಿವುಡನು, ಕುರುಡನು, ನಾನು ಸುಖಿ, ನಾನು ದುಃಖಿ- ಎಂದು (ಮುಂತಾಗಿ) ಬ್ರಾಹ್ಮಣನಾಗಿದ್ದುಕೊಂಡು ಯಾವನುತಾನೆ ಅರಿತಾನು?[1] ಹಾಗೆ ತಿಳಿದರೆ ಅವನ ಬ್ರಾಹ್ಮಣತ್ವವೇ ಹಾಳಾದೀತು- ಎಂದಭಿಪ್ರಾಯ. 'ಯಾವನು ಸತ್ಯದಿಂದ ಜಾರುವದಿಲ್ಲವೋ ಅವನನ್ನು ನೀನು ಬ್ರಾಹ್ಮಣನೆಂದರಿಯಬೇಕು' ಎಂದು ಮುಂದೆಯೂ ಹೇಳಲಾಗುತ್ತದೆ.

## ಅಜ್ಞಾನಿಯು ಆತ್ಮಾಪಹಾರಿಯು

**ಯೋಽನ್ಯಥಾ ಸನ್ತಮಾತ್ಮಾನಮನ್ಯಥಾ ಪ್ರತಿಪದ್ಯತೇ[2] ।**
**ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥ ೩೩ ॥**

೩೩. ಯಾವನು ಬೇರೊಂದು ರೀತಿಯಿಂದ ಇರುವ ಆತ್ಮನನ್ನು ಬೇರೊಂದು ರೀತಿಯಿಂದ ಅರಿತುಕೊಳ್ಳುವನೋ (ಅಂಥ) ಆತ್ಮಾಪಹಾರ ಮಾಡಿಕೊಂಡಿರುವ ಕಳ್ಳನಿಂದ ಯಾವ ಪಾಪವುತಾನೆ ಮಾಡಲ್ಪಟ್ಟಿಲ್ಲ ?

(ಭಾಷ್ಯ)

ಯಸ್ತ್ವೇವಂ ಮನುತೇ ಸ ಪಾಪೀಯಾನ್ ಇತ್ಯಾಹ- ಯೋಽನ್ಯಥಾ ಸನ್ತಮಾತ್ಮಾನಂ ಜ್ಞಾನಾತ್ಮನಾ ನಿರ್ಲಿಙ್ಗಮಮಲಂ ಶುದ್ಧಂ ಸರ್ವದ್ವನ್ದ್ವವಿವರ್ಜಿತಂ ಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನಾ ಸನ್ತಂ ಸ್ವಮಾತ್ಮಾನಮ್, ಅನ್ಯಥಾ ದೇಹದ್ವಯತದ್ಧರ್ಮಾತ್ಮತಯಾ 'ಕರ್ತಾ, ಭೋಕ್ತಾ, ಸುಖೀ, ದುಃಖೀ, ಸ್ಥೂಲೋಽಹಂ, ಕೃಶೋಽಹಮ್, ಅಮುಷ್ಯ ಪುತ್ರಃ, ಅಸ್ಯ ನಪ್ತಾ,

---

1. ಇಲ್ಲಿ ಬ್ರಾಹ್ಮಣನೆಂದರೆ ಬ್ರಹ್ಮಜ್ಞಾನಿಯೆಂದರ್ಥ. ಬ್ರಹ್ಮವಿದನು ಅನಾತ್ಮಗಳಾದ ದೇಹೇಂದ್ರಿಯಗಳೊಡಗೂಡಿ ಸುಖದುಃಖಗಳನ್ನನುಭವಿಸುತ್ತಿರುವ ಸಂಸಾರಿಸ್ವರೂಪನೇ ಆತ್ಮನೆಂದು ಎಂದಿಗೂ ತಿಳಿಯುವದಿಲ್ಲ ಎಂದರ್ಥ.

2. ಈ ಶ್ಲೋಕಾರ್ಧದ ಹಿಂದಕ್ಕೆ 'ತಸ್ಮಾದ್ಧಿ ಕ್ಷತ್ರಿಯಸ್ಯಾಪಿ ಬ್ರಹ್ಮಾಽವಸತಿ ಪಶ್ಯತಿ' ಎಂದು ಹೆಚ್ಚಾಗಿ ಮಹಾಭಾರತದ ಪಾಠ.

ಬ್ರಾಹ್ಮಣೋಽಹಂ, ಕ್ಷತ್ರಿಯೋಽಹಮ್' ಇತ್ಯೇವಮಾತ್ಮಾನಂ ಪ್ರತಿಪದ್ಯತೇ, ಕಿಂ ತೇನ ಮೂರ್ಖೇಣಾನಾತ್ಮವಿದಾ ಆತ್ಮಚೋರೇಣಾತ್ಮಾಪಹಾರಿಣಾ ನ ಕೃತಂ ಪಾಪಮ್ | ಮಹಾಪಾತಕಾದಿಸರ್ವಂ ತೇನೈವ ಕೃತಮಿತ್ಯರ್ಥಃ | ತಥಾ ಚ ಶ್ರುತಿಃ- 'ಅಸುರ್ಯಾ ನಾಮ ತೇ ಲೋಕಾ ಅನ್ಧೇನ ತಮಸಾಽಽವೃತಾಃ | ತಾಂಸ್ತೇ ಪ್ರೇತ್ಯಾಭಿಗಚ್ಛನ್ತಿ ಯೇ ಕೇ ಚಾತ್ಮಹನೋ ಜನಾಃ' (ಈ. ೩) ಇತಿ | ತಥಾ ಚೋಕ್ತಮ್- 'ಬ್ರಾಹ್ಮಣ್ಯಂ ಪ್ರಾಪ್ಯ ಲೋಕೇಽಸ್ಮಿನ್ ನ ಮೂಕೋ ಬಧಿರೋ ಭವೇತ್ | ನಾಪಕ್ರಾಮತಿ ಸಂಸಾರಾತ್ ಸ ಖಲು ಬ್ರಹ್ಮಘಾತಕಃ' ಇತಿ | ತಸ್ಮಾದ್ ವಿಷಯಭೂತದೇಹೇನ್ದ್ರಿಯಾದಿಷು ಆತ್ಮಭಾವಂ ಪರಿತ್ಯಜ್ಯ ಅಜ್ಞಾತ ಏವ ವಾಗಾದ್ಯಗೋಚರೇ ಪರಮಾತ್ಮನಿ ನಿಷ್ಠಾ ಕರ್ತವ್ಯಾ ಇತ್ಯರ್ಥಃ ||

(ಭಾಷ್ಯಾರ್ಥ)

ಯಾವನು ಹೀಗೆ ತಿಳಿಯುತ್ತಾನೋ ಅವನು ಹೆಚ್ಚಿನ ಪಾಪಿಯು- ಎಂದು ಹೇಳುತ್ತಾನೆ :- ಹೇಗೆಂದರೆ : ಯಾವನು ಬೇರೆಯ ರೀತಿಯಿಂದಿರುವ- ಎಂದರೆ ಜ್ಞಾನಸ್ವರೂಪದಿಂದಿರುವ ಲಿಂಗರಹಿತನಾದ, ದೋಷವಿಲ್ಲದ, ಶುದ್ಧನಾದ, ಎಲ್ಲಾ ದ್ವಂದ್ವ[1]ಗಳಿಂದಲೂ ಬಿಡಲ್ಪಟ್ಟು, ಚಿತ್ಸದಾನಂದನೂ ಅದ್ವಿತೀಯನೂ ಆದ ಬ್ರಹ್ಮಾತ್ಮರೂಪದಿಂದ ಇರುವ ತನ್ನ ಆತ್ಮನನ್ನು ಬೇರೊಂದು ರೀತಿಯಿಂದ (ಎಂದರೆ)- ಎರಡು ದೇಹಗಳ ಮತ್ತು ಅವುಗಳ ಧರ್ಮಗಳಿಂದ ಕೂಡಿದವನೆಂದೂ ಕರ್ತೃವು, ಭೋಕ್ತೃವು, ಸುಖಿಯು, ದುಃಖಿಯು, ನಾನು ದಪ್ಪಗಿರುವವನು, ತೆಳ್ಳಗಿರುವವನು, ಇವನ ಮಗನು, ಇವನ ಮೊಮ್ಮಗನು, ಬ್ರಾಹ್ಮಣನು, ಕ್ಷತ್ರಿಯನು- ಎಂಬಿವೇ ಮುಂತಾದ ರೀತಿಯಿಂದ ಅರಿಯುತ್ತಾನೋ ಆ ಅನಾತ್ಮವಿದನಾದ ಮೂರ್ಖನಿಂದ, ಆತ್ಮಾಪಹಾರಿಯಾದ ಆತ್ಮಚೋರನಿಂದ ಯಾವ ಪಾಪವು ಮಾಡಲ್ಪಟ್ಟಿಲ್ಲ?[2] ಮಹಾಪಾಪಗಳೆಲ್ಲವೂ ಅವನಿಂದಲೇ ಮಾಡಲ್ಪಟ್ಟಿವೆ ಯೆಂದರ್ಥ. ಶ್ರುತಿಯೂಕೂಡ- 'ಅಸುರ್ಯವೆಂಬ ಆ ಲೋಕಗಳು ಕುರುಡು ಗತ್ತಲೆಯಿಂದ ಮುಚ್ಚಿಕೊಂಡಿರುತ್ತವೆ. ಯಾರುಯಾರು ಆತ್ಮನನ್ನು ಕೊಲ್ಲುವರೋ (ಆ) ಜನರು ಸತ್ತಬಳಿಕ ಆ ಲೋಕಗಳನ್ನು ಪಡೆಯುತ್ತಾರೆ' ಎಂದು (ಹೇಳುತ್ತಿದೆ). ಮತ್ತು 'ಬ್ರಾಹ್ಮಣ್ಯವನ್ನು ಪಡೆದು ಈ ಲೋಕದಲ್ಲಿ ಮೂಕನೂ, ಕಿವುಡನೂ, ಆಗಿರಬಾರದು. (ಯಾವನು ಬ್ರಾಹ್ಮಣ್ಯವನ್ನು ಹೊಂದಿಯೂ)

---

1. ಶೀತೋಷ್ಣಗಳು, ಸುಖದುಃಖಗಳು- ಮುಂತಾದವುಗಳನ್ನು ದ್ವಂದ್ವಗಳೆನ್ನುವರು. 2. ಅಸಂಸಾರಿಯಾದ ತನ್ನ ಆತ್ಮನನ್ನು ಸಂಸಾರಿಯೆಂದು ಭಾವಿಸಿ ಆ ಸಂಸಾರಧರ್ಮಗಳನ್ನು ಆತ್ಮನಲ್ಲಿ ಆರೋಪಮಾಡಿದವನು ಹೆಚ್ಚಿನ ಕಳ್ಳನು, ಅವನು ಮಾಡದೆಇರುವ ಪಾಪಗಳೇ ಇಲ್ಲ ಎಂದಭಿಪ್ರಾಯ.

ಸಂಸಾರದಿಂದ ಹಿಂತೆರಳುವದಿಲ್ಲವೋ ಅವನು ಬ್ರಹ್ಮಘಾತುಕನೇ ಸರಿ' ಎಂದೂ ಹೇಳಿದೆ.[1] ಆದ್ದರಿಂದ ವಿಷಯಗಳಾದ ದೇಹೇಂದ್ರಿಯಾದಿಗಳಲ್ಲಿ ಆತ್ಮಭಾವವನ್ನು ಬಿಟ್ಟು (ಯಾರಿಗೂ) ತಿಳಿಯದಂತೆ ವಾಕ್ಕೇ ಮುಂತಾದವುಗಳಿಗೆ ಗೋಚರನಲ್ಲದ ಪರಮಾತ್ಮನಲ್ಲಿ ನಿಷ್ಠೆಯನ್ನು ಮಾಡಬೇಕು- ಎಂದಭಿಪ್ರಾಯ.

## ಜ್ಞಾನಿಯ ಸ್ವರೂಪವರ್ಣನೆ

**ಅಶ್ರಾನ್ತಃ ಸ್ಯಾದನಾದಾತಾ ಸಂಮತೋ ನಿರುಪದ್ರವಃ ।**
**ಶಿಷ್ಟೋ ನ ಶಿಷ್ಟವತ್ ಸ ಸ್ಯಾದ್ಬ್ರಾಹ್ಮಣೋ ಬ್ರಹ್ಮವಿತ್ ಕವಿಃ ॥೩೪॥**

೩೪. ಅನಾದಾತನು ಶ್ರಮವಿಲ್ಲದವನಾಗುವನು. (ಕಾಮಾದಿ) ಉಪದ್ರವಗಳಿಲ್ಲದವನೂ (ಆಗುವನು). (ಬಲ್ಲವರಿಂದ) ಶಿಷ್ಟನೆಂದು ತಿಳಿಯಲ್ಪಟ್ಟವನಾಗಿ ಶಿಷ್ಟನಂತೆ ಆತನು ನಡೆದುಕೊಳ್ಳಬಾರದು. ಕವಿಯೂ ಬ್ರಹ್ಮವಿದನೂ ಆದ ಬ್ರಾಹ್ಮಣನು (ಮೂಕಜಡರಂತೆ) ಇದ್ದುಕೊಂಡಿರಬೇಕು.

( ಭಾಷ್ಯ )

ಅನ್ಯಥಾ ದೇಹೇನ್ದ್ರಿಯತದ್ಧರ್ಮಾನನುಪಶ್ಯತಃ ಕಿಂ ಭವತೀತ್ಯತ ಆಹ -ಯಃ ಅನಾದಾತಾ ಅನಾತ್ಮಭೂತದೇಹೇನ್ದ್ರಿಯತದ್ಧರ್ಮಾನಾತ್ಮತ್ವೇನ ನೋಪಾದತ್ತೇ ಸ ಪುರುಷಃ ಅಶ್ರಾನ್ತಃ ಸ್ಯಾತ್ ಸಂಸಾರಶ್ರಮಯುಕ್ತೋ ನ ಭವೇತ್, ಅಶನಾಯಾದೇರ್ದೇಹಾದಿಧರ್ಮತ್ವಾತ್ । ತಥಾ ಚ ಶ್ರುತಿಃ- 'ಅಶನಾಯಾಪಿಪಾಸೇ ಪ್ರಾಣಸ್ಯ ಶೋಕಮೋಹೌ ಮನಸೋ ಜರಾಮರಣೇ ಶರೀರಸ್ಯ' ಇತಿ ।[2] ದೇಹದ್ವಯಾಧ್ಯಾಸೇ ಹಿ ತದ್ಧರ್ಮಾಧ್ಯಾಸೋ ಭವತಿ । ಏವಮಶ್ರಾನ್ತತಯಾ ನಿರುಪದ್ರವೋ ಭವತಿ । ಕ್ರೋಧಹರ್ಷಲೋಭಮೋಹಾದಯೋಽನ್ತರಾಯಾ ಉಪದ್ರವಾಃ, ತದ್ಧೀನೋ ನಿರುಪದ್ರವಃ, ಸ ಸಂಮತಃ ಶಿಷ್ಟತ್ವೇನ ವಿದ್ವದ್ಭಿಃ ಸಂಮತಃ ಶಿಷ್ಟವನ್ನ ಸ್ಯಾತ್ ನಾಚರೇತ್ ಜಡವಚ್ಚರೇತ್ ಬ್ರಾಹ್ಮಣೋ ಬ್ರಹ್ಮವಿತ್ ಕವಿಃ ॥

( ಭಾಷ್ಯಾರ್ಥ )

ಹಾಗಿಲ್ಲದೆ[3] ದೇಹ, ಇಂದ್ರಿಯಗಳು, ಅವುಗಳ ಧರ್ಮಗಳನ್ನು (ಸಾಕ್ಷಿಯಾಗಿ) ತಾನು ನೋಡುತ್ತಿರುವವನಿಗೆ ಏನು ಆಗುತ್ತದೆಯೆಂಬುದನ್ನು ಹೇಳುತ್ತಾನೆ :- ಯಾವನು ಅನಾತ್ಮಗಳಾದ ದೇಹೇಂದ್ರಿಯಗಳು ಮತ್ತು ಅವುಗಳ

1. ಇದು ಎಲ್ಲಿಯ ವಾಕ್ಯವೆಂದು ತಿಳಿಯಲಿಲ್ಲ.
2. ಇದು ಯಾವ ಶ್ರುತಿಯೆಂಬುದು ತಿಳಿಯಲಿಲ್ಲ.
3. ಆತ್ಮಚೋರನಂತಲ್ಲದೆ- ಎಂದರ್ಥ.

ಧರ್ಮಗಳನ್ನು ತನ್ನದೆಂದು ಸ್ವೀಕರಿಸದೆ ಅನಾದಾತನಾಗಿರುವನೋ[1] ಆ ಪುರುಷನು ಅಶ್ರಾಂತನಾಗುವನು ಎಂದರೆ ಸಂಸಾರಶ್ರಮಗಳಿಂದ ಕೂಡಿದವನಾಗುವದಿಲ್ಲ. (ಏಕೆಂದರೆ) ಹಸಿವು ಮುಂತಾದವುಗಳು ದೇಹದ ಧರ್ಮಗಳಾಗಿರುತ್ತವೆ. ಶ್ರುತಿಯೂ ಕೂಡ- 'ಹಸಿವುಬಾಯಾರಿಕೆಗಳು ಪ್ರಾಣನ (ಧರ್ಮಗಳು), ಶೋಕ ಮೋಹಗಳು ಮನಸ್ಸಿನದು, ಮುಪ್ಪುಸಾವುಗಳು ಶರೀರದ್ದು' ಎಂದು ಹೇಳುತ್ತಿದೆ.[2] ದೇಹದ್ವಯಗಳನ್ನು ಅಧ್ಯಾಸಮಾಡಿಕೊಂಡಾಗ ಅವುಗಳ ಧರ್ಮಗಳ ಅಧ್ಯಾಸವೂ ಆಗುತ್ತದೆ. ಹೀಗಿರುವದರಿಂದ (ಅಧ್ಯಾಸವಿಲ್ಲದ್ದರಿಂದ) ಬಳಲಿಕೆಯಿಲ್ಲದೆ ಇರುವದರಿಂದ ನಿರುಪದ್ರವನಾಗುತ್ತಾನೆ. ಕೋಪ, ಸಂತೋಷ, ಜಿಪುಣತನ, ಮೋಹ- ಮುಂತಾದವುಗಳೇ ಅಡ್ಡಿಗಳು. ಇವುಗಳಿಲ್ಲದವನು ನಿರುಪದ್ರವನು. ಬಲ್ಲವರಿಂದ ಶಿಷ್ಟನೆಂದು ಒಪ್ಪಲ್ಪಟ್ಟ ಅವನು ಶಿಷ್ಟರಂತೆ ಸಂಮತನಾಗಿರಬಾರದು, ಎಂದರೆ (ಶಿಷ್ಟರಂತೆ) ನಡೆದುಕೊಳ್ಳಬಾರದು.[3] ಬ್ರಹ್ಮವಿದನೂ ಕವಿಯೂ ಆದ ಬ್ರಾಹ್ಮಣನು (ಏನೂ ಅರಿಯದ) ಜಡನಂತೆ ನಡೆದುಕೊಳ್ಳಬೇಕು.

**ಯೇ ಯಥಾ ವಾನ್ತಮಶ್ನನ್ತಿ[4] ಬಾಲಾ[5] ನಿತ್ಯಮಭೂತಯೇ ।**
**ಏವಂ ತೇ ವಾನ್ತಮಶ್ನನ್ತಿ ಸ್ವವೀರ್ಯಸ್ಯೋಪಭೋಜನಾತ್[6] ॥೩೫॥**

೩೫. ಶಿಶುಗಳು (ಅರಿವಿಲ್ಲದೆ) ವಾಕರಿಕೆಯನ್ನು ತಿನ್ನುತ್ತವೆಯೋ ಹಾಗೆ ಯಾರು ತಾವು (ಬ್ರಹ್ಮವಿದರೆಂದು) ಪ್ರಕಟಪಡಿಸಿಕೊಳ್ಳುವರೋ ಅವರು ತಮ್ಮ ವೀರ್ಯವನ್ನೇ ತಿಂದಂತೆ ಆಗುವದರಿಂದ ಯಾವಾಗಲೂ ಅನರ್ಥವನ್ನೇ ಹೊಂದುವ ವಾಂತಭಕ್ಷಕರಾಗುವರು.

(ಭಾಷ್ಯ)

ಇದಾನೀಮಗೂಢಚಾರಿಣಂ ಕುತ್ಸಯನ್ನಾಹ- 'ಮೂಢೋ ಬಾಲ ಇತಿ ಪ್ರೋಕ್ತಃ ಶ್ವಾ ಚ ಬಾಲ ಇತಿ ಸ್ಮೃತಃ' ಇತಿ ದರ್ಶನಾತ್ ಯಥಾ ಬಾಲಾಃ ಶ್ವಾನೋ ವಾ ಮೂಢಾ ವಾ ವಾನ್ತಮ್ ಉದ್ಗೀರ್ಣಮಶ್ನನ್ತಿ, ಏವಂ ಯೇ

---

1. ಗೀ. ೩-೨೮ರ ಸೂಚನೆ.

2. ಆತ್ಮನು ಹಸಿವು, ಬಾಯಾರಿಕೆ- ಮುಂತಾದ ಷಡೂರ್ಮಿಗಳನ್ನು ಮೀರಿರುತ್ತಾನೆಂದು ಬೃಹದಾರಣ್ಯಕ(೩-೫-೧)ಶ್ರುತಿಯಲ್ಲಿದೆ. ಆದರೆ ಈ ಆರು ಸಂಸಾರಧರ್ಮಗಳನ್ನು ಹೀಗೆ ವಿಂಗಡಿಸಿರುವದು ಯಾವ ಉಪನಿಷತ್ತಿನಲ್ಲಿದೆಯೋ ತಿಳಿಯದು.

3. ತಾನು ಶಿಷ್ಟನೆಂದು ಜನರಿಗೆ ಗೊತ್ತಾಗುವಂತೆ ನಡತೆಯನ್ನು ಪ್ರದರ್ಶನ ಮಾಡಬಾರದು.

4. 'ಯಥಾ ಸ್ವಂ ವಾನ್ತಮಶ್ನಾತಿ' 5. 'ಶ್ವಾ ವೈ'

6. 'ಉಪಸೇವನಾತ್' ಎಂದು ಮಹಾಭಾರತದ ಪಾಠಗಳು. ಮತ್ತು ಈ ಶ್ಲೋಕವು ಅಲ್ಲಿ ೩೦ನೆಯ ಶ್ಲೋಕವಾದಮೇಲೆ ಬಂದಿದೆ.

ಶಿಷ್ಟಾಃ ಬ್ರಹ್ಮವಿದಃ ಸ್ವಮಾಹಾತ್ಮ್ಯಂ ಖ್ಯಾಪಯನ್ತಃ ಅಗೂಢಚಾರಿಣೋ ವರ್ತನ್ತೇ, ತೇ ವಾನ್ತಮ್, ಉದ್ಗೀರ್ಣಮ್ ಅಶ್ನನ್ತಿ ಸ್ವವೀರ್ಯಸ್ಯೋಪ ಭೋಜನಾತ್ | ಯದಿದಂ ವಾನ್ತಾಶನಂ ತದಿದಮ್ ಅಭೂತಯೇ ಅನರ್ಥಾಯೈವೇತ್ಯರ್ಥಃ| ತಸ್ಮಾದ್ ಗೂಢಃ ಸನ್ ಅಶಿಷ್ಟವದೇವ ಸಮಾಚರೇದಿತ್ಯರ್ಥಃ||

(ಭಾಷ್ಯಾರ್ಥ)

ಈಗ ಗೂಢನಾಗಿ (ಯಾರಿಗೂ ಅರಿಯದಂತೆ) ಆಚರಿಸದೆಇರುವವನನ್ನು ದೂಷಿಸಿ ಹೇಳುತ್ತಾನೆ : 'ಮೂಢನೆಂದರೆ ಬಾಲನು, ಮತ್ತು ನಾಯಿಯನ್ನೂ ಬಾಲಕನೆನ್ನುವರು' ಎಂದು ವಾಕ್ಯವಿರುವದರಿಂದ- ಹೇಗೆ ಬಾಲರಾಗಲಿ, ಅಥವಾ ನಾಯಿಗಳಾಗಲಿ ವಾಕರಿಕೆ(ವಾಂತಿ)ಯನ್ನು ತಿನ್ನುತ್ತಾರೆಯೋ ಹಾಗೆ ಯಾವ ಬ್ರಹ್ಮವಿದರಾದ ಶಿಷ್ಟರು ತಮ್ಮ ಹೆಚ್ಚುಗಾರಿಕೆಯನ್ನು ಪ್ರಕಟಗೊಳಿಸಿ ಕೊಳ್ಳುತ್ತಾ ಗೂಢಚಾರಿಗಳಾಗದೆ ಇದ್ದುಕೊಂಡಿರುವರೋ ಅವರು ವಾಂತಿ ಯನ್ನು ಎಂದರೆ ತಿಂದು ಉಗುಳಿದುದನ್ನು ಮತ್ತೆ ತಿನ್ನುವರಾಗುವರು. ಏಕೆಂದರೆ (ಅವರು) ತಮ್ಮ ವೀರ್ಯವನ್ನೇ ತಿಂದವರಾಗುವರಾದ್ದರಿಂದ (ಎಂದಭಿ ಪ್ರಾಯ.)[1] ಈ ವಾಂತಾಶನವೆಂಬುದು ಅಭೂತಿಗೆ ಎಂದರೆ ಅನರ್ಥಕ್ಕೇ (ಕಾರಣ ವೆಂದರ್ಥ.) ಆದ್ದರಿಂದ ಗೂಢವಾಗಿದ್ದುಕೊಂಡು (ನೋಡುವವರಿಗೆ) ಅಶಿಷ್ಟ ನೆಂಬಂತೆಯೇ ನಡೆದುಕೊಳ್ಳಬೇಕು- ಎಂದಭಿಪ್ರಾಯ.

**ಅನಾಢ್ಯಾ ಮಾನುಷೇ ವಿತ್ತೇ ಆಢ್ಯಾ ವೇದೇಷು ಯೇ ದ್ವಿಜಾಃ[2] |**
**ತೇ ದುರ್ಧರ್ಷಾ ದುಷ್ಪ್ರಕಮ್ಪ್ಯಾ ವಿದ್ಯಾತ್ ತಾನ್[3] ಬ್ರಹ್ಮಣಸ್ತನುಮ್**

೩೬. ಮಾನುಷವಿತ್ತದಲ್ಲಿ ದರಿದ್ರರಾಗಿ ವೇದ(ಪ್ರೋಕ್ತವಾದ ಗುಣ ಗಳಲ್ಲಿ) ಶ್ರೀಮಂತರಾಗಿರುವ ಯಾವ ದ್ವಿಜರುಂಟೋ ಅವರು ಎದುರಿಸ ಲಸಾಧ್ಯರು. (ಹಾಗೂ) ಅಳ್ಳಾಡಿಸಲೂ ಅಸಾಧ್ಯರು. ಅವರುಗಳನ್ನು ಬ್ರಹ್ಮದ ಶರೀರವೆಂದು ಅರಿಯಬೇಕು.

(ಭಾಷ್ಯ)

ಇದಾನೀಂ ಯೋಗಿನಂ ಪ್ರಶಂಸನ್ನಾಹ- ಅನಾಢ್ಯಾ ಅಬಹುಮತಾ ಅಸಕ್ತಾ ತ್ಮಾನಃ ಮಾನುಷೇ ವಿತ್ತೇ ಜಾಯಾಪುತ್ರವಿತ್ತಾದಿಷು, ಆಢ್ಯಾ ವೇದೇಷು ವೇದ

1. ತನ್ನನ್ನು ಬ್ರಹ್ಮಜ್ಞಾನಿಯೆಂದು ಹೊಗಳಿಕೊಂಡು ಜನರಲ್ಲಿ ಪ್ರಚಾರಮಾಡಿ ಕೊಳ್ಳುವವನು ಅಹಂಕಾರವುಳ್ಳವನಾಗುವದರಿಂದ ಬಿಟ್ಟಿದ್ದ ಅಹಂಕಾರವನ್ನು ಮತ್ತೆ ನುಂಗಿದಂತಾಗಿ ವಾಂತಾಶಿಯಂತಾಗುವನು- ಎಂದಭಿಪ್ರಾಯವಿರಬಹುದು.

2. 'ಆಢ್ಯಾ ದೈವೇ ತಥಾ ಕ್ರತೌ'

3. 'ತಾನ್ ವಿದ್ಯಾತ್' ಎಂದು ಮಹಾಭಾರತದ ಪಾಠಗಳು.

ಪ್ರತಿಪಾದ್ಯಾಹಿಂಸಾ-ಸತ್ಯಾಸ್ತೇಯಾಪರಿಗ್ರಹಬ್ರಹ್ಮಚರ್ಯಸಮಾಧಿಸಾಧನೇಷು ಯೇ ದ್ವಿಜಾಃ ತೇ ದುರ್ಧರ್ಷಾ ದುಷ್ಪ್ರಕಮ್ಪ್ಯಾಃ ವಿದ್ಯಾತ್ ತಾನ್ ಬ್ರಹ್ಮಣಃ ತನುಂ ಬ್ರಹ್ಮಸ್ವರೂಪಭೂತಾಂ ವಿದ್ಯಾತ್ ಇತ್ಯರ್ಥಃ ||

(ಭಾಷ್ಯಾರ್ಥ)

ಈಗ ಯೋಗವನ್ನು ಹೊಗಳಿ ಹೇಳುತ್ತಾನೆ- ಮಾನುಷವಿತ್ತಗಳಾದ[1] ಹೆಂಡತಿ, ಮಗ, ಹಣ- ಇವುಗಳಲ್ಲಿ ಅನಾಢ್ಯರಾಗಿ ಎಂದರೆ ಗಣ್ಯರಲ್ಲದೆ, ಅಸಕ್ತರಾಗಿರುವ, ವೇದಗಳಲ್ಲಿ- ಎಂದರೆ ವೇದಪ್ರತಿಪಾದ್ಯವಾದ ಅಹಿಂಸೆ, ಸತ್ಯ, ಕದಿಯದಿರುವಿಕೆ, ಏನನ್ನೂ ಸ್ವೀಕರಿಸದಿರುವಿಕೆ, ಬ್ರಹ್ಮಚರ್ಯ, ಸಮಾಧಿ[2] ಮುಂತಾದ ಸಾಧನಗಳಲ್ಲಿ ಯಾವ ಬ್ರಾಹ್ಮಣರು ಆಢ್ಯರಾಗಿರುವರೋ ಅವರು ಎದುರಿಸಲು ಅಸಾಧ್ಯರು- ಎಂದರೆ (ವ್ಯವಹಾರದ ಆಗುಹೋಗುಗಳಿಂದ) ಅಳ್ಳಾಡದವರು. ಅವರುಗಳನ್ನು ಬ್ರಹ್ಮಸ್ವರೂಪವೇ ಆಗಿರುವ ಬ್ರಹ್ಮದ ಶರೀರವೆಂದು ತಿಳಿಯಬೇಕು, ಅರಿಯಬೇಕು- ಎಂದರ್ಥ.

**ಸರ್ವಾನ್ ಸ್ವಿಷ್ಟಕೃತೋ ದೇವಾನ್ ವಿದ್ಯಾದ್ಯ ಇಹ ಕಶ್ಚನ |**
**ನ ಸಮಾನೋ ಬ್ರಾಹ್ಮಣಸ್ಯ ಯಸ್ಮಿನ್[3] ಪ್ರಯತತೇ ಸ್ವಯಮ್ ||೩೭||**

೩೭. ಇಲ್ಲಿ ಯಾವನೊಬ್ಬನು ಎಲ್ಲಾ ಇಷ್ಟಪ್ರದರಾದ ದೇವತೆಗಳನ್ನೂ ಬಲ್ಲವನಾಗಿರುವನೋ ತಾನೇ ಯಾವ ದೇವತೆಯನ್ನು (ಕುರಿತು ಕರ್ಮವನ್ನು ಮಾಡುವನೋ) ಅವನೂ ಬ್ರಾಹ್ಮಣನಿಗೆ ಸಮಾನವಾಗಲಾರನು.

(ಭಾಷ್ಯ)

ಕಿಂ ಚ ಬ್ರಹ್ಮವಿನ್ಮಹಿಮ್ನೈಷಃ- ಸರ್ವಾನ್ ಅಗ್ನ್ಯಾದೀನ್ ಸ್ವಿಷ್ಟಕೃತಃ ಸುಷ್ಠು ಇಷ್ಟಂ ಕುರ್ವನ್ತೀತಿ | ತಥಾ ಚ ಶ್ರುತಿಃ- 'ಸ್ವಿಷ್ಟಂ ಕುರ್ವನ್ ಸ್ವಿಷ್ಟಕೃತ್' (ತೈ.ಬ್ರಾ. ೨-೬-೧೦) ಇತಿ| ದೇವಾನ್ ಪ್ರತ್ಯೇಕಮುದ್ದಿಶ್ಯ ತ್ಯಾಗಾರ್ಥಂ ವಿದ್ಯಾತ್ ಯ ಇಹ ಕಶ್ಚನ ಸರ್ವದೇವತಾಯಾಜ್ಯಪಿ ಬ್ರಾಹ್ಮಣಸ್ಯ ನ ಸಮಾನಃ ಬ್ರಾಹ್ಮಣೇನ ಬ್ರಹ್ಮವಿದಾ ನ ಸಮಾನ ಇತ್ಯರ್ಥಃ | ನೈತದಾಶ್ಚರ್ಯಮ್, ಯಸ್ಮಿನ್ ದೇವತಾವಿಶೇಷೇ ಹವಿಷ ಉದ್ದೇಶತ್ಯಾಗೇನ ಫಲಾರ್ಥಂ ಪ್ರಯತತೇ ಸ್ವಯಂ ಯಜಮಾನಃ ಇದಮಗ್ನಯೇ, ಇದಮಿನ್ದ್ರಾಯ, ಇತಿ | ಸೋಽಪಿ ಹವಿಷ್ಪ್ರತಿಯೋಗೀ ದೇವತಾವಿಶೇಷೋ ನ ಸಮಾನೋ ಬ್ರಹ್ಮವಿದಾ, ಕಿಮು ವಕ್ತವ್ಯಂ ದೇವಪಶುರ್ಯಜಮಾನೋ ನ ಸಮಾನ ಇತಿ | ತಥಾ ಚ ಮೋಕ್ಷ

1. ಬೃಹ. ೧-೪-೧೭ರ ಸೂಚನೆ.
2. ಅಂತಃಕರಣವನ್ನು ಸಮಾಧಾನದಿಂದಿಟ್ಟುಕೊಳ್ಳುವದು.
3. 'ತಸ್ಮಿನ್' ಎಂದು ಮಹಾಭಾರತದ ಪಾಠ.

ಧರ್ಮೇ 'ಬ್ರಾಹ್ಮಣಸ್ಯ ನ ಸಾದೃಶ್ಯೇ ವರ್ತತೇ ಸೋಽಪಿ ಕಿಂ ಪುನಃ | ಇಜ್ಯತೇ ಯೇನ ಮನ್ತ್ರೇಣ ಯಜಮಾನೋ ದ್ವಿಜೋತ್ತಮಃ' ಇತಿ | ತಥಾ ಚಾಹ ಭಗವಾನ್ ಮನುಃ– 'ಬ್ರಹ್ಮವಿದ್ಭ್ಯಃ ಪರಂ ಭೂತಂ ನ ಕಿಞ್ಚಿದಿಹ ವಿದ್ಯತೇ' ಇತಿ ||

(ಭಾಷ್ಯಾರ್ಥ)

ಮತ್ತು ಇದು ಬ್ರಹ್ಮಜ್ಞಾನಿಯ ಮಹಿಮೆಯು. (ಏನೆಂದರೆ) ಅಗ್ನಿಯೇ ಮುಂತಾದ ಸ್ವಿಷ್ಟಕೃದರನ್ನು- ಎಂದರೆ ಚೆನ್ನಾಗಿ ಬೇಕಾದದ್ದನ್ನುಂಟುಮಾಡು ತ್ತಾರಾದ್ದರಿಂದ (ಸ್ವಿಷ್ಟಕೃದರು). ಶ್ರುತಿಯೂಕೂಡ– 'ಬೇಕಾದದ್ದನ್ನು ಚೆನ್ನಾಗಿ ಉಂಟುಮಾಡುವವನು 'ಸ್ವಿಷ್ಟಕೃತ್' ಎಂದು ಹೇಳಿದೆ. ಇಲ್ಲಿ ಯಾವನು ಬೇರೆ ಬೇರೆಯಾಗಿ ದೇವತೆಗಳನ್ನು ಉದ್ದೇಶಿಸಿ ತ್ಯಾಗಮಾಡಲು (ಆಯಾ ದೇವತೆ ಗಳನ್ನು) ಬಲ್ಲವನೋ, ಎಲ್ಲಾ ದೇವತೆಗಳಿಗೂ ಹೋಮಮಾಡುವನೋ (ಅವನು) ಬ್ರಾಹ್ಮಣನಿಗೆ ಸಮಾನನಲ್ಲ ಎಂದರೆ ಬ್ರಹ್ಮವಿದನಾದ (ಬ್ರಾಹ್ಮಣನಿಗೆ) ಸಮಾನನಲ್ಲ ಎಂದರ್ಥ. ಇದೇನೂ ಆಶ್ಚರ್ಯವಲ್ಲ. ಯಜಮಾನನು ತಾನೇ 'ಇದು ಇಂದ್ರನಿಗೆ, ಇದು ಅಗ್ನಿಗೆ'–ಎಂದು ಯಾವ ದೇವತಾವಿಶೇಷವನ್ನು ಕುರಿತು ಹವಿಸ್ಸಿನ ತ್ಯಾಗದಿಂದ ಫಲಕ್ಕಾಗಿ ಉದ್ದೇಶಿಸಿ ಪ್ರಯತ್ನಮಾಡುವನೋ ಆ ಹವಿಸ್ಸಿಗೆ ಪ್ರತಿಯೋಗಿಯಾದ ದೇವತಾವಿಶೇಷವೂಕೂಡ ಬ್ರಹ್ಮಜ್ಞಾನಿಗೆ ಸಮವಲ್ಲ.[1] ಹೀಗೆಂದಮೇಲೆ ದೇವಪಶುವಾದ ಯಜಮಾನನು[2] ಸಮಾನನಲ್ಲ ವೆಂಬುದನ್ನು ಹೇಳತಕ್ಕದ್ದೇನಿದೆ ? ಮೋಕ್ಷಧರ್ಮದಲ್ಲಿ– "ಮತ್ತು ದ್ವಿಜಶ್ರೇಷ್ಠ ನಾದ ಯಜಮಾನನು ಯಾವ ಮಂತ್ರದಿಂದ ಯಜ್ಞಮಾಡುವನೋ (ಆ ಮಂತ್ರ ದೇವತೆಯಾದ) ಅವನುಕೂಡ ಬ್ರಾಹ್ಮಣನಿಗೆ ಸಮಾನವಾಗಿ ಇರುವದಿಲ್ಲ" ಎಂದು ಹೇಳಿದೆ. ಪೂಜ್ಯನಾದ ಮನುವುಕೂಡ– 'ಬ್ರಹ್ಮಜ್ಞಾನಿಗಳಿಗಿಂತ ಹೆಚ್ಚಿನ ವಸ್ತು ಇಲ್ಲಿ ಯಾವದೊಂದೂ ಇರುವದಿಲ್ಲ' ಎಂದು ಹೇಳಿದ್ದಾನೆ.

**ಯಮಪ್ರಯತಮಾನಂ ತು ಮಾನಯನ್ತಿ ಸ ಮಾನಿತಃ |**
**ನ ಮಾನ್ಯಮಾನೋ ಮನ್ಯೇತ ನಾವಮಾನೇ ವಿಸಂಜ್ವರೇತ್[3] || ೩೮ ||**

೩೮. ಏನೂ ಪ್ರಯತ್ನಮಾಡದಿರುವ (ಸುಮ್ಮನೆ ಇರುವ) ಯಾವ ಇವನನ್ನು (ತಿಳಿದವರು) ಗೌರವಿಸಿದಲ್ಲಿ ಹಾಗೆ ಗೌರವಿಸಲ್ಪಟ್ಟ ಅವನು

---

1. ದೇವತೆಗಳ ಸ್ವರೂಪವನ್ನು ಅರಿತು ಯಾಗಮಾಡಬಲ್ಲ ಯಜಮಾನನಾಗಲಿ, ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸುವ ಹಾಗೂ ಯಜಮಾನನಿಗೆ ಇಷ್ಟಾರ್ಥಫಲಗಳನ್ನು ಕೊಡುವ ಯಾವ ದೇವತೆಯೇ ಆಗಲಿ, ಬ್ರಹ್ಮಜ್ಞಾನಿಗೆ ಸಮವಲ್ಲ– ಎಂದಭಿಪ್ರಾಯ.

2. 'ಯಥಾ ಪಶುರೇವಂ ಸ ದೇವಾನಾಮ್' ಎಂಬ ಬೃಹ. ೧–೪–೧೦ರ ಶ್ರುತಿ ಯನ್ನು ಅನುಸಂಧಾನಮಾಡಿಕೊಳ್ಳಬೇಕು.

3. 'ನ ಮಾನ್ಯಮಭಿಸಂಜ್ವರೇತ್' ಎಂದು ಮಹಾಭಾರತದ ಪಾಠ.

ಪೂಜನೀಯನಾಗಿದ್ದೇನೆಂದು ತಿಳಿಯಬಾರದು. (ಹಾಗೆಯೇ) ಅವಮಾನ ಮಾಡಲ್ಪಟ್ಟರೂ ತಾಪಗೊಳ್ಳಬಾರದು.

( ಭಾಷ್ಯ )

ಪುನರಪಿ ತಸ್ಯೈವ ಸಮಾಚಾರಮಾಹ– ಯಂ ಬ್ರಹ್ಮವಿದಮ್ ಅಪ್ರಯತಮಾನಂ ತೂಷ್ಣೀಂಭೂತಂ ಸರ್ವೋಪಸಂಹಾರಂ ಕೃತ್ವಾ ಸ್ವೇ ಮಹಿಮ್ನಿ ವ್ಯವಸ್ಥಿತಂ ಬ್ರಹ್ಮಚರ್ಯಾದೇವ ಕೃತಸಂನ್ಯಾಸಿನಂ ವೇದಾನ್ತವಿಜ್ಞಾನಸುನಿಶ್ಚಿತಾರ್ಥಂ ಪರಮಹಂಸಪರಿವ್ರಾಜಕಾಚಾರ್ಯಂ ಗೂಢಚಾರಿಣಂ ಕೇಚಿದ್ ವಿದ್ವಾಂಸಃ ಸ್ಥಿತಪ್ರಜ್ಞಲಕ್ಷಣಜ್ಞಾಃ ಬ್ರಹ್ಮವಿದಿತಿ ಮತ್ವಾ ಮಾನಯನ್ತಿ ಪೂಜಯನ್ತಿ ಚೇತ್, ಸಃ ತೈಃ ಪೂಜಿತೋ ವಿದ್ವಾನ್ ನ ಮಾನ್ಯಮಾನಃ ಅಹಮಿತಿ ನ ಮನ್ಯೇತ । ತಥಾ ಸ್ಥಿತಪ್ರಜ್ಞಲಕ್ಷಣಾನಾಮನಭಿಜ್ಞಾಃ ಜಡ ಇತಿ ಮತ್ವಾ ಅವಮಾನಂ ಕುರ್ವನ್ತಿ ಇತಿ ಚೇತ್ ತಸ್ಮಿನ್ ಅವಮಾನೇ ನಿಮಿತ್ತೇ ನಾನುಸಂಜ್ವರೇತ್ ನಾನುತಪೇತ್ ॥

( ಭಾಷ್ಯಾರ್ಥ )

ಮತ್ತೂ ಅವನ ಆಚರಣೆಯನ್ನೇ ಹೇಳುತ್ತಾನೆ. ಏನೂ ಪ್ರಯತ್ನಮಾಡದೆ ಸುಮ್ಮನೆ ಇರುವ ಎಂದರೆ ಎಲ್ಲ (ಪ್ರವೃತ್ತಿಗಳ)ನ್ನೂ ಒಳಕ್ಕೆಳೆದುಕೊಂಡು ತನ್ನ ಮಹಿಮೆಯಲ್ಲಿಯೇ ಇದ್ದುಕೊಂಡಿರುವ, ಬ್ರಹ್ಮಚರ್ಯದಿಂದಲೇ ಸಂನ್ಯಾಸ ಮಾಡಿರುವ ವೇದಾಂತವಿಜ್ಞಾನಸುನಿಶ್ಚಿತಾರ್ಥನೂ ಪರಮಹಂಸಪರಿವ್ರಾಜಕನೂ ಆದ ಗೂಢವಾದ ನಡತೆಯುಳ್ಳವನನ್ನು ಸ್ಥಿತಪ್ರಜ್ಞನ ಲಕ್ಷಣವನ್ನು ಬಲ್ಲ ಕೆಲವು ವಿದ್ವಾಂಸರು ಇವನು ಬ್ರಹ್ಮಜ್ಞಾನಿಯೆಂತ ತಿಳಿದು ಮಾನಮಾಡಿದರೆ, ಗೌರವಿಸಿದರೆ ಅವರುಗಳಿಂದ ಪೂಜಿಸಲ್ಪಟ್ಟ ಅವನು (ತನ್ನನ್ನು) ಪ್ರಶಂಸೆಮಾಡಿಕೊಳ್ಳದೆ (ಇರಬೇಕು.) ನಾನು (ಗೌರವಿಸಲ್ಪಟ್ಟೆನು) ಎಂದು ತಿಳಿಯಬಾರದು. ಹಾಗೆಯೇ ಸ್ಥಿತಪ್ರಜ್ಞನ ಲಕ್ಷಣವನ್ನರಿಯದಿರುವವರು (ಇವನು) ಜಡನೆಂದು ಭಾವಿಸಿ ಅಪಮಾನಮಾಡಿದರೆ ಆ ಅಪಮಾನನಿಮಿತ್ತವಾಗಿ ಸಂಜ್ವರಿತನಾಗಬಾರದು– ಎಂದರೆ ತಾಪಗೊಳ್ಳಬಾರದು.

ಲೋಕಸ್ವಭಾವವೃತ್ತಿರ್ಹಿ ನಿಮೇಷೋನ್ಮೇಷವತ್ಸದಾ ।
ವಿದ್ವಾಂಸೋ ಮಾನಯನ್ತೀಹ ಇತಿ ಮನ್ಯೇತ ಮಾನಿತಃ ॥ ೩೯ ॥
ಅಧರ್ಮವಿದುಷೋ[1] ಮೂಢಾ ಲೋಕಶಾಸ್ತ್ರವಿವರ್ಜಿತಾಃ[2] ।
ನ ಮಾನ್ಯಂ ಮಾನಯಿಷ್ಯನ್ತಿ ಇತಿ ಮನ್ಯೇದಮಾನಿತಃ[3] ॥ ೪೦ ॥

---

1. 'ನಿಪುಣಾಃ' 2. 'ಲೋಕೇ ಮಾಯಾವಿಶಾರದಾಃ'
3. 'ಮಾನ್ಯಾನಾಮವಮಾನಿನಃ' ಎಂದು ಮಹಾಭಾರತದ ಪಾಠಗಳು.

೩೯-೪೦. (ಜ್ಞಾನಿಯ ಯೋಗ್ಯತೆಯನ್ನು) ಬಲ್ಲ ವಿದ್ವಾಂಸರು ಅವನನ್ನು ಗೌರವಿಸಿದರೆ ಅದು ರೆಪ್ಪೆಗಳನ್ನು ಮುಚ್ಚಿಬಿಟ್ಟು ಮಾಡುವಂತೆ ಲೋಕದಲ್ಲಿ ಸಹಜವಾದ ನಡೆವಳಿಕೆಯೆಂದು ಮಾನಿತನಾದ (ಜ್ಞಾನಿಯು ತಿಳಿಯಬೇಕು). ಹಾಗೆಯೇ ಅಧರ್ಮಿಷ್ಠರಾದ, ಲೌಕಿಕಶಾಸ್ತ್ರೀಯನಡೆ ವಳಿಕೆಗಳ ಅರಿವಿಲ್ಲದ ಮೂಢರು ಗೌರವಕ್ಕೆ ತಕ್ಕವನನ್ನು ಗೌರವಿಸದೆ ಇರುವಾಗ ಅದೂ ಸಹ ಅಜ್ಞಾನಿಗಳ ಸ್ವಭಾವವೆಂದೇ ಅರಿಯಬೇಕು.

(ಭಾಷ್ಯ)

ಕಥಂ ತರ್ಹಿ ಮಾನಿತೇನಾವಮಾನಿತೇನ ವಾ ಮನ್ತವ್ಯಮಿತ್ಯಾಹ ಶ್ಲೋಕ ದ್ವಯೇನ- ಯದಿದಂ ವಿದ್ವಾಂಸೋ ಬ್ರಹ್ಮವಿದಂ ಮಾನಯನ್ತಿ ಇತಿ ತತ್ರೈಷಾಂ ನಿಮೇಷೋನ್ಮೇಷವತ್ ಸ್ವಭಾವವೃತ್ತಿಃ ಸ್ವಾಭಾವಿಕೀ ಪ್ರವೃತ್ತಿಃ ಇತಿ ಮನ್ಯೇತ। ತಥಾ ಅವಮಾನಿತೋ ಜನೈರವಜ್ಞಾತೋ ವಿದ್ವಾನೇವಂ ಮನ್ಯೇತ । ಅಧರ್ಮ ವಿದುಷೋ ಮೂಢಾಃ ವಿವೇಕಹೀನಾಃ ಲೋಕಶಾಸ್ತ್ರವಿವರ್ಜಿತಾಃ ನ ಮಾನ್ಯಂ ಮಾನಾರ್ಹಂ ಮಾನಯಿಷ್ಯನ್ತಿ ಮಾನ್ಯಮಪಿ ನ ಮಾನಯಿಷ್ಯನ್ತಿ ಇತ್ಯೇತ ದವಿದುಷಾಂ ಸ್ವಭಾವಃ ಇತಿ ಮನ್ಯೇತ ಅಮಾನಿತಃ ಅಪೂಜಿತೋ ವಿದ್ವಾನ್ ॥

(ಭಾಷ್ಯಾರ್ಥ)

ಹಾಗಾದರೆ ಗೌರವಿಸಲ್ಪಡಲಿ, ಗೌರವಿಸಲ್ಪಡದಿರಲಿ, (ಜ್ಞಾನಿಯು) ಏನೆಂದು ತಿಳಿಯಬೇಕು ? ಎಂಬುದನ್ನು ಎರಡು ಶ್ಲೋಕಗಳಿಂದ ಹೇಳುತ್ತಾನೆ- ಬ್ರಹ್ಮ ವಿದನನ್ನು ವಿದ್ವಾಂಸರು ಗೌರವಿಸುತ್ತಾರೆಂಬುದಿದೆಯಲ್ಲ, ಅದು ಅವರ ಸಹಜ ವಾದ ವೃತ್ತಿಯು ಎಂದರೆ ಕಣ್ಣುರೆಪ್ಪೆಗಳನ್ನು ಮುಚ್ಚಿಬಿಡುವಂತೆ ಸ್ವಾಭಾವಿಕ ವಾದ ಪ್ರವೃತ್ತಿಯು- ಎಂದು ತಿಳಿಯಬೇಕು. ಹಾಗೆಯೇ ಜನರಿಂದ ಅವ ಮಾನಿತನಾದ ಎಂದರೆ ತಿರಸ್ಕೃತನಾದ ಜ್ಞಾನಿಯು ಹೀಗೆ ತಿಳಿಯಬೇಕು. (ಹೇಗೆಂದರೆ) ಅಧರ್ಮವನ್ನು ಬಲ್ಲವರಾದ ವಿವೇಕಹೀನರಾದ, ಲೌಕಿಕ ಮತ್ತು ಶಾಸ್ತ್ರೀಯ ಆಚರಣೆಗಳನ್ನರಿಯದ ಮೂಢರು ಗೌರವಕ್ಕೆ ತಕ್ಕ ಮಾನ್ಯನಾದವ ನನ್ನು, ಅವನು ಗೌರವಾರ್ಹನಾಗಿದ್ದರೂ ಗೌರವಿಸುವದಿಲ್ಲ, ಪೂಜಿಸುವದಿಲ್ಲ- ಎಂಬಿದೂಕೂಡ ಅವಿದ್ವಾಂಸರ ಸ್ವಭಾವವು ಎಂದು ಅಮಾನಿತನಾದ ಎಂದರೆ ಪೂಜಿಸಲ್ಪಡದಿರುವ ಜ್ಞಾನಿಯು ತಿಳಿಯಬೇಕು.

ನ ವೈ ಮಾನಶ್ಚ[1] ಮೌನಂ ಚ ಸಹಿತೌ ವಸತಃ ಸದಾ
ಅಯಂ ಮಾನಸ್ಯ ವಿಷಯೋ[2] ಹ್ಯಸೌ ಮೌನಸ್ಯ ತದ್ವಿದುಃ ॥೪೧॥

1. 'ಮಾನಂ ಚ'
2. 'ಅಯಂ ಹಿ ಲೋಕೋ ಮಾನಸ್ಯ' ಎಂದು ಮಹಾಭಾರತದ ಪಾಠಗಳು.

೪೦. ಮಾನವೂ ಮೌನವೂ ಜೊತೆಗೂಡಿ ವಾಸಮಾಡಲಾರವು. ಈ ಲೋಕವು ಮಾನಕ್ಕೆ ವಿಷಯವು. ಪರಲೋಕವು ಮೌನಕ್ಕೆ ವಿಷಯುವೆಂದು ಬಲ್ಲವರು ಹೇಳುವರು.

## ಮಾನಮೌನಗಳ ತತ್ತ್ವ

(ಭಾಷ್ಯ)

ಇದಾನೀಂ ಮಾನಮೌನಯೋರ್ಭಿನ್ನವಿಷಯತ್ವಮಾಹ– ನ ವೈ ಮಾನಶ್ಚ ಮೌನಂ ಚ ಸಹಿತೌ ಏಕತ್ರ ವಸತಃ | ಸದಾ ಅಯಂ ಹಿ ಪ್ರತ್ಯಕ್ಷಾದಿಗೋಚರೋ ಲೋಕೋ ಲೋಕ್ಯತೇ ಇತಿ ಪ್ರಪಞ್ಚೋ ಮಾನಸ್ಯ ವಿಷಯ ಇತ್ಯರ್ಥಃ | ಅಸೌ ಪರಲೋಕೋ ಮೌನಸ್ಯ, ಕೋಽಸೌ ತತ್ ವಿದುಃ ತದಿತಿ ಬ್ರಹ್ಮಣೋ ನಾಮ | ತಥಾಹ ಭಗವಾನ್– "ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ' (ಗೀ. ೧೭–೨೩) ಇತಿ | ತಥಾ ಚಾನುಗೀತಾಸು– 'ಓಂ ತತ್ಸದ್ವಿಷ್ಣವೇ ಚೇತಿ ಸಾಯುಜ್ಯಾದಿಪ್ರದಾನಿ ವೈ' ಇತಿ | ತಚ್ಛಬ್ದವಾಚ್ಯಂ ಬ್ರಹ್ಮ ಮೌನಸ್ಯ ವಿಷಯ ಇತ್ಯರ್ಥಃ | ಏತದುಕ್ತಂ ಭವತಿ– ಮಾನಾತ್ಸಂಸಾರಪ್ರಾಪ್ತಿಃ, ಮೌನೇನ ಬ್ರಹ್ಮಪ್ರಾಪ್ತಿರಿತಿ | ಉಕ್ತಂ ಚ ಹೈರಣ್ಯಗರ್ಭೇ– 'ಅನ್ನಾಙ್ಗನಾದಿಭೋಗೇಷು ಭಾವೋ ಮಾನ ಇತಿ ಸ್ಮೃತಃ | ಬ್ರಹ್ಮಾನನ್ದಸುಖಪ್ರಾಪ್ತಿಹೇತುರ್ಮೌನಮಿತಿ ಸ್ಮೃತಃ' ಇತಿ ||

(ಭಾಷ್ಯಾರ್ಥ)

ಈಗ ಮಾನ (ಗೌರವ) ಮೌನ (ಆತ್ಮನಿಷ್ಠೆ)ಗಳು ಬೇರೆಬೇರೆಯೆಂಬುದನ್ನು ಹೇಳುತ್ತಾನೆ : ಮಾನವೂ ಮೌನವೂ ಜೊತೆಯಾಗಿ ಒಂದೇಕಡೆಯಲ್ಲಿ ವಾಸಮಾಡುವದಿಲ್ಲ. ಯಾವಾಗಲೂ ಪ್ರತ್ಯಕ್ಷವೇ ಮುಂತಾದ (ಪ್ರಮಾಣಗಳಿಗೆ) ಗೋಚರವಾಗಿರುವ ಲೋಕವು ಎಂದರೆ ನೋಡಲ್ಪಡುವದಾಗಿರುವ ಈ ಪ್ರಪಂಚವು ಮಾನಕ್ಕೆ ವಿಷಯವು ಎಂದಭಿಪ್ರಾಯ. ಅದು ಪರಲೋಕವು ಮೌನಕ್ಕೆ (ವಿಷಯವು). ಅದು ಯಾವದು ? ತತ್ ಎಂಬುದು (ಎಂದು) ಹೇಳುವರು. ತತ್ ಎಂದರೆ ಬ್ರಹ್ಮದ ಹೆಸರು. ಭಗವಂತನೂಕೂಡ 'ಓಂ, ತತ್, ಸತ್, ಎಂದು ಬ್ರಹ್ಮಕ್ಕೆ ಮೂರುವಿಧವಾದ ನಿರ್ದೇಶವು ಹೇಳಲ್ಪಟ್ಟಿರುವದು ಎಂದು ಹೇಳಿರುತ್ತಾನೆ. ಮತ್ತು ಅನುಗೀತೆಗಳಲ್ಲಿ 'ಓಂ ತತ್ಸದ್ ವಿಷ್ಣವೇ' ಎಂಬಿವುಗಳು ಮುಕ್ತಿಯೇ (ಮುಂತಾದ) ಫಲಗಳನ್ನು ಕೊಡತಕ್ಕವು ಎಂದು (ಹೇಳಿದೆ.) ತತ್ ಎಂಬ ಶಬ್ದಕ್ಕೆ ವಾಚ್ಯವಾದ ಬ್ರಹ್ಮವು ಮೌನಕ್ಕೆ ವಿಷಯವೆಂದರ್ಥ. ಇಷ್ಟನ್ನು ಹೇಳಿದಂತಾಗಿದೆ : ಮಾನದಿಂದ ಸಂಸಾರವು ದೊರಕುವದು. ಮೌನದಿಂದ

ಬ್ರಹ್ಮದ ಪ್ರಾಪ್ತಿಯಾಗುವದು (ಎಂದಾಯಿತು).[1] ಹೈರಣ್ಯಗರ್ಭ (ಸ್ಮೃತಿ) ಯಲ್ಲಿ[2] 'ಅನ್ನ, ಸ್ತ್ರೀ-ಮುಂತಾದ ಭೋಗಗಳಲ್ಲಿ ಭಾವನೆಯಿರುವದು ಮಾನ ವೆನಿಸುವದು. ಬ್ರಹ್ಮಾನಂದಸುಖದ ಪ್ರಾಪ್ತಿಗೆ ಕಾರಣವಾದದ್ದು ಮೌನವೆನಿಸು ವದು' ಎಂದು ಹೇಳಿದೆ.

**ಶ್ರೀರ್ಹಿ ಮಾನಾರ್ಥಸಂವಾಸಾತ್[3] ಸಾ ಚಾಪಿ ಪರಿಪನ್ಥಿನೀ ।**
**ಬ್ರಾಹ್ಮೀ ಸುದುರ್ಲಭಾ ಶ್ರೀರ್ಹಿ ಪ್ರಜ್ಞಾಹೀನೇನ ಕ್ಷತ್ರಿಯ ॥ ೪೨ ॥**

೪೨. ಎಲೈ ಕ್ಷತ್ರಿಯನೆ, ಗೌರವ(ವೇ ಮುಂತಾದ ವಿಷಯವಾದ) ಲಕ್ಷ್ಮಿಯು (ಸಂಸಾರಗೋಚರವಾದದ್ದು). ಅದು (ಶ್ರೇಯೋಮಾರ್ಗಕ್ಕೆ ವಿರೋಧವಾದುದು. ಪ್ರಜ್ಞಾಹೀನನಾದವನಿಗೆ ಬ್ರಾಹ್ಮೀ ಶ್ರೀಯು ದುರ್ಲಭವೇ ಸರಿ.

( ಭಾಷ್ಯ )

ಇದಾನೀಂ ಮಾನಾರ್ಥಸಂವಾಸೇ ಅಪವರ್ಗಾಭಾವಂ ದರ್ಶಯತಿ- ಹೇ ಕ್ಷತ್ರಿಯ, ಮಾನಾರ್ಥಸಂವಾಸಾತ್ ಮಾನವಿಷಯಸಂವಾಸಾತ್ ಮಾನ ಗೋಚರಪ್ರಪಞ್ಚೇ ಪರಿವರ್ತಮಾನಸ್ಯ ಸ್ವರ್ಗಪಶ್ವನ್ನಾದ್ಯಾದಿಸಾಧನಭೂತಂ ಕರ್ಮ ಅನುತಿಷ್ಠತಃ ವಿಷಯವಿಷಾನ್ಧಸ್ಯ ಶ್ರೀರ್ಹಿ ಭವತಿ । ಸಾ ಚಾಪಿ ಶ್ರೀಃ ಪರಿಪನ್ಥಿನೀ ಶ್ರೇಯೋಮಾರ್ಗವಿರೋಧಿನೀ । ತಥಾ ಚ ಮೋಕ್ಷಧರ್ಮೇ- 'ನಿಬನ್ಧಿನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ । ಛಿತ್ತ್ವೈನಾಂ ಸುಕೃತೋ ಯಾನ್ತಿ ನೈವಂ ಛಿನ್ದನ್ತಿ ದುಷ್ಕೃತಃ' ಇತಿ । ಯ ಏವಂ ಶ್ರಿಯಾಭಿ- ಭೂತೋ ಮೂಢಃ ಸನ್ ವಿಷಯೇಷು ಪ್ರವರ್ತತೇ ತೇನ ಪ್ರಜ್ಞಾಹೀನೇನ ವಿದ್ಯಾಹೀನೇನ ಬ್ರಾಹ್ಮೀ ಬ್ರಹ್ಮಾನನ್ದಲಕ್ಷಣಾ ಶ್ರೀಃ ಸುದುರ್ಲಭಾ । ತಥಾ ಚ ಹೈರಣ್ಯಗರ್ಭೇ- "ಯಾ ನಿತ್ಯಾ ಚಿದ್ಘನಾನನ್ದಾ ಗುಣರೂಪವಿವರ್ಜಿತಾ । ಅನನ್ಯಾಖ್ಯಾ ಪರಾ ಶುದ್ಧಾ ಬ್ರಾಹ್ಮೀ ಶ್ರೀರಿತಿ ಕಥ್ಯತೇ" ಇತಿ । ಸಾ ಚ ಸುದುರ್ಲಭಾ ಶ್ರವಣಾಯಾಪಿ ನ ಶಕ್ಯಾ । ತಥಾ ಚ ಶ್ರುತಿಃ- 'ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ' (ಕಾ. ೧-೨-೭) ಇತಿ ॥

---

1. ಗೌರವ, ಕೀರ್ತಿ, ಪ್ರತಿಷ್ಠೆ- ಮುಂತಾದವುಗಳು ಸಂಸಾರಫಲಗಳು. ಮನನ, ಆತ್ಮನಿಷ್ಠೆ- ಮುಂತಾದವುಗಳು ಮೋಕ್ಷಫಲಗಳು- ಎಂದಭಿಪ್ರಾಯ.

2. 'ಹಿರಣ್ಯಗರ್ಭೇ' ಎಂದಿಷ್ಟೇ ಇದೆಯಾದರೂ ಇದೊಂದು ಸ್ಮೃತಿಗ್ರಂಥ ವಾಗಿರಬಹುದೆಂತ ಭಾವಿಸಿದೆ.

3. 'ಶ್ರೀಃ ಸುಖಸ್ಯೇಹ ಸಂವಾಸಃ' ಎಂದು ಮಹಾಭಾರತದ ಪಾಠ.

( ಭಾಷ್ಯಾರ್ಥ )

ಈಗ ಗೌರವ(ವೆಂಬ ಪ್ರಯೋಜನವನ್ನು ಬಯಸುವವನಿಗೆ) ಮೋಕ್ಷವು ಸಿಗಲಾರದೆಂದು ತಿಳಿಸುತ್ತಾರೆ :- ಎಲೈ ಕ್ಷತ್ರಿಯನೆ, ಗೌರವವಿಷಯಕವಾದ ಸಂವಾಸವು ಮಾನಾರ್ಥಸಂವಾಸವು- ಎಂದರೆ ಇರುವಿಕೆಯು ; ಇದು ಪೂಜಾ (ಗೌರವಗಳ) ರೂಪವಾದ ಪ್ರಪಂಚದಲ್ಲಿ ತಿರುಗುತ್ತಿರುವ (ಮತ್ತು) ವಿಷಯ ಗಳೆಂಬ ವಿಷದಿಂದ ಕುರುಡನಾಗಿ ಸ್ವರ್ಗ, ಪಶು, ಅನ್ನ- ಮುಂತಾದವುಗಳಿಗೆ ಸಾಧನವಾದ ಕರ್ಮವನ್ನು ಮಾಡುತ್ತಿರುವವನಿಗೆ (ಈ) ಶ್ರೀಯು ಉಂಟಾಗು ವದು. ಮತ್ತು ಆ ಶ್ರೀ ಎಂಬುದು ಅಡ್ಡಿಯಾಗಿರುವದು ; ಮೋಕ್ಷದ ಹಾದಿಗೆ ವಿರುದ್ಧವಾಗಿರುವದು. ಹೀಗೆಂದು ಮೋಕ್ಷಧರ್ಮದಲ್ಲಿಯೂಕೂಡ- "ಊರಿನಲ್ಲಿ ವಾಸಮಾಡುವವನಿಗೆ ಉಂಟಾಗಬಹುದಾದ ಪ್ರೀತಿಯು (ಮೋಕ್ಷಕ್ಕೆ) ಅಡ್ಡಿ ಯಾಗಿರುವ ಹಗ್ಗವೇ ಸರಿ. ಪುಣ್ಯವಂತರಾದವರು ಇದನ್ನು ಕತ್ತರಿಸಿಕೊಂಡು ಹೋಗಬಲ್ಲರು. ದುಷ್ಕರ್ಮಿಗಳು ಕತ್ತರಿಸಲಾರರು" ಎಂದು ( ಹೇಳಿದೆ ). ಯಾವನು ಹೀಗೆ (ಅನಾತ್ಮರೂಪವಾದ) ಶ್ರೀಯಿಂದ ಆವರಿಸಲ್ಪಟ್ಟವನಾಗಿ ಮೂಢನಾಗಿ ವಿಷಯಗಳಲ್ಲಿ ಪ್ರವರ್ತಿಸುವನೋ ಆ ಪ್ರಜ್ಞಾಹೀನನಾದ ಎಂದರೆ ವಿದ್ಯಾಹೀನನಾದ ಅವನಿಂದ ಬ್ರಹ್ಮಾನಂದರೂಪವಾದ ಬ್ರಾಹ್ಮೀಶ್ರೀಯು ಪಡೆಯಲಸಾಧ್ಯವಾದುದು. ಮತ್ತು ಹೈರಣ್ಯಗರ್ಭ(ಸ್ಮೃತಿ)ಯಲ್ಲಿಯೂ 'ನಿತ್ಯ ವಾದ ಚಿದ್ಘನವೂ ಆನಂದರೂಪವೂ ಆದ ಗುಣ, ರೂಪ- ಇವುಗಳಿಲ್ಲದ ಪರವಾದ, ಶುದ್ಧವಾದ ಆನಂದವೆಂಬ ಹೆಸರಿನ (ಯಾವ ಶ್ರೀಯುಂಟೋ) ಅದನ್ನು ಬ್ರಾಹ್ಮೀ ಶ್ರೀ ಎಂದು ಹೇಳುವರು' ಎಂದು (ಹೇಳಿದೆ). ಅದಾದರೋ ಕಿವಿಯಲ್ಲಿ-ಕೇಳು ವದಕ್ಕೂ ದುರ್ಲಭವಾದದ್ದು. ಶ್ರುತಿಯೂಕೂಡ - 'ಬಹಳವಾದ ಶ್ರವಣ ಗಳಿಂದಲೂ ಯಾವನು ದೊರಕಲಾರನೋ' ಎಂದು ಹೇಳುತ್ತಿದೆ.

## ಬ್ರಹ್ಮಶ್ರೀದ್ವಾರಗಳು

**ದ್ವಾರಾಣಿ ಸಮ್ಯಕ್ ಪ್ರವದನ್ತಿ[1] ಸನ್ತೋ**
**ಬಹುಪ್ರಕಾರಾಣಿ ದುರಾಚರಾಣಿ[2] ।**
**ಸತ್ಯಾರ್ಜವೇ ಹ್ರೀರ್ದಮಶೌಚವಿದ್ಯಾಃ**
**ಷಣ್ಮಾನಮೋಹಪ್ರತಿಬನ್ಧಕಾನಿ[3] ॥ ೪೩ ॥**

೪೩. ಸತ್ಪುರುಷರು (ಬ್ರಾಹ್ಮೀಶ್ರೀಪ್ರಾಪ್ತಿಗೆ) ನಾನಾರೀತಿಯಾದ ಅನುಷ್ಠಾನಮಾಡಲು ಕಷ್ಟಸಾಧ್ಯವಾದ ದ್ವಾರಗಳನ್ನು ಚೆನ್ನಾಗಿ ಹೇಳು

1. 'ತಸ್ಯೇಹ ವದನ್ತಿ' 2. 'ದುರಾಧರಾಣಿ'
3. 'ಯಥಾ ನ ಮೋಹಪ್ರತಿಬೋಧನಾನಿ' ಎಂದು ಮ॥ ಭಾ॥ ಪಾಠಗಳು.

ವರು. ಸತ್ಯ, ಸರಳತನ, ನಾಚಿಕೆ, ಅಂತರಿಂದ್ರಿಯಗಳ ನಿಗ್ರಹ, ಶೌಚ, ವಿದ್ಯೆ- ಈ ಆರು ಮಾನ, ಮೋಹಗಳನ್ನು ತಡೆಯುವ (ಸಾಧನಗಳೆಂದೂ ಬ್ರಹ್ಮಲಕ್ಷ್ಮೀಪ್ರವೇಶದ್ವಾರಗಳೆಂದೂ ತಿಳಿಯಬೇಕು.)

( ಭಾಷ್ಯ )

ಇದಾನೀಂ ಬ್ರಹ್ಮಲಕ್ಷ್ಮೀಪ್ರವೇಶದ್ವಾರಾಣಿ ದರ್ಶಯತಿ । ದ್ವಾರಾಣಿ ಬ್ರಹ್ಮಲಕ್ಷ್ಮೀಪ್ರವೇಶದ್ವಾರಾಣಿ ಸಮ್ಯಕ್ ಪ್ರವದನ್ತಿ ಸನ್ತಃ ಬಹುಪ್ರಕಾರಾಣಿ ದುರಾಚರಾಣಿ ದುಃಖಾಚರಣಾನಿ । ಕಾನಿ ತಾನಿ ? ಸತ್ಯಾರ್ಜವೇ ಸತ್ಯಂ ಯಥಾರ್ಥಸಂಭಾಷಣಂ ಭೂತಹಿತಂ ಚ । ಆರ್ಜವಮ್ ಅಕೌಟಿಲ್ಯಮ್ । ಹ್ರೀಃ ಅಕಾರ್ಯಕರಣೇ ಲಜ್ಜಾ । ದಮಶೌಚವಿದ್ಯಾಃ ದಮಃ ಅನ್ತಃಕರಣೋಪರತಿಃ । ಬಹಿಃಕರಣೋಪರತಿರಿತಿ ಕೇಚಿತ್ । ಶೌಚಂ ಕಲ್ಮಷಪ್ರಕ್ಷಾಲನಮ್ । ವಿದ್ಯಾ ಬ್ರಹ್ಮವಿದ್ಯಾ । ಏತಾನಿ ಷಟ್ ಮಾನಮೋಹಪ್ರತಿಬನ್ಧಕಾನಿ ॥

( ಭಾಷ್ಯಾರ್ಥ )

ಈಗ ಬ್ರಹ್ಮಲಕ್ಷ್ಮೀಪ್ರವೇಶದ ಬಾಗಿಲುಗಳನ್ನು ತಿಳಿಸುತ್ತಾನೆ : ಸಂತರು ಬ್ರಹ್ಮಲಕ್ಷ್ಮಿಯ ಪ್ರವೇಶದ್ವಾರಗಳನ್ನು- ಬಾಗಿಲುಗಳನ್ನು ಚೆನ್ನಾಗಿ ತಿಳಿಸುತ್ತಾರೆ. (ಅವು) ಅನೇಕಪ್ರಕಾರವಾಗಿಯೂ ದುರಾಚರಣಗಳು- ಎಂದರೆ ಕಷ್ಟದಿಂದ ಆಚರಿಸಲ್ಪಡುವವಾಗಿಯೂ (ಇವೆ). ಅವು ಯಾವವು ? ಎಂದರೆ ಸತ್ಯ ಮತ್ತು ಸರಳತೆ. ಸತ್ಯವೆಂದರೆ ಇದ್ದದ್ದನ್ನು ಇದ್ದಂತೆಯೇ ಹೇಳುವದು. ಮತ್ತು ಪ್ರಾಣಿಗಳಿಗೆ ಹಿತವಾಗಿರತಕ್ಕದ್ದು ; ಆರ್ಜವವೆಂದರೆ ವಕ್ರತೆಯಿಲ್ಲದಿರುವದು. ಹ್ರೀಃ ಎಂದರೆ ಮಾಡಬಾರದ್ದನ್ನು ಮಾಡುವದರಲ್ಲಿ ನಾಚಿಕೆ. ದಮಶೌಚವಿದ್ಯೆಗಳು ಎಂಬಲ್ಲಿ ದಮವೆಂದರೆ ಅಂತಃಕರಣದ ಹಿಡಿತವು, ಸಮಾಧಾನವು ; (ದಮವೆಂದರೆ) ಹೊರಗಿನ ಇಂದ್ರಿಯಗಳ ನಿಗ್ರಹವೆಂದೂ ಕೆಲವರ (ಮತ). ಶೌಚವೆಂದರೆ ಕೊಳೆಯನ್ನು ತೊಳೆದುಕೊಳ್ಳುವದು. ವಿದ್ಯೆ ಎಂದರೆ ಬ್ರಹ್ಮವಿದ್ಯೆ. ಈ ಆರು ಮಾನಮೋಹಗಳನ್ನು ತಡೆಯುವ ಸಾಧನಗಳು (ಎಂದಭಿಪ್ರಾಯ.)

॥ ಇತಿ ಸನತ್ಸುಜಾತೀಯೇ ಪ್ರಥಮೋಽಧ್ಯಾಯಃ ॥

ಸನತ್ಸುಜಾತೀಯದಲ್ಲಿ ಒಂದನೆಯ ಅಧ್ಯಾಯವು ಮುಗಿಯಿತು.

# ಎರಡನೆಯ ಅಧ್ಯಾಯ

## ಧೃತರಾಷ್ಟ್ರನ ಪ್ರಶ್ನೆ

**ಧೃತರಾಷ್ಟ್ರ ಉವಾಚ—**

**ಕಸ್ಯೈಷ ಮೌನಃ ಕತರನ್ನು ಮೌನಂ**
**ಪ್ರಬ್ರೂಹಿ ವಿದ್ವನ್ ಇಹ ಮೌನಭಾವಮ್ ।**
**ಮೌನೇನ ವಿದ್ವಾನುಪಯಾತಿ[1] ಮೌನಂ**
**ಕಥಂ ಮುನೇ ಮೌನಮಿಹಾಚರನ್ತಿ ॥ ೧ ॥**

೧. ಧೃತರಾಷ್ಟ್ರನಿಂತೆಂದನು : ಎಲೈ ವಿದ್ವಾಂಸನೆ, ಈ ಮೌನವು ಯಾವನಿಗೆ ? ಮೌನವೆಂಬುದು (ಇವೆರಡರಲ್ಲಿ) ಯಾವದು ? ಮೌನಭಾವವನ್ನು ಇಲ್ಲಿ ಹೇಳುವವನಾಗು. ಜ್ಞಾನಿಯು ಮೌನದಿಂದ ಮೌನವನ್ನು ಪಡೆಯುವನೊ, ಹೇಗೆ ? ಎಲೈ ಮುನಿಯೆ, ಇಲ್ಲಿ ಮೌನವನ್ನು ಹೇಗೆ ಆಚರಿಸುತ್ತಾರೆ ?

**(ಭಾಷ್ಯ)**

**'ಅಯಂ ಮಾನಸ್ಯ' ಇತ್ಯಾದಿನಾ ಮೌನಮಾಹಾತ್ಮ್ಯಂ ಪ್ರದರ್ಶಿತಂ ಶ್ರುತ್ವಾ ಪ್ರಾಹ ಧೃತರಾಷ್ಟ್ರಃ– ಕಸ್ಯ ಕೀದೃಶಸ್ಯ ಏಷಃ ಪೂರ್ವೋಕ್ತೋ ವಾಗಾದ್ಯುಪರತಿಲಕ್ಷಣೋ ಮೌನಃ ಭವತಿ ? ಕತರನ್ನು ಏತಯೋರಸಂಭಾಷಣಾತ್ಮಸ್ವರೂಪಯೋಃ ಮೌನಂ ಪ್ರಬ್ರೂಹಿ ಹೇ ವಿದ್ವನ್, ಇಹ ಮೌನಭಾವಂ ಮೌನಸ್ಯ ಸ್ವಭಾವಂ ಮೌನೇನ ತೂಷ್ಣೀಂಭಾವೇನ ವಿದ್ವಾನುಪಯಾತಿ ಮೌನಂ ಬ್ರಹ್ಮ, ಆಹೋಸ್ವಿದನ್ಯೇನ ? ಕಥಂ ಮುನೇ ಮೌನಮಿಹಾಚರನ್ತಿ ? ॥**

**(ಭಾಷ್ಯಾರ್ಥ)**

**'ಈ ಲೋಕವು ಮಾನವಿಷಯವು' ಎಂದು ಮುಂತಾಗಿ (ಮಾನಕ್ಕಿಂತ) ಮೌನದ ಹೆಚ್ಚುಗಾರಿಕೆಯನ್ನು ತೋರಿಸಿದ್ದನ್ನು ಕೇಳಿದ ಧೃತರಾಷ್ಟ್ರನು ಹೇಳುತ್ತಾನೆ– ಎಂಥವನಿಗೆ, ಯಾವನಿಗೆ ಈ ಹಿಂದೆ ಹೇಳಿದ ವಾಕ್ಕೇ ಮುಂತಾದವುಗಳ ಸಂಯಮರೂಪವಾದ ಮೌನವು ಉಂಟಾಗುತ್ತದೆ ? ಮಾತಾಡದಿರುವದು, ಆತ್ಮಸ್ವರೂಪವನ್ನೇ (ಮನನಮಾಡುವದು)– ಈ ಎರಡರಲ್ಲಿ ಮೌನವೆಂಬುದು (ನಿಜವಾಗಿ) ಯಾವದು ?[2] ಎಲೈ ಶಾಸ್ತ್ರಜ್ಞನೆ, ಮೌನವನ್ನು ಕುರಿತು ಹೇಳು. ಇಲ್ಲಿ**

---

1. 'ಉತ ಯಾತಿ' ಎಂದು ಮಹಾಭಾರತದ ಪಾಠ.
2. ಇದೇ ಗ್ರಂಥದ ೨–೪೪ನೆಯ ಶ್ಲೋಕವನ್ನು ನೋಡಿರಿ.

ಮೌನಭಾವವನ್ನು ಎಂದರೆ ಮೌನದ ಸ್ವಭಾವವನ್ನು (ತಿಳಿಸುವನಾಗು) ಸುಮ್ಮ ನಿರುವಿಕೆ ಎಂಬ ಮೌನದಿಂದ ವಿದ್ವಾಂಸನು ಮೌನವೆಂಬ ಬ್ರಹ್ಮವನ್ನು ಪಡೆ ಯುವನೊ ? ಅಥವಾ ಬೇರೆಯ (ಸಾಧನದಿಂದಲೊ ?) ಎಲೈ ಮುನಿಯೆ, ಇಲ್ಲಿ ಮೌನವನ್ನು (ಬಲ್ಲವರು) ಹೇಗೆ ನಡೆಯುತ್ತಾರೆ ?

## ಪರಮಾತ್ಮನೇ ನಿಜವಾದ ಮೌನವು

**ಸನತ್ಸುಜಾತ ಉವಾಚ—**

**ಯತೋ ನ ವೇದಾ ಮನಸಾ ಸಹೈನ-**
**ಮನುಪ್ರವಿಶ್ಯನ್ತಿ[1] ತತೋಽಥ ಮೌನಮ್ ।**
**ಯತ್ರೋತ್ಥಿತೋ ವೇದಶಬ್ದಸ್ತಥಾಽಯಂ**
**ಸ ತನ್ಮಯತ್ವೇನ ವಿಭಾತಿ ರಾಜನ್ ॥ ೨ ॥**

೨. ಸನತ್ಸುಜಾತನಿಂತೆಂದನು : ಎಲೈ ರಾಜನೆ, ವೇದಗಳು ಮನಸ್ಸಿ ನೊಡನೆ (ಇವನನ್ನು) ಪ್ರವೇಶಮಾಡಲಾರವಾದ್ದರಿಂದ (ಪರಮಾತ್ಮನೇ) ಮೌನವು. ಹಾಗೆಯೇ ವೇದಶಬ್ದವು ಎಲ್ಲಿ ಹುಟ್ಟಿರುವದೋ ಅವನು, ತನ್ಮಯನಾಗಿರುವನೆಂದು ನಮಗೆ ತಿಳಿದುಬಂದಿದೆ.

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್– ಯತಃ ಯಸ್ಮಾದ್ ವೇದಾ ಮನಸಾ ಸಹ ಏನಂ ಪರಮಾತ್ಮಾನಂ ನಾನುಪ್ರವಿಶ್ಯನ್ತಿ (?) । ತಥಾ ಚ ಶ್ರುತಿಃ– 'ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ' (ತೈ. ೨–೯) ಇತಿ । ತತಃ ತಸ್ಮಾದೇವ ಕಾರಣಾತ್ ಸ ಏವ ವಾಚಾಮಗೋಚರಃ ಪರಮಾತ್ಮಾ ಮೌನಮ್ । ಯದ್ಯೇವಂ ಕಿಂಲಕ್ಷಣಸ್ತರ್ಹಿ ಪರಮಾತ್ಮಾ ? ತತ್ರಾಹ– ಯತ್ರೋತ್ಥಿತೋ ವೇದಶಬ್ದಃ ಯಸ್ಮಿನ್ ಅರ್ಥೇ ನಿಮಿತ್ತಭೂತೇ ಸಮುತ್ಥಿತೋ ವೇದಶಬ್ದಃ ಶಾಸ್ತ್ರಾದಿಕಾರಣಂ ಬ್ರಹ್ಮ ಇತ್ಯರ್ಥಃ ಅಥವಾ ಯಸ್ಮಿನ್ ಸಂವೇದನಾಖ್ಯೇ ಉತ್ಥಿತೋ ವಾಚಕತ್ವೇನ ಪ್ರಯುಕ್ತೋ ವೇದಶಬ್ದ ಇತ್ಯರ್ಥಃ । ತಥಾ ವೇದಶಬ್ದಪ್ರತಿಪಾದ್ಯಃ ಸಂವಿದ್ರೂಪಃ ಅಯಂ ಪರಮಾತ್ಮಾ । ಯದಿ ವಾಚಾಮಗೋಚರಃ ಪರಮಾತ್ಮಾ, ಕಥಮೇತದವಗಮ್ಯತೇ ಸಂವಿದ್ರೂಪಃ ಪರಮಾತ್ಮೇತಿ ? ತತ್ರಾಹ– ಸ ಪರಮಾತ್ಮಾ ತನ್ಮಯತ್ವೇನ ಜ್ಯೋತಿರ್ಮಯ

1. 'ಅನುಪ್ರವಿಶನ್ತಿ' ಎಂದು ಅಚ್ಚಿನ ಮಹಾಭಾರತದ ಪಾಠ. ಇದೇ ವ್ಯಾಕರಣದ ಪ್ರಕಾರ ಸರಿಯೆಂತ ತೋರುತ್ತದೆ. ಆದರೆ ಭಾಷ್ಯದಲ್ಲಿಯೂ 'ಪ್ರವಿಶ್ಯನ್ತಿ' ಎಂದೇ ಇರುವದು ಬರೆದವರ ಕೈತಪ್ಪಿನಿಂದ ಆಗಿರಬೇಕು. ಏಕೆಂದರೆ ವಿಶ-ಧಾತು ಆರನೆಯ ಗಣವಾಗಿದ್ದು 'ಯ'ಕಾರ ಬರುವ ಸಂಭವವಿರುವದಿಲ್ಲ.

ತ್ವೇನಾಸ್ಮಾಕಂ ವಿಭಾತಿ ರಾಜನ್ | ಏವಮೇವಾಸ್ಮಾಕಮನುಭವಃ ನಾತ್ರ ಅವಿಶ್ವಾಸಃ ಕರ್ತವ್ಯ ಇತ್ಯರ್ಥಃ | ಅಥವಾ ಶ್ರುತಿಸ್ಮೃತೀತಿಹಾಸಪುರಾಣಾದಿಷು ಜ್ಯೋತಿರ್ಮಯತ್ವೇನ ಪ್ರತೀಯತೇ | ತಥಾ ಚ ಶ್ರುತಿಃ– 'ತಂ ದೇವಾ ಜ್ಯೋತಿಷಾಂ ಜ್ಯೋತಿಃ' (ಬೃ. ೪–೪–೧೬) 'ಅನ್ತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯನ್ತಿ ಯತಯಃ ಕ್ಷೀಣದೋಷಾಃ' (ಮುಂ. ೩-೧-೫) ಇತಿ | ತಥಾ ಚ ಭಗವಾನ್– 'ಜ್ಯೋತಿಷಾಮಪಿ ತಜ್ಜ್ಯೋತಿಃ ತಮಸಃ ಪರ ಮುಚ್ಯತೇ' (ಗೀ. ೧೩–೧೭) ಇತಿ ||

( ಭಾಷ್ಯ )

ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಪೂಜ್ಯನು (ಹೇಳುತ್ತಾನೆ): ಯಾವ (ಕಾರಣದಿಂದ) ಮನಸ್ಸಿನೊಡನೆ ವೇದಗಳು ಈ ಪರಮಾತ್ಮನನ್ನು ಪ್ರವೇಶಿಸು ವದಿಲ್ಲ(ಮುಟ್ಟುವದಿಲ್ಲ)ವೋ, (ಎಂಬುದಕ್ಕೆ) ಶ್ರುತಿಯೂಕೂಡ– 'ಯಾವನಿಂದ ಮಾತುಗಳು ಮನಸ್ಸಿನೊಡನೆ ಮುಟ್ಟದೆ ಹಿಂತಿರುಗುವವೋ'– ಎಂದು ಹೇಳು ತ್ತದೆ ; ಆ ಕಾರಣದಿಂದಲೇ ವಾಕ್ಕುಗಳಿಗೆ ಗೋಚರನಾಗದಿರುವ ಆ ಪರ ಮಾತ್ಮನೇ ಮೌನವು. ಹೀಗಾದರೆ ಪರಮಾತ್ಮನೆಂಬುವನು ಯಾವ ಲಕ್ಷಣ ವುಳ್ಳವನು ? ಎಂಬಲ್ಲಿ ಹೇಳುತ್ತಾನೆ : ವೇದಶಬ್ದವು ಎಲ್ಲಿ ಎದ್ದಿರುವದೋ– ಎಂದರೆ ಯಾವ ವಸ್ತುವು ಕಾರಣವಾಗಿರಲಾಗಿ ವೇದಶಬ್ದವು ಹುಟ್ಟಿರುವದೋ ಅದು (ಎಂದರೆ) ಶಾಸ್ತ್ರವೇ ಮುಂತಾದವುಗಳಿಗೆ ಕಾರಣವಾಗಿರುವದು ಬ್ರಹ್ಮವು[1] ಎಂದರ್ಥ. ಅಥವಾ ಯಾವ ಅನುಭವಸ್ವರೂಪವಾದ ಬ್ರಹ್ಮವು ಇರಲಾಗಿ ಅದರ ವಾಚಕವಾಗಿ ಹುಟ್ಟಿರುವ ವೇದಶಬ್ದವು ಅಲ್ಲಿ ಪ್ರಯುಕ್ತವಾಗಿದೆಯೋ ಎಂದಭಿಪ್ರಾಯ. ಹಾಗೆಯೇ ವೇದಶಬ್ದಗಳಿಂದ ಪ್ರತಿಪಾದ್ಯನಾಗಿರುವ ಜ್ಞಾನ ಸ್ವರೂಪನು ಈ ಪರಮಾತ್ಮನು. ವಾಕ್ಕುಗಳಿಗೆ ಈ ಪರಮಾತ್ಮನು ಗೋಚರನಲ್ಲ ವೆಂದಾದರೆ ಪರಮಾತ್ಮನು ಜ್ಞಾನಸ್ವರೂಪನೆಂದು ತಿಳಿದುಬರುವದಾದರೂ ಹೇಗೆ? ಎಂದರೆ ಹೇಳುತ್ತಾನೆ : ಆ ಪರಮಾತ್ಮನು ತನ್ಮಯನಾಗಿ ಎಂದರೆ ಜ್ಯೋತಿ ರ್ಮಯನಾಗಿ ಎಲೈ ರಾಜನೆ, ನಮಗೆ ಕಂಡುಬರುತ್ತಾನೆ. ನಮ್ಮ ಅನುಭವವು ಹೀಗೆಯೇ ಇರುತ್ತದೆ. ಇದರಲ್ಲಿ ಅಪನಂಬಿಕೆಮಾಡಿಕೊಳ್ಳಬಾರದು– ಎಂದರ್ಥ. ಅಥವಾ ಶ್ರುತಿಗಳು, ಸ್ಮೃತಿಗಳು, ಇತಿಹಾಸಪುರಾಣ ಮುಂತಾದವುಗಳಲ್ಲಿ ಜ್ಯೋತಿರ್ಮಯನೆಂದು ಕಂಡುಬಂದಿರುತ್ತಾನೆ. ಶ್ರುತಿಯೂಕೂಡ 'ಜ್ಯೋತಿ ಗಳಿಗೂ ಜ್ಯೋತಿಯಾದ ಅವನನ್ನು ದೇವತೆಗಳು (ಆಯುಸ್ಸೆಂದು ಉಪಾಸನೆ

1. ಶಾಸ್ತ್ರಯೋನಿತ್ವಾತ್' (೧–೧–೩) ಎಂಬ ವೇದಾಂತಸೂತ್ರದ ಅರ್ಥವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

ಮಾಡುವರು'), 'ದೋಷಗಳನ್ನು ಕಳೆದುಕೊಂಡಿರುವ ಸಂನ್ಯಾಸಿಗಳು ಶರೀರದೊಳಗೆ[1] ಯಾವನನ್ನು ನೋಡುವರೋ ಅವನು ಜ್ಯೋತಿರ್ಮಯನೂ ಶುಭ್ರನೂ ಆಗಿರುವನು' ಎಂದೂ ಹೇಳುತ್ತಿದೆ. ಭಗವಂತನೂಕೂಡ– ಅದು 'ಜ್ಯೋತಿಗಳೆಲ್ಲಕ್ಕೂ ಜ್ಯೋತಿಯು, ತಮಸ್ಸಿಗಿಂತಲೂ ಆಚೆಯಿರುವದೆಂದು ಹೇಳಲ್ಪಡುವದು' ಎಂದು (ಹೇಳಿರುತ್ತಾನೆ.)

## ವೇದಸ್ವಭಾವವಿಮರ್ಶೆ

**ಧೃತರಾಷ್ಟ್ರ ಉವಾಚ—**

**ಋಚೋ ಯಜೂಂಷ್ಯಧೀತೇ ಯಃ[2] ಸಾಮವೇದಂ ಚ ಯೋ ದ್ವಿಜಃ[3]**
**ಪಾಪಾನಿ ಕುರ್ವನ್ ಪಾಪೇನ ಲಿಪ್ಯತೇ ನ ಸ[4] ಲಿಪ್ಯತೇ ॥ ೩ ॥**

೩. ಧೃತರಾಷ್ಟ್ರನಿಂತೆಂದನು : ಯಾವ ದ್ವಿಜನು ಋಕ್ಕುಗಳನ್ನೂ ಯಜುಸ್ಸುಗಳನ್ನೂ ಸಾಮವೇದವನ್ನೂ ಅಧ್ಯಯನಮಾಡುವನೋ ಅವನು ಪಾಪಗಳನ್ನು ಮಾಡಿದನಾದರೆ ಆ ಪಾಪದಿಂದ ಅಂಟಲ್ಪಡುವನೊ, ಅಂಟಲ್ಪಡುವದಿಲ್ಲವೊ ?

(ಭಾಷ್ಯ)

**ಇದಾನೀಂ ವೇದಸ್ವಭಾವಪರಿಜ್ಞಾನಾಯ ಪ್ರಾಹ ಧೃತರಾಷ್ಟ್ರಃ– ಯಃ ಪಾಪಾನಿ ಕುರ್ವನ್ ಋಗಾದಿವೇದಮ್ ಅಧೀತೇ ಸ ತೇನ ವೇದಾಧ್ಯಯನೇನ ಪೂಯತೇ ನ ವಾ ? ಏತದ್ವಕ್ತುಮರ್ಹಸೀತ್ಯಭಿಪ್ರಾಯಃ ॥**

(ಭಾಷ್ಯಾರ್ಥ)

ಈಗ ವೇದ(ಗಳ) ಸ್ವಭಾವವನ್ನು ತಿಳಿಯುವದಕ್ಕಾಗಿ ಧೃತರಾಷ್ಟ್ರನು ಹೇಳುತ್ತಾನೆ : ಯಾವನು ಪಾಪಗಳನ್ನು ಮಾಡುತ್ತಿದ್ದು ಋಕ್ಕೇ ಮುಂತಾದ ವೇದಗಳನ್ನು ಅಧ್ಯಯನಮಾಡುವನೋ ಅವನು ಆ ವೇದಾಧ್ಯಯನದಿಂದ ಪವಿತ್ರನಾಗುವನೊ, ಇಲ್ಲವೊ ? ಇದನ್ನು ಹೇಳುವವನಾಗು ಎಂದಭಿಪ್ರಾಯ.

**ಸನತ್ಸುಜಾತ ಉವಾಚ—**

**ನೈನಂ ಸಾಮಾನ್ಯೃಚೋ ವಾಪಿ ಯಜೂಂಷಿ ಚ ವಿಚಕ್ಷಣ[5] ।**
**ತ್ರಾಯನ್ತೇ ಕರ್ಮಣಃ ಪಾಪಾನ್ನ ತೇ ಮಿಥ್ಯಾ ಬ್ರವೀಮ್ಯಹಮ್ ॥೪॥**

---

1. ಆತ್ಮನನ್ನು ತನ್ನ ಶರೀರದೊಳಗೇ ಮೊದಲು ಕಂಡುಕೊಳ್ಳಬೇಕೆಂದು ಉಪನಿಷತ್ತುಗಳ ಉಪದೇಶ. 2. 'ಯೋ ವೇದ 3. 'ವೇದ ಯಃ'
4. 'ಕಿಂ ನ' ಎಂದು ಮಹಾಭಾರತದ ಪಾಠಗಳು.
5. 'ನ ಯಜೂಂಷ್ಯವಿಚಕ್ಷಣಮ್' ಎಂದು ಮಹಾಭಾರತದ ಪಾಠ.

೪. ಸನತ್ಸುಜಾತನಿಂತೆಂದನು ; ಎಲೈ ಜಾಣನೆ, ಋಕ್ಕುಗಳಾಗಲಿ, ಯಜಸ್ಸುಗಳಾಗಲಿ, ಸಾಮಗಳಾಗಲಿ, ಇವನನ್ನು ಪಾಪಕರ್ಮದಿಂದ ಕಾಪಾಡಲಾರವು, ನಿನಗೆ ನಾನು ಸುಳ್ಳನ್ನು ಹೇಳುವದಿಲ್ಲ.

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್– ಯಃ ಪಾಪಾನಿ ಕುರ್ವನ್ ಋಗಾದಿ ವೇದಮಧೀತೇ ನೈನಂ ಪ್ರತಿಷಿದ್ಧಚಾರಿಣಮ್ ಋಗಾದಯೋ ವೇದಾಃ ಪಾಪಾತ್ ಕರ್ಮಣಃ ತ್ರಾಯನ್ತೇ ನ ರಕ್ಷನ್ತಿ । ನ ತೇ ಮಿಥ್ಯಾ ಬ್ರವೀಮ್ಯಹಮ್, ಏವಮೇವೈತತ್, ನಾತ್ರಾವಿಶ್ವಾಸಃ ಕರ್ತವ್ಯ ಇತ್ಯರ್ಥಃ ॥

(ಭಾಷ್ಯಾರ್ಥ)

ಈರೀತಿಯಾಗಿ ಕೇಳಲ್ಪಟ್ಟ ಪೂಜ್ಯನು ಹೇಳುತ್ತಾನೆ : ಯಾವನು ಪಾಪಗಳನ್ನು ಮಾಡುತ್ತಾ ಋಕ್ಕೇ ಮುಂತಾದ ವೇದವನ್ನು ಅಧ್ಯಯನಮಾಡುವನೋ ಪ್ರತಿಷಿದ್ಧವಾದ ಆಚರಣೆಯುಳ್ಳವನಾದ ಇವನನ್ನು ಋಕ್ಕೇ ಮುಂತಾದ ವೇದಗಳು ಪಾಪಕರ್ಮ(ದ ಫಲದಿಂದ) ಕಾಪಾಡುವದಿಲ್ಲ, ರಕ್ಷಿಸುವದಿಲ್ಲ.[1] ನಾನು ನಿನಗೆ ಸುಳ್ಳನ್ನು ಹೇಳುವದಿಲ್ಲ. ಇದು ಹೀಗೆಯೇ ಸರಿ. ಇಲ್ಲಿ ಅಪನಂಬಿಕೆಯನ್ನು ಮಾಡಿಕೊಳ್ಳಬಾರದು– ಎಂದರ್ಥ.

ನ ಛನ್ದಾಂಸಿ ವೃಜಿನಾತ್ತಾರಯನ್ತಿ
ಮಾಯಾವಿನಂ ಮಾಯಯಾ ವರ್ತಮಾನಮ್ ।
ನೀಡಂ ಶಕುನ್ತಾ ಇವ ಜಾತಪಕ್ಷಾ-
ಶ್ಛನ್ದಾಂಸ್ಯೇನಂ ಪ್ರಜಹನ್ತ್ಯನ್ತಕಾಲೇ[2] ॥ ೫ ॥

೫. ಮಾಯೆಯಿಂದ ಕೂಡಿದ, ಕಪಟಸ್ವಭಾವದಿಂದಿರುವವನನ್ನು ವೇದಗಳು ಪಾಪದಿಂದ ದಾಟಿಸುವದಿಲ್ಲ. ರೆಕ್ಕೆಗಳು ಹುಟ್ಟಿ (ಬಲಿತ) ಹಕ್ಕಿಗಳು ಗೂಡನ್ನು ಬಿಡುವಂತೆ ವೇದಗಳು ಇವನನ್ನು ಕೊನೆಯಲ್ಲಿ ಕೈಬಿಡುವವು.

(ಭಾಷ್ಯ)

ಕಿಂ ಕುರ್ವನ್ತೀತಿ ಚೇತ್, ತತ್ರಾಹ– ನ ಛನ್ದಾಂಸಿ ಏನಂ ವೃಜಿನಾತ್ ಅಥ ವರ್ಮಾತ್ ನಾಸ್ತಿಕಂ ಪಾಪಕಾರಿಣಮ್ ಅಧೀತವೇದಮ್ ಅಧೀತವೇದಾರ್ಥಂ ಮಾಯಾವಿನಂ ಧರ್ಮಧ್ವಜಿನಂ ಮಾಯಯಾ ವರ್ತಮಾನಂ ಮಿಥ್ಯಾಚಾರಿಣಂ

---

1. ವೇದಾಭ್ಯಾಸವನ್ನು ಮಾಡಿದಮಾತ್ರಕ್ಕೇ ಪಾಪಗಳು ಹೋಗುವದಿಲ್ಲ.

2. 'ಪ್ರಜಹತ್ಯನ್ತಕಾಲೇ' ಎಂದು ಮಹಾಭಾರತದ ಪಾಠ. 'ಪ್ರಜಹತಿ' ಎಂಬ ಈ ರೂಪವೇ ಸಾಧುವಾದದ್ದು.

ತಾರಯನ್ತಿ ನ ರಕ್ಷನ್ತಿ । ಕಿಂ ಕರಿಷ್ಯನ್ತೀತಿ ಚೇತ್, ಯಥಾ ಶಕುನ್ತಾಃ ಪಕ್ಷಿಣಃ ಜಾತಪಕ್ಷಾಃ ನೀಡಂ ಸ್ವಾಶ್ರಯಂ ಪರಿತ್ಯಜನ್ತಿ ಏವಂ ಛನ್ದಾಂಸಿ ಅನ್ತಕಾಲೇ ಮರಣಕಾಲೇ ಏನಂ ಸ್ವಾಶ್ರಯಭೂತಂ ಪ್ರಜಹನ್ತಿ, ಪರಿತ್ಯಜನ್ತಿ ನ ಪುರುಷಾರ್ಥಾಯ ಭವನ್ತೀತ್ಯರ್ಥಃ ॥

(ಭಾಷ್ಯಾರ್ಥ)

ಏನು ಮಾಡುತ್ತವೆ ? ಎಂದರೆ ಹೇಳುತ್ತಾನೆ : ವೇದಗಳು ಪಾಪದಿಂದ ಎಂದರೆ ಅಧರ್ಮದಿಂದ ಇವನನ್ನು (ಎಂದರೆ) ನಾಸ್ತಿಕನೂ ಪಾಪಮಾಡಿದವನೂ ಆಗಿದ್ದು ವೇದವನ್ನು (ಮತ್ತು) ವೇದಾರ್ಥವನ್ನು ಅಧ್ಯಯನಮಾಡಿದವ(ನಾಗಿದ್ದರೂ) ಮಾಯಾವಿಯಾಗಿದ್ದು, ಧರ್ಮಮಾಡಿದ್ದನ್ನು ಹೊಗಳಿಕೊಳ್ಳುವ, ಕಪಟದಿಂದಿರುವ ಮಿಥ್ಯಾಚಾರಿಯಾದ(ವನನ್ನು) ಕಾಪಾಡುವದಿಲ್ಲ. ರಕ್ಷಿಸುವದಿಲ್ಲ. ಮತ್ತೇನುಮಾಡುತ್ತವೆಯೆಂದರೆ : ಹೇಗೆ ರೆಕ್ಕೆಗಳು ಹುಟ್ಟಿರುವ ಹಕ್ಕಿಗಳು ತಮ್ಮ ಆಶ್ರಯವಾದ ಗೂಡನ್ನು ಬಿಡುವವೋ ಹಾಗೆ ಕೊನೆಗಾಲ ಎಂದರೆ ಮರಣ ಕಾಲದಲ್ಲಿ ತಮಗೆ ಆಶ್ರಯನಾದ ಇವನನ್ನು ಬಿಡುತ್ತವೆ. ತ್ಯಾಗಮಾಡುತ್ತವೆ- ಪ್ರಯೋಜನಕಾರಿಗಳಾಗುವದಿಲ್ಲ- ಎಂದರ್ಥ.

ಧೃತರಾಷ್ಟ್ರ ಉವಾಚ—

ನ ಚೇದ್ವೇದಾ ವೇದವಿದಂ[1] ತ್ರಾತುಂ ಶಕ್ತಾ ವಿಚಕ್ಷಣ ।
ಅಥ ಕಸ್ಮಾತ್ ಪ್ರಲಾಪೋಽಯಂ ಬ್ರಾಹ್ಮಣಾನಾಂ ಸನಾತನಃ ॥೬॥

೬. ಧೃತರಾಷ್ಟ್ರನಿಂತೆಂದನು : ಎಲೈ ಜಾಣನೆ, ವೇದವಿದನನ್ನು ವೇದಗಳು ಕಾಪಾಡಲು ಸಮರ್ಥವಾಗಲಾರವಾದರೆ ಬ್ರಾಹ್ಮಣರ ಈ ಸನಾತನವಾದ ಪ್ರಲಾಪದಿಂದೇನು ಪ್ರಯೋಜನ ?

( ಭಾಷ್ಯ )

ಏವಮುಕ್ತೇ ಪ್ರಾಹ ಧೃತರಾಷ್ಟ್ರಃ- 'ಕರ್ಮೋದಯೇ' (೧-೯) ಇತ್ಯಾದಿನಾ ನಿತ್ಯಾನಾಂ ಕಾಮ್ಯಾನಾಂ ಚ ಪಿತೃಲೋಕಾದಿಪ್ರಾಪ್ತಿಹೇತುತ್ವೇನ ಸಂಸಾರಾನರ್ಥಹೇತುತ್ವಸ್ಯ ದರ್ಶಿತತ್ವಾತ್ ಪ್ರತಿಷಿದ್ಧಸ್ಯ ಕರ್ಮಣಃ ನರಕಹೇತುತ್ವೇನ ಅನರ್ಥಹೇತುತ್ವಸ್ಯ ದರ್ಶಿತತ್ವಾತ್ ನ ವೇದಾ ವೇದವಿದಂ ತ್ರಾತುಂ ಶಕ್ತಾಶ್ಚೇತ್, ಅಥ ಕಸ್ಮಾತ್ ಹೇತೋಃ ಅಯಂ ಪ್ರಲಾಪಃ ಸನಾತನಃ ಚಿರನ್ತನಃ ಇತ್ಯರ್ಥಃ । ಸಂಸಾರಾನರ್ಥಹೇತುತ್ವೇನ ವೇದಾಧ್ಯಯನತದರ್ಥವಿಚಾರತದನುಷ್ಠಾನಾನಿ ನ ಕರ್ತವ್ಯಾನಿ ಇತ್ಯರ್ಥಃ ॥

---

1. 'ವಿನಾ ಧರ್ಮಮ್' ಎಂದು ಮಹಾಭಾರತದ ಪಾಠ.

ಹೀಗೆ ಹೇಳಲಾಗಿ ಧೃತರಾಷ್ಟ್ರನು ಹೇಳುತ್ತಾನೆ : 'ಕರ್ಮೋದಯೇ' ಮುಂತಾದ (ಶ್ಲೋಕಗಳಿಂದ) ನಿತ್ಯ ಮತ್ತು ಕಾಮ್ಯಕರ್ಮಗಳು ಪಿತೃಲೋಕವೇ ಮುಂತಾದವುಗಳ ಪ್ರಾಪ್ತಿಗೆ ಕಾರಣವಾಗಿರುವದರಿಂದ ಸಂಸಾರವೆಂಬ ಅನರ್ಥಕ್ಕೇ ಕಾರಣಗಳೆಂದು ತಿಳಿಸಿರುವದರಿಂದ, ಪ್ರತಿಷಿದ್ಧಕರ್ಮಗಳು ನರಕಕ್ಕೆ ಕಾರಣ ವಾಗುವದರ ಮೂಲಕ ಅನರ್ಥಕಾರಿಗಳಾಗಿರುವದರಿಂದ ವೇದಗಳು ವೇದವನ್ನು ಬಲ್ಲವನನ್ನು ಕಾಪಾಡಲು ಅಸಮರ್ಥವಾದವುಗಳೆಂದಾದರೆ, ಇನ್ನು ಯಾವ ಕಾರಣದಿಂದ ಈ ಚಿರಂತನವಾದ ಪ್ರಲಾಪವು (ಪ್ರಯೋಜನಕರವಾದೀತು ?)[1] ವೇದಾಧ್ಯಯನ, ಅದರ ಅರ್ಥವಿಚಾರ, ಅನುಷ್ಠಾನಗಳು ಸಂಸಾರಾನರ್ಥಕ್ಕೇ ಕಾರಣವಾಗಿರುವದರಿಂದ ಮಾಡತಕ್ಕವಲ್ಲ- ಎಂದಾಯಿತು.

( ಭಾಷ್ಯ )

ಭವೇದಯಂ ಪ್ರಲಾಪಃ ಯದ್ಯೇಷ ಏವ ವೇದಾರ್ಥಃ ಸ್ಯಾತ್, ಅನ್ಯ ಏವ ಸ್ವರ್ಗಾದೇಃ ಪರಮಪುರುಷಾರ್ಥೋ ಮೋಕ್ಷಾಖ್ಯೋ ವೇದಾರ್ಥಃ । ಇತರಸ್ಯ ಚ ಕರ್ಮರಾಶೇರುಪಾಸನಾಯಾಶ್ಚ ತತ್ಪ್ರಾಪ್ತಿಸಾಧನಜ್ಞಾನಸಾಧನಾನ್ತಃಕರಣಶುದ್ಧಿಸಾಧನತ್ವೇನ ಪಾರಂಪರ್ಯೇಣ ಪುರುಷಾರ್ಥತ್ವಾದೇವ ವೇದಪ್ರತಿಪಾದ್ಯತ್ವಮ್ । ತಥಾ ಹಿ- ತಮೇವ ಪರಮಾತ್ಮಾನಂ ಪರಮಪುರುಷಾರ್ಥಂ ದರ್ಶಯತಿ ವೇದಃ- 'ಅನನ್ದಾ ನಾಮ ತೇ ಲೋಕಾ ಅನ್ಧೇನ ತಮಸಾಽಽವೃತಾಃ। ತಾಂಸ್ತೇ ಪ್ರೇತ್ಯಾಭಿಗಚ್ಛನ್ತಿ ಅವಿದ್ವಾಂಸೋಽಬುಧಾ ಜನಾಃ' (ಬೃ. ೪-೪-೧೧) ಇತಿ । ಸ್ವರ್ಗಾದಿಲೋಕಾನಾಮಪುರುಷಾರ್ಥತ್ವಮ್ ಅನಾನನ್ದಾತ್ಮಕತ್ವಮ್ ಅವಿದ್ಯಾವದ್ವಿಷಯತ್ವೇನ ದರ್ಶಯಿತ್ವಾ- 'ಆತ್ಮಾನಂ ಚೇದ್ ವಿಜಾನೀಯಾದಯಮಸ್ಮೀತಿ ಪೂರುಷಃ । ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್' (ಬೃ. ೪-೪-೧೨) ಇತ್ಯಾತ್ಮವಿದಃ ಕೃತಕೃತ್ಯತಾಂ ದರ್ಶಯಿತ್ವಾ- 'ಇಹೈವ ಸನ್ತೋಽಥ ವಿದ್ಮಸ್ತದ್ವಯಂ ನ ಚೇದಿಹಾವೇದೀನ್ಮಹತೀ ವಿನಷ್ಟಿಃ । ಯ ಏತದ್ವಿದುರಮೃತಾಸ್ತೇ ಭವನ್ತ್ಯಥೇತರೇ ದುಃಖಮೇವಾಪಿ ಯನ್ತಿ' (ಬೃ. ೪-೪-೧೪) ಇತ್ಯಾತ್ಮವಿದೋಽಮೃತತ್ವಪ್ರಾಪ್ತಿಮ್ ಅನಾತ್ಮವಿದಃ ಆತ್ಮವಿನಾಶಮನರ್ಥಪ್ರಾಪ್ತಿಂ ಚ ದರ್ಶಯಿತ್ವಾ- 'ಯದೈತಮನುಪಶ್ಯತ್ಯಾತ್ಮಾನಂ ದೇವಮಞ್ಜಸಾ । ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತೇ' (ಬೃ. ೪-೪-೧೫) ಇತ್ಯಾದಿಭಿರ್ವಾಕ್ಯೈಃ ತತ್ಸ್ವರೂಪತದರ್ಥದರ್ಶನತತ್ಫಲಾನಿ ಭೂಯೋ

---

1. ವೇದಗಳು ಸನಾತನವಾದ ಧರ್ಮಗ್ರಂಥಗಳಾಗಿದ್ದು ಮಾನವನ ಪುರುಷಾರ್ಥ ಪ್ರಾಪ್ತಿಗೆ ಮಾರ್ಗವನ್ನುಪದೇಶಿಸುವವುಗಳಾಗಿದ್ದರೂ ಅವುಗಳ ಅಭ್ಯಾಸದಿಂದ ಅನರ್ಥವು ಪರಿಹಾರವಾಗದೆಹೋದರೆ ಅವುಗಳಿಂದೇನು ಪ್ರಯೋಜನ ? ಎಂದಭಿಪ್ರಾಯ. ವೇದವನ್ನು ಓದಿದಮಾತ್ರಕ್ಕೇ ಸಕಲಪುರುಷಾರ್ಥಗಳೂ ದೊರೆತು ಎಂಥ ಪಾಪಿಗೂ ಸದ್ಗತಿಯಾಗಬೇಕೆಂದು ಧೃತರಾಷ್ಟ್ರನ ಆಶಯ.

ಭೂಯೋ ದರ್ಶಯಿತ್ವಾ– ಕಥಮೇನಂ ಮಕರಾದಿಭಿರಿವ ರಾಗಾದಿಭಿರಿತಸ್ತತಃ[1] ಸಮಾಕೃಷ್ಯಮಾಣಂ ವಿಷಯಾಭಿಭೂತಂ ಪಾಪಕಾರಿಣಂ ಮೋಕ್ಷಯಿತ್ವಾ ಪರಮಪದೇ ಪರಮಾತ್ಮನಿ ಪೂರ್ಣಾನನ್ದೇ ಸ್ವಾರಾಜ್ಯೇ ಮೋಕ್ಷಾಖ್ಯೇ ಸ್ಥಾಪಯಿಷ್ಯಾಮೀತಿ ಮತ್ವಾ ತತ್ಪ್ರಾಪ್ತಿಸಾಧನಜ್ಞಾನಸಾಧನವಿವಿದಿಷಾಸಾಧನತ್ವೇನ ಯಜ್ಞಾದೀನ್ ವಿನಿಯುಙ್ಕ್ತೇ– 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ' (ಬೃ ೪–೪–೨೨) ಇತಿ ||

(ಭಾಷ್ಯಾರ್ಥ)

ಇದೇ (ಈಗ ಹೇಳಿದ್ದೇ) ವೇದಾರ್ಥವೆಂದಾದರೆ ಇದು ಪ್ರಲಾಪವೆಂದಾದೀತು, (ಹಾಗಿಲ್ಲ). ವೇದಾರ್ಥವು ಸ್ವರ್ಗಾದಿಗಳಿಗಿಂತ ಬೇರೆಯಾದ ಮೋಕ್ಷವೆಂಬ ಪರಮಪುರುಷಾರ್ಥವೆಂದು (ಪ್ರಸಿದ್ಧವಾಗಿರುತ್ತದೆ). (ವೇದದ) ಮತ್ತೊಂದು (ಭಾಗವಾದ) ಕರ್ಮಗಳ ರಾಶಿಗೂ ಉಪಾಸನೆಗೂ ಆ (ಮೋಕ್ಷ)ಪ್ರಾಪ್ತಿಗೆ ಸಾಧನವಾದ ಜ್ಞಾನವನ್ನು (ಪಡೆದುಕೊಳ್ಳುವದಕ್ಕೆ) ಕಾರಣವಾಗಿರುವ ಚಿತ್ತಶುದ್ಧಿಗೆ ಕಾರಣವಾಗುವದರ ಮೂಲಕ ಪರಂಪರೆಯಿಂದ ಪುರುಷಾರ್ಥತ್ವವಿರುವದರಿಂದಲೇ (ಅವುಗಳಿಗೆ) ವೇದಪ್ರತಿಪಾದ್ಯತ್ವವು (ಸಿದ್ಧವಾಗಿದೆ). ಹೇಗೆಂದರೆ: ವೇದವು ಆ ಪರಮಾತ್ಮನನ್ನೇ ಪರಮಪುರುಷಾರ್ಥವೆಂದು ತಿಳಿಸುತ್ತಿದೆ. 'ಅಜ್ಞಾನಿಗಳೂ ದಡ್ಡರೂ ಆದ ಜನರು (ಇಲ್ಲಿಂದ) ಹೋಗಿ ಆನಂದವೆಂಬ ಅಂಧಂತಮಸ್ಸಿನಿಂದ ಆವೃತವಾಗಿರುವ ಆ ಲೋಕವನ್ನು ಪಡೆಯುವರು'– ಎಂದಿ(ದೆ.) ಸ್ವರ್ಗಾದಿಲೋಕಗಳು ಅವಿದ್ಯಾವಿಷಯವಾಗಿರುವದರಿಂದ ಅಪುರುಷಾರ್ಥಗಳೆಂದೂ ಆನಂದಸ್ವರೂಪಗಳಲ್ಲವೆಂದೂ ತಿಳಿಸಿಕೊಟ್ಟು "(ಇಗೊ) ಇವನೇ ನಾನು ಎಂದು ಪುರುಷನು ಆತ್ಮನನ್ನು ಅರಿತುಕೊಂಡನಾದರೆ ಏನನ್ನು ಇಚ್ಛಿಸುವವನಾಗಿ ಯಾರ ಕಾಮಕ್ಕಾಗಿ ಶರೀರವನ್ನನುಸರಿಸಿ ದುಃಖಿಯಾದಾನು?" ಎಂದು ಆತ್ಮಜ್ಞಾನಿಯು ಕೃತಕೃತ್ಯನೆಂದು ತಿಳಿಸಿಕೊಟ್ಟು "ಇಲ್ಲಿಯೇ ಇದ್ದುಕೊಂಡು ಅದನ್ನು ನಾವು ಈಗ ಅರಿತುಕೊಂಡಿರುತ್ತೇವಲ್ಲ! ಇಲ್ಲದೆಹೋಗಿದ್ದರೆ ಅಜ್ಞಾನಿಯಾಗಿರುತ್ತಿದ್ದೆನು, ಹೆಚ್ಚಿನ ವಿನಾಶ(ವಾಗುತ್ತಿತ್ತು). ಯಾರು ಅದನ್ನು ಅರಿಯುವರೋ ಅವರು ಅಮೃತರಾಗುವರು. ಇನ್ನು ಮಿಕ್ಕವರು ದುಃಖವನ್ನೇ ಸೇರುವರು" ಎಂದು ಆತ್ಮಜ್ಞಾನಿಗೆ ಅಮೃತತ್ವಪ್ರಾಪ್ತಿಯನ್ನೂ ಅನಾತ್ಮಜ್ಞಾನಿಗೆ ಆತ್ಮವಿನಾಶವೆಂಬ ಅನರ್ಥಪ್ರಾಪ್ತಿಯನ್ನೂ ತಿಳಿಸಿಕೊಟ್ಟು "ಯಾವಾಗ ಹಿಂದಿನ ಮತ್ತು ಮುಂದಿನ ಕಾಲಗಳಿಗೆಲ್ಲ ಒಡೆಯನಾದ ಆತ್ಮನಾದ ದೇವನನ್ನು ಸ್ಪಷ್ಟವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳುವನೋ ಆಗ ಏನನ್ನೂ ನಿಂದಿಸುವದಿಲ್ಲ" ಎಂಬಿದೇ ಮುಂತಾದ

1. ಈ ದೃಷ್ಟಾಂತವನ್ನು ಗ್ರಂಥಕಾರರು ಹಿಂದೆ (ಪು. ೨೦ರಲ್ಲಿ)ಯೂ ಉಪಯೋಗಿಸಿದ್ದಾರೆ.

ವಾಕ್ಯಗಳಿಂದ ಆ ಸ್ವರೂಪ, ಆ ವಸ್ತುವಿನ ದರ್ಶನ, ಹಾಗೂ ಪ್ರಯೋಜನ ಗಳನ್ನು ಮತ್ತೆಮತ್ತೆ ತೋರಿಸಿಕೊಟ್ಟು ಮೊಸಳೆಗಳೇ ಮುಂತಾದವುಗಳಂತಿರುವ ರಾಗ(ದ್ವೇಷಾದಿ)ಗಳಿಂದ ಅತ್ತಿತ್ತ ಎಳೆಯಲ್ಪಡುತ್ತಿರುವ, ವಿಷಯಗಳಿಂದ ಹಿಮ್ಮೆಟ್ಟಿಸಲ್ಪಟ್ಟಿರುವ ಪಾಪಕಾರಿಯಾದ ಇವನನ್ನು ಹೇಗೆ ಬಿಡಿಸಿ ಪರಮಪದ ವಾದ ಪೂರ್ಣಾನಂದಸ್ವರೂಪನಾದ ಪರಮಾತ್ಮನಲ್ಲಿ (ಎಂದರೆ) ಮೋಕ್ಷವೆಂಬ ಸ್ವಾರಾಜ್ಯದಲ್ಲಿ ನಿಲ್ಲಿಸಿಯೇನು ? ಎಂದು ಭಾವಿಸಿ ಆ (ಬ್ರಹ್ಮ)ಪ್ರಾಪ್ತಿಗೆ ಸಾಧನ ವಾದ ಜ್ಞಾನಕ್ಕೆ ಕಾರಣವಾದ ವಿವಿದಿಷೆಗೆ ಸಾಧನವಾಗಿ ಯಜ್ಞಾದಿಗಳನ್ನು ಅರ್ಪಣೆಮಾಡಿ ತಿಳಿಸುತ್ತಿದೆ. "ಆ ಈತನನ್ನು ಬ್ರಾಹ್ಮಣರು ವೇದಾನುವಚನ ದಿಂದಲೂ ಯಜ್ಞದಿಂದಲೂ ದಾನದಿಂದಲೂ ಅನಾಶಕವೆಂಬ ತಪಸ್ಸಿನಿಂದಲೂ ತಿಳಿಯಲಿಚ್ಛಿಸುವರು" ಎಂದು (ಹೇಳಿರುತ್ತದೆ.)

(ಭಾಷ್ಯ)

ತಸ್ಮಾತ್ ತದರ್ಥತ್ವೇನೈವ ಯಜ್ಞಾದೀನಾಂ ಪುರುಷಾರ್ಥತ್ವಮ್ । ಇತರತ್ರ ತು ಪುನಃ ಸ್ವರ್ಗಾದೌ ಶ್ಯೇನಾದೀನಾಮಿವ ಅಪುರಷಾರ್ಥತ್ವಮ್, ಸಂಸಾರಾನರ್ಥಹೇತುತ್ವಾತ್ । ತಥಾ ಚ ಶ್ರುತಿಃ- "ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ ಅಷ್ಟಾದಶೋಕ್ತಮವರಂ ಯೇಷು ಕರ್ಮ । ಏತಚ್ಛ್ರೇಯೋ ಯೇಽಭಿನನ್ದನ್ತಿ ಮೂಢಾ ಜರಾಮೃತ್ಯುಂ ತೇ ಪುನರೇವಾಪಿ ಯನ್ತಿ" (ಮುಂ. ೧-೨-೭) ಇತಿ । ಯಸ್ಮಾದೇವಂ ಮೋಕ್ಷತತ್ಸಾಧನಪ್ರತಿಪಾದಕತ್ವೇನ ಸಂಸಾರಾ ನರ್ಥನಿವೃತ್ತಿಹೇತುತ್ವಂ ವೇದಾನಾಮ್, ತಸ್ಮಾದ್ವೇದಾಃ ವೇದವಿದಂ ತ್ರಾತುಂ ಶಕ್ತಾ ಏವೇತ್ಯೇತತ್ಸರ್ವಮಭಿಪ್ರೇತ್ಯಾಹ ಶ್ಲೋಕತ್ರಯೇಣ ॥

(ಭಾಷ್ಯಾರ್ಥ)

ಆದ್ದರಿಂದ (ಮೋಕ್ಷವೆಂಬ) ಆ (ಪ್ರಯೋಜನ)ಕ್ಕಾಗಿಯೇ ಯಜ್ಞಾದಿ ಗಳು (ವಿಧಿಸಲ್ಪಟ್ಟಿರುವದರಿಂದ) ಅವು ಪುರುಷಾರ್ಥಗಳೆನಿಸಿವೆ. ಮೋಕ್ಷಕ್ಕಿಂತ ಬೇರೆಯದಾದ ಸ್ವರ್ಗವೇ ಮುಂತಾದ ಫಲಗಳ ಅಪೇಕ್ಷೆಯಿಂದ ಅನುಷ್ಠಾನಮಾಡ ಲ್ಪಟ್ಟರೆ ಶ್ಯೇನಯಾಗವೇ- ಮುಂತಾದವುಗಳಂತೆ-[1] ಪುರುಷಾರ್ಥಸಾಧನವಾಗ ಲಾರವು. ಏಕೆಂದರೆ ಸಂಸಾರವೆಂಬ ಅನರ್ಥವನ್ನೇ ಅವು ಉಂಟುಮಾಡುತ್ತವೆ.[2] ಶ್ರುತಿಯೂಕೂಡ- "ಈ ಹದಿನೆಂಟು ಯಜ್ಞರೂಪಗಳು ಹಗುರವಾಗಿರುವವು, ಗಟ್ಟಿಯಲ್ಲ. ಯಾವ ಅವುಗಳಲ್ಲಿ ಕೀಳುಕರ್ಮವು ಉಕ್ತವಾಗಿರುತ್ತದೆ- ಇದನ್ನು

---

1. ಶತ್ರುವಿನ ನಾಶಕ್ಕಾಗಿ ಮಾಡುವ ಶ್ಯೇನಯಾಗವು ಶತ್ರುನಾಶವೆಂಬ ಫಲವ ನ್ನುಂಟುಮಾಡಿದರೂ ಪುರುಷಾರ್ಥವೇನೂ ಅಲ್ಲ.

1. ಸ್ವರ್ಗಾದಿಸುಖಗಳೂ ಸಹ ನಾಶವಾಗುವವಾದ್ದರಿಂದ ಸಂಸಾರಗೋಚರವೇ ಆಗಿವೆ.

ಶ್ರೇಯಸ್ಸೆಂದು ಯಾವ ಮೂಢರು ಹಿಗ್ಗುವರೋ ಅವರು ಜರಾಮೃತ್ಯುವನ್ನು ಮತ್ತೂ ಹೊಂದುವರು" ಎಂದು ಹೇಳುತ್ತಿದೆ. ಹೀಗೆ ಯಾವ ಕಾರಣದಿಂದ ಮೋಕ್ಷವನ್ನೂ ಅದಕ್ಕೆ ಸಾಧನವನ್ನೂ ಪ್ರತಿಪಾದನೆಮಾಡುವದರ ಮೂಲಕ ವೇದಗಳು ಸಂಸಾರವೆಂಬ ಅನರ್ಥದ ನಿವೃತ್ತಿಗೆ ಕಾರಣವಾಗಿರುವವೋ ಆದ್ದರಿಂದಲೇ ವೇದಗಳು ವೇದವನ್ನು ಬಲ್ಲವನನ್ನು ಕಾಪಾಡುವದಕ್ಕೆ ಸಮರ್ಥವೇ ಆಗಿವೆ- ಎಂಬೀ ಅಭಿಪ್ರಾಯದಿಂದ (ಮುಂದಿನ) ಮೂರು ಶ್ಲೋಕಗಳನ್ನು (ಸನತ್ಸುಜಾತರು) ಹೇಳುತ್ತಾರೆ.

**ಸನತ್ಸುಜಾತ ಉವಾಚ—**

**ತಸ್ಯೈವ ನಾಮಾದಿವಿಶೇಷರೂಪೈ-**
**ರಿದಂ ಜಗದ್ ಭಾತಿ ಮಹಾನುಭಾವ ।**
**ನಿರ್ದಿಶ್ಯ ಸಮ್ಯಕ್ ಪ್ರವದನ್ತಿ ವೇದಾ**
**ಸ್ತದ್ವಿಶ್ವವೈರೂಪ್ಯಮುದಾಹರನ್ತಿ ॥ ೭ ॥**

೭. ಸನತ್ಸುಜಾತನಿಂತೆಂದನು : ಎಲೈ ಮಹಾನುಭಾವನೆ, ಅದೇ (ಪರಮಾತ್ಮನ) ನಾಮುವೇ ಮುಂತಾದ ವಿಶೇಷರೂಪಗಳಿಂದ ಈ ಜಗತ್ತು ತೋರುತ್ತಿದೆ. ವೇದಗಳು ಈ ಜಗತ್ತಿನ (ತೋರಿಕೆಯನ್ನು) ನಿರ್ದೇಶಿಸಿ (ಇದಕ್ಕಿಂತ ವಿಲಕ್ಷಣವಾದ ಬ್ರಹ್ಮದ ಸ್ವರೂಪವನ್ನು) ಚೆನ್ನಾಗಿ ತಿಳಿಸುತ್ತಿವೆ. (ಮುನಿಗಳೂ) ಅದು ವಿಶ್ವಕ್ಕಿಂತ ವಿಲಕ್ಷಣವಾಗಿದೆಯೆಂದು ಹೇಳುವರು.

(ಭಾಷ್ಯ)

ತಸ್ಯೈವ ಪರಮಾತ್ಮನಃ ಮಾಯಾಪರಿಕಲ್ಪಿತೈಃ ನಾಮಾದಿವಿಶೇಷರೂಪೈಃ ಇದಂ ಜಗದ್ ಭಾತಿ ಹೇ ಮಹಾನುಭಾವ । ಕಥಮೇತದವಗಮ್ಯತೇ ತಸ್ಯೈವ ನಾಮಾದಿವಿಶೇಷರೂಪೈರಿದಂ ಜಗದ್ ಭಾತೀತಿ ? 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫-೧೯) ಇತಿ ಮಾಯಾನಿರ್ಮಿತಂ ಬಹುರೂಪಂ ನಿರ್ದಿಶ್ಯ ತಸ್ಯೈವ ಸಮ್ಯಗ್ರೂಪಮ್ 'ತದೇತದ್ಬ್ರಹ್ಮಾಪೂರ್ವಮನಪರಮನನ್ತರಮಬಾಹ್ಯಮಯಮಾತ್ಮಾ ಬ್ರಹ್ಮ ಸರ್ವಾನುಭೂರಿತ್ಯನುಶಾಸನಮ್' (ಬೃ. ೨-೫-೧೯) ಇತಿ ಪ್ರವದನ್ತಿ ವೇದಾಃ । ತಥಾ ಚ- 'ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚೈವಾಮೂರ್ತಂ ಚ' (ಬೃ. ೨-೩-೧) ಇತ್ಯಾದಿನಾ ತಸ್ಯೈವ ಮೂರ್ತಾಮೂರ್ತಾತ್ಮಕಮ್ ಆತ್ಮವಜ್ಜಗತ್ಸ್ವರೂಪಂ ನಿರ್ದಿಶ್ಯ ತಸ್ಯ ಸಮ್ಯಗ್ರೂಪಮ್ 'ನೇತಿ ನೇತಿ' (ಬೃ. ೨-೩-೬) ಇತ್ಯಾದಿನಾ ಪ್ರವದನ್ತಿ ವೇದಾಃ । ತಥಾ- 'ಆತ್ಮನ ಆಕಾಶಃ ಸಂಭೂತಃ' (ತೈ. ೨-೧) ಇತಿ ವಿಯದಾದಿಧರಿತ್ರ್ಯನ್ತಂ ತಸ್ಯೈವ ಕಾರ್ಯಂ ನಿರ್ದಿಶ್ಯ ಕೋಶೋಪನ್ಯಾಸಮುಖೇನ ತಸ್ಯೈವ ಸಮ್ಯ

ಗ್ರೂಪವಮ್ 'ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ' (ತೈ. ೨-೯) ಇತ್ಯಾದಿನಾ ಪ್ರವದನ್ತಿ ವೇದಾಃ । 'ಅಧೀಹಿ ಭಗವ ಇತಿ ಹೋಪಸಸಾದ' (ಛಾಂ. ೭-೧-೧) ಇತ್ಯಾದಿನಾ ನಾಮಾದಿ ಪ್ರಾಣಾನ್ತಂ ತಸ್ಯೈವ ಮಾಯಾ ನಿಮಿತ್ತಂ ಜಗನ್ನಿರ್ದಿಶ್ಯ 'ಯತ್ರ ನಾನ್ಯತ್ ಪಶ್ಯತಿ ನಾನ್ಯತ್ ಶೃಣೋತಿ ನಾನ್ಯ ದ್ವಿಜಾನಾತಿ ಸ ಭೂಮಾ' (ಛಾಂ. ೭-೨೪-೧) ಇತ್ಯಾದಿನಾ ತಸ್ಯೈವ ಸಮ್ಯ ಗ್ರೂಪಂ ಭೂಮಾನಂ ತಮಸಃ ಪಾರಂ ಸ್ವೇ ಮಹಿಮ್ನಿ ವ್ಯವಸ್ಥಿತಂ ಪ್ರವದನ್ತಿ ವೇದಾಃ । ನ ಕೇವಲಂ ವೇದಾಃ ಪ್ರವದನ್ತಿ, ಅಪಿ ತು ಮುನಯೋಽಪಿ ತತ್ ಬ್ರಹ್ಮ ವಿಶ್ವವೈರೂಪ್ಯಂ ವಿಶ್ವರೂಪವಿಪರೀತರೂಪವಮ್ ಉದಾಹರನ್ತಿ । ತಥಾ ಚಾಹ- ಭಗವಾನ್ ಪರಾಶರಃ- 'ಪ್ರತ್ಯಸ್ತಮಿತಭೇದಂ ಯತ್ ಸತ್ತಾಮಾತ್ರ ಮಗೋಚರಮ್ । ಮನಸಾಮಾತ್ಮಸಂವೇದ್ಯಂ ತಜ್ಜ್ಞಾನಂ ಬ್ರಹ್ಮಸಂಜ್ಞಿ ತಮ್ । ತಚ್ಚ ವಿಷ್ಣೋಃ ಪರಂ ರೂಪಮರೂಪಾಖ್ಯಮನುತ್ತಮಮ್ । ತದ್ವಿಶ್ವ ರೂಪವೈರೂಪ್ಯಲಕ್ಷಣಂ ಪರಮಾತ್ಮನಃ' (ವಿ. ಪು. ೬-೭-೫೩, ೫೪) ಇತಿ ॥

( ಭಾಷ್ಯಾರ್ಥ )

ಎಲೈ ಮಹಾನುಭಾವನೆ, ಅದೇ ಪರಮಾತ್ಮನ ಮಾಯೆಯಿಂದುಂಟಾಗಿರುವ ನಾಮವೇ (ಮುಂತಾದ) ವಿಶೇಷರೂಪಗಳಿಂದ ಈ ಜಗತ್ತು ಕಾಣುತ್ತಿದೆ. ಈ ಪ್ರಪಂಚವು ಅದೇ ಪರಮಾತ್ಮನ ನಾಮವೇ ಮುಂತಾದ ವಿಶೇಷರೂಪಗಳಿಂದ ತೋರುತ್ತಿದೆ- ಎಂಬುದು ಹೇಗೆ ಗೊತ್ತಾಗುತ್ತದೆ? (ಎಂದರೆ) "ಇಂದ್ರನು (ಪರಮೇಶ್ವರನು) ತನ್ನ ಇಂದ್ರಿಯಪ್ರಜ್ಞೆಗಳಿಂದ ಬಹುರೂಪನಾಗಿ ತೋರು ತ್ತಿದಾನೆ" ಎಂದು ಮಾಯಾನಿರ್ಮಿತವಾದ ಬಹುರೂಪವನ್ನು ತಿಳಿಯಿಸಿ ಅವನ ನಿಜರೂಪವನ್ನು "ಆ ಈ ಬ್ರಹ್ಮವು ಹಿಂದಿಲ್ಲದ್ದು, ಮುಂದಿಲ್ಲದ್ದು, ಒಳಗಿಲ್ಲದ್ದು, ಹೊರಗಿಲ್ಲದ್ದು ; ಸರ್ವಾನುಭವರೂಪವಾದ ಈ ಆತ್ಮನೇ ಬ್ರಹ್ಮವು ; ಹೀಗೆಂದು ಅನುಶಾಸನವು" ಎಂದು ವೇದಗಳು ಹೇಳುತ್ತಿವೆ. ಮತ್ತೂ "ಮೂರ್ತ, ಮತ್ತು ಅಮೂರ್ತ- ಎಂದು ಬ್ರಹ್ಮಕ್ಕೆ ಎರಡೇ ರೂಪಗಳು" ಇವೇ ಮುಂತಾದ (ವಾಕ್ಯ ಗಳಿಂದ) ಅದೇ ಬ್ರಹ್ಮದ ಮೂರ್ತಾಮೂರ್ತಾತ್ಮಕ(ರೂಪ)ವಾದ ಜಗತ್ತೆಂಬುದು ಆತ್ಮನುಳ್ಳದ್ದು - ಎಂದು ತಿಳಿಸಿ ಅದರ ನಿಜರೂಪವನ್ನು 'ಇದಲ್ಲ, ಇದಲ್ಲ' ಎಂಬಿದೇ ಮುಂತಾದ ವಾಕ್ಯಗಳಿಂದ ವೇದಗಳು ಹೇಳುತ್ತಿವೆ. ಮತ್ತು- 'ಆತ್ಮ ನಿಂದ ಆಕಾಶವುಂಟಾಯಿತು' ಎಂದು ಮುಂತಾಗಿ ಆಕಾಶದಿಂದ ಭೂಮಿಯವರೆ ಗಿನ(ದೆಲ್ಲವೂ) ಅದೇ ಬ್ರಹ್ಮದ ಕಾರ್ಯವೆಂದು ತಿಳಿಸಿ (ಅನ್ನಮಯವೇ) ಮುಂತಾದ ಕೋಶಗಳನ್ನು ಹೇಳುವದರ ಮೂಲಕ ಅದರ ನಿಜಸ್ವರೂಪವನ್ನೇ 'ವಾಕ್ಕುಗಳು ಮನಸ್ಸಿನೊಡನೆ ಯಾವದನ್ನು ಮುಟ್ಟಲಾರದೆ ಹಿಂತಿರುಗುವವೋ' ಎಂಬಿವೇ ಮೊದಲಾದವುಗಳಿಂದ ವೇದಗಳು ತಿಳಿಸುತ್ತಿವೆ. 'ಪೂಜ್ಯನೆ, ಬ್ರಹ್ಮ

ವನ್ನು ಹೇಳಿಕೊಡು ಎಂದು ಬಳಿಸಾರಿದನು' ಮುಂತಾದ (ವಾಕ್ಯಗಳಿಂದ) ನಾಮ ದಿಂದ ಮೊದಲಾಗಿ ಪ್ರಾಣದವರೆಗಿನ ಜಗತ್ತೆಂಬುದು ಅದೇ ಬ್ರಹ್ಮದ ಮಾಯಾ ನಿಮಿತ್ತದಿಂದಲೇ- ಎಂದು ತಿಳಿಸಿ 'ಎಲ್ಲಿ ಮತ್ತೊಂದನ್ನು ನೋಡುವದಿಲ್ಲವೋ ಮತ್ತೊಂದನ್ನು ಕೇಳುವದಿಲ್ಲವೋ ಮತ್ತೊಂದನ್ನು ಅರಿಯುವದಿಲ್ಲವೋ ಅದು ಭೂಮವು' – ಮುಂತಾದವುಗಳಿಂದ ಅದೇ ಬ್ರಹ್ಮದ ಭೂಮ(ಅಖಂಡ)ವಾದ, ಕತ್ತಲೆಯ ಆಚೆ ಇರುವ, ತನ್ನ ಮಹಿಮೆಯಲ್ಲಿ ನೆಲೆನಿಂತಿರುವ (ಸ್ವರೂಪವನ್ನು) ವೇದಗಳು ಹೇಳುತ್ತಿರುವವು. ವೇದಗಳುಮಾತ್ರವೇ ಹೇಳುತ್ತಿವೆ ಎಂದೇನೂ ಅಲ್ಲ, ಋಷಿಗಳೂಕೂಡ ಆ ಬ್ರಹ್ಮವು ವಿಶ್ವರೂಪವಾಗಿ- ಎಂದರೆ ಜಗತ್ತಿಗಿಂತ ವಿಲಕ್ಷಣಸ್ವರೂಪವುಳ್ಳದ್ದಾಗಿದೆ ಎಂದೇ ಹೇಳುತ್ತಿರುವರು. ಮತ್ತು ಪೂಜ್ಯರಾದ ಪರಾಶರರೂ- 'ಭೇದವೆಲ್ಲವೂ ಅಡಗಿಹೋಗಿರುವ, ಕೇವಲಸತ್ತೇ ಆಗಿರುವ (ಇಂದ್ರಿಯಗಳಿಗೆ) ಮನಸ್ಸುಗಳಿಗೆ ಗೋಚರವಲ್ಲದ ತಾನೇ ಅರಿವಾಗಿರುವ, ಯಾವ ಬ್ರಹ್ಮವೆಂಬುದು ಉಂಟೋ ಅದು ಜ್ಞಾನವು. ಮತ್ತು ಅದು ಅರೂಪ ವಾದ, ಮಿಗಿಲಿಲ್ಲದ ವಿಷ್ಣುವಿನ ಪರಮರೂಪವು. ಅದು ಪರಮಾತ್ಮನ, ಜಗದ್ರೂಪ ಕ್ಕಿಂತಲೂ ವಿಲಕ್ಷಣವಾದ ರೂಪವು' – ಎಂದು ಹೇಳಿರುತ್ತಾರೆ.

## ನಿಷ್ಕಾಮನಿಗೂ ಸಕಾಮನಿಗೂ ಉಂಟಾಗುವ ಫಲಭೇದಗಳು

(ಭಾಷ್ಯ)

ಇದಾನೀಂ ಈಶ್ವರಾರ್ಥಮನುಷ್ಠೀಯಮಾನಾನಾಂ ತತ್ಪ್ರಾಪ್ತಿಸಾಧನಜ್ಞಾನಾ ಪೇಕ್ಷಿತಶುದ್ಧಿದ್ವಾರೇಣ ಪಾರಂಪರ್ಯೇಣ ಪುರುಷಾರ್ಥತ್ವಮ್, ಅನ್ಯೇಷಾಂ ಸಂಸಾರಾನರ್ಥಹೇತುತ್ವೇನಾಪುರುಷಾರ್ಥತ್ವಂ ಚ ದರ್ಶಯತಿ ಶ್ಲೋಕದ್ವಯೇನ-

(ಭಾಷ್ಯಾರ್ಥ)

ಈಗ ಈಶ್ವರ(ಪ್ರೀತಿ)ಗಾಗಿ ಅನುಷ್ಠಾನಮಾಡಲ್ಪಡುವ ಕರ್ಮಗಳಿಗೆ ಆ (ಪರಮೇಶ್ವರನ) ಪ್ರಾಪ್ತಿಗೆ ಸಾಧನವಾದ ಜ್ಞಾನಕ್ಕೆ ಬೇಕಾದ ಅಂತಃಕರಣ ಶುದ್ಧಿಯಮೂಲಕ ಪರಂಪರೆಯಿಂದ ಪುರುಷಾರ್ಥತ್ವವನ್ನೂ ಉಳಿದ(ಕರ್ಮಗಳಿಗೆ) ಅವು ಸಂಸಾರವೆಂಬ ಅನರ್ಥಕ್ಕೆ ಕಾರಣವಾಗಿರುವದರಿಂದ ಅಪುರುಷಾರ್ಥತ್ವ ವನ್ನೂ (ಮುಂದಿನ) ಎರಡು ಶ್ಲೋಕಗಳಿಂದ ತಿಳಿಸುತ್ತಾನೆ :–

ತದರ್ಥಮುಕ್ತಂ ತಪ ಏತದಿಜ್ಯಾ
ತಾಭ್ಯಾಮಸೌ ಪುಣ್ಯಮುಪೈತಿ ವಿದ್ವಾನ್ ।
ಪುಣ್ಯೇನ ಪಾಪಂ ವಿನಿಹತ್ಯ ಪಶ್ಚಾತ್
ಸ ಜಾಯತೇ[1] ಜ್ಞಾನವಿದೀಪಿತಾತ್ಮಾ ॥ ೮ ॥

1. 'ಸಂಜಾಯತೇ'

**ಜ್ಞಾನೇನ ಚಾತ್ಮಾನಮುಪೈತಿ ವಿದ್ವಾ-**
**ನ್ನ ಚಾನ್ಯಥಾ[1] ವರ್ಗಫಲಾನುಕಾಙ್ಕ್ಷೀ ।**
**ಅಸ್ಮಿನ್ ಕೃತಂ ತತ್ಪರಿಗೃಹ್ಯ ಸರ್ವ-**
**ಮಮುತ್ರ ಭುಙ್ಕ್ತೇ ಪುನರೇತಿ ಮಾರ್ಗಮ್ ॥ ೯ ॥**

೮–೯. ಆ (ಬ್ರಹ್ಮ)ಪ್ರಾಪ್ತಿಗಾಗಿ ಈ ತಪಸ್ಸುಯಜ್ಞಗಳನ್ನು ಹೇಳಿದೆ. ವಿವೇಕಿಯು ಇವುಗಳಿಂದ ಪುಣ್ಯವನ್ನು ಹೊಂದುತ್ತಾನೆ. ಆಮೇಲೆ ಪುಣ್ಯದಿಂದ ಪಾಪವನ್ನು ನಾಶಗೊಳಿಸಿಕೊಂಡು ಜ್ಞಾನದಿಂದ ಬೆಳಗುವ ಆತ್ಮವುಳ್ಳವನಾಗುತ್ತಾನೆ. (ಹೀಗೆ) ವಿದ್ವಾಂಸನು ಜ್ಞಾನದಿಂದ ಆತ್ಮನನ್ನು ಪಡೆಯುವನು. ಬೇರೆ ಮಾರ್ಗವಿಲ್ಲ, ಆದರೆ ಇಂದ್ರಿಯಗಳ (ತೃಪ್ತಿ)ಯನ್ನು ಬಯಸುವವನು ಇಲ್ಲಿ ಮಾಡಿದ ಕರ್ಮಗಳ ಫಲಗಳನ್ನು ತೆಗೆದುಕೊಂಡು ಪರಲೋಕಕ್ಕೆ ಹೋಗಿ (ಸುಖವನ್ನನುಭವಿಸುವನು. (ಪುಣ್ಯವು) ಮುಗಿಯುತ್ತಲೂ ಮತ್ತೆ ಸಂಸಾರಕ್ಕೇ ಹಿಂತಿರುಗುವನು.

( ಭಾಷ್ಯ )

ಯದ್ವಿಶ್ವರೂಪವಿಪರೀತರೂಪಂ ಬ್ರಹ್ಮ ತದರ್ಥಮುಕ್ತಂ ವೇದೇನ । ಕಿಮ್ । ತಪಃ ಕೃಚ್ಛ್ರಚಾನ್ದ್ರಾಯಣಾದಿ, ಇಜ್ಯಾ ಜ್ಯೋತಿಷ್ಟೋಮಾದಿ । ಕಿಂ ತತೋ ಭವತೀತಿ ಚೇತ್– ತಾಭ್ಯಾಮ್ ಇಜ್ಯಾತಪೋಭ್ಯಾಮ್ ಅಸೌ ವಿದ್ವಾನ್ ಪೂರ್ವೋಕ್ತವಿನಿಯೋಗಜ್ಞಃ ಈಶ್ವರಾರ್ಥಂ ಕರ್ಮಾನುತಿಷ್ಠನ್ ಪುಣ್ಯಮ್ ಉಪೈತಿ ಪ್ರಾಪ್ನೋತಿ ಕರ್ಮಜನ್ಯಾಪೂರ್ವಸಂಯುಕ್ತೋ ಭವತಿ । ತೇನ ಪುಣ್ಯೇನ ಪಾಪಂ ವಿನಿಹತ್ಯ ಕ್ಷಪಯಿತ್ವಾ ಪಶ್ಚಾತ್ ಉತ್ತರಕಾಲಂ ಕ್ಷಪಿತಾಶೇಷಕಲ್ಮಷೋ ಜಾಯತೇ ಜ್ಞಾನವಿದೀಪಿತಾತ್ಮಾ ಜ್ಞಾನಪ್ರಕಾಶಿತಚಿತ್ಸದಾನನ್ದಾದ್ವಿತೀಯಬ್ರಹ್ಮಸ್ವರೂಪೋ ಭವತಿ ॥

ಜ್ಞಾನೇನ ಚಾತ್ಮಾನಂ ಪರಮಾತ್ಮಾನಮ್ ಉಪೈತಿ ಪ್ರಾಪ್ನೋತಿ ವಿದ್ವಾನ್ ಆತ್ಮವಿತ್ । ಅನ್ಯಥಾ ಪುನರೀಶ್ವರಾರ್ಥಂ ಕರ್ಮಾನನುಷ್ಠಾನೇನ ಅಕ್ಷಪಿತಾಶೇಷಕಲ್ಮಷಃ ನ ಜ್ಞಾನೀ ಭವತಿ । ತದಾ ವರ್ಗಫಲಾನುಕಾಙ್ಕ್ಷೀ ಇನ್ದ್ರಿಯಫಲಾನುಕಾಙ್ಕ್ಷೀ ಸ್ವರ್ಗಾದಿಫಲಾನುಕಾಙ್ಕ್ಷೀ ಚ ಸನ್ ಅಸ್ಮಿನ್ ಲೋಕೇ ಕೃತಂ ತತ್ ಯಜ್ಞಾದಿಕಂ ಪರಿಗೃಹ್ಯ ಸರ್ವಮ್ ಅಮುತ್ರ ಪರಲೋಕೇ ತತ್ಫಲಮುಪಭುಙ್ಕ್ತೇ । ತತಃ ಕರ್ಮಶೇಷೇಣ ಪುನರೇತಿ ಮಾರ್ಗಂ ಸಂಸಾರಮಾರ್ಗಮ್ । ತಥಾ ಚ ಶ್ರುತಿಃ– 'ತಸ್ಮಿನ್ ಯಾವತ್ಸಂಪಾತಮುಷಿತ್ವಾ ಅಥೈತಮೇವಾಧ್ವಾನಂ ಪುನರ್ನಿವರ್ತನ್ತೇ' (ಛಾಂ. ೫-೧೦-೫) ಇತಿ ॥

1. 'ಅಥಾನ್ಯಥಾ' ಎಂದು ಮ॥ಭಾ॥ ಪಾಠಗಳು.

(ಭಾಷ್ಯಾರ್ಥ)

ಜಗತ್ತಿನ ರೂಪಕ್ಕಿಂತ ವಿಲಕ್ಷಣವಾದ ಬ್ರಹ್ಮವಿದೆಯಷ್ಟೆ, ಅದರ ಪ್ರಾಪ್ತಿಗಾಗಿ ವೇದದಿಂದ ಹೇಳಲ್ಪಟ್ಟಿದೆ. ಏನು ? ಎಂದರೆ ಕೃಚ್ಛ್ರ, ಚಾಂದ್ರಾಯಣ- ಮುಂತಾದ ತಪಸ್ಸು, ಜ್ಯೋತಿಷ್ಟೋಮವೇ ಮೊದಲಾದ ಯಾಗಗಳು. ಅದರಿಂದ ಏನಾಗುತ್ತದೆ ? ಎಂದರೆ ಆ ಯಾಗತಪಸ್ಸುಗಳಿಂದ ಈ ವಿದ್ವಾಂಸನು ಎಂದರೆ ಹಿಂದೆ ಹೇಳಿದಂತೆ (ಕರ್ಮಗಳ) ವಿನಿಯೋಗವನ್ನು ಬಲ್ಲವನು[1] ಈಶ್ವರನ ಪ್ರೀತಿಗಾಗಿ ಕರ್ಮವನ್ನು ಮಾಡುತ್ತಾ ಪುಣ್ಯವನ್ನು ಹೊಂದುವನು ; ಪಡೆಯುವನು. ಕರ್ಮದಿಂದುಂಟಾದ ಅಪೂರ್ವವೆಂಬ (ಅದೃಷ್ಟವನ್ನು) ಹೊಂದಿದವನಾಗುವನು. ಆ ಪುಣ್ಯದಿಂದ ಪಾಪವನ್ನು ಕಳೆದುಕೊಂಡು, ನಾಶಗೊಳಿಸಿಕೊಂಡು ಆಮೇಲೆ ಮುಂದಿನಕಾಲದಲ್ಲಿ ಎಲ್ಲಾ ದೋಷಗಳನ್ನೂ ಹೋಗಲಾಡಿಸಿಕೊಂಡು ಜ್ಞಾನದಿಂದ ಬೆಳಗುವ ಸ್ವರೂಪವುಳ್ಳವನಾಗಿ ಎಂದರೆ ಜ್ಞಾನದಿಂದ ಪ್ರಕಾಶಗೊಳಿಸಲ್ಪಟ್ಟ ಚಿತ್ಸದಾನಂದಾದ್ವಿತೀಯಬ್ರಹ್ಮಸ್ವರೂಪನಾಗುತ್ತಾನೆ.

ಮತ್ತು ಜ್ಞಾನದಿಂದ ಆತ್ಮನನ್ನು ಎಂದರೆ ಪರಮಾತ್ಮನನ್ನು ವಿದ್ವಾಂಸನು ಎಂದರೆ ಆತ್ಮನನ್ನು ಬಲ್ಲವನು ಪಡೆಯುತ್ತಾನೆ, ಹೊಂದುತ್ತಾನೆ. ಹಾಗಿಲ್ಲದೆ ಈಶ್ವರಪ್ರೀತಿಗಾಗಿ ಕರ್ಮವನ್ನು ಅನುಷ್ಠಾನಮಾಡದೆಇರುವದರಿಂದ ಪಾಪಗಳೆಲ್ಲವನ್ನೂ ಹೋಗಲಾಡಿಸಿಕೊಳ್ಳಲಾರದವನಾಗಿ ಜ್ಞಾನಿಯಾಗುವದಿಲ್ಲ. ಆಗ ವರ್ಗಫಲಗಳನ್ನು ಎಂದರೆ ಇಂದ್ರಿಯ(ಸುಖರೂಪವಾದ) ಫಲಗಳನ್ನು ಬಯಸುವವನಾಗಿ (ಎಂದರೆ) ಸ್ವರ್ಗಾದಿಫಲಗಳನ್ನು ಬಯಸುವವನಾಗಿ ಇಲ್ಲಿ (ಈ) ಲೋಕದಲ್ಲಿ ಮಾಡಿದ ಯಜ್ಞಾದಿಗಳನ್ನು ಎಲ್ಲವನ್ನೂ ತೆಗೆದುಕೊಂಡು ಆ ಪರಲೋಕದಲ್ಲಿ ಅದರ ಫಲವನ್ನು ಅನುಭವಿಸುತ್ತಾನೆ. ಅನಂತರ ಕರ್ಮಶೇಷದಿಂದ ಮತ್ತೆ ಸಂಸಾರಮಾರ್ಗವನ್ನು, ಹಾದಿಯನ್ನು ಸೇರುತ್ತಾನೆ. ಶ್ರುತಿಯೂಕೂಡ- 'ಅಲ್ಲಿ ಕರ್ಮವು ಕ್ಷಯವಾಗುವವರೆಗೆ ಇದ್ದುಕೊಂಡಿದ್ದು ಇನ್ನು ಇದೇ ಮಾರ್ಗದಲ್ಲಿ ಹೋಗಿದ್ದ ರೀತಿಯಿಂದ ಹಿಂದಿರುಗುವರು'- ಎಂದು ಹೇಳಿಯೂ ಇದೆ.

**ಅಸ್ಮಿನ್ ಲೋಕೇ ತಪಸ್ತಪ್ತಂ ಫಲಮನ್ಯತ್ರ ಭುಜ್ಯತೇ ।**
**ಬ್ರಾಹ್ಮಣಾನಾಂ ತಪಃ ಸ್ವೃದ್ಧಮನ್ಯೇಷಾಂ ತಾವದೇವ ತತ್[2] ॥ ೧೧ ॥**

೧೧. ಈ ಲೋಕದಲ್ಲಿ ಮಾಡಿದ ತಪಸ್ಸು ಮತ್ತೊಂದು (ಲೋಕದಲ್ಲಿ) ಅನುಭವಿಸಲ್ಪಡುತ್ತದೆ. (ಆದರೆ) ಬ್ರಾಹ್ಮಣರ ತಪಸ್ಸು ಹೆಚ್ಚಿನ

1. ತಪೋಯಜ್ಞಾದಿಗಳನ್ನು ಸಕಾಮನಾಗಿ ಮಾಡಿದರೆ ಸಂಸಾರಫಲವೂ ನಿಷ್ಕಾಮನಾಗಿ ಮಾಡಿದರೆ ಅಂತಃಕರಣಶುದ್ಧಿಯಮೂಲಕ ಜ್ಞಾನಪ್ರಾಪ್ತಿಯೆಂಬ ಫಲವೂ ಉಂಟಾಗುವದೆಂಬುವದನ್ನು ಬಲ್ಲವನು- ಎಂದಭಿಪ್ರಾಯ.

2. 'ಇಮೇ ಲೋಕಾ ಧಾತ್ವೇ ತಪಸಿ ತಿಷ್ಠತಾಮ್' ಎಂದು ಮ॥ಭಾ॥ ಪಾಠ.

ಸಮೃದ್ಧಿಯನ್ನು ಹೊಂದುತ್ತದೆ. ಉಳಿದವರ ಆ (ತಪಸ್ಸು) ಅಷ್ಟೇ ಇರುತ್ತದೆ.

(ಭಾಷ್ಯ)

ಇದಾನೀಂ ವಿದ್ವದವಿದ್ವಪೇಕ್ಷಯಾ ಕರ್ಮಣಾಂ ಫಲವೈಷಮ್ಯಮಾಹ | ಅಸ್ಮಿನ್ ಲೋಕೇ ಯತ್ತಪಃ ತಪ್ತಂ ತಸ್ಯ ಫಲಮ್ ಅನ್ಯತ್ರ ಅಮುಷ್ಮಿನ್ ಲೋಕೇ ಭುಜ್ಯತೇ ಇತಿ ಸರ್ವೇಷಾಂ ಸಮಾನಮ್ | ಬ್ರಾಹ್ಮಣಾನಾಂ ಬ್ರಹ್ಮ ವಿದಾಂ ಪುನರಯಂ ವಿಶೇಷಃ– ತಪಃ ಸ್ಪೃದ್ಧಮ್ ಅತೀವ ಸಮೃದ್ಧಂ ಭವತಿ ಫಲವೃದ್ಧಿಹೇತುರ್ಭವತೀತ್ಯರ್ಥಃ | ತಥಾ ಚ ಶ್ರುತಿಃ– 'ಯದೇವ ವಿದ್ಯಯಾ ಕರೋತಿ ಶ್ರದ್ಧಯಾ ಉಪನಿಷದಾ ತದೇವ ವೀರ್ಯವತ್ತರಂ ಭವತಿ' (ಛಾಂ. ೧–೧–೧೦) ಇತಿ | ಅನ್ಯೇಷಾಮ್ ಅನಾತ್ಮವಿದಾಂ ವೈಷಯಿಕಾಣಾಂ ತಾವದೇವ ತತ್ ನ ಸಮೃದ್ಧಂ ಭವತಿ ; ಯಸ್ಯ ಕರ್ಮಣೋ ಯತ್ಫಲಂ ಶ್ರುತಂ ತಾವ ನ್ಮಾತ್ರಫಲಸಾಧನಂ ನ ಫಲಸಮೃದ್ಧಿಹೇತುರ್ಭವತಿ ಇತ್ಯರ್ಥಃ ||

( ಭಾಷ್ಯಾರ್ಥ )

ಈಗ ಜ್ಞಾನಿ, ಅಜ್ಞಾನಿಗಳ ದೃಷ್ಟಿಯಿಂದ ಕರ್ಮಗಳಿಗೆ ಬೇರೆಬೇರೆಯ ಫಲಗಳನ್ನು ಹೇಳುತ್ತಾನೆ :– ಈ ಲೋಕದಲ್ಲಿ ಮಾಡಲ್ಪಟ್ಟ ಯಾವ ತಪ ಸ್ಸುಂಟೋ ಅದರ ಫಲವು ಬೇರೊಂದುಕಡೆ, ಪರಲೋಕದಲ್ಲಿ ಅನುಭವಿಸಲ್ಪಡು ತ್ತದೆ– ಎಂಬುದು ಎಲ್ಲರಿಗೂ ಸಮಾನವು. ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣ ರಿಗಾದರೊ, ಇದೊಂದು ವಿಶೇಷವು. (ಯಾವದೆಂದರೆ) ಅವರ ತಪಸ್ಸು ಹೆಚ್ಚು– ಹೆಚ್ಚಾಗಿ ಎಂದರೆ ಅತ್ಯಂತವಾಗಿ ವೃದ್ಧಿಯಾಗುತ್ತದೆ. ಫಲಸಮೃದ್ಧಿಯುಳ್ಳ ದ್ದಾಗುವದು.[1] ಮತ್ತು ಶ್ರುತಿಯೂಕೂಡ– 'ಯಾವದನ್ನು ವಿದ್ಯೆಯಿಂದ (ಕೂಡಿ) ಮಾಡುತ್ತಾನೋ ಶ್ರದ್ಧೆಯಿಂದಲೂ ಉಪನಿಷತ್ತಿನಿಂದ (ಯೋಗದಿಂದ)ಲೂ ಕೂಡಿ ಮಾಡುವನೋ ಅದೇ ಹೆಚ್ಚಿನ ವೀರ್ಯವುಳ್ಳದ್ದಾಗಿರುವದು' ಎಂದು ಹೇಳುತ್ತಿದೆ. ಆತ್ಮಜ್ಞರಲ್ಲದ ಉಳಿದ ವಿಷಯಾಸಕ್ತರಿಗೆ ಅಷ್ಟೊಂದು ಸಮೃದ್ಧ ವಾದ ಫಲವಾಗುವದಿಲ್ಲ. ಯಾವ ಕರ್ಮಕ್ಕೆ ಎಷ್ಟು ಫಲವನ್ನು ಹೇಳಿದೆಯೋ ಅಷ್ಟುಫಲಕ್ಕೆಮಾತ್ರ (ಆ ಕರ್ಮವು) ಸಾಧನವಾಗುತ್ತದೆಯೇ ಹೊರತು ಫಲ ಸಮೃದ್ಧಿಗೆ ಕಾರಣವಾಗುವದಿಲ್ಲ.

---

1. ಅಪರಬ್ರಹ್ಮವಿದರಾದ ಉಪಾಸಕರಿಗೆ ಜ್ಞಾನದ ಬಲದಿಂದ ಅವರು ಮಾಡುವ ತಪಆದಿಗಳು ಸಾಮಾನ್ಯರಿಗಿಂತ ಹೆಚ್ಚು ಫಲಪ್ರದವಾಗಿರುವವು– ಎಂದು ಭಾವ.

## ತಪಸ್ಸು ಸಮೃದ್ಧವಾಗುವ ಬಗೆ

**ಧೃತರಾಷ್ಟ್ರ ಉವಾಚ—**
**ಕಥಂ ಸಮೃದ್ಧಮತ್ಯರ್ಥಂ[1] ತಪೋ ಭವತಿ ಕೇವಲಮ್ ।**
**ಸನತ್ಸುಜಾತ ತದ್ಬ್ರೂಹಿ ಕಥಂ ವಿದ್ಯಾಮಹಂ ಪ್ರಭೋ[2] ॥ ೧೧ ॥**

೧೧. ಧೃತರಾಷ್ಟ್ರನಿಂತೆಂದನು : ಎಲೈ ಸನತ್ಸುಜಾತನೆ, ಬರಿಯ ತಪಸ್ಸೊಂದೇ ಹೆಚ್ಚಿನ ಸಮೃದ್ಧಿಯುಳ್ಳದ್ದಾಗಿ ಹೇಗಾದೀತು ? ಪ್ರಭುವೆ, ನಾನು ಅದನ್ನು ಹೇಗೆ ತಿಳಿಯಲಿ ? ಅದನ್ನು ಹೇಳು.

(ಭಾಷ್ಯ)

ಶ್ರುತ್ವಾ ಏವಮಾಹ ಧೃತರಾಷ್ಟ್ರಃ । ಋಜ್ವೇತತ್ ॥

(ಭಾಷ್ಯಾರ್ಥ)

(ಹಿಂದಿನಂತೆ ಉಪದೇಶವನ್ನು) ಕೇಳಿದ ಧೃತರಾಷ್ಟ್ರನು ಹೀಗೆಂದನು. ಈ (ಶ್ಲೋಕದ ಅರ್ಥವು) ಸರಳವಾಗಿರುತ್ತದೆ(ಯಾಗಿ ವಿವರಿಸಿರುವದಿಲ್ಲ).

**ಸನತ್ಸುಜಾತ ಉವಾಚ—**
**ನಿಷ್ಕಲ್ಮಷಂ ತಪಸ್ತ್ವೇತತ್ ಕೇವಲಂ ಪರಿಚಕ್ಷತೇ ।**
**ಏತತ್ಸಮೃದ್ಧಮತ್ಯರ್ಥಂ[3] ತಪೋ ಭವತಿ ನಾನ್ಯಥಾ[4] ॥ ೧೨ ॥**

೧೨. ಸನತ್ಸುಜಾತನಿಂತೆಂದನು : ನಿಷ್ಕಲ್ಮಷವಾದ ತಪಸ್ಸೆಂಬುದಿದೆಯಲ್ಲ, ಇದನ್ನು ಕೇವಲವೆಂದು ಹೇಳುವರು. ಇದು ಸಮೃದ್ಧವಾಗಿರುವದು. ಹಾಗಿಲ್ಲದ್ದು ಹೆಚ್ಚಿನ (ಫಲ)ವನ್ನು ಕೊಡುವ ತಪಸ್ಸಾಗಲಾರದು.

(ಭಾಷ್ಯ)

ಏವಂ ಪೃಷ್ಟಃ ಪ್ರಾಹ ಭಗವಾನ್ । ಯದೇತನ್ನಿಷ್ಕಲ್ಮಷಂ ತಪಃ ತತ್ಕೇವಲಂ ಪರಿಚಕ್ಷತೇ, ಕೇವಲಂ ಬೀಜಮಿತ್ಯುಕ್ತಮ್ । ಸರ್ವಸ್ಯಾಸ್ಯ ಪ್ರಪಞ್ಚಸ್ಯ ಬೀಜಂ ನಿಮಿತ್ತಂ ಯತ್ ತತ್ ಕೇವಲಮಿತ್ಯುಕ್ತಮ್ । ಆಹ ಉಶನಾ– 'ಗುಣಸಾಮ್ಯೇ ಸ್ಥಿತಂ ತತ್ತ್ವಂ ಕೇವಲಂ ತ್ವಿತಿ ಕಥ್ಯತೇ । ಕೇವಲಾದೇತದುದ್ಭೂತಂ ಜಗತ್ಸದಸದಾತ್ಮಕಮ್' ಇತಿ । ತತ್ ಏತತ್ ಏವ ಕೇವಲಂ ತಪಃ ಸಮೃದ್ಧಮತ್ಯರ್ಥಂ ಚ ಭವತಿ ನಾನ್ಯಥಾ ನಿಷ್ಕಲ್ಮಷಂ ನ ಭವತಿ ಸಕಲ್ಮಷಂ ಸ್ಯಾತ್ ತದಾ ಸಮೃದ್ಧಮತ್ಯರ್ಥಂ ಚ ನ ಭವತಿ ॥

---

1. 'ಅಸಮೃದ್ಧಮ್'
2. 'ಯಥಾ ವಿದ್ಯಾಮ ತದ್ವಯಮ್' ಎಂದು ಮಹಾಭಾರತದ ಪಾಠಗಳು.
3. 'ಅಭ್ಯೃದ್ಧಮ್' 4. 'ಕೇವಲಮ್' ಎಂದು ಮ॥ಭಾ॥ ಪಾಠಗಳು

( ಭಾಷ್ಯಾರ್ಥ )

ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಪೂಜ್ಯ(ನಾದ ಸನತ್ಸುಜಾತನು) ಹೇಳುತ್ತಾನೆ: ನಿಷ್ಕಲ್ಮಷವಾದ ತಪಸ್ಸೆಂಬುದಿದೆಯಲ್ಲ, ಅದನ್ನು (ಪ್ರಪಂಚಕ್ಕೆ) ಕಾರಣವೆಂದು ಹೇಳುತ್ತಾರೆ. (ಇಲ್ಲಿ) ಕೇವಲ (ಎಂಬ ಶಬ್ದಕ್ಕೆ) ಬೀಜವೆಂದರ್ಥ. ಈ ಎಲ್ಲಾ ಪ್ರಪಂಚಕ್ಕೂ ಯಾವದು ಬೀಜವು ಎಂದರೆ ನಿಮಿತ್ತವಾಗಿದೆಯೋ ಅದನ್ನು ಕೇವಲವೆಂದು ಹೇಳಿದೆ. ಉಶನಸ(ರೆಂಬ ಆಚಾರ್ಯರೂ) (ಕೂಡ) "(ಮೂರು) ಗುಣಗಳ ಸಾಮ್ಯಾವಸ್ಥೆಯಲ್ಲಿರುವ ತತ್ತ್ವವು 'ಕೇವಲ'ವೆಂದು ಕರೆಯಲ್ಪಡುತ್ತದೆ. ಈ ಸದಸದ್ರೂಪವಾದ ಜಗತ್ತೆಲ್ಲವೂ ಕೇವಲದಿಂದಲೇ ಹುಟ್ಟಿರುತ್ತದೆ"– ಎಂದು ಹೇಳಿದ್ದಾರೆ. ಆದ್ದರಿಂದ ಈ ಕೇವಲತಪಸ್ಸೊಂದೇ ಸಮೃದ್ಧವು ಹೆಚ್ಚಿನದು ಆಗಿರುತ್ತದೆ. ಹಾಗಲ್ಲದೆ (ತಪಸ್ಸು) ನಿಷ್ಕಲ್ಮಷವಾಗದೆ ದೋಷವುಳ್ಳದ್ದೇ ಆದರೆ ಆಗ ಸಮೃದ್ಧವಾಗಿ ಹೆಚ್ಚಿನದಾಗಿ ಆಗುವದಿಲ್ಲ.

**ತಪೋಮೂಲಮಿದಂ ಸರ್ವಂ ಯನ್ಮಾಂ ಪೃಚ್ಛಸಿ ಕ್ಷತ್ರಿಯ ।**
**ತಪಸಾ ವೇದವಿದ್ವಾಂಸಃ ಪರಂ ತ್ವಮೃತಮಾಪ್ನುಯುಃ ॥ ೧೩ ॥**

೧೩. ಎಲೈ ಕ್ಷತ್ರಿಯನೆ, ನನ್ನನ್ನು ನೀನು ಕೇಳುತ್ತಿರುವೆಯಷ್ಟೆ! ಅದು (ಎಂದರೆ) ಈ ಎಲ್ಲವೂ ತಪೋಮೂಲವಾಗಿಯೇ ಇರುತ್ತದೆ. ವೇದವನ್ನು ಬಲ್ಲವರು ತಪಸ್ಸಿನಿಂದ ಹೆಚ್ಚಿನ ಅಮೃತವನ್ನು ಪಡೆಯುವರು.

( ಭಾಷ್ಯ )

**ಏತದೇವ ಪ್ರಶಂಸತಿ । ಸ್ಪಷ್ಟಾರ್ಥಃ ಶ್ಲೋಕಃ ॥**

( ಭಾಷ್ಯಾರ್ಥ )

ಇದನ್ನೇ ಹೊಗಳುತ್ತಾನೆ. (ಈ) ಶ್ಲೋಕವೂ ಸ್ಪಷ್ಟ(ತಿಳಿಯಾದ)ವಾದ ಅರ್ಥವುಳ್ಳದ್ದಾಗಿದೆ. (ಆದ್ದರಿಂದ ವ್ಯಾಖ್ಯಾನಮಾಡಿಲ್ಲ.)

## ತಪಸ್ಸಿನ ಗುಣದೋಷಗಳು

**ಧೃತರಾಷ್ಟ್ರ ಉವಾಚ—**
**ಕಲ್ಮಷಂ ತಪಸೋ ಬ್ರೂಹಿ ಶ್ರುತಂ ನಿಷ್ಕಲ್ಮಷಂ ತಪಃ ।**
**ಸನತ್ಸುಜಾತ ಯೇನೇದಂ ವಿದ್ಯಾಂ ಗುಹ್ಯಂ ಸನಾತನಮ್ ॥ ೧೪ ॥**

1. 'ಶುದ್ಧವಾದ ತಪಸ್ಸೇ ಪ್ರಪಂಚಬೀಜವು' ಎಂಬುದಕ್ಕೆ ಇಲ್ಲಿ ಗ್ರಂಥಕಾರರು 'ಯಸ್ಯ ಜ್ಞಾನಮಯಂ ತಪಃ', 'ತಪಸಾ ಚೀಯತೇ ಬ್ರಹ್ಮ' ಎಂಬ ಉಪನಿಷದ್ವಾಕ್ಯಗಳಂತೆ ಭಗವಂತನು ತನ್ನ ಆಲೋಚನಾರೂಪವಾದ ತಪಸ್ಸಿನಿಂದಲೇ ಈ ಜಗತ್ತನ್ನು ಉಂಟುಮಾಡಿದನು. ಆದ್ದರಿಂದ ತಪಸ್ಸೇ ಜಗತ್ಕಾರಣವು– ಎಂಬ ಅಭಿಪ್ರಾಯವನ್ನು ಇಟ್ಟುಕೊಂಡಿರಬಹುದು. ನೀಲಕಂಠೀಯವ್ಯಾಖ್ಯಾನದಲ್ಲಿ 'ಕೇವಲಮ್– ಕೈವಲ್ಯಸಾಧನಮ್' ಎಂದು ಕೇವಲಶಬ್ದಕ್ಕೆ ಮೋಕ್ಷಸಾಧನವಾದದ್ದು ಎಂದು ಅರ್ಥಮಾಡಿದೆ.

೧೪. ಧೃತರಾಷ್ಟ್ರನಿಂತೆಂದನು : ಎಲೈ ಸನತ್ಸುಜಾತನೆ, ತಪಸ್ಸಿನ ಕಲ್ಮಷವಾವುದೆಂಬುದನ್ನು ಹೇಳು. (ಏಕೆಂದರೆ) ನಿಷ್ಕಲ್ಮಷವಾದ ತಪಸ್ಸನ್ನು ಕೇಳಿ (ತಿಳಿದದ್ದಾ)ಯಿತು. ಈ ಗುಹ್ಯವೂ ಸನಾತನವೂ (ಆದ ಬ್ರಹ್ಮವನ್ನು) ಇದರಿಂದ ನಾನು ಅರಿಯಲು ಸಾಧ್ಯವಾದೀತು.

( ಭಾಷ್ಯ )

**ಶ್ರುತ್ವಾ ಏವಮಾಹ ರಾಜಾ । 'ನಿಷ್ಕಲ್ಮಷಂ ತಪಸ್ತ್ವೇತತ್ ಕೇವಲಂ ಪರಿಚಕ್ಷತೇ' ಇತಿ ಶ್ರುತಸ್ಯ ತಪಸಃ ಕಲ್ಮಷಂ ಬ್ರೂಹಿ ಹೇ ಸನತ್ಸುಜಾತ, ಯೇನ ನಿಷ್ಕಲ್ಮಷೇಣ ತಪಸಾ ಇದಂ ಬ್ರಹ್ಮ ಗುಹ್ಯಂ ಸನಾತನಂ ವಿದ್ಯಾಮ್ ॥**

(ಭಾಷ್ಯಾರ್ಥ)

(ಹಿಂದಿನ ಉಪದೇಶವನ್ನು) ಕೇಳಿದ ರಾಜನು ಹೀಗೆನ್ನುತ್ತಾನೆ : ಎಲೈ ಸನತ್ಸುಜಾತನೆ, 'ನಿಷ್ಕಲ್ಮಷವಾದ ಈ ತಪಸ್ಸನ್ನು ಕೇವಲವೆನ್ನುವರು' ಎಂಬೀ (ಶ್ಲೋಕ)ದಿಂದ ಕೇಳಲ್ಪಟ್ಟ ತಪಸ್ಸಿನಲ್ಲಿ ಕಲ್ಮಷವೆಂದರೇನು? ಹೇಳು.[1] ಏಕೆಂದರೆ ನಿಷ್ಕಲ್ಮಷವಾದ ತಪಸ್ಸಿನಿಂದ ಈ ಗುಹ್ಯವಾದ ಸನಾತನವಾದ ಬ್ರಹ್ಮವನ್ನು ನಾನು ಅರಿತುಕೊಂಡೇನು.

**ಸನತ್ಸುಜಾತ ಉವಾಚ—**

**ಕ್ರೋಧಾದಯೋ ದ್ವಾದಶ ಯಸ್ಯ ದೋಷಾ-**
**ಸ್ತಥಾ ನೃಶಂಸಾನಿ ಚ ಸಪ್ತ[2] ರಾಜನ್ ।**
**ಜ್ಞಾನಾದಯೋ[3] ದ್ವಾದಶ ಚಾತತಾನಾಃ[4]**
**ಶಾಸ್ತ್ರೇ ಗುಣಾ ಯೇ ವಿದಿತಾ ದ್ವಿಜಾನಾಮ್ ॥ ೧೫ ॥**

೧೫. ಸನತ್ಸುಜಾತನಿಂತೆಂದನು : ಎಲೈ ರಾಜನೆ, ಕ್ರೋಧವೇ ಮುಂತಾದ ಹನ್ನೆರಡು, ನೃಶಂಸವೇ ಮುಂತಾದ ಏಳು– ಈ ಯಾವ ದೋಷಗಳುಂಟೋ, ಮತ್ತು ಶಾಸ್ತ್ರದಲ್ಲಿ ವಿವರಿಸಲ್ಪಟ್ಟ ಜ್ಞಾನವೇ ಮುಂತಾದ ಹನ್ನೆರಡುಗುಣಗಳು ದ್ವಿಜರಿಗೆ ತಿಳಿಯಲ್ಪಟ್ಟಿರುವವು ಯಾವ ವುಂಟೋ (ಅವುಗಳನ್ನು ಹೇಳುವೆನು.)

---

1. ಕಲ್ಮಷ (ದೋಷ)ಗಳು ಗೊತ್ತಾದರೆ ಅವುಗಳನ್ನು ಕಳೆದುಕೊಳ್ಳುವದಕ್ಕೆ ಸಾಧನಗಳನ್ನು ಮಾಡಬಹುದು– ಎಂದಭಿಪ್ರಾಯ. 2. 'ದಶ ತ್ರಿ'
3. 'ಧರ್ಮಾದಯಃ' 4. 'ಏತೇ ಪಿತ್ರ್ಯಾಣಾಮ್' ಎಂದು ಮ॥ಭಾ॥ ಪಾಠಗಳು.

( ಭಾಷ್ಯ )

ಏವಂ ಪೃಷ್ಟಃ ಪ್ರಾಹ ಭಗವಾನ್– ಕ್ರೋಧಾದಯೋ ದ್ವಾದಶ ಯಸ್ಯ ತಪಸೋ ದೋಷಾಃ ತಥಾ ನೃಶಂಸಾನಿ ಚ ಸಪ್ತ, ಹೇ ರಾಜನ್, ಯಸ್ಯ ತಪಸೋ ದೋಷಾಃ, ತಥಾ ಜ್ಞಾನಾದಯಃ ದ್ವಾದಶ ಚ ಆತತಾನಾಃ ವಿಸ್ತೀರ್ಯಮಾಣಾಃ ಶಾಸ್ತ್ರೇ ವೇದಶಾಸ್ತ್ರೇ ಯೇ ವಿದಿತಾ ಗುಣಾಃ ದ್ವಿಜಾನಾಂ ತಾನ್ ಏತಾನ್ ಗುಣಾನ್ ದೋಷಾಂಶ್ಚ ವಕ್ಷ್ಯಾಮಿ ಇತ್ಯಭಿಪ್ರಾಯಃ ॥

( ಭಾಷ್ಯಾರ್ಥ )

ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಪೂಜ್ಯನು ಹೇಳುತ್ತಾನೆ– ಎಲೈ ರಾಜನೆ, ತಪಸ್ಸಿಗೆ (ವಿಘ್ನಕಾರಿಗಳಾದ) ಯಾವ ಕೋಪವೇ ಮುಂತಾದ ಹನ್ನೆರಡು ದೋಷಗಳುಂಟೋ[1] ಹಾಗೂ ಏಳು ಪಾಪಗಳುಂಟೋ[2] ಈ ಯಾವ ತಪೋದೋಷಗಳಿವೆಯೋ ಮತ್ತು ಶಾಸ್ತ್ರದಲ್ಲಿ ಎಂದರೆ ವೇದ(ವೆಂಬ) ಶಾಸ್ತ್ರದಲ್ಲಿ ಹರಡಿರುವ ವಿಸ್ತಾರವಾಗಿ (ಹೇಳಲ್ಪಟ್ಟಿರುವ) ಜ್ಞಾನವೇ ಮುಂತಾದ ಹನ್ನೆರಡು ಗುಣಗಳುಂಟೋ,[3] ಬ್ರಾಹ್ಮಣರಿಗೆ ತಿಳಿದಿರುವ ಯಾವ ಈ ಗುಣಗಳುಂಟೋ ಅವುಗಳನ್ನು ಎಂದರೆ ಗುಣಗಳನ್ನೂ ದೋಷಗಳನ್ನೂ ಹೇಳುವೆನು– ಎಂದಭಿಪ್ರಾಯ.

**ಕ್ರೋಧಃ ಕಾಮೋ ಲೋಭಮೋಹೌ ವಿವಿತ್ಸಾ[4]**
**ಽಕೃಪಾಽಸೂಯಾ[5] ಮಾನಶೋಕೌ ಸ್ಪೃಹಾ ಚ ।**
**ಈರ್ಷ್ಯಾ ಜುಗುಪ್ಸಾ ಚ ಮಹಾಗುಣೇನ[6]**
**ಸದಾ ವರ್ಜ್ಯಾ ದ್ವಾದಶೈತೇ ನರೇಣ[7] ॥ ೧೬ ॥**

೧೬. ಕೋಪ, ಆಶೆ, ಜಿಪುಣತನ, ಮೋಹ, ವಿಷಯಾಭಿಲಾಷೆ, ಕರುಣೆಯಿಲ್ಲದಿರುವದು, ಹೊಟ್ಟೆಕಿಚ್ಚು, ಅಭಿಮಾನ, ದುಃಖ, ಬಯಕೆ, ಅಸಹಿಷ್ಣುತೆ, ಜುಗುಪ್ಸೆ– ಈ ಹನ್ನೆರಡೂ ಮಹಾಗುಣನಾದ (ಬ್ರಾಹ್ಮಣ) ನಾದ ಮನುಷ್ಯನಿಂದ ಯಾವಾಗಲೂ ಬಿಡಲ್ಪಡತಕ್ಕವುಗಳು.

( ಭಾಷ್ಯ )

ಕ್ರೋಧಾದೀನ್ ದರ್ಶಯತಿ । ಕ್ರೋಧೋ ನಾಮ ಕಾಮಪ್ರತಿಘಾತಾದುತ್ಪದ್ಯಮಾನಃ ತಾಡನಾಕ್ರೋಶನಾದಿಹೇತುಃ ಕಾಮಹಾನಿಹೇತುಕಶ್ಚ ಅನ್ತಃ

1. ಈ ಹನ್ನೆರಡನ್ನು ಮುಂದಿನ ಶ್ಲೋಕದಲ್ಲಿ ತಿಳಿಸಲಾಗುವದು.
2. ಇವುಗಳನ್ನು ೧೮ನೆಯ ಶ್ಲೋಕದಲ್ಲಿ ವಿವರಿಸಿದೆ.
3. ಇವುಗಳನ್ನು ೧೯ನೆಯ ಶ್ಲೋಕದಲ್ಲಿ ವಿವರಿಸಿದೆ.
4. 'ವಿಧಿತ್ಸಾ' 5. 'ಽಕೃಪಾಽಸೂಯೇ' 6. 'ಮನುಷ್ಯದೋಷಾಃ'
7. 'ನರಾಣಾಮ್' ಎಂದು ಮಹಾಭಾರತದ ಪಾಠಗಳು.

ಕರಣವಿಕ್ಷೇಪೋ ಗಾತ್ರಸ್ವೇದಕಂಪನಾದಿಲಿಙ್ಗಃ । ಕಾಮಃ ಸ್ತ್ರ್ಯಾದ್ಯಭಿಲಾಷಃ ಲೋಭಃ ಪರದ್ರವ್ಯೇಚ್ಛಾ । ಆರ್ಜಿತಸ್ಯ ದ್ರವ್ಯಸ್ಯ ತೀರ್ಥೇ ವಿನಿಯೋಗಾ। ಸಾಮರ್ಥ್ಯಂ ಚ । ಮೋಹಃ ಕೃತ್ಯಾಕೃತ್ಯವಿವೇಕಶೂನ್ಯತಾ । ವಿವಿತ್ಸಾ ವಿಷಯ ರಸಾನ್ ವೇತ್ತುಮಿಚ್ಛಾ । ಅಕೃಪಾ ನಿಷ್ಠುರತಾ । ಅಸೂಯಾ ಗುಣೇಷು ದೋಷಾವಿಷ್ಕರಣಮ್, ಪರಗುಣಾದಿಷ್ವಕ್ಷಮಾ ವಾ । ಮಾನಃ ಆತ್ಮಬಹುಮಾ-ನಿತ್ವಮ್ । ಶೋಕಃ ಇಷ್ಟಾರ್ಥವಿನಿಯೋಗಜೋಽನ್ತಃಕರಣವಿಕ್ಷೇಪಃ, ರೋದನ ಚಿನ್ತನಾದಿಲಿಙ್ಗೋಽಪ್ರತೀಕಾರವಿಷಯಃ । ಸ್ಪೃಹಾ ವಿಷಯಭೋಗೇಚ್ಛಾ । ಈರ್ಷ್ಯಾ ಪರಶ್ರಿಯಾಮಸಹಿಷ್ಣುತಾ । ಜುಗುಪ್ಸಾ ಪರಗುಣಾನಪಹ್ನೋತುಮಿಚ್ಛಾ ಬೀಭತ್ಸಾ ವಾ । ಏತೇ ಕ್ರೋಧಾದಯೋ ದೋಷಾಃ ತಪಸಃ ಕಲ್ಮಷರೂಪಾಃ ಸದಾ ವರ್ಜ್ಯಾ, ಮಹಾಗುಣೇನ ಬ್ರಾಹ್ಮಣೇನ । ಬ್ರಾಹ್ಮಣಾನಾಮುತ್ಕೃಷ್ಟ ಗುಣಯೋಗಃ ಸ್ವಭಾವಸಿದ್ಧಃ । ತಥಾ ಚೋಕ್ತಂ ಭಗವತಾ– 'ಶಮೋ ದಮಸ್ತಪಃಶೌಚಂ ಕ್ಷಾನ್ತಿರಾರ್ಜವಮೇವ ಚ । ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮ ಸ್ವಭಾವಜಮ್' (ಗೀ. ೧೮-೪೨) ಇತಿ ॥

ಅಥವಾ ಮಹಾಗುಣೋ ಬ್ರಹ್ಮಪ್ರಾಪ್ತಿಗುಣಃ ತೇನ ಬ್ರಹ್ಮಪ್ರಾಪ್ತಿ ಲಕ್ಷಣೇನ ಮಹಾಗುಣೇನ ಸಮನ್ವಿತೇನ ಸದಾ ವರ್ಜನೀಯಾ ಇತ್ಯರ್ಥಃ । ಉಕ್ತಂ ಚ ನಾಮನುಹೋದಧೌ– 'ಮಹಾನ್ ಬ್ರಹ್ಮೇತಿ ಚ ಪ್ರೋಕ್ತೋ ಮಹತ್ತ್ವಾನ್ಮಹತಾಮಪಿ । ತತ್ಪ್ರಾಪ್ತಿಗುಣಸಂಯುಕ್ತೋ ಮಹಾಗುಣ ಇತಿ ಸ್ಮೃತಃ' ಇತಿ ॥

(ಭಾಷಾರ್ಥ)

ಕೋಪವೇ ಮುಂತಾದವುಗಳನ್ನು ಹೇಳುತ್ತಾನೆ ಕೋಪವೆಂದರೆ ಇಚ್ಛೆಯು ನೆರವೇರದೆಇದ್ದಾಗ ಉಂಟಾಗುವದು ; (ಮತ್ತು) ಹೊಡೆಯುವದು, ಕಿರುಚುವದು– ಮುಂತಾದದ್ದಕ್ಕೆ ಕಾರಣವಾದುದು– ಹಾಗೂ ಇಷ್ಟವಾದದ್ದು ನಾಶವಾಗಲಾಗಿ ಆ ನಿಮಿತ್ತದಿಂದ ಉಂಟಾಗುವ ಮನಸ್ಸಿನ ಚಾಂಚಲ್ಯ ಮತ್ತು ಮೈಬೆವರುವದು, ನಡುಗುವದು ಮುಂತಾದವುಗಳು. ಕಾಮವೆಂದರೆ ಹೆಂಗಸೇ ಮುಂತಾದದ್ದನ್ನು (ಪಡೆಯುವ ಇಚ್ಛೆ) ಲೋಭವೆಂದರೆ ಮತ್ತೊಬ್ಬರ ವಸ್ತು ವಿನಲ್ಲಿ ಆಶೆ ; ಮತ್ತು ಸಂಪಾದಿಸಿದ ಹಣವನ್ನು ಯೋಗ್ಯರಾದವರಲ್ಲಿ ವಿನಿಯೋ ಗಿಸುವ ಸಾಮರ್ಥ್ಯವಿಲ್ಲದಿರುವಿಕೆ. ಮೋಹವೆಂದರೆ ಮಾಡಬೇಕಾದ್ದು– ಮಾಡ ಬಾರದ್ದು ಎಂಬ ವಿವೇಕವಿಲ್ಲದಿರುವಿಕೆ. ವಿವಿತ್ಸೆ ಎಂದರೆ ವಿಷಯಗಳ ರುಚಿಯನ್ನು ನೋಡುವ ಬಯಕೆ. ಅಕೃಪೆ ಎಂದರೆ ದಯೆಯಿಲ್ಲದಿರುವಿಕೆ. ಅಸೂಯೆ ಎಂದರೆ ಗುಣಗಳಲ್ಲಿ ದೋಷಗಳನ್ನು ಹುಡುಕುವದು. ಅಥವಾ ಮತ್ತೊಬ್ಬರ ಗುಣಗಳನ್ನು ಸಹಿಸದೆ ಇರುವದು. ಮಾನವೆಂದರೆ ತಾನೇ ಹೆಚ್ಚಿನವನೆಂಬ ಒಣಜಂಭವು. ಶೋಕವೆಂದರೆ ತನಗೆ ಇಷ್ಟವಾದ ವಸ್ತುವು ಕೈಬಿಟ್ಟದ್ದರಿಂದುಂ

ಟಾದ ಮನಸ್ಸಿನ ಗಲಿವಿಲಿಯು ; ಅಳುವದು, ನೆನೆಸಿಕೊಳ್ಳುವದು– ಮುಂತಾದ ರೂಪವಾದ ಪ್ರತೀಕಾರವಿಲ್ಲದಿರುವಿಕೆಯು. ಸ್ಪೃಹೆ ಎಂದರೆ ವಿಷಯಗಳನ್ನು ಅನುಭವಿಸಬೇಕೆಂಬ ಆಶೆಯು. ಈರ್ಷ್ಯೆ ಎಂದರೆ ಮತ್ತೊಬ್ಬರ ಸಂಪತ್ತನ್ನು ಕಂಡು ಸಹಿಸದೆ ಇರುವದು. ಜುಗುಪ್ಸೆ ಎಂದರೆ ಮತ್ತೊಬ್ಬರ ಗುಣಗಳನ್ನು ಬಚ್ಚಿಡುವ ಇಚ್ಛೆ ಅಥವಾ ನೋಡಲು ಅಸಹ್ಯವಾದದ್ದು. ಕೋಪವೇ ಮುಂತಾದ ಈ ದೋಷಗಳು ತಪಸ್ಸಿನ ಕೊಳೆಯಂತಿರುವವು. ಮಹಾಗುಣನಾದ ಬ್ರಾಹ್ಮಣ ನಿಂದ ಯಾವಾಗಲೂ ಬಿಡಲ್ಪಡತಕ್ಕವುಗಳು. ಬ್ರಾಹ್ಮಣರಿಗೆ ತುಂಬ ಒಳ್ಳೆಯ ಗುಣಗಳು ಇರುವಿಕೆಯು ಸ್ವಭಾವಸಿದ್ಧವಾದದ್ದು. ಭಗವಂತನೂಕೂಡ– 'ಶಮ, ದಮ, ತಪಸ್ಸು, ಶೌಚ, ಸಹನೆ, ಸರಳತೆ, ಜ್ಞಾನವಿಜ್ಞಾನಗಳು, ಆಸ್ತಿಕತೆ –ಇವು ಬ್ರಾಹ್ಮಣಜಾತಿಗೆ ಸಹಜವಾದ ಕರ್ಮಗಳು' ಎಂದು ಹೇಳಿರುತ್ತಾನೆ. ಅಥವಾ ಮಹಾಗುಣವೆಂದರೆ ಬ್ರಹ್ಮಪ್ರಾಪ್ತಿ– ಎಂಬ ಗುಣವು. ಆ ಬ್ರಹ್ಮಪ್ರಾಪ್ತಿ ಎಂಬ ಮಹಾಗುಣದಿಂದ ಕೂಡಿದವನು (ಇವುಗಳನ್ನು) ಯಾವಾಗಲೂ ಬಿಡ ಬೇಕೆಂದರ್ಥ. ನಾಮಮುಹೋದಧಿಯಲ್ಲೂ– 'ದೊಡ್ಡದಕ್ಕೆಲ್ಲ ದೊಡ್ಡದಾದ್ದರಿಂದ ಮಹಾನ್ ಎಂದರೆ ಬ್ರಹ್ಮವೆಂದು ತಿಳಿಯಲ್ಪಟ್ಟಿದೆ. ಆ (ಬ್ರಹ್ಮ)ಪ್ರಾಪ್ತಿಯೆಂಬ ಗುಣದಿಂದ ಕೂಡಿರುವದೇ ಮಹಾಗುಣವೆನಿಸಿಕೊಳ್ಳುತ್ತದೆ' ಎಂದು ಹೇಳಿದೆ.

**ಏಕೈಕಮೇತೇ ರಾಜೇನ್ದ್ರ ಮನುಷ್ಯಂ ಪರ್ಯುಪಾಸತೇ[1] ।**
**ಲಿಪ್ಸಮಾನೋಽನ್ತರಂ ತೇಷಾಂ ಮೃಗಾಣಾಮಿವ ಲುಬ್ಧಕಃ ॥ ೧೭ ॥**

೧೭. ಎಲೈ ರಾಜೇಂದ್ರನೆ, ಇವು ಬೇಡರವನು ಮೃಗಗಳನ್ನು ಹೊಡೆಯುಲು ಅವಕಾಶವನ್ನು ಬಯಸುವಂತೆ ಒಂದೊಂದೇ ಮನುಷ್ಯನನ್ನು ಅನುಸರಿಸಿಕೊಂಡಿರುವವು.

(ಭಾಷ್ಯ)

ತೇಷಾಂ ಸದಾ ವರ್ಜ್ಯತ್ವೇ ಹೇತುಮಾಹ । ಯಥಾ ಮೃಗಾಣಾಮ್ ಅನ್ತರಂ ಛಿದ್ರಂ ಲಿಪ್ಸಮಾನಃ ರನ್ಧ್ರಾನ್ವೇಷಣಪರೋ ಲುಬ್ಧಕೋ ಮೃಗ ಯುರನುವರ್ತತೇ ಯಥಾ ಚ ತಚ್ಛಿದ್ರಂ ಲಬ್ಧ್ವಾ ತಾನ್ ಹನ್ತಿ, ತಥಾ ತೇಷಾಂ ಮನುಷ್ಯಾಣಾಂ ರನ್ಧ್ರಾನ್ವೇಷಣಪರಾ ಏತೇ ಕ್ರೋಧಾದಯಃ ಏಕೈಕಂ ಮನುಷ್ಯಂ ಪರ್ಯುಪಾಸತೇ । ಅಥವಾ ಮನುಷ್ಯಾನ್ ಪರ್ಯುಪಾಸತೇ ಇತಿ ಪಾಠಃ । ತಸ್ಮಿನ್ ಏಕೈಕಃ ಪೃಥಕ್ ಪೃಥಕ್ ಮನುಷ್ಯಾನ್ ಪರ್ಯುಪಾಸತೇ ಇತಿ ಯೋಜನಾ । ತಥಾ ಛಿದ್ರಂ ಲಬ್ಧ್ವಾ ತಾನ್ ಘ್ನನ್ತಿ । ತಸ್ಮಾದೇತೇಷು ಏಕೋಽಪಿ ದೋಷೋ ವಿನಾಶಕಾರಣಮ್ । ಯಸ್ಮಾದೇವಂ ತಸ್ಮಾತ್ ಸದಾ ವರ್ಜ್ಯಾಃ ಇತ್ಯರ್ಥಃ । ಉಕ್ತಂ ಚ ಹೈರಣ್ಯಗರ್ಭೇ– 'ಯಥಾ ಪಾನ್ಥಸ್ಯ

1. 'ಏಕೈಕಃ ಪರ್ಯುಪಾಸ್ತೇಹ ಮನುಷ್ಯಾನ್ ಮನುಜರ್ಷಭ' ಎಂದು ಮಹಾ ಭಾರತದ ಪಾಠ.

ಕಾನ್ತಾರೇ ಸಿಂಹವ್ಯಾಘ್ರಮೃಗಾದಯಃ। ಉಪದ್ರವಕರಾಸ್ತದ್ವತ್ ಕ್ರೋಧಾದ್ಯಾ ದುರ್ಗುಣಾ ನೃಣಾಮ್' ಇತಿ ॥

(ಭಾಷ್ಯಾರ್ಥ)

ಅವುಗಳನ್ನು ಯಾವಾಗಲೂ ಬಿಟ್ಟಿರಬೇಕೆಂಬುದಕ್ಕೆ ಕಾರಣವನ್ನು ಹೇಳುತ್ತಾರೆ: ಬೇಡನು ಬೇಟೆಗಾರನು ಮೃಗಗಳನ್ನು (ಕೊಲ್ಲಲು) ಸಮಯವನ್ನು- (ಎಂದರೆ) ಅವಕಾಶವನ್ನು ಬಯಸುತ್ತಾ ಸಂದನ್ನು ಹುಡುಕುವವನಾಗಿ ಹಿಂಬಾಲಿಸುವನೋ ಮತ್ತು ಹೇಗೆ ಆ ಅವಕಾಶವನ್ನು ಪಡೆದವನಾಗಿ ಅವುಗಳನ್ನು ಕೊಲ್ಲುವನೋ, ಹಾಗೆಯೇ ಆ ಮನುಷ್ಯರ ದೌರ್ಬಲ್ಯವನ್ನು ಹುಡುಕುವದರಲ್ಲಿ ಆಸಕ್ತವಾದ ಈ ಕೋಪವೇ ಮೊದಲಾದವುಗಳು ಒಂದೊಂದೇ ಮನುಷ್ಯನನ್ನು ಆಶ್ರಯಿಸುತ್ತವೆ. ಅಥವಾ ಮನುಷ್ಯರನ್ನಾಶ್ರಯಿಸುತ್ತವೆ ಎಂದು (ಬಹುವಚನಾಂತವಾಗಿಯೂ) ಪಾಠವುಂಟು. ಆಗ ಒಂದೊಂದೂ ಬೇರೆಬೇರೆಯ ಮನುಷ್ಯರನ್ನು ಆಶ್ರಯಿಸುತ್ತವೆ- ಎಂದು ಹೊಂದಿಸಿಕೊಳ್ಳಬೇಕು.[1] ಹಾಗೂ ಅವಕಾಶವನ್ನು ಪಡೆದು ಅವರನ್ನು ಹಾಳುಮಾಡುತ್ತವೆ.[2] ಆದ್ದರಿಂದ ಇವುಗಳಲ್ಲಿ ಒಂದೇ ದೋಷವಾದರೂ (ಮನುಷ್ಯನು) ಹಾಳಾಗುವದಕ್ಕೆ ಕಾರಣವು. ಹೀಗಿರುವದರಿಂದ ಯಾವಾಗಲೂ (ಅವುಗಳನ್ನು) ದೂರವಿರಿಸಬೇಕು- ಎಂದರ್ಥ. ಹೈರಣ್ಯಗರ್ಭ(ವೆಂಬ ಗ್ರಂಥದಲ್ಲಿ)- 'ಹೇಗೆ ದಾರಿಹೋಕನಿಗೆ ಕಾಡಿನ (ಮಾರ್ಗದಲ್ಲಿ) ಸಿಂಹ, ಹುಲಿ- ಮುಂತಾದ (ಕ್ರೂರ)ಮೃಗಗಳು ತೊಂದರೆಯನ್ನುಂಟುಮಾಡುವವೋ ಹಾಗೆಯೇ ಮನುಷ್ಯರಿಗೆ ಕ್ರೋಧವೇ ಮುಂತಾದ ದುರ್ಗುಣಗಳು (ಮೋಕ್ಷಮಾರ್ಗದಲ್ಲಿ) ವಿಘ್ನವನ್ನುಂಟುಮಾಡುವವು'- ಎಂದು ಹೇಳಿದೆ.

ಸಂಭೋಗಸಂವಿದ್ವಿಷಮೋಽಧಮಾನೋ[3]
ದತ್ತಾನುತಾಪೀ ಕೃಪಣೋಽಬಲೀಯಾನ್ ।
ವರ್ಗಪ್ರಶಂಸೀ ವನಿತಾಂ ಚ[4] ದ್ವೇಷ್ಟಾ
ಏತೇ ಪರೇ ಸಪ್ತ ನೃಶಂಸರೂಪಾಃ[5] ॥ ೧೮ ॥

1. ಕ್ರೋಧಾದಿದೋಷಗಳು ಒಬ್ಬ ಮನುಷ್ಯನನ್ನೇ ಕಾಲಕ್ರಮದಲ್ಲಿ ಒಂದೊಂದಾಗಿ ಬಂದುಸೇರುತ್ತವೆ- ಎಂದು ಮೊದಲನೆಯ ಅರ್ಥ. ಅನೇಕಜನರನ್ನು ಇವು ಒಂದೊಂದಾಗಿ ಹಿಡಿಯುತ್ತವೆ- ಎಂದು ಎರಡನೆಯ ಅರ್ಥ.

2. ಗೀ. ೩-೪೦ನ್ನು ನೋಡಿರಿ. 3. 'ವಿಷಮೋಽತಿಮಾನೀ'

4. 'ವನಿತಾಸು' ಎಂದು ಮಹಾಭಾರತದ ಪಾಠಗಳು.

5. 'ವಿಕತ್ಥನಃ ಸ್ಪೃಹಯಾಲುರ್ಮನಸ್ವೀ
ಬಿಭ್ರತ್ಕೋಪಂ ಚಪಲೋಽರಕ್ಷಣಶ್ಚ ।
ಏತಾನ್ ಪಾಪಾಃ ಷಣ್ನರಾಃ ಪಾಪಧರ್ಮಾನ್
ಪ್ರಕುರ್ವತೇ ನೋಽತ್ರ ಸಂತಃ ಸುದುರ್ಗೇ ॥

ಎಂಬ ಹೆಚ್ಚಿನ ಶ್ಲೋಕವೊಂದು ಈ ಶ್ಲೋಕಕ್ಕೆ ಮೊದಲು ಮಹಾಭಾರತದಲ್ಲಿದೆ.

೧೫. ವಿಷಯಾನುಭವದಲ್ಲೇ ಜ್ಞಾನವುಳ್ಳವನು, ವಿಷ(ದಂತೆ ಪರಹಿಂಸೆ ಮಾಡುತ್ತಾ) ಬೆಳೆಯುವವನು, ಧರ್ಮಮಾಡಿದ ಅನಂತರ ಪಶ್ಚಾತ್ತಾಪ ಪಡುವವನು, ಜಿಪುಣನು, ಜ್ಞಾನವಿಲ್ಲದವನು, ಇಂದ್ರಿಯಸಮೂಹಗಳನ್ನು ಹೊಗಳುವವನು, ಧರ್ಮಪತ್ನಿಯನ್ನು ದ್ವೇಷಮಾಡುವವನು– ಈ ಏಳು ಜನರು (ಹಿಂದಿನ ಕೋಪಾದಿಗಳಿಗಿಂತ) ಬೇರೆಯಾದ ಏಳುಜನ ಪಾಪಿಗಳು.

( ಭಾಷ್ಯ )

ಇದಾನೀಂ ನೃಶಂಸಸಪ್ತಕಮಾಹ– ಸಂಭೋಗೇ ವಿಷಯಸಂಭೋಗೇ ಸಂವಿದ್ ಬುದ್ಧಿಃ ಯಸ್ಯ ವರ್ತತೇ ಸ ಸಂಭೋಗಸಂವಿತ್ | ವಿಷಮೇಧಮಾನಃ ವಿಷಮಿವ ಪರೇಷಾಮುಪದ್ರವಂ ಕೃತ್ವಾ ಏಧಮಾನಃ ವರ್ಧಮಾನಃ | ಅಥವಾ ದ್ವಿಷಮೇಧಮಾನಃ ಇತಿ ಪಾಠಾನ್ತರಮ್ ; ದ್ವಿಷಂ ದ್ವೇಷ್ಯಂ ಕರ್ಮ ಕೃತ್ವಾ ಪ್ರಾಣಿನಾಂ ತದ್ದ್ವಾರೇಣೈವ ವರ್ಧಮಾನಃ | ದತ್ತಾನುತಾಪೀ ಯಃ ಪೂರ್ವಂ ಧರ್ಮಬುದ್ಧ್ಯಾ ಧನಾದಿಕಂ ದತ್ವಾ ಪಶ್ಚಾತ್ ಕಿಮರ್ಥಮಹಂ ದತ್ತವಾನ್ ಇತಿ ತಪ್ತೋ ಭವತಿ ಸ ದತ್ತಾನುತಾಪೀ | ಕೃಪಣಃ ಯತ್ಕಿಂಚಿದರ್ಥಲವಲಾಭ ಮಾತ್ರಲೋಭಾತ್ ಸರ್ವಾವಮಾನಂ ಸಹತೇ ಯಃ ಸ ಕೃಪಣಃ | ಅಬಲೀಯಾನ್ ಜ್ಞಾನಬಲವರ್ಜಿತಃ | ವರ್ಗಪ್ರಶಂಸೀ ಇಂದ್ರಿಯವರ್ಗಪ್ರಶಂಸೀ | ವನಿತಾಂ ಚ ದ್ವೇಷ್ಟಾ ಅನನ್ಯಶರಣಾಂ ಭಾರ್ಯಾಂ ಯೋ ದ್ವೇಷ್ಟಿ ಸಃ | ಏತೇ ಪರೇ ಪೂರ್ವೋಕ್ತೇಭ್ಯಃ ಕ್ರೋಧಾದಿಭ್ಯಃ ಸಪ್ತ ನೃಶಂಸರೂಪಾಃ ||

( ಭಾಷ್ಯಾರ್ಥ )

ಈಗ ಏಳು(ಜನ) ಪಾಪಿಗಳನ್ನು ಹೇಳುತ್ತಾರೆ : ಸಂಭೋಗದಲ್ಲಿ ಎಂದರೆ ವಿಷಯಾನುಭವದಲ್ಲಿ ಯಾವನಿಗೆ ಬುದ್ಧಿಯು ಇದ್ದುಕೊಂಡಿದೆಯೋ ಅವನು **ಸಂಭೋಗಸಂವಿತ್** – ಎನಿಸುವನು. ವಿಷದಂತೆ ಮತ್ತೊಬ್ಬರಿಗೆ ತೊಂದರೆಯನ್ನುಂಟುಮಾಡಿ ಬೆಳೆಯುವವನು, ಅಭಿವೃದ್ಧಿಹೊಂದುವವನು **ವಿಷಮೇಧಮಾನನು.** ಅಥವಾ ದ್ವಿಷಮೇಧಮಾನಃ ಎಂದೂ ಪಾಠಾಂತರವುಂಟು. (ಆಗ) ದ್ವಿಷಂ ಎಂದರೆ ಪ್ರಾಣಿಗಳಿಗೆ ಬೇಡದ ಕೆಟ್ಟಕರ್ಮವನ್ನು ಮಾಡಿ ಆ ಮೂಲಕ ಬೆಳೆಯುವವನು (ಎಂದರ್ಥ). ದತ್ತಾನುತಾಪಿಯೆಂದರೆ ಯಾವನು ಮೊದಲು ಧರ್ಮಬುದ್ಧಿಯಿಂದ ಹಣವೇ ಮುಂತಾದದ್ದನ್ನು ದಾನಮಾಡಿ ಅನಂತರ 'ನಾನೇಕೆ ದಾನಮಾಡಿದೆನೊ!' ಎಂದು ಸಂಕಟಪಡುವನೋ ಅವನು ದತ್ತಾನುತಾಪಿಯು. ಕೃಪಣನೆಂದರೆ: ಯಾವದೋ ಒಂದಿಷ್ಟುಹಣದಭಾಗವು ಸಿಗುವದರ ಆಶೆಯಿಂದ ಎಲ್ಲಾ ರೀತಿಯ ತಿರಸ್ಕಾರವನ್ನೂ ಸಹಿಸಿಕೊಳ್ಳುವವನು ಕೃಪಣನೆನಿಸುವನು.[1]

---

1. ಜಿಪುಣನಾದವನು ತನ್ನ ಆತ್ಮಗೌರವವನ್ನೂ ಕಡೆಗಣಿಸಿ ಹಣಕ್ಕಾಗಿ ತುಚ್ಛ ಕೆಲಸಗಳನ್ನು ಮಾಡುವನೆಂದರ್ಥ.

ಜ್ಞಾನಬಲವಿಲ್ಲದವನು ಅಬಲನು. ಇಂದ್ರಿಯಗಳ ಸಮೂಹವನ್ನೇ ಹೊಗಳು ತ್ತಿರುವವನು ವರ್ಗಪ್ರಶಂಸಿಯು. ಬೇರೊಂದುಗತಿಯಿಲ್ಲದ (ತನ್ನನ್ನೇ ನಂಬಿರುವ) ಹೆಂಡತಿಯನ್ನು ಯಾವನು ಹಗೆಮಾಡುವನೋ ಅವನು ವನಿತಾ ದ್ವೇಷಿಯು. ಈ ಏಳು (ಜನರು) ಹಿಂದೆಹೇಳಿದ ಕ್ರೋಧಾದಿಗಳಿಗಿಂತ ಬೇರೆ ಯಾದ ಘಾತುಕರಾದ (ಪಾಪಿಗಳು).

## ಮಹಾವ್ರತಗಳು

ಜ್ಞಾನಂ[1] ಚ ಸತ್ಯಂ ಚ ದಮಃ ಶ್ರುತಂ[2] ಚ
ಅಮಾತ್ಸರ್ಯಂ ಹ್ರೀಸ್ತಿತಿಕ್ಷಾಽನಸೂಯಾ ।
ಯಜ್ಞಶ್ಚ ದಾನಂ ಚ ಧೃತಿಃ ಶಮಶ್ಚ[3]
ಮಹಾವ್ರತಾ[4] ದ್ವಾದಶ ಬ್ರಾಹ್ಮಣಸ್ಯ ॥ ೧೯ ॥

೧೯. ಜ್ಞಾನವು, ಸತ್ಯ, ದಮೆ, (ಶಾಸ್ತ್ರ)ಶ್ರವಣ, ಅಮಾತ್ಸರ್ಯ, ನಾಚಿಕೆ, ಸಹನೆ, ಅಸೂಯೆಯಿಲ್ಲದಿರುವದು, ಯಜ್ಞ, ದಾನ, ಇಂದ್ರಿಯ ನಿಗ್ರಹ, ಶಮೆ- ಈ ಹನ್ನೆರಡು ಬ್ರಾಹ್ಮಣನಿಗೆ ಮಹಾವ್ರತಗಳು.

(ಭಾಷ್ಯ)

ಇದಾನೀಂ ಜ್ಞಾನಾದಯೋ ದ್ವಾದಶ ಗುಣಾ ಉಚ್ಯನ್ತೇ । ಜ್ಞಾನಂ ತತ್ತ್ವಾರ್ಥಸಂವೇದನಮ್ । ಸತ್ಯಂ ಯಥಾರ್ಥಸಂಭಾಷಣಂ ಭೂತಹಿತಂ ಚ । ದಮೋ ಮನಸೋ ದಮನಮ್ । ಶ್ರುತಮ್ ಅಧ್ಯಾತ್ಮಶಾಸ್ತ್ರಶ್ರವಣಮ್ । ಮಾತ್ಸರ್ಯಂ ಸರ್ವಭೂತೇಷ್ವಸಹಮಾನತಾ, ತದಭಾವಃ ಅಮಾತ್ಸರ್ಯಮ್ । ಹ್ರೀಃ ಅಕಾರ್ಯಕರಣೇ ಲಜ್ಜಾ । ತಿತಿಕ್ಷಾ ದ್ವನ್ದ್ವಸಹಿಷ್ಣುತಾ । ಅನಸೂಯಾ ಪರದೋಷಾನಾವಿಷ್ಕರಣಮ್ । ಯಜ್ಞಃ ಅಗ್ನಿಷ್ಟೋಮಾದಿಃ ಮಹಾಯಜ್ಞಶ್ಚ । ದಾನಂ ಬ್ರಾಹ್ಮಣೇಭ್ಯೋ ಧನಾದಿಪರಿತ್ಯಾಗಃ । ಧೃತಾಃ ವಿಷಯಸಂನಿಧಾವಪಿ ಇನ್ದ್ರಿಯನಿಗ್ರಹಃ । ಶಮಃ ಅನ್ತಃಕರಣೋಪರತಿಃ । ಬಹಿಃಕರಣೋಪರತಿರಿತಿ ಕೇಚಿತ್ । ಏತೇ ಜ್ಞಾನಾದಯೋ ಮಹಾವ್ರತಾಃ ಪರಪುರುಷಾರ್ಥಸಾಧನ ಭೂತಾಃ ಬ್ರಾಹ್ಮಣಸ್ಯ ॥

(ಭಾಷ್ಯಾರ್ಥ)

ಈಗ ಜ್ಞಾನವೇ ಮುಂತಾದ ಹನ್ನೆರಡು ಗುಣಗಳನ್ನು ಹೇಳಲಾಗುವದು : ಜ್ಞಾನವೆಂದರೆ (ಬ್ರಹ್ಮ)ತತ್ತ್ವದ ಸ್ವರೂಪದ ಅರಿವು. ಸತ್ಯವೆಂದರೆ ಇದ್ದದ್ದು

1. 'ಧರ್ಮಶ್ಚ' 2. 'ತಪಶ್ಚ' 3. 'ಶ್ರುತಂ ಚ'
4. 'ವ್ರತಾನಿ ವೈ' ಎಂದು ಆಚ್ಚಿನಮಹಾಭಾರತದ ಪಾಠಗಳು.

ಇದ್ದಂತೆ ನುಡಿಯುವದು ; ಹಾಗೂ (ಅದು) ಪ್ರಾಣಿಗಳಿಗೆ ಹಿತವಾಗಿರ(ತಕ್ಕದ್ದು). ದಮವೆಂದರೆ ಮನಸ್ಸಿನ ನಿಗ್ರಹವು. ಶ್ರುತವೆಂದರೆ ಅಧ್ಯಾತ್ಮಶಾಸ್ತ್ರದ ಶ್ರವಣವು. ಅಮಾತ್ಸರ್ಯವೆಂದರೆ ಮಾತ್ಸರ್ಯವಿಲ್ಲದಿರುವದು. (ಎಂದರೆ) ಎಲ್ಲ ಪ್ರಾಣಿಗಳಲ್ಲೂ ಸಹನೆಯಿಲ್ಲದಿರುವದು ಮಾತ್ಸರ್ಯವು ; ಅದರ ಅಭಾವವೇ ಅಮಾತ್ಸರ್ಯವು. ಮಾಡಬಾರದ ಕೆಲಸಗಳಲ್ಲಿ ನಾಚಿಕೆಯಿರುವದೇ ಹ್ರೀಃ ಎಂಬಿದು. (ಶೀತೋಷ್ಣಾದಿ)ದ್ವಂದ್ವಗಳನ್ನು ತಡೆದುಕೊಳ್ಳುವಿಕೆಯು ತಿತಿಕ್ಷೆಯು. ಮತ್ತೊಬ್ಬರ ದೋಷಗಳನ್ನು ಹೊರಹಾಕದೆ ಇರುವದು ಅನಸೂಯೆಯು. ಅಗ್ನಿಷ್ಟೋಮಾದಿಗಳೇ ಯಜ್ಞವು. ಮತ್ತು ಮಹಾಯಜ್ಞಗಳೂ[1] (ಯಜ್ಞವೇ). ದಾನವೆಂದರೆ ಬ್ರಾಹ್ಮಣರಿಗೆ ಧನವೇ ಮುಂತಾದವುಗಳನ್ನು ಕೊಡುವದು. ಧೃತಿ ಎಂದರೆ ವಿಷಯಗಳು ಎದುರಿಗೇಇದ್ದರೂ ಇಂದ್ರಿಯಗಳನ್ನು ಹರಿಯಗೊಡದಿರುವದು. ಶಮವೆಂದರೆ ಅಂತಃಕರಣವನ್ನು ಸಮಾಧಾನವಾಗಿಟ್ಟುಕೊಳ್ಳುವದು. ಕೆಲವರು ಹೊರಗಿನ ಕರಣಗಳನ್ನು ಹಿಡಿತದಲ್ಲಿಡುವದನ್ನು ಶಮವೆನ್ನುವರು. ಈ ಜ್ಞಾನವೇ ಮುಂತಾದ ಮಹಾವ್ರತಗಳು ಬ್ರಾಹ್ಮಣನಿಗೆ ಪರಮಪುರುಷಾರ್ಥಸಾಧನಗಳಾಗಿವೆ.

## ಗುಣಗಳ ಸ್ತುತಿ

**ಯಸ್ತ್ವೇತೇಭ್ಯೋಽಪ್ರವಸೇದ್[2] ದ್ವಾದಶಭ್ಯಃ**
**ಸರ್ವಾಮಿಮಾಂ[3] ಪೃಥಿವೀಂ ಸ ಪ್ರಶಿಷ್ಯಾತ್[4] ।**
**ತ್ರಿಭಿರ್ದ್ವಾಭ್ಯಾಮೇಕತೋ ವಾಽವಿಮುಕ್ತಾಃ[5]**
**ಕ್ರಮಾದ್ವಿಶಿಷ್ಟಾ ಮೌನಭೂತಾ ಭವನ್ತಿ[6] ॥ ೨೦ ॥**

೨೦. ಯಾವನು ಈ ಹನ್ನೆರಡು (ಗುಣ)ಗಳಿಂದ ದೂರವಿರುವದಿಲ್ಲವೋ ಅವನು ಇಡಿಯ ಈ ಭೂಮಿಯನ್ನೆಲ್ಲ ಆಳಬಲ್ಲನು. ಇವುಗಳಲ್ಲಿ ಮೂರು, ಎರಡು, ಅಥವಾ ಒಂದುಗುಣದಿಂದಲಾದರೂ ಬಿಡಲ್ಪಡದವರು (ಯಾವದೊಂದನ್ನಾದರೂ ಆಶ್ರಯಿಸಿದವರು) ಕ್ರಮವಾಗಿ ಜ್ಞಾನಿಗಳಾಗಿ ಬ್ರಹ್ಮಸ್ವರೂಪರಾಗುವರು.

---

1. ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ, ಬ್ರಹ್ಮಯಜ್ಞ– ಎಂಬೀ ಐದಕ್ಕೆ ಮಹಾಯಜ್ಞಗಳೆಂದು ಹೆಸರು. ತೈ. ಆ. ೨–೧೦ನ್ನೂ ಮನುಸ್ಮೃತಿ ೩–೭೦ನ್ನೂ ನೋಡಿರಿ.

2. 'ಪ್ರಭವೇತ್' 3. 'ಸರ್ವಾಮಪೀಮಾಮ್'

4. 'ಸ ಶಿಷ್ಯಾತ್' 5. 'ಅರ್ಥಿತೋ ಯಃ'

6. 'ತಸ್ಯ ಸ್ವಮಸ್ತೀತಿ ಸ ವೇದಿತವ್ಯಃ' ಎಂದು ಮಹಾಭಾರತದ ಪಾಠಗಳು.

( ಭಾಷ್ಯ )

ಯೇ 'ಜ್ಞಾನಾದಯೋ ದ್ವಾದಶ ಚಾತತಾನಾಃ' ಇತಿ ಪೂರ್ವತ್ರ ಪ್ರಸ್ತುತಾಃ ತೇ ವರ್ಣಿತಾಃ । ಇದಾನೀಂ ಗುಣಸ್ತುತಿಂ ಕರೋತಿ– ಯಸ್ತು ಏತೇಭ್ಯಃ ಪೂರ್ವೋಕ್ತೇಭ್ಯಃ ಅಪ್ರವಸೇತ್ ಪ್ರವಾಸಂ ನ ಕರೋತಿ ತೈರೇವ ಸಮನ್ವಿತೋ ಭವೇತ್ ಸ ಸರ್ವಾಮಿಮಾಂ ಪೃಥಿವೀಂ ಪ್ರಶಿಷ್ಯಾತ್ ಪ್ರಶಾಸ್ತಿ ಆತ್ಮವಶ್ಯಾಂ ಕರೋತಿ । ಯ ಏತೇಷಾಂ ಮಧ್ಯೇ ತ್ರಿಭಿರ್ದ್ವಾಭ್ಯಾಮ್ ಏಕತಃ ಏಕಸ್ಮಾದ್ ವಾ ಅವಿಮುಕ್ತಾಃ ಏತೇಷಾಮನ್ಯತಮೇನಾಪಿ ಸಮನ್ವಿತಾಸ್ತೇ ಏತೇ ಕ್ರಮೇಣ ವಿಶಿಷ್ಟಾ ಜ್ಞಾನಿನೋ ಭೂತ್ವಾ ಮೌನಭೂತಾಃ ಬ್ರಹ್ಮಭೂತಾ ಭವನ್ತಿ ॥

(ಭಾಷ್ಯಾರ್ಥ)

'(ಶಾಸ್ತ್ರದಲ್ಲಿ) ವಿವರಿಸಲ್ಪಟ್ಟ ಜ್ಞಾನವೇ ಮುಂತಾದ ಹನ್ನೆರಡು ಗುಣಗಳುಂಟೋ' ಎಂದು ಹಿಂದೆ ಯಾವವು ಪ್ರಸ್ತಾಪಿಸಲ್ಪಟ್ಟವೆಯೋ ಅವುಗಳನ್ನು ವರ್ಣಿಸಿದ್ದಾಯಿತು. ಈಗ (ಆ) ಗುಣಗಳನ್ನು ಹೊಗಳುತ್ತಾನೆ:– (ಏಕೆಂದರೆ) ಯಾವನು ಈ ಹಿಂದೆ ಹೇಳಿದ (ಗುಣಗಳಿಂದ) ಪ್ರವಾಸಮಾಡುವದಿಲ್ಲವೋ, ಅವುಗಳಿಂದಲೇ ಸಂಪನ್ನನಾಗಿರುವನೋ ಅವನು ಈ ಇಡಿಯ ಭೂಮಿಯನ್ನೆಲ್ಲ ಆಳಿಯಾನು, ಆಳುತ್ತಾನೆ ; ತನ್ನವಶವಾಗಿ ಮಾಡಿಕೊಳ್ಳುತ್ತಾನೆ. ಇವುಗಳ ನಡುವೆ ಯಾರು ಮೂರು, ಎರಡು ಅಥವಾ ಒಂದರಿಂದಲಾದರೂ ಬಿಡಲ್ಪಟ್ಟಿಲ್ಲವೋ ಎಂದರೆ ಇವುಗಳಲ್ಲಿ ಯಾವದೊಂದರಿಂದಲಾದರೂ ಕೂಡಿರುವರೋ ಅವರು ಕ್ರಮವಾಗಿ ಜ್ಞಾನಿಗಳಾಗಿ ಮೌನವಂತರಾಗುವರು ಎಂದರೆ ಬ್ರಹ್ಮಸ್ವರೂಪರಾಗುವರು.

## ದಮದ ದೋಷಗಳು

*ದಮೋಽಷ್ಟಾದಶದೋಷಃ[1] ಸ್ಯಾತ್ ಪ್ರತಿಕೂಲಂ ಕೃತೇ ಭವೇತ್[2] ।
ಅನೃತಂ[3] ಪೈಶುನಂ ತೃಷ್ಣಾ ಪ್ರಾತಿಕೂಲ್ಯಂ ತಮೋಽರತಿಃ ॥ ೨೦ ॥
ಲೋಕದ್ವೇಷೋಽಭಿಮಾನಶ್ಚ ವಿವಾದಃ ಪ್ರಾಣಿಪೀಡನಮ್ ।
ಪರಿವಾದೋಽತಿವಾದಶ್ಚ ಪರಿತಾಪೋಽಕ್ಷಮಾಽಧೃತಿಃ ॥ ೨೨ ॥

---

* ಈ ಶ್ಲೋಕದ ಹಿಂದೆ ಮಹಾಭಾರತದಲ್ಲಿ ಈ ಶ್ಲೋಕವಿದೆ :—
"ದಮಸ್ತ್ಯಾಗೋಽಪ್ರಮಾದಶ್ಚ ಏತೇಷ್ವಮೃತಮಾಹಿತಮ್ । ತಾನಿ ಸತ್ಯಮುಖಾನ್ಯಾಹುರ್ಬ್ರಾಹ್ಮಣಾ ಯೇ ಮನೀಷಿಣಃ" 1. 'ಅಷ್ಟಾದಶಗುಣಃ' 2. 'ಕೃತಾಕೃತೇ'

3. "ಅನೃತಂ ಚಾಭ್ಯಸೂಯಾ ಚ ಕಾಮಾರ್ಥೌ ಚ ತಥಾ ಸ್ಪೃಹಾ । ಕ್ರೋಧಃ ಶೋಕಸ್ತಥಾ ತೃಷ್ಣಾ ಲೋಭಃ ಪೈಶುನ್ಯಮೇವ ಚ । ಮತ್ಸರಶ್ಚ ವಿಹಿಂಸಾ ಚ ಪರಿತಾಪಸ್ತಥಾಽರತಿಃ । ಅಪಸ್ಮಾರಶ್ಚಾತಿವಾದಸ್ತಥಾಽಸಂಭಾವನಾತ್ಮನಿ । ಏತೈರ್ವಿಮುಕ್ತೋ ದೋಷೈರ್ಯಃ ಸ ದಾನ್ತಃ ಸದ್ಭಿರುಚ್ಯತೇ" ಎಂದು ಮಹಾಭಾರತದ ಪಾಠ.

**ಅಸಿದ್ಧಿಃ ಪಾಪಕೃತ್ಯಂ ಚ ಹಿಂಸಾ ಚೇತಿ ಪ್ರಕೀರ್ತಿತಾಃ ।**
**ಏತೈರ್ದೋಷೈರ್ವಿಮುಕ್ತೋ ಯಃ ಸ ದಮಃ ಸದ್ಭಿರುಚ್ಯತೇ ॥ ೨೩ ॥**

೨೧–೨೩. ದಮವು ಹದಿನೆಂಟು ದೋಷಗಳುಳ್ಳದ್ದಾಗಿದೆ. ಇವುಗಳಲ್ಲಿ ಒಂದನ್ನು ಸೇವಿಸಿದರೂ ದಮಕ್ಕೆ ವಿರೋಧವಾಗುವದು. ಇವು ಯಾವವೆಂದರೆ ; ಸುಳ್ಳುಹೇಳುವಿಕೆ, ಚಾಡಿಮಾತು, ಆಶೆ, ಮತ್ತೊಬ್ಬರಿಗೆ ತೊಂದರೆಮಾಡುವದು, ಅಜ್ಞಾನ, ಬಂದದ್ದರಲ್ಲಿ ತೃಪ್ತನಾಗದೆಇರುವದು, ಜನರಿಗೆ ಉದ್ವೇಗವನ್ನುಂಟುಮಾಡುವದು, ಯಾರಿಗೂ ತಗ್ಗದೆಇರುವದು, ಜಗಳ, ಪ್ರಾಣಿಹಿಂಸೆ, ಮತ್ತೊಬ್ಬರನ್ನು ದೂಷಿಸುವದು, ವ್ಯರ್ಥವಾಗಿ ಹರಟುವದು, ವೃಥಾ ದುಃಖಪಡುವದು, ಸಹನೆಯಿಲ್ಲದಿರುವದು, ಸ್ಥೈರ್ಯವಿಲ್ಲದಿರುವದು, ಸಿದ್ಧಿಯಿಲ್ಲದಿರುವದು, ಪ್ರತಿಷಿದ್ಧಾಚರಣೆ, ಹಿಂಸೆ– ಇವೇ ಆ ದೋಷಗಳು. ಈ ದೋಷಗಳಿಂದ ಯಾವದು ಬಿಡಲ್ಪಟ್ಟಿರುವದೋ ಅದನ್ನೇ ಸತ್ಪುರುಷರು ದಮವೆನ್ನುವರು.

( ಭಾಷ್ಯ )

ಇದಾನೀಂ ದಮದೋಷಾನಾಹ ಶ್ಲೋಕತ್ರಯೇಣ– ದಮಃ ಅಷ್ಟಾದಶ ದೋಷಃ ಸ್ಯಾತ್ ಅಷ್ಟಾದಶದೋಷಸಮನ್ವಿತೋ ಭವತಿ । ಕಿಮೇತೇಷಾಂ ದೋಷತ್ವಮಿತಿ ಚೇತ್ । ಪ್ರತಿಕೂಲಂ ಕೃತೇ ಭವೇತ್, ಏತೇಷಾಮನ್ಯತಮೇ ಕೃತೇ ದಮಸ್ಯ ಪ್ರತಿಕೂಲಂ ಕೃತಂ ಭವೇತ್ । ಕೇ ತೇ ? ಅನೃತಮ್ ಅಯಥಾರ್ಥವಚನಮ್ । ಪೈಶುನಂ ಪರದೂಷಣವಚನಮ್ । ತೃಷ್ಣಾ ವಿಷಯೇಪ್ಸಾ । ಪ್ರಾತಿಕೂಲ್ಯಂ ಸರ್ವೇಷಾಂ ಪ್ರತಿಕೂಲತಾ । ತಮಃ ಅಜ್ಞಾನಮ್ । ಅರತಿಃ ಅಯಥಾಲಾಭಸಂತುಷ್ಟಿಃ । ಅಥವಾ ರತಿಃ ಸ್ತ್ರೀಭೋಗೇಷ್ವಭಿರತಿಃ । ಲೋಕದ್ವೇಷಃ ಲೋಕಾನಾಮುದ್ವೇಗಾಚರಣಮ್ । ಅಭಿಮಾನಃ ಸರ್ವೇಷಾಮಪ್ರಣತಿಭಾವಃ । ವಿವಾದಃ ಜನಕಲಹಾಚರಣಮ್ । ಪ್ರಾಣಿಪೀಡನಂ ಸ್ವದೇಹಪೂರಣಾಯ ಪ್ರಾಣಿಹಿಂಸನಮ್ । ಪರಿವಾದಃ ಸಮಕ್ಷೇ ಪರದೂಷಣಾಭಿಧಾನಮ್ । ಅತಿವಾದಃ ನಿರರ್ಥಕೋ ಅತಿಪ್ರಲಾಪಃ । ಪರಿತಾಪಃ ವೃಥಾ ದುಃಖಚಿನ್ತನಮ್ । ಅಕ್ಷಮಾ ದ್ವನ್ದ್ವಾಸಹಿಷ್ಣುತಾ । ಅಧೃತಿಃ ಇನ್ದ್ರಿಯಾರ್ಥೇಷು ಚಪಲತಾ । ಅಸಿದ್ಧಿಃ ಧರ್ಮಜ್ಞಾನವೈರಾಗ್ಯಾಣಾಮ್ । ಪಾಪಕೃತ್ಯಂ ಪ್ರತಿಷಿದ್ಧಾಚರಣಮ್ । ಹಿಂಸಾ ಅವಿಹಿತಹಿಂಸಾ । ಇತಿ ಇತ್ಥಂ ದಮದೋಷಾಃ ಪ್ರಕೀರ್ತಿತಾಃ । ಏತೈಃ ಅನೃತಾದಿಭಿಃ ದೋಷೈಃ ವಿಮುಕ್ತೋ ಯೋ ಗುಣಃ ಸಃ ದಮ ಇತಿ ಉಚ್ಯತೇ ಸದ್ಭಿಃ ॥

( ಭಾಷ್ಯಾರ್ಥ )

ಈಗ ದಮದ ದೋಷಗಳನ್ನು ಮೂರುಶ್ಲೋಕಗಳಿಂದ ಹೇಳುತ್ತಾರೆ: ದಮವು ಹದಿನೆಂಟು ದೋಷಗಳಿಂದ ಕೂಡಿದ್ದಾಗಿರಬಹುದು. ಎಂದರೆ ಹದಿನೆಂಟು ದೋಷಗಳು ದಮದಲ್ಲಿರಬಹುದಾಗಿದೆ. ಈ (ದೋಷಗಳ) ದೋಷತ್ವವೆಂಬುದು ಏನು ? ಎಂದರೆ ಇವುಗಳನ್ನು ಆಚರಿಸಿದರೆ (ದಮಕ್ಕೆ) ಪ್ರತಿಕೂಲವೇ ಆಗುವದು; ವಿರುದ್ಧವಾಗಿ ಮಾಡಿದಂತಾಗುವದು.[1] ಆ (ದೋಷಗಳು) ಯಾವವೆಂದರೆ : (೧) ಸುಳ್ಳು- ನಿಜವಲ್ಲದ ಮಾತನಾಡುವದು. (೨) ಚಾಡಿಮಾತು– ಮತ್ತೊಬ್ಬರನ್ನು ಬೈಯುವ ಬೈಗುಳ. (೩) ತೃಷ್ಣೆ– ವಿಷಯಗಳಲ್ಲಿ ಹಂಬಲ. (೪) ಪ್ರಾತಿಕೂಲ್ಯ– ಎಂದರೆ ಎಲ್ಲರಿಗೂ ವಿರೋಧವಾಗಿ ನಡೆಯುವದು. (೫) ತಮಸ್ಸೆಂದರೆ– ದಡ್ಡತನ. (೬) ಅರತಿ– ಎಂದರೆ ಬಂದದ್ದರಲ್ಲಿ ತೃಪ್ತನಾಗದೆ ಇರುವದು, ಸ್ತ್ರೀ ಸುಖದ ಅಭಿಲಾಷೆ. (೭) ಲೋಕದ್ವೇಷವೆಂದರೆ– ಜನರಿಗೆ ನೋವಾಗುವಂತೆ ನಡೆಯುವದು. (೮) ಅಭಿಮಾನವೆಂದರೆ ಯಾವ ಪ್ರಾಣಿಗೂ ತಲೆಬಗ್ಗದೆ ಇರುವದು. (೯) ವಿವಾದವೆಂದರೆ ಜನರೊಡನೆ ಜಗಳವಾಡುವದು. (೧೦) ಪ್ರಾಣಿಪೀಡನವೆಂದರೆ ತನ್ನ ಹೊಟ್ಟೆತುಂಬಿಕೊಳ್ಳುವದಕ್ಕಾಗಿ ಪ್ರಾಣಿಗಳನ್ನು ಕೊಲ್ಲುವದು. (೧೧) ಪರಿವಾದವೆಂದರೆ ಎದುರಿಗೇ ಮತ್ತೊಬ್ಬರನ್ನು ದೂಷಿಸುವ ಮಾತನಾಡುವದು. (೧೨) ಅತಿವಾದವೆಂದರೆ ವ್ಯರ್ಥವಾದ ಮಿತಿಮೀರಿದ ಮಾತುಗಳು. (೧೩) ಪರಿತಾಪವೆಂದರೆ ದುಃಖವು (ಬಂದೀತೆಂದು) ವ್ಯರ್ಥವಾಗಿ ಚಿಂತಿಸುವದು. (೧೪) ಅಕ್ಷಮೆ ಎಂದರೆ (ಶೀತೋಷ್ಣಾದಿ)ದ್ವಂದ್ವಗಳನ್ನು ತಡೆದುಕೊಳ್ಳದೆಇರುವದು. (೧೫) ಅಧೃತಿ ಎಂದರೆ ವಿಷಯಗಳಲ್ಲಿ ಚಾಂಚಲ್ಯ. (೧೬) ಧರ್ಮಜ್ಞಾನವೈರಾಗ್ಯಗಳು (ದಕ್ಕದೆಇರುವದೇ) ಅಸಿದ್ಧಿಯು. (೧೭) ಪಾಪಕೃತ್ಯವೆಂದರೆ ಮಾಡಬಾರದ್ದನ್ನು ಮಾಡುವದು. (೧೮) ಹಿಂಸೆಯೆಂದರೆ (ಶಾಸ್ತ್ರ) ವಿರುದ್ಧವಾದ ಹಿಂಸೆ- ಹೀಗೆ ದಮದ ದೋಷಗಳು ಹೇಳಲ್ಪಟ್ಟವೆ. ಸುಳ್ಳೇ ಮುಂತಾದ ಈ ದೋಷಗಳಿಂದ ಬಿಡಲ್ಪಟ್ಟ ಯಾವ ಗುಣವುಂಟೋ ಅದನ್ನು ಸತ್ಪುರುಷರು ದಮವೆಂದು ಕರೆಯುವರು.

**ಮದೋಽಷ್ಟಾದಶದೋಷಃ ಸ್ಯಾತ್ ತ್ಯಾಗೋ ಭವತಿ ಷಡ್ವಿಧಃ ।**
**ವಿಪರ್ಯಯಾಃ ಸ್ಮೃತಾ ಏತೇ ದಮದೋಷಾ[2] ಉದಾಹೃತಾಃ ॥ ೨೪ ॥**

೨೪. ಮದವೆಂಬುದು ಹದಿನೆಂಟುದೋಷ(ಗಳಿಂದ) ನಾಶಮಾಡತಕ್ಕದ್ದು. ತ್ಯಾಗವು ಆರು ವಿಧವಾಗಿದೆ. (ಅನೃತವೇ ಮುಂತಾದ ಹದಿನೆಂಟು) ದಮದೋಷಗಳು ಯಾವವು ಉಂಟೋ ಅವುಗಳ ವಿರುದ್ಧವಾದ ಗುಣಗಳೇ ಈ ಮದದೋಷಗಳೆಂದು ಹೇಳಲ್ಪಟ್ಟವೆ.

---

1. ದಮವು ಈ ಹದಿನೆಂಟುದೋಷಗಳಿಂದ ದೂರವಾಗಿರಬೇಕು– ಎಂದಭಿಪ್ರಾಯ.
2. 'ಮದದೋಷಾ' ಎಂದು ಪಾಠ.

( ಭಾಷ್ಯ )

ಇದಾನೀಂ ಮದದೋಷಾನಾಹ– ಮದೋಽಷ್ಟಾದಶದೋಷಃ ಸ್ಯಾತ್ | ತ್ಯಾಗಶ್ಚ ಷಡ್ವಿಧೋ ಭವತಿ | ವಿಪರ್ಯಯಾಃ ಸ್ಮೃತಾ ಏತೇ ಅನೃತಾದಿ ಹಿಂಸಾನ್ತಾಃ ಯೇ ದಮದೋಷತ್ವೇನ ಸ್ಮೃತಾಃ, ತ ಏತೇ ವಿಪರ್ಯಯಾಃ ಸ್ಮೃತಾಃ ಸತ್ಯಾದಿರೂಪತ್ವೇನ ಸ್ಮೃತಾಃ ಮದದೋಷಾಃ ಮದನಾಶಕರಾಃ ಉದಾಹೃತಾಃ | ಕೇ ತೇ ಸತ್ಯಾಪೈಶುನಾತೃಷ್ಣಾ ಅಪ್ರಾತಿಕೂಲ್ಯಾತಮೋಽರತಿ ಲೋಕಾದ್ವೇಷಾನಭಿಮಾನಾವಿವಾದಾಪ್ರಾಣಿಹಿಂಸಾಪರೀವಾದಾನತಿವಾದಾಪರಿ ತಾಪಾಕ್ಷಮಾಧೃತಿಸಿದ್ಧ್ಯಪಾಪಕೃತ್ಯಾಹಿಂಸಾ ಇತ್ಯೇತೇ ಮದನಾಶಕರಾ ಉದಾ ಹೃತಾಃ ||

( ಭಾಷ್ಯಾರ್ಥ )

ಈಗ ಮದದೋಷಗಳನ್ನು ಹೇಳುತ್ತಾನೆ : ಮದವು (ಹದಿನೆಂಟು) ದೋಷ (ಗಳಿಂದ ನಾಶಗೊಳಿಸ)ತಕ್ಕದ್ದು. ಮತ್ತು ತ್ಯಾಗವೆಂಬುದು ಆರು ವಿಧವಾಗಿದೆ.[1] ದಮದೋಷಗಳೆಂದು ಅನೃತದಿಂದ ಹಿಡಿದು ಹಿಂಸೆಯವರೆಗಿನ ಯಾವವನ್ನು ಹಿಂದೆ ತಿಳಿಸಲಾಯಿತೋ ಅವುಗಳಿಗೆ ವಿರುದ್ಧವಾದವುಗಳೇ ಈ ಮದದೋಷ ಗಳಾಗಿವೆ– ಎಂದರೆ ಸತ್ಯವೇ ಮುಂತಾದ ರೂಪದಿಂದ ಹೆಸರಿಸಲ್ಪಟ್ಟ (ಅನೃತಾದಿ ಗಳಿಗೆ) ವಿಪರೀತವಾದ ಇವುಗಳು ಮದದೋಷಗಳು ಎಂದರೆ ಮದವನ್ನು ಕಳೆ ಯುವ (ಸಾಧನ)ಗಳು ಎಂದಭಿಪ್ರಾಯ. ಅವು ಯಾವವು ? ಎಂದರೆ- ಸತ್ಯ, ಚಾಡಿಹೇಳದೆಇರುವಿಕೆ, ವಿಷಯಗಳ ಹಂಬಲವಿಲ್ಲದಿರುವದು, ಯಾರಿಗೂ ವಿರೋಧವಾಗದಂತೆ ನಡೆಯುವದು, ಜಾಣನಾಗಿರುವದು, ಸ್ತ್ರೀಅಭಿಲಾಷೆಯಿಲ್ಲ ದಿರುವದು, ಜನರಿಗೆ ನೋವಾಗದಂತೆ ನಡೆಯುವದು, ಅಭಿಮಾನವಿಲ್ಲದಿರುವದು, ಜಗಳವಾಡದೆಇರುವದು, ಪ್ರಾಣಿಗಳನ್ನು ಕೊಲ್ಲದೆಇರುವದು, ಮತ್ತೊಬ್ಬರನ್ನು ದೂಷಿಸದೆಇರುವದು, ಮಿತಿಮೀರಿ ಮಾತನಾಡದಿರುವದು, ದುಃಖಕ್ಕಾಗಿ ಚಿಂತಿಸದೆ ಇರುವದು, ಸಹಿಸಿಕೊಳ್ಳುವದು, (ಇಂದ್ರಿಯಗಳನ್ನು) ಜಗ್ಗಿಹಿಡಿಯುವದು, ಸಿದ್ಧಿ (ಯನ್ನು ಸಂಪಾದಿಸುವದು), ಪಾಪಕೆಲಸಗಳನ್ನು ಮಾಡದಿರುವದು, ಹಿಂಸೆ ಮಾಡದಿರುವದು– ಇವೇ ಮದನಾಶಕರವಾದ ದೋಷಗಳೆಂದು ಹೇಳಲ್ಪಟ್ಟಿವೆ.

## ಆರು ತ್ಯಾಗಗಳು

**ಶ್ರೇಯಾಂಸ್ತು ಷಡ್ವಿಧಸ್ತ್ಯಾಗಃ ತೃತೀಯಸ್ತತ್ರ ದುಷ್ಕರಃ[2] |**
**ತೇನ ದುಃಖಂ ತರನ್ತ್ಯೇವ[3] ತಸ್ಮಿಂಸ್ತ್ಯಕ್ತೇ ಜಿತಂ ಭವೇತ್[4] || ೭೫ ||**

---

1. ಇದನ್ನು ಮುಂದಿನ ಶ್ಲೋಕಗಳಲ್ಲಿ ವಿವರಿಸಲಾಗುವದು.
2. 'ತೃತೀಯೋ ದುಷ್ಕರೋ ಭವೇತ್' 3. 'ತರತ್ಯೇವ'
4. 'ಭಿನ್ನಂ ತಸ್ಮಿನ್ ಜಿತಂ ಕೃತೇ' ಎಂದು ಮಹಾಭಾರತದ ಪಾಠಗಳು.

೨೫. ಆರುವಿಧವಾದ ತ್ಯಾಗವು ಶ್ರೇಯಸ್ಕರವು. ಆದರೆ ಮೂರನೆಯದು (ಅನುಷ್ಠಾನಮಾಡಲು) ಕಷ್ಟಸಾಧ್ಯವಾದದ್ದು. ಅದರಿಂದ ದುಃಖವನ್ನು ದಾಟಿಯೇತೀರುತ್ತಾರೆ. ಆ ತ್ಯಾಗವನ್ನು ಮಾಡಲಾಗಿ ಎಲ್ಲವನ್ನೂ ಗೆದ್ದಂತೆಯೇ ಆಗುವದು.

( ಭಾಷ್ಯ )

'ತ್ಯಾಗೋ ಭವತಿ ಷಡ್ವಿಧಃ' ಇತ್ಯುಕ್ತಮ್ । ತತ್ರಾಹ– ಶ್ರೇಯಾನ್ ತು ಷಡ್ವಿಧಸ್ತ್ಯಾಗಃ । ತತ್ರ ಏತೇಷು ಷಡ್ವಿಧತ್ಯಾಗೇಷು ಮಧ್ಯೇ ತೃತೀಯಃ ತ್ಯಾಗೋ ದುಷ್ಕರೋ ಭವತಿ ದುಃಖಸಂಪಾದ್ಯಃ । ತೇನ ತೃತೀಯೇನ ತ್ಯಾಗೇನ ದುಃಖಮ್ ಆಧ್ಯಾತ್ಮಿಕಾದಿಭೇದಭಿನ್ನಂ ತರನ್ತ್ಯೇವ ತಸ್ಮಿನ್ ತ್ಯಾಗೇ ಕೃತೇ ಸತಿ ಸರ್ವಂ ಜಿತಂ ಭವೇತ್ ॥

( ಭಾಷ್ಯಾರ್ಥ )

'ತ್ಯಾಗವು ಆರು ವಿಧವಾಗಿದೆ' ಎಂದು ಹೇಳಿತ್ತಷ್ಟೆ ! ಅದನ್ನು ವಿವರಿಸುತ್ತಾನೆ : ಆರುವಿಧವಾದ ತ್ಯಾಗವಾದರೋ ಶ್ರೇಯಸ್ಕರವು. ಈ ಆರು ವಿಧವಾದ ತ್ಯಾಗಗಳಲ್ಲಿ, ಇವುಗಳ ನಡುವೆ ಮೂರನೆಯ ತ್ಯಾಗವು ದುಷ್ಕರವು ; ಎಂದರೆ ದುಃಖದಿಂದ ಪಡೆಯತಕ್ಕದ್ದು. ಆ ಮೂರನೆಯ ತ್ಯಾಗದಿಂದ ದುಃಖವನ್ನು– ಎಂದರೆ ಆಧ್ಯಾತ್ಮಿಕವೇ ಮುಂತಾದ ಭೇದಗಳಿಂದ ಬೇರೆಬೇರೆಯಾಗಿ ಕಾಣುವದನ್ನು– ದಾಟಿಯೇತೀರುತ್ತಾರೆ. ಆ ತ್ಯಾಗವು ಆಚರಿಸಲ್ಪಡಲಾಗಿ ಎಲ್ಲವೂ ಗೆಲ್ಲಲ್ಪಟ್ಟಂತೆಯೇ ಸರಿ.

**ಅರ್ಹತೇ ಯಾಚಮಾನಾಯ ಪುತ್ರಾನ್ ವಿತ್ತಂ ದದಾತಿ ಯತ್ ।**
**ಇಷ್ಟಾಪೂರ್ತಂ ದ್ವಿತೀಯಂ ಸ್ಯಾನ್ನಿತ್ಯಂ ವೈರಾಗ್ಯಯೋಗತಃ[1] ॥ ೨೬ ॥**
**ಕಾಮತ್ಯಾಗಶ್ಚ ರಾಜೇನ್ದ್ರ ಸ ತೃತೀಯ ಇತಿ ಸ್ಮೃತಃ ।**
**ಅಪ್ರಮಾದೀ ಭವೇದೇತೈಃ ಸ ಚಾಪ್ಯಷ್ಟಗುಣೋ ಮತಃ ॥ ೨೭ ॥**

---

1. ಅಚ್ಚಿನ ಮಹಾಭಾರತದಲ್ಲಿ ಈ ಶ್ಲೋಕಗಳಿಗೆ ಮುಂಚೆ ಕೆಳಗಿನ ಶ್ಲೋಕಗಳಿವೆ:
"ಶ್ರೇಯಾಂಸ್ತು ಷಡ್ವಿಧಸ್ತ್ಯಾಗಃ ಪ್ರಿಯಂ ಪ್ರಾಪ್ಯ ನ ಹೃಷ್ಯತಿ । ಇಷ್ಟಾಪೂರ್ತೇ ದ್ವಿತೀಯಂ ಸ್ಯಾತ್ ನಿತ್ಯವೈರಾಗ್ಯಯೋಗತಃ । ಕಾಮತ್ಯಾಗಶ್ಚ ರಾಜೇನ್ದ್ರ ಸ ತೃತೀಯ ಇತಿ ಸ್ಮೃತಃ । ಅಪ್ಯವಾಚ್ಯಂ ವದನ್ತ್ಯೇತಂ ಸ ತೃತೀಯೋ ಗುಣಃ ಸ್ಮೃತಃ । ತ್ಯಕ್ತೈ-ರ್ದ್ರವ್ಯೈರ್ಯದ್ಭವತಿ ನೋಪಯುಕ್ತೈಶ್ಚ ಕಾಮತಃ । ನ ಚ ದ್ರವ್ಯೈಸ್ತದ್ಭವತಿ ನೋಪಯುಕ್ತೈಶ್ಚ ಕಾಮತಃ । ನ ಚ ಕರ್ಮಸ್ವಸಿದ್ಧೇಷು ದುಃಖಂ ತೇನ ಚ ನ ಗ್ಲಪೇತ್ । ಸರ್ವೈರೇವ ಗುಣೈರ್ಯುಕ್ತೋ ದ್ರವ್ಯವಾನಪಿ ಯೋ ಭವೇತ್ । ಅಪ್ರಿಯೇ ಚ ಸಮುತ್ಪನ್ನೇ ವ್ಯಥಾಂ ಜಾತು ನ ಗಚ್ಛತಿ । ಇಷ್ಟಾನ್ ಪುತ್ರಾಂಶ್ಚ ದಾರಾಂಶ್ಚ ನ ಯಾಚೇತ ಕದಾಚನ" ॥

೨೬-೨೭. ಎಲೈ ರಾಜನೆ, ಯೋಗ್ಯನಾದ, ಯಾಚನೆಮಾಡುವಂಥವನಿಗೆ ಯಾವನು ಮಕ್ಕಳನ್ನೂ ಐಶ್ವರ್ಯವನ್ನೂ ಕೊಡುವನೋ (ಅದು) ಮೊದಲನೆಯ ತ್ಯಾಗವು). ಇಷ್ಟಾಪೂರ್ತಗಳೆಂಬಿವು ಎರಡನೆಯವು. ಯಾವಾಗಲೂ ವೈರಾಗ್ಯದಿಂದ ಕೂಡಿ ಕಾಮವನ್ನು ತ್ಯಾಗಮಾಡುವದು ಮೂರನೆಯದು. ಇವುಗಳಿಂದ ಎಂದಿಗೂ ತಪ್ಪಬಾರದು. (ಅಪ್ರಮಾದ) ವೆಂಬುದು ಎಂಟು ಗುಣಗಳಿಂದ ಕೂಡಿದ್ದಾಗಿದೆ.

(ಭಾಷ್ಯ)

ತ್ಯಾಗಷಟ್ಕಂ ದರ್ಶಯತಿ । ಅರ್ಹತೇ ಯೋಗ್ಯಾಯ ಯಾಚಮಾನಾಯ ಪುತ್ರಾನ್ ವಿತ್ತಂ ದದಾತಿ ಇತಿ ಯತ್ ತದೇತತ್ ತ್ಯಾಗದ್ವಯಂ ಷಣ್ಣಾಂ ಮಧ್ಯೇ ಪ್ರಥಮಮ್ । ಇಷ್ಟಾಪೂರ್ತಂ ದ್ವಿತೀಯಂ ಸ್ಯಾತ್ । ಇಷ್ಟಂ ಶ್ರೌತೇ ಕರ್ಮಣಿ ಯದ್ದಾನಮ್ । ಪೂರ್ತಂ ಸ್ಮಾರ್ತಕರ್ಮಣಿ । ಇಷ್ಟಂ ದೇವೇಭ್ಯೋ ದತ್ತಮ್ । ಪೂರ್ತಂ ಪಿತೃಭ್ಯ ಇತಿ ಕೇಚಿತ್ । ನಿತ್ಯಂ ವೈರಾಗ್ಯಯೋಗತಃ ವಿಶುದ್ಧಸತ್ತ್ವಸ್ಯ ಅನಿತ್ಯತ್ವಾದಿದೋಷದರ್ಶಿನಃ ತತೋ ವಿರಕ್ತತಯಾ ಧನಾದಿ ಪರಿತ್ಯಾಗಃ ಕಾಮತ್ಯಾಗಶ್ಚ ರಾಜೇನ್ದ್ರ, ಸ ತೃತೀಯ ಇತಿ ಸ್ಮೃತಃ । ಕಿಮೇತೈರ್ಭವತೀತ್ಯತ ಆಹ – ಅಪ್ರಮಾದೀತಿ । ಅಪ್ರಮಾದಿನಾಂ ಕಾಮೋ ನಶ್ಯತಿ । ಉಕ್ತಂ ರಾಜಧರ್ಮೇಷು– 'ಅಪಧ್ಯಾನಮಲೋ ಧರ್ಮೋ ಮಲೋಽರ್ಥಸ್ಯ ನಿಗೂಹನಮ್ । ಅಪ್ರಮಾದಮಲಃ ಕಾಮೋ ಭೂಯಃ ಸ ಗುಣವರ್ಧನಃ' । ಯ ಏತೈಃ ಷಡ್ಭಿಃ ಸಮನ್ವಿತಃ ತ್ಯಾಗೈಃ ಸಃ ಅಪ್ರಮಾದೀ ಭವೇತ್ । ಸ ಅಪ್ರಮಾದಃ ಅಷ್ಟಗುಣಃ ಅಷ್ಟಭಿರ್ಗುಣೈಃ ಸಮನ್ವಿತೋ ಭವತಿ ॥

(ಭಾಷ್ಯಾರ್ಥ)

ಆರು ತ್ಯಾಗಗಳನ್ನು ತಿಳಿಸುತ್ತಾರೆ : ಅರ್ಹನಾದ ಎಂದರೆ ಯೋಗ್ಯನಾದ ಬೇಡುವವನಿಗೆ ಮಕ್ಕಳನ್ನೂ[1] ಹಣವನ್ನೂ ದಾನಮಾಡುವದೆಂಬುದು– ಈ ಎರಡು ತ್ಯಾಗಗಳೆಂಬಿವು– ಆರು (ತ್ಯಾಗಗಳೊಳಗೆ) ಮೊದಲನೆಯವು.[2] ಇಷ್ಟಾಪೂರ್ತಗಳೆಂಬಿವು ಎರಡನೆಯವು. ಇಷ್ಟವೆಂದರೆ ಶ್ರೌತಕರ್ಮದಲ್ಲಿ ಮಾಡುವ ದಾನವು. ಪೂರ್ತವೆಂದರೆ ಸ್ಮಾರ್ತಕರ್ಮದಲ್ಲಿ ಮಾಡುವ (ದಾನವು). ಕೆಲವರು ದೇವತೆಗಳಿಗೆ ಅರ್ಪಿಸುವದನ್ನು ಇಷ್ಟವೆಂದೂ ಪಿತೃಗಳಿಗೆ ಅರ್ಪಿಸುವದನ್ನು ಪೂರ್ತವೆಂದೂ

1. ಪುತ್ರಾನ್– ಎಂದೇ ಮೂಲವಿದೆಯಾದರೂ ಅರ್ಥವು ಹೊಂದುವದಕ್ಕಾಗಿ ಗಂಡುಮಗನಂತೆ ಸಾಕಿದ ಹೆಣ್ಣುಮಕ್ಕಳನ್ನು – ಎಂದು ಅರ್ಥಮಾಡಿಕೊಳ್ಳಬೇಕು. ಕನ್ಯಾದಾನವೇ ಇಲ್ಲಿ ಪ್ರಕೃತ.

2. ಮೊದಲನೆಯ ಜೋಡಿ– ಎಂದಭಿಪ್ರಾಯ.

ಹೇಳುವರು. ಎಲೈ ರಾಜೇಂದ್ರನೆ, ಯಾವಾಗಲೂ ವೈರಾಗ್ಯದಿಂದ ಅಂತಃಕರಣ ಶುದ್ಧಿಯುಳ್ಳವನಾಗಿ, ವಿಷಯಗಳಲ್ಲಿ ಅನಿತ್ಯತ್ವವೇ ಮುಂತಾದ ದೋಷದೃಷ್ಟಿಯುಳ್ಳವನು ವೈರಾಗ್ಯದಿಂದ ಹಣವೇ ಮುಂತಾದದ್ದನ್ನು ತ್ಯಾಗಮಾಡುವದು, ಮತ್ತು ಕಾಮವನ್ನು ಬಿಡುವದು- ಇವು ಮೂರನೆಯದು- ಎಂದು ಹೇಳಲ್ಪಟ್ಟದೆ. ಇವುಗಳಿಂದೇನಾಗುವದು ? ಎಂದರೆ ಹೇಳುತ್ತಾರೆ : ಅಪ್ರಮಾದಿಯಾಗುವನು, ಪ್ರಮಾದವಿಲ್ಲದವರಿಗೆ ಕಾಮಗಳು ನಾಶವಾಗುವವು. ರಾಜಧರ್ಮಗಳಲ್ಲಿ "(ಆತ್ಮ) ಚಿಂತನೆ ಗೆ ಅಡ್ಡಿಯಾದ) ದೋಷಗಳಿಂದ ದೂರವಾದ (ಸಾಧನವೇ) ಧರ್ಮವು. ಮಲವೆಂದರೆ ಹಣವನ್ನು ಬಚ್ಚಿಡುವದೇ ಆಗಿದೆ. (ಹಾಗೆಯೇ) (ಧರ್ಮವಿರುದ್ಧವಾದ) ಕಾಮವೆಂಬುದು ಅಪ್ರಮಾದ(ವೆಂಬ) ಮಲ(ದೋಷ)ವುಳ್ಳದ್ದಾಗಿದೆ.[1] ಅದು ಮತ್ತೆಮತ್ತೆ ಗುಣ(ಗಳನ್ನು) ಹೆಚ್ಚಿಸುವದು"[2] ಎಂದು ಹೇಳಿದೆ.[3] ಆದರೆ ಯಾವನು ಈ ಆರು ತ್ಯಾಗಗಳಿಂದ[4] ಕೂಡಿರುವನೋ ಅವನು ಅಪ್ರಮಾದಿಯಾಗುವನು. ಆ ಅಪ್ರಮಾದವೆಂಬುದು ಎಂಟು ಗುಣಗಳುಳ್ಳದ್ದು - ಎಂದರೆ ಎಂಟು ಗುಣಗಳಿಂದ ಕೂಡಿದ್ದಾಗಿರುತ್ತದೆ.

**ಸತ್ಯಂ ಧ್ಯಾನಂ ಸಮಾಧಾನಂ ಚೋದ್ಯಂ ವೈರಾಗ್ಯಮೇವ ಚ ।**
**ಅಸ್ತೇಯೋ ಬ್ರಹ್ಮಚರ್ಯಂ ಚ ತಥಾಽಸಂಗ್ರಹ ಏವ ಚ ॥ ೨೮ ॥**

೨೮. ಸತ್ಯ, ಧ್ಯಾನ, ಸಮಾಧಾನ, (ಬಂಧಮೋಕ್ಷವಿಷಯವಾದ) ಪ್ರಶ್ನೆ, ವೈರಾಗ್ಯ, ಅಸ್ತೇಯ, ಬ್ರಹ್ಮಚರ್ಯ, ಮತ್ತು ಅಸಂಗ್ರಹ- ಇವೇ (ಎಂಟು ಗುಣಗಳು.)

**(ಭಾಷ್ಯ)**

ಕೇ ತೇ ? ತಾನ್ ದರ್ಶಯತಿ । ಸತ್ಯಂ ಯಥಾರ್ಥಸಂಭಾಷಣಮ್ । ಧ್ಯಾನಂ ಚೇತಸಃ ಕಸ್ಮಿಂಶ್ಚಿತ್ ಶುಭಾಶ್ರಯೇ ಮಣ್ಡಲಪುರುಷಾದೌ ತೈಲಧಾರಾವತ್ ಸಂತತ್ಯವಚ್ಛೇದಿನೀ ಪ್ರವೃತ್ತಿಃ । ಸಮಾಧಾನಂ ಪ್ರಣವೇನ ವಿಶ್ವಾದ್ಯುಪಸಂಹಾರಂ ಕೃತ್ವಾ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹಾತ್ಮನಾವಸ್ಥಾನಮ್ । ಚೋದ್ಯಮ್, 'ಕೋಽಹಂ, ಕಸ್ಯ ಕುತೋ ವಾ' ಇತ್ಯಾದಿ । ವೈರಾಗ್ಯಂ ದೃಷ್ಟಾನುಶ್ರವಿಕವಿಷಯವಿತೃಷ್ಣತಾ । ಅಸ್ತೇಯಃ ಅಚೌರ್ಯ

1. ಅಪ್ರಮಾದವು ಕಾಮಕ್ಕೆ ವಿರುದ್ಧವಾದ ಗುಣವು- ಎಂದರ್ಥ.

2. ತ್ರಿಗುಣಗಳ ಉದ್ರೇಕವನ್ನುಂಟುಮಾಡುವದು.

3. ಈ ಶ್ಲೋಕದ ಸರಿಯಾದ ಅರ್ಥವೇನೆಂಬುವನ್ನು ವಿದ್ವಾಂಸರು ಪರಿಶೀಲಿಸಬೇಕಾಗಿದೆ

4. ಕನ್ಯಾದಾನ, ಧನದಾನ, ದೇವತೆಗಳಿಗೆ ಕೊಡುವ ಹವಿರ್ದಾನ, ಪಿತೃಗಳಿಗೆ ಅರ್ಪಿಸುವ ಶ್ರಾದ್ಧಕರ್ಮ, ವೈರಾಗ್ಯದಿಂದ ಮಾಡುವ ವಿತ್ತತ್ಯಾಗ, ಮತ್ತು ಕಾಮತ್ಯಾಗ ಈ ಆರು ತ್ಯಾಗಗಳಿಂದ- ಎಂದಭಿಪ್ರಾಯ.

ಮಾತ್ಮನೋ ದ್ರವ್ಯಸ್ಯ ವಾ । ಆತ್ಮಚೌರ್ಯಮುಕ್ತಮ್– 'ಯೋಽನ್ಯಥಾ ಸನ್ತಮಾತ್ಮಾನಮ್' (೧–೩೩)ಇತಿ । ಬ್ರಹ್ಮಚರ್ಯಮ್– ಅಷ್ಟಾಙ್ಗಮೈಥುನ ತ್ಯಾಗಃ । ತಥಾ ಚೋಕ್ತಮ್– 'ಸ್ಮರಣಂ ಕೀರ್ತನಂ ಕೇಳಿಃ ವೀಕ್ಷಣಂ ಗುಹ್ಯಭಾಷಣಮ್ । ಸಂಕಲ್ಪೋಽಧ್ಯವಸಾಯಶ್ಚ ಕ್ರಿಯಾನಿಷ್ಪತ್ತಿರೇವ ಚ । ಏತನ್ಮೈಥುನಮಷ್ಟಾಙ್ಗಂ ಪ್ರವದನ್ತಿ ಮನೀಷಿಣಃ । ವಿಪರೀತಂ ಬ್ರಹ್ಮಚರ್ಯಮೇತದೇವಾಷ್ಟಲಕ್ಷಣಮ್' ಇತಿ । ಅಸಂಗ್ರಹಃ ಅಪರಿಗ್ರಹಃ ಪುತ್ರದಾರ ಕ್ಷೇತ್ರಾದೀನಾಮ್ । ಏತಾನ್ ಪರಿಪಾಲಯೇತ್ ॥

(ಭಾಷ್ಯಾರ್ಥ)

ಅವುಗಳಾವುವು ? ಎಂದರೆ ಅವುಗಳನ್ನು ತಿಳಿಸುತ್ತಾರೆ : ಸತ್ಯವು– ಎಂದರೆ ಇದ್ದದ್ದು ಇದ್ದಂತೆ ನುಡಿಯುವದು ; ಧ್ಯಾನವೆಂದರೆ (ಸೂರ್ಯ)ಮಂಡಲದಲ್ಲಿರುವ ಪುರುಷನೇ ಮುಂತಾದಂಥ ಶುಭವಾದ ಆಶ್ರಯದಲ್ಲಿ[1] ಮನಸ್ಸನ್ನು ಎಣ್ಣೆಯ ಧಾರೆಯಂತೆ ಕಡಿವಡೆಯದೆ ಇರುವ (ಚಿಂತನ) ವ್ಯಾಪಾರದಿಂದ (ನೆಲೆಗೊಳಿಸುವದು). ಸಮಾಧಾನವೆಂದರೆ ಓಂಕಾರದ ಮೂಲಕ ವಿಶ್ವನೇ ಮುಂತಾದ ಆತ್ಮರುಗಳನ್ನು (ತನ್ನಲ್ಲಿ) ಲಯಮಾಡಿಕೊಂಡು[2] ಸ್ವಾಭಾವಿಕವಾದ ಚಿದ್ರೂಪವಾದ ಸದಾನಂದಾದ್ವಿತೀಯವಾದ ಬ್ರಹ್ಮರೂಪದಿಂದ ನೆಲೆನಿಲ್ಲುವದು.[3] ಚೋದ್ಯವೆಂದರೆ 'ನಾನು ಯಾರು ? ಯಾರವನು ? ಎಲ್ಲಿಂದ ಬಂದೆನು ?' ಎಂಬಿದೇ ಮುಂತಾದ (ವಿಚಾರ)ರೂಪವಾದದ್ದು. ವೈರಾಗ್ಯವೆಂದರೆ ಇಹಲೋಕದ ಮತ್ತು ಪರಲೋಕದ (ಭೋಗ)ವಿಷಯದಲ್ಲಿ ಆಶೆಯಿಲ್ಲದಿರುವದು. ಅಸ್ತೇಯವೆಂದರೆ ತನ್ನನ್ನು ಕದ್ದುಕೊಳ್ಳದಿರುವದು, ಅಥವಾ ಧನವನ್ನು ಕದಿಯದಿರುವದು. 'ಯಾವನು ಬೇರೆ ರೀತಿಯಿಂದಿರುವ ತನ್ನನ್ನು ಮತ್ತೊಂದುರೀತಿಯಿಂದ ತಿಳಿಯುವನೋ (ಅವನು ಆತ್ಮಚೋರನು)' ಎಂದು ಆತ್ಮಚೌರ್ಯವನ್ನು ಹೇಳಿರುತ್ತದೆ. ಬ್ರಹ್ಮಚರ್ಯವೆಂದರೆ ಎಂಟುವಿಧವಾದ ಮೈಥುನವನ್ನೂ ತ್ಯಾಗಮಾಡುವದು. (ಅವು ಯಾವವೆಂದರೆ :) (೧) (ಸ್ತ್ರೀಯನ್ನು) ನೆನೆಸಿಕೊಳ್ಳುವದು, (ಆಕೆಯ ಬಗ್ಗೆ) ಮಾತನಾಡುವದು, (ಆಕೆಯೊಡನೆ) ಆಟವಾಡುವದು, (ಆಕೆಯನ್ನು ಕಾಮದೃಷ್ಟಿಯಿಂದ) ನೋಡುವದು, ರಹಸ್ಯವಾಗಿ ಮಾತನಾಡುವದು, (ಆಕೆಯೊಡನೆ) ಬೆರೆಯಲು ನಿಶ್ಚಯಿಸುವದು, ಅದನ್ನು ಗಟ್ಟಿಗೊಳಿಸುವದು, ಕಾರ್ಯವನ್ನು ನೆರವೇರಿಸಿಬಿಡುವದು – ಇವೇ ಎಂಟು ವಿಧವಾದ ಮೈಥುನಗಳೆಂದೂ, ಇವಕ್ಕೆ ವಿರುದ್ಧವಾದ ಎಂಟು– ರೀತಿಯ ಲಕ್ಷಣಗಳುಳ್ಳ (ನಿಯಮಗಳೇ) ಬ್ರಹ್ಮಚರ್ಯವು –ಎಂದು (ಬಲ್ಲವರು ಹೇಳುವರು.) ಅಸಂಗ್ರಹವೆಂದರೆ ಮಗ, ಹೆಂಡತಿ, ಹೊಲ–

---

1. ಛಾಂ. ೧–೬–೬ರ ಸೂಚನೆ. 2. ಮಾಂ. ಕಾ. ೧–೩ಳನ್ನು ನೋಡಿ.

3. ಈ ಪದವೃಂದವು ಗ್ರಂಥಕಾರರಿಗೆ ತುಂಬ ಮೆಚ್ಚು. ಅವತರಣಿಕೆಯನ್ನು ನೋಡಿ.

ಮುಂತಾದ ಏನನ್ನೂ ಸ್ವೀಕರಿಸದೆ (ಕೂಡಿಹಾಕದೆ) ಇರುವದು. ಹೀಗೆ ಈ (ಸತ್ಯಾದಿಗಳನ್ನು) ಕಾಪಾಡಿಕೊಳ್ಳಬೇಕು.

ಏವಂ ದೋಷಾ ದಮಸ್ಯೋಕ್ತಾ[1]
ಸ್ತಾನ್ ದೋಷಾನ್ ಪರಿವರ್ಜಯೇತ್ ।
ದೋಷತ್ಯಾಗೇಽಪ್ರಮಾದಃ ಸ್ಯಾತ್[2]
ಸ ಚಾಪ್ಯಷ್ಟಗುಣೋ ಮತಃ ॥ ೨೯ ॥

೨೯. ಈ ರೀತಿಯಾಗಿ ದಮದ ದೋಷಗಳನ್ನು ಹೇಳಿದ್ದಾಯಿತು. ಆ ದೋಷಗಳನ್ನು ಬಿಡಬೇಕು. ದೋಷಗಳನ್ನು ಬಿಡಲಾಗಿ ಅಪ್ರಮಾದವಾಗುವದು. ಅದೂ ಸಹ ಎಂಟುಗುಣಗಳುಳ್ಳದ್ದಾಗಿದೆ.

(ಭಾಷ್ಯ)

ದೋಷಾನ್ ವಿವರ್ಜಯೇದಿತ್ಯಾಹ । ದಮೋಽಷ್ಟಾದಶ ದೋಷಃ ಸ್ಯಾತ್ ಇತಿ ಯೇ ದೋಷಾ ಉಕ್ತಾಃ, ತಾನ್ ದೋಷಾನ್ ಪರಿವರ್ಜಯೇತ್ । ಕಸ್ಮಾತ್ ? ಇತ್ಯಾಹ- ತೇಷು ದೋಷೇಷು ತ್ಯಕ್ತೇಷು ಪ್ರಮಾದೀ ನ ಭವೇದಿತ್ಯರ್ಥಃ । ಸೋಽಪಿ ಅಪ್ರಮಾದಃ ಅಷ್ಟಗುಣೋ ಮತಃ, 'ಸತ್ಯಂ ಧ್ಯಾನಮ್' (೨-೨೮) ಇತ್ಯಾದಿನಾ ಪೂರ್ವಮೇವೋದ್ದಿಷ್ಟತ್ವಾತ್ ಇತ್ಯರ್ಥಃ ॥

( ಭಾಷ್ಯಾರ್ಥ )

ದೋಷಗಳನ್ನು ಬಿಡಬೇಕೆಂದು ಹೇಳುತ್ತಾನೆ. 'ದಮವು ಹದಿನೆಂಟು ದೋಷಗಳುಳ್ಳದ್ದು- ಎಂಬುದಾಗಿ ಯಾವ ದೋಷಗಳನ್ನು ಹೇಳಿದ್ದಾರೋ ಆ ದೋಷಗಳನ್ನು ಬಿಡಬೇಕು. ಏತಕ್ಕಾಗಿ ? ಎಂದರೆ ಆ ದೋಷಗಳನ್ನು ಬಿಡಲಾಗಿ ಪ್ರಮಾದಿಯಾಗುವದಿಲ್ಲ. ಆ ಅಪ್ರಮಾದವೆಂಬುದೂ ಎಂಟು ಗುಣಗಳುಳ್ಳದ್ದು. 'ಸತ್ಯಂ ಧ್ಯಾನಮ್' ಎಂದು ಮುಂತಾಗಿ ಮೊದಲೇ ಉದ್ದೇಶಿಸಿ (ಹೇಳಿದೆ) ಯಾದ್ದರಿಂದ- ಎಂದಭಿಪ್ರಾಯ.

## ಸತ್ಯದ ಸ್ತುತಿ

ಸತ್ಯಾತ್ಮಾ ಭವ ರಾಜೇನ್ದ್ರ ಸತ್ಯೇ ಲೋಕಾಃ ಪ್ರತಿಷ್ಠಿತಾಃ ।
ತಾಂಸ್ತು ಸತ್ಯಮುಖಾನಾಹುಃ ಸತ್ಯೇ ಹ್ಯಮೃತಮಾಹಿತಮ್ ॥ ೩೦ ॥

---

1. 'ಮದಸ್ಯೋಕ್ತಾ'
2. 'ತಥಾ ತ್ಯಾಗೋಽಪ್ರಮಾದಶ್ಚ' ಎಂದು ಮಹಾಭಾರತದ ಪಾಠಗಳು.

೩೦. ಎಲೈ ರಾಜಶ್ರೇಷ್ಠನೆ, ನೀನು ಸತ್ಯವಂತನಾಗು, ಲೋಕಗಳೆಲ್ಲವೂ ಸತ್ಯದಲ್ಲಿ ನೆಲೆನಿಂತಿವೆ. ಅವುಗಳನ್ನು ಸತ್ಯಪ್ರಧಾನವಾದವುಗಳೆಂದು ಬಲ್ಲವರು ಹೇಳುವರು. ಸತ್ಯದಲ್ಲಲ್ಲವೆ, ಅಮೃತವು ಇಡಲ್ಪಟ್ಟಿರುವದು.

(ಭಾಷ್ಯ)

ಇದಾನೀಂ ಸತ್ಯಸ್ತುತಿಃ ಕ್ರಿಯತೇ[1] । ಸತ್ಯಾತ್ಮಾ ಸತ್ಯಸ್ವರೂಪೋ ಭವ ಹೇ ರಾಜೇನ್ದ್ರ, ಸತ್ಯೇ ಲೋಕಾಃ ಪ್ರತಿಷ್ಠಿತಾಃ ತಾಂಸ್ತು ಸತ್ಯಮುಖಾನ್ ಸತ್ಯಪ್ರಧಾನಾನ್ ಸತ್ಯಾಧೀನಾತ್ಮಲಾಭಾನ್ ಆಹುಃ । ಸತ್ಯೇ ಹಿ ಅಮೃತಮಾಹಿತಮ್ । ಅಮೃತಂ ಮೋಕ್ಷಃ ॥

(ಭಾಷ್ಯಾರ್ಥ)

ಈಗ ಸತ್ಯದ ಸ್ತುತಿಯನ್ನು ಮಾಡಲಾಗುತ್ತದೆ. ಎಲೈ ರಾಜಶ್ರೇಷ್ಠನೆ, (ನೀನು) ಸತ್ಯಾತ್ಮನಾಗು– ಎಂದರೆ ಸತ್ಯರೂಪನಾಗು. ಲೋಕಗಳು ಸತ್ಯದಲ್ಲಿ ನೆಲೆಗೊಳಿಸಲ್ಪಟ್ಟಿವೆ. ಅವುಗಳನ್ನಾದರೋ ಸತ್ಯಮುಖಗಳೆಂದು – ಸತ್ಯವೇ ಪ್ರಧಾನವಾಗುಳ್ಳವುಗಳೆಂದು– ಎಂದರೆ ಸತ್ಯದಿಂದ ಸಿಕ್ಕತಕ್ಕವುಗಳೆಂದು ಹೇಳುವರು. ಸತ್ಯದಲ್ಲಿಯೇ ಅಮೃತವು ಇಡಲ್ಪಟ್ಟಿರುವದು. ಅಮೃತದಿಂದಲೇ ಮೋಕ್ಷವು.

**ನಿವೃತ್ತೇನೈವ ದೋಷೇಣ ತಪೋ ವ್ರತಮಿಹಾಚರೇತ್ ।**
**ಏತದ್ಧಾತ್ರಾ ಕೃತಂ ವಿತ್ತಂ[2] ಸತ್ಯಮೇವ ಸತಾಂ ವರಮ್[3] ॥ ೩೧ ॥**

೩೧. (ಕೋಪವೇ ಮುಂತಾದ) ದೋಷಗಳಿಂದ ಹಿಮ್ಮೆಟ್ಟಿದವನಾಗಿ ಇಲ್ಲಿ ತಪಸ್ಸು, ವ್ರತ– ಮುಂತಾದವುಗಳನ್ನು ಆಚರಿಸಬೇಕು. ಇದು ಧಾತನಿಂದ ವಿಧಿಸಲ್ಪಟ್ಟ ವಿತ್ತವು, ಸತ್ಪುರುಷರಿಗೆ ಸತ್ಯವೇ ಶ್ರೇಷ್ಠವಾದದ್ದು.

( ಭಾಷ್ಯ )

'ನಿವೃತ್ತೇನೈವ ದೋಷೇಣ' ಕ್ರೋಧಾದಯಃ– ಇತ್ಯಾದಿನಾ ಪೂರ್ವೋಕ್ತದೋಷರಹಿತಃ ಸನ್ ತಪೋ ವ್ರತಮಿಹಾಚರೇತ್ । ಏತದ್ ಧಾತ್ರಾ ಪರಮೇಶ್ವರೇಣ ಕೃತಂ ವಿತ್ತಂ ಸತ್ಯಮೇವ ಸತಾಂ ವರಮ್ ॥

---

1. ಅಚ್ಚಿನ ಮಹಾಭಾರತದಲ್ಲಿ ಈ ಶ್ಲೋಕಕ್ಕೆ ಮುಂಚೆ ಕೆಳಗಿನ ಈ ಪದ್ಯಗಳಿವೆ :
ಅಷ್ಟೌ ದೋಷಾಃ ಪ್ರಮಾದಸ್ಯ ತಾನ್ ದೋಷಾನ್ ಪರಿವರ್ಜಯೇತ್ ।
ಇನ್ದ್ರಿಯೇಭ್ಯಶ್ಚ ಪಞ್ಚಭ್ಯೋ ಮನಸಶ್ಚೈವ ಭಾರತ ॥
ಅತೀತಾನಾಗತೇಭ್ಯಶ್ಚ ಮುಕ್ತ್ಯಸ್ಯೇತಃ ಸುಖೀ ಭವೇತ್ ।

2. 'ವೃತ್ತಮ್' 3. 'ವ್ರತಮ್' ಎಂದು ಮಹಾಭಾರತದ ಪಾಠಗಳು.

( ಭಾಷ್ಯಾರ್ಥ )

ಕೋಪವೇ ಮುಂತಾದ (ಹನ್ನೆರಡು ದೋಷಗಳು ಬಿಡತಕ್ಕವು) ಎಂಬಿವೆ ಮುಂತಾದ ಶ್ಲೋಕಗಳಿಂದ ತಿಳಿಸಲ್ಪಟ್ಟಿರುವಂತೆ, ದೋಷದಿಂದ ನಿವೃತ್ತ ನಾಗಿಯೇ, ಎಂದರೆ ಹಿಂದೆ ಹೇಳಿರುವ ದೋಷಗಳಿಲ್ಲದವನಾಗಿ ಇಲ್ಲಿ ತಪಸ್ಸನ್ನೂ ವ್ರತವನ್ನೂ ಆಚರಿಸಬೇಕು. ಇದು ಧಾತೃವಾದ ಪರಮೇಶ್ವರನಿಂದ ಮಾಡಲ್ಪಟ್ಟ ಆಸ್ತಿಯು.[1] ಸತ್ಪುರುಷರಿಗೆ ಸತ್ಯವೇ ಶ್ರೇಷ್ಠವಾದ (ವ್ರತವು).

**ದೋಷೈರೇತೈರ್ವಿಯುಕ್ತಂ ತು ಗುಣೈರೇತೈಃ ಸಮನ್ವಿತಮ್ ।**
**ಏತತ್ಸಮೃದ್ಧಮತ್ಯರ್ಥಂ ತಪೋ ಭವತಿ ಕೇವಲಮ್ ॥ ೩೨ ॥**

೩೨. ಈ (ಕ್ರೋಧಾದಿ)ದೋಷಗಳಿಂದ ಬಿಡಲ್ಪಟ್ಟ, ಜ್ಞಾನಾದಿ ಗುಣಗಳಿಂದ ಕೂಡಿದ ಈ ತಪಸ್ಸೊಂದೇ ಹೆಚ್ಚಿನ ಸಮೃದ್ಧವಾದ ತಪಸ್ಸಾಗಿರುತ್ತದೆ.

( ಭಾಷ್ಯ )

ಇದಾನೀಂ 'ಕಥಂ ಸಮೃದ್ಧಮತ್ಯರ್ಥಮ್' ಇತ್ಯನೇನ ಉಪಕ್ರಾನ್ತಮರ್ಥಮುಪಸಂಹರತಿ। ದೋಷೈರೇತೈಃ 'ಕ್ರೋಧಾದಯಃ' ಇತ್ಯಾದಿನಾ ಪೂರ್ವೋಕ್ತೈಃ ವಿಯುಕ್ತಂ ತು ಗುಣೈರೇತೈಃ ಜ್ಞಾನಾದಿಭಿಶ್ಚ ಸಮನ್ವಿತಂ ಯತ್ ಏತತ್ಸಮೃದ್ಧಮತ್ಯರ್ಥಂ ತಪೋ ಭವತಿ ಕೇವಲಮ್ ॥

( ಭಾಷ್ಯಾರ್ಥ )

ಈಗ 'ಸಮೃದ್ಧವೂ ಹೆಚ್ಚಿನದೂ ಆಗಿ (ತಪಸ್ಸು ಆಗುವದು ಹೇಗೆ ?)' ಎಂಬುದರಿಂದ ಪ್ರಾರಂಭಿಸಿದ ಅಭಿಪ್ರಾಯವನ್ನು ಉಪಸಂಹಾರಮಾಡುತ್ತಾರೆ. ಕೋಪವೇ ಮುಂತಾದ ಎಂದು ಹಿಂದೆ ತಿಳಿಸಿದ ದೋಷಗಳಿಂದ ದೂರವಾಗಿಯೂ ಜ್ಞಾನವೇ ಮುಂತಾದ ಗುಣಗಳಿಂದ ಕೂಡಿದ್ದಾಗಿಯೂ ಇರುವ ಯಾವದುಂಟೋ ಆ ಈ ತಪಸ್ಸು ಮಾತ್ರವೇ ಸಮೃದ್ಧವೂ ಹೆಚ್ಚಿನದೂ ಆಗಿರುತ್ತದೆ.

## ಸುಖಿಯಾಗುವ ಬಗೆ

**ಯನ್ಮಾಂ ಪೃಚ್ಛಸಿ ರಾಜೇನ್ದ್ರ ಸಂಕ್ಷೇಪಾತ್ ಪ್ರಬ್ರವೀಮಿ ತೇ ।**
**ಏತತ್ಪಾಪಹರಂ ಶುದ್ಧಂ[2] ಜನ್ಮಮೃತ್ಯುಜರಾಪಹಮ್ ॥ ೩೩ ॥**

೩೩. ಎಲೈ ರಾಜಶ್ರೇಷ್ಠನೆ, ನನ್ನನ್ನು ಏನು ಕೇಳುತ್ತಿರುವೆಯೋ ಅದನ್ನು ನಿನಗೆ ಸಂಕ್ಷೇಪವಾಗಿ ಹೇಳುವೆನು. ಇದು ಪಾಪನಾಶಕವೂ ಶುದ್ಧವೂ; ಹುಟ್ಟು, ಸಾವು, ಮುಪ್ಪುಗಳನ್ನು ಕಳೆಯತಕ್ಕದ್ದೂ ಆಗಿದೆ.

---

1. ಸಾಧಕರಿಗೆ ಪರಮೇಶ್ವರನು ಅನುಗ್ರಹಿಸಿರುವ ಆಸ್ತಿಯು. ಏಕೆಂದರೆ ಈಶ್ವರಾನುಗ್ರಹದಿಂದಲೇ ದೋಷನಿವೃತ್ತಿಯೂ ಸಾಧನಗಳ ಫಲವೂ ದೊರಕಬೇಕಾಗಿದೆ.

2. 'ಪುಣ್ಯಮ್' ಅಚ್ಚಿನ ಮಹಾಭಾರತದ ಪಾಠ.

( ಭಾಷ್ಯ )

ಕಿಂ ಬಹುನಾ ? ಹೇ ರಾಜೇನ್ದ್ರ, ಯನ್ಮಾಂ ಪೃಚ್ಛಸಿ ತತ್ ಸಂಕ್ಷೇಪಾತ್ ಸಮಾಸತಃ ಬ್ರವೀಮಿ ತೇ, ಏತತ್ ವಕ್ಷ್ಯಮಾಣಂ ಪಾಪಹರಂ ಶುದ್ಧಂ ಜನ್ಮ ಮೃತ್ಯುಜರಾಪಹಮ್ ॥

( ಭಾಷ್ಯಾರ್ಥ )

ಬಹಳ ಹೇಳಿದ್ದರಿಂದೇನು ? ನನ್ನನ್ನು ಏನು ಕೇಳುತ್ತೀಯೋ ಅದನ್ನು ಸಂಕ್ಷೇಪವಾಗಿ ಸಂಗ್ರಹವಾಗಿ ನಿನಗೆ ಹೇಳುತ್ತೇನೆ. ಈ ಮುಂದೆ ಹೇಳಲಿರುವದು ಪಾಪಹರವೂ ಶುದ್ಧವೂ ಹುಟ್ಟುಸಾವುಮುಪ್ಪುಗಳನ್ನು- ಕಳೆಯತಕ್ಕದ್ದೂ ಆಗಿದೆ.

ಇನ್ದ್ರಿಯೇಭ್ಯಶ್ಚ ಪಞ್ಚಭ್ಯೋ ಮನಸಶ್ಚೈವ ಭಾರತ ।
ಅತೀತಾನಾಗತೇಭ್ಯಶ್ಚ ಮುಕ್ತಶ್ಚೇತ್[1] ಸ ಸುಖೀ ಭವೇತ್ ॥ ೩೪ ॥

೩೪. ಐದು ಇಂದ್ರಿಯಗಳ ಮತ್ತು ಮನಸ್ಸಿನ ದೆಸೆಯಿಂದ, ಹಾಗೂ ಕಳೆದುಹೋದ ಮತ್ತು ಮುಂಬರಲಿರುವ (ಘಟನೆಗಳನ್ನು ಚಿಂತಿಸುತ್ತಿರುವದು- ಇವುಗಳಿಂದ ಬಿಡಲ್ಪಡುವವನಾದರೆ ಅಂಥವನು ಸುಖಿಯಾಗುವನು.

( ಭಾಷ್ಯ )

ಕಿಂ ತದಿತಿ ಚೇತ್, ತತ್ರಾಹ- ಹೇ ಭಾರತ, ಇನ್ದ್ರಿಯೇಭ್ಯಃ ಸವಿಷಯೇಭ್ಯಃ ಪಞ್ಚಭ್ಯಃ ವರ್ತಮಾನೇಭ್ಯಃ ಮನಸಶ್ಚೈವ ತಥಾ ಅತೀತೇಭ್ಯಃ ಅನಾಗತೇಭ್ಯಶ್ಚ ಮುಕ್ತಶ್ಚೇತ್ ಸ ಸುಖೀ ಭವೇತ್ ಮುಕ್ತ ಏವ ಭವೇದಿತ್ಯರ್ಥಃ॥

(ಭಾಷ್ಯಾರ್ಥ)

ಅದು ಯಾವದೆಂದರೆ ಹೇಳುತ್ತಾನೆ- ಎಲೈ ಭರತವಂಶೋತ್ಪನ್ನನೆ, (ವಿಷಯಗಳ ಸಮೇತವಾದ) ಐದು ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ಈಗ ಇದ್ದುಕೊಂಡಿರುವ ಮತ್ತು ಕಳೆದುಹೋಗಿರುವ- ಹಾಗೂ ಮುಂಬರಲಿರುವವುಗಳಿಂದ ವಿಮುಕ್ತನಾದರೆ ಅವನು ಸುಖಿಯಾಗುವನು; ಮುಕ್ತನೇ ಆಗುವನು ಎಂದಭಿಪ್ರಾಯ.

## ವೇದ್ಯವು ಯಾವದು ?

ಧೃತರಾಷ್ಟ್ರ ಉವಾಚ—

ಆಖ್ಯಾನಪಞ್ಚಮೈರ್ವೇದೈಃ ಭೂಯಿಷ್ಠಂ ಕತ್ಥ್ಯತೇ ಜನಃ ।
ತಥಾ ಚಾನ್ಯೇ ಚತುರ್ವೇದಾಸ್ತ್ರಿವೇದಾಶ್ಚ ತಥಾಽಪರೇ ॥ ೩೫ ॥

1. 'ಮುಕ್ತ್ವ್ಯಪೇತಃ' ಎಂದು ಪಾ॥. ಇದು 'ಸತ್ಯಾತ್ಮಾ ಭವ' ಎಂಬ ಶ್ಲೋಕದ ಹಿಂದೆಯೇ ಇದೆ.

ದ್ವಿವೇದಾಶ್ಚೈಕವೇದಾಶ್ಚ ಅನೃಚಶ್ಚ ತಥಾಽಪರೇ ।
ಏತೇಷು ಮೇಽಧಿಕಂ ಬ್ರೂಹಿ ಯಮಹಂ ವೇದ ಬ್ರಾಹ್ಮಣಮ್[1] ॥

೩೫-೩೬. ಧೃತರಾಷ್ಟ್ರನಿಂತೆಂದನು : ಆಖ್ಯಾನ (ಇತಿಹಾಸ ಪುರಾಣ)ವೇ ಐದನೆಯದಾದ ಪಂಚವೇದಗಳನ್ನು ಬಲ್ಲವನು ಹೆಚ್ಚಿನವನೆಂದು (ಜನರಿಂದ) ಹೊಗಳಲ್ಪಡುತ್ತಾನೆ. ಮತ್ತೆ ಕೆಲವರು ನಾಲ್ಕು ವೇದಗಳನ್ನು (ತಿಳಿದವರನ್ನೂ) ಮತ್ತೆ ಕೆಲವರು ಮೂರು ವೇದಗಳು, ಎರಡು, ಒಂದು– ಹೀಗೆ ವೇದಾಧ್ಯಯನಮಾಡಿದವರನ್ನು, ಇನ್ನೂ ಕೆಲವರು ಋಕ್ಕೇ ತಿಳಿಯದವರನ್ನೂ ದೊಡ್ಡವರೆನ್ನುವರು. ಇವರುಗಳ ನಡುವೆ ನಾನು ಯಾವನನ್ನು ಹೆಚ್ಚಿನ ಬ್ರಾಹ್ಮಣನೆಂದು ಅರಿಯಬೇಕೋ ಅವನು ಯಾರು ? ಎಂಬುದನ್ನು ಹೇಳು.

(ಭಾಷ್ಯ)

ಏವಮುಕ್ತೇ ಪ್ರಾಹ ಧೃತರಾಷ್ಟ್ರಃ– ಆಖ್ಯಾನಂ ಪುರಾಣಂ ಪಞ್ಚಮಂ ಯೇಷಾಂ ವೇದಾನಾಂ ತೇ ಆಖ್ಯಾನಪಞ್ಚಮಾಃ । ಶ್ರೂಯತೇ ಛಾನ್ದೋಗ್ಯೇ– 'ಇತಿಹಾಸಪುರಾಣಂ ಪಞ್ಚಮಮ್' (ಛಾಂ. ೭-೧-೨) ಇತಿ । ತೈಃ ಆಖ್ಯಾನಪಞ್ಚಮೈಃ ವೇದೈಃ ಭೂಯಿಷ್ಠಮ್ ಅತ್ಯರ್ಥಂ ಕತ್ಥ್ಯತೇ ಶ್ಲಾಘ್ಯತೇ ಬಹು ಮನ್ಯತೇ ಸರ್ವಸ್ಮಾದಧಿಕೋಽಹಮಿತಿ । ಕಥ್ಯತೇ ಇತಿ ಕೇಚಿತ್ ಪಠನ್ತಿ । ಆಖ್ಯಾನಪಞ್ಚಮೈಃ ವೇದೈಃ ಕಶ್ಚಿಜ್ಜನಃ ಪಂಚವೇದೀತಿ ಕಥ್ಯತೇ ಇತ್ಯರ್ಥಃ । ತಥಾಚಾನ್ಯೇ ಚತುರ್ವೇದಾಃ ತ್ರಿವೇದಾಃ ಅಪರೇ ದ್ವಿವೇದಾಃ ಏಕವೇದಾಶ್ಚ ಅನೃಚಶ್ಚ ತಥಾ ಅಪರೇ ಪರಿತ್ಯಕ್ತಋಗಾದಿವೇದಾಃ ಅಪರೇ । ಏತೇಷು ಮನುಷ್ಯೇಷು ಅಧಿಕಂ ಶ್ರೇಷ್ಠಂ ಬ್ರೂಹಿ ಯಮಹಂ ಬ್ರಾಹ್ಮಣಂ ವೇದ ವಿದ್ಯಾಮ್ ॥

(ಭಾಷ್ಯಾರ್ಥ)

ಹೀಗೆನ್ನಲಾಗಿ ಧೃತರಾಷ್ಟ್ರನು ಹೇಳುತ್ತಾನೆ: ಆಖ್ಯಾನವೆಂದರೆ ಪುರಾಣವು. ಯಾವ (ನಾಲ್ಕು) ವೇದಗಳ ಜೊತೆಗೆ ಇದು ಐದನೆಯದಾಗಿದೆಯೋ ಅವೇ ಆಖ್ಯಾನಪಂಚಮಗಳು. ಛಾಂದೋಗ್ಯದಲ್ಲಿ 'ಐದನೆಯ (ವೇದವಾದ) ಇತಿಹಾಸ ಪುರಾಣಗಳನ್ನು (ಬಲ್ಲೆನು)' ಎಂದು ಹೇಳಿಯೂ ಇದೆ. ಆಖ್ಯಾನಪಂಚಮಗಳಾದ ಆ ವೇದಗಳಿಂದ ಬಹಳವಾಗಿ, ಹೆಚ್ಚಾಗಿ ಹೊಗಳಲ್ಪಡುತ್ತಾನೆ, ಸ್ತುತಿಸಲ್ಪಡುತ್ತಾನೆ ಎಂದರ್ಥ. ಎಲ್ಲರಿಗಿಂತ ಹೆಚ್ಚಿನವನೆಂದು ಗೌರವಿಸಲ್ಪಡುತ್ತಾನೆ.

---

1. 'ತೇಷಾಂ ತು ಕತರಃ ಸ ಸ್ಯಾದ್ ಯಮಹಂ ವೇದ ವೈ ದ್ವಿಜಮ್' ಎಂದು ಮಹಾಭಾರತದ ಪಾಠ.

ಎಂದರೆ ಆಖ್ಯಾನಪಂಚಮವಾದ ವೇದಗಳನ್ನು ಬಲ್ಲಾತನೊಬ್ಬನನ್ನು ಕೆಲವರು ಜನರು ಪಂಚವೇದಿಯೆಂದು ಕರೆಯುವರು ಎಂದಭಿಪ್ರಾಯ. ಹಾಗೆಯೇ ಮತ್ತೆ ಕೆಲವರು ನಾಲ್ಕು ವೇದಿಗಳು, ಮೂರು ವೇದಿಗಳು, ಇನ್ನು ಕೆಲವರು ದ್ವಿವೇದಿಗಳು, ಏಕವೇದಿಗಳು- ಎಂದೂ ಕರೆಯಲ್ಪಡುತ್ತಾರೆ. ಮತ್ತೆ ಕೆಲವರು ಅನೃಚರು ಎಂದರೆ ಋಗ್ವೇದವೇ ಮುಂತಾದವನ್ನು ಬಿಟ್ಟವರು ಎಂದೂ ಹೇಳುವರು.[1] ಈ ಮನುಷ್ಯರೊಳಗೆ ಅಧಿಕನು- ಶ್ರೇಷ್ಠನು ಯಾರು ? ಯಾವನನ್ನು ನಾನು ಬ್ರಾಹ್ಮಣನೆಂದು ತಿಳಿದುಕೊಳ್ಳಲಿ ? ಹೇಳು.

( ಭಾಷ್ಯ )

ಯ ಏವ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾನಾವಸ್ಥಿತಃ, ಸ ಏವ ಬ್ರಾಹ್ಮಣ ಇತಿ ದರ್ಶಯಿಷ್ಯನ್ ತದ್ವ್ಯತಿರಿಕ್ತಸ್ಯ ಸರ್ವಸ್ಯ ತದಜ್ಞಾನ ಮೂಲತ್ವಂ ದರ್ಶಯತಿ—

( ಭಾಷ್ಯಾರ್ಥ )

ಯಾವನು ಚಿತ್ಸದಾನಂದಾದ್ವಿತೀಯವಾದ ಬ್ರಹ್ಮಸ್ವರೂಪದಲ್ಲಿ ನೆಲೆ ನಿಂತಿರುವನೋ ಅವನೇ ಬ್ರಾಹ್ಮಣನು- ಎಂಬಿದನ್ನು ತಿಳಿಸುತ್ತಾ ಆ (ಬ್ರಹ್ಮ ಕಿಂತ) ಬೇರೆಯಾದ ಎಲ್ಲವೂ (ತೋರುತ್ತಿರುವದು) ಆ (ಬ್ರಹ್ಮ)ವನ್ನರಿಯದ್ದ ರಿಂದಲೇ- ಎಂಬಿದನ್ನು ಹೇಳುತ್ತಾರೆ :—

**ಏಕಸ್ಯ ವೇದಸ್ಯಾಜ್ಞಾನಾದ್ ವೇದಾಸ್ತೇ ಬಹವೋಽಭವನ್ ।[2]**
**ಸತ್ಯಸ್ಯೈಕಸ್ಯ ರಾಜೇನ್ದ್ರ ಸತ್ಯೇ ಕಶ್ಚಿದವಸ್ಥಿತಃ ॥ ೩೭ ॥**

೩೭. ಎಲೈ ರಾಜೇಂದ್ರನೆ, ಏಕವಾಗಿರುವ ವೇದವೊಂದನ್ನರಿಯದ ರಿಂದ ವೇದಗಳು ಬಹಳವಾದವು. ಏಕವಾಗಿರುವ ಸತ್ಯವೇ ಅದು. ನೀನಾದರೊ, ಅದನ್ನರಿತು ಸತ್ಯದಲ್ಲಿ ನಿಂತಿರುವೆಯೊ ? ನಿನ್ನಂತೆಯೇ ಯಾವನಾದರೂ ಸತ್ಯದಲ್ಲಿ ಪ್ರತಿಷ್ಠಿತನಾಗುವನೇನು ?

( ಭಾಷ್ಯ )

ಏಕಸ್ಯ ವೇದಸ್ಯ- ವೇದ್ಯಮ್ ಇದಂರೂಪಮ್, ಅನಿದಂರೂಪಂ, ವೇದನಂ ವೇದಃ- ಏಕಸ್ಯಾದ್ವಿತೀಯಸ್ಯ ಸಂವಿದ್ರೂಪಸ್ಯೇತ್ಯರ್ಥಃ । ತಸ್ಯ ಏಕವೇದಸ್ಯ

1. ಚತುರ್ವೇದಿ, ತ್ರಿವೇದಿ- ಮುಂತಾಗಿಯೂ ಪುರಾಣಜ್ಞ, ಇತಿಹಾಸವಿಶಾರದ- ಮುಂತಾಗಿಯೂ ಜನರು ಬಲ್ಲವರನ್ನು ಗೌರವಿಸುತ್ತಾರೆ. ಕೆಲವು ವೇಳೆ ಯಾವ ವೇದ ಶಾಸ್ತ್ರಾದಿಗಳನ್ನೂ ಅಭ್ಯಾಸಮಾಡದೆ ಇದ್ದರೂ ಜ್ಞಾನಿಗಳಾಗಿರುವವರನ್ನು ಮಹಾತ್ಮರು, ಸಂತರು- ಎಂದೂ ಪೂಜಿಸುತ್ತಾರೆ. ಹೀಗಿರುವಲ್ಲಿ ಯಾವನನ್ನು ಹೆಚ್ಚಿನವನೆಂದೂ ಬ್ರಾಹ್ಮಣನೆಂದೂ ತಿಳಿಯಲಿ ? ಎಂಬಿದು ಪ್ರಶ್ನೆ.

2. 'ಬಹವಃ ಕೃತಾಃ' ಎಂದು ಮಹಾಭಾರತದ ಪಾಠ.

ಬ್ರಹ್ಮಣೋಽನವಗಮಾತ್ ಋಗಾದಯೋ ವೇದಾಃ ಬಹವೋಽಭವನ್ । ಅತ್ರ ಋಗಾದಯೋ ವೇದಾಃ ತತ್ಪ್ರತಿಪತ್ತ್ಯರ್ಥಂ ವಿಚಾರಂ ಕುರ್ವನ್ತಿ ಇತಿ ವೇದಾಖ್ಯಾ(ನ ?)ಮವಾಪುಃ । ಅಥವಾ ಸದ್ಭಾವಂ ಸಾಧಯನ್ತೀತಿ ವೇದಾಃ । ವಿದನ್ತಿ ವೇದನಸಾಧನಭೂತಾ ಇತಿ ವಾ ವೇದಾಃ । ಅಥವಾ ಬ್ರಹ್ಮಾಧೀನಮಾತ್ಮಾನಂ ಲಭನ್ತೇ ಇತಿ ವಾ ವೇದಾಃ । ಅಥವಾ ಬ್ರಹ್ಮಣಃ ಆತ್ಮತಯಾ ಲಾಭಹೇತವ ಇತಿ ವಾ ವೇದಾಃ । ವಿದ ವಿಚಾರಣೇ, ವಿದ ಸತ್ತಾಯಾಮ್, ವಿದಜ್ಞಾನೇ, ವಿದ್ಲೃ ಲಾಭೇ- ಏತೇಷಾಂ ಧಾತೂನಾಂ ವಿಷಯೇ ವರ್ತನ್ತೇ ಯಸ್ಮಾತ್ ತತೋ ವೇದಾ ಇತ್ಯುಕ್ತಾಃ । ತದೇಕವೇದಸ್ವರೂಪಂ ಕಿಮಿತಿ ಚೇತ್ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ- ೨-೧) ಇತಿ ಶ್ರುತೇಃ । ತಸ್ಮಾತ್ ಸತ್ಯಸ್ಯ ಏಕವೇದಸ್ವರೂಪಸ್ಯ ಬ್ರಹ್ಮಣೋಽನವಗಮಾದ್ ವೇದಾ ಬಹವೋ ವ್ಯಾಖ್ಯಾತಾಃ । ಸರ್ವೇ ವೇದಾಃ ತದರ್ಥದರ್ಶನಹೇತವಃ । ಹೇ ರಾಜೇನ್ದ್ರ, ತ್ವಮಪಿ ಕಿಮೇವಂ ಜ್ಞಾತ್ವಾ ಸತ್ಯೇವ ಬ್ರಹ್ಮಣಿ ಸ್ಥಿತೋಽಸಿ ? ಕಚ್ಚಿತ್ ಪುನಃ ಸತ್ಯೇಽವಸ್ಥಿತಃ ಪ್ರತಿಷ್ಠಿತ ಇತಿ ॥

(ಭಾಷ್ಯಾರ್ಥ)

ಏಕವಾದ ವೇದದ (ಎಂಬಿದರ ಅರ್ಥವೇನೆಂದರೆ : ) ವೇದ್ಯವೆಂಬುದು ಇದಂ (ಇದು) ಎಂಬ ರೂಪವಾಗಿಯೂ ಅನಿದಂ (ಇದಲ್ಲ) ಎಂಬ ರೂಪವಾಗಿಯೂ ಇರುತ್ತದೆ. ವೇದವೆಂದರೆ ವೇದನವು (ಅರಿಯುವಿಕೆ); ಅದ್ವಿತೀಯವಾಗಿ ತಾನೊಂದೇ ಆಗಿರುವ ಜ್ಞಾನರೂಪವಾದ (ಬ್ರಹ್ಮದ ವೇದನ)ವೆಂದರ್ಥ. ಒಂದೇ ಆಗಿರುವ ಆ ಬ್ರಹ್ಮವೆಂಬ ವೇದದ ಅರಿವಿಲ್ಲದ್ದರಿಂದಲೇ ಋಗ್ವೇದವೇ ಮುಂತಾದ ವೇದಗಳು ಬಹಳವಾಗಿ ಆಗಿರುತ್ತವೆ. ಇಲ್ಲಿ ಋಕ್ಕೇ ಮುಂತಾದ ವೇದಗಳು ಆ (ಬ್ರಹ್ಮದ) ಜ್ಞಾನಕ್ಕಾಗಿ ವಿಚಾರಮಾಡುತ್ತವೆಯಾದ್ದರಿಂದ ವೇದಾಖ್ಯಾನವೆಂದು ಹೆಸರಾದವು.[1] ಅಥವಾ, ವೇದಶಬ್ದಕ್ಕೆ (ನಾಲ್ಕು ಅರ್ಥಗಳನ್ನು ಬೇರೆಬೇರೆಯ ಧಾತುಗಳ ಬಲದಿಂದ) ಹೇಳಬಹುದಾಗಿದೆ. (೧) ಸದ್ಭಾವವನ್ನು ಸಮರ್ಥನೆ ಮಾಡುವವು ; ಆದ್ದರಿಂದ ವೇದಗಳು. (೨) (ಬ್ರಹ್ಮವನ್ನು) ಅರಿಯುತ್ತಾರೆ ಅಥವಾ ಅರಿಯುವದಕ್ಕೆ ಸಾಧನಗಳಾಗಿವೆ; ಆದ್ದರಿಂದ ವೇದಗಳು (೩) ಬ್ರಹ್ಮಕ್ಕೆ ಅಧೀನವಾಗಿದ್ದುಕೊಂಡು ಅದರಿಂದ ಹುಟ್ಟುತ್ತವೆ- ಆದ್ದರಿಂದಲಾದರೂ ವೇದಗಳೆನಿಸಿಕೊಂಡಿರುತ್ತವೆ. (೪) ಅಥವಾ ಬ್ರಹ್ಮವು ನಮ್ಮ ಆತ್ಮನೇ ಎಂಬ (ತಿಳಿವಳಿಕೆಯ) ಪ್ರಾಪ್ತಿಗೆ ಕಾರಣಗಳಾಗಿವೆ- ಆದ್ದರಿಂದ ವೇದಗಳು- ಎಂದಾದರೂ

1. 'ವೇದಾಖ್ಯಾಮವಾಪುಃ' ಎಂದು ಪಾಠವಿದ್ದಿದ್ದರೆ ಋಗಾದಿವೇದಗಳು ಜ್ಞಾನಸ್ವರೂಪನಾದ ಪರಮಾತ್ಮನನ್ನು ವಿಚಾರಮಾಡುವದರಿಂದ 'ವೇದ'ಎಂಬ ಹೆಸರನ್ನು ಹೊಂದಿದವು- ಎಂಬ ಅರ್ಥಸ್ವಾರಸ್ಯವು ಹೊರಡುತ್ತಿತ್ತು. ಇಲ್ಲಿ 'ಆಖ್ಯಾನ'ವೆಂಬ ಶಬ್ದಕ್ಕೇ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಂತಾಗಿದೆ.

ಅರ್ಥಮಾಡಬಹುದು. ವಿಚಾರಣೆ, ಇರುವಿಕೆ, ಜ್ಞಾನ, ಲಾಭ– ಎಂಬ ಅರ್ಥಗಳುಳ್ಳ ನಾಲ್ಕು ಧಾತುಗಳಿಂದ ವೇದಶಬ್ದವು ಹುಟ್ಟುವದರಿಂದ ವೇದಗಳು– ಎಂದು ಕರೆಯಲ್ಪಟ್ಟಿವೆ. ಆ ಒಂದೇ ಆದ ವೇದದ ಸ್ವರೂಪವು ಏನೆಂದು ಕೇಳಿದರೆ 'ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು' ಎಂದು ಶ್ರುತಿಯಲ್ಲಿರುವದೇ (ಉತ್ತರ). ಆದ್ದರಿಂದ ಸತ್ಯವೂ ಏಕವೇದಸ್ವರೂಪವೂ ಆಗಿರುವ ಬ್ರಹ್ಮವನ್ನು ಅರಿಯುದ್ದರಿಂದಲೇ ವೇದಗಳು ಬಹುವಾಗಿ ವಿವರಿಸಲ್ಪಟ್ಟಿವೆ. ಎಲ್ಲಾ ವೇದಗಳೂ ಆ ಬ್ರಹ್ಮವನ್ನು ತಿಳಿಸುವದಕ್ಕೆ ಸಾಧನಗಳಾಗಿವೆ. ಎಲೈ ರಾಜೇಂದ್ರನೆ, ನೀನು ಕೂಡ ಹೀಗೆಂದರಿತವನಾಗಿ ಸತ್ಯವಾದ ಬ್ರಹ್ಮದಲ್ಲಿ ನಿಂತಿರುವೆಯೊ ? ಮತ್ತೆ ಯಾವನಾದರೂ ಸತ್ಯದಲ್ಲಿದ್ದುಕೊಂಡಿರುವನೊ ? ನಿಂತಿರುತ್ತಾನೊ ? (ಅವನನ್ನು ಬಲ್ಲೆಯ ?) ಎಂದಭಿಪ್ರಾಯ.

**ಯ ಏನಂ ವೇದ ತತ್ಸತ್ಯಂ ಪ್ರಾಜ್ಞೋ ಭವತಿ ನಿತ್ಯದಾ[1] ।**
**ದಾನಮಧ್ಯಯನಂ ಯಜ್ಞೋ ಲೋಭಾದೇವ[2] ಪ್ರವರ್ತತೇ ॥ ೩೮ ॥**
**ಸತ್ಯಾತ್ ಪ್ರಚ್ಯವಮಾನಾನಾಂ ಸಂಕಲ್ಪಾ ವಿತಥಾಽಭವನ್[3] ।**
**ತತಃ ಕರ್ಮ[4] ಪ್ರತಾಯೇತ ಸತ್ಯಸ್ಯಾನವಧಾರಣಾತ್[5] ॥ ೩೯ ॥**

೩೮–೩೯. ಯಾವನು ಈ ಸತ್ಯನನ್ನು ಅರಿತುಕೊಳ್ಳುವನೋ ಅವನು ಯಾವಾಗಲೂ ಪ್ರಾಜ್ಞನೇ ಆಗಿರುವನು. ದಾನಾಧ್ಯಯನಯಜ್ಞಗಳು (ಈ ಬ್ರಹ್ಮವನ್ನರಿಯದವನಿಂದ) ಲೋಭದಿಂದಲೇ ಅನುಷ್ಠಾನಮಾಡಲ್ಪಡುವವು. ಸತ್ಯದ ದೆಸೆಯಿಂದ ಜಾರಿದವರಿಗೆ (ಅವರ) ಆಲೋಚನೆಗಳೆಲ್ಲವೂ ಹುಸಿಯಾಗುವವು. ಸತ್ಯವನ್ನು ನಿಶ್ಚಯಿಸದೆ ಇರುವದರಿಂದಲೇ ಕರ್ಮಗಳು ಬೆಳೆದಿರುತ್ತವೆ.

( ಭಾಷ್ಯ )

ಭೂಯೋ ಮೇ ಶೃಣು । ಕಿಮರ್ಥಮ್ ? ನೋ ಚೇತ್, ತತ್ರ ಯದ್ಭವತಿ ತತ್ ಶೃಣು । ಸತ್ಯಾತ್ ಸತ್ಯಜ್ಞಾನಾದಿಲಕ್ಷಣಾದ್ ಬ್ರಹ್ಮಣಃ ಪ್ರಚ್ಯವಮಾನಾನಾಂ ಸ್ವಾಭಾವಿಕಬ್ರಹ್ಮಭಾವಪರಿತ್ಯಾಗೇನ ಅನಾತ್ಮನಿ ದೇಹಾದೌ ಆತ್ಮಭಾವಮಾಪನ್ನಾನಾಂ ಸಂಕಲ್ಪಾ ವಿತಥಾ ಅಭವನ್, ವ್ಯರ್ಥಾ ಭವನ್ತಿ । ಸ್ವಾಭಾವಿಕಸತ್ಯಸಂಕಲ್ಪಾದಯೋ ನ ಸಿಧ್ಯನ್ತಿ ಇತ್ಯರ್ಥಃ । ತತಃ ಕರ್ಮ ಯಜ್ಞಾದಿಕಂ ಪ್ರತಾಯೇತ ವಿಸ್ತೃತಂ ಭವೇತ್ । ತದೇತತ್ಸರ್ವಂ ಸತ್ಯಸ್ಯ

---

1. 'ಏವಂ ವೇದಮವಿಜ್ಞಾಯ ಪ್ರಾಜ್ಞೋಽಹಮಿತಿ ಮನ್ಯತೇ'
2. 'ಏತತ್' 3. 'ಸಂಕಲ್ಪಶ್ಚ ತಥಾ ಭವೇತ್' 4. 'ಯಜ್ಞಃ'
5. 'ಸತ್ಯಸ್ಯೈವಾನವಧಾರಣಾತ್' ಎಂದು ಮಹಾಭಾರತದ ಪಾಠಗಳು.

ಸತ್ಯಾದಿಲಕ್ಷಣಸ್ಯ ಬ್ರಹ್ಮಣಃ ಅನವಧಾರಣಾತ್ ಅನವಗಮಾತ್ ಆತ್ಮಾಜ್ಞಾನ ನಿಮಿತ್ತತ್ವಾತ್ ಸಂಸಾರಸ್ಯ, ಯಾವತ್ ಪರಮಾತ್ಮಾನಮಾತ್ಮತ್ವೇನ ಸಾಕ್ಷಾನ್ನ ವಿಜಾನಾತಿ, ತಾವದಯಂ ತಾಪತ್ರಯಾಭಿಭೂತೋ ಮಕರಾದಿಭಿರಿವ ರಾಗಾದಿ ಭಿರಿತಸ್ತತಃ ಸಮಾಕೃಷ್ಯಮಾಣೋ ಮೋಮುಹ್ಯಮಾನೋಽಸತ್ಯಸಂಕಲ್ಪಃ ಸ್ವರ್ಗಪಶ್ವನ್ನಾದಿಹೇಯಸಾಧನೇಷು ವರ್ತತ ಇತ್ಯರ್ಥಃ ||

( ಭಾಷ್ಯಾರ್ಥ )

ಮತ್ತೂ ನನ್ನ ಮಾತನ್ನು ಕೇಳು. ಏತಕ್ಕಾಗಿ (ಕೇಳಬೇಕು ?) ಎಂದರೆ ಕೇಳದಿದ್ದರೆ ಏನಾಗುತ್ತದೆಂಬುದನ್ನು ಕೇಳುವನಾಗು. ಸತ್ಯಜ್ಞಾನಾದಿಲಕ್ಷಣ ವಾಗಿರುವ ಬ್ರಹ್ಮವೆಂಬ ಸತ್ಯದಿಂದ ಜಾರಿದವರಿಗೆ, (ಎಂದರೆ) ಸ್ವಾಭಾವಿಕವಾದ ಬ್ರಹ್ಮಭಾವವನ್ನು ಹೊಂದಿರುವವರ ಸಂಕಲ್ಪಗಳು ವಿತಥಗಳು ಎಂದರೆ ವ್ಯರ್ಥ ವಾಗುವವು. ಸ್ವಾಭಾವಿಕವಾದ ಸತ್ಯಸಂಕಲ್ಪವೇ ಮುಂತಾದವುಗಳು ಸಿದ್ಧಿಸು ವದಿಲ್ಲ. ಅದರಿಂದ ಯಜ್ಞಾದಿಕರ್ಮಗಳು ಹರಡಿಕೊಂಡಿರುತ್ತವೆ- ವಿಸ್ತಾರ ವಾಗುವವು. ಇದೆಲ್ಲವೂ ಸತ್ಯಾದಿಲಕ್ಷಣವಾದ ಪರಬ್ರಹ್ಮದ ಅನವಧಾರಣೆಯಿಂದ- ಎಂದರೆ ಅರಿಯದೆಇರುವದರಿಂದ ಆತ್ಮನ ಅಜ್ಞಾನದ ನಿಮಿತ್ತವಾಗಿ ಸಂಸಾರ ವುಂಟಾಗಿದೆಯಾಗಿ- ಎಲ್ಲಿಯವರೆಗೆ ಪರಮಾತ್ಮನನ್ನು ತನ್ನ ಆತ್ಮನೆಂದು ನೇರಾಗಿ ಕಂಡುಕೊಳ್ಳದೆ ಇರುವನೋ ಅಲ್ಲಿಯವರೆಗೆ ಇವನು ತಾಪತ್ರಯಗಳಿಂದ[1] ಪೀಡಿಸಲ್ಪಟ್ಟವನಾಗಿ ಮೊಸಳೆಯೇ ಮುಂತಾದವುಗಳಂತಿರುವ ರಾಗದ್ವೇಷಾದಿ ಗಳಿಂದ ಅತ್ತಿತ್ತ ಎಳೆಯಲ್ಪಡುವನಾಗಿ ಮೈಮರೆತು, ಹುಸಿಯಾದ ಆಶೆಗಳಿಂದ ಕೂಡಿದವನಾಗಿ ಸ್ವರ್ಗ, ಪಶು, ಅನ್ನವೇ- ಮುಂತಾದ ಕೀಳಾದ (ವಸ್ತು)ಗಳ (ಸಂಪಾದನೆಯ) ಪ್ರಯತ್ನದಲ್ಲಿ ಇರ್ಸ್ಸುಕೊಂಡಿರುತ್ತಾನೆ- ಎಂದಭಿಪ್ರಾಯ.

## ಬ್ರಾಹ್ಮಣನ ಲಕ್ಷಣ

**ವಿದ್ಯಾದ್[2] ಬಹುಪಠಂ ತಂ ತು ಬಹುವಾಗಿತಿ ಬ್ರಾಹ್ಮಣಮ್[3] |**
**ಯ ಏವ ಸತ್ಯಾನ್ನಾಪೈತಿ ಸ ಜ್ಞೇಯೋ ಬ್ರಾಹ್ಮಣಸ್ತ್ವಯಾ || ೪೦ ||**

---

1. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂಬ ಮೂರು ತಾಪಗಳಿಂದ.
2. ಮಹಾಭಾರತದಲ್ಲಿ ಈ ಶ್ಲೋಕಕ್ಕೆ ಮುಂಚೆ ಕೆಳಗಿನ ಶ್ಲೋಕಗಳಿವೆ :-
   " ಮನಸಾಽನ್ಯಸ್ಯ ಭವತಿ ವಾಚಾಽನ್ಯಸ್ಯಾಥ ಕರ್ಮಣಾ |
   ಸಂಕಲ್ಪಸಿದ್ಧಃ ಪುರುಷಃ ಸಂಕಲ್ಪಾನಧಿತಿಷ್ಠತಿ ||
   ಅನೈಭೃತ್ಯೇನ ಚೈತಸ್ಯ ದೀಕ್ಷಿತವ್ರತಮಾಚರೇತ್ |
   ನಾಮೈತದ್ಧಾತುನಿರ್ವೃತ್ತಂ ಸತ್ಯಮೇವ ಸತಾಂ ಪರಮ್ ||
   ಜ್ಞಾನಂ ವೈ ನಾಮ ಪ್ರತ್ಯಕ್ಷಂ ಪರೋಕ್ಷಂ ಜಾಯತೇ ತಪಃ ||
3. 'ದ್ವಿಜಂ ವೈ ಬಹುಪಾಠಿನಮ್ | ತಸ್ಮಾತ್ ಕ್ಷತ್ರಿಯ ಮಾ ಮಂಸ್ಥಾ ಜಲ್ಪಿತೇ ನೈವ ವೈ ದ್ವಿಜಮ್' ಎಂದು ಮಹಾಭಾರತದ ಪಾಠ.

೪೦. ಬಹುಪಠನಮಾಡಿರುವ ಆ ಬ್ರಾಹ್ಮಣನನ್ನು ಬಹಳ ವಾಕ್ಕುಳ್ಳವನೆಂದು ತಿಳಿಯಬೇಕು. ಆದರೆ ಯಾವನು ಸತ್ಯದಿಂದ ಜಾರುವದಿಲ್ಲವೋ ಅವನೇ (ನಿಜವಾಗಿ) ಬ್ರಾಹ್ಮಣನೆಂದು ನೀನು ಅರಿಯಬೇಕು.

(ಭಾಷ್ಯ)

ಇದಾನೀಂ ಬ್ರಾಹ್ಮಣಲಕ್ಷಣಮಾಹ। ಬಹುಪಠಂ ತಂ ಆಖ್ಯಾನಪಞ್ಚಮವೇದಾಧ್ಯಾಯಿನಂ ಬಹುವಾಗಿತಿ ವಿದ್ಯಾತ್'। ನ ಸಾಕ್ಷಾದ್ ಬ್ರಾಹ್ಮಣಮಿತಿ। ಕಸ್ತರ್ಹಿ ಮುಖ್ಯೋ ಬ್ರಾಹ್ಮಣ ಇತಿ ಚೇತ್– ಯ ಏವ ಸತ್ಯಾದ್ ಸತ್ಯಾದಿಲಕ್ಷಣಾತ್ ನಾಪೈತಿ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನೈವಾವತಿಷ್ಠತೇ ಇತ್ಯರ್ಥಃ। ಸ ಏವ ಜ್ಞೇಯೋ ಬ್ರಾಹ್ಮಣಸ್ತ್ವಯಾ, ನೇತರಃ। ಯಃ ಸತ್ಯಾತ್ ಪ್ರಚ್ಯುತೋಽಕೃತಾರ್ಥಃ ಸನ್ ಕರ್ಮಣಿ ಪ್ರವರ್ತತೇ। ತಥಾ ಚ ಬ್ರಹ್ಮವಿದಮೇವ ಬ್ರಾಹ್ಮಣಂ ದರ್ಶಯತಿ ಶ್ರುತಿಃ– 'ಮೌನಂ ಚಾಮೌನಂ ಚ ನಿರ್ವಿದ್ಯಾಥ ಬ್ರಾಹ್ಮಣಃ ಸ ಬ್ರಾಹ್ಮಣಃ' (ಬೃ. ೩–೫–೧) ಇತಿ, 'ವಿಪಾಪೋ ವಿರಜೋಽವಿಚಿಕಿತ್ಸೋ ಬ್ರಾಹ್ಮಣೋ ಭವತಿ' (ಬೃ. ೪–೪–೨೩) ಇತಿ ಚ ॥

( ಭಾಷ್ಯಾರ್ಥ )

ಈಗ ಬ್ರಾಹ್ಮಣನ ಲಕ್ಷಣವನ್ನು ಹೇಳುತ್ತಾನೆ: ಬಹಳವಾಗಿ ಓದಿರುವ ಆಖ್ಯಾನಗಳೇ ಐದನೆಯವಾಗಿ ಉಳ್ಳ ವೇದಗಳನ್ನು ಅಧ್ಯಯನಮಾಡಿರುವವನನ್ನು 'ಬಹುವಾಕ್' ಎಂದು ತಿಳಿಯಬೇಕು. ಸಾಕ್ಷಾತ್ ಬ್ರಾಹ್ಮಣ (ಬ್ರಹ್ಮವಿದನು) ನೆಂದು (ತಿಳಿಯಬಾರದು). ಹಾಗಾದರೆ ಮುಖ್ಯಾರ್ಥದಲ್ಲಿ ಬ್ರಾಹ್ಮಣನೆಂದರೆ ಯಾರು? ಎಂದರೆ ಯಾವನು ಸತ್ಯಾದಿಲಕ್ಷಣವಾದ (ಬ್ರಹ್ಮದಿಂದ) ಜಾರದೆ ಇರುವನೋ, ಹಾಗೂ ಸ್ವಾಭಾವಿಕವಾದ ಚಿತ್ಸದಾನಂದಾದ್ವಿತೀಯಬ್ರಹ್ಮಾತ್ಮರೂಪದಿಂದಲೇ ನೆಲೆನಿಂತಿರುವನೋ (ಅವನೇ ಬ್ರಾಹ್ಮಣನು) ಎಂದಭಿಪ್ರಾಯ. ಅವನೇ ಬ್ರಾಹ್ಮಣನೆಂದು ನೀನು ತಿಳಿಯತಕ್ಕದ್ದು, ಬೇರೆಯವನಲ್ಲ– ಎಂದರೆ ಯಾವನು ಸತ್ಯದಿಂದ ಜಾರಿಬಿದ್ದವನಾಗಿ ಅಕೃತಾರ್ಥನಾಗಿರುವನೋ ಮತ್ತು ಕರ್ಮದಲ್ಲಿ ತೊಡಗಿರುವನೋ (ಅವನಲ್ಲ) ಎಂದಭಿಪ್ರಾಯ. ಮತ್ತು ಶ್ರುತಿಯೂ ಬ್ರಹ್ಮಜ್ಞಾನಿಯನ್ನೇ ಬ್ರಾಹ್ಮಣನೆಂದು ತಿಳಿಸುತ್ತಿದೆ. 'ಮೌನವನ್ನೂ ಅಮೌನವನ್ನೂ ಪೂರ ತಿಳಿದು ಇನ್ನು ಬ್ರಾಹ್ಮಣನಾಗುವನು; ಅವನು ಬ್ರಾಹ್ಮಣನು' ಎಂದೂ 'ಪಾಪವಿಲ್ಲದವನೂ ರಜಸ್ಸಿಲ್ಲದವನೂ ಸಂಶಯವಿಲ್ಲದವನೂ ಆಗಿ ಬ್ರಾಹ್ಮಣನಾಗುವನು' ಎಂದೂ (ತಿಳಿಸುತ್ತಿದೆ.)

ಛನ್ದಾಂಸಿ ನಾಮ ದ್ವಿಪದಾಂ ವರಿಷ್ಠ
ಸ್ವಚ್ಛನ್ದಯೋಗೇನ ಭವನ್ತಿ ತತ್ರ ।
ಛನ್ದೋವಿದಸ್ತೇನ ಚ ತಾನಧೀತ್ಯ
ಗತಾ ಹಿ ವೇದಸ್ಯ ನ ವೇದ್ಯಮಾರ್ಯಾಃ[1] ॥ ೪೧ ॥

೪೧. ಎಲೈ ಮಾನವಶ್ರೇಷ್ಠನೆ, ವೇದಗಳು ತಮ್ಮ ಇಚ್ಛಾನುಸಾರವಾಗಿ ಆ ಬ್ರಹ್ಮವನ್ನು ತಿಳಿಸುವ ಬಗ್ಗೆ ಪ್ರಮಾಣಗಳಾಗಿರುತ್ತವೆ. ಆದರಿಂದ ವೇದಜ್ಞರಾದ ಆರ್ಯರು ಅವುಗಳನ್ನು ಅಧ್ಯಯನಮಾಡಿ ವೇದ(ನಾದ) ಪರಮಾತ್ಮನ ಸ್ವರೂಪವನ್ನು ಪಡೆದುಕೊಂಡರು. ವೇದ್ಯ(ವಾದ ಪ್ರಪಂಚವನ್ನು) ಪಡೆಯಲಿಲ್ಲ.

## ವೇದಗಳು ಬ್ರಹ್ಮವನ್ನು ತಿಳಿಸುವ ರೀತಿ

### (ಭಾಷ್ಯ)

ಭವೇದೇತದೇವಂ ಯದಿ, ತದೇವ ಬ್ರಹ್ಮ ಸಿದ್ಧ್ಯೇತ್, ನ ಚ ಸಿಧ್ಯತಿ, ಅನ್ಯಪರತ್ವಾದ್ ವೇದಸ್ಯ ಇತಿ ; ತತ್ರಾಹ– ಹೇ ದ್ವಿಪದಾಂ ವರಿಷ್ಠ, ಛನ್ದಾಂಸಿ ವೇದಾಃ ಸ್ವಚ್ಛನ್ದಯೋಗೇನ, ಸ್ವಚ್ಛನ್ದತಾ ಸ್ವಾಧೀನತಾ, ಯಥಾಕಾಮಮ್ ಇತ್ಯರ್ಥಃ । ತತ್ರ ಪರಮಾತ್ಮನಿ ಭವನ್ತಿ, ತತ್ರೈವ ಪ್ರಮಾಣಂ ಭವನ್ತಿ । ಶ್ರೂಯತೇ ಚ– 'ಸರ್ವೇ ವೇದಾ ಯತ್ಪದಮಾಮನನ್ತಿ' (ಕಾ. ೧–೨–೧೫) ಇತಿ । 'ವೇದೈಶ್ಚ ಸರ್ವೈರಹಮೇವ ವೇದ್ಯಃ' (ಗೀ. ೧೫–೧೫) ಇತಿ ಚ । ಪುರುಷಾರ್ಥಪರ್ಯವಸಾಯಿತ್ವಾದ್ ವೇದಸ್ಯ ತದ್ವ್ಯತಿರಿಕ್ತಸ್ಯ ಸರ್ವಸ್ಯ ಅನಿತ್ಯಾಶುಚಿದುಃಖಾನುವಿದ್ಧತ್ವೇನ ಪುರುಷಾರ್ಥತ್ವಾಭಾವಾತ್ ತತ್ಸ್ವರೂಪತಜ್ಜ್ಞಾನತತ್ಸಾಧನಪ್ರತಿಪಾದಕತ್ವೇನ ವೇದಾನಾಂ ಪ್ರಾಮಾಣ್ಯಮಿತ್ಯರ್ಥಃ । ಯಸ್ಮಾದ್ ವೇದಾಃ ಸ್ವಚ್ಛನ್ದಯೋಗೇನ ತತ್ರೈವ ಪರಮಾತ್ಮನಿ ಪ್ರಮಾಣಂ ಭವನ್ತಿ, ತೇನ ಚ ಹೇತುನಾ ತಾನ್ ವೇದಾನಧೀತ್ಯ ಅಧಿಗಮ್ಯ ವೇದಾನ್ತಶ್ರವಣಾದಿಕಂ ಕೃತ್ವಾ ಗತಾಃ ಪ್ರಾಪ್ತಾಃ ವೇದಸ್ಯ ಸಂವಿದ್ರೂಪಸ್ಯ ಪರಮಾತ್ಮನಃ ಸ್ವರೂಪಂ ನ ವೇದ್ಯಂ ಪ್ರಪಞ್ಚಮ್ ಆರ್ಯಾಃ ಪಣ್ಡಿತಾಃ ಬ್ರಹ್ಮವಿದಃ ॥

---

1. ಮಹಾಭಾರತದಲ್ಲಿ ಈ ಶ್ಲೋಕವು ಹೀಗಿದೆ :—

'ಛನ್ದಾಂಸಿ ನಾಮ ಕ್ಷತ್ರಿಯ ತಾನ್ಯಥರ್ವಾ
ಪುರಾ ಜಗೌ ಮಹರ್ಷಿಸಂಘ ಏಷಃ ।
ಛನ್ದೋವಿದಸ್ತೇ ಯ ಉತ ನಾಧೀತವೇದಾಃ
ನ ವೇದವೇದ್ಯಸ್ಯ ವಿದುರ್ಹಿ ತತ್ತ್ವಮ್ ॥

( ಭಾಷ್ಯಾರ್ಥ )

ಒಂದುವೇಳೆ ಅದೇ ಬ್ರಹ್ಮವೇ ಸಿದ್ಧವಾದೀತು. (ವೇದವು) ಹೀಗೆ ಬ್ರಹ್ಮವನ್ನೇ ತಿಳಿಸುವದಾದರೆ ಇದು ಆಗಬಹುದಾಗಿತ್ತು. ಆದರೆ ಹಾಗೆ ಸಿದ್ಧವಾಗಿಲ್ಲ- ಏಕೆಂದರೆ ವೇದವು (ಬ್ರಹ್ಮಕ್ಕಿಂತ) ಬೇರೆಯದನ್ನು ತಿಳಿಸುವದರಲ್ಲಿ ತಾತ್ಪರ್ಯವುಳ್ಳದ್ದಾಗಿದೆಯಲ್ಲ? ಎಂದರೆ ಹೇಳುತ್ತಾರೆ: – ಎಲೈ ನರೋತ್ತಮನೆ, ವೇದಗಳು ಸ್ವಚ್ಛಂದಯೋಗದಿಂದ– ಸ್ವಚ್ಛಂದತೆಯೆಂದರೆ ಸ್ವಾಧೀನತೆ (ಸ್ವತಂತ್ರವಾಗಿರುವಿಕೆ) ತನ್ನಿಷ್ಟದಂತೆ ಇರುವದು ಎಂದರ್ಥ. (ವೇದಗಳು ಯಥಾರ್ಥವಾಗಿ) ಆ ಪರಮಾತ್ಮನ ವಿಷಯದಲ್ಲಿ ಪ್ರಮಾಣಗಳಾಗಿರುತ್ತವೆ. ಶ್ರುತಿಯಲ್ಲಿ 'ಎಲ್ಲಾ ವೇದಗಳೂ ಯಾವ (ಪರಮ)ಪದವನ್ನು ತಿಳಿಸುತ್ತವೆಯೋ' ಎಂದು ಹೇಳಿದೆ ; ಮತ್ತು 'ಎಲ್ಲಾ ವೇದಗಳಿಂದ ತಿಳಿಯಲ್ಪಡತಕ್ಕವನು ನಾನೇ' ಎಂದೂ (ಭಗವಂತನು ತಿಳಿಸಿರುತ್ತಾನೆ). ವೇದವು ಪರಮಪುರುಷಾರ್ಥರೂಪವಾದ (ಮೋಕ್ಷ) ದಲ್ಲಿ ಕೊನೆಗಾಣುವದರಿಂದ ಅದಕ್ಕಿಂತ ಬೇರೆಯಾದದ್ದೆಲ್ಲವೂ ಅನಿತ್ಯವೂ, ಅಶುಚಿಯೂ ದುಃಖದಿಂದ ಕೂಡಿರುವದೂ ಆಗಿರುವದರಿಂದ ಪುರುಷಾರ್ಥವಲ್ಲದೆ ಹೋಗಿರುವದರಿಂದ (ಬ್ರಹ್ಮ)ದ ಸ್ವರೂಪ, ಅದರ ಜ್ಞಾನ, ಅದಕ್ಕೆ ಬೇಕಾದ ಸಾಧನಗಳನ್ನು ಪ್ರತಿಪಾದನೆಮಾಡುವದರಿಂದ ವೇದಗಳಿಗೆ ಪ್ರಾಮಾಣ್ಯವುಂಟಾಗಿದೆ ಎಂದಭಿಪ್ರಾಯ. ಹೀಗೆ ವೇದಗಳು ತಮ್ಮ ಇಷ್ಟದಂತೆ ಆ ಪರಮಾತ್ಮನಲ್ಲಿಯೇ ಪ್ರಮಾಣವಾಗಿರುತ್ತವೆ. ಆ ಕಾರಣದಿಂದ ಆ ವೇದಗಳನ್ನು ಅಧ್ಯಯನ ಮಾಡಿ ಅರಿತುಕೊಂಡು ವೇದಾಂತಶ್ರವಣಾದಿಗಳನ್ನು ಮಾಡಿ ವೇದನಾದ, ಜ್ಞಾನಸ್ವರೂಪನಾದ ಪರಮಾತ್ಮನ (ಸಾಯುಜ್ಯ) ಸ್ವರೂಪವನ್ನು ಆರ್ಯರು, ಬ್ರಹ್ಮವಿದರು ಪಡೆದುಕೊಂಡಿರುತ್ತಾರೆ, ಹೊಂದಿರುತ್ತಾರೆ. ವೇದ್ಯವಾದ ಪ್ರಪಂಚವನ್ನಲ್ಲ.

ನ ವೇದಾನಾಂ ವೇದಿತಾ ಕಶ್ಚಿದಸ್ತಿ
ವೇದೇನ ವೇದಂ ನ ವಿದುರ್ನ ವೇದ್ಯಮ್ ।
ಯೋ ವೇದ ವೇದಂ ಸ ಚ ವೇದ ವೇದ್ಯಂ
ಯೋ ವೇದ ವೇದ್ಯಂ ನ ಸ ವೇದ ಸತ್ಯಮ್[1] ॥ ೪೨ ॥

೪೨. ವೇದಗಳಲ್ಲಿ ಯಾವ ವೇದವೂ ಪರಮಾತ್ಮನನ್ನು (ನೇರಾಗಿ) ತಿಳಿಸುವದಿಲ್ಲ. ವೇದದಿಂದ ವೇದವನ್ನು ಅರಿಯರು. ವೇದ್ಯವನ್ನೂ

1. ಈ ಶ್ಲೋಕದ ಕಡೆಯ ಮೂರು ಪಾದಗಳು ಮಹಾಭಾರತದಲ್ಲಿ ಹೀಗಿವೆ :– "ಕಶ್ಚಿತ್ತ್ವೇತಾನ್ ಬುಧ್ಯತೇ ವಾಪಿ ರಾಜನ್। ಯೋ ವೇದ ವೇದಾನ್ ನ ಸ ವೇದ ವೇದ್ಯಂ। ಸತ್ಯೇ ಸ್ಥಿತೋ ಯಸ್ತು ಸ ವೇದ ವೇದ್ಯಮ್ ॥" ಅನಂತರ ಮತ್ತೆ ಮೇಲೆ ಕೊಟ್ಟಿರುವ ಅನುಪೂರ್ವಿಯನ್ನೇ ಒಳಗೊಂಡು ಇನ್ನೊಂದು ಶ್ಲೋಕವು ಹೆಚ್ಚಾಗಿದೆ.

ಅರಿಯರು. ಯಾವನು ವೇದನನ್ನು ಅರಿತಿರುವನೋ ಅವನು ವೇದ್ಯವನ್ನು ಬಲ್ಲನು. ಯಾವನು ವೇದ್ಯವನ್ನು ಬಲ್ಲನೋ ಅವನು ಸತ್ಯವನ್ನು ಬಲ್ಲವನಲ್ಲ.

(ಭಾಷ್ಯ)

ಏವಂ ತರ್ಹಿ ವೇದವೇದ್ಯತ್ವೇ 'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' (ಕೇ. ೧-೪) 'ಯತೋ ವಾಚೋ ನಿವರ್ತನ್ತೇ | ಅಪ್ರಾಪ್ಯ ಮನಸಾ ಸಹ' (ತೈ. ೨-೯) ಇತ್ಯಾದಿಶ್ರುತಿವಿರೋಧಃ ಪ್ರಸಜ್ಯೇತೇತ್ಯಾಶಙ್ಕ್ಯಾಹ- ನ ವೇದಾನಾಮ್ ಋಗಾದೀನಾಂ ಮಧ್ಯೇ ಕಶ್ಚಿದಪಿ ವೇದಃ ಪರಮಾತ್ಮನೋ ವಾಚಾಮಗೋಚರಸ್ಯ ಸಂವಿದ್ರೂಪಸ್ಯ ವೇದಿತಾ ಅಸ್ತಿ | ಕಸ್ಮಾತ್ ? ಯಸ್ಮಾತ್ ವೇದೇನ ಋಗಾದಿರೂಪೇಣ ಜಡೇನ ವೇದಂ ಸಂವಿದ್ರೂಪಂ ಪರಮಾತ್ಮಾನಂ ನ ವಿದುಃ ನ ವೇದ್ಯಂ ಪ್ರಪಞ್ಚಮಪಿ ವೇದ್ಯಂ ನ ವಿದುಃ ಸಂವಿದಧೀನತ್ವಾತ್ ಸರ್ವಸಿದ್ಧೇಃ | ಯಸ್ಮಾತ್ ಸಂವಿದಧೀನಾ ಸರ್ವಸಿದ್ಧಿಃ ತಸ್ಮಾತ್ ಯೋ ವೇದ ಜಾನಾತಿ ವೇದಂ ಸಂವಿದ್ರೂಪಂ ಪರಮಾತ್ಮಾನಮ್, ಸ ಚ ವೇದ ವೇದ್ಯಮ್ ಇದಂ ಸರ್ವಮ್ | ತಥಾ ಚ ಶ್ರುತಿಃ- 'ಆತ್ಮನೋ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಮ್' (ಬೃ. ೨-೪-೫) ಇತಿ | ಯೋ ವೇದ ವೇದ್ಯಮ್ ಇತಿ ರೂಪಂ ನ ಸ ವೇದ ನ ಜಾನಾತಿ ಸತ್ಯಂ ಸತ್ಯಾದಿ ಲಕ್ಷಣಂ ಪರಮಾತ್ಮಾನಮ್ ||

(ಭಾಷ್ಯಾರ್ಥ)

ಹಾಗಾದರೆ (ಬ್ರಹ್ಮವು) ವೇದಗಳಿಂದ ಅರಿಯಲ್ಪಡುತ್ತದೆಯಾದ್ದರಿಂದ 'ವಿದಿತಕ್ಕಿಂತಲೂ ಹಾಗೂ ಅವಿದಿತಕ್ಕಿಂತಲೂ ಅದು ಬೇರೆಯೇ' 'ವಾಕ್ಕುಗಳು ಮನಸ್ಸಿನೊಡನೆ ಯಾವ (ಬ್ರಹ್ಮವನ್ನು) ಮುಟ್ಟದೆ ಹಿಂತಿರುಗುವವೋ'- ಇವೇ ಮುಂತಾದ ಶ್ರುತಿಗಳಿಗೆ ವಿರೋಧವುಂಟಾಗುತ್ತದೆಯಲ್ಲ! ಎಂದು ಆಶಂಕಿಸಿ ಹೇಳುತ್ತಾನೆ :- ಋಗ್ವೇದವೇ ಮುಂತಾದ ವೇದಗಳಲ್ಲಿ ಯಾವದೊಂದು ವೇದವೂ ಮಾತುಗಳಿಗೆ ಅಗೋಚರನಾಗಿರುವ ಜ್ಞಾನರೂಪನಾದ ಪರಮಾತ್ಮನನ್ನು ತಿಳಿಸುವಂಥದ್ದು ಇರುವದಿಲ್ಲ. ಏಕೆಂದರೆ : ಜಡವಾಗಿರುವ ಋಕ್ಕೇ ಮುಂತಾದ ರೂಪದ ವೇದದಿಂದ ಜ್ಞಾನರೂಪನಾದ ವೇದನೆಂಬ ಪರಮಾತ್ಮನನ್ನು (ಯಾರೂ) ಅರಿಯಲಾರರು. ಮತ್ತು ಎಲ್ಲದರ ಸಿದ್ಧಿಯೂ ಜ್ಞಾನಾಧೀನವಾಗಿರುವದರಿಂದ ಜ್ಞಾನವಿಲ್ಲದೆ ವೇದ್ಯ (ಜ್ಞೇಯ)ವಾದ ಪ್ರಪಂಚವನ್ನು ಯಾರೂ ಅರಿಯಲಾರರು. ಹೀಗೆ ಎಲ್ಲಾ ಸಿದ್ಧಿಗಳೂ ಜ್ಞಾನಾಧೀನವಾಗಿರುವದರಿಂದ ಆ ಜ್ಞಾನರೂಪನಾದ ಪರಮಾತ್ಮನನ್ನು ಯಾವನು ಅರಿತಿರುವನೋ, ಬಲ್ಲವನಾಗಿರುವನೋ ಅವನು ವೇದ್ಯವಾಗಿರುವ ಇದೆಲ್ಲವನ್ನೂ ಬಲ್ಲನು. ಶ್ರುತಿಯೂಕೂಡ 'ಎಲೆ, ಆತ್ಮನ ದರ್ಶನ, ಶ್ರವಣ, ಮನನ, ವಿಜ್ಞಾನಗಳಿಂದ ಇದೆಲ್ಲವೂ ವಿದಿತವಾಗುವದು'

ಎಂದು (ಹೇಳುತ್ತಿದೆ). ಯಾವನು ವೇದ್ಯವಾದ ರೂಪವನ್ನು ಬಲ್ಲನೋ ಅವನು ಸತ್ಯವೇ ಮುಂತಾದ ಲಕ್ಷಣವುಳ್ಳ ಪರಮಾತ್ಮನನ್ನು ತಿಳಿಯಲಾರನು[1]

**ಯೋ ವೇದ ವೇದಾನ್ ಸ ಚ ವೇದ ವೇದ್ಯಂ**
**ನ ತಂ ವಿದುರ್ವೇದವಿದೋ ನ ವೇದಾಃ ।**
**ತಥಾಪಿ ವೇದೇನ ವಿದನ್ತಿ ವೇದಂ**
**ಯೇ ಬ್ರಾಹ್ಮಣಾ ವೇದವಿದೋ ಭವನ್ತಿ[2]** ॥ ೪೩ ॥

೪೩. ಯಾವನು ವೇದಗಳನ್ನು ಬಲ್ಲನೋ ಅವನು ವೇದ್ಯವನ್ನು ತಿಳಿದವನಾಗಿರುತ್ತಾನೆ. ವೇದಜ್ಞರಾಗಲಿ ವೇದಗಳಾಗಲಿ ಆ ಬ್ರಹ್ಮವನ್ನು ಅರಿತಿರುವದಿಲ್ಲ. ಹೀಗಿದ್ದರೂ ವೇದದಿಂದ ವೇದ(ವಾದ ಬ್ರಹ್ಮ)ವನ್ನು, ವೇದವನ್ನು ಬಲ್ಲ ಯಾವ ಬ್ರಾಹ್ಮಣರಿರುವರೋ ಅವರು ಅರಿತುಕೊಳ್ಳುವರು.

( ಭಾಷ್ಯ )

ನನು ಏವಂ ತರ್ಹಿ 'ವೇದೇನ ವೇದಂ ನ ವಿದುರ್ನ ವೇದ್ಯಮ್' ಇತಿ ವದತಾ ಅನಾತ್ಮವಿದಃ ಪ್ರಪಞ್ಚಾಸಿದ್ಧಿರೇವ ಇತ್ಯುಕ್ತಂ ಭವತಿ ಇತ್ಯಾಶಙ್ಕ್ಯಾಹ- ಯೋ ವೇದ ಜಾನಾತಿ ವೇದಾನ್ ಋಗಾದೀನ್ ಸ ಚ ವೇದ ವೇದ್ಯಂ ಸೋಽಪಿ ಅನಾತ್ಮವಿದೇವ ಭಿನ್ನೇನ ಸಂವೇದನೇನ ವೇದ್ಯಂ ಪ್ರಪಞ್ಚಂ ವೇದ । ನನ್ವೇವಂ ತರ್ಹಿ ವೇದ್ಯವತ್ ಪರಮಾತ್ಮಾನಮಪಿ ಜಾನೀಯಾತ್ ಇತ್ಯಾಶಙ್ಕ್ಯಾಹ- ನ ತಂ ಪರಮಾತ್ಮಾನಂ ವಾಚಾಮಗೋಚರಂ ವಿದುಃ ವೇದವಿದೋ ನ ವೇದಾಃ ವೇದಾ ಅಪಿ ನ ತಂ ವಿದುಃ ನ ತಂ ವಿಷಯೀಕುರ್ವನ್ತಿ ಇತ್ಯರ್ಥಃ । ನನ್ವೇವಂ ತರ್ಹಿ ಕಥಮೌಪನಿಷದಂ ಬ್ರಹ್ಮ ಸ್ಯಾದಿತ್ಯಾಶಙ್ಕ್ಯಾಹ । ತಥಾಪಿ ವೇದೇನ ವಿದನ್ತಿ ವೇದಂ ಪರಮಾತ್ಮಾನಂ ಯದ್ಯಪಿ ವಾಗಾದ್ಯವಿಷಯಂ ಬ್ರಹ್ಮ ತಥಾಪಿ ವೇದೇನ ಋಗಾದಿನಾ ವಿದನ್ತಿ ವಿಜಾನನ್ತಿ ವೇದಂ ಸಂವಿದ್ರೂಪಂ ಪರಮಾತ್ಮಾನಮ್ । ಕೇ ತೇ ? ಯೇ ಬ್ರಾಹ್ಮಣಾಃ ವೇದವಿದೋ ಭವನ್ತಿ ವೇದಾನಾಂ ವೇದಪ್ರತಿಪಾದನಪ್ರಕಾರಂ ಜಾನನ್ತೀತ್ಯರ್ಥಃ ॥

( ಭಾಷ್ಯಾರ್ಥ )

ಹಾಗಾದರೆ 'ವೇದದಿಂದ ವೇದನನ್ನರಿಯುವದಿಲ್ಲ; ವೇದ್ಯವನ್ನೂ ಅರಿಯುವದಿಲ್ಲ' ಎಂದು ಹೇಳಿದ್ದರಿಂದ ಆತ್ಮಜ್ಞಾನಿಯಲ್ಲದವನಿಗೆ ಪ್ರಪಂಚವೂ ಸಿದ್ಧಿಸದೆ ಹೋಗುವದಲ್ಲ ? ಹಾಗೆಂದು ಹೇಳಿದಂತಾಯಿತಲ್ಲವೆ ? ಎಂದು ಶಂಕಿಸಿ ಹೇಳುತ್ತಾನೆ :- ಯಾವನು ಋಕ್ಕೇ ಮುಂತಾದ ವೇದಗಳನ್ನು ಅರಿಯುತ್ತಾನೋ ಅವನು ವೇದ್ಯವನ್ನು ತಿಳಿದವನಾಗುವನು. ಅವನೂ ಆತ್ಮಜ್ಞಾನಿಯಲ್ಲದಿದ್ದರೂ

1. ಪ್ರಪಂಚದಲ್ಲಿ ಮನಸ್ಸಿಟ್ಟವನು ಪರಮಾತ್ಮನನ್ನರಿಯಲಾರನು.
2. ಈ ಶ್ಲೋಕವು ಮಹಾಭಾರತದಲ್ಲಿ ಹಳನೆಯ ಶ್ಲೋಕವಾಗಿದೆ.

ತನಗಿಂತ ಬೇರೆಯಾಗಿರುವ ಜ್ಞಾನ(ವ್ಯಾಪಾರ)ದಿಂದ ವೇದ್ಯವಾದ ಪ್ರಪಂಚವನ್ನು ಅರಿಯುತ್ತಾನೆ. ಹಾಗಾದರೆ ವೇದ್ಯವನ್ನು ಅರಿತಂತೆಯೇ ಪರಮಾತ್ಮನನ್ನೂ ಅರಿಯಬಹುದಲ್ಲ ! ಎಂದು ಆಶಂಕಿಸಿ ಹೇಳುತ್ತಾನೆ :– ವಾಕ್ಕುಗಳಿಗೆ ಗೋಚರ ನಲ್ಲದ ಆ ಪರಮಾತ್ಮನನ್ನು ವೇದವಿದರು ಅರಿಯರು. ವೇದಗಳೂಕೂಡ ಅರಿಯ ಲಾರವು ; ಅವನನ್ನು ವಿಷಯವಾಗಿ ಮಾಡಿಕೊಳ್ಳಲಾರವು– ಎಂದರ್ಥ. ಹೀಗಾ ದರೆ ಬ್ರಹ್ಮವು ಉಪನಿಷತ್‌ಪ್ರತಿಪಾದ್ಯವಾದದ್ದು[1] ಹೇಗಾದೀತು ? ಎಂದು ಶಂಕಿಸಿ ಹೇಳುತ್ತಾನೆ :– ಹೀಗಿದ್ದರೂ ವೇದದಿಂದ ವೇದನಾದ ಪರಮಾತ್ಮನನ್ನು ಅರಿಯು ತ್ತಾರೆ. ಬ್ರಹ್ಮವು ಮಾತು-ಮುಂತಾದ ಇಂದ್ರಿಯಗಳಿಗೆ ಗೋಚರವಾದದ್ದಲ್ಲ ; ಆದರೂ ಋಕ್ಕೇ ಮುಂತಾದ ವೇದದಿಂದ ವೇದನಾದ– ಎಂದರೆ ಜ್ಞಾನಸ್ವರೂಪ ನಾದ ಪರಮಾತ್ಮನನ್ನು[2] ಅರಿಯುತ್ತಾರೆ. ಅವರು ಯಾರು ? ಯಾವ ವೇದ ವಿದರಾದ ಬ್ರಾಹ್ಮಣರಿದ್ದಾರೋ ಅವರು. ಅಂಥವರು ವೇದಗಳು (ಬ್ರಹ್ಮವನ್ನು) ತಿಳಿಸುವ ರೀತಿಯನ್ನು ಬಲ್ಲವರಾಗಿರುತ್ತಾರೆ– ಎಂದಭಿಪ್ರಾಯ.

ಯಾಮಾಂಶ[3]ಭಾಗಸ್ಯ ತಥಾ ಹಿ ವೇದಾ
ಯಥಾ ಹಿ ಶಾಖಾ ಚ ಮಹೀರುಹಸ್ಯ ।
ಸಂವೇದನೇಽಪ್ಯೇವಮಥಾಮನನ್ತಿ
ತಸ್ಮಿನ್ ಹಿ ನಿತ್ಯೇ[4] ಪರಮಾತ್ಮನೋಽರ್ಥೇ ॥ ೪೪ ॥

೪೪. ಚಂದ್ರನ ಕಲೆಯನ್ನು ನೋಡಲು ಹೇಗೆ ಮರದ ಕೊಂಬೆಯು ನಿಮಿತ್ತವಾಗುವದೋ ಹಾಗೆಯೇ ನಿತ್ಯನಾದ ಪರಮಾತ್ಮನ ವಿಷಯದಲ್ಲಿ ತಿಳಿಸುವಾಗಲೂ ವೇದಗಳು (ತಟಸ್ಥವಾಗಿದ್ದುಕೊಂಡೇ) ತಿಳಿಸುತ್ತವೆ.

(ಭಾಷ್ಯ)

ಕಥಂ ತರ್ಹಿ ಅವಿಷಯಮೇವ ಬ್ರಹ್ಮ ವೇದಾಃ ಪ್ರತಿಪಾದಯನ್ತೀತ್ಯಾ ಶಙ್ಕ್ಯ ಆಹ– ಯಾಮಾಂಶಭಾಗಸ್ಯ 'ತ್ರಿಯಾಮಶ್ಚನ್ದ್ರಃ' ಇತಿ ಶ್ರುತೇಃ ಚನ್ದ್ರಾಂಶಭಾಗಸ್ಯ ಪ್ರತಿಪಚ್ಚನ್ದ್ರಕಲಾದರ್ಶನೇ ಯಥಾ ಮಹೀರುಹಸ್ಯ ವೃಕ್ಷಸ್ಯ ಶಾಖಾ ಹೇತುರ್ಭವತಿ, ತಥಾ ಹಿ ವೇದಾಃ ತಥೈವ ಪರಮಾತ್ಮನಃ

1. 'ಉಪನಿಷತ್ಸ್ವೇವ ಅಧಿಗತಃ ಔಪನಿಷದಃ'– ಎಂಬ ಭಾಷ್ಯದಂತೆ ಬ್ರಹ್ಮವು ಉಪನಿಷತ್ತುಗಳಲ್ಲಿ ಮಾತ್ರವೇ ತಿಳಿಯಬರತಕ್ಕದ್ದಾಗಿದೆ. ಅದು ಹೇಗೆ ಹೊಂದುತ್ತದೆ ? ಎಂದು ಆಕ್ಷೇಪ.

2. 'ವೇದ್ಯೋ ವೇದವಿದವ್ಯಙ್ಗೋ ವೇದಾಙ್ಗೋ ವೇದವಿತ್ ಕವಿಃ' ಎಂಬ ವಿಷ್ಣುಸಹಸ್ರನಾಮದ ಶ್ಲೋಕವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

3. 'ಧಾಮಾಂಶ' 4. 'ಸತ್ಯೇ' ಎಂದು ಪ॥ ಭಾ॥ ಪಾಠ.

ಸ್ವರೂಪಭೂತೇ ಸಂವೇದನೇ ನಿತ್ಯೇ ಅವಿನಾಶಿನಿ ಅರ್ಥೇ ಪರಮಪುರುಷಾರ್ಥ ಸ್ವರೂಪೇ ಪೂರ್ಣಾನನ್ದರೂಪೇ ಹೇತವೋ ಭವನ್ತಿ, ನ ಪುನಃ ಸಾಕ್ಷಾದ್ ವಾಚಾಮಗೋಚರಂ ಪರಮಾತ್ಮಾನಂ ಪ್ರತಿಪಾದಯನ್ತೀತ್ಯೇವಮಾಮನನ್ತಿ ||

(ಭಾಷ್ಯಾರ್ಥ)

ಹಾಗಾದರೆ ವಿಷಯವೇ ಅಲ್ಲದ ಬ್ರಹ್ಮವನ್ನು ವೇದಗಳು ಹೇಗೆ ಪ್ರತಿಪಾದಿಸುತ್ತವೆ ? ಎಂದು ಆಶಂಕಿಸಿ ಹೇಳುತ್ತಾನೆ : 'ತ್ರಿಯಾಮ(ನೆಂದರೆ) ಚಂದ್ರನು' ಎಂದು ಶ್ರುತಿಯಿರುವದರಿಂದ ಯಾಮಾಂಶಭಾಗದ- ಎಂದರೆ ಚಂದ್ರನ ಅಂಶ ಭಾಗದ (ಇದರ ವಿವರ :–) ಪಾಡ್ಯದ ದಿನ ಕಾಣಿಸುವ ಚಂದ್ರನ ಕಲೆಯನ್ನು ನೋಡುವದರಲ್ಲಿ ಹೇಗೆ ಮಹೀರುಹದ- ಎಂದರೆ ಮರದ ಕೊಂಬೆಯು ಕಾರಣವಾಗುವದೋ ಹಾಗೆಯೇ ವೇದಗಳೂ ಅದೇ (ಕ್ರಮದಿಂದ) ಸ್ವರೂಪಭೂತನೇ ಆಗಿರುವ, ನಿತ್ಯನೂ ಅವಿನಾಶಿಯೂ ಆದ ಪರಮಾತ್ಮನ ವಿಷಯದಲ್ಲಿ- ಎಂದರೆ ಪರಮಪುರುಷಾರ್ಥಸ್ವರೂಪನೂ ಪೂರ್ಣಾನಂದರೂಪನೂ ಆಗಿರುವ (ಅವನಲ್ಲಿ) ಕಾರಣವಾಗುತ್ತವೆ.[1] ಅಷ್ಟೇ ಹೊರತು ವಾಕ್ಕುಗಳು (ತಮಗೆ) ಅಗೋಚರನಾದ ಪರಮಾತ್ಮನನ್ನು ನೇರಾಗಿ ಪ್ರತಿಪಾದಿಸುವದಿಲ್ಲ – ಹೀಗೆಂದು ವೇದಗಳು ತಿಳಿಸುತ್ತವೆ.

## ಬ್ರಹ್ಮವಿದನೇ ಬ್ರಾಹ್ಮಣನು

**ಅಭಿಜಾನಾಮಿ ಬ್ರಾಹ್ಮಣಮಾಖ್ಯಾತಾರಂ ವಿಚಕ್ಷಣಮ್ ।**
**ಏವಂ ಯೋಽಭಿವಿಜಾನಾತಿ ಸ ಜಾನಾತಿ ಪರಂ ಹಿ ತತ್[2] ॥ ೪೫ ॥**

೪೫. ವೇದಪ್ರತಿಪಾದನಕ್ರಮವನ್ನು ಬಲ್ಲವನನ್ನು ವ್ಯಾಖ್ಯಾತೃವಾದ ವಿಚಕ್ಷಣನಾದ ಬ್ರಾಹ್ಮಣನೆಂದು ತಿಳಿಯುತ್ತೇನೆ. ಹೀಗೆ ಯಾವನು ಅರಿತುಕೊಳ್ಳುವನೋ ಅವನು ಆ ಪರ(ತತ್ತ್ವ)ವನ್ನು ಬಲ್ಲನು.

---

1. ಪಾಡ್ಯದ ದಿನ ತೀರಸೂಕ್ಷ್ಮನಾಗಿ ಕೊಬ್ಬರಿಯ ಸೀಳಿನಂತೆ ಸ್ವಲ್ಪವೇ ತೋರಿಕೊಳ್ಳುವ ಚಂದ್ರನನ್ನು ಗುರುತಿಸುವದಕ್ಕಾಗಿ ಆ ದಿಕ್ಕಿಗೆ ಇರುವ ಒಂದು ಮರವನ್ನು ತೋರಿಸಿ ಅದರ ಕೊಂಬೆಯ ತುದಿಯಲ್ಲಿ ನೋಡಿರಿ, ಚಂದ್ರನಿದ್ದಾನೆ- ಎಂತ ತಿಳಿಸುವದನ್ನು 'ಶಾಖಾಚಂದ್ರದರ್ಶನ'ವೆಂದು ಕರೆಯುತ್ತಾರೆ. ಕೊಂಬೆಗೂ ಚಂದ್ರನಿಗೂ ಎಷ್ಟೋ ಸಾವಿರ ಮೈಲಿಗಳ ದೂರವಿದ್ದರೂ ಚಂದ್ರನನ್ನು ಕಾಣಲು ಕೊಂಬೆಯು ಉಪಯೋಗವಾಗುವಂತೆಯೇ ವೇದಗಳೂ ದೂರದಿಂದಲೇ ವಾಕ್ಕುಗಳಿಗೆ ಅಗೋಚರನಾದ ಪರಮಾತ್ಮನನ್ನು ತಿಳಿಸುತ್ತವೆ- ಎಂದಭಿಪ್ರಾಯ.

2. ಮಹಾಭಾರತದಲ್ಲಿ ಈ ಶ್ಲೋಕದ ಉತ್ತರಾರ್ಧವು ಹೀಗಿದೆ :–
'ಯಶ್ಛಿನ್ನವಿಚಿಕಿತ್ಸಃ ಸ ವ್ಯಾಚಷ್ಟೇ ಸರ್ವಸಂಶಯಾನ್'

(ಭಾಷ್ಯ)

ಯ ಏವಂ ವೇದಾನಾಂ ವೇದರೂಪಾತ್ಮಪ್ರತಿಪಾದನಪ್ರಕಾರಮವಗಮ್ಯ ವ್ಯಾಚಷ್ಟೇ ಸೋಽಪಿ ಬ್ರಾಹ್ಮಣ ಇತ್ಯಾಹ- ಯೋ ವೇದಪ್ರತಿಪಾದನಪ್ರಕಾರಂ ವ್ಯಾಚಷ್ಟೇ, ತಮ್ ಆಖ್ಯಾತಾರಂ ವಿಚಕ್ಷಣಂ ಬ್ರಾಹ್ಮಣಂ ಅಭಿಜಾನಾಮಿ | ನನು ಬಾಲ್ಯಂ ಪಾಣ್ಡಿತ್ಯಾದಿಕಂ ನಿರ್ವಿದ್ಯ ಅವಸ್ಥಿತಮೇವ ಬ್ರೂತೇ ಬ್ರಾಹ್ಮಣಮ್ 'ಅಥ ಬ್ರಾಹ್ಮಣಃ' (ಬೃ. ೩-೫-೧) ಇತಿ, ಕಥಮುಚ್ಯತೇ ಅಭಿಜಾನಾಮಿ ಬ್ರಾಹ್ಮಣಮಾಖ್ಯಾತಾರಂ ವಿಚಕ್ಷಣಮ್ ಇತಿ ? ತತ್ರಾಹ- ಏವಂ ವೇದಾನಾಂ ವೇದನರೂಪಾತ್ಮಪ್ರತಿಪಾದನಪ್ರಕಾರಂ ಮಯೋಕ್ತಂ ಯೋಽಭಿವಿಜಾನಾತಿ, ಸ ಜಾನಾತಿ ಪರಂ ಹಿ ತತ್ ಪರಂ ಬ್ರಹ್ಮ ಜಾನಾತಿ ಇತ್ಯೇವ | ಯೋ ಹಿ ಪಾಣ್ಡಿತ್ಯಂ ನಿರ್ವಿದ್ಯ ವ್ಯವಸ್ಥಿತಃ ಸಃ ಕ್ಷಿಪ್ರಂ ಬಾಲ್ಯಾದಿಕಂ ನಿರ್ವಿದ್ಯ ಬ್ರಾಹ್ಮಣೋ ಭವತೀತ್ಯರ್ಥಃ ||

( ಭಾಷ್ಯಾರ್ಥ )

ಯಾವನು ಹೀಗೆ ವೇದಗಳ ವೇದರೂಪವಾದ ಆತ್ಮಪ್ರತಿಪಾದನೆಯ ರೀತಿ, ಯನ್ನು ಅರಿತು ಹೇಳುವನೋ ಅವನೂ ಬ್ರಾಹ್ಮಣನೇ- ಎಂದು ಹೇಳುತ್ತಾನೆ : ಯಾವನು ವೇದದ ಪ್ರತಿಪಾದನೆಯ ಕ್ರಮವನ್ನು ಹೇಳುವನೋ ಅವನನ್ನು ವ್ಯಾಖ್ಯಾನವನ್ನು ಬಲ್ಲ ಜಾಣನಾದ ಬ್ರಾಹ್ಮಣನೆಂದು ತಿಳಿದಿರುತ್ತೇನೆ. ಹಾಗಾದರೆ (ವೇದವು) ಬಾಲ್ಯಪಾಂಡಿತ್ಯಾದಿಗಳನ್ನು ಅರಿತುಕೊಂಡು (ಮುಂದಿರುವವನನ್ನೇ) ಬ್ರಾಹ್ಮಣನೆಂದು 'ಇನ್ನು ಬ್ರಾಹ್ಮಣನು' ಎಂಬುದಾಗಿ ಹೇಳುತ್ತಿದೆಯಲ್ಲ! ವ್ಯಾಖ್ಯಾನವಿಚಕ್ಷಣನಾದವನನ್ನೇ ಬ್ರಾಹ್ಮಣನೆಂದರಿಯುತ್ತೇನೆ- ಎಂದು ಹೇಳಿದ್ದು ಹೇಗೆ ಸರಿ ? ಎಂದರೆ ಹೇಳುತ್ತಾನೆ : ಹೀಗೆ ವೇದಗಳ ವೇದನರೂಪವಾದ ಆತ್ಮನ ಪ್ರತಿಪಾದನೆಯ ರೀತಿಯನ್ನು ನಾನು ತಿಳಿದಂತೆ ಯಾವನು ಅರಿತುಕೊಂಡಿರುವನೋ ಅವನು ಪರವನ್ನು ಅರಿತವನು, ಆ ಪರಬ್ರಹ್ಮವನ್ನು ಬಲ್ಲವನು ಎಂದಿಷ್ಟೇ (ಅಭಿಪ್ರಾಯ). ಯಾವನು ಪಾಂಡಿತ್ಯವನ್ನೂ ಅರಿತವನಾಗಿ ಇದ್ದುಕೊಂಡಿರುವನೋ ಅವನು ಜಾಗ್ರತೆಯಾಗಿ ಬಾಲ್ಯವೇ ಮುಂತಾದದ್ದನ್ನು ತಿಳಿದವನಾಗಿ ಬ್ರಾಹ್ಮಣನಾಗುವನು- ಎಂದರ್ಥ.

**[1]ನಾಸ್ಯ ಪರ್ಯೇಷಣಂ ಗಚ್ಛೇತ್ ಪ್ರತ್ಯರ್ಥಿಷು ಕದಾಚನ |**
**ಅವಿಚಿನ್ವನ್ ಇಮಂ ವೇದೇ ತತಃ ಪಶ್ಯತಿ ತಂ ಪ್ರಭುಮ್ || ೪೭ ||**

---

1. ಈ ಶ್ಲೋಕವು ಮಹಾಭಾರತದಲ್ಲಿ ಹೀಗಿದೆ :-

'ನಾಸ್ಯ ಪರ್ಯೇಷಣಂ ಗಚ್ಛೇತ್ ಪ್ರಾಚೀನಂ ನೋತ ದಕ್ಷಿಣಮ್| ನಾರ್ವಾಚೀನಂ ಕುತಸ್ತಿರ್ಯಙ್ ನಾದಿಶಂ ತು ಕಥಂಚನ || ತಸ್ಯ ಪರ್ಯೇಷಣಂ ಗಚ್ಛೇತ್ ಪ್ರತ್ಯರ್ಥಿಷು ಕಥಂಚನ| ಅವಿಚಿನ್ವನ್ ಇಮಂ ವೇದೇ ತಪಃ ಪಶ್ಯತಿ ತಂ ಪ್ರಭುಮ್ ||'

೪೭. ಈ (ಆತ್ಮನಿಗೆ) ಶತ್ರುಗಳಂತೆ ಇರುವ (ವಿಷಯಗಳನ್ನು) ಯಾವಾಗಲೂ ಅನ್ವೇಷಣೆಮಾಡಬಾರದು. (ವಿಷಯಗಳನ್ನು) ಕೂಡಿ ಹಾಕದೆ ಇರುವನಾಗಿ ಇವನನ್ನು ಅನಂತರ ವೇದಗಳ(ಮೂಲಕ) ಪ್ರಭು ವನ್ನಾಗಿ ಕಂಡುಕೊಳ್ಳುವನು.

## ಬ್ರಾಹ್ಮಣನು ವಿಷಯಭೋಗಪರನಾಗಿರಬಾರದು

( ಭಾಷ್ಯ )

ಯಸ್ಮಾತ್ ಸತ್ಯನಿಷ್ಠಸ್ಯೈವ ಬ್ರಾಹ್ಮಣತ್ವಪ್ರಸಿದ್ಧಿಃ ತಸ್ಮಾದ್ ವಿಷಯ ಪರೋ ನ ಭವೇತ್ ಇತ್ಯಾಹ– 'ವಿಷಯಾಶ್ಚೇನ್ದ್ರಿಯಾಣ್ಯೇವ ದೇಹೋಽ- ಹಙ್ಕಾರ ಏವ ಚ । ಬಾಹ್ಯಾ ಆಭ್ಯನ್ತರಾ ಘೋರಾಃ ಶತ್ರವೋ ಯೋಗಿನಃ ಸ್ಮೃತಾಃ' ಇತಿ ದರ್ಶನಾತ್ ನಾಸ್ಯ ಆತ್ಮನಃ ಪ್ರತ್ಯರ್ಥಿಷು ಪ್ರತಿಪಕ್ಷಭೂತೇಷು ದೇಹೇನ್ದ್ರಿಯಶಬ್ದಾದಿವಿಷಯೇಷು ಪರ್ಯೇಷಣಂ ಪರಿತಃ ಏಷಣಂ ಗಚ್ಛೇತ್ ವಿಷಯಾನ್ವೇಷಣಪರೋ ನ ಭವೇತ್ ಇತ್ಯರ್ಥಃ । ಅವಿಚಿನ್ವನ್ ವಿಷಯ ಸಂಚಯಮಕುರ್ವನ್ ಇಮಂ ಪ್ರತ್ಯಗಾತ್ಮಾನಂ ವೇದೇ ಉಪನಿಷತ್ಸು ತತ್ತ್ವ ಮಸ್ಯಾದಿವಾಕ್ಯೇಷು ತತಃ ಪಶ್ಚಾತ್ ಪಶ್ಯತಿ ತಂ ಪ್ರಭುಂ ಪರಮಾತ್ಮಾನಮ್ ಆತ್ಮತ್ವೇನ ಜಾನಾತೀತ್ಯರ್ಥಃ ಅಥವಾ, ನಾಸ್ಯಾತ್ಮನಃ ಪರ್ಯೇಷಣಮ್ ಅನ್ವೇಷಣಂ ಗಚ್ಛೇತ್ ಪ್ರತ್ಯರ್ಥಿಷು ಪ್ರತಿಪಕ್ಷಭೂತದೇಹೇನ್ದ್ರಿಯಾದಿಷು ದೇಹೇನ್ದ್ರಿಯತದ್ಧರ್ಮಾನ್ ಆತ್ಮತ್ವೇನ ನ ಗೃಹ್ಣೀಯಾತ್ ಇತ್ಯರ್ಥಃ । ಅವಿಚಿನ್ವನ್ ದೇಹೇನ್ದ್ರಿಯತದ್ಧರ್ಮಾನ್ ಆತ್ಮತ್ವೇನ ಅಸಂಚಿನ್ವನ್ ತತ್ಸಾ- ಕ್ಷಿಣಮಾತ್ಮಾನಮೇವ ಪ್ರತಿಪದ್ಯಮಾನಃ ತತ್ತ್ವಂಪದಾರ್ಥಶೋಧನಾನನ್ತ- ರಮ್ ಇಮಂ ಪ್ರಮಾತ್ರಾದಿಸಾಕ್ಷಿಣಂ ಪರಮಾತ್ಮಾನಂ ಪಶ್ಯತಿ, ದೇಹೇನ್ದ್ರಿಯ ತದ್ಧರ್ಮಾನಾತ್ಮತ್ವೇನಾಪ್ರತಿಪದ್ಯಮಾನಃ ತತ್ತ್ವಮಸ್ಯಾದಿವಾಕ್ಯೈಃ ಪರಮಾ- ತ್ಮಾನಮಾತ್ಮತ್ವೇನ ಪಶ್ಯತೀತ್ಯರ್ಥಃ ॥

( ಭಾಷ್ಯಾರ್ಥ )

ಸತ್ಯನಿಷ್ಠನಾದವನೇ ಬ್ರಾಹ್ಮಣನೆಂದು ಪ್ರಸಿದ್ಧನಾಗಿರುವದರಿಂದ ವಿಷಯ (ಭೋಗ)ಪರನಾಗಿರಬಾರದು– ಎಂದು ಹೇಳುತ್ತಾರೆ :– "ಯೋಗಿಯಾದವನಿಗೆ ವಿಷಯಗಳು, ಇಂದ್ರಿಯಗಳು, ದೇಹ, ಮತ್ತು ಅಹಂಕಾರ– ಇವುಗಳೇ ಒಳಗಿನ ಮತ್ತು ಹೊರಗಿನ ಭಯಂಕರರಾದ ಶತ್ರುಗಳು" ಎಂದು ಹೇಳಿರುವದರಿಂದ ಈ ಆತ್ಮನ ಪ್ರತಿಪಕ್ಷಿಗಳಾದ– ಎಂದರೆ ವಿರೋಧಿಗಳಾದ ದೇಹ, ಇಂದ್ರಿಯಗಳು, ಶಬ್ದಾದಿವಿಷಯಗಳಲ್ಲಿ ಪರ್ಯೇಷಣವನ್ನು ಎಂದರೆ ತನ್ನ ಸುತ್ತಮುತ್ತಲೂ

ಹುಡುಕಬಾರದು. ವಿಷಯಗಳನ್ನು ಹುಡುಕುತ್ತಾ ಇರಬಾರದು- ಎಂದಭಿಪ್ರಾಯ. ಹೀಗೆ ವಿಷಯಗಳನ್ನು ಕೂಡಿಹಾಕದೆ, ಕೂಡಿಡದೆ ಈ ಪ್ರತ್ಯಗಾತ್ಮನನ್ನು ವೇದದಲ್ಲಿಯೂ ಉಪನಿಷತ್ತುಗಳಲ್ಲಿಯೂ ತತ್ತ್ವಮಸ್ಯಾದಿವಾಕ್ಯಗಳಲ್ಲಿಯೂ (ವಿಚಾರಮಾಡುತ್ತಾ) ಅನಂತರ- ಆಮೇಲೆ ಆ ಪ್ರಭುವಾದ ಪರಮಾತ್ಮನನ್ನು ತನ್ನ ಆತ್ಮನೆಂದೇ ಅರಿತುಕೊಳ್ಳುತ್ತಾನೆ- ಎಂದರ್ಥ. ಅಥವಾ[1] ಈ ಆತ್ಮನ ಪರ್ಯೇಷಣೆಯನ್ನು ಎಂದರೆ ಹುಡುಕುವಿಕೆಯನ್ನು ಪ್ರತ್ಯರ್ಥಿಗಳಲ್ಲಿ ಎಂದರೆ ಆತ್ಮನಿಗೆ ವಿರುದ್ಧವಾದ- ದೇಹೇಂದ್ರಿಯಾದಿಗಳಲ್ಲಿ ಮಾಡಬಾರದು, ದೇಹೇಂದ್ರಿಯಗಳ ಧರ್ಮಗಳನ್ನು ತಾನೆಂದು ತಿಳಿಯಬಾರದು- ಎಂದಭಿಪ್ರಾಯ. (ಅಂತೂ) ಈ ದೇಹೇಂದ್ರಿಯಗಳನ್ನೂ ಅವುಗಳ ಧರ್ಮಗಳನ್ನೂ ತಾನೆಂದು ತಪ್ಪಾಗಿ ತಿಳಿದುಕೊಳ್ಳದೆ ಅವುಗಳಿಗೆ ಸಾಕ್ಷಿಯಾಗಿರುವ ಆತ್ಮನೇ ತಾನೆಂದು ತಿಳಿದವನಾಗಿ ತತ್ ಮತ್ತು ತ್ವಂ- ಎಂಬ ಪದಾರ್ಥಗಳನ್ನು ಶೋಧನೆಮಾಡಿದ ಮೇಲೆ ಈ ಪ್ರಮಾತೃವೇ ಮುಂತಾದವುಗಳಿಗೆ ಸಾಕ್ಷಿಯಾದ ಪರಮಾತ್ಮನನ್ನು ಕಾಣುತ್ತಾನೆ- ದೇಹೇಂದ್ರಿಯಗಳು ಮತ್ತು ಅವುಗಳ ಧರ್ಮಗಳನ್ನು ಆತ್ಮನ ಧರ್ಮಗಳೆಂದು ತಿಳಿದುಕೊಳ್ಳದೆ 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ಪರಮಾತ್ಮನನ್ನು ತನ್ನ ಆತ್ಮನೆಂದು ಅರಿತುಕೊಳ್ಳುತ್ತಾನೆ ಎಂದಭಿಪ್ರಾಯ.

**ತೂಷ್ಣೀಂಭೂತ ಉಪಾಸೀತ ನ ಚೇಚ್ಛೇನ್ಮನಸಾ ಅಪಿ[2] ।**
**ಅಭ್ಯಾವರ್ತೇತ ಬ್ರಹ್ಮಾಸ್ಮೈ[3] ಬಹ್ವನನ್ತರಮಾಪ್ನುಯಾತ್[4] ॥ ೪೭ ॥**

೪೭. ಸುಮ್ಮನೆ ಇದ್ದುಕೊಂಡು (ಸರ್ವಕರ್ಮಸಂನ್ಯಾಸಮಾಡಿ ಆತ್ಮನನ್ನು) ಉಪಾಸನೆಮಾಡಬೇಕು. ಮನಸ್ಸಿನಿಂದಕೂಡ ವಿಷಯಗಳನ್ನು ಬಯಸಬಾರದು. ಇಂಥವನಿಗೆ ಬ್ರಹ್ಮವು ಅಭಿಮುಖವಾಗುವದು. ಆಮೇಲೆ ಭೂಮವಾದ ಬ್ರಹ್ಮವನ್ನು ಪಡೆದುಕೊಳ್ಳುವನು.

( ಭಾಷ್ಯ )

ಯಸ್ಮಾತ್ ಸರ್ವವಿಷಯಪರಿತ್ಯಾಗೇನೈವ ಆತ್ಮದರ್ಶನಸಿದ್ಧಿಃ ತಸ್ಮಾತ್ ತೂಷ್ಣೀಂಭೂತಃ ಸರ್ವಕರ್ಮಸಂನ್ಯಾಸಂ ಕೃತ್ವಾ ಸ್ವಾತ್ಮವ್ಯತಿರಿಕ್ತಂ ಸರ್ವಂ ಪರಿತ್ಯಜ್ಯ ಕೇವಲೋ ಭೂತ್ವಾ ಸ್ವಾತ್ಮಾನಮೇವ ಲೋಕಮ್ ಉಪಾಸೀತ, ನ ಚೇಚ್ಛೇನ್ಮನಸಾ ಅಪಿ ವಿಷಯೇಚ್ಛಾಂ ನ ಕುರ್ಯಾತ್ । ಯಸ್ತೂಷ್ಣೀಂಭೂತಃ ವಿಷಯೋಪಸಂಹಾರಂ ಕೃತ್ವಾ ಸ್ವಾತ್ಮಾನಮೇವ ಲೋಕಮ್ ಉಪಾಸ್ತೇ

1. ಈ ಶ್ಲೋಕಕ್ಕೆ ಇನ್ನೊಂದು ರೀತಿಯಿಂದಲೂ ಅರ್ಥಮಾಡಬಹುದು.
2. 'ನ ಚೇಷ್ಟೇನ್ಮನಸಾಽಪಿ ಚ' 3. 'ಉಪಾವರ್ತಸ್ವ ತದ್ಬ್ರಹ್ಮ'
4. 'ಅನ್ತರಾತ್ಮನಿ ವಿಶ್ರುತಮ್' ಎಂದು ಮ॥ಭಾ॥ ಪಾಠಗಳು.

ಅಸ್ಮೈ ತೂಷ್ಣೀಂಭೂತಾಯ ಬ್ರಾಹ್ಮಣಾಯ ಬ್ರಹ್ಮ ಅಪೂರ್ವಾದಿಲಕ್ಷಣಮ್ ಅಭ್ಯಾವರ್ತೇತ ಅಭಿಮುಖೀಭವೇದಿತ್ಯರ್ಥಃ | ಶ್ರೂಯತೇ ಚ– 'ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್' (ಮುಂ. ೩-೨-೩) ಇತಿ | ಅನನ್ತರಂ ಆವಿರ್ಭೂತಸ್ವರೂಪಃ ಸನ್ ಬಹು ಭೂಮಾನಂ ತಮಸಃ ಪಾರಂ ಪರಮ್ ಆತ್ಮಾನಮ್ ಆಪ್ನುಯಾದ್ ಇತ್ಯರ್ಥಃ ||

(ಭಾಷ್ಯಾರ್ಥ)

ಎಲ್ಲಾ ವಿಷಯ(ಭೋಗ)ಗಳನ್ನು ಬಿಡುವದರಿಂದಲೇ ಆತ್ಮನ ದರ್ಶನವು ಸಿದ್ಧಿಸುತ್ತದೆಯಾದ್ದರಿಂದ ಸುಮ್ಮನೆ ಇದ್ದುಕೊಂಡು[1] ಎಂದರೆ ಸರ್ವಕರ್ಮ ಸಂನ್ಯಾಸವನ್ನು ಮಾಡಿ, ತನಗಿಂತ ಬೇರೆಯಾದದ್ದೆಲ್ಲವನ್ನೂ ತ್ಯಾಗಮಾಡಿ ತಾನೊಬ್ಬನೇ ಇದ್ದುಕೊಂಡು ತನ್ನ ಆತ್ಮನೆಂಬ ಲೋಕವನ್ನು ಉಪಾಸನೆಮಾಡ ಬೇಕು.[2] ಮನಸ್ಸಿನಿಂದಕೂಡ– ವಿಷಯುಗಳ ಬಯಕೆಯನ್ನು ಮಾಡಬಾರದು. ಯಾವನು ವಿಷಯುಗಳನ್ನು ಒಳಕ್ಕೆ ಸೆಳೆದುಕೊಂಡು ಸುಮ್ಮನೆ ಇರುತ್ತಾ ತನ್ನ ಆತ್ಮನೆಂಬ ಲೋಕವನ್ನೇ ಉಪಾಸನೆಮಾಡುವನೋ ಅಂಥ ಸುಮ್ಮನೆ ಇದ್ದು ಕೊಂಡಿರುವ ಬ್ರಾಹ್ಮಣನಿಗೆ ಅಪೂರ್ವವೇ ಮುಂತಾದ[3] ಲಕ್ಷಣವುಳ್ಳ ಬ್ರಹ್ಮವು ಇದಿರಾಗುವದು– ಅಭಿಮುಖವಾಗುವದು ಎಂದರ್ಥ. ಶ್ರುತಿಯಲ್ಲಿಯೂ– 'ಈ ಸಾಧಕನು ಯಾವ ಬ್ರಹ್ಮವೊಂದನ್ನೇ ಬಯಸುವನೋ (ಅದು) ಅವನಿಂದ ಪಡೆಯಲ್ಪಡುಪದು ; ಅವನಿಗೆ ಈ ಆತ್ಮನು ತನ್ನ ಸ್ವರೂಪವನ್ನು ಬಿಚ್ಚಿ ತೋರಿಸುವನು' ಎಂದು ಹೇಳಿದೆ. ಆಮೇಲೆ ಎದುರಾಗಿ ತೋರಿಕೊಂಡ ಸ್ವರೂಪ ವುಳ್ಳವನಾಗಿ[4] ಬಹುವಾದ ಎಂದರೆ ಭೂಮವಾದ[5] ಕತ್ತಲೆಯ ಆಚೆಇರುವ ಪರಮಾತ್ಮನನ್ನು ಪಡೆದುಕೊಳ್ಳುತ್ತಾನೆ– ಎಂದರ್ಥ.

## ಅಕ್ಷರಜ್ಞಾನಿಯೇ ಮುನಿ

**ಮೌನಾದ್ಧಿ ಮುನಿರ್ಭವತಿ[6] ನಾರಣ್ಯವಸನಾನ್ಮುನಿಃ |**
**ಅಕ್ಷರಂ ತಂ ತು ಯೋ ವೇದ[7] ಸ ಮುನಿಶ್ರೇಷ್ಠ ಉಚ್ಯತೇ ||೪೮||**

೪೮. ಮೌನದಿಂದಲೇ ಮುನಿಯೆನಿಸುವನು. ಅರಣ್ಯವಾಸಮಾಡಿದ್ದ ರಿಂದ ಅಲ್ಲ. ಆ ಅಕ್ಷರವನ್ನು ಯಾವನು ಬಲ್ಲನೋ ಅವನು ಮುನಿಗಳಲ್ಲಿ ಉತ್ತಮನೆನಿಸುವನು.

1. ಗೀ. ೫-೧೩ನ್ನು ನೋಡಿ. 2. ಬೃ. ೧-೪-೧೫ರ ಭಾಷ್ಯವನ್ನು ನೋಡಿ.
3. ಬೃ. ೨-೫-೧೯ನ್ನು ನೋಡಿರಿ.
4. ಆತ್ಮಸಾಕ್ಷಾತ್ಕಾರವನ್ನು ಹೊಂದಿದವನಾಗಿ ಎಂದರ್ಥ.
5. ಛಾಂ. ೭-೨೪-೧ನ್ನು ನೋಡಿರಿ. 6. 'ಮೌನಾನ್ನ ಸ ಮುನಿರ್ಭವತಿ'
7. 'ಸ್ವಲಕ್ಷಣಂ ತು ಯೋ ವೇದ' ಎಂದು ಪು||ಭಾ|| ಪಾಠಗಳು.

( ಭಾಷ್ಯ )

ಮುನಿರಪ್ಯೇಷ ಏವೇತ್ಯಾಹ- ಮೌನಾತ್ ಪೂರ್ವೋಕ್ತಾತ್ ತೂಷ್ಣೀಂ ಭಾವಾದೇವ ಮುನಿರ್ಭವತಿ, ನ ಪುನಃ ಅರಣ್ಯವಸನಮಾತ್ರಾತ್ ಮುನಿಃ ಭವತಿ । ತೇಷಾಮಪಿ ತೂಷ್ಣೀಂಭೂತಾನಾಂ ಮಧ್ಯೇ ಯಸ್ತು ಪುನಃ ಅಕ್ಷರಂ ಅವಿನಾಶಿನಂ ತಂ ಪರಮಾತ್ಮಾನಂ ವೇದ 'ಅಯಮಹಮಸ್ಮಿ' ಇತಿ ಸಾಕ್ಷಾತ್ ಜಾನಾತಿ ಸ ಮುನಿಶ್ರೇಷ್ಠ ಉಚ್ಯತೇ । ಶ್ರೂಯತೇ ಚ- 'ಏತಮೇವ ವಿದಿತ್ವಾ ಮುನಿರ್ಭವತಿ' (ಬೃ. ೪-೪-೨೨) ಇತಿ ॥

(ಭಾಷ್ಯಾರ್ಥ)

ಮುನಿಯೆಂದರೂ ಇವನೇ- ಎಂದು ಹೇಳುತ್ತಾನೆ. ಹಿಂದೆ ತಿಳಿಸಿದಂತೆ ಸುಮ್ಮನಿರುವಿಕೆಯೆಂಬ ಮೌನದಿಂದಲೇ ಮುನಿಯಾಗುವನು. ಆದರೆ ಕೇವಲ ಕಾಡಿನಲ್ಲಿ ವಾಸಮಾಡಿದ್ದರಿಂದ ಮುನಿಯಾಗುವದಿಲ್ಲ. ಹೀಗೆ ಸುಮ್ಮನೆ ಇರುವವರ ನಡುವೆಯೂ ಯಾವನು ಅಕ್ಷರವನ್ನು- ಎಂದರೆ ನಾಶವಿಲ್ಲದ ಆ ಪರಮಾತ್ಮನನ್ನು 'ಅವನೇ ನಾನಾಗಿದ್ದೇನೆ' ಎಂದು ನೇರಾಗಿ ಅರಿತುಕೊಳ್ಳುವನೋ ಅವನು ಮುನಿಗಳಲ್ಲಿ ಉತ್ತಮನೆನಿಸುವನು. ಶ್ರುತಿಯಲ್ಲಿಯೂ 'ಇವನನ್ನು ಅರಿತುಕೊಂಡು ಮುನಿಯಾಗುವನು' ಎಂದು ಹೇಳಿದೆ.

## ಜ್ಞಾನಿಯೇ ವ್ಯಾಕರಣಜ್ಞನು

**ಸರ್ವಾರ್ಥಾನಾಂ ವ್ಯಾಕರಣಾದ್ ವೈಯಾಕರಣ ಉಚ್ಯತೇ ।**
**ತನ್ಮೂಲತೋ ವ್ಯಾಕರಣಂ ವ್ಯಾಕರೋತೀತಿ ತತ್ತಥಾ ॥ ೪೯ ॥**

೪೯. ಎಲ್ಲಾ ವಸ್ತುಗಳ (ತತ್ತ್ವವನ್ನೂ) ವಿಂಗಡಿಸಿ ತಿಳಿಯುವದರಿಂದ ಇವನು ವೈಯಾಕರಣನೆನಿಸುವನು. ಆ (ಅಕ್ಷರವೆಂಬ ಬ್ರಹ್ಮ) ದಿಂದಲೇ (ನಾಮರೂಪಗಳು) ವ್ಯಾಕರಣಮಾಡಲ್ಪಟ್ಟಿವೆ. ಇವನೂ ಆ ಬ್ರಹ್ಮವನ್ನು ವ್ಯಾಕರಣಮಾಡುವದರಿಂದ ವೈಯಾಕರಣನೆನಿಸುವನು.

(ಭಾಷ್ಯ)

ವೈಯಾಕರಣೋಽಪ್ಯೇಷ ಏವೇತ್ಯಾಹ- ಸರ್ವಾರ್ಥಾನಾಂ ವ್ಯಾಕರಣಾದ್ ವೈಯಾಕರಣ ಉಚ್ಯತೇ । ನ ಪುನಃ ಶಬ್ದೈಕದೇಶವ್ಯಾಕರಣಾದ್ ವೈಯಾಕರಣೋ ಭವತಿ । ಭವತು ಸರ್ವಾರ್ಥಾನಾಂ ವ್ಯಾಕರಣಾದ್ ವೈಯಾಕರಣತ್ವಮ್, ತತಃ ಕಿಮಿತಿ ಚೇತ್, ತನ್ಮೂಲತೋ ವ್ಯಾಕರಣಂ ಪೂರ್ವೋಕ್ತಾದಕ್ಷರಾದ್ಧಿ ಸರ್ವಸ್ಯ ನಾಮರೂಪಪ್ರಪಞ್ಚಸ್ಯ ವ್ಯಾಕರಣಮ್ । ಶ್ರೂಯತೇ ಚ

'ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ. ೬-೩-೨) ಇತಿ । ತಸ್ಮಾದ್ ಬ್ರಹ್ಮಣ ಏವ ಸಾಕ್ಷಾದ್ ವೈಯಾಕರಣತ್ವಮ್ । ವ್ಯಾಕರೋತೀತಿ ತತ್ತಥಾ ಅಸಾವಪಿ ವಿದ್ವಾನ್ ತದ್ ಬ್ರಹ್ಮ ತಥೈವ ವ್ಯಾಕರೋತೀತಿ ವೈಯಾಕರಣಃ ॥

( ಭಾಷ್ಯಾರ್ಥ )

ವೈಯಾಕರಣನೂ ಇವನೇ- ಎಂದು ಹೇಳುತ್ತಾನೆ : ಎಲ್ಲಾ ವಸ್ತುಗಳ (ತತ್ತ್ವವನ್ನೂ) ಬಿಡಿಸಿ ತಿಳಿಯುವದರಿಂದ ವೈಯಾಕರಣನೆನಿಸುವನು. ಆದರೆ ಶಬ್ದಗಳ ಒಂದಂಶವನ್ನು ವಿಂಗಡಿಸಿದ ಮಾತ್ರದಿಂದ (ನಿಜವಾದ) ವೈಯಾಕರಣನಾಗಲಾರನು. ಎಲ್ಲಾ ವಸ್ತುಗಳನ್ನೂ ವ್ಯಾಕರಣಮಾಡಿದ್ದರಿಂದಲೇ ವೈಯಾಕರಣನೆಂದಾಗಲಿ, ಅದರಿಂದೇನು? (ಎಂದರೆ) ಹಿಂದೆ ಹೇಳಿದ ಅಕ್ಷರವೆಂಬ (ಬ್ರಹ್ಮದ) ಮೂಲದಿಂದಲೇ ಅಲ್ಲವೆ, ನಾಮರೂಪಾತ್ಮಕವಾದ ಈ ಎಲ್ಲಾ ಪ್ರಪಂಚವೂ ವ್ಯಾಕರಣಮಾಡಲ್ಪಟ್ಟದೆ ? ಶ್ರುತಿಯಲ್ಲಿಯೂ- "ಈ ಜೀವಾತ್ಮನ ರೂಪದಿಂದ ಒಳಹೊಕ್ಕು ನಾಮರೂಪಗಳನ್ನು ವ್ಯಾಕರಣಮಾಡುವೆನು" ಎಂದು ಹೇಳಿದೆ. ಆದ್ದರಿಂದ ವೈಯಾಕರಣತ್ವವು ಮುಖ್ಯಾರ್ಥದಲ್ಲಿ ಬ್ರಹ್ಮಕ್ಕೇ (ಹೊಂದುತ್ತದೆ.) ಹಾಗೆಯೇ ಈ ಜ್ಞಾನಿಯೂ ಆ ಬ್ರಹ್ಮವನ್ನು ಇದ್ದಂತೆಯೇ ತಿಳಿಯುತ್ತಾನೆ, ವ್ಯಾಕರಣಮಾಡುತ್ತಾನೆ- ಆದ್ದರಿಂದ (ಬ್ರಹ್ಮದಂತೆಯೇ) ಇವನೂ ವೈಯಾಕರಣನು (ಎಂದಭಿಪ್ರಾಯ).

## ಜ್ಞಾನಿಯು ಸರ್ವಜ್ಞನು

**ಪ್ರತ್ಯಕ್ಷದರ್ಶೀ ಲೋಕಾನಾಂ ಸರ್ವದರ್ಶೀ ಭವೇನ್ನರಃ ।**
**ಸತ್ಯೇ ವೈ ಬ್ರಹ್ಮಣಿ ತಿಷ್ಠನ್ ತದ್ವಿದ್ವಾನ್ ಸರ್ವವಿದ್ ಭವೇತ್ ॥**

೫೦. (ಭೂಮಿಯೇ ಮುಂತಾದ) ಲೋಕಗಳನ್ನು ಯಾವನು ನೇರಾಗಿ ನೋಡುವನೋ ಆ ಮನುಷ್ಯನು ಸರ್ವದರ್ಶಿಯಾಗುವನು. ಸತ್ಯವಾದ ಬ್ರಹ್ಮದಲ್ಲಿ ನಿಂತವನು (ಎಂದರೆ) (ಬ್ರಹ್ಮವನ್ನು) ಬಲ್ಲವನು ಎಲ್ಲವನ್ನೂ ಬಲ್ಲವನಾಗುವನು.

(ಭಾಷ್ಯ)

ಸರ್ವಜ್ಞೋಽಪ್ಯೇಷ ಏವೇತ್ಯಾಹ- ಪ್ರತ್ಯಕ್ಷದರ್ಶೀ ಲೋಕಾನಾಂ ಯಃ ಪ್ರತ್ಯಕ್ಷೇಣ ಭೂರಾದೀನ್ ಲೋಕಾನ್ ಪಶ್ಯತಿ, ಸ ಸರ್ವದರ್ಶೀ ನರೋ ಭವೇತ್ ಸರ್ವರೂಪಂ ಪರಮಾತ್ಮಾನಂ ಪಶ್ಯತಿ । ಅಸೌ ಪುನಃ ಸತ್ಯೇ ಸತ್ಯಾದಿ ಲಕ್ಷಣೇ ಬ್ರಹ್ಮಣಿ ತಿಷ್ಠನ್ ಮನಃ ಸಮಾದಧಾತಿ । ತದ್ವಿದ್ವಾನ್ ಸತ್ಯಾದಿ

ಲಕ್ಷಣಂ ಬ್ರಹ್ಮ ವಿದ್ವಾನ್ ಆತ್ಮತ್ವೇನ ಜಾನನ್ ಸರ್ವವಿದ್ ಭವೇತ್ ಸರ್ವಂ ಜಾನಾತಿ ಇತ್ಯರ್ಥಃ । ತಸ್ಮಾದ್ ಏಷ ಏವ ಸಾಕ್ಷಾತ್ ಸರ್ವಜ್ಞಃ, ನ ಅನಾತ್ಮಮಾತ್ರದರ್ಶೀ ॥

( ಭಾಷ್ಯಾರ್ಥ )

ಸರ್ವಜ್ಞನೆಂದರೂ ಇವನೇ- ಎಂದು ಹೇಳುತ್ತಾನೆ. ಯಾವನು ಪ್ರತ್ಯಕ್ಷ ದರ್ಶಿಯೋ, (ಎಂದರೆ) ಭೂಮಿಯೇ ಮೊದಲಾದ ಲೋಕಗಳನ್ನು ನೇರಾಗಿ ಕಾಣುವನೋ[1] ಅವನು ಸರ್ವದರ್ಶಿಯಾದ ನರನಾಗುವನು. (ಎಂದರೆ) ಸರ್ವ ರೂಪನಾದ ಪರಮಾತ್ಮನನ್ನು ಕಾಣುವನು. ಮತ್ತು ಇವನು ಸತ್ಯದಲ್ಲಿ (ಎಂದರೆ) ಸತ್ಯಾದಿಲಕ್ಷಣಗಳುಳ್ಳ ಪರಮಾತ್ಮನಲ್ಲಿ ನಿಂತು ಮನಸ್ಸನ್ನು ಸಮಾಧಾನಗೊಳಿಸಿ ಕೊಳ್ಳುತ್ತಾನೆ. ಹೀಗೆ ಸತ್ಯಾದಿಲಕ್ಷಣವುಳ್ಳ ಬ್ರಹ್ಮವನ್ನು ಬಲ್ಲವನು- ಎಂದರೆ ಅದನ್ನು ತನ್ನ ಆತ್ಮನಾಗಿಯೇ ಅರಿತುಕೊಂಡವನು ಸರ್ವವಿದನಾಗುವನು- ಎಂದರೆ ಎಲ್ಲವನ್ನೂ ಬಲ್ಲವನಾಗುವನು - ಎಂದರ್ಥ. ಆದ್ದರಿಂದ ಇವನೇ ಸಾಕ್ಷಾತ್ ಸರ್ವಜ್ಞನು ; ಅನಾತ್ಮನನ್ನು ಮಾತ್ರ ಕಂಡವನಲ್ಲ.

**ಜ್ಞಾನಾದಿಷು[2] ಸ್ಥಿತೋಽಪ್ಯೇವಂ ಕ್ಷತ್ರಿಯ ಬ್ರಹ್ಮ ಪಶ್ಯತಿ ।**
**ವೇದಾನಾಂ ಚಾರಪೂರ್ವೇಣ[3] ಚೈತದ್ ವಿದ್ವನ್[4] ಬ್ರವೀಮಿ ತೇ ॥೫೧॥**

೫೧. ಎಲೈ ಕ್ಷತ್ರಿಯನೆ, ಜ್ಞಾನವೇ ಮುಂತಾದವುಗಳಲ್ಲಿ ನಿಂತವನೂ ಹೀಗೆಯೇ ಬ್ರಹ್ಮವನ್ನು ಕಾಣುವನು. ವೇದಗಳ ವಿಚಾರಪೂರ್ವಕವಾಗಿ ಬ್ರಹ್ಮವನ್ನು ಕಾಣುವನು. ಎಲೈ ವಿದ್ವಾಂಸನೆ, ಇದನ್ನು (ಮುಂದೆ) ಹೇಳುವೆನು.

( ಭಾಷ್ಯ )

'ಯಸ್ತ್ವೇತೇಭ್ಯಃ' (೨-೧೯) ಇತ್ಯಾದಿನಾ ಉಕ್ತಮೇವಾರ್ಥಂ ಪುನರಪಿ ದರ್ಶಯತಿ ಅವಶ್ಯಕರ್ತವ್ಯತ್ವಪ್ರದರ್ಶನಾರ್ಥಮ್- ಜ್ಞಾನಾದಿಷು 'ಜ್ಞಾನಂ ಚ' ಇತ್ಯಾದಿನಾ ಪೂರ್ವೋಕ್ತೇಷು ಸ್ಥಿತೋಽಪಿ ಏವಂ ಯಥಾ ಸತ್ಯೇ ತಿಷ್ಠನ್ ಬ್ರಹ್ಮ ಪಶ್ಯತಿ ಏವಮೇವ ಬ್ರಹ್ಮ ಪಶ್ಯತಿ । ವೇದಾನಾಂ ಚಾರಪೂರ್ವೇಣ ವೇದಾನ್ತಶ್ರವಣಪೂರ್ವಕಮಿತ್ಯರ್ಥಃ । ಅಥವಾ ಗುಣಾನ್ತರವಿಧಾನಮೇತತ್- ಜ್ಞಾನಾದಿಷು ಸ್ಥಿತೋಽಪಿ ನ ಕೇವಲಂ ತಾವನ್ಮಾತ್ರೇಣ ಪಶ್ಯತಿ ; ಅಪಿ ತು

1. ನೇರಾಗಿ ಕಾಣುವದೆಂದರೆ ನಾಮರೂಪಗಳನ್ನು ಬಿಟ್ಟು ಅವುಗಳಿಗೆ ಆಧಾರನಾದ ಪರಮಾತ್ಮನನ್ನೇ ಕಾಣುವವನೆಂದರ್ಥವಿರಬಹುದು.

2. 'ಧರ್ಮಾದಿಷು' 3. 'ಚಾನುಪೂರ್ವ್ಯೇಣ'

4. 'ಬುದ್ಧ್ಯಾ' ಎಂದು ಮಹಾಭಾರತದ ಪಾಠಗಳು.

ಏವಮೇವ ವಕ್ಷ್ಯಮಾಣಪ್ರಕಾರೇಣ ವೇದಾನ್ತವಿಚಾರಪೂರ್ವೇಣ ವೇದಾನ್ತಶ್ರವಣಾದಿಪೂರ್ವಕಮೇವ ಪಶ್ಯತಿ ಬ್ರಹ್ಮ। ಏತತ್ ವೇದಾನ್ತಾನಾಂ ವಿಚಾರಪ್ರಕಾರಂ ಹೇ ವಿದ್ವನ್ ಬ್ರವೀಮಿ ತೇ ವಕ್ಷ್ಯಾಮೀತ್ಯಭಿಪ್ರಾಯಃ ||

( ಭಾಷ್ಯಾರ್ಥ )

'ಯಾವನು ಇವುಗಳಿಂದ (ಬಿಡಲ್ಪಟ್ಟಿಲ್ಲವೋ') ಎಂಬಿದೇ ಮುಂತಾದವುಗಳಿಂದ ಹೇಳಿದ ಅರ್ಥವನ್ನೇ ಮತ್ತೊಮ್ಮೆ (ಅವುಗಳನ್ನು) ಮಾಡಲೇಬೇಕೆಂತ ತಿಳಿಸುವದಕ್ಕಾಗಿ ಹೇಳುತ್ತಾನೆ- ಜ್ಞಾನವೇ (ಮುಂತಾದವುಗಳಲ್ಲಿ) 'ಜ್ಞಾನವೂ' ಎಂದು ಹಿಂದೆ ತಿಳಿಸಿದಂತೆ ಅವುಗಳಲ್ಲಿ ನಿಂತವನೂಕೂಡ, ಹೇಗೆಂದರೆ : ಸತ್ಯದಲ್ಲಿ ನಿಂತವನು ಬ್ರಹ್ಮವನ್ನು ಹೇಗೆ ಕಾಣುವನೋ ಹಾಗೆಯೇ (ಇವನೂ) ಬ್ರಹ್ಮವನ್ನು ಕಂಡುಕೊಳ್ಳುವನು. ವೇದಗಳ ವಿಚಾರದಮೂಲಕವಾಗಿ ಎಂದರೆ ವೇದಾಂತಗಳ ಶ್ರವಣದಮೂಲಕ- ಎಂದರ್ಥ. ಅಥವಾ ಬೇರೊಂದು ಗುಣವನ್ನು ವಿಧಿಸುವದಕ್ಕಾಗಿ ಹೀಗೆ ಹೇಳಿದೆ. ಜ್ಞಾನವೇ ಮುಂತಾದದ್ದರಲ್ಲಿ ನಿಂತಿದ್ದರೂ ಅಷ್ಟುಮಾತ್ರದಿಂದಲೇ (ಬ್ರಹ್ಮವನ್ನು) ಕಾಣುವದಿಲ್ಲ. ಮತ್ತೇನೆಂದರೆ : ಇದೇ ರೀತಿಯಾಗಿ ಮುಂದೆ ಹೇಳುವ ಕ್ರಮದಿಂದ ವೇದಾಂತವಿಚಾರಪೂರ್ವಕವಾಗಿ- ಎಂದರೆ ವೇದಾಂತವನ್ನು ಶ್ರವಣಮಾಡುವದೇ ಮುಂತಾದ ರೀತಿಯಿಂದಲೇ ಬ್ರಹ್ಮವನ್ನು ಕಂಡುಕೊಳ್ಳುತ್ತಾನೆ. ಈ ವೇದಾಂತವಿಚಾರಪ್ರಕಾರವನ್ನು ಎಲೈ ಜಾಣನೆ, ನಿನಗೆ ಹೇಳುತ್ತೇನೆ- ಎಂದರೆ ಮುಂದೆ ತಿಳಿಸುವೆನು ಎಂದಭಿಪ್ರಾಯ.

ಇತಿ ಸನತ್ಸುಜಾತೀಯಭಾಷ್ಯೇ ದ್ವಿತೀಯೋಽಧ್ಯಾಯಃ

# ಮೂರನೆಯ ಅಧ್ಯಾಯ

## ಧೃತರಾಷ್ಟ್ರನ ಪ್ರಶ್ನೆ

**ಧೃತರಾಷ್ಟ್ರ ಉವಾಚ—**

**ಸನತ್ಸುಜಾತ ಯದಿಮಾಂ[1] ಪರಾರ್ಥಾಂ[2]**
**ಬ್ರಾಹ್ಮೀಂ ವಾಚಂ ವದಸಿ ಹಿ ವಿಶ್ವರೂಪಾಮ್ ।**
**ಪರಾಂ ಹಿ ಕಾರ್ಯೇಷು[3] ಸುದುರ್ಲಭಾಂ ಕಥಾಂ**
**ಪ್ರಬ್ರೂಹಿ ಮೇ ವಾಕ್ಯಮೇವಂ[4] ಕುಮಾರ ॥ ೧ ॥**

೧. ಧೃತರಾಷ್ಟ್ರನಿಂತೆಂದನು : ಎಲೈ ಸನತ್ಸುಜಾತನೆ, ಈ ಉತ್ಕೃಷ್ಟವಾದ ಅರ್ಥವುಳ್ಳ ಬ್ರಹ್ಮ(ವಿಚಾರದ) ನಾನಾರೂಪವಾಗಿರುವ ಮಾತನ್ನು ಹೇಳುತ್ತಿದೀಯಷ್ಟೆ! ಎಲೈ ಕುಮಾರನೆ, ಪ್ರಪಂಚದಲ್ಲಿ ದುರ್ಲಭವಾದ ಈ ಹೆಚ್ಚಿನ ಕಥಾರೂಪವಾದ ವಾಕ್ಯವನ್ನು ಹೀಗೆಯೇ (ಮುಂದುವರಿಸಿ) ಹೇಳುವವನಾಗು.

(ಭಾಷ್ಯ)

ಇದಾನೀಂ ಬ್ರಹ್ಮಚರ್ಯಾದಿಸಾಧನಾನನ್ತರಂ ತತ್ಪ್ರಾಪ್ಯಂ ಚ ಬ್ರಹ್ಮ ಪ್ರತಿಪಾದಯಿತುಂ ತೃತೀಯಚತುರ್ಥಾವಾರಭ್ಯೇತೇ । ತತ್ರ ತಾವದ್ ಬ್ರಹ್ಮಚರ್ಯಾದಿಸಾಧನಂ ಶ್ರುತ್ವಾ ತದ್ ಬ್ರಹ್ಮವೇದನಾಕಾಙ್ಕ್ಷೀ ಪ್ರಾಹ ಧೃತರಾಷ್ಟ್ರಃ ॥

ಹೇ ಸನತ್ಸುಜಾತ, ಯತ್ ಯಸ್ಮಾತ್ ಇಮಾಂ ಪರಾರ್ಥಾಮ್ ಉತ್ಕೃಷ್ಟಾರ್ಥಾಂ ಬ್ರಾಹ್ಮೀಂ ಬ್ರಹ್ಮಸಂಬನ್ಧಿನೀಂ ವಾಚಂ ವದಸಿ ಹಿ ವಿಶ್ವರೂಪಾಂ ನಾನಾರೂಪಾಂ ಪರಾಮ್ ಉತ್ತಮಾಮ್, ಕಾರ್ಯೇಷು ಕಾರ್ಯವರ್ಗೇಷು ಪ್ರಪಞ್ಚೇಷು ಸುದುರ್ಲಭಾಂ ಶ್ರವಣಾಯಾಮಪ್ಯಶಕ್ಯಾಂ ಕಥಾಂ ಪ್ರಬ್ರೂಹಿ ಮೇ ವಾಕ್ಯಮೇವಂ ಭೂತಂ ಕುಮಾರ, ಯಸ್ಮಾತ್ ತ್ವಂ ಬ್ರಾಹ್ಮೀಂ ವಾಚಂ ಪರಮಪುರುಷಾರ್ಥಸಾಧನಭೂತಾಂ ಸುದುರ್ಲಭಾಂ ವದಸಿ, ತಸ್ಮಾತ್ ತ್ವಮೇವ ವಕ್ತುಮರ್ಹಸೀತ್ಯಭಿಪ್ರಾಯಃ ॥

---

1. 'ಯಾಮಿಮಾಂ' 2. 'ಪರಾಂ ತ್ವಮ್'
3. 'ಕಾಮೇನ' 4. 'ಇದಮ್' ಎಂದು ಮ॥ಭಾ॥ ಪಾಠ.

(ಭಾಷ್ಯಾರ್ಥ)

ಈಗ ಬ್ರಹ್ಮಚರ್ಯವೇ ಮುಂತಾದ ಸಾಧನಗಳನ್ನು (ತಿಳಿಸಿದ) ಅನಂತರ ಆ (ಸಾಧನಗಳಿಂದ) ಪಡೆಯಬಹುದಾದ ಬ್ರಹ್ಮವನ್ನು ಪ್ರತಿಪಾದನೆಮಾಡುವದಕ್ಕಾಗಿ ಮೂರು ನಾಲ್ಕನೆಯ (ಅಧ್ಯಾಯಗಳನ್ನು ಆರಂಭಿಸಿದೆ.) ಇಲ್ಲಿಯಾದರೆ ಬ್ರಹ್ಮಚರ್ಯವೇ ಮುಂತಾದ ಸಾಧನವನ್ನು ಕೇಳಿದ ಧೃತರಾಷ್ಟ್ರನು ಆ ಬ್ರಹ್ಮವನ್ನು ಅರಿಯಲಿಚ್ಛಿಸುವವನಾಗಿ ಹೇಳುತ್ತಾನೆ.

ಎಲೈ ಸನತ್ಸುಜಾತನೆ, ಯಾವ ಈ ಪರಾರ್ಥವಾದ ಎಂದರೆ ಹೆಚ್ಚಿನ ಅರ್ಥವುಳ್ಳ ಬ್ರಾಹ್ಮೀ– ಬ್ರಹ್ಮಸಂಬಂಧವಾದ ವಾಕ್ಯವನ್ನು ಹೇಳುತ್ತಿದೀಯಷ್ಟೆ! ವಿಶ್ವರೂಪವಾದ– ಎಂದರೆ ನಾನಾರೂಪವಾದ ಹಾಗೂ ಕಾರ್ಯಗಳ ವರ್ಗಕ್ಕೆ ಸೇರಿದ ಪ್ರಪಂಚಗಳಲ್ಲಿ ವಿಸ್ತಾರಗಳಲ್ಲಿ) ಉತ್ತಮವಾದ, ಕೇಳುವದಕ್ಕೂ ದೊರಕದೆಇರುವಂಥ ಕಥೆಯನ್ನು ಹೇಳು. ಎಲೈ ಕುಮಾರನೆ, ನನಗೆ ಇಂಥ ವಾಕ್ಯವನ್ನು (ಹೇಳು). ಏಕೆಂದರೆ ನೀನು ಪರಮಪುರುಷಾರ್ಥಕ್ಕೆ ಸಾಧನವಾದ ಬ್ರಹ್ಮಸಂಬಂಧಿಯಾದ ಮಾತನ್ನು ಹೆಚ್ಚಿನ ದುರ್ಲಭವಾದದ್ದನ್ನು ತಿಳಿಸುತ್ತಿದ್ದೀಯೆ. ಆದ್ದರಿಂದ ಹೇಳಲು ಸಮರ್ಥನಾಗಿರುತ್ತೀಯೆ – ಎಂದಭಿಪ್ರಾಯ.

## ವಿದ್ಯೆಯು ಬ್ರಹ್ಮಚರ್ಯದಿಂದ ದೊರಕುತ್ತದೆ

**ಸನತ್ಸುಜಾತ ಉವಾಚ—**

**ನೈತದ್ ಬ್ರಹ್ಮ ತ್ವರಮಾಣೇನ ಲಭ್ಯಂ**
**ಯನ್ಮಾಂ ಪೃಚ್ಛಸ್ಯಭಿಷಜ್ಗೇಣ ರಾಜನ್[1] ।**
**ಬುದ್ಧೌ ಪ್ರಲೀನೇ[2] ಮನಸಿ ಪ್ರಚಿನ್ತ್ಯಾ**
**ವಿದ್ಯಾ ಹಿ ಸಾ ಬ್ರಹ್ಮಚರ್ಯೇಣ ಲಭ್ಯಾ ॥ ೨ ॥**

೨. ಎಲೈ ರಾಜನೆ, ತಿರಸ್ಕಾರದಿಂದ ನನ್ನನ್ನು ಏನು ಕೇಳುತ್ತೀಯೋ ಆ ಈ ಬ್ರಹ್ಮವು ಚಂಚಲಸ್ವಭಾವದವನಿಂದ ಪಡೆಯಲಾಗಲಾರದು. ಮನಸ್ಸು ಲಯವಾಗಲಾಗಿ ನಿಶ್ಚಯರೂಪವಾದ ಬುದ್ಧಿಯಲ್ಲಿ ಚಿಂತಿಸತಕ್ಕದ್ದು ಅದು. ಆ ವಿದ್ಯೆಯು ಬ್ರಹ್ಮಚರ್ಯದಿಂದ (ಮಾತ್ರವೇ) ದೊರಕತಕ್ಕದ್ದಾಗಿದೆ.

---

1. ' ಪೃಚ್ಛಸ್ ಅತಿಹೃಷ್ಯಸ್ಯತೀವ '
2. ' ವಿಲೀನೇ ' ಎಂದು ಮಹಾಭಾರತದ ಪಾಠಗಳು.

( ಭಾಷ್ಯ )

ಏವಂ ಪೃಷ್ಟಃ ಪ್ರಾಹ ಭಗವಾನ್ । ನೈತದ್ ಬ್ರಹ್ಮ ತ್ವರಮಾಣೇನ ಪುರುಷೇಣ ಲಭ್ಯಂ ಯತ್ ಬ್ರಹ್ಮ ಮಾಂ ಪೃಚ್ಛಸಿ ಅಭಿಷಙ್ಗೇಣ ರಾಜನ್ । ಕಥಂ ತರ್ಹಿ ಲಭ್ಯಮಿತ್ಯಾಹ– ಬುದ್ಧೌ ಅಧ್ಯವಸಾಯಾತ್ಮಿಕಾಯಾಂ ಪ್ರಲೀನೇ ಮನಸಿ ಪ್ರಚಿನ್ತ್ಯಾ ವಿದ್ಯಾ ಹಿ ಸಾ ; ಯದಾ ಪುನಃ ಸಂಕಲ್ಪವಿಕಲ್ಪಾತ್ಮಕಂ ಮನಃ ವಿಷಯೇಭ್ಯಃ ಪರಾವೃತ್ಯ ಸ್ವಾತ್ಮನ್ಯೇವ ನಿಶ್ಚಲಂ ಭವತೀತ್ಯರ್ಥಃ । ಯೇಯಂ ಬುದ್ಧೌ ಪ್ರಲೀನೇ ಮನಸಿ ಪ್ರಚಿನ್ತ್ಯಾ, ಸಾ ವಿದ್ಯಾ ಬ್ರಹ್ಮಚರ್ಯೇಣ ವಕ್ಷ್ಯಮಾಣೇನ ಲಭ್ಯಾ ॥

( ಭಾಷ್ಯಾರ್ಥ )

ಈ ರೀತಿಯಾಗಿ ಕೇಳಲ್ಪಟ್ಟ ಪೂಜ್ಯನಾದ (ಸನತ್ಸುಜಾತನು) ಹೇಳುತ್ತಾನೆ: ಈ ಬ್ರಹ್ಮವು ಚಂಚಲ(ಸ್ವಭಾವದ) ಪುರುಷನಿಂದ ಪಡೆಯಲ್ಪಡತಕ್ಕದ್ದಲ್ಲ. ಎಲೈ ರಾಜನೆ, ಯಾವ ಬ್ರಹ್ಮವನ್ನು ಕುರಿತು ನೀನು ತಿರಸ್ಕಾರದಿಂದ ನನ್ನನ್ನು ಕೇಳು ವೆಯೋ (ಅದು ಎಂದರ್ಥ). ಹಾಗಾದರೆ ಅದು ಸಿಕ್ಕುವದು ಹೇಗೆ ? ಎಂದರೆ ಮನಸ್ಸು ಲಯವಾಗಲಾಗಿ ನಿಶ್ಚಯಾತ್ಮಕವಾದ ಬುದ್ಧಿಯಲ್ಲಿ ಆಲೋಚನೆಮಾಡ ಬೇಕಾದ ವಿದ್ಯೆಯು ಅದಷ್ಟೆ ! ಯಾವಾಗ ಸಂಕಲ್ಪವಿಕಲ್ಪರೂಪವಾದ ಮನಸ್ಸು ವಿಷಯಗಳಿಂದ ಹಿಮ್ಮೆಟ್ಟಿ ತನ್ನ ಆತ್ಮನಲ್ಲಿಯೇ ನೆಲೆನಿಲ್ಲುವದೋ (ಆಗ ಸಿಗು ವದು). ಮನಸ್ಸು ಲಯವಾಗಲಾಗಿ ಬುದ್ಧಿಯಲ್ಲಿ ಚಿಂತಿಸಬೇಕಾದ ಆ ವಿದ್ಯೆಯು ಮುಂದೆ ಹೇಳುವ ಬ್ರಹ್ಮಚರ್ಯದಿಂದ ದೊರಕತಕ್ಕದ್ದು.

ಆದ್ಯಾಂ ವಿದ್ಯಾಂ ವದಸಿ ಹಿ ಸತ್ಯರೂಪಾಂ
ಯಾ ಪ್ರಾಪ್ಯತೇ ಬ್ರಹ್ಮಚರ್ಯೇಣ ಸದ್ಭಿಃ ।
ಯಾಂ ಪ್ರಾಪ್ಯೈನಂ ಮರ್ತ್ಯಭಾವಂ ತ್ಯಜನ್ತಿ
ಯಾ ವೈ ವಿದ್ಯಾ ಗುರುವೃದ್ಧೇಷು ನಿತ್ಯಾ[1] ॥ ೩ ॥

೩. ಸತ್ಪುರುಷರು ಬ್ರಹ್ಮಚರ್ಯದಿಂದ ಯಾವದನ್ನು ಸಂಪಾದಿಸು ವರೋ, ಮರ್ತ್ಯಸ್ವಭಾವದಿಂದ ಬಿಡುಗಡೆಹೊಂದುವರೋ, ಯಾವ ವಿದ್ಯೆಯು ಗುರುಗಳಲ್ಲಿಯೂ ವೃದ್ಧರಲ್ಲಿಯೂ ನಿತ್ಯವಾಗಿರುವದೋ ಆ

---

1. ಅಚ್ಚಿನ ಮಹಾಭಾರತದ ಪಾಠಗಳು ಹೀಗಿವೆ :

ಧೃತರಾಷ್ಟ್ರ ಉವಾಚ— 'ಅತ್ಯಂತವಿದ್ಯಾಮಿತಿ ಯತ್ಸನಾತನೀಂ ಬ್ರವೀಷಿ ತ್ವಂ ಬ್ರಹ್ಮಚರ್ಯೇಣ ಸಿದ್ಧಾಮ್ । ಅನಾರಭ್ಯಾಂ ವಸತೀಹ ಕಾರ್ಯಕಾಲೇ ಕಥಂ ಬ್ರಾಹ್ಮಣ್ಯ ಮಮೃತತ್ವಂ ಲಭೇತ ॥' ಸನತ್ಸುಜಾತ ಉವಾಚ— 'ಅವ್ಯಕ್ತವಿದ್ಯಾಮಭಿಧಾಸ್ಯೇ ಪುರಾಣೀಂ ಬುದ್ಧ್ಯಾ ಚ ತೇಷಾಂ ಬ್ರಹ್ಮಚರ್ಯೇಣ ಸಿದ್ಧಾಮ್ । ಯಾಂ ಪ್ರಾಪ್ಯೈನಂ ಮರ್ತ್ಯಲೋಕಂ ತ್ಯಜನ್ತಿ ಯಾ ವೈ ವಿದ್ಯಾ ಗುರುವೃದ್ಧೇಷು ನಿತ್ಯಾ ॥'

ಸತ್ಯರೂಪವಾದ ಆದ್ಯವಾದ ವಿದ್ಯೆಯನ್ನು ನನಗೆ ತಿಳಿಸು– ಎಂದು ಹೇಳುತ್ತಿದ್ದೀಯಷ್ಟೆ ! (ಅದನ್ನು ಮುಂದೆ ತಿಳಿಸುವೆನು.)

(ಭಾಷ್ಯ)

ಕಿಂ ಚ ಆದ್ಯಾಂ ಸರ್ವಾದಿಭೂತಬ್ರಹ್ಮವಿಷಯಾಂ ವಿದ್ಯಾಂ ವದಸಿ ಹಿ ಸತ್ಯರೂಪಾಂ ಪರಮಾರ್ಥರೂಪಾಂ ಮೇ ಬ್ರೂಹೀತಿ | ಯದ್ವಾ ಆದ್ಯಾಮ್ ಅಕಾರ್ಯಭೂತಾಮ್ ಅಸತ್ಯಪ್ರಪಂಚಾವಿಷಯಾಂ ವಿದ್ಯಾಂ ವದಸಿ | ತಸ್ಮಾದತ್ವರಮಾಣೇನ ಬ್ರಹ್ಮಚರ್ಯಾದಿಸಾಧನೋಪೇತೇನ ಉಪಸಂಹೃತಾಂತಃಕರಣೇನೈವ ಲಭ್ಯಾ ಇತ್ಯರ್ಥಃ | ಯಾ ಪ್ರಾಪ್ಯತೇ ಬ್ರಹ್ಮಚರ್ಯೇಣ ಸದ್ಭಿಃ ಯಾಂ ಪ್ರಾಪ್ಯೈನಂ ಮರ್ತ್ಯಭಾವಂ ತ್ಯಜನ್ತಿ ಯಾ ವೈ ವಿದ್ಯಾ ಗುರುವೃದ್ಧೇಷು ಗುರುಣಾ ವಿದ್ಯಾಪ್ರದಾನಾದಿನಾ ವರ್ಧಿತೇಷು ಶಿಷ್ಯೇಷು ನಿತ್ಯಾ ನಿಯತಾ ||

(ಭಾಷ್ಯಾರ್ಥ)

ಮತ್ತು ಎಲ್ಲಕ್ಕೂ ಆದಿಯಾದ ಬ್ರಹ್ಮಕ್ಕೆ ಸಂಬಂಧಪಟ್ಟ ಸತ್ಯರೂಪವಾದ ಎಂದರೆ ಪರಮಾರ್ಥರೂಪವಾದ ವಿದ್ಯೆಯನ್ನು ನನಗೆ ಹೇಳು– ಎಂದು ಹೇಳುತ್ತಿದ್ದೀಯೆ. ಅಥವಾ ಆದ್ಯವೆಂದರೆ ಕಾರ್ಯವಲ್ಲದ, ಸುಳ್ಳಾದ ಈ ಪ್ರಪಂಚದ ವಿಷಯವಲ್ಲದ ವಿದ್ಯೆಯನ್ನು ಕೇಳಿರುತ್ತೀಯೆ. ಆದ್ದರಿಂದ ಬ್ರಹ್ಮಚರ್ಯಾದಿ ಸಾಧನಗಳಿಂದ ಕೂಡಿದ, ಅಂತಃಕರಣವನ್ನು ಒಳಕ್ಕೆ ಎಳೆದುಕೊಂಡಿರುವ, ಆತುರವಿಲ್ಲದ (ಸ್ವಭಾವ)ವುಳ್ಳವನಿಂದಲೇ (ಅದು) ಪಡೆಯಲ್ಪಡುತ್ತದೆ– ಎಂದು ಅಭಿಪ್ರಾಯ. ಸತ್ಪುರುಷರು ಬ್ರಹ್ಮಚರ್ಯದಿಂದ ಯಾವದನ್ನು ಪಡೆಯುವರೋ ಯಾವದನ್ನು ಪಡೆದು ಮರ್ತ್ಯಭಾವದಿಂದ ಬಿಡುಗಡೆಹೊಂದುವರೋ ಮತ್ತು ಯಾವ ವಿದ್ಯೆಯು ಗುರುವಿನಿಂದ ವಿದ್ಯಾಪ್ರದಾನಮಾಡಿ ಬೆಳಸಲ್ಪಟ್ಟ ಶಿಷ್ಯರಲ್ಲಿ ನಿಯತವಾಗಿ ಇದ್ದುಕೊಂಡಿರುವದೋ (ಅದು ಎಂದರ್ಥ.)

**ಧೃತರಾಷ್ಟ್ರ ಉವಾಚ—**

**ಬ್ರಹ್ಮಚರ್ಯೇಣ ಯಾ ವಿದ್ಯಾ ಶಕ್ಯಾ ವೇದಿತುಮಞ್ಜಸಾ |**
**ತತ್ಕಥಂ ಬ್ರಹ್ಮಚರ್ಯಂ ಸ್ಯಾದ್ ಏತದ್ವಿದ್ವನ್[1] ಬ್ರವೀಹಿ ಮೇ || ೪ ||**

೪. ಧೃತರಾಷ್ಟ್ರನಿಂತೆಂದನು : ಎಲೈ ಜ್ಞಾನಿಯೆ, ಯಾವ ವಿದ್ಯೆಯು ಬ್ರಹ್ಮಚರ್ಯದಿಂದ ಚೆನ್ನಾಗಿ ತಿಳಿಯಲು ಸಾಧ್ಯವಾದುದೋ ಆ ಬ್ರಹ ಚರ್ಯವನ್ನು ಹೇಗೆ ಸಾಧಿಸಬೇಕು ? ಇದನ್ನು ನನಗೆ ಹೇಳು.

1. 'ಬ್ರಹ್ಮನ್' ಎಂದು ಪಾ||

( ಭಾಷ್ಯ )

ಏವಮುಕ್ತೇ ಬ್ರಹ್ಮಚರ್ಯವಿಜ್ಞಾನಾಯಾಹ ಧೃತರಾಷ್ಟ್ರಃ— ಯಾ ವಿದ್ಯಾ ಬ್ರಹ್ಮಚರ್ಯೇಣ ವೇದಿತುಂ ಶಕ್ಯಾ, ತತ್ ಸಾಧನಭೂತಂ ಬ್ರಹ್ಮ ಚರ್ಯಂ ಕಥಂ ಸ್ಯಾತ್ ಏತದ್ ಬ್ರಹ್ಮಚರ್ಯಂ ವಿದ್ವನ್ ಬ್ರವೀಹಿ ಮೇ ||

(ಭಾಷ್ಯಾರ್ಥ)

ಈ ರೀತಿಯಾಗಿ ಹೇಳಲಾಗಿ ಧೃತರಾಷ್ಟ್ರನು ಬ್ರಹ್ಮಚರ್ಯ(ವೆಂದರೇನು ?) ಎಂಬುದನ್ನರಿಯಲು ಹೇಳುತ್ತಾನೆ. ಯಾವ ವಿದ್ಯೆಯು ಬ್ರಹ್ಮಚರ್ಯದಿಂದ ತಿಳಿಯಲು ಶಕ್ಯವೋ, ಸಾಧನರೂಪವಾದ ಆ ಬ್ರಹ್ಮಚರ್ಯವು ಹೇಗಿದ್ದೀತು ? ಎಲೈ ಜ್ಞಾನಿಯೆ, ಈ ಬ್ರಹ್ಮಚರ್ಯದ (ರಹಸ್ಯ)ವನ್ನು ನನಗೆ ಹೇಳು.

ಸನತ್ಸುಜಾತ ಉವಾಚ—

ಆಚಾರ್ಯಯೋನಿಮಿಹ ಯೇ ಪ್ರವಿಶ್ಯ
ಭೂತ್ವಾ ಗರ್ಭಂ[1] ಬ್ರಹ್ಮಚರ್ಯಂ ವದನ್ತಿ[2] |
ಇಹೈವ ತೇ ಶಾಸ್ತ್ರಕಾರಾ ಭವನ್ತಿ
ವಿಹಾಯ[3] ದೇಹಂ ಪರಮಂ ಯಾನ್ತಿ ಸತ್ಯಮ್[4] || ೫ ||

೫. ಯಾರು ಗುರುಗಳನ್ನು ಬಳಿಸಾರಿ ಶಿಷ್ಯರಾಗಿ ಬ್ರಹ್ಮಚರ್ಯ ವನ್ನು ಅನುಷ್ಠಾನಮಾಡುವರೋ ಅವರು ಇಲ್ಲಿಯೇ ಪಂಡಿತರಾಗುವರು. ಶರೀರವನ್ನು ಬಿಟ್ಟಬಳಿಕ ಪರಮವಾದ ಸತ್ಯವನ್ನು ಹೊಂದುವರು.

( ಭಾಷ್ಯ )

ಏವಂ ಪೃಷ್ಟಃ ಪ್ರಾಹ ಭಗವಾನ್– ಆಚಾರ್ಯಯೋನಿಮಿಹ ಯೇ ಪ್ರವಿಶ್ಯ ಆಚಾರ್ಯಸಮೀಪಂ ಗತ್ವಾ ಇತ್ಯರ್ಥಃ | ಭೂತ್ವಾ ಗರ್ಭಂ ಉಪ ಸದನಾದಿನಾ ಶಿಷ್ಯಾ ಭೂತ್ವಾ ಬ್ರಹ್ಮಚರ್ಯಂ ಗುರುಶುಶ್ರೂಷಾದಿಕಂ ಚರನ್ತಿ ಕುರ್ವನ್ತಿ, ಇಹೈವ ಅಸ್ಮಿನ್ ಲೋಕೇ ತೇ ಶಾಸ್ತ್ರಕಾರಾ ಭವನ್ತಿ ; ಶಾಸ್ತ್ರ ಕರ್ತಾರಃ ಪಣ್ಡಿತಾಃ ತತೋ ಬಾಲ್ಯಾದಿಕಂ ನಿರ್ವಿದ್ಯ ಬ್ರಾಹ್ಮಣಾ ಭೂತ್ವಾ ಆರಬ್ಧಕರ್ಮಕ್ಷಯೇ ವಿಹಾಯದೇಹಂ ಪರಮಂ ಯಾನ್ತಿ ಸತ್ಯಂ ಸತ್ಯಾದಿ ಲಕ್ಷಣಂ ಪರಮಾತ್ಮಾನಂ ಪ್ರಾಪ್ನುವನ್ತಿ ||

( ಭಾಷ್ಯಾರ್ಥ )

ಈ ರೀತಿಯಾಗಿ ಕೇಳಲ್ಪಟ್ಟ ಪೂಜ್ಯನು ಹೇಳುತ್ತಾನೆ : ಯಾರು ಆಚಾ ರ್ಯರ ಗರ್ಭವನ್ನು ಹೊಕ್ಕು ಎಂದರೆ ಗುರುಗಳ ಸಮೀಪಕ್ಕೆ ಹೋಗಿ– ಎಂದು

1. 'ಗರ್ಭೇ' 2. 'ಚರನ್ತಿ' 3. 'ಪ್ರಹಾಯ'
4. 'ಯೋಗಮ್' ಎಂದು ಮಹಾಭಾರತದ ಪಾಠಗಳು.

ಅಭಿಪ್ರಾಯ. ಅಲ್ಲಿ ಬಳಿಸಾರುವದೇ ಮುಂತಾದ ರೀತಿಯಿಂದ ಒಳಹೊಕ್ಕು ಶಿಷ್ಯರಾಗಿ ಗುರುಶುಶ್ರೂಷೆಯೇ ಮುಂತಾದವನ್ನು ಆಚರಿಸುವರೋ ಮಾಡುವರೋ, ಅವರು ಇಲ್ಲಿಯೇ– ಎಂದರೆ ಈ ಲೋಕದಲ್ಲಿ ಶಾಸ್ತ್ರಕಾರರಾಗುವರು. ಪಂಡಿತರಾಗಿ ಶಾಸ್ತ್ರಗಳನ್ನು ರಚನೆಮಾಡುವವರಾಗುವರು ; ಅನಂತರ ಬಾಲ್ಯಾದಿಗಳನ್ನು ಚೆನ್ನಾಗಿ ಅರಿತು ಬ್ರಾಹ್ಮಣರಾಗಿ ಪ್ರಾರಬ್ಧಕರ್ಮವು ನಾಶವಾಗಲಾಗಿ ದೇಹವನ್ನು ಬಿಟ್ಟು, ಪರಮವಾದ ಸತ್ಯವನ್ನು ಎಂದರೆ ಸತ್ಯವೇ ಮುಂತಾದ ಲಕ್ಷಣಗಳುಳ್ಳ ಪರಮಾತ್ಮನನ್ನು ಪಡೆಯುವರು.

ಅಸ್ಮಿಂಲ್ಲೋಕೇ ವಿಜಯನ್ತೀಹ[1] ಕಾಮಾನ್
ಬ್ರಾಹ್ಮೀಂ ಸ್ಥಿತಿಮನುತಿತಿಕ್ಷಮಾಣಾಃ ।
ತೆ ಆತ್ಮಾನಂ ನಿರ್ಹರನ್ತೀಹ ದೇಹಾತ್
ಮುಞ್ಜಾದಿಷೀಕಾಮಿವ ಧೀರಭಾವಾತ್[2] ॥ ೬ ॥

೬. ಈ ಲೋಕದಲ್ಲಿ ಕಾಮಗಳನ್ನು ಗೆದ್ದು ಬ್ರಾಹ್ಮೀಸ್ಥಿತಿಯನ್ನು ಯಾವಾಗಲೂ ಅನುಭವಿಸುತ್ತಾ ಅವರು ದೇಹದ (ದೆಸೆಯಿಂದ) ಆತ್ಮನನ್ನು ನೊಪೆಯಹುಲ್ಲಿನಿಂದ ಹತ್ತಿಯನ್ನು ವಿಂಗಡಿಸುವಂತೆ– ಧೈರ್ಯದಿಂದ ಬಿಡಿಸಿಕೊಳ್ಳುವರು.

( ಭಾಷ್ಯ )

ಕಿಂ ಚ ಅಸ್ಮಿನ್ ಲೋಕೇ ವಿಜಯನ್ತೀಹ ಕಾಮಾನ್ ಬ್ರಾಹ್ಮೀಮೇವ ಸ್ಥಿತಿಂ ಬ್ರಹ್ಮಣ್ಯೇವ ಸ್ಥಿತಿಮ್ ಅನುತಿತಿಕ್ಷಮಾಣಾಃ ಅನುದಿನಂ ಕ್ಷಮಮಾಣಾಃ ತೇ ಆತ್ಮಾನಂ ದೇಹೇನ್ದ್ರಿಯಾದಿಭ್ಯೋ ನಿಷ್ಕೃಷ್ಯ ತತ್ಸಾಕ್ಷಿಣಂ ಚಿನ್ಮಾತ್ರಂ ನಿರ್ಹರನ್ತಿ ಪೃಥಕ್ಕುರ್ವನ್ತಿ । ಕಿಮಿವ ? ಮುಞ್ಜಾದಿಷೀಕಾಮಿವ । ಯಥಾ ಮುಞ್ಜಾದಿಷೀಕಾಮನ್ತಸ್ಥಾಂ ನಿರ್ಹರನ್ತಿ, ಏವಂ ಕೋಶಪಞ್ಚಕೇಭ್ಯೋ ನಿಷ್ಕೃಷ್ಯ ಸರ್ವಾತ್ಮಾನಂ ಪ್ರತಿಪದ್ಯನ್ತ ಇತ್ಯರ್ಥಃ । ಕೇನ– ಧೀರಭಾವಾತ್ ಧೈರ್ಯೇಣ । ಶ್ರೂಯತೇ ಚ ಕಠವಲ್ಲೀಷು– 'ಅಙ್ಗುಷ್ಠಮಾತ್ರಃ ಪುರುಷೋಽನ್ತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ । ತಂ ಸ್ವಾಚ್ಛರೀರಾತ್ ಪ್ರವೃಹೇತ್ ಮುಞ್ಜಾದಿವೇಷೀಕಾಂ ಧೈರ್ಯೇಣ । ತಂ ವಿದ್ಯಾತ್ ಶುಕ್ರಮಮೃತಮ್' (ಕಾ. ೬–೧೭) ಇತಿ ॥

(ಭಾಷ್ಯಾರ್ಥ)

ಮತ್ತು ಈ ಲೋಕದಲ್ಲಿ ಕಾಮಗಳನ್ನು ಜಯಿಸುತ್ತಾರೆ. ಬ್ರಹ್ಮದಲ್ಲಿಯೇ ನೆಲೆಗೊಳ್ಳುವ ಬ್ರಾಹ್ಮೀಸ್ಥಿತಿಯನ್ನೇ ಪ್ರತಿದಿನವೂ ಸಹಿಸಿಕೊಳ್ಳುತ್ತಾ ಎಂದರೆ

1. 'ವ್ಯೈ, ಜಯನ್ತೀಹ' 2. 'ಸತ್ತ್ವಸಂಸ್ಥಾಃ' ಎಂದು ಪಾ॥

ಅನುಭವಿಸುತ್ತಾ ಅವರು (ತಮ್ಮ) ಆತ್ಮನನ್ನು ದೇಹೇಂದ್ರಿಯಾದಿಗಳಿಂದ ಮೇಲಕ್ಕೆ ತೆಗೆದು ವಿಂಗಡಿಸಿ ಅವುಗಳಿಗೆ ಸಾಕ್ಷಿಯಾಗಿರುವ ಚಿನ್ಮಾತ್ರನಾದ (ಅವನನ್ನು) ಗೊತ್ತುಪಡಿಸುತ್ತಾರೆ. ವಿಭಾಗಮಾಡಿ ತಿಳಿಯುತ್ತಾರೆ. ಏತರಂತೆ? ಎಂದರೆ ನೊಸೆಯಹುಲ್ಲಿನಿಂದ ದಂಟನ್ನು[1] ವಿಂಗಡಿಸುವಂತೆ– ಹೇಗೆ ಒಳಗಿರುವ ದಂಟನ್ನು ಹುಲ್ಲಿನಿಂದ ಹೊರಕ್ಕೆ ತೆಗೆಯುವರೋ ಹಾಗೆಯೇ (ಅನ್ನಮಯವೇ ಮುಂತಾದ) ಐದು ಕೋಶಗಳಿಂದ ವಿಂಗಡಿಸಿ ಸರ್ವಾತ್ಮನನ್ನು ತಿಳಿಯುತ್ತಾರೆ– ಎಂದರ್ಥ. ಏತರಿಂದ ಎಂದರೆ ಧೀರಭಾವದಿಂದ ಧೈರ್ಯದಿಂದ ಎಂದಭಿಪ್ರಾಯ. ಕಠವಲ್ಲಿಗಳಲ್ಲಿ– 'ಅಂತರಾತ್ಮನಾದ ಪುರುಷನು ಅಂಗುಷ್ಠಮಾತ್ರನಾಗಿ ಜನಗಳ ಹೃದಯದಲ್ಲಿ ಯಾವಾಗಲೂ ಇದ್ದುಕೊಂಡಿರುತ್ತಾನೆ. ನೊಸೆಯ ಹುಲ್ಲಿನಿಂದ ದಂಟನ್ನು (ತೆಗೆಯುವಂತೆ) ಧೈರ್ಯದಿಂದ ಆತನನ್ನು ತನ್ನ ಶರೀರದಿಂದ ಹಿರಿದು ಕೊಳ್ಳಬೇಕು. ಅವನನ್ನು ಶುಕ್ರನೆಂದೂ ಅಮೃತನೆಂದೂ ತಿಳಿಯಬೇಕು'– ಎಂದು ಹೇಳಿರುತ್ತದೆ.

## ಆಚಾರ್ಯನು ತಂದೆಗೆ ಸಮಾನನು

**ಶರೀರಮೇತೌ ಕುರುತಃ ಪಿತಾ ಮಾತಾ ಚ ಭಾರತ ।**
**ಆಚಾರ್ಯತಸ್ತು ಯಜ್ಜನ್ಮ ತತ್ಸತ್ಯಂ ವೈ ತಥಾಽಮೃತಮ್[2] ॥ ೭ ॥**

೭. ಎಲೈ ಭರತವಂಶೋತ್ಪನ್ನನೆ, ತಂದೆಯೂ ತಾಯಿಯೂ ಈ ಶರೀರವನ್ನು ಉಂಟುಮಾಡುವರು. ಆದರೆ ಆಚಾರ್ಯನಿಂದ (ಉಂಟಾಗುವ) ಯಾವ ಜನ್ಮ (ಹುಟ್ಟು)ವುಂಟೋ ಅದು ಸತ್ಯವು, ಹಾಗೂ ಅಮೃತವು.

(ಭಾಷ್ಯ)

'ಆಚಾರ್ಯಯೋನಿಮಿಹ' ಇತ್ಯತ್ರ ಆಚಾರ್ಯಸ್ಯ ಯೋನಿತ್ವಂ ದರ್ಶಿತಮ್ । ತತ್ಕಥಂ ಮಾತಾಪಿತೃವ್ಯತಿರೇಕೇಣ ಆಚಾರ್ಯಸ್ಯ ಯೋನಿತ್ವಮಿತ್ಯಾಶಙ್ಕ್ಯ ಸ ಏವ ಸಾಕ್ಷಾಜ್ಜನಯಿತೇತ್ಯಾಹ– ಶರೀರಮ್ ಇಹ ಅಸ್ಯ ಏತೌ ಮಾತಾಪಿತರೌ ಕುರುತಃ, ನಾತ್ಮಾನಂ ಸ್ವರೂಪೇಣ ಜನಯತಃ । ಯದಿದಂ ದೇಹದ್ವಯಾತ್ಮನಾ ಜನ್ಮ ತದಸತ್ಯಮ್ । ಆಚಾರ್ಯತಃ ತು ಯತ್ ಇದಂ ಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನಾ ಜನ್ಮ, ತತ್ಸತ್ಯಂ ಪರಮಾರ್ಥಭೂತಂ ತಥಾ ಏವ ಅಮೃತಮ್ ವಿನಾಶವರ್ಜಿತಮ್ । ತಸ್ಮಾತ್ ಸ ಏವ ಜನಯಿತಾ

---

1. 'ಇಷೀಕಾ' ಎಂಬ ಶಬ್ದಕ್ಕೆ ದಂಟು ಎಂದು ಅನುವಾದಮಾಡಿದೆ. 'ಇಷೀಕಾತೂಲ'ವೆಂದರೆ ಅದರೊಳಗಿನ ಹತ್ತಿ– ಎಂದರ್ಥ.

2. 'ಆಚಾರ್ಯಶಾಸ್ತಾ ಯಾ ಜಾತಿಃ ಸಾ ಪುಣ್ಯಾ ಸಾಽಜರಾಽಮರಾ' ಎಂದು ಮಹಾಭಾರತದ ಪಾಠ.

ಇತ್ಯರ್ಥಃ । ಶ್ರೂಯತೇ ಚ ಪ್ರಶ್ನೋಪನಿಷದಿ– 'ತ್ವಂ ಹಿ ನಃ ಪಿತಾ ಯೋಽಸ್ಮಾಕಮವಿದ್ಯಾಯಾಃ ಪರಂ ಪಾರಂ ತಾರಯಸಿ' (ಪ್ರ. ೬.೮) ಇತಿ । ತಥಾ ಚಾಹಾಪಸ್ತಮ್ಬಃ– 'ಸ ಹಿ ವಿದ್ಯಾತಸ್ತಂ ಜನಯತಿ ತಚ್ಛ್ರೇಷ್ಠಂ ಜನ್ಮ ಶರೀರಮೇವ ಮಾತಾಪಿತರೌ ಜನಯತಃ' (ಆ.ಧ. ೧–೧–೧೬, ೧೭, ೧೮) ಇತಿ ॥

(ಭಾಷ್ಯ)

'ಇಲ್ಲಿ ಆಚಾರ್ಯಯೋನಿಯನ್ನು ಪ್ರವೇಶಿಸಿ' ಎಂಬಲ್ಲಿ ಆಚಾರ್ಯನು ಜನಕನೆಂದು ತಿಳಿಸಿದ್ದಾಗಿದೆ. ತಾಯಿತಂದೆಗಳನ್ನು ಹೊರತಾಗಿ ಆಚಾರ್ಯನು ಹೇಗೆ ತಂದೆಯಾದಾನು ? ಎಂದು ಆಶಂಕಿಸಿ ಅವನೇ ಸಾಕ್ಷಾತ್ ತಂದೆಯು– ಎಂದು ಹೇಳುತ್ತಾನೆ– ಇಲ್ಲಿ ಅವನಿಗೆ ಶರೀರವನ್ನು ತಾಯಿತಂದೆಗಳು ಉಂಟು ಮಾಡುತ್ತಾರೆ. ಸ್ವರೂಪದಿಂದ ಆತ್ಮನನ್ನು ಅವರು ಉಂಟುಮಾಡುವದಿಲ್ಲ. (ತಾಯಿತಂದೆಗಳೆಂಬ) ಎರಡು ದೇಹಗಳಿಂದ ಹುಟ್ಟುವದೆಂಬುದೇನಿದೆಯೋ ಅದು ಅಸತ್ಯವು. ಆಚಾರ್ಯನಿಂದ (ಉಂಟಾಗುವ) ಯಾವ ಈ ಚಿತ್ಸದಾನಂದಾದ್ವಿತೀಯವಾದ ಬ್ರಹ್ಮರೂಪದಿಂದ ಹುಟ್ಟುವದೆಂಬುದು ಸತ್ಯವು. ಅದೇ ಪರಮಾರ್ಥವಾದದ್ದು ; ಹಾಗೂ ಅಮೃತವು ; ನಾಶರಹಿತವಾದದ್ದು. ಆದ್ದರಿಂದ ಅವನೇ ಉಂಟುಮಾಡುವ (ತಂದೆ)ಯು ಎಂದಭಿಪ್ರಾಯ. ಪ್ರಶ್ನೋಪನಿಷತ್ತಿನಲ್ಲಿ : 'ನೀನೇ ನಮ್ಮ ತಂದೆಯು ; ಯಾವ ನೀನು ನಮ್ಮ ಅವಿದ್ಯೆಯ ಆಚೆಯ ದಡವನ್ನು ಮುಟ್ಟಿಸಿರುತ್ತೀಯೆ' ಎಂದು ಹೇಳಿದೆ. ಆಪಸ್ತಂಬನೂ ಕೂಡ– 'ಅವನೇ ವಿದ್ಯೆಯಿಂದ ಈ (ಶಿಷ್ಯನನ್ನು) ಉಂಟುಮಾಡುತ್ತಾನೆ ; ಅದೇ (ವಿದ್ಯಾಜನ್ಮವೇ) ಶ್ರೇಷ್ಠವಾದದ್ದು ; ತಾಯಿತಂದೆಗಳಾದರೊ, ಶರೀರವನ್ನು ಮಾತ್ರವೇ ಉಂಟುಮಾಡುವರು' ಎಂದು ಹೇಳಿರುತ್ತಾನೆ.

## ಆಚಾರ್ಯನಲ್ಲಿ ಭಕ್ತಿಯಿರಬೇಕು

ಸ[1] ಆವೃಣೋತ್ಯಮೃತಂ ಸಂಪ್ರಯಚ್ಛನ್
ತಸ್ಮೈ ನ ದ್ರುಹ್ಯೇತ್ ಕೃತಮಸ್ಯ ಜಾನನ್ ।
ಗುರುಂ ಶಿಷ್ಯೋ ನಿತ್ಯಮಭಿವಾದಯೀತ
ಸ್ವಾಧ್ಯಾಯಮಿಚ್ಛೇಚ್ಚ ಸದಾಽಪ್ರಮತ್ತಃ ॥ ೮ ॥

೮. ಅವನು ಅಮೃತವನ್ನು ಕೊಟ್ಟು ಪೂರೈಸುವನು. ಅವನು ಮಾಡಿದ್ದನ್ನು ಸ್ಮರಿಸುತ್ತಾ ಎಂದಿಗೂ ಅವನಿಗೆ ದ್ರೋಹಮಾಡದೆ ಇರ

1. ಅಚ್ಚಿನ ಮಹಾಭಾರತದಲ್ಲಿ ಹೀಗಿದೆ : "ಯಃ ಪ್ರಾವೃಣೋತ್ಯವಿತಥೇನ ವರ್ಣಾನ್ ಋತಂ ಕುರ್ವನ್ ಅಮೃತಂ ಸಂಪ್ರಯಚ್ಛನ್ । ತಂ ಮನ್ಯೇತ ಪಿತರಂ ಮಾತರಂ ಚ ತಸ್ಮೈ ನ ದ್ರುಹ್ಯೇತ್ ಕೃತಮಸ್ಯ ಜಾನನ್ ॥... ಶುಚಿರಪ್ರಮತ್ತಃ ॥"

ಬೇಕು. ಗುರುವಿಗೆ ಯಾವಾಗಲೂ ಶಿಷ್ಯನು ನಮಸ್ಕಾರಮಾಡಬೇಕು. ಯಾವಾಗಲೂ ಅಪ್ರಮತ್ತನಾಗಿದ್ದುಕೊಂಡು ವೇದಾಧ್ಯಯನವನ್ನು ಬಯಸುತ್ತಿರಬೇಕು.

( ಭಾಷ್ಯ )

ಯಸ್ಮಾದಾಚಾರ್ಯಾಧೀನಾ ಪರಮಪುರುಷಾರ್ಥಸಿದ್ಧಿಃ ತಸ್ಮಾತ್– ಸ ಆವೃಣೋತಿ ಆಪೂರಯತಿ ಅಮೃತಂ ಪೂರ್ಣಾನನ್ದಂ ಬ್ರಹ್ಮ ಆತ್ಮತ್ವೇನ ಸಂಪ್ರಯಚ್ಛನ್ ತಸ್ಮೈ ಆಚಾರ್ಯಾಯ ನ ದ್ರುಹ್ಯೇತ್ ದ್ರೋಹಂ ನಾಚ. ರೇತ್ । ತಥಾ ಚ ಶ್ರುತಿಃ– 'ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ' (ಶ್ವೇ. ೬–೨೩) ತಥಾ ಚಾಪಸ್ತಮ್ಬಃ– 'ತಸ್ಮೈ ನ ದ್ರುಹ್ಯೇತ್ ಕದಾಚನ । ಸ ಹಿ ವಿದ್ಯಾತಸ್ತಂ ಜನಯತಿ' (ಆ.ಧ.ಸೂ. ೧–೧–೧೫, ೧೬) ಇತಿ । ಕೃತಮಸ್ಯ ಜಾನನ್– ಅಸ್ಯೇತಿ ತೃತೀಯಾರ್ಥೇ ಷಷ್ಠೀ । ಅನೇನ ಆತ್ಮನಃ ಕೃತಮುಪಕಾರಂ ವಿಜಾನನ್ । ಕಿಂ ತರ್ಹಿ ಕರ್ತವ್ಯಮಿತ್ಯಾಹ– ಗುರುಂ ಶಿಷ್ಯೋ ನಿತ್ಯಮಭಿವಾದಯೀತ ದೇವಮಿವಾಚಾರ್ಯಮುಪಾಸೀತ । ತಥಾ ಚ ಶ್ರುತಿಃ– 'ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ' (ಶ್ವೇ. ೬–೨೩) ಇತಿ । ತಥಾ ಸ್ವಾಧ್ಯಾಯಮಿಚ್ಛೇತ್ ಚ ಶ್ರವಣಾದಿಪರೋ ಭವೇತ್ ಸದಾ ಅಪ್ರಮತ್ತಃ ಅಪ್ರಮಾದೀ ಸನ್ ॥

(ಭಾಷ್ಯಾರ್ಥ)

ಪರಮಪುರುಷಾರ್ಥದ ಸಿದ್ಧಿಯು ಆಚಾರ್ಯನಿಗೆ ಅಧೀನವಾಗಿರುವದರಿಂದಲೇ ಆ ಆಚಾರ್ಯನು ಅಮೃತವಾದ, ಪೂರ್ಣಾನಂದಸ್ವರೂಪವಾದ ಬ್ರಹ್ಮವನ್ನು (ತನ್ನ) ಆತ್ಮನಾಗಿಯೇ (ತಿಳಿಸಿ)ಕೊಡುವವನಾಗಿ ಆವರಣಮಾಡುತ್ತಾನೆ –ಎಂದರೆ ಪೂರ್ಣಗೊಳಿಸುತ್ತಾನೆ. ಆ ಆಚಾರ್ಯನಿಗೆ ದ್ರೋಹವನ್ನು ಮಾಡಬಾರದು– ಮೋಸಮಾಡಬಾರದು. ಶ್ರುತಿಯೂಕೂಡ– 'ಯಾವನಿಗೆ ದೇವರಲ್ಲಿ ಹೆಚ್ಚಿನ ಭಕ್ತಿಯಿರುವದೋ, ಹಾಗೆಯೇ ದೇವರಲ್ಲಿದ್ದಂತೆಯೇ ಗುರುವಿನಲ್ಲಿಯೂ ಇದ್ದುಕೊಂಡಿರುವದೋ ಅಂಥ ಮಹಾತ್ಮನಿಗೆ (ಗುರುವಿನಿಂದ) ಬೋಧಿಸಲ್ಪಟ್ಟ ವಿಷಯಗಳು ತಿಳಿಯಬರುವವು' ಎಂದು ಹೇಳುತ್ತಿದೆ. ಆಪಸ್ತಂಬರೂಕೂಡ– 'ಅವನಿಗೆ ಯಾವಾಗಲೂ ದ್ರೋಹಮಾಡಬಾರದು ; ಅವನಲ್ಲವೆ, ವಿದ್ಯೆಯಿಂದ ಇವನನ್ನು ಉಂಟುಮಾಡುವವನು ?' ಎಂದು ಹೇಳಿದ್ದಾರೆ. ಕೃತಮಸ್ಯ ಜಾನನ್ –ಎಂಬಲ್ಲಿ ಅಸ್ಯ ಎಂಬ ಷಷ್ಠೀವಿಭಕ್ತಿಯು (ಅನೇನ– ಎಂಬ) ತೃತೀಯಾವಿಭಕ್ತ್ಯರ್ಥದಲ್ಲಿ ಬಂದಿದೆ. ಇವನಿಂದ ತನಗಾಗಿರುವ ಉಪಕಾರವನ್ನು ಅರಿತವನಾಗಿ ಎಂದಭಿಪ್ರಾಯ. ಹಾಗಾದರೆ ಏನುಮಾಡಬೇಕು ? (ಎಂದರೆ) ಗುರುವನ್ನು ಶಿಷ್ಯನು ಯಾವಾಗಲೂ ನಮಸ್ಕರಿಸಬೇಕು. ದೇವರಂತೆ ಗುರುವನ್ನು ಉಪಾಸನೆ

ಮಾಡಬೇಕು. ಶ್ರುತಿಯೂಕೂಡ[1] 'ಯಾವನಿಗೆ ದೇವನಲ್ಲಿ ಪರಾಭಕ್ತಿಯಿರುವಂತೆ ಗುರುವಿನಲ್ಲಿಯೂ ಇದ್ದುಕೊಂಡಿರುವದೋ' ಎಂದು ಹೇಳಿರುತ್ತದೆ. ಮತ್ತು ವೇದಾಧ್ಯಯನವನ್ನು ಬಯಸುವನಾಗಬೇಕು. ಯಾವಾಗಲೂ ಅಪ್ರಮತ್ತನಾಗಿ ಎಂದರೆ ಎಚ್ಚರದಪ್ಪದೆ ಶ್ರವಣಾದಿಗಳನ್ನು ಮಾಡುತ್ತಿರಬೇಕು (ಎಂದಭಿಪ್ರಾಯ.)

## ಬ್ರಹ್ಮಚರ್ಯದ ನಾಲ್ಕು ಪಾದಗಳು

**ಶಿಷ್ಯವೃತ್ತಿಕ್ರಮೇಣೈವ ವಿದ್ಯಾಮಾಪ್ನೋತಿ ಯಃ ಶುಚಿಃ ।**
**ಬ್ರಹ್ಮಚರ್ಯವ್ರತಸ್ಯಾಸ್ಯ ಪ್ರಥಮಃ ಪಾದ ಉಚ್ಯತೇ[2] ॥ ೯ ॥**

೯. ಯಾವನು (ಶುಚಿಯಾಗಿದ್ದುಕೊಂಡು ಶಿಷ್ಯವೃತ್ತಿಯ ಕ್ರಮದಿಂದಲೇ ವಿದ್ಯೆಯನ್ನು ಪಡೆಯುವನೋ ಅದು ಈ ಬ್ರಹ್ಮಚರ್ಯವ್ರತದ ಮೊದಲನೆಯ ಪಾದವೆನಿಸುವದು.

(ಭಾಷ್ಯ)

ಇದಾನೀಂ ಚತುಷ್ಪಾದ್ ಬ್ರಹ್ಮಚರ್ಯಮಾಹ ಶ್ಲೋಕಚತುಷ್ಟಯೇನ- ಶಿಷ್ಯವೃತ್ತಿಕ್ರಮೇಣೈವ 'ಆಚಾರ್ಯಯೋನಿಮಿಹ ಇತ್ಯಾದಿನೋಕ್ತಕ್ರಮೇಣ ಶುಚಿಃ ವಿದ್ಯಾಮಾಪ್ನೋತಿ ಯತ್ ತತ್ ಬ್ರಹ್ಮಚರ್ಯಂ ತಸ್ಯಾಸ್ಯ ಪ್ರಥಮಃ ಪಾದ ಉಚ್ಯತೇ ॥

(ಭಾಷ್ಯಾರ್ಥ)

ಈಗ ನಾಲ್ಕು ಶ್ಲೋಕಗಳಿಂದ ನಾಲ್ಕು ಪಾದಗಳ ಬ್ರಹ್ಮಚರ್ಯವನ್ನು ಹೇಳುತ್ತಾರೆ. 'ಆಚಾರ್ಯರ ಗರ್ಭವನ್ನು ಹೊಕ್ಕು' ಮುಂತಾದ (ಶ್ಲೋಕದಲ್ಲಿ) ಹೇಳಿದ ರೀತಿಯಿಂದ ಶಿಷ್ಯವೃತ್ತಿಯನ್ನು ಮಾಡುವವನಾಗಿ ಶುಚಿಯಾಗಿದ್ದುಕೊಂಡು ವಿದ್ಯೆಯನ್ನು ಸಂಪಾದಿಸುತ್ತಾನೆ- ಎಂಬುದೇನಿದೆಯೋ ಅದು ಬ್ರಹ್ಮಚರ್ಯದ ಮೊದಲನೆಯ ಪಾದವೆಂದು ಕರೆಯಲ್ಪಡುತ್ತದೆ.

**ಯಥಾ ನಿತ್ಯಂ ಗುರೌ ವೃತ್ತಿಃ[3] ಗುರುಪತ್ನ್ಯಾಂ ತಥಾಽಽಚರೇತ್ ।**
**ತತ್ಪುತ್ರೇ ಚ ತಥಾ ಕುರ್ವನ್ ದ್ವಿತೀಯಃ ಪಾದ ಉಚ್ಯತೇ[4] ॥ ೧೦ ॥**

---

1. ಈ ಶ್ರುತಿಯು ಇದೇ ಶ್ಲೋಕಭಾಷ್ಯದಲ್ಲಿ ಹಿಂದೆ ಬಂದಿದೆಯಾದರೂ ಇಲ್ಲಿ ಭಕ್ತಿಯಿಂದ ಶಿಷ್ಯನು ಗುರುವಿಗೆ ನಮಸ್ಕರಿಸಬೇಕೆಂಬುವನ್ನು ತಿಳಿಸಲು ಮತ್ತೆ ಉದಾಹರಿಸಿದೆ.

2. ಈ ಶ್ಲೋಕಕ್ಕೆ ಮುಂಚೆ 'ಮಾನಂ ನ ಕುರ್ಯಾತ್ ನಾದಧೀತ ರೋಷಮೇಷ ಪ್ರಥಮೋ ಬ್ರಹ್ಮಚರ್ಯಸ್ಯ ಪಾದಃ ।' ಎಂದು ಹೆಚ್ಚಾಗಿದೆ.

3. 'ಸಮಾ ಗುರೌ ಯಥಾ ವೃತ್ತಿಃ' ಎಂದು ಪಾ॥

4. ಈ ಶ್ಲೋಕಕ್ಕೆ ಮುಂಚೆ—

ಆಚಾರ್ಯಸ್ಯ ಪ್ರಿಯಂ ಕುರ್ಯಾತ್ ಪ್ರಾಣೈರಪಿ ಧನೈರಪಿ ।
ಕರ್ಮಣಾ ಮನಸಾ ವಾಚಾ ದ್ವಿತೀಯಃ ಪಾದ ಉಚ್ಯತೇ ॥

ಎಂಬ ಶ್ಲೋಕವು ಅಚ್ಚಿನ ಮಹಾಭಾರತದಲ್ಲಿದೆ.

೧೦. ಗುರುವಿನಲ್ಲಿ ಹೇಗೆ ಯಾವಾಗಲೂ ನಡತೆಯಿರುವದೋ ಹಾಗೆಯೇ ಗುರುವಿನ ಪತ್ನಿಯಲ್ಲಿಯೂ ನಡೆದುಕೊಳ್ಳಬೇಕು. ಮತ್ತು ಆತನ ಮಗನಲ್ಲಿಯೂ ಹಾಗೆಯೇ ನಡೆದುಕೊಳ್ಳುವದು (ಬ್ರಹ್ಮಚರ್ಯದ) ಎರಡನೆಯ ಪಾದವು.

( ಭಾಷ್ಯ )

ಸ್ಪಷ್ಟಾರ್ಥಃ ಶ್ಲೋಕಃ । ತಥಾ ಚೋಕ್ತಮ್– 'ಆಚಾರ್ಯವದಾಚಾರ್ಯದಾರೇಷು ವೃತ್ತಿಃ' (ಆ.ಧ.ಸೂ. ೧–೭–೨೭) 'ಆಚಾರ್ಯವದಾಚಾರ್ಯಪುತ್ರೇ ವೃತ್ತಿಶ್ಚ' (ಆ.ಧ.ಸೂ. ೧–೭–೩೦) ಇತಿ ॥

( ಭಾಷ್ಯಾರ್ಥ )

ಈ ಶ್ಲೋಕದ ಅರ್ಥವು ಸ್ಪಷ್ಟವಾಗಿದೆ. (ಆಪಸ್ತಂಬರೂಕೂಡ) 'ಗುರುವಿನಂತೆಯೇ ಗುರುಪತ್ನಿಯಲ್ಲಿಯೂ ನಡೆದುಕೊಳ್ಳಬೇಕು', 'ಗುರುವಿನಂತೆಯೇ ಗುರುಪುತ್ರನಲ್ಲಿಯೂ ನಡೆದುಕೊಳ್ಳಬೇಕು' ಎಂದು ಹೇಳಿದ್ದಾರೆ.

ಆಚಾರ್ಯೇಣಾತ್ಮಕೃತಂ ವಿಜಾನಾನ್
ಜ್ಞಾತ್ವಾ ಚಾರ್ಥಂ ಭಾವಿತೋಽಸ್ಮೀತ್ಯನೇನ ।
ಯನ್ಮನ್ಯತೇ ತಂ ಪ್ರತಿ ಹೃಷ್ಟಬುದ್ಧಿಃ
ಸ ವೈ ತೃತೀಯೋ ಬ್ರಹ್ಮಚರ್ಯಸ್ಯ ಪಾದಃ ॥ ೧೧ ॥

೧೧. ಗುರುವಿನಿಂದ ತನಗಾದ (ಪ್ರಯೋಜನವನ್ನು) ಬಲ್ಲವನಾಗಿ ವೇದಾರ್ಥವನ್ನೂ ವಿಚಾರಮಾಡಿದ ಅನಂತರ 'ಆಚಾರ್ಯನಿಂದ ನಾನು ಉದ್ಧಾರವಾದೆನು' ಎಂದು ಸಂತೋಷದಿಂದ ಕೂಡಿದ ಬುದ್ಧಿಯುಳ್ಳವನಾಗಿ ತನ್ನನ್ನು ಕೃತಾರ್ಥನೆಂದು ಭಾವಿಸಿಕೊಳ್ಳುವನೋ ಅದೇ ಬ್ರಹ್ಮಚರ್ಯದ ಮೂರನೆಯ ಪಾದವು.

( ಭಾಷ್ಯ )

ಆಚಾರ್ಯೇಣಾತ್ಮಕೃತಂ ಆತ್ಮನಃ ಕೃತಮುಪಕಾರಂ ವಿಜಾನನ್ ಜ್ಞಾತ್ವಾ ಅರ್ಥಂ ವೇದಾರ್ಥಂ ಪರಮಪುರುಷಾರ್ಥಂ ಜ್ಞಾತ್ವಾ ಚ ಅವಗಮ್ಯ ಭಾವಿತೋಽಸ್ಮೀತ್ಯನೇನ ಭಾವಿತಃ ಅಸ್ಮಿ ಇತಿ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನಾ ಯಥಾವದುತ್ಪಾದಿತೋಽಸ್ಮೀತಿ ಚಿನ್ತಯನ್ ತಮ್ ಆಚಾರ್ಯಂ ಪ್ರತಿ ಹೃಷ್ಟಬುದ್ಧಿಃ ಸನ್ ಯತ್ ಆತ್ಮನಃ ಕೃತಾರ್ಥತ್ವಂ ಮನ್ಯತೇ ಸ ವೈ ತೃತೀಯೋ ಬ್ರಹ್ಮಚರ್ಯಸ್ಯ ಪಾದಃ ॥

(ಭಾಷ್ಯಾರ್ಥ)

ಆಚಾರ್ಯನಿಂದ ತನಗಾದ ಉಪಕಾರವನ್ನು ಅರಿತವನಾಗಿ ಅರ್ಥವನ್ನು ಎಂದರೆ ವೇದಗಳ ಅರ್ಥವನ್ನೂ ಪರಮಪುರುಷಾರ್ಥವನ್ನೂ ತಿಳಿದು– ಎಂದರೆ ಬಲ್ಲವನಾಗಿ ಇವನಿಂದ ಭಾವಿಸಲ್ಪಟ್ಟಿದ್ದೇನೆ– ಹೇಗೆಂದರೆ ಸ್ವಾಭಾವಿಕವಾದ, ಚಿದ್ರೂಪವೂ ಯಾವಾಗಲೂ ಆನಂದವೂ ಅದ್ವಿತೀಯವೂ ಆದ ಬ್ರಹ್ಮರೂಪದಿಂದ ಇದ್ದದ್ದು ಇದ್ದಂತೆಯೇ ಉಂಟುಮಾಡಲ್ಪಟ್ಟಿರುವೆನು– ಎಂದು ಭಾವಿಸಿದವನಾಗಿ ಆ ಆಚಾರ್ಯನನ್ನು ಸ್ಮರಿಸುತ್ತಾ ಅವನನ್ನು ಕಂಡರೆ ಸಂತೋಷವುಳ್ಳವನಾಗಿ ಯಾವ ತನ್ನ ಕೃತಾರ್ಥತೆಯನ್ನು ಅರಿತುಕೊಳ್ಳುವನೋ ಅದು ಬ್ರಹ್ಮಚರ್ಯದ ಮೂರನೆಯ ಪಾದವು.

**ಆಚಾರ್ಯಾಯ ಪ್ರಿಯಂ ಕುರ್ಯಾತ್ ಪ್ರಾಣೈರಪಿ ಧನೈರಪಿ ।**
**ಕರ್ಮಣಾ ಮನಸಾ ವಾಚಾ ಚತುರ್ಥಃ ಪಾದ ಉಚ್ಯತೇ[1] ॥ ೧೨ ॥**

೧೨. ತನ್ನ ಪ್ರಾಣಕ್ಕಿಂತಲೂ, ಹಣಕ್ಕಿಂತಲೂ ಹೆಚ್ಚಾಗಿಯೇ ಕ್ರಿಯೆಯಿಂದಲೂ ಮನಸ್ಸಿನಿಂದಲೂ ಮಾತಿನಿಂದಲೂ ಗುರುವಿಗೆ ಪ್ರಿಯವಾದದ್ದನ್ನು ಮಾಡಬೇಕು. ಇದೇ (ಬ್ರಹ್ಮಚರ್ಯದ) ನಾಲ್ಕನೆಯ ಪಾದವೆನಿಸುವದು.

(ಭಾಷ್ಯ)

ಸ್ಪಷ್ಟೋಽರ್ಥಃ ॥

(ಭಾಷ್ಯಾರ್ಥ)

ಈ ಶ್ಲೋಕದ ಅಭಿಪ್ರಾಯವು ಸ್ಪಷ್ಟವಾಗಿದೆ.

## ವಿದ್ಯೆಯ ನಾಲ್ಕು ಪಾದಗಳು

**ಕಾಲೇನ ಪಾದಂ ಲಭತೇ ತಥಾಽಯಂ[2]**
**ತಥೈವ[3] ಪಾದಂ ಗುರುಯೋಗತಶ್ಚ ।**
**ಉತ್ಸಾಹಯೋಗೇನ ಚ ಪಾದಮೃಚ್ಛೇತ್**
**ಶಾಸ್ತ್ರೇಣ ಪಾದಂ ಚ ತತೋಽಭಿಯಾತಿ ॥ ೧೩ ॥**

೧೩. (ವಿದ್ಯೆಯ) ನಾಲ್ಕನೆಯ ಒಂದು ಭಾಗವನ್ನು ಕಾಲಕ್ರಮದಲ್ಲಿಯೂ, ಗುರುಗಳ ಸಂಬಂಧದಿಂದ ಕಾಲುಭಾಗವನ್ನೂ ತನ್ನ ಉತ್ಸಾಹ

1. ಮೂಲ ಮಹಾಭಾರತದಲ್ಲಿ ಈ ಶ್ಲೋಕವು ಹೀಗಿದೆ : 'ನಾಚಾರ್ಯಸ್ಯಾನಪಾಕೃತ್ಯ ಪ್ರವಾಸಂ ಪ್ರಾಜ್ಞಃ ಕುರ್ವೀತ ನೈತದಹಂ ಕರೋಮಿ । ಇತೀವ ಮನ್ಯೇತ ನ ಭಾಷಯೇತ ಸ ವೈ ಚತುರ್ಥೋ ಬ್ರಹ್ಮಚರ್ಯಸ್ಯ ಪಾದಃ ॥'

2. 'ತಥಾರ್ಥಂ'  3. 'ತತಶ್ಚ' ಎಂದು ಮಹಾಭಾರತದ ಪಾಠ.

(ಪೂರ್ವಕವಾದ) ಪ್ರಯತ್ನದಿಂದ ಕಾಲುಭಾಗವನ್ನೂ ಶಾಸ್ತ್ರ(ವನ್ನು ಜೊತೆಗಾರರೊಡನೆ ಅಭ್ಯಾಸಮಾಡುವದರಿಂದ) ಕಾಲುಭಾಗವನ್ನೂ ಇವನು ಪಡೆದುಕೊಳ್ಳುತ್ತಾನೆ.

(ಭಾಷ್ಯ)

ಇದಾನೀಂ ಚತುಷ್ಪದೀಂ ವಿದ್ಯಾಂ ದರ್ಶಯತಿ । ಅತ್ರ ಕ್ರಮೋ ನ ವಿವಕ್ಷಿತಃ । ಪ್ರಥಮಂ ಗುರುಯೋಗತಃ ತತಃ ಉತ್ಸಾಹಯೋಗೇನ ಬುದ್ಧಿ ವಿಶೇಷಪ್ರಾದುರ್ಭಾವೇನ ತತಃ ಕಾಲೇನ ಬುದ್ಧಿಪರಿಪಾಕೇಣ ತತಃ ಶಾಸ್ತ್ರೇಣ ಸಹಾಧ್ಯಾಯಿಭಿಃ ತತ್ತ್ವವಿಚಾರೇಣ । ತಥಾ ಚೋಕ್ತಮ್– 'ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ । ಕಾಲೇನ ಪಾದಮಾದತ್ತೇ ಪಾದಂ ಸಬ್ರಹ್ಮಚಾರಿಭಿಃ' (?) ಇತಿ ॥

(ಭಾಷ್ಯಾರ್ಥ)

ಈಗ ನಾಲ್ಕು ಪಾದಗಳ ವಿದ್ಯೆಯನ್ನು ತಿಳಿಸುತ್ತಾನೆ. ಇಲ್ಲಿ ಕ್ರಮವೇನೂ ವಿವಕ್ಷಿತವಲ್ಲ.[1] ಮೊದಲು ಗುರುಗಳ ಮೂಲಕ (ಬರುವ ತಿಳಿವಳಿಕೆಯು) ಅನಂತರ ಉತ್ಸಾಹದಿಂದ ಎಂದರೆ ಬುದ್ಧಿಯು ಮೊಳೆತುಕೊಂಡು ಬೆಳೆಯುವದ ರಿಂದ, ಅನಂತರ ಆ ತಿಳಿವಳಿಕೆಯು ಪಕ್ವವಾಗುವದರಿಂದ, ಅನಂತರ ತನ್ನ ಜೊತೆ ಗಾರನೊಡನೆ ತತ್ತ್ವವಿಚಾರಮಾಡುವ (ಮೂಲಕ ಉಂಟಾಗುವ) ಶಾಸ್ತ್ರ (ಪಾಂಡಿತ್ಯ)ದಿಂದ ; (ಹೀಗೆ ವಿದ್ಯೆಗೆ ನಾಲ್ಕು ಪಾದಗಳು) "ಆಚಾರ್ಯನಿಂದ ಕಾಲುಭಾಗವನ್ನೂ ಸ್ವಬುದ್ಧಿಯಿಂದ ಕಾಲುಭಾಗವನ್ನೂ ಕಾಲಕ್ರಮದಲ್ಲಿ (ಪಕ್ವತೆ ಯಿಂದ) ಕಾಲುಭಾಗವನ್ನೂ ಸಹಾಧ್ಯಾಯಿಗಳೊಡನೆ (ಅಭ್ಯಾಸದಿಂದ) ಕಾಲು ಭಾಗವನ್ನೂ ಶಿಷ್ಯನು ಪಡೆದುಕೊಳ್ಳುತ್ತಾನೆ" ಎಂದು ಹೇಳಿಯೂ ಇದೆ.[2]

## ಗುರುಸೇವೆಯಿಂದ ವಿದ್ಯಾಫಲಪ್ರಾಪ್ತಿ

ಜ್ಞಾನಾದಯೋ[3] ದ್ವಾದಶ ಯಸ್ಯ ರೂಪ-
ಮನ್ಯಾನಿ ಚಾಙ್ಗಾನಿ ತಥಾ ಬಲಂ ಚ ।
ಆಚಾರ್ಯಯೋಗೇ ಫಲತೀತಿ ಚಾಹುಃ
ಬ್ರಹ್ಮಾರ್ಥಯೋಗೇನ ಚ ಬ್ರಹ್ಮಚರ್ಯಮ್ ॥ ೧೪ ॥

1. ಶ್ಲೋಕಕ್ಕೆ ಅನುಗುಣವಾಗಿಯೇ ಒಂದಾಗುತ್ತಲೊಂದು ಪ್ರಾಪ್ತವಾಗುವ ದೆಂಬುದೇನೂ ಇಲ್ಲಿ ಮುಖ್ಯವಲ್ಲ ಎಂದಭಿಪ್ರಾಯ.

2. ಇದು ಯಾವ ಸ್ಮೃತಿವಚನವೆಂಬುದು ತಿಳಿಯಲಿಲ್ಲ.

3. 'ಧರ್ಮಾದಯಃ' ಎಂದು ಪಾ॥

೧೪. ಜ್ಞಾನವೇ ಮುಂತಾದ ಹನ್ನೆರಡು (ಗುಣ)ಗಳು ಮತ್ತು (ತ್ಯಾಗವೇ) ಮೊದಲಾದ ಅಂಗಗಳು, ರೂಪಬಲಾದಿಗಳು- ಇವೆಲ್ಲವೂ ಆಚಾರ್ಯನ (ಪ್ರಸಾದ)ದಿಂದಲೇ ಫಲಕಾರಿಗಳಾಗುವವೆಂದು ಹೇಳುವರು; ಮತ್ತು ಬ್ರಹ್ಮಚರ್ಯವೂಕೂಡ ಬ್ರಹ್ಮಾರ್ಥಯೋಗದಿಂದಲೇ ಸಿದ್ಧಿಸುವದು.

( ಭಾಷ್ಯ )

ಜ್ಞಾನಾದೀನಾಮಾಚಾರ್ಯಸಂನಿಧಾನೇ ಫಲಸಿದ್ಧಿರಿತ್ಯಾಹ- ಜ್ಞಾನಾದಯಃ 'ಜ್ಞಾನಂ ಚ' ಇತ್ಯಾದಿನಾ ಪೂರ್ವೋಕ್ತಾ ದ್ವಾದಶ ಗುಣಾ ಯಸ್ಯ ಪುರುಷಸ್ಯ ಸಃ ಜ್ಞಾನಾದಯಃ ರೂಪಂ ಅನ್ಯಾನಿ ಚಾಙ್ಗಾನಿ 'ಶ್ರೇಯಾಂಸ್ತು ಷಡ್ವಿಧಸ್ತ್ಯಾಗಃ', 'ಸತ್ಯಂ ಧ್ಯಾನಂ' ಇತಿ ಶ್ಲೋಕದ್ವಯೋಕ್ತಾನಿ । ತಥಾ ಬಲಂ ಚ ತದ್ಧರ್ಮಪರಿಪಾಲನಸಾಮರ್ಥ್ಯಂ ಚ ಸರ್ವಮ್ ಆಚಾರ್ಯಯೋಗೇ ಏವ ಫಲತಿ, ನಾಚಾರ್ಯಯೋಗಂ ವಿನಾ ಫಲತಿ । ಶ್ರೂಯತೇ ಚ- 'ಆಚಾರ್ಯಾದ್ಧ್ಯೈವ ವಿದ್ಯಾ ವಿದಿತಾ' (ಛಾಂ. ೪-೯-೩) ಇತಿ, 'ಆಚಾರ್ಯವಾನ್ ಪುರುಷೋ ವೇದ' (ಛಾಂ. ೬-೧೪-೨) ಇತಿ ಚ । ಬ್ರಹ್ಮಾರ್ಥಯೋಗೇನ ಚ ಬ್ರಹ್ಮಚರ್ಯಂ ಯದಿದಂ ಗುರುಸಂನಿಧೌ ಶುಶ್ರೂಷಾದ್ಯಾಚರಣಮ್, ತದ್ಬ್ರಹ್ಮಚರ್ಯಂ ಬ್ರಹ್ಮಾರ್ಥಯೋಗೇನ ಫಲತಿ ಸ್ವಾತ್ಮನಃ ಚಿತ್ಸದಾನನ್ದಾದ್ವಿತೀಯಬ್ರಹ್ಮೈಕ್ಯಸಂಪಾದನದ್ವಾರೇಣ ಫಲತೀತ್ಯರ್ಥಃ ॥

( ಭಾಷ್ಯಾರ್ಥ )

ಜ್ಞಾನವೇ ಮುಂತಾದವುಗಳು ಗುರುಗಳ ಸಮೀಪದಲ್ಲಿ ಫಲಕಾರಿಯಾಗುವವು- ಎಂಬುದನ್ನು ಹೇಳುತ್ತಾನೆ. ಜ್ಞಾನವೇ ಮುಂತಾದವು - ಎಂದರೆ 'ಜ್ಞಾನಂ ಚ' ಮುಂತಾದ ಶ್ಲೋಕದಿಂದ ಹಿಂದೆ ಹೇಳಿದ ಹನ್ನೆರಡು ಗುಣಗಳು ಯಾವ ಮನುಷ್ಯನಿಗೆ ಇದ್ದುಕೊಂಡಿರುವವೋ ಅವು ಮತ್ತು ರೂಪವು ; ಉಳಿದ ಅಂಗಗಳು (ಎಂದರೆ) 'ಆರು ವಿಧವಾದ ತ್ಯಾಗವು ಶ್ರೇಯಸ್ಕರವು', 'ಸತ್ಯವು ಮತ್ತು ಧ್ಯಾನವು'- ಇವೇ ಮುಂತಾದ ಎರಡು ಶ್ಲೋಕಗಳಿಂದ ಹೇಳಲ್ಪಟ್ಟವು ; ಹಾಗೂ ಆ ಧರ್ಮವನ್ನು ಕಾಪಾಡುವ ಸಾಮರ್ಥ್ಯರೂಪನಾದ ಬಲವು ; ಇವೆಲ್ಲವೂ ಆಚಾರ್ಯನ ಸಂಬಂಧದಿಂದಲೇ ಫಲಿಸುವದು ; ಆಚಾರ್ಯನನ್ನು ಬಳಿಸಾರದೆ ಇದ್ದರೆ ಫಲಿಸುವದಿಲ್ಲ. 'ಆಚಾರ್ಯನಿಂದಲೇ ತಿಳಿಯಲ್ಪಡುವ ವಿದ್ಯೆಯು (ಮೋಕ್ಷಪ್ರದವು)' ಎಂದೂ 'ಆಚಾರ್ಯನನ್ನುಳ್ಳ ಪುರುಷನೇ (ಬ್ರಹ್ಮವನ್ನು) ತಿಳಿದವನಾಗುವನು' ಎಂದೂ (ಶ್ರುತಿಯಲ್ಲಿ) ಕೇಳಬರುತ್ತಿದೆ. ಗುರುಸಂನಿಧಿಯಲ್ಲಿ ಶುಶ್ರೂಷೆಯೇ ಮುಂತಾದದ್ದನ್ನು ಮಾಡುವ ಬ್ರಹ್ಮಚರ್ಯವೆಂಬುದಿದೆಯೋ

ಅದು ಬ್ರಹ್ಮಾರ್ಥಯೋಗದಿಂದ (ಎಂದರೆ) ಬ್ರಹ್ಮವಸ್ತುವಿನ ಪ್ರಾಪ್ತಿಯಿಂದ ಫಲಿಸುತ್ತದೆ. ತನ್ನ ಸ್ವರೂಪವೇ ಆದ ಚಿತ್ಸದಾನಂದಾದ್ವಿತೀಯವಾದ ಬ್ರಹ್ಮದೊಡನೆ ಒಂದಾಗುವ ಮೂಲಕ ಸಿದ್ಧಿಸುತ್ತದೆ- ಎಂದಭಿಪ್ರಾಯ.

## ಬ್ರಹ್ಮಚರ್ಯದ ಸ್ತುತಿ

**ಏತೇನ[1] ಬ್ರಹ್ಮಚರ್ಯೇಣ ದೇವಾ ದೇವತ್ವಮಾಪ್ನುವನ್ ।**
**ಋಷಯಶ್ಚ ಮಹಾಭಾಗಾ ಬ್ರಹ್ಮಚರ್ಯೇಣ ಚಾಭವನ್[2] ॥ ೧೫ ॥**
**ಏತೇನೈವ ಸಗನ್ಧರ್ವಾ ರೂಪಮಪ್ಸರಸೋಽಜಯನ್[3] ।**
**ಏತೇನ ಬ್ರಹ್ಮಚರ್ಯೇಣ ಸೂರ್ಯ[4] ಅಹ್ನಾಯ ಜಾಯತೇ ॥ ೧೬ ॥**

೧೫-೧೬. ದೇವತೆಗಳು ಈ ಬ್ರಹ್ಮಚರ್ಯ(ವೆಂಬ ಸಾಧನದಿಂದಲೇ) ದೇವತ್ವವನ್ನು ಹೊಂದಿದರು. ಋಷಿಗಳೂ ಈ ಬ್ರಹ್ಮಚರ್ಯದಿಂದ ಋಷಿತ್ವವನ್ನು ಹೊಂದಿ ಪೂಜ್ಯರಾದರು. ಇದರಿಂದ ಅಪ್ಸರಸ್ತ್ರೀಯರು ಗಂಧರ್ವರೊಡನೆ (ದಿವ್ಯಸುಂದರವಾದ) ರೂಪವನ್ನು ಗೆದ್ದುಕೊಂಡರು. ಇದೇ ಬ್ರಹ್ಮಚರ್ಯದಿಂದಲೇ ಸೂರ್ಯನು ಕಾಂತಿರೂಪನಾಗಿರುವನು.

### (ಭಾಷ್ಯ)

ಬ್ರಹ್ಮಚರ್ಯಸ್ತುತಿಂ ಕರೋತಿ ದ್ವಾಭ್ಯಾಮ್। ದೇವಾ ದೇವತ್ವಮೇತೇನ ಪ್ರಾಪ್ನುವನ್ । ಋಷಯೋಽಪೀಹ ಋಷಿತ್ವಮೇತೇನ ಪ್ರಾಪ್ತಾಃ । ಸಗನ್ಧರ್ವಾಃ ಗನ್ಧರ್ವೈಃ ಸಹ ವರ್ತಮಾನಾಃ ರೂಪಮಪ್ಸರಸೋಽಜಯನ್, ರೂಪಾಣಿ ರಮಣೀಯಾನಿ ಏತೇನ ಬ್ರಹ್ಮಚರ್ಯೇಣ ಅಜಯನ್। ಅಹ್ನೋ ದೀಪ್ತಿ ಸಮೂಹಃ, ಅಹ್ನಾಯ ಜಗತಾಂ ದ್ಯೋತನಾಯ ಸೂರ್ಯಶ್ಚ ಜಾಯತೇ । ಉಕ್ತಂ ಚ 'ಅಹ್ನೋ ದೀಪ್ತಿಶ್ಚ ಕಥ್ಯತೇ' ಇತಿ ॥

---

1. ಮಹಾಭಾರತದಲ್ಲಿ ಈ ಶ್ಲೋಕಕ್ಕೆ ಮುಂಚೆ ಕೆಳಗಿನ ಶ್ಲೋಕಗಳಿವೆ :-

(೧) ಏವಂ ಪ್ರವೃತ್ತೋ ಯದುಪಾಲಭೇತ ವೈ । ಧನಮಾಚಾರ್ಯಾಯ ತದನು ಪ್ರಯಚ್ಛೇತ್ । ಸತಾಂ ವೃತ್ತಿಂ ಬಹುಗುಣಾಮೇವಮೇತಿ ಗುರೋಃ ಪುತ್ರೇ ಭವತಿ ಚ ವೃತ್ತಿರೇಷಾ ॥ (೨) ಏವಂ ವಸನ್ ಸರ್ವತೋ ವರ್ಧತೀಹ ಬಹೂನ್ ಪುತ್ರಾನ್ ಲಭತೇ ಚ ಪ್ರತಿಷ್ಠಾಮ್ । ವರ್ಷನ್ತಿ ಚಾಸ್ಮೈ ಪ್ರದಿಶೋ ದಿಶಶ್ಚ ವಸನ್ತ್ಯಸ್ಮಿನ್ ಬ್ರಹ್ಮಚರ್ಯೇ ಜನಾಶ್ಚ ॥

2. 'ಬ್ರಹ್ಮಲೋಕಂ ಮನೀಷಿಣಃ'

3. 'ಗನ್ಧರ್ವಾಣಾಮನೇನೈವ ರೂಪಮಪ್ಸರಸಾಮಭೂತ್'

4. 'ಸೂರ್ಯೋಽಪಿ'- ಎಂದು ಪಾಠಾಂತರಗಳು.

( ಭಾಷ್ಯಾರ್ಥ )

ಎರಡು (ಪದ್ಯಗಳಿಂದ) ಬ್ರಹ್ಮಚರ್ಯವನ್ನು ಹೊಗಳುತ್ತಾನೆ: ಈ (ಬ್ರಹ್ಮಚರ್ಯದಿಂದ ದೇವತೆಗಳು ದೇವತ್ವವನ್ನು ಪಡೆದುಕೊಂಡರು. ಋಷಿಗಳೂಕೂಡ ಇದರಿಂದ ಋಷಿತ್ವವನ್ನು ಹೊಂದಿದರು. ಸಗಂಧರ್ವರು ಎಂದರೆ ಗಂಧರ್ವರೊಡನೆ ಇರುವ್ವಕೊಂಡಿರುವ ಅಪ್ಸರಸ್ತ್ರೀಯರು (ತಮ್ಮ ಸುಂದರ)ರೂಪವನ್ನು ಗೆದ್ದುಕೊಂಡರು- ಎಂದರೆ ರಮಣೀಯವಾದ ರೂಪಗಳನ್ನು ಈ ಬ್ರಹ್ಮಚರ್ಯದಿಂದ ಜಯಿಸಿದರು. ಅಹ್ನಃ ಎಂದರೆ ಕಾಂತಿಯ ಸಮೂಹವು. ಜಗತ್ತುಗಳ ಬೆಳಕಿಗಾಗಿ ಎಂದರೆ ಬೆಳಗುವದಕ್ಕಾಗಿ (ಬ್ರಹ್ಮಚರ್ಯದಿಂದಲೇ) ಸೂರ್ಯನು ಆಗಿರುತ್ತಾನೆ. (ಪ್ರಕಾಶರೂಪನಾಗಿರುತ್ತಾನೆ.) 'ಅಹಸ್ಸೆಂದರೆ ದೀಪ್ತಿಯೆಂದು ಅರ್ಥ' ಎಂದು ಹೇಳಿಯೂ ಇದೆ.

**ಆಕಾಙ್ಕ್ಷಿತಾರ್ಥಸ್ಯ ಸಂಯೋಗಾದ್ ರಸಭೇದಾರ್ಥಿನಾಮಿವ ।**
**ಏವಂ ಹ್ಯೇತತ್ ಸಮಾಜ್ಞಾಯ ತಾದೃಗ್ಭಾವಂ ಗತಾ ಇಮೇ ॥೧೭॥**

೧೭. (ಚಿಂತಾಮಣಿಯೆಂಬ ರತ್ನವು ತನ್ನನ್ನು ಬಯಸುವವರಿಗೆ ಅವರವರ) ಬಯಕೆಗಳಿಗೆ ಅನುಗುಣವಾಗಿ ಫಲವನ್ನು ಕೊಡುವಂತೆ ಈ (ಬ್ರಹ್ಮಚರ್ಯ)ವನ್ನೂ (ಇಷ್ಟಾರ್ಥಪ್ರದವೆಂತ) ಬಲ್ಲ ಈ (ದೇವಾದಿಗಳು) ಇದರ ಬಲದಿಂದ ತಮ್ಮತಮ್ಮ (ವಿಶೇಷರೂಪಗಳನ್ನು) ಪಡೆದುಕೊಂಡಿರುತ್ತಾರೆ.

(ಭಾಷ್ಯ)

ಕಥಮೇಕಸ್ಯ ಬ್ರಹ್ಮಚರ್ಯಸ್ಯ ಅನೇಕವಿಧಫಲಸಾಧಕತ್ವಮಿತ್ಯತ ಆಹ- ಯಥಾ ಚಿನ್ತಾಮಣ್ಯಾದಯೋ ರಸಭೇದಾರ್ಥಿನಾಮಿವ ಆಕಾಙ್ಕ್ಷಿತಾರ್ಥಸ್ಯ ಸಂಯೋಗಾತ್ ತತ್ತದಾಕಾಙ್ಕ್ಷಿತಮರ್ಥಂ ಪ್ರಯಚ್ಛನ್ತಿ, ಏವಮ್, ಏತತ್ ಬ್ರಹ್ಮಚರ್ಯಮ್ ಆಕಾಙ್ಕ್ಷಿತಾರ್ಥಸ್ಯ ಸಂಯೋಗಾತ್ ತತ್ತದಾಕಾಙ್ಕ್ಷಿತಂ ಪ್ರಯಚ್ಛತೀತಿ ಜ್ಞಾತ್ವಾ ತತ್ತತ್ಫಲಾರ್ಥಂ ಬ್ರಹ್ಮಚರ್ಯಂ ಚರಿತ್ವಾ ತಾದೃಗ್ಭಾವಂ ತಾದೃಶಂ ಭಾವಂ ಗತಾಸ್ತು ಇಮೇ ದೇವಾದಯಃ । ಯಸ್ಮಾದಾಚಾರ್ಯಸಂನಿಧ್ಯನುಷ್ಠಿತಾತ್ ಬ್ರಹ್ಮಚರ್ಯಾತ್ ಪರಮಪುರುಷಾರ್ಥಪ್ರಾಪ್ತಿಃ ತಸ್ಮಾದಾಚಾರ್ಯಯೋನಿಂ ಪ್ರವಿಶ್ಯ ಗರ್ಭೋ ಭೂತ್ವಾ ಬ್ರಹ್ಮಚರ್ಯಂ ಚರೇದ್ ಇತ್ಯರ್ಥಃ ॥

( ಭಾಷ್ಯಾರ್ಥ )

ಬ್ರಹ್ಮಚರ್ಯವೆಂಬುದೊಂದೇ ಅನೇಕವಿಧವಾದ ಫಲಗಳನ್ನು ಪಡೆಯಲು ಸಾಧನವಾಗಿದೆ- ಎಂಬುದು ಹೇಗೆ? ಎಂದರೆ ಹೇಳುತ್ತಾನೆ: ಹೇಗೆ ರಸಭೇದ

ವೆಂಬ (ಹೆಸರಿನ) ಚಿಂತಾಮಣಿಯೇ[1] ಮುಂತಾದವು ತಮ್ಮನ್ನು ಬಯಸುವವರಿಗೆ ಬೇಕಾದ ಬಯಕೆಗಳನ್ನುಂಟುಮಾಡುವ ಮೂಲಕ ಅವರವರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವವೋ, ಹಾಗೆಯೇ ಈ ಬ್ರಹ್ಮಚರ್ಯವೂ ಬಯಕೆಗಳನ್ನು ತಂದುಕೊಡುವದರಿಂದ, ಅವರವರು ಇಷ್ಟಪಡುವ ಕಾಮಗಳನ್ನು ಕೊಡುತ್ತದೆ- ಎಂದು ತಿಳಿದು ಆಯಾ ಫಲಕ್ಕಾಗಿ ಬ್ರಹ್ಮಚರ್ಯವನ್ನು (ಅನುಷ್ಠಾನ)ಮಾಡಿ ಈ ದೇವತೆಗಳೇ ಮೊದಲಾದವರು ಅಂಥ ಭಾವವನ್ನು ಎಂದರೆ ಆಯಾ ಯೋಗ್ಯತೆಗಳನ್ನು ಹೊಂದಿರುವರು. ಆಚಾರ್ಯರ ಸಂನಿಧಿಯಲ್ಲಿ ಅನುಷ್ಠಾನಮಾಡಲ್ಪಟ್ಟ ಬ್ರಹ್ಮಚರ್ಯದಿಂದ ಪರಮಪುರುಷಾರ್ಥಪ್ರಾಪ್ತಿಯೆಂಬುದು ಕಂಡುಬರುವದರಿಂದ ಆಚಾರ್ಯರ ಗರ್ಭವನ್ನು ಪ್ರವೇಶಿಸಿ ಅವರ ಒಳಹೊಕ್ಕವನಾಗಿ ಬ್ರಹ್ಮಚರ್ಯವನ್ನು ಮಾಡಬೇಕು- ಎಂದರ್ಥ.

## ಜ್ಞಾನದಿಂದ ಬ್ರಹ್ಮಪ್ರಾಪ್ತಿ

**ಅನ್ತವನ್ತಃ[2] ಕ್ಷತ್ರಿಯ ತೇ ಜಯನ್ತಿ**
**ಲೋಕಾನ್ ಜನಾಃ ಕರ್ಮಣಾ ನಿರ್ಮಿತೇನ[3] ।**
**ಜ್ಞಾನೇನ ವಿದ್ವಾಂಸ್ತೇಜ ಅಭ್ಯೇತಿ[4] ನಿತ್ಯಂ**
**ನ ವಿದ್ಯತೇ ಹ್ಯನ್ಯಥಾ ತಸ್ಯ ಪನ್ಥಾಃ[5]** ॥ ೧೮ ॥

೧೮. ಎಲೈ ಕ್ಷತ್ರಿಯನೆ, ಕರ್ಮದಿಂದ ಉಂಟಾದ ಕೊನೆಯುಳ್ಳಂಥ ಲೋಕಗಳನ್ನು ಅವರು ಜಯಿಸುತ್ತಾರೆ. ಜ್ಞಾನಿಯು ತನ್ನ ಜ್ಞಾನದಿಂದ ನಿತ್ಯವಾದ ತೇಜಸ್ಸನ್ನು ಹೊಂದುತ್ತಾನೆ. ಅದನ್ನು ಪಡೆಯಲು ಬೇರೊಂದು ಮಾರ್ಗವು ಇರುವದಿಲ್ಲ.

(ಭಾಷ್ಯ)

ನನ್ವೇವಂ ಜ್ಞಾನನಿಷ್ಠತಾ ಯದಿ ಜ್ಞಾನಸ್ಯೈವ ಪುರುಷಾರ್ಥತ್ವಂ ಭವೇದ್, ಅಪಿ ತು ಕರ್ಮಣ ಏವೇತ್ಯಾಶಙ್ಕ್ಯಾಹ- ಹೇ ಕ್ಷತ್ರಿಯ, ಅನ್ತವನ್ತಃ ಅನ್ತವನ್ತೋ ಲೋಕಾನ್ ಪಿತೃಲೋಕದೇವಲೋಕಾದೀನ್ ತೇ ಜಯನ್ತಿ,

---

1. ಚಿಂತಾಮಣಿ, ಕಾಮಧೇನು, ಕಲ್ಪವೃಕ್ಷ- ಮುಂತಾದವುಗಳು. ಇವೆಲ್ಲ ಸ್ವರ್ಗಲೋಕದ ಪದಾರ್ಥಗಳಾಗಿದ್ದು ಬೇಡಿದವರ ಇಷ್ಟಾರ್ಥಗಳನ್ನೆಲ್ಲ ಕೊಡುವವೆಂತ ಪುರಾಣಪ್ರಸಿದ್ಧಿಯಿದೆ.

2. ಈ ಶ್ಲೋಕಕ್ಕೆ ಮುಂಚೆ ಮಹಾಭಾರತದಲ್ಲಿ ಕೆಳಗಿನ ಶ್ಲೋಕವಿದೆ : "ಯ ಆಶ್ರಯೇತ್ ಪಾವಯೇಚ್ಚಾಪಿ ರಾಜನ್ । ಸರ್ವಂ ಶರೀರಂ ತಪಸಾ ತಪ್ಯಮಾನಃ ॥ ಏತೇನ ವೈ ಬಾಲ್ಯಮಭ್ಯೇತಿ ವಿದ್ವಾನ್ । ಮೃತ್ಯುಂ ತಥಾ ಸ ಜಯತ್ಯನ್ತಕಾಲೇ ॥"

3. 'ನಿರ್ಮಲೇನ' 4. 'ತೇನ ಚಾಭ್ಯೇತಿ ಸರ್ವಂ'

5. 'ನಾನ್ಯಃ ಪನ್ಥಾ ಅಯನಾಯ ವಿದ್ಯತೇ' ಎಂದು ಮಹಾಭಾರತದ ಪಾಠಗಳು.

ನಾನನ್ತಂ ಸ್ವಾತ್ಮಭೂತಂ ಪರಮಾತ್ಮಾನಂ ಲೋಕಂ ಜಯನ್ತಿ | ಕೇನ ತರ್ಹಿ ಅನನ್ತಲೋಕಪ್ರಾಪ್ತಿರಿತ್ಯಾಶಙ್ಕ್ಯ ಆಹ- ಜ್ಞಾನೇನ ವಿದ್ವಾನ್ ತೇಜ ಅಭ್ಯೇತಿ ನಿತ್ಯಂ ನಿತ್ಯಮವಿನಾಶಿ ಆತ್ಮಭೂತಮೇವ ಅಭ್ಯೇತಿ ತೇಜಃ ಜ್ಯೋತಿಃ ನ ಕರ್ಮಣಾ | ಕಸ್ಮಾತ್ ಪುನಃ ಜ್ಞಾನೇನೈವ ಅಭ್ಯೇತಿ ? ತತ್ರಾಹ- ನ ವಿದ್ಯತೇ ಹ್ಯನ್ಯಥಾ ತಸ್ಯ ಪನ್ಥಾಃ ; ತಸ್ಯ ಪೂರ್ಣಾನನ್ದಜ್ಯೋತಿಷಃ ಜ್ಞಾನಮೇಕಂ ಮುಕ್ತ್ವಾ ಅನ್ಯಃ ಪನ್ಥಾಃ ಮಾರ್ಗೋ ನಾಸ್ತ್ಯೇವ | ಶ್ರೂಯತೇ ಚ- 'ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪನ್ಥಾ ವಿದ್ಯತೇಽಯನಾಯ' (ಶ್ವೇ. ೬-೧೫) ಇತಿ ||

( ಭಾಷ್ಯಾರ್ಥ )

ಹಾಗಾದರೆ ಜ್ಞಾನನಿಷ್ಠೆಯ (ಮೂಲಕ) ಜ್ಞಾನವೇ ಪುರುಷಾರ್ಥಕ್ಕೆ ಸಾಧನವೊ? ಹಾಗಲ್ಲದೆ ಕರ್ಮವು ಸಾಧನವೊ?- ಎಂದು ಆಶಂಕಿಸಿ ಹೇಳುತ್ತಾನೆ- ಎಲೈ ಕ್ಷತ್ರಿಯನೆ, ಅಂತವಂತಗಳಾದ ಎಂದರೆ ಕೊನೆಯುಳ್ಳ ಪಿತೃಲೋಕದೇವ ಲೋಕಗಳೇ ಮುಂತಾದವುಗಳನ್ನು ಅವರು ಜಯಿಸುತ್ತಾರೆ. (ಆದರೆ ಅಂತವಿಲ್ಲದ ತನ್ನ ಸ್ವರೂಪವೇ ಆಗಿರುವ ಪರಮಾತ್ಮನೆಂಬ ಲೋಕವನ್ನು ಜಯಿಸುವದಿಲ್ಲ. ಹಾಗಾದರೆ ಏತರಿಂದ ಅನಂತಲೋಕಪ್ರಾಪ್ತಿಯಾದೀತು ? ಎಂದು ಆಶಂಕಿಸಿ ಹೇಳುತ್ತಾನೆ- ವಿದ್ವಾಂಸನು ಜ್ಞಾನದಿಂದ ನಿತ್ಯವಾದ ತೇಜಸ್ಸನ್ನು ಪಡೆಯುತ್ತಾನೆ. ಎಂದೂ ನಾಶವಾಗದಿರುವ ತನ್ನ ಆತ್ಮನೇ ಆಗಿರುವ ತೇಜಸ್ಸನ್ನು ಎಂದರೆ ಜ್ಯೋತಿಯನ್ನು (ಪಡೆಯುತ್ತಾನೆ) ಕರ್ಮದಿಂದಲ್ಲ. ಜ್ಞಾನದಿಂದಲೇ ಹೊಂದುತ್ತಾನೆಂಬುದು ಹೇಗೆ ಸರಿ? ಅದನ್ನು ಹೇಳುತ್ತಾನೆ- ಅದನ್ನು ಪಡೆಯುಲು ಬೇರೊಂದು ಮಾರ್ಗವು ಇರುವದಿಲ್ಲ. ಆ ಪೂರ್ಣಾನಂದಜ್ಯೋತಿರೂಪವಾದ (ತತ್ತ್ವವನ್ನು ಪಡೆಯುಲು) ಜ್ಞಾನವೊಂದನ್ನು ಬಿಟ್ಟು ಬೇರೊಂದು ಮಾರ್ಗವು- ಹಾದಿಯು ಇರುವದೇ ಇಲ್ಲ. "ಅವನನ್ನೇ ಅರಿತುಕೊಂಡು ಮೃತ್ಯುವನ್ನು ದಾಟುವನು ; ಆ ಪದವಿಯ ಪ್ರಾಪ್ತಿಗೆ ಬೇರೊಂದು ಮಾರ್ಗವು ಇರುವದಿಲ್ಲ" ಎಂದು ಶ್ರುತಿಯೂ ಇದೆ.

## ಅಕ್ಷರವು ಯಾವ ರೂಪವಾಗಿದೆ?

ಧೃತರಾಷ್ಟ್ರ ಉವಾಚ—

ಆಭಾತಿ ಶುಕ್ಲಮಿವ ಲೋಹಿತಮಿವಾಥೋ
ಕೃಷ್ಣಮಥಾಂಜನಂ[1] ಕಾದ್ರವಂ ವಾ |
ಯದ್ ಬ್ರಾಹ್ಮಣಃ[2] ಪಶ್ಯತಿ ಯತ್ರ[3] ವಿದ್ವಾನ್
ಕಥಂ ರೂಪಂ ತದಮೃತಮಕ್ಷರಂ ಪರಮ್[4] || ೧೯ ||

1. 'ಅಞ್ಜನಮ್' 2. ಸದ್ಬ್ರಹ್ಮಣಃ' 3. 'ಯೋಽತ್ರ'
4. 'ಪದಮ್' ಎಂದು ಮಹಾಭಾರತದ ಪಾಠಗಳು.

೧೯. ಧೃತರಾಷ್ಟ್ರನಿಂತೆಂದನು : ವಿದ್ವಾಂಸನಾದ ಬ್ರಾಹ್ಮಣನು ಯಾವ (ಬ್ರಹ್ಮನನ್ನು) ಕಾಣುವನೋ ಅದು ಬಿಳುಪು, ಕೆಂಪು, ಅಥವಾ ಕಪ್ಪು, ಶುಭ್ರ, ಕಂದುಬಣ್ಣ-ಗಳಂತೆ ತೋರುತ್ತದೆಯೋ ? ಹೇಗೆ ? ಅಮೃತವೂ ಅಕ್ಷರವೂ ಆದ ಪರಬ್ರಹ್ಮವು ಯಾವ ರೂಪವುಳ್ಳದ್ದಾಗಿದೆ ?

(ಭಾಷ್ಯ)

ಜ್ಞಾನೇನ ವಿದ್ವಾನ್ ಯದ್ ಬ್ರಹ್ಮ ಪಶ್ಯತಿ ತತ್ ಕಿಮಿವಾಭಾತೀತಿ ಪ್ರಾಹ ಧೃತರಾಷ್ಟ್ರಃ- ಜ್ಞಾನೇನ ಯದ್ವಿದ್ವಾನ್ ಪಶ್ಯತಿ ಬ್ರಹ್ಮ ತತ್ ಕಿಂ ಶುಕ್ಲಮಿವ ಆಭಾತಿ, ಲೋಹಿತಮಿವ ಆಭಾತಿ, ಕೃಷ್ಣಮಿವ, ಅರ್ಜುನಂ, ಕಾದ್ರವಮಿವ ಆಭಾತಿ ; ಯತ್ರ ದೇಶೇ ಭಾತಿ ಕಥಂ ರೂಪಂ ತದಮೃತಮಕ್ಷರಂ ಪರಂ ಬ್ರಹ್ಮ ||

( ಭಾಷ್ಯಾರ್ಥ )

ಜ್ಞಾನದಿಂದ ವಿದ್ವಾಂಸನು ಯಾವ ಬ್ರಹ್ಮವನ್ನು ಕಂಡುಕೊಳ್ಳುವನೋ ಅದು ಏತರಂತೆ ತೋರುವದು ? ಎಂದು ಧೃತರಾಷ್ಟ್ರನು ಕೇಳುತ್ತಾನೆ. ವಿದ್ವಾಂಸನು ಜ್ಞಾನದಿಂದ ಕಂಡುಕೊಳ್ಳುವ ಬ್ರಹ್ಮವು, ಅದು ಬಿಳುಪಿನಂತೆ ತೋರುವದೊ, ಕೆಂಪಾಗಿರುವಂತೆ ತೋರುವದೊ, ಕಪ್ಪಾಗಿಯೊ, ಶುಭ್ರವಾಗಿಯೊ, ಕಂದುಬಣ್ಣವಾಗಿಯೊ ? ಯಾವ ಸ್ಥಳದಲ್ಲಿ ತೋರುವದೋ, ಆ ಅಮೃತನಾದ ಅಕ್ಷರವಾದ ಪರಬ್ರಹ್ಮವು ಯಾವರೂಪದ್ದಾಗಿರುವದು ?

## ಬ್ರಹ್ಮವು ರೂಪರಹಿತವಾಗಿದೆ

**ಸನತ್ಸುಜಾತ ಉವಾಚ—**

**ನಾಭಾತಿ[1] ಶುಕ್ಲಮಿವ ಲೋಹಿತಮಿವಾಥೋ**
**ಕೃಷ್ಣಮಥಾರ್ಜುನಂ ಕಾದ್ರವಂ[2] ವಾ ।**
**ನ ಪೃಥಿವ್ಯಾಂ ತಿಷ್ಠತಿ ನಾನ್ತರಿಕ್ಷೇ**
**ನೈತತ್ ಸಮುದ್ರೇ ಸಲಿಲಂ ಬಿಭರ್ತಿ** || ೨೦ ||

೨೦. ಸನತ್ಸುಜಾತನಿಂತೆಂದನು : ಬಿಳುಪಿನಂತೆ, ಕೆಂಪಿನಂತೆ, ಹಾಗೂ ಕಪ್ಪು, ಶುಭ್ರ ಕಂದುಬಣ್ಣ-ಗಳಂತಾಗಲಿ, (ಅದು) ಹೊಳೆಯುವದಿಲ್ಲ. ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ, ಅದು ಇರುವದಿಲ್ಲ. ಅದು (ಸಂಸಾರ)ಸಮುದ್ರದಲ್ಲಿ ದೇಹವನ್ನು ಧರಿಸುವದೂಇಲ್ಲ.

1. 'ಆಭಾತಿ'
2. 'ಕೃಷ್ಣಮಾಯಸಮರ್ಕವರ್ಣಮ್' ಎಂದು ಮಹಾಭಾರತದ ಪಾಠ.

( ಭಾಷ್ಯ )

ಏವಂ ಪೃಷ್ಟಃ ಪ್ರಾಹ ಭಗವಾನ್– ನ ಏತದ್ ಬ್ರಹ್ಮ ಶುಕ್ಲಾದಿರೂಪತ್ವೇನಾವಭಾಸತೇ, ಅರೂಪತ್ವಾದ್ ಬ್ರಹ್ಮಣಃ । ಶ್ರೂಯತೇ ಚ– 'ತತೋ ಯದುತ್ತರತರಂ ತದರೂಪಮನಾಮಯಮ್' (ಶ್ವೇ. ೩–೧೦) ಇತಿ । 'ಅಶಬ್ದಮಸ್ಪರ್ಶಮರೂಪಮ್' (ಕಾ. ೩–೧೫) ಇತಿ ಚ । ತಥಾ ನ ಪೃಥಿವ್ಯಾಂ ತಿಷ್ಠತಿ, ನಾನ್ತರಿಕ್ಷೇ । ತಥಾ ಚ ಶ್ರುತಿಃ ಅನ್ಯತ್ರಾನವಸ್ಥಾನಂ ದರ್ಶಯತಿ– 'ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಇತಿ ಸ್ವೇ ಮಹಿಮ್ನಿ' (ಛಾಂ. ೭–೨೪–೧) ಇತಿ । ಕಸ್ಮಾತ್ ಪುನಃ ಕಾರಣಾತ್ ಪೃಥಿವ್ಯಾದಿಷು ನ ತಿಷ್ಠತೀತಿ? ತತ್ರಾಹ– ನೈತತ್ ಸಮುದ್ರೇ ಸಲಿಲಂ ಬಿಭರ್ತಿ ಪಂಚಭೂತಾತ್ಮಕಂ ದೇಹಂ ಬಿಭರ್ತಿ । ಸಲಿಲಶಬ್ದೋ ಭೂತಪಞ್ಚಕೋಪಲಕ್ಷಣಾರ್ಥಃ, ಯಥಾ 'ಅಪ ಏವ ಸಸರ್ಜಾದೌ ತಾಸು ವೀರ್ಯಮಪಾಸೃಜತ್' (ಮನು. ೧–೮) ಇತ್ಯತ್ರ ಅಪ್‌ಶಬ್ದೋ ಭೂತಪಞ್ಚಕೋಪಲಕ್ಷಣಾರ್ಥಃ । ಶ್ರೂಯತೇ ಚ– 'ಪಞ್ಚಮ್ಯಾಮಾಹುತಾವಾಪಃ ಪುರುಷವಚಸೋ ಭವನ್ತಿ' (ಛಾಂ. ೫–೯–೧) ಇತಿ ಅಪಾಮೇವ ಪುರುಷಶಬ್ದವಾಚ್ಯತ್ವಮ್ । ಏತದುಕ್ತಂ ಭವತಿ– ಯದಿ ಬ್ರಹ್ಮಣಃ ಸಂಸಾರಾನ್ತರ್ವರ್ತಿತ್ವಂ ಭವೇತ್, ತದಾ ಸಂಸಾರಾನುಪ್ರವಿಷ್ಟತ್ವಾತ್ ಘಟಾದಿವತ್ ಈದೃಗ್ರೂಪಾದಿಮತ್ತ್ವಾತ್ ಅನ್ಯಸ್ಮಿಂಶ್ಚ ಅವಸ್ಥಾನಂ ಭವೇತ್ । ಇದಂ ಪುನರಪೂರ್ವಾದಿಲಕ್ಷಣತ್ವಾತ್ ಸಂಸಾರಾನನುಪ್ರವಿಷ್ಟಮೇವ ಬ್ರಹ್ಮ । ತಸ್ಮಾದ್ ರೂಪಾದಿರಹಿತಮೇವ ತತ್ ಇತಿ ॥

(ಭಾಷ್ಯಾರ್ಥ)

ಈ ರೀತಿಯಾಗಿ ಕೇಳಲ್ಪಟ್ಟ ಪೂಜ್ಯನು ಹೇಳುತ್ತಾನೆ : ಈ ಬ್ರಹ್ಮವು ಬಿಳುಪೇ ಮುಂತಾದ (ಬಣ್ಣಗಳ) ರೂಪದಿಂದ ಹೊಳೆಯುವದಿಲ್ಲ. ಏಕೆಂದರೆ ಬ್ರಹ್ಮಕ್ಕೆ ಯಾವ ರೂಪವೂ ಇರುವದಿಲ್ಲ. 'ಇನ್ನು ಯಾವದು ಹೆಚ್ಚು ಮಿಗಿಲಾಗಿದೆಯೋ ಅದು ರೂಪವಿಲ್ಲದ್ದು, ದೋಷವಿಲ್ಲದ್ದು' ಎಂದು ಶ್ರುತಿಯೂ ಇದೆ. '(ಬ್ರಹ್ಮವು) ಶಬ್ದವಿಲ್ಲದ್ದು, ಸ್ಪರ್ಶವಿಲ್ಲದ್ದು, ರೂಪವಿಲ್ಲದ್ದು' ಎಂದೂ ಮತ್ತೊಂದು (ಶ್ರುತಿಯಿದೆ). ಮತ್ತು (ಅದು) ಭೂಮಿಯನ್ನಾಶ್ರಯಿಸಿಕೊಂಡಿರುವದಿಲ್ಲ ; ಅಂತರಿಕ್ಷದಲ್ಲಿಯೂ ಇಲ್ಲ. ಹಾಗೂ ಶ್ರುತಿಯು 'ಪೂಜ್ಯನೆ, ಆ (ಬ್ರಹ್ಮವು) ಏತರಲ್ಲಿ ನೆಲೆನಿಂತಿದೆ ? ಎಂದರೆ ತನ್ನ ಮಹಿಮೆಯಲ್ಲಿಯೇ (ಎಂದು ತಿಳಿ')- ಎಂದು ಹೇಳಿ ಬೇರೊಂದು ಆಧಾರವನ್ನು ತಿರಸ್ಕರಿಸಿ ಹೇಳುತ್ತಿದೆ. ಭೂಮಿಯೇ ಮುಂತಾದವುಗಳನ್ನಾಶ್ರಯಿಸಿ ಯಾವ ಕಾರಣದಿಂದ ಅದು ನಿಂತಿಲ್ಲ ? ಎಂದರೆ ಹೇಳುತ್ತಾನೆ- ಈ (ಬ್ರಹ್ಮವು) ಸಮುದ್ರದಲ್ಲಿ ಪಂಚಭೂತಾತ್ಮಕವಾದ ದೇಹವನ್ನು ಧರಿಸಿರುವದಿಲ್ಲ. ಸಲಿಲ ಎಂಬ ಶಬ್ದವು ಇಲ್ಲಿ ಐದು ಭೂತಗಳಿಗೂ ಉಪಲಕ್ಷಣವಾಗಿ (ಪ್ರತಿನಿಧಿಯಾಗಿ) ಬಂದಿದೆ. ಹೇಗೆಂದರೆ: 'ಮೊದಲು ನೀರನ್ನೇ ಉಂಟು

ಮಾಡಿದನು ; ಅದರಲ್ಲಿ ವೀರ್ಯವನ್ನು ಇಟ್ಟನು' ಎಂದು ಹೇಳುವಲ್ಲಿ 'ಅಪ್' ಎಂಬ ಶಬ್ದವನ್ನು ಐದು ಭೂತಗಳಿಗೂ ಸಾಮಾನ್ಯ(ವಾಚಕ)ವಾಗಿ ಹೇಳಿದೆ. ಮತ್ತು 'ಐದನೆಯ ಆಹುತಿಯಲ್ಲಿ ಅಪ್ಪು ಪುರುಷ (ಮನುಷ್ಯ)ನೆಂಬ ಶಬ್ದಕ್ಕೆ ತಕ್ಕದ್ದಾಗುವದು' ಎಂದು ನೀರನ್ನೇ ಪುರುಷಶಬ್ದದಿಂದ ಕರೆದಿರುತ್ತದೆ.

ಇಲ್ಲಿ ಇಷ್ಟನ್ನು ಹೇಳಿದಂತಾಗಿರುತ್ತದೆ : ಬ್ರಹ್ಮವು ಸಂಸಾರದೊಳಗೇ ಸೇರಿದ್ದಾಗಿದ್ದರೆ ಆಗ (ಅದು) ಸಂಸಾರದೊಳಗೆ ಒಂದಾದ್ದರಿಂದ ಮಡಿಕೆಯೇ ಮುಂತಾದವುಗಳಂತೆ ಇಂಥ (ಕಪ್ಪು ಮುಂತಾದ) ರೂಪಾದಿಗಳುಳ್ಳದ್ದಾಗಿಯೂ ಬೇರೊಂದರಲ್ಲಿ ನೆಲೆನಿಲ್ಲುವದೂ ಆಗಬಹುದಾಗಿತ್ತು. ಈ ಬ್ರಹ್ಮವಾದರೋ ಅಪೂರ್ವವೇ–[1] ಮುಂತಾದ ಲಕ್ಷಣವುಳ್ಳದ್ದಾದ್ದರಿಂದ ಸಂಸಾರದೊಳಗೆ ಸೇರದೆ ಇರುವದೇ ಆಗಿರುತ್ತದೆ. ಆದ್ದರಿಂದ ರೂಪಾದಿಗಳಿಲ್ಲದ್ದೇ ಅದು (ಎಂದು ಸಿದ್ಧವಾಯಿತು.)

ನೈವರ್ಕ್ಷು[2] ತನ್ನ ಯಜುಃಷು ನಾಪ್ಯಥರ್ವಸು
ನ ದೃಶ್ಯತೇ ವೈ ವಿಮಲೇಷು ಸಾಮಸು ।
ರಥನ್ತರೇ ಬಾರ್ಹತೇ[3] ವಾಪಿ ರಾಜನ್
ಮಹಾವ್ರತಸ್ಯಾತ್ಮನಿ[4] ದೃಶ್ಯತೇ ತತ್ ॥ ೨೧ ॥

೨೧. ಅದು ಋಕ್ಕುಗಳಲ್ಲಾಗಲಿ, ಯಜುಸ್ಸುಗಳಲ್ಲಾಗಲಿ, ಅಥರ್ವಗಳಲ್ಲಾಗಲಿ, ವಿಮಲವಾದ ಸಾಮಗಳಲ್ಲಾಗಲಿ, ಕಂಡುಬರುವದಿಲ್ಲ. ಎಲೈ ರಾಜನೆ, ರಥಂತರ, ಬಾರ್ಹತವೇ (ಮೊದಲಾದ ಸಾಮಗಳಲ್ಲಿಯೂ) ಸಿಗುವದಿಲ್ಲ. ಮಹಾವ್ರತಗಳಿಂದ ಕೂಡಿದ ಆತ್ಮನಲ್ಲಿ ಅದು ಕಂಡುಬರುತ್ತದೆ.

(ಭಾಷ್ಯ)

ತರ್ಹಿ ನ ಕಸ್ಯ ಕುತ್ರಾಪಿ ಉಪಲಭ್ಯತೇ ಇತ್ಯಾಹ । 'ಜ್ಞಾನಂ ಚ ಸತ್ಯಂ ಚ' ಇತ್ಯುಪಕ್ರಮ್ಯ 'ಮಹಾವ್ರತಾ ದ್ವಾದಶ ಬ್ರಾಹ್ಮಣಸ್ಯ' ಇತಿ ಯೇ ಗುಣಾ ಉಕ್ತಾಃ ತತ್ಸಂಯುಕ್ತಸ್ಯಾತ್ಮನಿ ದೃಶ್ಯತೇ ತತ್ ಪರಂ ಬ್ರಹ್ಮ । ನ ಘಟಾದಿವದ್ ಇದಂತಯಾ ಸಿದ್ಧ್ಯತಿ ಅಪಿ ತು ಆತ್ಮನ್ಯೇವಾತ್ಮತಯಾ ಸಿಧ್ಯತೀತ್ಯರ್ಥಃ ॥

1. ಬೃಹ. ೨–೫–೧೯ರ ಸೂಚನೆ.

2. ಮಹಾಭಾರತದಲ್ಲಿ ಈ ಶ್ಲೋಕಕ್ಕೆ ಮುಂಚೆ ಈ ಕೆಳಗಿನ ಶ್ಲೋಕವಿದೆ :—
'ನ ತಾರಕಾಸು ನ ಚ ವಿದ್ಯುದಾಶ್ರಿತಂ ನ ಚಾಭ್ರೇಷು ದೃಶ್ಯತೇ ರೂಪಮಸ್ಯ ।
ನ ಚಾಪಿ ವಾಯೌ ನ ಚ ದೇವತಾಸು ನೈತಚ್ಚನ್ದ್ರೇ ದೃಶ್ಯತೇ ನೋತ ಸೂರ್ಯೇ ॥

3. 'ಬಾರ್ಹದ್ರಥೇ' 4. 'ವ್ರತೇನೈವ' ಎಂದು ಮಹಾಭಾರತದ ಪಾಠಗಳು.

( ಭಾಷ್ಯಾರ್ಥ )

ಹಾಗಾದರೆ ಯಾವನೊಬ್ಬನಿಗೂ (ಅದು) ಎಲ್ಲಿಯೂ ದೊರೆಯಲಾರದು- ಎಂದರೆ ಹೇಳುತ್ತಾನೆ: 'ಜ್ಞಾನವೂ ಸತ್ಯವೂ' ಎಂದಾರಂಭಿಸಿ 'ಬ್ರಾಹ್ಮಣನಿಗೆ ಹನ್ನೆರಡು ಮಹಾವ್ರತಗಳು' ಎಂದು ಯಾವ ಗುಣಗಳನ್ನು ಹೇಳಿತ್ತೋ, ಅವುಗಳಿಂದ ಕೂಡಿದವನಿಗೆ ತನ್ನಲ್ಲಿಯೇ ಅದು ಎಂದರೆ ಪರಬ್ರಹ್ಮವು ಕಂಡು ಬರುತ್ತದೆ. 'ಇದು' ಎಂಬೀರೀತಿಯಿಂದ (ವಿಷಯವಾಗಿ) ಮಡಕೆಯೇ ಮೊದ ಲಾದವುಗಳಂತೆ ಕಂಡುಬರುವದಿಲ್ಲ. ಆದರೆ ತನ್ನಲ್ಲಿಯೇ ಆತ್ಮರೂಪದಿಂದಲೇ ತಿಳಿದುಬರುತ್ತದೆ- ಎಂದಭಿಪ್ರಾಯ.

## ಬ್ರಹ್ಮದ ಸ್ವರೂಪ

ಅವಾರಣೀಯಂ[1] ತಮಸಃ ಪರಸ್ತಾ-
ತ್ತದನ್ತತೋಽಭ್ಯೇತಿ[2] ವಿನಾಶಕಾಲೇ ।
ಅಣೀಯರೂಪಂ ಚ ತಥಾಪ್ಯಣೀಯಸಾಂ[3]
ಮಹತ್ಸ್ವರೂಪಂ[4] ತ್ವಪಿ ಪರ್ವತೇಭ್ಯಃ ॥ ೨೨ ॥
ತದೇತದಹ್ನಾ ಸಂಸ್ಥಿತಂ ಭಾತಿ ಸರ್ವಂ
ತದಾತ್ಮವಿತ್ ಪಶ್ಯತಿ ಜ್ಞಾನಯೋಗಾತ್[5] ।
ತಸ್ಮಿನ್ ಜಗತ್ ಸರ್ವಮಿದಂ ಪ್ರತಿಷ್ಠಿತಂ
ಯ ಏತದ್ವಿದುರಮೃತಾಸ್ತೇ ಭವನ್ತಿ ॥ ೨೩ ॥

೨೨-೨೩. ಕತ್ತಲೆಯ ಆಚೆಗೆ ಇರುವ ಅದು ತೆಗೆದುಹಾಕಲು ಅಸಾಧ್ಯವಾದದ್ದು ; ಹಾಗೂ ಪ್ರಲಯಕಾಲದಲ್ಲಿ (ಪ್ರಪಂಚವು) ಅದರಲ್ಲಿ ಯೇ ಕೊನೆಗಾಣುವದು. ಆ (ಬ್ರಹ್ಮವು) ಸೂಕ್ಷ್ಮಗಳೆಲ್ಲಕ್ಕಿಂತ ಸೂಕ್ಷ್ಮ ವಾದದ್ದು ; ಮತ್ತು ಪರ್ವತಗಳಿಗಿಂತ ದೊಡ್ಡದಾದದ್ದು. ಅದು ಬೆಳಕಿನ ರೂಪವಾಗಿರುವದು ; ಎಲ್ಲವನ್ನೂ ಬೆಳಗುವದು. ಆತ್ಮವಿದನು ಜ್ಞಾನ

1. 'ಅಪಾರಣೀಯಂ' 2. 'ತದನ್ತಕೋಽಪ್ಯೇತಿ' ಎಂದು ಪಾ॥

3. 'ಅಣೀಯೋ ರೂಪಂ ಕ್ಷುರಧಾರಯಾ ಸಮಮ್' ಪಾ॥

4. 'ಮಹಚ್ಚ ರೂಪಂ ತದ್ವೈ' ಎಂದು ಪಾ॥

5. ಈ ಶ್ಲೋಕಾರ್ಧವು ಮಹಾಭಾರತದಲ್ಲಿಲ್ಲ. ಇದರ ಬದಲು ಈ ಕೆಳಗಿನ ಶ್ಲೋಕಗಳಿವೆ :- (೧) 'ಸಾ ಪ್ರತಿಷ್ಠಾ ತದಮೃತಂ ಲೋಕಾಸ್ತದ್ಬ್ರಹ್ಮ ತದ್ಯಶಃ । ಭೂತಾನಿ ಜಜ್ಞಿರೇ ತಸ್ಮಾತ್ ಪ್ರಲಯಂ ಯಾನ್ತಿ ತತ್ರ ಹಿ ॥ (೨) ಅನಾಮಯಂ ತನ್ಮಹದುದ್ಯತಂ ಯಶೋ ವಾಚೋ ವಿಕಾರಂ ಕವಯೋ ವದನ್ತಿ ॥

ಯೋಗದಿಂದ ಅದನ್ನು ಕಂಡುಕೊಳ್ಳುವನು. ಅದರಲ್ಲಿ ಈ ಜಗತ್ತೆಲ್ಲವೂ ಇದ್ದುಕೊಂಡಿರುವದು. ಇದನ್ನು ಯಾರು ಬಲ್ಲರೋ ಅವರು ಅಮೃತ ರಾಗುವರು.

(ಭಾಷ್ಯ)

ಇದಾನೀಂ ತತ್ಸ್ವರೂಪಂ ತದ್ದರ್ಶನಂ ತತ್ಫಲಂ ಚ ನಿರ್ದಿಶತಿ ಶ್ಲೋಕ ದ್ವಯೇನ– ಯದಿದಂ ಮಹಾವ್ರತಸ್ಯ ಆತ್ಮನಿ ದೃಶ್ಯತೇ ತತ್ ಅಪಾರಣೀಯಂ ಬ್ರಹ್ಮ, ಸರ್ವಗತತ್ವಾತ್ । ತಮಸಃ ಅಜ್ಞಾನಾತ್ ಪರಸ್ತಾತ್ । ತದ್ಬ್ರಹ್ಮ ಅನ್ತತಃ ಅಭ್ಯೇತಿ ಜಗತ್ ವಿನಾಶಕಾಲೇ ಪ್ರಲಯಕಾಲೇ– ಅಣೀಯರೂಪಂ ಚ ತಥಾಪ್ಯಣೀಯಸಾಂ ಮಹತ್ ಸ್ವರೂಪಂ ತ್ವಪಿ ಪರ್ವತೇಭ್ಯಃ । ಶ್ರೂಯತೇ ಚ– 'ಅಣೋರಣೀಯಾನ್ ಮಹತೋ ಮಹೀಯಾನ್' (ತೈ.ನಾ. ೧೨–೨೬) ಇತಿ । ದೃಶ್ಯನ್ತೇ ಚ ಯೇ ಅಣುತ್ವಮಹತ್ವಾದಯಃ ಲೋಕೇ ತದೇತತ್ ಸರ್ವಂ ಜಗತ್ ಅಹ್ನಾ ಅಹ್ನೋ ರೂಪೇಣ ಪ್ರಕಾಶರೂಪೇಣ ಬ್ರಹ್ಮಣಿ ಸಂಸ್ಥಿತಂ ತದಾತ್ಮನೈವ ಭಾತಿ । ಶ್ರೂಯತೇ ಚ– 'ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮುಂ. ೨–೨–೧೧) ಇತಿ । 'ಯೇನ ಸೂರ್ಯಸ್ತಪತಿ ತೇಜಸೇದ್ಧಃ' (ತೈ.ಬ್ರಾ. ೩–೧೨–೧೯) ಇತಿ ಚ । ತದ್ ಬ್ರಹ್ಮ ಆತ್ಮವಿತ್ ಪಶ್ಯತಿ ಜ್ಞಾನಯೋಗಾತ್, ನ ಕರ್ಮಯೋಗೇನ । ತಸ್ಮಿನ್ ಏವ ಪರಮಾತ್ಮನಿ ಜಗತ್ ಸರ್ವಮಿದಂ ಪ್ರತಿಷ್ಠಿತಮ್ । ಯ ಏತದ್ವಿದುಃ ಅಮೃತಾಸ್ತೇ ಭವನ್ತಿ ॥

(ಭಾಷ್ಯಾರ್ಥ)

ಈಗ ಆ (ಬ್ರಹ್ಮದ) ಸ್ವರೂಪ, ಬ್ರಹ್ಮದ ದರ್ಶನ, ಮತ್ತು ಅದರ ಫಲ ಇವುಗಳನ್ನು ಎರಡು ಶ್ಲೋಕಗಳಿಂದ ಹೇಳುತ್ತಾನೆ– ಮಹಾವ್ರತ(ನಿಷ್ಠ)ನಿಗೆ ತನ್ನಲ್ಲಿಯೇ ಯಾವದು ಕಂಡುಬರುತ್ತಿದೆಯೋ ಅದು ಮೀರಲಸಾಧ್ಯವಾದ[1] ಬ್ರಹ್ಮವು. ಏಕೆಂದರೆ ಅದು ಎಲ್ಲೆಲ್ಲಿಯೂ ಇದ್ದುಕೊಂಡಿದೆ. ತಮಸ್ಸಿನಿಂದ ಎಂದರೆ ಅಜ್ಞಾನದಿಂದ ಆಚೆಗೆ (ಇದೆ). ಜಗತ್ತು ವಿನಾಶಕಾಲ– ಎಂದರೆ ಪ್ರಲಯಕಾಲದಲ್ಲಿ ಆ ಬ್ರಹ್ಮವನ್ನು ಕೊನೆಯದಾಗಿ ಸೇರುತ್ತದೆ. ಅದು ಸಣ್ಣದ ಕ್ಕೆಲ್ಲ ಸಣ್ಣದಾಗಿರುತ್ತದೆ. ಪರ್ವತಗಳಿಗಿಂತ ದೊಡ್ಡ ಸ್ವರೂಪವುಳ್ಳದ್ದಾಗಿದೆ. 'ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವು, ದೊಡ್ಡದಕ್ಕಿಂತಲೂ ದೊಡ್ಡದು' ಎಂದು ಶ್ರುತಿ ಯಲ್ಲಿಯೂ ಹೇಳಿದೆ. ಲೋಕದಲ್ಲಿ ಸೂಕ್ಷ್ಮವಾಗಿರುವ ಮತ್ತು ದೊಡ್ಡದಾಗಿರುವ ಯಾವಯಾವವು ಉಂಟೋ ಅದೆಲ್ಲವೂ, ಇಡಿಯ ಜಗತ್ತೇ ಅಹ್ನಾ ಎಂದರೆ ಹಗಲಿನ

1. ಬ್ರಹ್ಮವನ್ನು ಬಿಟ್ಟು ಯಾವದೊಂದೂ ಇರಲಾರದು.

ರೂಪವಾದ ಪ್ರಕಾಶದಿಂದ ಬ್ರಹ್ಮದಲ್ಲಿದ್ದುಕೊಂಡು ಆ (ಬ್ರಹ್ಮ)ರೂಪವಾಗಿಯೇ ಹೊಳೆಯುತ್ತದೆ. 'ಅದರ ಬೆಳಕಿನಿಂದಲೇ ಇದೆಲ್ಲವೂ ಹೊಳೆಯುತ್ತದೆ' ಎಂದೂ 'ತೇಜಸ್ಸಿನಿಂದ ಉರಿಯುತ್ತಿರುವ ಸೂರ್ಯನು ಏತರಿಂದ ಸುಡುತ್ತಿದಾನೋ (ಅದು ಬ್ರಹ್ಮವು)' ಎಂದೂ ಶ್ರುತಿಯಲ್ಲಿ ಹೇಳಿದೆ. ಆ ಬ್ರಹ್ಮವನ್ನು ಜ್ಞಾನ ಯೋಗದಿಂದ ಆತ್ಮವಿದನು ಕಂಡುಕೊಳ್ಳುತ್ತಾನೆ, ಕರ್ಮಯೋಗದಿಂದ ಅಲ್ಲ. ಆ ಪರಮಾತ್ಮನಲ್ಲಿಯೇ ಈ ಜಗತ್ತೆಲ್ಲವೂ ನೆಲೆನಿಂತಿರುವದು. ಯಾರು ಇದನ್ನು ಅರಿತಿರುವರೋ ಅವರು ಅಮೃತರಾಗುವರು.

ಇತಿ ಶ್ರೀ ಸನತ್ಸುಜಾತೀಯಭಾಷ್ಯೇ ತೃತೀಯೋಽಧ್ಯಾಯಃ

# ನಾಲ್ಕನೆಯ ಅಧ್ಯಾಯ

## ಯೋಗಿಗಳಿಗೆ ಗೋಚರವಾಗುವ ಬ್ರಹ್ಮ

( ಭಾಷ್ಯ )

'ಅವಾರಣೀಯಂ ತಮಸಃ ಪರಸ್ತಾತ್' ಇತ್ಯಾದಿನಾ ಬ್ರಹ್ಮಣೋ ರೂಪಂ ನಿರ್ಧಾರ್ಯ 'ತದಾತ್ಮವಿತ್ ಪಶ್ಯತಿ ಜ್ಞಾನಯೋಗಾತ್' ಇತಿ ಜ್ಞಾನಯೋಗೇನಾತ್ಮದರ್ಶನಮ್ ಉಕ್ತಮ್ । ಪುನರಪಿ ತಸ್ಯ ಸ್ವರೂಪಂ ದರ್ಶಯಿತ್ವಾ ಯೋಗಿನಃ ತದ್ರೂಪಂ ಪಶ್ಯನ್ತೀತ್ಯಾಹ–

( ಭಾಷ್ಯಾರ್ಥ )

'ಮೀರಲು ಅಸಾಧ್ಯವಾದದ್ದಾಗಿ ಕತ್ತಲೆಯ ಆಚೆಗಿರುವ' ಎಂಬಿವೇ ಮುಂತಾದ ಶ್ಲೋಕದಿಂದ ಬ್ರಹ್ಮದ ಸ್ವರೂಪವನ್ನು ನಿಶ್ಚಯಿಸಿ 'ಆತ್ಮಜ್ಞಾನಿಯು ಜ್ಞಾನಯೋಗದಿಂದ ಅದನ್ನು ಕಂಡುಕೊಳ್ಳುವನು' ಎಂದು ಜ್ಞಾನಯೋಗದಿಂದ ಆತ್ಮದರ್ಶನ(ವಾಗುವದೆಂತ) ಹೇಳಿದ್ದಾಗಿದೆ. ಮತ್ತು ಅದರ ಸ್ವರೂಪವನ್ನು ತೋರಿಸಿಕೊಟ್ಟು ಯೋಗಿಗಳು ಆ ರೂಪವನ್ನು ಕಾಣುತ್ತಾರೆಂಬುದನ್ನು ಹೇಳುತ್ತಾನೆ[1]–

**ಯತ್ತಚ್ಛುಕ್ರಂ ಮಹಜ್ಜ್ಯೋತಿಃ ದೀಪ್ಯಮಾನಂ ಮಹದ್ಯಶಃ ।**
**ಯದ್ವೈ[2] ದೇವಾ ಉಪಾಸತೇ ಯಸ್ಮಾದರ್ಕೋ[3] ವಿರಾಜತೇ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್[4] ॥ ೧ ॥**

೧. ಶುದ್ಧವಾದ, ಹೆಚ್ಚಿನ ಬೆಳಕಾದ, ಹೊಳೆಯುತ್ತಿರುವ, ದೊಡ್ಡ ಕೀರ್ತಿರೂಪವಾದ (ಯಾವ ಬ್ರಹ್ಮವುಂಟೋ) ದೇವತೆಗಳು ಯಾವದನ್ನು ಉಪಾಸನೆಮಾಡುತ್ತಾರೋ, ಯಾವದರ (ಸಾನ್ನಿಧ್ಯದಿಂದ) ಸೂರ್ಯನು ಬೆಳಗುತ್ತಿರುವನೋ ಆ (ಪರಬ್ರಹ್ಮವಾದ) ಸನಾತನನಾದ ಭಗವಂತನನ್ನು ಯೋಗಿಗಳು ಕಾಣುತ್ತಾರೆ.

---

1. ಮಹಾಭಾರತದ ಪ್ರಕಾರ ಸನತ್ಸುಜಾತಪರ್ವವು ಆರು ಅಧ್ಯಾಯಗಳುಳ್ಳದ್ದಾಗಿದೆ. ಮೊದಲನೆಯ ಅಧ್ಯಾಯಕ್ಕೂ ಐದನೆಯ ಅಧ್ಯಾಯಕ್ಕೂ ಭಾಷ್ಯಕಾರರು ಭಾಷ್ಯವನ್ನು ಬರೆದಿಲ್ಲ. ಮೊದಲನೆಯ ಅಧ್ಯಾಯವನ್ನು ಪೀಠಿಕಾಪ್ರಕರಣವೆಂತ ಕೈಬಿಟ್ಟಿರಬಹುದು. ಆದರೂ ಐದನೆಯ ಅಧ್ಯಾಯಕ್ಕೆ ಭಾಷ್ಯವಿರಬೇಕಾಗಿತ್ತು. ಇಪ್ಪತ್ತೊಂದು ಪದ್ಯಗಳಿಂದ ಕೂಡಿರುವ, ಭಾಷ್ಯಕಾರರು ವ್ಯಾಖ್ಯಾನಮಾಡದೆ ಬಿಟ್ಟಿರುವ, ಈ ಅಧ್ಯಾಯವನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

2. 'ತದ್ವೈ' 3. 'ತಸ್ಮಾತ್ ಸೂರ್ಯೋ' ಎಂದು ಪಾ॥

4. 'ಯೋಗಿನಸ್ತಂ' ಎಂಬ ಶ್ಲೋಕಾರ್ಧವು ಮುಂದಿನ ಕೆಲವು ಶ್ಲೋಕಗಳಲ್ಲಿ ಯಾೂ ಪಲ್ಲವಿಯಂತೆ ಬಂದಿರುತ್ತದೆ.

(ಭಾಷ್ಯ)

ಯತ್ ಬ್ರಹ್ಮವಿತ್ ಪಶ್ಯತಿ ಜ್ಞಾನಯೋಗಾತ್, ಯತ್ ಜ್ಞಾತ್ವಾ ಅಮೃತಾ ಭವನ್ತಿ, ತತ್ ಶುಕ್ರಂ ಶುದ್ಧಮ್ ಅವಿದ್ಯಾದಿದೋಷರಹಿತಂ ಮಹ ಜ್ಯೋತಿಃ ಸರ್ವಾವಭಾಸಕತ್ವಾತ್ ; ಶ್ರೂಯತೇ ಚ– 'ತಸ್ಯ ಭಾಸಾ ಸರ್ವ ಮಿದಂ ವಿಭಾತಿ' (ಮುಂ. ೨–೨–೧೧) ಇತಿ ದೀಪ್ಯಮಾನಂ ಭ್ರಾಜಮಾನಂ ಮಹದ್ಯಶಃ । ಶ್ರೂಯತೇ ಚ– 'ತಸ್ಯ ನಾಮ ಮಹದ್ಯಶಃ' (ತೈ. ನಾ. ೧–೩) ಇತಿ । ಯದ್ವೈ ಬ್ರಹ್ಮ ದೇವಾಃ ಇನ್ದ್ರಾದಯಃ ಉಪಾಸತೇ । ಶ್ರೂಯತೇ ಚ– 'ತಂ[1] ದೇವಾಃ ಜ್ಯೋತಿಷಾಂ ಜ್ಯೋತಿರಾಯುರ್ಹೋಪಾಸತೇಽಮೃತಮ್' (ಬೃ. ೪–೪–೧೬) ಇತಿ । ಯಸ್ಮಾತ್ ಪರಜ್ಯೋತಿಷೋ ಬ್ರಹ್ಮಣಃ ಅರ್ಕಃ ಆದಿತ್ಯಃ ವಿರಾಜತೇ 'ಯೇನ ಸೂರ್ಯಸ್ತಪತಿ ತೇಜಸೇದ್ಧಃ' (ತೈ. ಬ್ರಾ. ೩-೧೨ ೧೯) ಇತಿ ಶ್ರುತೇಃ । ಏವಂಭೂತಂ ಪರಮಾತ್ಮಾನಂ ಭಗವನ್ತಂ ಸನಾತನಂ ಯೋಗಿನ ಏವ ಪಶ್ಯನ್ತಿ, ನ ಪುನರ್ಜ್ಞಾನಯೋಗರಹಿತಾಃ ॥

( ಭಾಷ್ಯಾರ್ಥ )

ಜ್ಞಾನಯೋಗದಿಂದ ಬ್ರಹ್ಮವಿದನು ಯಾವದನ್ನು ಕಾಣುವನೋ, ಯಾವ ದನ್ನು ಅರಿತು (ಜ್ಞಾನಿಗಳು) ಅಮೃತರಾಗುವರೋ ಅದು ಶುಕ್ರವು- ಶುದ್ಧವು. ಅವಿದ್ಯೆಯೇ ಮುಂತಾದ ದೋಷಗಳಿಲ್ಲದ್ದಾಗಿ ಹೆಚ್ಚಿನ ಬೆಳಕಾಗಿದೆ. (ಏಕೆಂದರೆ) ಅದೇ ಎಲ್ಲವನ್ನೂ ಬೆಳಗುತ್ತದೆ. 'ಅದರ ಬೆಳಕಿನಿಂದಲೇ ಇದೆಲ್ಲವೂ ಬೆಗಳುತ್ತಿದೆ' ಎಂದು ಶ್ರುತಿಯೂ ಇದೆ. (ಅದು) ದೀಪ್ಯಮಾನವಾದ ಎಂದರೆ ಹೊಳೆಯು ತ್ತಿರುವ ಹೆಚ್ಚಿನ ಯಶಸ್ಸಾಗಿದೆ. 'ಆತನ ನಾಮವು ದೊಡ್ಡಯಶಸ್ಸು' ಎಂದು ಶ್ರುತಿಯೂ ಇದೆ. ಯಾವ ಬ್ರಹ್ಮವನ್ನು ಇಂದ್ರನೇ ಮೊದಲಾದ ದೇವತೆಗಳು ಉಪಾಸನೆಮಾಡುವರೋ (ಅದು ಹೆಚ್ಚಿನದು – ಎಂದರ್ಥ). 'ಬೆಳಕುಗಳಿಗೆಲ್ಲ ಬೆಳಕಾದ, ಅಮೃತವಾದ ಅದನ್ನು ದೇವತೆಗಳು ಆಯುಸ್ಸೆಂದು ಉಪಾಸನೆ ಮಾಡುವರು' ಎಂದು ಶ್ರುತಿಯೂ ಇದೆ. ಪರಂಜ್ಯೋತಿಯಾದ ಬ್ರಹ್ಮದ (ಬೆಳಕಿನಿಂದ) ಅರ್ಕನು ಎಂದರೆ ಸೂರ್ಯನು ಪ್ರಕಾಶಿಸುತ್ತಿರುವನೋ (ಅದು ಜ್ಯೋತಿಯು.) 'ಯಾವನ ತೇಜಸ್ಸಿನಿಂದ ವ್ಯಾಪ್ತನಾಗಿ ಸೂರ್ಯನು ತಪಿಸು ತ್ತಿರುವನೋ' ಎಂದು ಶ್ರುತಿಯಿದೆ. ಇಂಥ ಸನಾತನನೂ ಭಗವಂತನೂ ಆದ ಪರಮಾತ್ಮನನ್ನು ಯೋಗಿಗಳು ಮಾತ್ರವೇ ಕಾಣುವರು. ಜ್ಞಾನಯೋಗ(ಬಲ) ವಿಲ್ಲದವರು ಎಂದಿಗೂ ಕಾಣಲಾರರು– (ಎಂದರ್ಥ).

---

1. 'ತತ್' ಎಂದು ಉಪನಿಷತ್ತಿನ ಪಾಠ.

## ಪರಮಾತ್ಮನಿಂದಲೇ ಹಿರಣ್ಯಗರ್ಭನ ಉತ್ಪತ್ತಿ

**ಶುಕ್ರಾದ್ ಬ್ರಹ್ಮ ಪ್ರಭವತಿ ಬ್ರಹ್ಮ ಶುಕ್ರೇಣ ವರ್ಧತೇ ।**
**ತಚ್ಛುಕ್ರಂ ಜ್ಯೋತಿಷಾಂ ಮಧ್ಯೇಽತಪ್ತಂ ತಪತಿ ತಾಪನಮ್ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೨ ॥**

೨. ಶುಕ್ರನಿಂದಲೇ ಬ್ರಹ್ಮವು ಉಂಟಾಗುತ್ತದೆ. ಬ್ರಹ್ಮವು ಶುಕ್ರದಿಂದಲೇ ಬೆಳೆಯುತ್ತದೆ. (ಆದಿತ್ಯನೇ ಮೊದಲಾದ) ಜ್ಯೋತಿಗಳ ನಡುವೆ ಆ ಶುಕ್ರವು ಬೇರಾವ ಜ್ಯೋತಿಯಿಂದಲೂ ಪ್ರಕಾಶಿಸಲ್ಪಡದೆ ಎಲ್ಲಕ್ಕೂ ಬೆಳಕಾಗಿ ತಾನೇ ಬೆಳಗುತ್ತದೆ. ಯೋಗಿಗಳು ಸನಾತನನಾದ ಆ ಭಗವಂತನನ್ನು ಕಂಡುಕೊಳ್ಳುವರು.

(ಭಾಷ್ಯ)

ಇದಾನೀಂ ಪರಸ್ಮಾದೇವ ಬ್ರಹ್ಮಣೋ ಹಿರಣ್ಯಗರ್ಭಾದ್ಯುತ್ಪತ್ತಿಂ ದರ್ಶಯತಿ । ಶುಕ್ರಾತ್ ಶುದ್ಧಾತ್ ಪೂರ್ವೋಕ್ತಾದ್ ಬ್ರಹ್ಮಣಃ ಹಿರಣ್ಯಗರ್ಭಾಖ್ಯಂ ಬ್ರಹ್ಮ ಪ್ರಭವತಿ ಉತ್ಪದ್ಯತೇ । ಅಥೋತ್ಪನ್ನಂ ಬ್ರಹ್ಮ ಶುಕ್ರೇಣ ವರ್ಧತೇ ವಿರಾಡಾತ್ಮನಾ । ತಚ್ಛುಕ್ರಂ ಶುದ್ಧಂ ಬ್ರಹ್ಮ ಜ್ಯೋತಿಷಾಂ ಆದಿತ್ಯಾದೀನಾಂ ಮಧ್ಯೇ ತೈಃ ಅತಪ್ತಮ್ ಅಪ್ರಕಾಶಿತಂ ಸತ್ ತಪತಿ ಸ್ವಯಮೇವ ಪ್ರಕಾಶತೇ, ತೇಷಾಮಪಿ ತಾಪನಂ ಪ್ರಕಾಶಕಮ್ । ಯೋಽನ್ಯಾನವಭಾಸ್ಯಃ ಸರ್ವಾವಭಾಸಕಃ ಸ್ವಯಮೇವಾವಭಾಸತೇ, ತಂ ಭಗವನ್ತಂ ಯೋಗಿನ ಏವ ಪಶ್ಯನ್ತಿ ॥

( ಭಾಷ್ಯಾರ್ಥ )

ಈಗ ಪರಬ್ರಹ್ಮದಿಂದಲೇ ಹಿರಣ್ಯಗರ್ಭನೇ ಮುಂತಾದವರು ಹುಟ್ಟಿರುತ್ತಾರೆಂಬುದನ್ನು ತಿಳಿಸುತ್ತಾನೆ- ಹಿಂದೆ ಹೇಳಿದ ಶುಕ್ರವಾದ, ಎಂದರೆ ಶುದ್ಧವಾದ ಬ್ರಹ್ಮದಿಂದ ಹಿರಣ್ಯಗರ್ಭನೆಂಬ ಹೆಸರಿನ ಬ್ರಹ್ಮವು ಹುಟ್ಟುತ್ತದೆ, ಉಂಟಾಗುತ್ತದೆ. ಇನ್ನು ಹುಟ್ಟಿದ ಆ ಬ್ರಹ್ಮವು ಶುಕ್ರದಿಂದಲೇ ವಿರಾಡಾತ್ಮನಾಗಿ ಬೆಳೆಯುತ್ತದೆ.[1] ಶುಕ್ರನೆಂದರೆ ಶುದ್ಧವಾಗಿರುವ ಆ ಬ್ರಹ್ಮವು ; ಆದಿತ್ಯನೇ ಮೊದಲಾದ ಬೆಳಕುಗಳ ನಡುವೆ ಅತಪ್ತವಾಗಿ ಎಂದರೆ ಯಾವ ಮತ್ತೊಂದು ಬೆಳಕಿನಿಂದಲೂ ಪ್ರಕಾಶಿಸಲ್ಪಡದೆ ತಾನೇ ಬೆಳಗುತ್ತದೆ. (ಅದು) ಅವುಗಳಿಗೂ ಪ್ರಕಾಶಕವು. ಯಾವದು ಬೇರೊಂದರಿಂದ ಬೆಳಗಲ್ಪಡುವದಿಲ್ಲವೋ (ತಾನೇ) ಎಲ್ಲವನ್ನೂ ಬೆಳಗುವದೋ ತಾನೊಂದೇ ಪ್ರಕಾಶಿಸುತ್ತಿರುವದೋ, ಅಂಥ ಭಗವಂತನನ್ನು ಯೋಗಿಗಳು ಮಾತ್ರವೇ ಕಾಣುವರು.

1. ಹಿರಣ್ಯಗರ್ಭನೆಂಬುದು ಸೂಕ್ಷ್ಮೋಪಾಧಿಯು; ವಿರಾಟ್ ಎಂಬುದು ಸ್ಥೂಲೋಪಾಧಿಯು. ಎರಡೂ ಬ್ರಹ್ಮದ ಕಾರ್ಯನೇ ಎಂದರ್ಥ.

# ಪೂರ್ಣಬ್ರಹ್ಮವರ್ಣನೆ

**ಪೂರ್ಣಾತ್ ಪೂರ್ಣಮುದ್ಧರನ್ತಿ[1] ಪೂರ್ಣಾತ್ ಪೂರ್ಣಂ ಪ್ರಚಕ್ಷತೇ[2]।**
**ಹರನ್ತಿ ಪೂರ್ಣಾತ್ ಪೂರ್ಣಂ ಚ[3] ಪೂರ್ಣೇನೈವಾ[4]ವಶಿಷ್ಯತೇ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೩ ॥**

೩. ಪೂರ್ಣದಿಂದ ಪೂರ್ಣನನ್ನು ಎತ್ತಿ ತೆಗೆಯುವರು. ಪೂರ್ಣನಿಂದ ತೆಗೆದದ್ದರಿಂದಲೇ ಪೂರ್ಣನೆನ್ನುವರು. ಪೂರ್ಣನನ್ನು ಪೂರ್ಣನಿಂದಲೇ ಉದ್ಧರಿಸುತ್ತಾರೆ. ಪೂರ್ಣವಾಗಿಯೇ (ಆಗ) ಉಳಿದುಕೊಳ್ಳುವದು. ಸನಾತನನಾದ ಆ ಭಗವಂತನನ್ನು ಯೋಗಿಗಳು ಕಾಣುವರು.

( ಭಾಷ್ಯ )

ಇದಾನೀಂ ಪೂರ್ಣವಾಕ್ಯಾರ್ಥಂ ಕಥಯತಿ । ಪೂರ್ಣಾತ್ ದೇಶತಃ ಕಾಲತೋ ವಸ್ತುತಶ್ಚ ಅಪರಿಚ್ಛಿನ್ನಾತ್ ಪರಮಾತ್ಮನಃ ಪೂರ್ಣಮೇವ ಉದ್ಧರನ್ತಿ ಜೀವರೂಪೇಣ । ಯತ್ ಪೂರ್ಣಾತ್ ಪೂರ್ಣಮುದ್ಧೃತಂ ಜೀವಾತ್ಮನಾ ಅತಃ ಪೂರ್ಣಾತ್ ಉದ್ಧೃತತ್ವಾದೇವ ಇದಮಪಿ ಜೀವಸ್ವರೂಪಂ ಪೂರ್ಣಮೇವ ಪ್ರಚಕ್ಷತೇ ವಿದ್ವಾಂಸಃ । ತಥಾ ಹರನ್ತಿ ಪೂರ್ಣಾತ್ ಜೀವಾತ್ಮನಾಽವಸ್ಥಿತಾತ್ ಪೂರ್ಣಮ್ ಆತ್ಮಸ್ವರೂಪಮಾತ್ರಂ ದೇಹೇನ್ದ್ರಿಯಾದ್ಯನುಪ್ರವಿಷ್ಟಂ ದೇಹೇನ್ದ್ರಿಯಾದಿಭ್ಯೋ ನಿಷ್ಕೃಷ್ಯ ತತ್ಸಾಕ್ಷಿಣಂ ಸರ್ವಾನ್ತರಂ ದೇಹದ್ವಯಾದುದ್ಧರನ್ತೀತ್ಯರ್ಥಃ । ತತಃ ಉದ್ಧೃತೇನೈವ ಮೂಲಭೂತೇನ ಪೂರ್ಣಾನನ್ದೇನ ಅವಶಿಷ್ಯತೇ ತೇನೈವ ಪೂರ್ಣಾನನ್ದೇನ ಬ್ರಹ್ಮಣಾ ಸಂಯುಜ್ಯತೇ ಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನಾ ಅವತಿಷ್ಠತೇ ಇತ್ಯರ್ಥಃ । 'ಪೂರ್ಣಮೇವಾವಶಿಷ್ಯತೇ' ಇತಿ ವಾ ಪಾಠಃ । ಯದಾ ದೇಹೇನ್ದ್ರಿಯಾದಿಭ್ಯೋ ನಿಷ್ಕೃಷ್ಯ ತತ್ಸಾಕ್ಷಿಣಂ ಸರ್ವಾನ್ತರಂ ದೇಹದ್ವಯಾದುದ್ಧರನ್ತಿ, ತಥಾ ಪೂರ್ಣಮೇವಾವಶಿಷ್ಯತ ಇತ್ಯರ್ಥಃ । ತಥಾ- ಚ ಶ್ರುತಿಃ– 'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ' (ಬೃ. ೫-೧-೧) ಇತಿ ॥

ಅಸ್ಯಾಯಮರ್ಥಃ । ಪೂರ್ಣಮ್ ಅದಃ ತಚ್ಛಬ್ದವಾಚ್ಯಂ ಜಗತ್ಕಾರಣಂ ಬ್ರಹ್ಮ । ಪೂರ್ಣಮಿದಂ ತ್ವಂಶಬ್ದನಿರ್ದಿಷ್ಟಂ ಪ್ರತ್ಯಗಾತ್ಮಸ್ವರೂಪಮ್ । ಅನಯೋಸ್ತತ್ತ್ವಂಪದಾರ್ಥಯೋಃ ಕಥಂ ಪೂರ್ಣತ್ವಮಿತಿ ಚೇತ್, ತತ್ರಾಹ–

---

1. 'ಪೂರ್ಣಾನ್ಯುದ್ಧರನ್ತಿ' 2. 'ಪೂರ್ಣಾನಿ ಚಕ್ರಿರೇ' 3. 'ಪೂರ್ಣಾನಿ'
4. 'ಪೂರ್ಣಮೇವ' ಎಂದು ಪಾ॥. ಮಹಾಭಾರತದಲ್ಲಿ ಈ ಶ್ಲೋಕವು ಹತ್ತನೆಯದಾಗಿದೆ. ಇದನ್ನು ಬೃಹ. ೫–೧–೧ಕ್ಕೆ ಹೋಲಿಸಿರಿ.

ಪೂರ್ಣಾತ್ ಅನವಚ್ಛಿನ್ನಾತ್ ಪೂರ್ಣಮೇವೋದಚ್ಯತೇ ಉದ್ರಿಚ್ಯತೇ ಜೀವೇಶ್ವರ ಸ್ವರೂಪೇಣ ಯಸ್ಮಾತ್ ತಸ್ಮಾದನಯೋಃ ಪೂರ್ಣತ್ವಮಿತ್ಯರ್ಥಃ | ಪೂರ್ಣಸ್ಯ ತತ್ತ್ವಮ್ ಆತ್ಮನಾಽವಸ್ಥಿತಸ್ಯ ಪೂರ್ಣಂ ರೂಪಮಾದಾಯ ತತ್ತ್ವಂಪದಾರ್ಥ ಶೋಧನಂ ಕೃತ್ವಾ ಶೋಧಿತಪದಾರ್ಥಃ ಸನ್ ಇತ್ಯರ್ಥಃ | ಪೂರ್ಣಮೇವ ಬ್ರಹ್ಮ ಅವಶಿಷ್ಯತೇ ಪೂರ್ಣಮೇವ ಬ್ರಹ್ಮ ಭವತೀತ್ಯರ್ಥಃ | ಯಃ ಪೂರ್ಣಸ್ವರೂಪಃ ತಂ ಪರಮಾತ್ಮಾನಂ ಯೋಗಿನ ಏವ ಪಶ್ಯನ್ತಿ ||

( ಭಾಷ್ಯಾರ್ಥ )

ಈಗ ಪೂರ್ಣವೆಂಬ (ಬ್ರಹ್ಮದ) ವಾಕ್ಯಾರ್ಥವನ್ನು ಹೇಳುತ್ತಾನೆ. ದೇಶ, ಕಾಲ, ವಸ್ತುಗಳಿಂದ ಕಡಿವಡೆಯದಿರುವ ಪರಮಾತ್ಮನಿಂದ, ಪೂರ್ಣವಾಗಿಯೇ (ಆತ್ಮನನ್ನು ) ಜೀವರೂಪದಿಂದ ಉದ್ಧರಿಸುವರು. ಪೂರ್ಣದಿಂದ ಜೀವಾತ್ಮ ರೂಪನಾದ ಪೂರ್ಣನು ಎತ್ತಲ್ಪಟ್ಟಿರುವನಷ್ಟೆ ! ಆದ್ದರಿಂದ, ಪೂರ್ಣದಿಂದ ಉದ್ಧೃತನಾದ್ದರಿಂದಲೇ ಈ ಜೀವಸ್ವರೂಪವನ್ನು ವಿದ್ವಾಂಸರು ಪೂರ್ಣವೆಂದೇ ಕರೆಯುತ್ತಾರೆ. ಹಾಗೆಯೇ ಜೀವಾತ್ಮರೂಪದಿಂದ ಇದ್ದುಕೊಂಡಿರುವ ಪೂರ್ಣ ನಿಂದ ದೇಹೇಂದ್ರಿಯಾದ್ಯುಪಾಧಿಗಳಲ್ಲಿ ಒಳಹೊಕ್ಕಿರುವ ಪೂರ್ಣನನ್ನು ದೇಹೇಂದ್ರಿಯಾದಿಗಳಿಂದ ಬಿಂಗಡಿಸಿ ಅವುಗಳಿಗೆ ಸಾಕ್ಷಿಯೂ ಸರ್ವಾಂತರನೂ ಆದ (ಆತ್ಮನನ್ನು) ಎರಡು ದೇಹಗಳಿಂದಲೂ[1] ಮೇಲಕ್ಕೆ ಎತ್ತುವರು. ಅನಂತರ (ಎಲ್ಲಿಂದ) ಎತ್ತಲ್ಪಟ್ಟಿತೋ ಆ ಮೂಲರೂಪವಾದರೊ, ಪೂರ್ಣಾನಂದ ವಾಗಿಯೇ ಉಳಿದುಕೊಳ್ಳುವದು– ಎಂದರೆ ಪೂರ್ಣಾನಂದರೂಪವಾದ ಬ್ರಹ್ಮ ದೊಡನೆ ಒಂದಾಗುವದು. ಚಿತ್ಸದಾನಂದನೂ ಅದ್ವಿತೀಯನೂ ಆದ ಬ್ರಹ್ಮಾತ್ಮ ರೂಪದಿಂದ ನೆಲೆನಿಲ್ಲುವನು– ಎಂದರ್ಥ. ಪೂರ್ಣಮೇವಾವಶಿಷ್ಯತೇ– ಎಂದೂ (ಪೂರ್ಣೇನೈವ-) ಎಂಬುದಕ್ಕೆ ಬದಲಾಗಿ ಪಾಠವಿದೆ. ದೇಹೇಂದ್ರಿಯಾದಿಗಳ ಗುಂಪಿನಿಂದ ಮೇಲಕ್ಕೆತ್ತಿ ಅವುಗಳ ಸಾಕ್ಷಿಯೂ ಸರ್ವಾಂತರನೂ (ಆದ ಆತ್ಮ ನನ್ನು ) ಎರಡು ದೇಹಗಳಿಂದ ಉದ್ಧರಿಸುವರೋ, ಆಗ ಪೂರ್ಣವೇ ಉಳಿದು ಕೊಳ್ಳುತ್ತದೆ- ಎಂದರ್ಥ. ಶ್ರುತಿಯೂ ಕೂಡ– 'ಅದು ಪೂರ್ಣವು ; ಇದು ಪೂರ್ಣವು ; ಪೂರ್ಣದಿಂದ ಪೂರ್ಣವು ಎದ್ದುಕೊಳ್ಳುತ್ತದೆ. ಪೂರ್ಣದ ಪೂರ್ಣ ವನ್ನು ತೆಗೆದುಕೊಂಡರೆ ಪೂರ್ಣವೇ ಉಳಿಯುತ್ತದೆ'– ಎಂದು ಹೇಳಿದೆ.

ಇದರ ಅರ್ಥವು ಹೀಗಿದೆ :– ತತ್ ಎಂಬ ಶಬ್ದಕ್ಕೆ ವಾಚ್ಯವಾದ ಅದು ಪೂರ್ಣವು ಎಂದರೆ ಜಗತ್ಕಾರಣವಾದ ಬ್ರಹ್ಮವು. ತ್ವಂ ಎಂಬ ಶಬ್ದದಿಂದ ತಿಳಿದುಬರುವ ಇದು ಎಂದರೆ ಪ್ರತ್ಯಗಾತ್ಮಸ್ವರೂಪವು ಪೂರ್ಣವು. ಈ ತತ್ತ್ವಂ ಪದಾರ್ಥಗಳಿಗೆ ಪೂರ್ಣತ್ವವು ಹೇಗೆ ? ಎಂದರೆ – ಹೇಳುತ್ತಾನೆ. ಪರಿಚ್ಛಿನ್ನ

1. 'ಸ್ಥೂಲಸೂಕ್ಷ್ಮದೇಹಗಳಿಂದ– ಎಂದಭಿಪ್ರಾಯ.

ವಲ್ಲದ ಪೂರ್ಣದಿಂದ ಪೂರ್ಣವೇ ಮೇಲಕ್ಕೆ ಬರುತ್ತದೆ– ಎಂದರೆ ಹೆಚ್ಚಿನದಾಗಿ ತೋರುತ್ತದೆ. (ಹೀಗೆ) ಜೀವ, ಈಶ್ವರ– ಎಂಬ ರೂಪದಿಂದ ತೋರಿಕೊಳ್ಳುವದರಿಂದ ಇವೆರಡಕ್ಕೂ ಪೂರ್ಣತ್ವವು– ಎಂದಭಿಪ್ರಾಯ. ತತ್, ತ್ವಮ್– ಎಂಬ ರೂಪದಿಂದಿರುವ ಪೂರ್ಣದ ಪೂರ್ಣರೂಪವನ್ನು ತೆಗೆದುಕೊಂಡು, ತತ್ತ್ವಂ ಪದಾರ್ಥಗಳ ಶೋಧನಮಾಡಿಕೊಂಡು ಎಂದರೆ ಪದಗಳ ಅರ್ಥವನ್ನು ಶೋಧನೆ ಮಾಡಿಕೊಂಡವನಾಗಿ ಎಂದರ್ಥ. ಪೂರ್ಣವಾದ ಬ್ರಹ್ಮವೇ (ಆಗಿ) ಉಳಿದುಕೊಳ್ಳುತ್ತಾನೆ. ಪೂರ್ಣಬ್ರಹ್ಮವೇ ಆಗುತ್ತಾನೆ. ಪೂರ್ಣಸ್ವರೂಪವಾದ ಯಾವ ಬ್ರಹ್ಮವಿದೆಯೋ ಆ ಪರಮಾತ್ಮನನ್ನು ಯೋಗಿಗಳುಮಾತ್ರವೇ ಕಂಡುಕೊಳ್ಳುತ್ತಾರೆ.

## 'ದ್ವಾ ಸುಪರ್ಣಾ' ಎಂಬ ಮಂತ್ರದ ಅರ್ಥ

**ಅಪೋಽಥಾದ್ಭ್ಯಃ[1] ಸಲಿಲಂ ತಸ್ಯ[2] ಮಧ್ಯೇ**
**ಉಭೌ ದೇವೌ ಶಿಶ್ರಿಯಾತೇಽನ್ತರಿಕ್ಷೇ ।**
**ಆದಧ್ರೀಚೀಃ ಸವಿಷೂಚೀರ್ವಸಾನಾ[3]**
**ವುಭೌ ಬಿಭರ್ತಿ ಪೃಥಿವೀಂ ದಿವಂ ಚ** || ೪ ||

೪. ಅಪ್ಪು (ಮೊದಲು ;) ಅಪ್ಪಿನಿಂದ ಸಲಿಲವು (ಭೂತಪಂಚಕಗಳು) ಅದರ ಮಧ್ಯೆ ಹೃದಯಾಕಾಶದಲ್ಲಿ ಇಬ್ಬರು ದೇವರು ಆಶ್ರಯಿಸಿಕೊಂಡಿರುವರು. ವಿದಿಕ್ಕುಗಳೊಡಗೂಡಿದ ದಿಕ್ಕುಗಳಲ್ಲೆಲ್ಲ ವಾಸಮಾಡುತ್ತಾ ಇಬ್ಬರೂ ಪೃಥಿವಿಯನ್ನೂ ದ್ಯುಲೋಕವನ್ನೂ ಧರಿಸಿರುತ್ತಾರೆ. ಆ ಸನಾತನನಾದ ಭಗವಂತನನ್ನು ಯೋಗಿಗಳು ಕಾಣುವರು.

( ಭಾಷ್ಯ )

ಇದಾನೀಂ ದ್ವಾ ಸುಪರ್ಣೇತಿ ಮನ್ತ್ರಾರ್ಥಂ ಕಥಯತಿ । ಅಸ್ಮಾತ್ ಪರಮಾತ್ಮನಃ ಆಪಃ ಪ್ರಥಮಂ ಸೃಷ್ಟಾಃ । ತಥಾ ಚಾಹ ಮನುಃ– 'ಅಪ ಏವ ಸಸರ್ಜಾದೌ' (ಮನು. ೧–೮) ಇತಿ । ಭೂತಪಞ್ಚಕೋಪಲಕ್ಷಣಾರ್ಥಃ ಅಪ್ ಶಬ್ದಃ । ಅನೇನ ಸೂಕ್ಷ್ಮಸೃಷ್ಟಿರಭಿಹಿತಾ । ಅಥ ಅನನ್ತರಮ್ ಅದ್ಭ್ಯಃ ಪೂರ್ವಸೃಷ್ಟಾಭ್ಯಃ ಸಲಿಲಂ ಭೂತಪಞ್ಚಕಾತ್ಮಕಮ್ ಸ್ಥೂಲದೇಹಾದಿಕಮ್ ಸೃಷ್ಟಮ್। ತಸ್ಯ ಸಲಿಲಸ್ಯ ದೇಹಾತ್ಮನಾವಸ್ಥಿತಸ್ಯ ಮಧ್ಯೇ ಅನ್ತರಿಕ್ಷೇ ಹೃದಯಾಕಾಶೇ ಉಭೌ ಜೀವಪರಮಾತ್ಮಾನೌ ದೇವೌ ದ್ಯೋತನಸ್ವಭಾವೌ ಶಿಶ್ರಿಯಾತೇ

---

1. 'ಅಪೋಽಥಾದ್ಭ್ಯಃ' 2. 'ಸಲಿಲಸ್ಯ'
3. 'ಆತನ್ದ್ರಿತಃ ಸವಿತುರ್ವಿವಸ್ವಾನ್' ಎಂದು ಮು॥ಭಾ॥ ಪಾಠಗಳು.

ವರ್ತೇತೇ । ನ ಕೇವಲಮನ್ತರಿಕ್ಷ ಏವ ಶಿಶ್ರಿಯಾತೇ ಆದಧ್ರೀಚೀಃ ಸವಿಷೂಚೀಃ ವಸಾನೌ ಆಭಿಮುಖ್ಯೇನ ಧ್ರಿಯಮಾಣಾ ವಾ ಸ್ಥಿತಾ ವಾ ಅಞ್ಚನ್ತೀತಿ ಆದಧ್ರೀಚ್ಯಃ ದಿಶಃ, ವಿಷೂಚ್ಯಃ ಉಪದಿಶಃ, ವಿಷ್ವಗ್ಗಮನಾತ್, ತಾಭಿಃ ಸಹ ವರ್ತನ್ತ ಇತಿ ಸವಿಷೂಚ್ಯಃ ಪ್ರಾಚ್ಯಾದ್ಯಾಃ ಸರ್ವಾ ದಿಶಃ ವಸಾನೌ ಆಚ್ಛಾದಯನ್ತೌ ಉಭೌ ಬಿಭರ್ತಿ ಪೃಥಿವೀಂ ದಿವಂ ಚ ಏಕೋ ಜೀವಃ ಆತ್ಮನಃ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮತತ್ತ್ವಮನವಗಮ್ಯ ಅನಾತ್ಮನಿ ದೇಹಾದಾವಾತ್ಮಭಾವಮಾಪನ್ನಃ ಪೃಥಿವೀಂ ಭೂತಭೌತಿಕಲಕ್ಷಣಂ ಕರ್ಮಫಲಾನುರೂಪಂ ಸುಖದುಃಖಾತ್ಮಕದೇಹಾದಿಕಂ ಬಿಭರ್ತಿ । ಅಪರೋ ದಿವಂ ದ್ಯೋತನಾತ್ಮಕಂ ಸ್ವಾತ್ಮರೂಪಂ ಬಿಭರ್ತಿ । ಶ್ರೂಯತೇ ಚ– 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ' (ಮುಂ. ೩–೧–೧) ಇತಿ । ಯಃ ಸ್ವಾತ್ಮಮಾಯಯಾ ಸ್ವಮಾತ್ಮಾನಂ ಪ್ರಾಣಾದ್ಯನನ್ತಭೇದಂ ಕೃತ್ವಾ ಅನ್ತರಾನುಪ್ರವಿಶ್ಯ ಅಭಿಪಶ್ಯನ್ ಆಸ್ತೇ ತಂ ಭಗವನ್ತಂ ಯೋಗಿನ ಏವ ಪಶ್ಯನ್ತಿ ॥

(ಭಾಷ್ಯಾರ್ಥ)

ಈಗ 'ದ್ವಾ ಸುಪರ್ಣಾ' ಎಂಬ ಮಂತ್ರಾರ್ಥವನ್ನು ಹೇಳುತ್ತಾನೆ : ಈ ಪರಮಾತ್ಮನಿಂದ ನೀರು ಮೊದಲು ಸೃಷ್ಟಿಯಾಯಿತು. ಮನುವೂಕೂಡ 'ನೀರನ್ನೇ ಮೊದಲು ಸೃಷ್ಟಿಸಿದನು' ಎಂದು ಹೇಳಿದ್ದಾನೆ. 'ಅಪ್' ಎಂಬ ಶಬ್ದವು ಐದು ಭೂತಗಳನ್ನೂ ಸೂಚಿಸುತ್ತದೆ. ಇದರಿಂದ ಸೂಕ್ಷ್ಮಸೃಷ್ಟಿಯನ್ನು[1] ಹೇಳಿದಂತಾಯಿತು. ಇನ್ನು ಎಂದರೆ ಅನಂತರ ಹಿಂದೆ ಸೃಷ್ಟಿಮಾಡಿದ್ದ ಅಪ್ಪಿನಿಂದ ಪಂಚಭೂತಾತ್ಮಕವಾದ ಸಲಿಲವು– ಎಂದರೆ ಸ್ಥೂಲದೇಹಾದಿಗಳು ಸೃಷ್ಟವಾದವು. ದೇಹಾತ್ಮರೂಪದಿಂದಿರುವ ಆ ಸಲಿಲಮಧ್ಯದಲ್ಲಿ(ರುವ) ಹೃದಯಾಕಾಶವೆಂಬ ಅಂತರಿಕ್ಷದಲ್ಲಿ ಜೀವಪರಮಾತ್ಮರೆಂಬ ಈ ಇಬ್ಬರು ಪ್ರಕಾಶಮಾನಸ್ವಭಾವರಾದ ದೇವರುಗಳು ಆಶ್ರಯಿಸಿರುತ್ತಾರೆ. ಇದ್ದುಕೊಂಡಿರುತ್ತಾರೆ. ಅಂತರಿಕ್ಷದಲ್ಲಿ ಮಾತ್ರವೇ ಅಲ್ಲ, ಸವಿಷೂಚಿಗಳಾದ ಆದಧ್ರೀಚಿಗಳಲ್ಲಿಯೂ, ಎಂದರೆ ಎದುರಾಗಿದ್ದು (ಎಲ್ಲವನ್ನೂ) ಧರಿಸಿರುವವಾಗಿವೆ ಅಥವಾ ವ್ಯಕ್ತವಾಗಿ ಇದ್ದುಕೊಂಡಿವೆ ಎಂಬರ್ಥದಲ್ಲಿ ಆದಧ್ರೀಚಿಗಳೆಂದರೆ (ಪೂರ್ವಾದಿ)ದಿಕ್ಕುಗಳು ; ವಿಷೂಚಿಗಳೆಂದರೆ (ಆಗ್ನೇಯಾದಿ) ಉಪದಿಕ್ಕುಗಳು. (ಏಕೆಂದರೆ ಇವು) ವಿರುದ್ಧವಾದ ಗಮನವುಳ್ಳವಾಗಿವೆ. ಇವುಗಳೊಡನೆ ಇದ್ದುಕೊಂಡಿರುವವೇ ಸವಿಷೂಚಿಗಳು– ಪೂರ್ವವೇ ಮುಂತಾದ ಎಲ್ಲಾ ದಿಕ್ಕುಗಳು. ಇವುಗಳಲ್ಲಿ ವಾಸಮಾಡಿಕೊಂಡಿರುವ– ಎಂದರೆ

1. ತನ್ಮಾತ್ರೆಗಳ ಸೃಷ್ಟಿಯನ್ನು ಹೇಳಿದಂತಾಗಿದೆ.

ಪೃಥಿವಿ ಮತ್ತು ದ್ಯುಲೋಕವನ್ನು ಹರಡಿಕೊಂಡಿರುವವರಾಗಿರುತ್ತಾರೆ. (ಇವರಲ್ಲಿ) ಒಬ್ಬನಾದ ಜೀವನು ತನ್ನ ಸ್ವಾಭಾವಿಕವಾದ ಸಚ್ಚಿದಾನಂದಾದ್ವಿತೀಯವಾದ ಬ್ರಹ್ಮಾತ್ಮತತ್ತ್ವವನ್ನು ಅರಿತುಕೊಳ್ಳದೆ ಅನಾತ್ಮವಾದ ದೇಹಾದಿಗಳಲ್ಲಿ ಆತ್ಮ ಭಾವವನ್ನು ಹೊಂದಿ ಪೃಥಿವಿಯನ್ನು– ಎಂದರೆ ಭೂತಭೌತಿಕರೂಪವಾದ, ಕರ್ಮ ಫಲಕ್ಕೆ ತಕ್ಕ ಸುಖದುಃಖಾತ್ಮಕವಾದ ದೇಹಾದಿಗಳನ್ನು ಧರಿಸಿದ್ದಾನೆ. ಮತ್ತೊಬ್ಬನು ದಿವವನ್ನು– ಎಂದರೆ ಪ್ರಕಾಶರೂಪವಾದ ತನ್ನ ಆತ್ಮಸ್ವರೂಪವನ್ನು ಧರಿಸಿದ್ದಾನೆ. ಶ್ರುತಿಯಲ್ಲಿಯೂ 'ಜೊತೆಯಲ್ಲಿಯೇ ಇರುವ ಸಖರಾಗಿರುವ ಎರಡು ಸುಪರ್ಣಗಳು ಒಂದೇ ವೃಕ್ಷವನ್ನು ಆಲಂಗಿಸಿಕೊಂಡಿವೆ ; ಇವುಗಳಲ್ಲಿ ಒಂದು ರುಚಿಯಾದ ಪಿಪ್ಪಲವನ್ನು ತಿನ್ನುತ್ತಿದೆ. ಇನ್ನೊಂದು ತಿನ್ನದೆ ನೋಡುತ್ತಿದೆ'– ಎಂದು (ಹೇಳಿದೆ). ಯಾವನು ತನ್ನ ಆತ್ಮಮಾಯೆಯಿಂದ ತನ್ನ ಆತ್ಮನನ್ನು ಪ್ರಾಣನೇ ಮುಂತಾದ ಅನೇಕಭೇದಗಳಾಗಿ ಮಾಡಿಕೊಂಡು ಒಳ ಹೊಕ್ಕು ನೋಡುತ್ತಾ ಇದ್ದುಕೊಂಡಿರುವನೋ ಆ ಭಗವಂತನನ್ನು ಯೋಗಿಗಳು ಮಾತ್ರವೇ ಕಾಣುವರು.

## ಜ್ಞಾನಿಯು ಬ್ರಹ್ಮವನ್ನೇ ಸೇರುವನು

**ಚಕ್ರೇ ರಥಸ್ಯ ತಿಷ್ಠನ್ತಂ ಧ್ರುವಸ್ಯಾವ್ಯಯಕರ್ಮಣಃ ।**
**ಕೇತುಮನ್ತಂ ವಹನ್ತ್ಯಶ್ವಾಸ್ತಂ ದಿವ್ಯಮಜರಂ ದಿವಿ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೫ ॥**

೫. ಧ್ರುವನೂ ಅವ್ಯಯಕರ್ಮನೂ ಆದ (ಭಗವಂತನ) ತ್ರಿಲೋಕ ಶರೀರವೆಂಬ ರಥದ ದೇಹದಲ್ಲಿ ಇದ್ದುಕೊಂಡಿರುವ ಪ್ರಜ್ಞಾವಂತನನ್ನು, ದಿವ್ಯವೂ ಅಜರವೂ ಪ್ರಕಾಶರೂಪವೂ ಆದ ಬ್ರಹ್ಮದ ಬಳಿಗೆ (ಅವನ ಇಂದ್ರಿಯಗಳೆಂಬ) ಕುದುರೆಗಳು ಕೊಂಡೊಯ್ಯುವವು. ಸನಾತನನಾದ ಆ ಭಗವಂತನನ್ನು ಯೋಗಿಗಳು ಕಾಣುವರು.

**(ಭಾಷ್ಯ)**

ಇದಾನೀಂ ಜ್ಞಾನಿನಃ ಸ್ವಾತ್ಮನ್ಯವಸ್ಥಾನಂ ದರ್ಶಯತಿ । ಧ್ರುವಸ್ಯ ಅವ್ಯಯಕರ್ಮಣಃ ಪರಮೇಶ್ವರಸ್ಯ ಜೀಶ್ವರಾತ್ಮನಾವಸ್ಥಿತಸ್ಯ ರಥಸ್ಯ ಶರೀರಸ್ಯ ತ್ರೈಲೋಕ್ಯಾತ್ಮನಾವಸ್ಥಿತಸ್ಯ ಚಕ್ರೇ ಚಂಕ್ರಮಣಾತ್ಮಕೇ ದೇಹೇ ತಿಷ್ಠನ್ತಂ ಕೇತುಮನ್ತಂ ಪ್ರಜ್ಞಾವನ್ತಂ ಅತ ಏವ ಚ ದಿವ್ಯಮ್ ಅಪ್ರಾಕೃತಂ ಜರಾಮರಣಾದಿವಿವರ್ಜಿತಂ ದಿವಿ ದ್ಯೋತನಾತ್ಮಕೇ ಅನುದಿತಾನಸ್ತಮಿತಜ್ಞಾನಾತ್ಮನಾವಸ್ಥಿತೇ ಪೂರ್ಣಾನನ್ದೇ ಬ್ರಹ್ಮಣಿ ವಹನ್ತಿ ಅಶ್ವಾಃ ಇನ್ದ್ರಿಯಾಣಿ । ಏತದುಕ್ತಂ ಭವತಿ । ಯದ್ಯಪೀನ್ದ್ರಿಯಾಣಿ ಸ್ವಭಾವತೋ ವಿಷಯೇಷ್ವೇವ ವರ್ತನ್ತೇ,

ತಥಾಪಿ ವಿಜ್ಞಾನಸಾರಥಿನಾ ಸಮಾಕೃಷ್ಯಮಾಣಾನಿ ಕೇತುಮನ್ತಂ ಪುರುಷಂ ದಿವ್ಯೇವ ವಹನ್ತಿ ನ ಪರಾಗ್ವಿಷಯೇ ಇತಿ । ತದುಕ್ತಂ ಕಠವಲ್ಲೀಷು– 'ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು । ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥ ಇನ್ದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ । ಆತ್ಮೇನ್ದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥' (ಕಾ. ೧–೩–೩, ೪) ಇತ್ಯಾದಿನಾ । ಯತ್ರ ಪರಮಾತ್ಮನಿ ವಹನ್ತಿ ತಪಸಾ ತಂ ಭಗವನ್ತಂ ಯೋಗಿನ ಏವ ಪಶ್ಯನ್ತಿ ॥

(ಭಾಷ್ಯಾರ್ಥ)

ಈಗ ಜ್ಞಾನಿಯು ತನ್ನ ಸ್ವರೂಪದಲ್ಲಿ ನೆಲೆನಿಲ್ಲುವದೆಂಬುದನ್ನು ತಿಳಿಸುತ್ತಾರೆ: ಶಾಶ್ವತನೂ ನಾಶವಿಲ್ಲದ ಕರ್ಮನೂ ಆದ ಪರಮೇಶ್ವರನ– ಎಂದರೆ ತ್ರೈಲೋಕ್ಯಶರೀರಾತ್ಮನಾಗಿದ್ದುಕೊಂಡು (ಅವುಗಳ) ಒಡೆಯನೂ ಆಗಿರುವ (ಭಗವಂತನ ವಿರಾಟ್)ಶರೀರದ ಚಕ್ರದಲ್ಲಿ ಎಂದರೆ ಚಲನವುಳ್ಳ ದೇಹದಲ್ಲಿ ಇದ್ದುಕೊಂಡಿರುವ ಕೇತುಮಂತನಾದ ಎಂದರೆ ಪ್ರಜ್ಞಾವಂತನಾದ (ಈ ಜ್ಞಾನಿಯನ್ನು) (ಎಂದರ್ಥ). ಆದ್ದರಿಂದಲೇ ದಿವ್ಯನಾದ, ಅಪ್ರಾಕೃತನಾದ, ಮುಪ್ಪು, ಸಾವು– ಮುಂತಾದವುಗಳಿಲ್ಲದ(ವನನ್ನಾಗಿ) ಮಾಡುವ, ಪ್ರಕಾಶಸ್ವರೂಪವಾದ ದ್ಯುಲೋಕದಲ್ಲಿ ಉದಯಾಸ್ತಮಯಗಳಿಲ್ಲದ ಜ್ಞಾನಸ್ವರೂಪದಿಂದ ಇದ್ದುಕೊಂಡಿರುವ, ಪೂರ್ಣಾನಂದರೂಪವಾದ ಬ್ರಹ್ಮದಲ್ಲಿಗೆ, ಕುದುರೆಗಳು ಎಂದರೆ ಇಂದ್ರಿಯಗಳು (ಇವನನ್ನು) ಒಯ್ಯುವವು. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ: ಇಂದ್ರಿಯಗಳು ಸ್ವಭಾವದಿಂದ ವಿಷಯಗಳ ಕಡೆಗೇ ಇದ್ದುಕೊಂಡಿರುವದೇನೋ (ನಿಜ). ಆದರೂ ವಿಜ್ಞಾನವೆಂಬ[1] ಸಾರಥಿಯಿಂದ ಎಳೆಯಲ್ಪಟ್ಟವಾದಾಗ ಪ್ರಜ್ಞಾವಂತನಾದ ಪುರುಷನನ್ನು ಪ್ರಕಾಶಸ್ವರೂಪಕ್ಕೇ (ಬ್ರಹ್ಮಕ್ಕೇ) ಒಯ್ಯುವವು. ಹೊರಮುಖವಾಗಿ ವಿಷಯಗಳ ಕಡೆಗಲ್ಲ– ಎಂದರ್ಥ. ಕಠವಲ್ಲಿಗಳಲ್ಲಿ– "ಆತ್ಮನನ್ನು ರಥಿಯೆಂದು ತಿಳಿ; ಶರೀರವನ್ನಾದರೆ ರಥವೆಂದು ತಿಳಿ. ಬುದ್ಧಿಯನ್ನಾದರೆ ಸಾರಥಿಯೆಂದು ತಿಳಿ; ಮತ್ತು ಮನಸ್ಸನ್ನು ಹಗ್ಗವೆಂದೂ (ತಿಳಿ). ಮನೀಷಿಗಳು ಇಂದ್ರಿಯಗಳನ್ನು ಕುದುರೆಗಳೆನ್ನುತ್ತಾರೆ; ವಿಷಯಗಳನ್ನು ಅವುಗಳ ಮಾರ್ಗ(ಗಳೆನ್ನುವರು) ಆತ್ಮ, ಇಂದ್ರಿಯ, ಮನಸ್ಸು– ಇವುಗಳಿಂದ ಕೂಡಿದಾತನನ್ನು ಭೋಕ್ತೃ– ಎಂದು ಕರೆಯುತ್ತಾರೆ"– ಮುಂತಾದವುಗಳಿಂದ ಹೇಳಿಯೂ ಇದೆ. ತಪಸ್ಸಿನ (ಮೂಲಕ) ಯಾವ ಪರಮಾತ್ಮನಲ್ಲಿಗೆ (ಇಂದ್ರಿಯಗಳು) ಒಯ್ಯುವವೋ ಆ ಭಗವಂತನನ್ನು ಯೋಗಿಗಳು ಮಾತ್ರವೇ ಕಾಣುವರು.

---

1. ವಿಜ್ಞಾನವೆಂದರೆ ವಿವೇಕರೂಪವಾದ ಬುದ್ಧಿಯೆಂದರ್ಥ.

**ನ ಸಾದೃಶ್ಯೇ ತಿಷ್ಠತಿ ರೂಪಮಸ್ಯ**
**ನ ಚಕ್ಷುಷಾ ಪಶ್ಯತಿ ಕಶ್ಚಿದೇನಮ್ ।**
**ಮನೀಷಯಾಽಥೋ ಮನಸಾ ಹೃದಾ ಚ**
**ಯ ಏನಂ ವಿದುರಮೃತಾಸ್ತೇ ಭವನ್ತಿ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್**[1] **॥ ೬ ॥**

೬. ಇವನ ರೂಪವು (ಮತ್ತೊಂದಕ್ಕೆ) ಸಮಾನವಾಗಿರುವದಿಲ್ಲ. ಇವನನ್ನು ಯಾವನೊಬ್ಬನೂ ಕಣ್ಣಿನಿಂದ ನೋಡಲಾರನು. ಮನೀಷೆಯಿಂದ ಮತ್ತು ಹೃದಯದೊಡಗೂಡಿದ ಮನಸ್ಸಿನಿಂದ ಯಾರು ಇವನನ್ನು ಅರಿತುಕೊಳ್ಳುವರೋ ಅವರು ಅಮೃತರಾಗುವರು. ಸನಾತನನಾದ ಆ ಭಗವಂತನನ್ನು ಯೋಗಿಗಳು ಕಾಣುವರು.

(ಭಾಷ್ಯ)

**ನಾಽನೇನ ಸದೃಶಂ ಕಿಞ್ಚಿತ್ ವಿದ್ಯತ ಇತ್ಯಾಹ– ಅಸ್ಯ ಪರಮಾತ್ಮನೋ ರೂಪಂ ನ ಸಾದೃಶ್ಯೇ ತಿಷ್ಠತಿ, ನಾನ್ಯೇನ ಸಾದೃಶ್ಯೇ ವರ್ತತೇ, ನಾಽನೇನ ಸದೃಶಂ ಕಿಂಚಿದ್ ವರ್ತತೇ ಇತ್ಯರ್ಥಃ । ಶ್ರೂಯತೇ ಚ– 'ನ ತಸ್ಯ ಪ್ರತಿಮಾ ಅಸ್ತಿ ಯಸ್ಯ ನಾಮ ಮಹದ್ಯಶಃ' (ಶ್ವೇ. ೪–೧೯) ಇತಿ । ಅತ ಏವ ಉಪಮಾ-ನಾದ್ಯವಿಷಯತ್ವಮ್ । ತಥಾ ನ ಚಕ್ಷುಷಾ ಪಶ್ಯತಿ ಕಶ್ಚಿತ್ ಅಪಿ ಏನಂ ಸರ್ವಾನ್ತರಂ ಪರಮಾತ್ಮಾನಮ್ । ಕಥಂ ತರ್ಹಿ ಪಶ್ಯನ್ತಿ ? ಮನೀಷಯಾ ಅಧ್ಯವಸಾಯಾತ್ಮಿಕಯಾ ಮನಸಾ ಸಂಕಲ್ಪವಿಕಲ್ಪಾತ್ಮಕೇನ ಹೃದಾ ಚ ಹೃದಯೇನ ಚ ಸಾಧನಭೂತೇನ । ಹೃದಯಂ ವಿನಾ ನಾಽನ್ಯತ್ರ ಪರಮಾತ್ಮನಃ ಉಪಲಬ್ಧಿಃ ಸಂಭವತೀತಿ ಮತ್ವಾ ಹೃದಾ ಚೇತ್ಯುಕ್ತಮ್ । ಅಥವಾ, ನ ಕೇವಲಂ ಮನೋಬುದ್ಧಿಮಾತ್ರೇಣ, ಅಪಿ ತು ಹೃದಾ ಚ ಹೃದಯಸ್ಥೇನ ಚ ಪರಮೇಶ್ವರೇಣ ಅನುಗೃಹೀತಾಃ ಸನ್ತಃ । ಯ ಏನಂ ಪರಮಾತ್ಮಾನಂ ವಿದುಃ ಅಯಮಹಮಸ್ಮೀತಿ, ತೇ ಅಮೃತಾಃ ಅಮರಣಧರ್ಮಾಣೋ ಭವನ್ತಿ । ಅಥವಾ ಹೃದಾ ಹೃದಯೇನ ಪರಮಾತ್ಮನಾ । ತಥಾ ಚ ಹೃತ್ಸ್ಥೇ ಪರಮಾತ್ಮನಿ ಹೃದಯಶಬ್ದಂ ನಿರ್ವಕ್ತಿ– 'ಸ ಏಷ ಆತ್ಮಾ ಹೃದಿ ತಸ್ಯೈತದೇವ ನಿರುಕ್ತಂ ಹೃದಯಮಿತಿ ತಸ್ಮಾದ್ಧೃದಯಮಿತಿ ಅಹರಹರ್ವಾ ಏವಂವಿತ್ ಸ್ವರ್ಗಂ ಲೋಕಮೇತಿ' (ಛಾಂ. ೮–೩–೩) ಇತಿ । ತಥಾ ಚ ಶ್ರುತಿಃ ತದಧೀನಾಮಾತ್ಮಸಿದ್ಧಿಂ ದರ್ಶಯತಿ । 'ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ' (ಶ್ವೇ. ೬–೨೩) ಇತಿ । ಏವಂ ಯಂ ವಿದಿತ್ವಾ ಅಮೃತಾ ಭವನ್ತಿ, ತಂ ಯೋಗಿನ ಏವ ಪಶ್ಯನ್ತಿ॥**

---

1. ಈ ಶ್ಲೋಕವನ್ನು ಕಠ. ೨–೬–೯ಕ್ಕೆ ಹೋಲಿಸಿರಿ.

( ಭಾಷ್ಯಾರ್ಥ )

ಈ (ಪರಮಾತ್ಮನಿಗೆ) ಸಮಾನವಾದದ್ದು ಏನೊಂದೂ ಇರುವದಿಲ್ಲ- ಎಂದು ಹೇಳುತ್ತಾರೆ : ಈ ಪರಮಾತ್ಮನ ರೂಪವು (ತನಗೆ) ಸದೃಶವಾದದ್ದನ್ನು ಹೊಂದಿರುವದಿಲ್ಲ- ಮತ್ತೊಂದಕ್ಕೆ ಸಮಾನವಾದದ್ದಲ್ಲ. ಏಕೆಂದರೆ ಇದಕ್ಕೆ ಸಮಾನವಾದದ್ದು ಬೇರೊಂದು ಯಾವದೂ ಇರುವದಿಲ್ಲ- ಎಂದರ್ಥ. ಶ್ರುತಿಯಲ್ಲಿಯೂ- 'ಅವನಿಗೆ ಹೋಲಿಕೆಯಾದದ್ದು ಇರುವದಿಲ್ಲ ; (ಯಾವ (ಭಗವಂತನ) ನಾಮವು ಮಹತ್ತಾದ ಯಶಸ್ಸಾಗಿರುವದೋ' ಎಂದು ಹೇಳಿದೆ. ಆದ್ದರಿಂದಲೇ ಉಪಮಾನಾದಿಗಳಿಗೆ (ಅದು) ಸಿಗುವಂತಿಲ್ಲ. ಹಾಗೆಯೇ ಯಾವನೊಬ್ಬನೂ ಕಣ್ಣಿನಿಂದ ಈ ಸರ್ವಾಂತರನಾದ ಪರಮಾತ್ಮನನ್ನು ನೋಡಲಾರನು. ಹಾಗಾದರೆ (ಜ್ಞಾನಿಗಳು) ಹೇಗೆ ಕಾಣುತ್ತಾರೆ ? ಎಂದರೆ ನಿಶ್ಚಯಾತ್ಮಕವಾಗಿರುವ ಮನೀಷೆಯೆಂಬ ಸಂಕಲ್ಪವಿಕಲ್ಪಗಳನ್ನು ಮಾಡುವ ಮನಸ್ಸಿನಿಂದ, ಮತ್ತು ಸಾಧನವಾದ ಹೃದಯದಿಂದ (ಕಾಣುವರು). ಹೃದಯವನ್ನು ಬಿಟ್ಟರೆ ಬೇರೊಂದುಕಡೆ ಪರಮಾತ್ಮನನ್ನು ಕಂಡುಕೊಳ್ಳುವದು ಆಗಲಾರದೆಂಬ (ಕಾರಣದಿಂದ) 'ಹೃದಾ ಚ' ಎಂದು ಹೇಳಿದೆ. ಅಥವಾ ಬರಿಯ ಮನೋಬುದ್ಧಿಗಳಿಂದ ಮಾತ್ರವಲ್ಲ : ಮತ್ತೇನೆಂದರೆ ಹೃದಯದಿಂದ- ಎಂದರೆ ಹೃದಯದಲ್ಲಿರುವ ಪರಮೇಶ್ವರನಿಂದ ಅನುಗ್ರಹಿಸಲ್ಪಟ್ಟವರಾಗಿ (ಕಂಡುಕೊಳ್ಳುತ್ತಾರೆ). 'ಅವನು ನಾನೇ ಆಗಿದ್ದೇನೆ' ಎಂಬುದಾಗಿ ಯಾರು ಈ ಪರಮಾತ್ಮನನ್ನು ಬಲ್ಲರೋ ಅವರು ಅಮೃತರು- ಎಂದರೆ ಸಾವಿಲ್ಲದವರಾಗುವರು. ಅಥವಾ ಹೃದಾ ಎಂದರೆ ಹೃದಯನಾಗಿರುವ ಪರಮಾತ್ಮನಿಂದ- (ಎಂದೂ ಅರ್ಥಮಾಡಬಹುದು). ಹೃದಯದಲ್ಲಿರುವ ಪರಮಾತ್ಮನನ್ನು ಹೃದಯವೆಂದೇ ಕರೆದಿದೆ. ಹೇಗೆಂದರೆ 'ಆ ಈ ಆತ್ಮನು ಹೃದಯದಲ್ಲಿರುವನು. ಅವನಿಗೆ ಇದೇ ಹೃದಯವೆಂಬುದೇ ನಿರುಕ್ತವು. ಆದ್ದರಿಂದ (ಹೃದಿ-ಅಯಮ್ ಎಂಬರ್ಥದಲ್ಲಿ) ಹೃದಯನು. ಹೀಗೆ ತಿಳಿದವನು ಪ್ರತಿದಿನವೂ ಸ್ವರ್ಗಲೋಕಕ್ಕೆ ಹೋಗುವನು' ಎಂದು (ಹೇಳಿದೆ). ಹಾಗೆಯೇ ಶ್ರುತಿಯು ಆತ್ಮಸಿದ್ಧಿಯು (ಆ ಭಗವಂತನ) ಅಧೀನವೇ ಆಗಿದೆಯೆಂಬುದನ್ನು ತಿಳಿಸುತ್ತಾ- 'ಯಾವನಿಗೆ ದೇವನಲ್ಲಿ ಪರಭಕ್ತಿಯಿರುವದೋ,[1] ದೇವನಲ್ಲಿರುವಂತೆಯೇ ಗುರುವಿನಲ್ಲಿಯೂ ಇದ್ದುಕೊಂಡಿರುವದೋ ಆ ಮಹಾತ್ಮನಿಗೆ ಹೇಳಲ್ಪಟ್ಟ ವಿಷಯಗಳೆಲ್ಲವೂ (ಜ್ಞಾನ)ಗೋಚರವಾಗುವವು' (ಎಂದು ಹೇಳಿದೆ). ಹೀಗೆ ಯಾವನನ್ನು ಅರಿತುಕೊಂಡು ಅಮೃತರಾಗುವರೋ ಅವನನ್ನು ಯೋಗಿಗಳು ಕಂಡುಕೊಳ್ಳುವರು.

---

1. ಈ ಮಂತ್ರವನ್ನು ಇಲ್ಲಿ ಉದಾಹರಿಸಿರುವದು ದೇವತೆಯಲ್ಲಿ ಎಂದರೆ ಪರಮಾತ್ಮನಲ್ಲಿ ಪರಭಕ್ತಿಯಿರುವವನಿಗೆ ಜ್ಞಾನವುಂಟಾಗುತ್ತದೆ- ಎಂಬುದನ್ನು ಸಮರ್ಥಿಸುವದಕ್ಕಾಗಿ- ಎಂದು ತಿಳಿಯಬೇಕು.

## ಹೊರಮುಖವಾದ ಇಂದ್ರಿಯಗಳಿಂದ ಅನರ್ಥ-ಪ್ರಾಪ್ತಿ

**ದ್ವಾದಶ ಪೂಗಾಃ ಸರಿತೋ ದೇವರಕ್ಷಿತಾ ಮಧ್ವೀಶತೇ ।**
**ತದನುವಿಧಾಯಿನಸ್ತದಾ ಸಞ್ಚರನ್ತಿ ಘೋರಮ್[1] ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೭ ॥**

೭. ಚಂಚಲಸ್ವಭಾವವುಳ್ಳ (ಇಂದ್ರಿಯಗಳೆಂಬ) ಹನ್ನೆರಡು (ಕರಣಗಳ) ಗುಂಪು ಆತ್ಮನಿಂದ ಕಾಪಾಡಲ್ಪಟ್ಟವುಗಳಾಗಿ ಜೇನಿನಂತಿರುವ (ತಮ್ಮ ತಮ್ಮ) ವಿಷಯಗಳನ್ನು ಅನುಭವಿಸುವವು. ಅವುಗಳನ್ನನುಸರಿಸುವವರು ಘೋರವಾದ ಸಂಸಾರದಲ್ಲಿ ಓಡಾಡುವರು. ಆದರೆ ಯಾವನಿಂದ ಈ ಪೂಗವು ಪ್ರೇರಿಸಲ್ಪಡುವದೋ ಆ ಸನಾತನನಾದ ಭಗವಂತನನ್ನು ಯೋಗಿಗಳು ಕಾಣುವರು.

**(ಭಾಷ್ಯ)**

ಇದಾನೀಮಿನ್ದ್ರಿಯಾಣಾಂ ವಿಷಯೇಷು ಪ್ರವೃತ್ತಿರನರ್ಥಾಯ ಭವತೀತ್ಯಾಹ- ಯೇ ದ್ವಾದಶ ಪೂಗಾಃ ಕರ್ಮಜ್ಞಾನೇನ್ದ್ರಿಯಾಣಿ, ಏಕಾದಶಂ ಮನಃ, ದ್ವಾದಶೀ ಬುದ್ಧಿಃ, ತೇಷಾಮನೇಕಪುರುಷಾಪೇಕ್ಷಯಾ ಏಕೈಕಸ್ಯ ಪೂಗತ್ವಮುಚ್ಯತೇ । ಸರಿತಃ ಸರಣಶೀಲಾಃ ದೇವರಕ್ಷಿತಾಃ ದೇವೇನ ಪರಮಾತ್ಮನಾ ರಕ್ಷಿತಾಃ ಮಧುವತ್ ವಿಷಯಂ ಮಧು ಈಶತೇ ನಿಯಮಯನ್ತಿ ಅಸಾಂಕರ್ಯೇಣ ಸ್ವಂ ಸ್ವಂ ವಿಷಯಮನುಭವನ್ತಿ ಇತ್ಯರ್ಥಃ । ಯದ್ಯೈವಮನುಭವನ್ತಿ, ತದಾ ತದನುವಿಧಾಯಿನೋ ವಿಷಯಪರಾಃ ಸಂಚರನ್ತಿ ಘೋರಂ ಸಂಸಾರಮ್ । ತಸ್ಮಾದಿನ್ದ್ರಿಯಾಣಿ ವಿಷಯೇಭ್ಯಃ ಉಪಸಂಹೃತ್ಯ ಸ್ವಾತ್ಮನ್ಯೇವ ವಶಂ ನಯೇದಿತ್ಯರ್ಥಃ । ಯೇನ ರಕ್ಷಿತಾ ಮಧ್ವೀಶತೇ ತಂ ದೇವಂ ಯೋಗಿನ ಏವ ಪಶ್ಯನ್ತಿ ॥

**(ಭಾಷ್ಯಾರ್ಥ)**

ಈಗ ಇಂದ್ರಿಯಗಳು ವಿಷಯಗಳಲ್ಲೇ ತೊಡಗುವದು ಅನರ್ಥಕ್ಕೇ ಕಾರಣವೆಂಬುದನ್ನು ಹೇಳುತ್ತಾನೆ : ಕರ್ಮೇಂದ್ರಿಯಜ್ಞಾನೇಂದ್ರಿಯಗಳು (ಹತ್ತು), ಮನಸ್ಸು ಹನ್ನೊಂದನೆಯದು, ಬುದ್ಧಿಯು ಹನ್ನೆರಡನೆಯದು- ಹೀಗೆ ಹನ್ನೆರಡರ ಗುಂಪು ಇದೆಯಷ್ಟೆ ! ಇವು ಒಬ್ಬೊಬ್ಬ ಮನುಷ್ಯನಿಗೂ ಪ್ರತ್ಯೇಕವಾಗಿರುವದರಿಂದ ಒಟ್ಟುಗೂಡಿಸಿ ಒಬ್ಬೊಬ್ಬನಿಗೂ ಒಂದು ಗುಂಪು- ಎಂದು ಕರೆದಿದೆ.

---

1. 'ದ್ವಾದಶಪೂಗಾಂ ಸರಿತಂ ಪಿಬನ್ತೋ ದೇವರಕ್ಷಿತಾಮ್ । ಮಧ್ವೀಕ್ಷನ್ತಶ್ಚ ತೇ ತಸ್ಯಾಃ ಸಂಚರನ್ತೀಹ ಘೋರಾಮ್'- ಎಂದು ಮ॥ ಭಾ॥ ಪಾಠ.

(ಇವು) ಸರಿತ್ತುಗಳು ಎಂದರೆ ಯಾವಾಗಲೂ ಚಲಿಸತಕ್ಕವು. ದೇವನಾದ ಪರಮಾತ್ಮನಿಂದ ಕಾಪಾಡಲ್ಪಟ್ಟವೆ ಆಗಿ ದೇವರಕ್ಷಿತಗಳು ಹಾಗೂ ಜೇನುತುಪ್ಪದಂತಿರುವ (ಶಬ್ದಾದಿ)ವಿಷಯಗಳನ್ನು ಆಳುತ್ತವೆ – ನಿಯಮನಗೊಳಿಸುತ್ತವೆ ಎಂದರೆ ಒಂದಕ್ಕೊಂದು ಬೆರೆಯದೆ ನಿಯತವಾಗಿ ತಮ್ಮತಮ್ಮ ವಿಷಯಗಳನ್ನು ಅನುಭವಿಸುತ್ತವೆ– ಎಂಬಭಿಪ್ರಾಯ.[1] ಯಾವಾಗ ಹೀಗೆ ಅನುಭವಿಸುವನೋ ಆಗ ಅವುಗಳನ್ನೇ ಅನುಸರಿಸಿ ಹೋಗುತ್ತಿರುವ ವಿಷಯಪರರಾದವರು ಘೋರವಾದ ಸಂಸಾರವನ್ನು ಸುತ್ತುತ್ತಾರೆ. ಆದ್ದರಿಂದ ಇಂದ್ರಿಯಗಳನ್ನು ವಿಷಯಗಳಿಂದ ಹಿಂಜಗ್ಗಿ ತನ್ನ ವಶವಾಗಿಯೇ ಮಾಡಿಕೊಳ್ಳಬೇಕು ಎಂದರ್ಥ. ಯಾವನಿಂದ ಕಾಪಾಡಲ್ಪಟ್ಟವಾಗಿ ವಿಷಯಗಳನ್ನು ಅನುಭವಿಸುವವೋ ಆ ದೇವನನ್ನು ಯೋಗಿಗಳು ಮಾತ್ರವೇ ಕಾಣುತ್ತಾರೆ.

**ತದರ್ಧಮಾಸಂ ಪಿಬತಿ ಸಂಚಿತಂ[2] ಭ್ರಮರೋ ಮಧು |**
**ಈಶಾನಃ ಸರ್ವಭೂತೇಷು ಹವಿರ್ಭೂತಮಕಲ್ಪಯತ್ ||**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್. || ೮ ||**

೮. ಹೇಗೆ ದುಂಬಿಯು ತಾನು ಹದಿನೈದುದಿನಗಳು ಕೂಡಿಹಾಕಿದ ಜೇನನ್ನು ಉಳಿದ ಹದಿನೈದು ದಿನಗಳು ಕುಡಿಯುವದೋ, ಹಾಗೆ (ಜೀವನೂ ಕರ್ಮಫಲವನ್ನನುಭವಿಸುವನು). ಈಶಾನನಾದ (ಪರಮೇಶ್ವರನು) ಎಲ್ಲಾ ಪ್ರಾಣಿಗಳಿಗೂ (ಕರ್ಮಾನುಗುಣವಾಗಿ) ಅನ್ನವೇ ಮುಂತಾದದ್ದನ್ನು ಉಂಟುಮಾಡಿರುವನು. ಆ (ಈಶಾನನಾದ) ಸನಾತನನಾದ ಭಗವಂತನನ್ನು ಯೋಗಿಗಳು ಕಾಣುವರು.

**(ಭಾಷ್ಯ)**

**ಕಿಂ ಚ ದೃಷ್ಟಾನ್ತದಾರ್ಷ್ಟಾನ್ತಿಕಯೋಸ್ತತ್ರಾಭಿಧಾನಮ್ – ಯಥಾ ಮಧುಕರೋ ಭ್ರಮರಃ ಅರ್ಧಮಾಸೋಪಾರ್ಜಿತಮ್, ಅರ್ಧಮಾಸಂ ಸಂಚಿತಂ ಮಧು ಅರ್ಧಮಾಸಂ ಪಿಬತಿ, ಏವಮಸಾವಪಿ ಭ್ರಮರಃ ಭ್ರಮಣಶೀಲತ್ವಾತ್ ಸಂಸಾರೀ ತದ್ವಿಷಯಂ ಮಧು ಅರ್ಧಮಾಸಸಂಚಿತಮರ್ಧಮಾಸಂ ಪಿಬತಿ | ಪೂರ್ವಜನ್ಮಸಂಚಿತಂ ಕರ್ಮ ಅನ್ಯಸ್ಮಿನ್ ಜನ್ಮನಿ ಭುಙ್ಕ್ತೇ ಇತಿ ಯಾವತ್ | ಭವೇದಪಿ ಐಹಿಕಫಲಾತ್ ಕರ್ಮಣಃ ಫಲಸಿದ್ಧಿಃ ಕರ್ಮಾನನ್ತರಭಾವಿತ್ವಾತ್ ; ಕಥಂ ಪುನರಾಮುಷ್ಮಿಕಫಲಾತ್ ಕರ್ಮಣಃ ಫಲಸಿದ್ಧಿಃ ಸ್ಯಾತ್, ಕರ್ಮಣೋ ವಿನಾಶಿತ್ವಾದಿತ್ಯಾಶಙ್ಕ್ಯ ಆಹ– ಈಶಾನ ಇತಿ | ಭವೇದಯಂ ದೋಷಃ ಯದಿ**

1. ಕಣ್ಣು ರೂಪವನ್ನೇ ಕಾಣುತ್ತದೆ ; ಕಿವಿಯು ಶಬ್ದವನ್ನೇ ಕೇಳುತ್ತದೆ– ಇತ್ಯಾದಿ. 2. 'ಸಂಚಿಂತ್ಯ' ಎಂದು ಮ|| ಭಾ|| ಪಾಠ.

ಕೇವಲಾತ್ ಕರ್ಮಣಃ ಫಲಸಿದ್ಧಿಃ ಸ್ಯಾತ್ ; ಈಶಾನಃ ಪರಮೇಶ್ವರಃ ಕೃತಪ್ರಯತ್ನಾಪೇಕ್ಷಃ ಸನ್ ಸರ್ವೇಷು ಪ್ರಾಣಿಷು ಪ್ರಾಣಾಗ್ನಿಹೋತ್ರಸ್ಯ ಇತರಸ್ಯ ಚ ತತ್ತ್ವರ್ಮಾನುಸಾರೇಣ ಹವಿರ್ಭೂತಮ್ ಅನ್ನಾದಿಕಮ್ ಅಕಲ್ಪಯತ್ । ಯ ಈಶಾನಃ ಸರ್ವಭೂತೇಷು ಹವಿರ್ಭೂತಮಕಲ್ಪಯತ್, ತಂ ಭಗವನ್ತಂ ಯೋಗಿನ ಏವ ಪಶ್ಯನ್ತಿ ॥

(ಭಾಷ್ಯ)

ಮತ್ತು ಆ ವಿಷಯದಲ್ಲಿ ದೃಷ್ಟಾಂತದಾರ್ಷ್ಟಾಂತಿಕಗಳನ್ನು ಹೇಳುತ್ತಾರೆ: ಹೇಗೆ ಜೇನುಹುಳುವು ಅರ್ಧತಿಂಗಳ(ಕಾಲ) ಸಂಪಾದಿಸಿದ್ದ ಎಂದರೆ ಹದಿನೈದು ದಿನಗಳು ಕೂಡಿಟ್ಟಿದ್ದ ಜೇನನ್ನು (ಉಳಿದ) ಹದಿನೈದು ದಿನಗಳು ಕುಡಿಯುತ್ತದೆಯೋ ಹಾಗೆಯೇ ಈ ಭ್ರಮರನೂ ಸಹ– ಎಂದರೆ ಅಲೆದಾಡುವ ಸ್ವಭಾವದವನಾದ್ದರಿಂದ ಭ್ರಮರನಾದ ಈ ಸಂಸಾರಿಯು ಆ (ಕರ್ಮ)ವೆಂಬ ಮಧುವನ್ನು, ಅರ್ಧತಿಂಗಳು ಕೂಡಿಟ್ಟಿದ್ದನ್ನು ಉಳಿದ ಅರ್ಧತಿಂಗಳು ಕುಡಿಯುತ್ತಾನೆ– ಎಂದರೆ ಹಿಂದಿನ ಜನ್ಮದಲ್ಲಿ ಕೂಡಿಹಾಕಿದ್ದ ಕರ್ಮವನ್ನು ಮತ್ತೊಂದು ಜನ್ಮದಲ್ಲಿ ಅನುಭವಿಸುತ್ತಾನೆ– ಎಂದಭಿಪ್ರಾಯ. ಒಂದುವೇಳೆ ಇಲ್ಲಿಯೇ ಫಲವನ್ನು ಕೊಡುವಂಥ ಕರ್ಮದಿಂದ (ಇಲ್ಲಿ) ಫಲವಾಗಬಹುದು ; ಏಕೆಂದರೆ (ಫಲವು) ಕರ್ಮದ ಅನಂತರ ಉಂಟಾಗುತ್ತದೆ. ಆದರೆ ಪರಲೋಕದಲ್ಲಿ ಫಲವನ್ನುಂಟುಮಾಡುವಂಥ ಕರ್ಮದಿಂದ (ಇಲ್ಲಿ) ಫಲಸಿದ್ಧಿಯು ಹೇಗಾದೀತು ? ಕರ್ಮವು (ಮಾಡಿದ ಮರುಕ್ಷಣದಲ್ಲಿಯೇ) ನಾಶವಾಗುವದಷ್ಟೆ ! ಎಂದು ಶಂಕಿಸಲಾಗಿ ಹೇಳುತ್ತಾನೆ– ಈಶಾನನು ; ಒಂದುವೇಳೆ ಬರಿಯ ಕರ್ಮದಿಂದಲೇ ಫಲವುಂಟಾಗುವಹಾಗಿದ್ದರೆ (ನೀವು ಹೇಳಿದ) ದೋಷವು ಬರಬಹುದಾಗಿತ್ತು. ಈಶಾನನಾದ ಪರಮೇಶ್ವರನು (ಫಲದಾತೃವಾಗಿದ್ದಾನೆ), ಮಾಡಿದ ಪ್ರಯತ್ನಕ್ಕೆ ತಕ್ಕಂತೆ ಎಲ್ಲಾ ಪ್ರಾಣಿಗಳಲ್ಲಿಯೂ ಎಂದರೆ ಪ್ರಾಣಾಗ್ನಿಹೋತ್ರಮಾಡುವ (ಜ್ಞಾನಿಗೂ) ಇತರರಾದ (ಅಜ್ಞಾನಿಗಳಿಗೂ) ಅವರವರ ಕರ್ಮಾನುಗುಣವಾಗಿ ಅನ್ನವೇ ಮುಂತಾದ ಆಹಾರವನ್ನು ಉಂಟುಮಾಡಿರುತ್ತಾನೆ. ಹೀಗೆ ಯಾವ ಈಶಾನನು ಎಲ್ಲಾ ಪ್ರಾಣಿಗಳಿಗೂ (ಆಹಾರರೂಪವಾದ) ಹವಿಸ್ಸನ್ನು ಉಂಟುಮಾಡಿದನೋ ಆ ಭಗವಂತನನ್ನು ಯೋಗಿಗಳು ಮಾತ್ರವೇ ಕಾಣುವರು.

## ಜ್ಞಾನದಿಂದ ಸಂಸಾರಿಗಳೂ ಮುಕ್ತರಾಗುವರು

ಹಿರಣ್ಯಪರ್ಣಮಶ್ವತ್ಥಮಭಿಪತ್ಯ[1] ಹ್ಯಪಕ್ಷಕಾಃ ।
ತತ್ರ ತೇ ಪಕ್ಷಿಣೋ ಭೂತ್ವಾ ಪ್ರಪತನ್ತಿ ಯಥಾ ಸುಖಮ್[2] ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೯ ॥

1. 'ಅಭಿಪದ್ಯ' 2. 'ಯಥಾ ದಿಶಮ್' ಎಂದು ಮು॥ಭಾ॥ ಪಾಠಗಳು.

೯. (ಜ್ಞಾನವೆಂಬ) ರೆಕ್ಕೆಯಿಲ್ಲದ ಸಂಸಾರಿಗಳು ಹಿರಣ್ಯಪರ್ಣವುಳ್ಳ ಅಶ್ವತ್ಥವನ್ನು ಪಡೆದುಕೊಂಡು ಅಲ್ಲಿ ಪಕ್ಷಿಗಳಾಗಿ ಮಾರ್ಪಟ್ಟು ಸುಖವಾಗಿ ಹಾರಿಹೋಗುವರು ; ಯಾವನನ್ನರಿತು ಹೀಗೆ ಮುಕ್ತರಾಗುವರೋ ಆ ಸನಾತನನಾದ ಭಗವಂತನನ್ನು ಯೋಗಿಗಳು ಕಾಣುವರು.

( ಭಾಷ್ಯ )

ಕಿಂ ಚ– ಕಿಮೇತೇ ಮಧ್ವಾಶಿನೋ ಬಂಭ್ರಮ್ಯಮಾಣಾಃ ಪರಿವರ್ತನ್ತ ಏವ ಸರ್ವದಾ, ಕಿಂ ವಾ ಜ್ಞಾನಂ ಲಬ್ಧ್ವಾ ಮುಕ್ತಾ ಭವನ್ತಿ ಇತ್ಯಾಶಙ್ಕ್ಯ ಆಹ– ಯೇ ಅಪಕ್ಷಕಾಃ ಜ್ಞಾನಪಕ್ಷರಹಿತಾಃ ಮಧ್ವಾಶಿನಃ ಪರಿವರ್ತನ್ತೇ, ತೇ ಹಿರಣ್ಯಪರ್ಣಮಶ್ವತ್ಥಂ ಹಿತಂ ಚ ರಮಣೀಯಂ ಚೇತಿ ಹಿರಣ್ಯಂ ಹಿತಂ ರಮಣೀಯಂ ಚ ಪರ್ಣಂ ಯಸ್ಯಾಶ್ವತ್ಥಸ್ಯ । ತಥಾ ಚ ಭಗವಾನ್ ವಾಸುದೇವಃ– 'ಛನ್ದಾಂಸಿಯಸ್ಯ ಪರ್ಣಾನಿ' (ಗೀ. ೧೫–೧) ಇತಿ । ತೇ ಹಿರಣ್ಯಪರ್ಣಮಶ್ವತ್ಥಮ್ ಅಭಿಪತ್ಯ ಆರುಹ್ಯ ವೇದಸಂಯೋಗಿಬ್ರಾಹ್ಮಣಾದಿದೇಹಂ ಪ್ರಾಪ್ಯ ಇತ್ಯರ್ಥಃ । ತತ್ರೈವ ಬ್ರಾಹ್ಮಣಾದಿದೇಹೇ ಪಕ್ಷಿಣಃ ಜ್ಞಾನಿನೋ ಭೂತ್ವಾ । ತಥಾ ಚ ಬ್ರಾಹ್ಮಣಮ್– 'ಯೇ ವೈ ವಿದ್ವಾಂಸಸ್ತೇ ಪಕ್ಷಿಣೋ ಯೇಽವಿದ್ವಾಂಸಸ್ತೇಽಪಕ್ಷಾಃ' ಇತಿ । ಪ್ರಪತನ್ತಿ ತಥಾ ಸುಖಂ ಮುಕ್ತಾ ಭವನ್ತಿ ಇತ್ಯರ್ಥಃ । ಯಂ ಜ್ಞಾತ್ವಾ ಪ್ರಪತನ್ತಿ, ತಂ ಯೋಗಿನ ಏವ ಪಶ್ಯನ್ತಿ ॥

( ಭಾಷ್ಯಾರ್ಥ )

ಮತ್ತು ಈ ಮಧ್ವಾಶಿಗಳಾದ ( ಸಂಸಾರಿಗಳು ) ಅಲೆದಾಡುವವರಾಗಿ ಯಾವಾಗಲೂ ತಿರುಗುತ್ತಲೇ ಇರುವರೊ, ಅಥವಾ ಜ್ಞಾನವನ್ನು ಹೊಂದಿ ಮುಕ್ತರಾಗುವರೊ ? ಎಂದು ಶಂಕಿಸಿ ಹೇಳುತ್ತಾನೆ- ಯಾರು ರೆಕ್ಕೆಗಳಿಲ್ಲದವರೋ ಎಂದರೆ ಜ್ಞಾನವೆಂಬ ರೆಕ್ಕೆಗಳಿಲ್ಲದವರಾಗಿ ಮಧು( ಸಂಸಾರಸುಖ)ವನ್ನು ಅನುಭವಿಸುತ್ತಾ ಸುತ್ತುತ್ತಿರುವರೋ, ಅವರು ಹಿರಣ್ಯಪರ್ಣವಾದ ಅಶ್ವತ್ಥವನ್ನು– ಹಿತವಾಗಿಯೂ ರಮಣೀಯವಾಗಿಯೂ ಇರುವ ಎಲೆಗಳು ಯಾವದಕ್ಕಿದೆಯೋ ಆ ಅಶ್ವತ್ಥ( ವೆಂಬ ಸಂಸಾರವೃಕ್ಷವು) - ಎಂದರ್ಥ. ಪೂಜ್ಯನಾದ ವಾಸುದೇವನೂ ಕೂಡ– 'ಯಾವದಕ್ಕೆ ವೇದಗಳೇ ಎಲೆಗಳೋ' ಎಂದು ಹೇಳಿರುತ್ತಾನೆ. ಅವರು ಹಿರಣ್ಯಪರ್ಣವುಳ್ಳ ಅಶ್ವತ್ಥವನ್ನು ಏರಿ, ಮೇಲಕ್ಕೇರಿ – ಎಂದರೆ ವೇದದ ಸಂಬಂಧವುಳ್ಳ ಬ್ರಾಹ್ಮಣಾದಿಶರೀರಗಳನ್ನು ಪಡೆದು ಎಂದಭಿಪ್ರಾಯ. ಅಲ್ಲಿಯೇ ಬ್ರಾಹ್ಮಣಾದಿಶರೀರಗಳಲ್ಲಿ ಪಕ್ಷಿಗಳು[1]– ಎಂದರೆ ಜ್ಞಾನಿಗಳಾಗಿ (ಮೇಲಕ್ಕೇರುವರು). ಬ್ರಾಹ್ಮಣರಲ್ಲಿಯೂ– 'ಯಾರು ಜ್ಞಾನಿಗಳೋ ಅವರು ಪಕ್ಷಿಗಳು ;

1. ಪಕ್ಷವುಳ್ಳವರು ಪಕ್ಷಿಗಳು ಎಂದರ್ಥ.

ಯಾರು ಅಜ್ಞಾನಿಗಳೋ ಅವರು ಅಪಕ್ಷಿಗಳು- ಎಂದು ಹೇಳಿದೆ. (ಹೀಗೆ ಪಕ್ಷಿಗಳಾಗಿ) ಹಾರುತ್ತಾರೆ- ಎಂದರೆ (ಸಂಸಾರದಿಂದ ಮೇಲಕ್ಕೆದ್ದು) ಸುಖವಾಗಿ ಮುಕ್ತರಾಗುತ್ತಾರೆ- ಎಂದರ್ಥ. ಯಾವನನ್ನು ಅರಿತು ಹೀಗೆ ಮುಕ್ತರಾಗುವರೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

## ಯೋಗದ ವಿವರ

**ಅಪಾನಂ ಗಿರತಿ ಪ್ರಾಣಃ ಪ್ರಾಣಂ ಗಿರತಿ ಚನ್ದ್ರಮಾಃ ।**
**ಆದಿತ್ಯೋ ಗಿರತೇ ಚನ್ದ್ರಮಾಽದಿತ್ಯಂ ಗಿರತೇ ಪರಃ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್[1] ॥ ೧೦ ॥**

೧. ಪ್ರಾಣನು ಅಪಾನನನ್ನು ನುಂಗುತ್ತಾನೆ. ಚಂದ್ರನು ಪ್ರಾಣನನ್ನು ನುಂಗುತ್ತಾನೆ. ಸೂರ್ಯನು ಚಂದ್ರನನ್ನು ನುಂಗುತ್ತಾನೆ. ಪರಬ್ರಹ್ಮವು ಸೂರ್ಯನನ್ನು ನುಂಗುವದು. ಸನಾತನನಾದ ಆ ಭಗವಂತನನ್ನು ಯೋಗಿಗಳು ಕಾಣುವರು.

(ಭಾಷ್ಯ)

ಇದಾನೀಂ ಯೋಗಂ ದರ್ಶಯತಿ। ಅಪಾನಂ ಗಿರತಿ ಉಪಸಂಹರತಿ ಪ್ರಾಣಃ । ಪ್ರಾಣಂ ಗಿರತಿ ಚನ್ದ್ರಮಾಃ ಮನಃ ಉಪಸಂಹರತಿ । ಮನಸಶ್ಚನ್ದ್ರಮಾ ಅಧಿದೈವತಮ್ ; ತಸ್ಮಾಚ್ಚನ್ದ್ರಮಃಶಬ್ದೇನ ಮನ ಉಚ್ಯತೇ । ತಂ ಚನ್ದ್ರಂ ಮನ ಆದಿತ್ಯೋ ಬುದ್ಧಿಃ ಗಿರತೇ । ಬುದ್ಧೇಶ್ಚಾದಿತ್ಯೋಽಧಿದೈವತಮ್ ತಮಾದಿತ್ಯಂ ಬುದ್ಧಿಂ ಗಿರತೇ ಪರಃ ಪರಂ ಬ್ರಹ್ಮ । ಏತದುಕ್ತಂ ಭವತಿ-। ಸಮಾಧಿವೇಲಾಯಾಮಪಾನಂ ಪ್ರಾಣೇ ಉಪಸಂಹೃತ್ಯ ಪ್ರಾಣಂ ಮನಸಿ ಮನಶ್ಚ ಬುದ್ಧೌ ಬುದ್ಧಿಂ ಪರಮಾತ್ಮನ್ಯುಪಸಂಹೃತ್ಯ ಸ್ವಾಭಾವಿಕಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮನೈವಾವತಿಷ್ಠತ ಇತ್ಯರ್ಥಃ ॥

( ಭಾಷ್ಯಾರ್ಥ )

ಈಗ ಯೋಗವನ್ನು ತಿಳಿಸುತ್ತಾರೆ : ಪ್ರಾಣನು ಅಪಾನವನ್ನು ನುಂಗುತ್ತಾನೆ- ಎಂದರೆ ಉಪಸಂಹಾರಮಾಡಿಕೊಳ್ಳುತ್ತಾನೆ. ಪ್ರಾಣನನ್ನು ಚಂದ್ರಮನು ಎಂದರೆ ಮನಸ್ಸು ಉಪಸಂಹಾರಮಾಡಿಕೊಳ್ಳುತ್ತದೆ. ಚಂದ್ರನೇ ಮನಸ್ಸಿಗೆ ಅಧಿದೇವತೆಯು ; ಆದ್ದರಿಂದ ಚಂದ್ರಮನೆಂಬ ಶಬ್ದದಿಂದ ಮನಸ್ಸನ್ನು ಹೇಳಿದೆ.

---

1. ಈ ಶ್ಲೋಕಕ್ಕೆ ಮುಂಚೆ ಮಹಾಭಾರತದಲ್ಲಿ ಈ ಕೆಳಗಿನ ಪದ್ಯಗಳಿವೆ :- "ತಸ್ಮಾದ್ ವೈ ವಾಯುರಾಯಾತಃ ತಸ್ಮಿಂಶ್ಚ ಪ್ರಯತಃ ಸದಾ । ತಸ್ಮಾದಗ್ನಿಶ್ಚ ಸೋಮಶ್ಚ ತಸ್ಮಿಂಶ್ಚ ಪ್ರಾಣ ಆತತಃ ॥ ಸರ್ವಮೇವ ತತೋ ವಿದ್ಯಾತ್ ತತ್ತದ್ವಕ್ತುಂ ನ ಶಕ್ನುಮಃ । ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ " ॥

ಆ ಚಂದ್ರನೆಂಬ ಮನಸ್ಸನ್ನು ಆದಿತ್ಯನು ಎಂದರೆ ಬುದ್ಧಿಯು ಉಪಸಂಹಾರ ಮಾಡಿಕೊಳ್ಳುತ್ತದೆ. ಬುದ್ಧಿಗೆ ಆದಿತ್ಯನೇ ಅಧಿದೇವತೆಯಾದ್ದರಿಂದ ಹೀಗೆ ಹೇಳಿದೆ. ಆ ಆದಿತ್ಯನೆಂಬ ಬುದ್ಧಿಯನ್ನು ಪರನು- ಎಂದರೆ ಪರಬ್ರಹ್ಮವು ಉಪಸಂಹಾರವಮಾಡಿಕೊಳ್ಳುವದು. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : ಸಮಾಧಿಯ ಸಮಯದಲ್ಲಿ ಅಪಾನವನ್ನು ಪ್ರಾಣದಲ್ಲಿ ಉಪಸಂಹಾರಮಾಡಿಕೊಂಡು, ಪ್ರಾಣನನ್ನು ಮನಸ್ಸಿನಲ್ಲಿಯೂ ಮನಸ್ಸನ್ನು ಬುದ್ಧಿಯಲ್ಲಿಯೂ ಬುದ್ಧಿಯನ್ನು ಪರಮಾತ್ಮನಲ್ಲಿಯೂ ಉಪಸಂಹಾರಮಾಡಿಕೊಂಡು ಸ್ವಾಭಾವಿಕವಾದ ಚೈತನ್ಯ ಸ್ವರೂಪನಾದ ಸದಾನಂದಾದ್ವಿತೀಯಬ್ರಹ್ಮದಲ್ಲಿಯೇ (ಬ್ರಹ್ಮ)ವಾಗಿಯೇ (ಯೋಗಿಯು) ನೆಲೆನಿಲ್ಲುತ್ತಾನೆ- ಎಂದರ್ಥ.

## ಪರಮಾತ್ಮನೇ ಜೀವನು

**ಏಕಂ ಪಾದಂ ನೋತ್ಕ್ಷಿಪತಿ ಸಲಿಲಾದ್ಧಂಸ ಉಚ್ಚರನ್ ।**
**ತಂ ಚೇತ್ ಸತತಮುತ್ಕ್ಷಿಪೇನ್ನ[1] ಮೃತ್ಯುರ್ನಾಮೃತಂ ಭವೇತ್ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೧ ॥**

೧೧. ಹಂಸನು (ಸಂಸಾರವೆಂಬ) ಸಲಿಲದಮೇಲೆ ಓಡಾಡುತ್ತಾ (ಜೀವನೆಂಬ) ಒಂದು ಪಾದವನ್ನು ಮೇಲಕ್ಕೆತ್ತಿಕೊಳ್ಳುತ್ತಿಲ್ಲ. ಯಾವಾಗಲೂ ಸಂಚರಿಸುತ್ತಿರುವ ಆ (ಜೀವನನ್ನು) ಮೇಲಕ್ಕೆತ್ತಿದರೆ ಮೃತ್ಯುವು ಸಂಭವಿಸುವದಿಲ್ಲ ; ಅಮೃತವೂ ಉಂಟಾಗಲಾರದು.

(ಭಾಷ್ಯ)

ಇದಾನೀಂ ಪರಸ್ಯ ಜೀವಾತ್ಮನಾಽವಸ್ಥಾನಂ ದರ್ಶಯತಿ । ಹನ್ತ್ಯವಿದ್ಯಾಂ ತತ್ಕಾರ್ಯಂ ಚೇತಿ ಹಂಸಃ ಪರಮಾತ್ಮಾ ಭೂತಭೌತಿಕಲಕ್ಷಣಾತ್ ಸಂಸಾರಾತ್ ಸಲಿಲಾತ್ ಉಚ್ಚರನ್ ಊರ್ಧ್ವಂ ಚರನ್ ಸಂಸಾರಾದ್ ಬಹಿರೇವ ವರ್ತಮಾನಃ ಏಕಂ ಜೀವಾಖ್ಯಂ ಪಾದಂ ನೋತ್ಕ್ಷಿಪತಿ ನೋದ್ಧರತಿ ನೋಪಸಂಹರತಿ ರೂಪಂ ರೂಪಂ ಪ್ರತಿರೂಪೋಽವತಿಷ್ಠತೇ ಇತ್ಯರ್ಥಃ । ಶ್ರೂಯತೇ ಚ ಕಠವಲ್ಲೀಷು- 'ಏಕಸ್ತಥಾ ಸರ್ವಭೂತಾನ್ತರಾತ್ಮಾ' (ಕಠ. ೨-೨-೯) ಇತಿ । ಕಸ್ಮಾತ್ ಪುನರೇಕಂ ಪಾದಂ ನೋತ್ಕ್ಷಿಪತೀತ್ಯತ ಆಹ- ತಂ ಜೀವಾಖ್ಯಂ ಪಾದಂ ಸತತಂ ಸಂತತಯಾಯಿನಂ ಯದಿ ಉತ್ಕ್ಷಿಪೇತ್, ಸ್ವಮಾಯಯಾ ಸ್ವಮಾತ್ಮಾನಂ ಪ್ರಾಣಾದ್ಯನ್ತಭೇದಂ ಕೃತ್ವಾ ತೇಷ್ವನುಪ್ರವಿಶ್ಯ ಜೀವಾತ್ಮನಾ ಯದಿ ನಾವತಿಷ್ಠೇತ್, ತದಾ ನ ಮೃತ್ಯುಃ ನ ಜನನಮರಣಾದಿಲಕ್ಷಣೋಽನರ್ಥಃ ಸಂಸಾರೋ

1. 'ತಂ ಚೇತ್ ಸಂತತಮೂರ್ಧ್ವಾಯ' ಎಂದು ಪಾ॥

ಭವೇತ್ ; ಸಂಸಾರಿಣೋ ಜೀವಸ್ಯಾಭಾವಾತ್ । ತಥಾ ಅಮೃತಂ ಅಮೃತತ್ವಂ ಮೋಕ್ಷೋ ನ ಭವೇತ್ ಅನನುಪ್ರವಿಷ್ಟಸ್ಯ ದರ್ಶನಾಸಂಭವಾತ್ । ತಥಾ ಚ ತದರ್ಥಮೇವ ಅನುಪ್ರವೇಶಂ ದರ್ಶಯತಿ- 'ರೂಪಂ ರೂಪಂ ಪ್ರತಿರೂಪಃ' (ಕಾ. ೨-೨-೯) ಇತಿ । ತಥಾ ಚಾಥರ್ವಣೀ ಶ್ರುತಿಃ- 'ಏಕಂ ಪಾದಂ ನೋತ್ಕ್ಷಿಪತಿ ಸಲಿಲಾದ್ಧಂಸ ಉಚ್ಚರನ್ । ಸ ಚೇದುತ್ಕ್ಷಿಪೇತ್ ಪಾದಂ ನ ನ ಮೃತ್ಯುರ್ನಾಮೃತಂ ಭವೇತ್' (ಅಥರ್ವ. ೧೧-೪-೨೧)[1] ಇತಿ । 'ಏಕಂ ರೂಪಂ ಬಹುಧಾ ಯಃ ಕರೋತಿ' (ಕಾ. ೨-೨-೧೨) ಇತಿ ಚ । ಯಃ ಪಾದ ರೂಪೇಣ ಜೀವಾತ್ಮನಾ ತ್ರಿಪಾದರೂಪೇಣ ಚಿತ್ಸದಾನನ್ದಾದ್ವಿತೀಯೇನ ಬ್ರಹ್ಮಾತ್ಮನಾಽವಸ್ಥಿತಃ, ತಂ ಪರಮಾತ್ಮಾನಂ ಯೋಗಿನ ಏವ ಪಶ್ಯನ್ತಿ ॥

(ಭಾಷಾರ್ಥ)

ಈಗ ಪರಮಾತ್ಮನು ಜೀವಾತ್ಮನ ರೂಪದಿಂದ ಇದ್ದುಕೊಂಡಿರುತ್ತಾನೆಂದು ತಿಳಿಸುತ್ತಾರೆ : ಅವಿದ್ಯೆಯನ್ನೂ ಅದರ ಕಾರ್ಯವನ್ನೂ ನಾಶಗೊಳಿಸುತ್ತಾನಾದ್ದರಿಂದ ಹಂಸನೆಂದರೆ ಪರಮಾತ್ಮನು. (ಇವನು) ಭೂತಭೌತಿಕರೂಪವಾಗಿರುವ ಸಂಸಾರವೆಂಬ ನೀರಿನಿಂದ ಮೇಲೆದ್ದು - ಮೇಲೆ ಸಂಚರಿಸುತ್ತಾ ಎಂದರೆ ಸಂಸಾರದ ಹೊರಗಡೆಯೇ ಇದ್ದುಕೊಂಡಿರುವನಾಗಿ ಜೀವನೆಂಬ ಒಂದು ಕಾಲನ್ನು ಎತ್ತುವದಿಲ್ಲ. ಮೇಲಕ್ಕೆ ಕಿದುಕೊಳ್ಳುವದಿಲ್ಲ- ಎಂದರೆ (ತನ್ನೊಳಗೆ) ಅಡಗಿಸಿ ಕೊಳ್ಳುವದಿಲ್ಲ. ಒಂದೊಂದು ರೂಪಕ್ಕೂ ಪ್ರತಿರೂಪನಾಗಿ ಇದ್ದುಕೊಂಡಿರುತ್ತಾನೆ- ಎಂದರ್ಥ. ಕಠವಲ್ಲಿಗಳಲ್ಲಿಯೂ ಕೂಡ- 'ಹಾಗೆಯೇ ಸರ್ವಭೂತಗಳಿಗೂ ಅಂತರಾತ್ಮನಾದ ಒಬ್ಬನೇ ಆತ್ಮನು' ಎಂದು ಹೇಳಿದೆ. ಆ ಒಂದು ಪಾದವನ್ನು ಏತಕ್ಕಾಗಿ ಎಳೆದುಕೊಳ್ಳುವದಿಲ್ಲ ? ಎಂದರೆ ಹೇಳುತ್ತಾನೆ- ಯಾವಾಗಲೂ ಸಂಚರಿಸುತ್ತಿರುವ ಆ ಜೀವನೆಂಬ ಪಾದವನ್ನು ಒಂದುವೇಳೆ ಉಪಸಂಹಾರ ಮಾಡಿಕೊಂಡರೆ- ಎಂದರೆ ತನ್ನನ್ನೇ ತಾನು ಮಾಯೆಯಿಂದ ಪ್ರಾಣವೇ ಮುಂತಾದ ಅನಂತಭೇದಗಳಾಗಿ ಮಾಡಿಕೊಂಡು ಜೀವಾತ್ಮರೂಪದಿಂದ ಅವುಗಳಲ್ಲಿ ಒಳಹೊಕ್ಕು ಇದ್ದುಕೊಂಡಿರದೇಹೋಗಿದ್ದರೆ, ಆಗ ಮೃತ್ಯುವು- ಎಂದರೆ ಹುಟ್ಟು, ಸಾವು- ಮುಂತಾದ ರೂಪದ ಸಂಸಾರವು ಇರುತ್ತಿರಲಿಲ್ಲ. ಏಕೆಂದರೆ ಸಂಸಾರಿಯಾದ ಜೀವನೇ ಇಲ್ಲದಿರುವಾಗ (ಸಂಸಾರವು ಹೇಗಿದ್ದೀತು?) ಹಾಗೆಯೇ ಅಮೃತವು- ಅಮೃತತ್ವವೆಂಬ ಮೋಕ್ಷವೂ ಇದ್ದುಕೊಂಡಿರಲಾರದು. ಏಕೆಂದರೆ ಸಂಸಾರದಲ್ಲಿ ಪ್ರವೇಶಮಾಡದೆಇರುವವನಿಗೆ ದರ್ಶನ ಜ್ಞಾನ(ವೂ) ಹೊಂದುವ

---

1. ಅಥರ್ವಣವೇದದಲ್ಲಿರುವ ಮಂತ್ರವು ಹೀಗಿದೆ :- "ಏಕಂ ಪಾದಂ ನೋತ್ಖಿದತಿ ಸಲಿಲಾದ್ಧಂಸ ಉಚ್ಚರನ್ । ಯದಙ್ಗ ಸ ತಮುತ್ಖಿದೇನ್ನೈವಾದ್ಯ ನ ಶ್ವಃ ಸ್ಯಾನ್ನ ರಾತ್ರೀ ನಾಹಃ ಸ್ಯಾನ್ನ ವ್ಯುಚ್ಛೇತ್ ಕದಾಚನ ॥"

ಹಾಗಿಲ್ಲ.[1] ಹಾಗೂ (ಆ ಸಂಸಾರವೆಂಬ ವ್ಯವಹಾರದ ಸಿದ್ಧಿಗಾಗಿಯೇ) ಅನುಪ್ರವೇಶವನ್ನು 'ಒಂದೊಂದು ರೂಪಕೂ ಪ್ರತಿರೂಪನಾದನು' ಎಂದು ಹೇಳಿದೆ. ಮತ್ತು ಆಥರ್ವಣಶ್ರುತಿಯೂ- 'ಹಂಸನು ಸಂಚರಿಸುತ್ತಾ ಒಂದು ಕಾಲನ್ನು ಮೇಲಕ್ಕೆತ್ತುವದಿಲ್ಲ. ಅವನು ಹಾಗೆ ಎತ್ತಿದ್ದೇ ಆದರೆ ಸಂಸಾರವೂ ಇಲ್ಲ; ಮೋಕ್ಷವೂ ಇಲ್ಲ ಎಂದು ಹೇಳುತ್ತಿದೆ. 'ಯಾವನು (ತನ್ನ) ಒಂದೇ ರೂಪವನ್ನು ಬಹುರೂಪವಾಗಿ ಮಾಡಿಕೊಂಡಿರುವನೋ' ಎಂದೂ ಹೇಳಿದೆ. (ಹೀಗೆ) ಯಾವನು ಜೀವಾತ್ಮವೆಂಬ ಒಂದು ಪಾದದಿಂದಲೂ ಚಿತ್ಸದಾನಂದಾದ್ವಿತೀಯವಾದ ಮೂರು ಪಾದಗಳ ರೂಪವಾದ ಬ್ರಹ್ಮಾತ್ಮಸ್ವರೂಪದಿಂದಲೂ ಇದ್ದುಕೊಂಡಿರುವನೋ ಆ ಪರಮಾತ್ಮನನ್ನು ಯೋಗಿಗಳು ಮಾತ್ರವೇ ಕಾಣುವರು.

## ಜೀವನ ನಿಜಸ್ವರೂಪ

ಅಙ್ಗುಷ್ಠಮಾತ್ರಃ ಪುರುಷೋಽನ್ತರಾತ್ಮಾ
ಲಿಙ್ಗಸ್ಯ ಯೋಗೇನ ಸ ಯಾತಿ ನಿತ್ಯಮ್ ।
ತಮೀಶಮೀಡ್ಯಮನುಕಲ್ಪಮಾದ್ಯಂ
ಪಶ್ಯನ್ತಿ ಮೂಢಾ ನ ವಿರಾಜಮಾನಮ್ ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೨ ॥

೧೨. ಅಂತರಾತ್ಮನಾದ ಪುರುಷನು ಲಿಂಗ(ವೆಂಬ ಉಪಾಧಿಯ) ನಿಮಿತ್ತವಾಗಿ ಯಾವಾಗಲೂ (ಸಂಸಾರಿಯಾಗಿ)ರುತ್ತಾನೆ. ಸರ್ವೇಶ್ವರನೂ ಸ್ತುತ್ಯನೂ ಎಲ್ಲವನ್ನೂ ಒಳಹೊಕ್ಕು ತಾನಾಗಿಯೇ ತೋರಿಕೊಳ್ಳುವವನೂ ಆದಿಯಲ್ಲಿರುವವನೂ ಹೊಳೆಯುತ್ತಿರುವವನೂ ಆದ ಅವನನ್ನು ಮೂಢರು ಕಾಣುವದಿಲ್ಲ. ಪೂಜ್ಯನೂ ಸನಾತನನೂ ಆದ ಅವನನ್ನು ಯೋಗಿಗಳು ಕಾಣುವರು.

(ಭಾಷ್ಯ)

ಕೇನ ತರ್ಹ್ಯುಪಾಧಿನಾ ಪರಃ ಪಾದಾತ್ಮನಾ ಅವತಿಷ್ಠತ ಇತ್ಯಾಶಙ್ಕ್ಯ ಪರಸ್ಯೈವ ಲಿಙ್ಗೋಪಾಧಿಕಂ ಜೀವಾತ್ಮಾನಂ ದರ್ಶಯತಿ । ಸ ಏವ ಸಚ್ಚಿದಾನನ್ದಾದ್ವಿತೀಯಃ ಅನ್ತರಾತ್ಮಾ ಸರ್ವಭೂತಾನ್ತರಾತ್ಮಾ ಪುರುಷಃ ಪೂರ್ಣಃ ಪರಮಾತ್ಮಾ ಲಿಙ್ಗಸ್ಯ ಯೋಗೇನ ಅಙ್ಗುಷ್ಠಮಾತ್ರಃ ಅಙ್ಗುಷ್ಠಮಾತ್ರಪರಿಮಾಣಪರಿಚ್ಛಿನ್ನಃ ಸನ್ ಯಾತಿ ಸಂಸರತಿ ನಿತ್ಯಮ್ । ಕಸ್ಮಾತ್ ಪುನಃ ಕಾರಣಾದ್

---

1. ಬಂಧವು ಅವಿದ್ಯಾಕೃತವಾದ್ದರಿಂದಲೇ ಮೋಕ್ಷವೂ ಅವಿದ್ಯಾಕೃತವೇ- ಎಂದು ಅಭಿಪ್ರಾಯ. ಗೌ. ಕಾ. ೧-೧೭ನ್ನು ನೋಡಿ.

ಲಿಙ್ಗಯೋಗೇನ ಅಙ್ಗುಷ್ಠಮಾತ್ರಃ ಸಂಸರತಿ? ತತ್ರಾಹ– ಯೋ ಲಿಙ್ಗಸ್ಯ ಯೋಗೇನ ಅಙ್ಗುಷ್ಠಮಾತ್ರಃ ಸಂಸರತಿ; ತಮ್ ಈಶಂ ಸರ್ವಸ್ಯೇಶಿತಾರಮ್ ಈಡ್ಯಂ ಸ್ತುತ್ಯಮ್ ಅನುಕಲ್ಪಂ ಸರ್ವಮನುಪ್ರವಿಶ್ಯ ಆತ್ಮನಾ ಕಲ್ಪಯತೀತ್ಯನುಕಲ್ಪಮ್ ಆದ್ಯಮ್ ಆದೌ ಭವಂ ವಿರಾಜಮಾನಂ ದೀಪ್ಯಮಾನಂ ಯಸ್ಮಾತ್ ಮೂಢಾಃ ಅವಿವೇಕಿನಃ ದೇಹದ್ವಯಾತ್ಮಾಭಿಮಾನಿನಃ ನ ಪಶ್ಯನ್ತಿ, ತಸ್ಮಾದೇವಾತ್ಮನೋ ಬ್ರಹ್ಮಭಾವಾನವಗಮಾತ್ ಸಂಸರನ್ತೀತಿ। ಯಮಾತ್ಮಾನಮನುಪಶ್ಯನ್ತಃ ಸಂಸರನ್ತಿ ತಂ ಯೋಗಿನ ಏವ ಪಶ್ಯನ್ತಿ ॥

(ಭಾಷ್ಯಾರ್ಥ)

ಹಾಗಾದರೆ ಯಾವ ಉಪಾಧಿಯ ಮೂಲಕ ಪರಮಾತ್ಮನು ಪಾದರೂಪದಿಂದ ಇದ್ದುಕೊಂಡಿರುವನು? ಎಂದು ಶಂಕಿಸಿ ಪರಮಾತ್ಮನದೇ ಆದ ಲಿಂಗವೆಂಬ ಉಪಾಧಿಯಾಗಿರುವ ಜೀವಾತ್ಮನನ್ನು ತಿಳಿಸುತ್ತಾನೆ. ದಾನಂದಾದ್ವಿತಿಯನೂ ಎಲ್ಲರ ಒಳಹೊಕ್ಕಿರುವವನೂ ಸರ್ವಭೂತಗಳ ಅಂತರಾತ್ಮನೂ ಪುರುಷನೂ ಪೂರ್ಣನೂ ಆದ ಆ ಪರಮಾತ್ಮನೇ ಲಿಂಗದ ಸಂಬಂಧದಿಂದ[1] ಅಂಗುಷ್ಠಮಾತ್ರನಾಗಿ– ಎಂದರೆ ಅಂಗುಷ್ಠದಷ್ಟು ಅಳತೆಯಿಂದ ಒಟ್ಟುವಡೆದವನಾಗಿ ಯಾವಾಗಲೂ ತಿರುಗುತ್ತಾನೆ– ಎಂದರೆ ಸಂಸಾರಿಯಾಗಿ ಸತ್ತುತ್ತಾನೆ. (ಹೀಗೆ) ಉಪಾಧಿಸಂಬಂಧದಿಂದ ಅಂಗುಷ್ಠಮಾತ್ರನಾಗಿ ಸಂಸಾರಮಾಡಲು ಕಾರಣವಾದರೂ ಏನಿರಬಹುದು? ಎಂದರೆ ಹೇಳುತ್ತಾರೆ– ಯಾವನು ಈ ಉಪಾಧಿಯಿಂದ ಅಂಗುಷ್ಟಮಾತ್ರನಾಗಿ ಸಂಸಾರಮಾಡುತ್ತಿರುವನೋ[2] ಆ ಈಶನನ್ನು ಸರ್ವಕ್ಕೂ ಒಡೆಯನೂ ಈಡ್ಯನೂ ಸ್ತುತಿಗೆ ಅರ್ಹನಾದವನೂ ಆದ ಅನುಕಲ್ಪನನ್ನು– ಎಂದರೆ ಎಲ್ಲವನ್ನೂ ಒಳಹೊಕ್ಕು ತನ್ನ ಸ್ವರೂಪದಿಂದ ಎಲ್ಲವನ್ನೂ ಉಂಟುಮಾಡುತ್ತಾನಾದ್ದರಿಂದ ಅನುಕಲ್ಪನು. ಆದ್ಯನೆಂದರೆ ಆದಿಯಲ್ಲಿದ್ದುಕೊಂಡಿರುವವನು; ವಿರಾಜಮಾನನು ಎಂದರೆ ಹೊಳೆಯುವವನು; ಅವಿವೇಕಿಗಳಾದ ಮೂಢರು ಎರಡು ದೇಹಗಳಲ್ಲಿ ಅಭಿಮಾನವುಳ್ಳವರಾಗಿ(ರುವ) ಕಾರಣದಿಂದ[3] ಕಾಣುವದಿಲ್ಲವೋ, ಆದ್ದರಿಂದಲೇ– ಎಂದರೆ ಆತ್ಮನೇ ಬ್ರಹ್ಮವೆಂದು ಅರಿಯದಿರುವದರಿಂದಲೇ ಸಂಸಾರಿಗಳಾಗಿರುತ್ತಾರೆ. ಯಾವ ಈ ಆತ್ಮನನ್ನರಿಯದೆ ಸಂಸಾರದಲ್ಲಿ ತೊಳಲುತ್ತಿರುವರೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

---

1. ಶರೀರ, ಪ್ರಾಣ, ಮನಸ್ಸು– ಮುಂತಾದ ಉಪಾಧಿಗಳ ಸಂಬಂಧದಿಂದ.

2. ಉಪಾಧಿವಿಶಿಷ್ಟನಾಗಿರುವದೇ ಸಂಸಾರಿಯಾಗಿರಲು ಕಾರಣವೆಂದು ತಿಳಿಸಿದಂತಾಯಿತು.

3. ಸ್ಥೂಲ, ಸೂಕ್ಷ್ಮ ಅಥವಾ ಲಿಂಗ– ಎಂಬ ಎರಡು ದೇಹಗಳೆಂದು ಅಭಿಪ್ರಾಯವಿರಬಹುದು.

## ವಿಷಯೇಂದ್ರಿಯಸಂಯೋಗದಿಂದಾಗುವ ಅನರ್ಥ

**ಗೂಹನ್ತಿ ಸರ್ಪಾ ಇವ ಗಹ್ವರೇಷು[1]**
**ಕ್ಷಯಂ ನೀತ್ವಾ ಸ್ವೇನ ವೃತ್ತೇನ ಮರ್ತ್ಯಾನ್[2] ।**
**ತೇ ವಿಪ್ರಮುಹ್ಯನ್ತಿ[3] ಜನಾ ವಿಮೂಢಾ-**
**ಸ್ತೈರ್ದತ್ತಾ ಭೋಗಾ[4] ಮೋಹಯನ್ತೇ ಭವಾಯ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೩ ॥**

೧೩. ಹಾವುಗಳು ಪೊಟರೆಗಳಲ್ಲಿ ತಮ್ಮನ್ನು ಮುಚ್ಚಿಕೊಂಡಿದ್ದು ಹೊರಬರುವಂತೆ, ಮನುಷ್ಯರನ್ನು ತಮ್ಮ (ವಿಷಯ)ಭೋಗಗಳಿಂದ ನಾಶ ಮಾಡಿ (ಇಂದ್ರಿಯಗಳು ಕಣ್ಮರೆಯಾಗುವವು). ವಿಮೂಢರಾದ ಜನರು ಅವುಗಳು ಕೊಟ್ಟ ಭೋಗದಿಂದ ಮೋಹಗೊಳ್ಳುವರು. ಸಂಸಾರವನ್ನೇ ಮೋಹದಿಂದ ಹೊಂದುವರು. ಯೋಗಿಗಳು (ಮಾತ್ರ) ಆ ಸನಾತನನಾದ ಭಗವಂತನನ್ನು ಕಾಣುವರು.

**(ಭಾಷ್ಯ)**

**ಇದಾನೀಮ್ ಇನ್ದ್ರಿಯಾಣಾಂ ವಿಷಯಾಣಾಂ ಚ ಅನರ್ಥಹೇತುತ್ವಂ ದರ್ಶಯತಿ– ಯಥಾ ಸರ್ಪಾ ಗಹ್ವರೇಭ್ಯೋ ನಿಷ್ಕ್ರಮ್ಯ ಸ್ವೇನ ವೃತ್ತೇನ ವಿಷಪ್ರದಾನೇನ ಮರ್ತ್ಯಾನ್ ಕ್ಷಯಂ ನೀತ್ವಾ ಗಹ್ವರೇಷು ಗೂಹನ್ತಿ ಸ್ವಮಾತ್ಮಾನಂ ಪ್ರಚ್ಛಾದಯನ್ತಿ, ಏವಮಿನ್ದ್ರಿಯಸರ್ಪಾಃ ಶ್ರೋತ್ರಾದಿಷು ಶಯಾನಾಃ ಶ್ರೋತ್ರಾದಿಭ್ಯೋ ನಿರ್ಗತ್ಯ ಸ್ವೇನ ವೃತ್ತೇನ ವಿಷಯವಿಷಪ್ರದಾನೇನ ಮರ್ತ್ಯಾನ್ ಕ್ಷಯಂ ನೀತ್ವಾ ಗಹ್ವರೇಷು ಗೂಹನ್ತಿ ಸ್ವಮಾತ್ಮಾನಂ ಪ್ರಚ್ಛಾದಯನ್ತಿ ; ತೇ ವಿಪ್ರಮುಹ್ಯನ್ತಿ ವಿಷಯವಿಷಾಭಿಭೂತಾಃ ವಿಶೇಷೇಣ ಮುಹ್ಯನ್ತಿ, ವ್ಯತಿರಿಕ್ತಂ ಕಿಂಚಿನ್ನ ಜಾನನ್ತೀತ್ಯರ್ಥಃ । ತಥಾ ಚ ಶ್ರುತಿಃ 'ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತಃ' ( ಬೃಹ. ೪–೩–೨೧ ) ಇತಿ । ತೈಃ ಇನ್ದ್ರಿಯಸರ್ಪೈಃ ದತ್ತಾಃ ಭೋಗಾಃ ವಿಷಕಲ್ಪಾಃ ವಿಷಯಾಃ ಮರ್ತ್ಯಾನ್ ಮೋಹಯನ್ತೇ ಪುನಃ ಪುನರ್ಮೋಹನಹೇತವೋ ಭವನ್ತಿ । ಯದಿದಂ ವಿಷಯೈರ್ಮೋಹನಮ್, ತತ್ ಭವಾಯ ಗರ್ಭಜನ್ಮಜರಾಮರಣಸಂಸಾರಾಯ ಭವತಿ । ಯಮನವದ್ಯಮನುಕಲ್ಪಮಾದ್ಯಮ್ ಅದೃಷ್ಟ್ವಾ ವಿಷಯವಿಷಾನ್ಧಾಃ ಮುಹ್ಯನ್ತಿ, ತಂ ಯೋಗಿನ ಏವ ಪಶ್ಯನ್ತಿ ॥**

---

1. 'ಗಹ್ವರಾಣಿ' 2. 'ಸ್ವಶಿಕ್ಷಯಾ ಸ್ವೇನ ವೃತ್ತೇನ ಮರ್ತ್ಯಾಃ'
3. 'ತೇಷು ಪ್ರಮುಹ್ಯನ್ತಿ'
4. 'ಯಥಾಧ್ಯಾನಮ್' ಎಂದು ಮ॥ಭಾ॥ ಪಾಠಗಳು.

( ಭಾಷ್ಯಾರ್ಥ )

ಈಗ ಇಂದ್ರಿಯಗಳು ಮತ್ತು ವಿಷಯಗಳೂಕೂಡ ಅನರ್ಥಕ್ಕೇ ಕಾರಣವಾಗಿವೆಯೆಂಬುದನ್ನು ತಿಳಿಸುತ್ತಾನೆ– ಹೇಗೆ ಹಾವುಗಳು ಪೊಟರೆಗಳಿಂದ ಹೊರಬಂದು ತಮ್ಮ ಕೆಲಸದಿಂದ ಎಂದರೆ ವಿಷವನ್ನು ಕೊಡುವದರಿಂದ (ಕಚ್ಚುವ ಮೂಲಕ) ಮನುಷ್ಯ?ನ್ನು ನಾಶಗೊಳಿಸಿ (ಮತ್ತೆ ತಮ್ಮನ್ನು) ಪೊಟರೆಗಳಲ್ಲಿ ಮುಚ್ಚಿಟ್ಟುಕೊಳ್ಳುವವೋ ತಮ್ಮನ್ನು ಅಡಗಿಸಿಕೊಳ್ಳುವವೋ ಹಾಗೆಯೇ ಇಂದ್ರಿಯಗಳೆಂಬ ಹಾವುಗಳು ಕಿವಿಯೇ ಮುಂತಾದ (ಗೋಳಕಗಳಲ್ಲಿ) ಮಲಗಿಕೊಂಡಿದ್ದು ಕಿವಿ ಮುಂತಾದವುಗಳಿಂದ ಹೊರಬಂದು ತಮ್ಮ ವ್ಯಾಪಾರದಿಂದ ವಿಷಯಗಳೆಂಬ ವಿಷವನ್ನು ಕೊಡುವದರಮೂಲಕ ಮನುಷ್ಯರನ್ನು ಹಾಳುಮಾಡಿ ಗುಪ್ತವಾದ ಸ್ಥಳಗಳಲ್ಲಿ ಅಡಗಿಕೊಳ್ಳುವವು, ತಮ್ಮನ್ನು ಮುಚ್ಚಿಟ್ಟುಕೊಳ್ಳುವವು, ಅವರು (ಮನುಷ್ಯರು) ವಿಷಯಗಳೆಂಬ ವಿಷದಿಂದ ಮೋಹಿತರಾಗಿ ದಾರಿಗಾಣದವರಾಗುವರು ; ವಿಶೇಷವಾಗಿ ಮೋಹವನ್ನು ಹೊಂದಿ (ವಿಷಯಗಳಿಗಿಂತ) ಬೇರೊಂದು ಏನನ್ನೂ ಕಾಣದಾಗುವರು– ಎಂದರ್ಥ. ಶ್ರುತಿಯೂಕೂಡ– 'ಹೇಗೆ ಪ್ರಿಯಳಾದ ಸ್ತ್ರೀಯೊಡನೆ ಒಂದಾದವನು'[1] ಎಂದು ಹೇಳುತ್ತಿದೆ. ಆ ಇಂದ್ರಿಯಗಳೆಂಬ ಹಾವುಗಳಿಂದ ಕೊಡಲ್ಪಟ್ಟ ಭೋಗರೂಪವಾದ ವಿಷಯಗಳು ವಿಷಕ್ಕೆ ಸಮಾನವಾಗಿದ್ದುಕೊಂಡು ಮನುಷ್ಯರನ್ನು ಮೋಹಗೊಳಿಸುತ್ತಾ ಮತ್ತೆಮತ್ತೆ ಅವಿವೇಕಕ್ಕೇ ಕಾರಣವಾಗಿರುವವು. ಈ ವಿಷಯಗಳಿಂದ ಮೋಹನವೆಂಬುದಿದೆಯಲ್ಲ, ಅದು ಸಂಸಾರಕ್ಕೆ ಎಂದರೆ ಗರ್ಭವಾಸ, ಹುಟ್ಟುವಿಕೆ, ಮುಪ್ಪು, ಮರಣ- ಮುಂತಾದ ರೂಪವಾದ ಸಂಸಾರಕ್ಕೆ ಕಾರಣವಾಗುವದು. ಯಾವ-ದೋಷರಹಿತನೂ ಅನುಕಲ್ಪನೂ ಆದ್ಯನೂ ಆಗಿರುವ (ಆತ್ಮನನ್ನು) ಕಾಣದೆ ವಿಷಯಗಳೆಂಬ ವಿಷದಿಂದ ಅಂಧರಾಗಿ ಮೋಹಗೊಳ್ಳುವರೋ– ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

## ಜ್ಞಾನಿಗಳಿಗೆ ದೊರಕುವ ಮೋಕ್ಷ

**ಅಸಾಧನಾ ವಾಪಿ ಸಸಾಧನಾ ವಾ**
**ಸಮಾನಮೇತದ್ ದೃಶ್ಯತೇ ಮಾನುಷೇಷು ।**
**ಸಮಾನಮೇತದಮೃತಸ್ಯೇತರಸ್ಯ**
**ಯುಕ್ತಾಸ್ತತ್ರ ಮಧ್ವ ಉತ್ಸಂ ಸಮಾಪುಃ ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೪ ॥**

---

1. ಈ ಶ್ರುತಿಯಲ್ಲಿ 'ಸ್ತ್ರೀಯೊಡನೆ ಆಲಿಂಗಿತನಾದವನು ತನಗಿಂತ ಬೇರೊಂದನ್ನು ಹೇಗೆ ಕಾಣುವದಿಲ್ಲವೋ ಹಾಗೆ ಪ್ರಾಜ್ಞನಿಂದ ಆಲಿಂಗಿತನಾದ ಈ ಆತ್ಮನು ತಾನೊಬ್ಬನೇ ಆಗಿರುವದರಿಂದ ಸುಷುಪ್ತಿಯಲ್ಲಿ ದ್ವೈತವನ್ನು ಕಾಣುವದಿಲ್ಲ'– ಎಂದು ತಿಳಿಸಿದೆ. ಇಲ್ಲಿ ಭಾಷ್ಯಕಾರರು ಈ ದೃಷ್ಟಾಂತವನ್ನು ಉಪಯೋಗಿಸಿರುವ ರೀತಿಯು ಭಿನ್ನವಾಗಿದೆ.

೧೪. (ಜ್ಞಾನ)ಸಾಧನವಿಲ್ಲದವರಾಗಲಿ, ಸಾಧನವುಳ್ಳವರಾಗಲಿ, ಎಲ್ಲ ಮನುಷ್ಯರಲ್ಲಿಯೂ ಆತ್ಮಸ್ವರೂಪವು ಸಮಾನವಾಗಿ ಕಂಡುಬರುವದು. ಹಾಗೂ ಮೋಕ್ಷಕ್ಕೂ ಸಂಸಾರಕ್ಕೂ ಇದು ಸಮಾನವಾಗಿರುವದು. ಯುಕ್ತರಾದವರು ಅಲ್ಲಿ ಮಧುವಿನ ಪೂರ್ಣಾನಂದವನ್ನು ಪಡೆಯುವರು.

( ಭಾಷ್ಯ )

ಜ್ಞಾನಿನಾಂ ಮೋಕ್ಷಸ್ವರೂಪಮಾಹ- ಯೇ ಅಸಾಧನಾಃ ಶಮದಮಾದಿ ಸಾಧನರಹಿತಾಃ, ಯೇ ಚ ಶಮಾದಿಸಾಧನಯುಕ್ತಾಃ ಸಸಾಧನಾಃ ತೇಷು ಸಮಾನಂ ಸಾಧಾರಣಮ್ ಆತ್ಮಸ್ವರೂಪಂ ದೃಶ್ಯತೇ ಮಾನುಷೇಷು । ತಥಾ ಸಮಾನಂ ಅಮೃತಸ್ಯ ಮೋಕ್ಷಸ್ಯ ಇತರಸ್ಯ ಸಂಸಾರಸ್ಯ ಸತಿ ಚಾಸತಿ ಚ ತೇಷಾಂ ಮಧ್ಯೇ ಯೇ ಯುಕ್ತಾಃ ಶಮದಮಾದಿಸಾಧನಯುಕ್ತಾಃ ತೇ ತಸ್ಮಿನ್ ವಿಷ್ಣೋಃ ಪರಮೇ ಪದೇ ಮಧ್ವಃ ಮಧುನಃ ಉತ್ಸಂ ಸಮಾಪುಃ ಪೂರ್ಣಾನನ್ದಂ ಬ್ರಹ್ಮಸಮಾಪ್ನುವನ್ತೀತ್ಯರ್ಥಃ । ಯಮುತ್ಸಂ ಸಂಪೂರ್ಣಾನನ್ದಂ ಯುಕ್ತಾಃ ಪ್ರಾಪ್ನುವನ್ತಿ ತಂ ಯೋಗಿನ ಏವ ಪಶ್ಯನ್ತಿ ॥

(ಭಾಷ್ಯಾರ್ಥ)

ಜ್ಞಾನಿಗಳಿಗೆ ಉಂಟಾಗುವ ಮೋಕ್ಷದ ಸ್ವರೂಪವನ್ನು ಹೇಳುತ್ತಾನೆ- ಯಾರು ಶಮ, ದಮ- ಮುಂತಾದ ಸಾಧನಗಳಿಲ್ಲದವರಾಗಿ ಅಸಾಧನರಾಗಿರುವರೋ ಮತ್ತು ಯಾರು ಶಮವೇ ಮುಂತಾದ ಸಾಧನಗಳಿಂದ ಕೂಡಿದವರಾಗಿ ಸಸಾಧನರಾಗಿರುವರೋ ಅವರುಗಳಲ್ಲಿ ಎಂದರೆ ಆ ಮನುಷ್ಯರಲ್ಲಿ ಆತ್ಮಸ್ವರೂಪವು ಸಮಾನವಾಗಿರುವದು ; ಸಾಧಾರಣವಾಗಿರುವದು. ಹಾಗೆಯೇ ಅಮೃತ(ರೂಪ)ವಾದ ಮೋಕ್ಷದ ಮತ್ತು ಇತರವೆಂದರೆ ಸಂಸಾರದ (ಈ ಎರಡು ಸ್ಥಿತಿಯಲ್ಲೂ) (ಸಾಧನ)ಗಳಿರಲಿ, ಇಲ್ಲದಿರಲಿ ಆತ್ಮಸ್ವರೂಪವು ಒಂದೇ ಆಗಿರುವದು. ಆ (ಮನುಷ್ಯರ) ನಡುವೆ ಯಾರು ಶಮದಮಾದಿಸಾಧನಗಳಿಂದ ಕೂಡಿದವರಾಗಿರುವರೋ, ಅವರು ಆ ವಿಷ್ಣುವಿನ ಪರಮಪದದಲ್ಲಿ ಮಧ್ವವೆಂದರೆ ಮಧುವಿನ ಉತ್ಸವನ್ನು ಪಡೆದುಕೊಂಡರು.[1] ಪೂರ್ಣಾನಂದಸ್ವರೂಪವಾದ ಬ್ರಹ್ಮವನ್ನು ಪಡೆದುಕೊಳ್ಳುತ್ತಾರೆ – ಎಂದಭಿಪ್ರಾಯ. ಸಂಪೂರ್ಣಾನಂದವಾದ ಯಾವ ಉತ್ಸ(ಸ್ಥಾನ)ವನ್ನು ಯುಕ್ತರು ಪಡೆಯುವರೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

1. ಋಗ್ವೇದ ೧–೨೧–೧೫೪–೫ರಲ್ಲಿರುವ 'ವಿಷ್ಣೋಃ ಪದೇ ಪರಮೇ ಮಧ್ವ ಉತ್ಸಃ' ಎಂಬ ಮಂತ್ರದ ಅರ್ಥವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

ಉಭೌ ಲೋಕೌ ವಿದ್ಯಯಾ ವ್ಯಾಪ್ಯ ಯಾನ್ತಿ
ತದಾಹುತಂ ಚಾಹುತಮಗ್ನಿಹೋತ್ರಮ್ ।
ಮಾ ತೇ ಬ್ರಾಹ್ಮೀ ಲಘುತಾಮಾದಧೀತ
ಪ್ರಜ್ಞಾನಂ ಸ್ಯಾನ್ನಾಮ ಧೀರಾ ಲಭನ್ತೇ ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೫ ॥

೧೫. (ಬ್ರಹ್ಮ)ವಿದ್ಯೆಯಿಂದ ಇಹಲೋಕಪರಲೋಕಗಳೆರಡನ್ನೂ ವ್ಯಾಪಿಸಿಕೊಂಡು ಜ್ಞಾನಿಗಳು ಪಡೆದುಕೊಳ್ಳುವರು. ಆಹುತವಾದ ಅಗ್ನಿಹೋತ್ರವೂ (ಅವರಿಗೆ) ಹುತವೇ ಆಗಿರುವದು. (ಎಲೈ ರಾಜನೆ), ನಿನ್ನ ಬ್ರಹ್ಮವಿಷಯವಾದ ತಿಳಿವಳಿಕೆಯು ಲಘುಭಾವವನ್ನು ಹೊಂದದೆ ಇರಲಿ! ಧೀರರು ಪ್ರಜ್ಞಾನವೆಂಬ ಹೆಸರಿನ (ಬ್ರಹ್ಮವನ್ನು) ಪಡೆಯುವರು.

(ಭಾಷ್ಯ)

ಕಿಂ ಚ– ಉಭೌ ಲೋಕೌ ಇಹಲೋಕಪರಲೋಕೌ ವಿದ್ಯಯಾ ಬ್ರಹ್ಮಾತ್ಮತ್ವವಿಷಯಯಾ ವ್ಯಾಪ್ಯ ಯಾತಿ ತತ್ ಪೂರ್ಣಾನನ್ದಂ ಬ್ರಹ್ಮ । ಯಸ್ಮಾದುಭೌ ಲೋಕೌ ವಿದ್ಯಯಾ ವ್ಯಾಪ್ಯ ಯಾತಿ ತಸ್ಮಾತ್ ಅಹುತಂ ಚಾಗ್ನಿಹೋತ್ರಮ್ ಅನೇನ ಆತ್ಮಜ್ಞಾನೇನ ಆಹುತಮ್ ಆಭಿಮುಖ್ಯೇನ ಹುತಂ ಭವತಿ । ಸರ್ವಮಗ್ನಿಹೋತ್ರಾದಿಕರ್ಮಫಲಮನೇನೈವ ಸಂಪಾದಿತಂ ಭವತೀತ್ಯರ್ಥಃ । ಯಸ್ಮಾದುಭೌ ಲೋಕೌ ವಿದ್ಯಯಾ ವ್ಯಾಪ್ಯ ಯಾತಿ, ಯಸ್ಮಾದಹುತಂ ಚಾಗ್ನಿಹೋತ್ರಂ ಹುತಂ ಭವತಿ, ತಸ್ಮಾತ್ ಮಾ ತೇ ತವ ಬ್ರಾಹ್ಮೀ ಬ್ರಹ್ಮವಿಷಯಾ ವಿದ್ಯಾ ಲಘುತಾಂ ಲಘುತ್ವಂ ಮರ್ತ್ಯಭಾವಂ ಕರ್ಮವತ್ ಆದಧೀತ ನ ಕರೋತಿ, ಅಪಿ ತು ಪ್ರಜ್ಞಾನಂ ತಮಸಃ ಪಾರಂ ಪರಮಾತ್ಮಾನಮ್ ಆತ್ಮತ್ವೇನ ಸಂಪಾದಯತಿ ಯದಾ ಬ್ರಹ್ಮವಿದ್ಯಾವ್ಯಾಪೃತಸ್ಯ ಪರಮಾತ್ಮಾನಮಾತ್ಮತ್ವೇನ ಅವಗಚ್ಛತಃ ಪ್ರಜ್ಞಾನಮ್ ಇತಿ ನಾಮ ಸ್ಯಾತ್ । ಬ್ರಹ್ಮೇತಿ ನಾಮ ಭವತೀತ್ಯರ್ಥಃ । ತಥಾ ಚ ಶ್ರುತಿಃ– 'ಪ್ರಜ್ಞಾನಂ ಬ್ರಹ್ಮ' (ಐ. ೮–೩) ಇತಿ । ತತ್ಪ್ರಜ್ಞಾನಂ ಬ್ರಹ್ಮ ಧೀರಾ ಧೀಮನ್ತಃ ಲಭನ್ತೇ । ಯತ್ಪ್ರಜ್ಞಾನಂ ಬ್ರಹ್ಮ ಧೀರಾ ಲಭನ್ತೇ, ತಂ ಯೋಗಿನ ಏವ ಪಶ್ಯನ್ತಿ ॥

( ಭಾಷ್ಯಾರ್ಥ )

ಮತ್ತು ಈ ಲೋಕ, ಪರಲೋಕಗಳೆಂಬ ಎರಡು ಲೋಕಗಳನ್ನೂ ಬ್ರಹ್ಮಾತ್ಮವಿಷಯಕವಾದ ವಿದ್ಯೆಯಿಂದ ವ್ಯಾಪಿಸಿಕೊಂಡು ಆ ಪೂರ್ಣಾನಂದ ಸ್ವರೂಪವಾದ ಬ್ರಹ್ಮವನ್ನು (ಸಾಧಕನು) ಪಡೆಯುವನು. ಹೀಗೆ ಎರಡು ಲೋಕಗಳನ್ನೂ ವಿದ್ಯೆಯಿಂದ ಆವರಿಸಿಕೊಂಡು ಹೋಗುತ್ತಾನಷ್ಟೆ! ಆದ್ದರಿಂದ

ಹೋಮಮಾಡಲ್ಪಡದೆ ಇರುವ ಅಗ್ನಿಹೋತ್ರವು ಈ ಆತ್ಮಜ್ಞಾನಬಲದಿಂದ ಆಹುತವು- ಎಂದರೆ ಅಭಿಮುಖವಾಗಿ (ಪ್ರಧಾನವಾಗಿಯೇ) ಹೋಮಮಾಡಲ್ಪಟ್ಟಿದ್ದಾಗುವದು. ಅಗ್ನಿಹೋತ್ರಕರ್ಮದ ಫಲವೆಲ್ಲವನ್ನೂ ಈ ಜ್ಞಾನದಿಂದಲೇ ಪಡೆದುಕೊಂಡಂತಾಗುವದು.[1] ಹೀಗೆ ಎರಡು ಲೋಕಗಳನ್ನೂ ವಿದ್ಯೆಯಿಂದ ವ್ಯಾಪಿಸಿಕೊಂಡು ಹೋಗುವದರಿಂದಲೂ ಅಹುತವಾದ ಅಗ್ನಿಹೋತ್ರವೂ (ಜ್ಞಾನದಿಂದ) ಹುತವೇ ಆಗಿಬಿಡುವದರಿಂದಲೂ ನಿನಗೆ ಬ್ರಹ್ಮವಿಷಯವಾದ ಬ್ರಾಹ್ಮೀವಿದ್ಯೆಯು ಲಘುತ್ವವನ್ನು- ಹಗುರವಾದ ಕರ್ಮಭಾವವನ್ನು, ಎಂದರೆ ವಿನಾಶಸ್ವಭಾವವನ್ನು ಉಂಟುಮಾಡುವದಿಲ್ಲ. ಆದರೆ ಪ್ರಜ್ಞಾನವಾದ, ಕತ್ತಲೆಯ ಆಚೆಗಿರುವ ಪರಮಾತ್ಮನನ್ನು ಆತ್ಮನೆಂತ ತಿಳಿಸಿಕೊಡುತ್ತದೆ. ಯಾವಾಗ ಬ್ರಹ್ಮವಿದ್ಯೆಯಿಂದ ಕೂಡಿದವನಾಗಿ, ಹಾಗೂ ಪರಮಾತ್ಮನನ್ನೇ ತನ್ನ ಆತ್ಮನೆಂದು ತಿಳಿದವನಾಗುವನೋ ಆಗ ಪ್ರಜ್ಞಾನವೆಂಬ ಹೆಸರು ಉಂಟಾಗುವದು. ಬ್ರಹ್ಮವೆಂಬ ನಾಮವು ಪ್ರಾಪ್ತವಾಗುವದು.[2] ಶ್ರುತಿಯೂ ಕೂಡ- 'ಪ್ರಜ್ಞಾನವೇ ಬ್ರಹ್ಮವು' ಎಂದು ತಿಳಿಸುತ್ತಿದೆ. ಆ ಪ್ರಜ್ಞಾನವೆಂಬ ಬ್ರಹ್ಮವನ್ನು ಧೀಮಂತರಾದ ಧೀರರು ಪಡೆದುಕೊಳ್ಳುವರು. ಯಾವ ಈ ಪ್ರಜ್ಞಾನರೂಪವಾದ ಬ್ರಹ್ಮವನ್ನು ಧೀರರು ಪಡೆದುಕೊಳ್ಳುವರೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

ಏವಂರೂಪೋ ಮಹಾನಾತ್ಮಾ[3] ಪಾವಕಂ ಪುರುಷೋ ಗಿರನ್ ।
ಯೋ ವೈ ತಂ ಪುರುಷಂ ವೇದ ತಸ್ಯೇಹಾತ್ಮಾ[4] ನ ರಿಷ್ಯತೇ ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೬ ॥

೧೬. ಈ ರೂಪನಾದ ಮಹಾನಾತ್ಮನಾದ ಪುರುಷನು (ಎಲ್ಲವನ್ನೂ ನುಂಗುವ) ಪಾವಕನನ್ನೂ ತನ್ನಲ್ಲಿಯೇ ಅಡಗಿಸಿಕೊಳ್ಳುವನೋ, ಆ ಪುರುಷನನ್ನು ಯಾವನು ಬಲ್ಲನೋ ಅವನ ಆತ್ಮವು ನಾಶವಾಗುವದಿಲ್ಲ. ಸನಾತನನಾದ ಆ ಭಗವಂತನನ್ನು ಯೋಗಿಗಳು ಕಾಣುವರು.

(ಭಾಷ್ಯ)

ಕಿಂ ಚ- ಯಃ ಏವಂ ರೂಪಃ ಪ್ರಜ್ಞಾನೈಕರಸಬ್ರಹ್ಮಸ್ವರೂಪಃ ಸನ್ ಆಸ್ತೇ, ಸ ಆತ್ಮಾ ಮಹಾನ್ ಸಂಪದ್ಯತೇ ಬ್ರಹ್ಮೈವ ಸಂಪದ್ಯತೇ ಇತ್ಯರ್ಥಃ ।

---

1. 'ಎಲ್ಲಾ ಕರ್ಮಗಳೂ ಜ್ಞಾನದಲ್ಲಿಯೇ ಕೊನೆಗಾಣುವವು' (ಗೀ. ೪-೩೩) ಎಂಬ ಗೀತಾವಾಕ್ಯವನ್ನು ಇಲ್ಲಿ ಅನುಸಂಧಾನಮಾಡಿಕೊಳ್ಳಬೇಕು.

2. ಬ್ರಹ್ಮವನ್ನು ತನ್ನ ಆತ್ಮನಾಗಿ ಅರಿತುಕೊಂಡವನು ಬ್ರಹ್ಮವೇ ಆಗುವನು- ಎಂದರ್ಥ. 3. 'ಮಹಾತ್ಮಾ ಸಃ'

4. 'ತಸ್ಯೇಹಾರ್ಥೋ' ಎಂದು ಮ॥ ಭಾ॥ ಪಾಠಗಳು.

ಪಾವಕಮ್ ಅಗ್ನಿಂ ಸರ್ವೋಪಸಂಹರ್ತೃರೂಪಂ ಕಾರಣಂ ಕಾರ್ಯಂ ಚ ಗಿರನ್ ಸ್ವಾತ್ಮನ್ಯುಪಸಂಹರನ್ ಯೋ ವೈ ತಂ ಪುರುಷಂ ಜ್ಞಾನೈಕರಸಂ ಪುರುಷಂ ಪೂರ್ಣಂ ಪುರಿಶಯಂ ವೇದ 'ಅಯಮಹಮಸ್ಮಿ' ಇತಿ ಸಾಕ್ಷಾಜ್ಜಾನಾತಿ, ತಸ್ಯ ಪ್ರಜ್ಞಾನರೂಪಂ ಪರಮಾತ್ಮಾನಮ್ ಆತ್ಮತ್ವೇನ ಅವಗಚ್ಛತಃ ಇಹ ಅಸ್ಮಿನ್ನೇವ ದೇಹೇ ಆತ್ಮಾ ನ ರಿಷ್ಯತೇ, ನ ವಿನಶ್ಯತಿ, ವಿದುಷ ಉತ್ಕ್ರಾನ್ತೇರಭಾವಾತ್, ಉತ್ಕ್ರಾನ್ತಿನಿಮಿತ್ತತ್ವಾದ್ ವಿನಾಶಸ್ಯ | ತಥಾ ಚ ಶ್ರುತಿಃ ಪ್ರಶ್ನಪೂರ್ವಕಮುತ್ಕ್ರಾನ್ತ್ಯಭಾವಂ ದರ್ಶಯತಿ- 'ಉದಸ್ಮಾತ್ ಪ್ರಾಣಾಃ ಕ್ರಾಮನ್ತಿ ಆಹೋ ನೇತಿ ನೇತಿ ಹೋವಾಚ ಯಾಜ್ಞವಲ್ಕ್ಯೋಽತ್ರೈವ ಸಮವನೀಯನ್ತೇ' (ಬೃಹ. ೩-೨-೧೧), ' ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ' (ಬೃಹ. ೪-೪ ೬) ಇತಿ ಚ | ಯಂ ವಿದಿತ್ವಾ ನ ರಿಷ್ಯತೇ ತಂ ಯೋಗಿನ ಏವ ಪಶ್ಯನ್ತಿ ||

(ಭಾಷ್ಯಾರ್ಥ)

ಮತ್ತು ಈ ರೂಪನಾಗಿ- ಎಂದರೆ ಪ್ರಜ್ಞಾನವೇ ಏಕರಸವಾಗುಳ್ಳ ಬ್ರಹ್ಮಸ್ವರೂಪನಾಗಿ ಇದ್ದುಕೊಂಡಿರುತ್ತಾನೆ. ಆ ಆತ್ಮನು ಮಹಾನ್ ಎಂದಾಗುವನು- ಬ್ರಹ್ಮವೇ ಆಗುವನು ಎಂದರ್ಥ. ಯಾವನು ಪಾವಕನೆಂಬ ಅಗ್ನಿಯನ್ನು ಎಂದರೆ ಎಲ್ಲವನ್ನೂ ತನ್ನಲ್ಲಿ ಒಂದಾಗಿ ಮಾಡಿಕೊಳ್ಳುವ, ಕಾರಣದಿಂದ ಕೂಡಿದ ಕಾರ್ಯವೆಲ್ಲವನ್ನೂ ನುಂಗಿದ ಎಂದರೆ ತನ್ನಲ್ಲಿ ಅಡಗಿಸಿಕೊಂಡಿರುವ ಜ್ಞಾನವೊಂದೇ ಸಾರವಾಗುಳ್ಳ, ಪುರಿ- ಶರೀರಗಳಲ್ಲಿ ಶಯ- ಎಂದರೆ ಇದ್ದುಕೊಂಡಿರುವ ಪೂರ್ಣನಾದ ಪುರುಷನನ್ನು ಬಲ್ಲನೋ 'ಅವನೇ ನಾನಾಗಿರುತ್ತೇನೆ' ಎಂದು ಸಾಕ್ಷಾತ್ತಾಗಿ ತಿಳಿಯುವನೋ, ಅವನಿಗೆ ಎಂದರೆ ಪ್ರಜ್ಞಾನರೂಪನಾದ ಪರಮಾತ್ಮನನ್ನು ತನ್ನ ಆತ್ಮನೆಂದು ಅರಿತುಕೊಂಡಿರುವವನನಿಗೆ ಈ ದೇಹದಲ್ಲಿಯೇ ಆತ್ಮನು ನಾಶವಾಗುವದಿಲ್ಲ.[1] ಹಾಳಾಗುವದಿಲ್ಲ. (ಏಕೆಂದರೆ) ಜ್ಞಾನಿಗೆ (ಪ್ರಾಣಗಳ) ಉತ್ಕ್ರಾಂತಿಯಿರುವದಿಲ್ಲ. ವಿನಾಶವೆಂಬುದು ಉತ್ಕ್ರಾಂತಿನಿಮಿತ್ತವಾಗಿಯೇ ಆಗಬೇಕಷ್ಟೆ! ಹಾಗೂ ಶ್ರುತಿಯೂ ಕೂಡ ಪ್ರಶ್ನೆಹಾಕಿಕೊಂಡು (ಉತ್ತರಕೊಡುವ ರೂಪದಲ್ಲಿ) ಉತ್ಕ್ರಾಂತಿಯಿಲ್ಲವೆಂಬುದನ್ನು "ಇವನ (ಶರೀರ)

1. ಪರಬ್ರಹ್ಮವೇ ತಾನೆಂದು ಸಾಕ್ಷಾತ್ತಾಗಿ ಅರಿತಿರುವವನು ಈಗಲೇ ಮುಕ್ತನಾಗಿರುತ್ತಾನೆ. ವ್ಯವಹಾರದೃಷ್ಟಿಯಿಂದ ದೇಹಾದಿಗಳು ಇದ್ದರೂ ಅವನಿಗೆ ಅವು ಹಾವಿನ ಪೊರೆಯಂತೆ ತ್ಯಾಗಮಾಡಲ್ಪಟ್ಟಿರುವವು. ಆದ್ದರಿಂದ ಜ್ಞಾನಿಯ ಪ್ರಾಣಗಳು ಶರೀರ ಪಾತವಾದಾಗ ಮಹಾಪ್ರಾಣನಾದ ವಾಯುವಿನಲ್ಲಿ ಒಂದಾಗಿಬಿಡುವವು. ಸಂಸಾರಿಗಳಂತೆ ಅವನು ಲೋಕಾಂತರಗಳನ್ನು ಪಡೆಯುವದಿಲ್ಲ. ವಿದೇಹಮುಕ್ತನಾಗಿಬಿಡುವನು ಎಂದ ಅಭಿಪ್ರಾಯ.

ದಿಂದ ಪ್ರಾಣಗಳು ಮೇಲಕ್ಕೇರುವವೊ, ಇಲ್ಲವೊ? (ಎಂದು ಕೇಳಲಾಗಿ) ಯಾಜ್ಞವಲ್ಕ್ಯನು ಇಲ್ಲವೆಂದನು. (ಮತ್ತು) ಇಲ್ಲಿಯೇ ಒಂದಾಗಿಬಿಡುತ್ತವೆ" ಎಂದೂ "ಅವನ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲ. ಯಾವನು ಹೀಗೆಂದು ತಿಳಿಯುವನೋ ಅವನು ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಒಂದಾಗುವನು" ಎಂದೂ ಹೇಳುತ್ತಿದೆ. ಯಾವನನ್ನು ಅರಿತುಕೊಂಡ (ಜ್ಞಾನಿಯು) ನಾಶವಾಗುವದಿಲ್ಲವೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

ತಸ್ಮಾತ್ ಸದಾ ಸತ್ಕೃತಃ ಸ್ಯಾ-
ನ್ನ ಮೃತ್ಯುರಮೃತಂ ಕುತಃ[1] ।
ಸತ್ಯಾನೃತೇ ಸತ್ಯಸಮಾನುಬನ್ಧಿನೀ[2]
ಸತಶ್ಚ ಯೋನಿರಸತಶ್ಚೈಕ ಏವ ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೧೭ ॥

೧೭. ಆದ್ದರಿಂದ ಯಾವಾಗಲೂ ಸತ್ಕೃತನಾಗಿರಬೇಕು. ಆಗ ಮೃತ್ಯುವು ಇರುವದಿಲ್ಲ. (ಅದ್ದರಿಂದಲೇ) ಅಮೃತವೂ ಎಲ್ಲಿದ್ದೀತು ? ಸತ್ಯಾನೃತಗಳೆರಡೂ ಸತ್ಯವನ್ನೇ ಸಮಾನವಾಗಿ ಆಶ್ರಯಿಸಿರುವವು. ಸತ್ತಿಗೂ ಅಸತ್ತಿಗೂ ಒಬ್ಬನೇ ಕಾರಣವು. ಯೋಗಿಗಳು ಸನಾತನನಾದ ಆ ಭಗವಂತನನ್ನು ಕಾಣುವರು.

(ಭಾಷ್ಯ)

ಯಸ್ಮಾತ್ ತಸ್ಮಿನ್ವಿಜ್ಞಾನಾದೇವ ನಾತ್ಮನೋ [ವಿನಾಶಃ- (ತಸ್ಮಾತ್)[3] ಸದಾ ಸರ್ವದಾ ಅಹರ್ನಿಶಂ ಸತ್ಕೃತಃ ಸ್ಯಾತ್ ಸಚ್ಚಿದಾನನ್ದಾದ್ವಿತೀಯ ಬ್ರಹ್ಮಾತ್ಮತ್ವೇನಾಭಿಮನ್ಯೇತ ಯಃ ಸ ಸದಾ ಸತ್ಕೃತೋ ಭವತಿ । ತಸ್ಯ ನ ಮೃತ್ಯುಃ ಜನನಮರಣಲಕ್ಷಣಃ ಸಂಸಾರೋ ನ ಭವೇತ್ । ಅಮೃತಂ ಕುತಃ ಮೃತ್ಯುಸಾಪೇಕ್ಷತ್ವಾತ್ ಅಮೃತತ್ವಸ್ಯ ತದಭಾವೇ ಕುತಃ ಪ್ರಸಕ್ತಿಃ । ತಥಾ ಚ ಶ್ರುತಿಃ- 'ಮೃತ್ಯುರ್ನಾಸ್ತ್ಯಮೃತಂ ಕುತಃ' (?) ಇತಿ । ಸತ್ಯಾನೃತೇ ಚ ವರ್ತೇತೇ ಸತ್ಯಸಮಾನುಬನ್ಧಿನೀ ಪರಮಾರ್ಥಸತ್ಯಮೇಕಮಧಿಷ್ಠಾನಮನುಬಧ್ಯ ವರ್ತೇತೇ ರಜ್ಜ್ವಾಮಿವ ಸರ್ಪಃ । ಕಥಮೇತದವಗಮ್ಯತೇ- ಸತ್ಯಾನೃತೇ ಸತ್ಯಸಮಾನುಬನ್ಧಿನೀ ಇತಿ? ತತ್ರಾಹ- ಸತಶ್ಚ ಲೌಕಿಕಸ್ಯ ಯೋನಿಃ ಕಾರಣಮ್ ಅಸತಶ್ಚ ವ್ಯಾವಹಾರಿಕಸ್ಯ ರಜತಾದೇಃ ಏಕಮೇವ ಅದ್ವಿತೀಯಂ ಬ್ರಹ್ಮ

1. 'ನಾಹಂ ಸದಾಽಸತ್ಕೃತಃ ಸ್ಯಾಂ ನ ಮೃತ್ಯುರ್ನ ಚಾಮೃತ್ಯುರಮೃತಂ ಮೇ ಕುತಃ ಸ್ಯಾತ್' 2. 'ಸಮಾನಬನ್ಧೇ' ಎಂದು ಮ॥ಭಾ॥ ಪಾಠ.

3. ಈ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿದೆ.

ಯಸ್ಮಾತ್ ಪ್ರವದನ್ತಿ, ತಸ್ಮಾತ್ ಸತ್ಯಾನೃತೇ ಸ್ವಕಾರಣಭೂತಸತ್ಯಸಮಾನ ಬನ್ಧಿನೀ ಇತಿ | ಯದಾತ್ಮತತ್ತ್ವಜ್ಞಾನಾತ್ಮಕಾರಣಾತ್ ಮೃತ್ಯೋರ್ವಿನಾಶಃ, ಯಮನುಬಧ್ಯ ಸತ್ಯಾನೃತೇ ಪ್ರವರ್ತೇತೇ, ತಂ ಯೋಗಿನ ಏವ ಪಶ್ಯನ್ತಿ ||

( ಭಾಷ್ಯಾರ್ಥ )

ಆ (ಬ್ರಹ್ಮದ) ಜ್ಞಾನದಿಂದಲೇ ಆತ್ಮನ ವಿನಾಶವು ಆಗುವದಿಲ್ಲವಾದ್ದರಿಂದ ಸದಾ- ಎಂದರೆ ಯಾವಾಗಲೂ ಹಗಲೂ ರಾತ್ರಿಯೂ ಸತ್ಕೃತನಾಗಿರಬೇಕು. (ತಾನು) ಸಚ್ಚಿದಾನಂದನೂ ಅದ್ವಿತೀಯನೂ ಆದ ಬ್ರಹ್ಮವೆಂಬ ಆತ್ಮನು- ಎಂಬ ತಿಳಿವಳಿಕೆಯಿಂದ ಯಾವನು ಕೂಡಿರುವನೋ ಅವನು ಯಾವಾಗಲೂ ಸತ್ಕೃತನಾಗಿರುವನೋ[1] ಅವನಿಗೆ ಮೃತ್ಯುವು- ಎಂದರೆ ಹುಟ್ಟುಸಾವು ಮುಂತಾದ ರೂಪವಾದ ಸಂಸಾರವು ಆಗಲಾರದು. (ಆದ್ದರಿಂದಲೇ) ಮೃತ್ಯುವಿನ ಅಪೇಕ್ಷೆಯಿಂದ (ಹೇಳಲ್ಪಟ್ಟ) ಅಮೃತವು ಎಲ್ಲಿಯದು ? (ಮೃತ್ಯುವೇ) ಇಲ್ಲವಾದರೆ (ಅಮೃತದ) ಸಂಭವವಾದರೂ ಹೇಗಾದೀತು ? ಶ್ರುತಿಯೂ ಕೂಡ- 'ಮೃತ್ಯುವೇ ಇಲ್ಲ ; ಅಮೃತವು ಎಲ್ಲಿಯದು ? ಎಂದು ಹೇಳುತ್ತಿದೆ. ಮತ್ತು ಸತ್ಯಾನೃತಗಳೂ ಇದ್ದುಕೊಂಡಿರುವವು- ಎಂದರೆ ಪರಮಾರ್ಥಸತ್ಯವಾಗಿರುವ ಒಂದೇ ಆದ ಆಶ್ರಯವನ್ನು ಹೊಂದಿ ಹಗ್ಗದಲ್ಲಿ ಹಾವು (ಕಲ್ಪಿತ)ವಾಗಿರುವಂತೆ, ಸತ್ಯವೆಂಬ ಒಂದೇ ಆಶ್ರಯದಲ್ಲಿ (ಅವು) ಇದ್ದುಕೊಂಡಿವೆ. ಸತ್ಯವೆಂಬ ಆಶ್ರಯದಲ್ಲೇ ಸಮಾನವಾಗಿದ್ದುಕೊಂಡಿವೆ- ಎಂಬಿದು ಹೇಗೆ ಗೊತ್ತಾಗುತ್ತದೆ? ಎಂದರೆ- ಹೇಳುತ್ತಾನೆ. ಲೌಕಿಕವಾದ ಸತ್ತು ಎಂಬುದಕ್ಕೆ ಕಾರಣವಾಗಿ ಮತ್ತು (ಭ್ರಾಂತಿ) ವ್ಯವಹಾರ (ಸಿದ್ಧ)ವಾದ ಬೆಳ್ಳಿಯೇ ಮುಂತಾದ ಅಸತ್ತಿಗೂ ತಾನೊಂದೇ ಆದ ಅದ್ವಿತೀಯವಾದ ಬ್ರಹ್ಮವೇ (ಕಾರಣವೆಂದು) ಏತರಿಂದ ಹೇಳುತ್ತಾರೋ ಆದ್ದರಿಂದಲೇ ಸತ್ಯಾನೃತಗಳು ತಮಗೆ ಕಾರಣವಾದ ಸತ್ಯವನ್ನೇ ಸಮಾನವಾದ ಆಶ್ರಯವಾಗಿ ಉಳ್ಳವಾಗಿವೆ- ಎಂದರ್ಥ. ಯಾವ ಆತ್ಮತತ್ತ್ವಜ್ಞಾನವೆಂಬ ಕಾರಣ- ಹಾಗೂ ಆತನೆಂಬ (ಒಬ್ಬನೇ ಎಲ್ಲಕ್ಕೂ ಆಶ್ರಯನು ಎಂಬ) ಕಾರಣದಿಂದ ಮೃತ್ಯುವು ವಿನಾಶವಾಗುವದೋ, ಯಾವನನ್ನಾಶ್ರಯಿಸಿ ಸತ್ಯಾನೃತಗಳು ಪ್ರವರ್ತಿಸುವವೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.[2]

---

1. 'ಸತ್ಕೃತ'ನೆಂದರೆ ಸದ್ರೂಪವಾದ ಬ್ರಹ್ಮವನ್ನೇ ತಾನೆಂದು ತಿಳಿದುಕೊಂಡವನು ಎಂದಭಿಪ್ರಾಯ.

2. ಈ ಶ್ಲೋಕದ ಭಾಷ್ಯವು ಸರಳವಾಗಿಲ್ಲ, ಇದ್ದಂತೆ ಅನುವಾದಮಾಡಿದೆ.

## ಆತ್ಮಸ್ವರೂಪ

ಅಙ್ಗುಷ್ಠಮಾತ್ರಃ ಪುರುಷೋಽನ್ತರಾತ್ಮಾ[1]
ನ ದೃಶ್ಯತೇಽಸೌ ಹೃದಯೇ[2] ನಿವಿಷ್ಟಃ ।
ಅಜಶ್ಚರೋ ದಿವಾರಾತ್ರಮತನ್ದ್ರಿತಶ್ಚ
ಸ ತಂ ಮತ್ವಾ ಕವಿರಾಸ್ತೇ ಪ್ರಸನ್ನಃ[3] ॥ ೧೮ ॥

೧೮. ಅಂಗುಷ್ಠಮಾತ್ರನೂ ಅಂತರಾತ್ಮನೂ ಆದ ಈ ಪುರುಷನು ಹೃದಯದಲ್ಲಿ ಇದ್ದುಕೊಂಡಿರುತ್ತಾನಾದರೂ ತೋರಿಕೊಳ್ಳದೆ ಇರುತ್ತಾನೆ. ಅಜನೂ ಚರಾಚರಾತ್ಮನೂ ಹಗಲೂ ರಾತ್ರಿಯೂ ಎಚ್ಚರವಾಗಿರುವವನೂ ಆದವನನ್ನು ಅರಿತು ಕವಿಯಾಗಿ ಪ್ರಸನ್ನನಾಗುವನು.

(ಭಾಷ್ಯ)

ಆಕಾಶಾದಿದೇಹಾನ್ತಂ ಜಗತ್ ಸೃಷ್ಟ್ವಾ ಹೃದಯೇ ನಿವಿಷ್ಟಃ ಅಜಃ ಚರಃ ಚರಾಚರಾತ್ಮಾ ಸನ್ ನ ದೃಶ್ಯತೇ ಸ್ವೇನಾತ್ಮನಾ ಚಿತ್ಸದಾನನ್ದಾದ್ವಿತೀಯೇನ । ತಮ್ ಅಹೋರಾತ್ರಮ್ ಅತನ್ದ್ರಿತೋ ಭೂತ್ವಾ ಕೋಶಪಞ್ಚಕೇಭ್ಯೋ ನಿಷ್ಕೃಮ್ಯ ಸರ್ವಾನ್ತರಾತ್ಮಾನಂ ಮತ್ವಾ ಕವಿರಾಸ್ತೇ ಪ್ರಸನ್ನಃ ಕೃತಾರ್ಥಃ ಸನ್ ಇತ್ಯರ್ಥಃ ॥

(ಭಾಷ್ಯಾರ್ಥ)

ಆಕಾಶದಿಂದ ದೇಹದವರೆಗಿನ ಜಗತ್ತನ್ನು ಸೃಷ್ಟಿಸಿ ಹೃದಯದಲ್ಲಿದ್ದುಕೊಂಡಿರುವನಾಗಿ ಜನ್ಮರಹಿತನೂ, ಚರಾಚರ(ಪ್ರಾಣಿಗಳ) ಆತ್ಮನೂ ಆಗಿರುವ (ಆತ್ಮನು) ತನ್ನ ಸ್ವರೂಪವಾದ ಚಿತ್ಸದಾನಂದಾದ್ವಿತೀಯರೂಪದಿಂದ (ಸೃಷ್ಟಿಯಲ್ಲಿ) ಕಂಡುಬರುವದಿಲ್ಲ. ಅವನನ್ನು ಹಗಲೂರಾತ್ರಿಯೂ ಬೇಸರಿಕೆಯಿಲ್ಲದೆ (ಹುಡುಕಿ) ಐದು ಕೋಶಗಳಿಂದ ಹೊರಬಂದು (ಅವನ) ಸರ್ವಾಂತರನಾಗಿರುವಿಕೆಯನ್ನು ಅರಿತುಕೊಂಡವನಾದರೆ ಪ್ರಸನ್ನನೂ- ಎಂದರೆ ಕೃತಾರ್ಥನೂ ಕವಿಯೂ ಆಗುವನು.

---

1. 'ಮಹಾತ್ಮಾ' 2. 'ಹೃದಿ ಸಂನಿವಿಷ್ಟಃ' ಎಂದು ಮ॥ಭಾ॥ ಪಾಠಗಳು.

3. ಈ ಶ್ಲೋಕದ ಹಿಂದಕ್ಕೆ ಮಹಾಭಾರತದಲ್ಲಿ ಕೆಳಗಿನ ಎರಡು ಶ್ಲೋಕಗಳಿವೆ :

(೧) ನಾ ಸಾಧುನಾ ನೋತ ಅಸಾಧುನಾ ವಾಽಸಮಾನಮೇತದ್ ದೃಶ್ಯತೇ ಮಾನುಷೇಷು ।
ಸಮಾನಮೇತದಮೃತಸ್ಯ ವಿದ್ಯಾದೇವಂ ಯುಕ್ತೋ ಮಧು ತದ್ವೈ ಪರೀಪ್ಸೇತ್ ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥

(೨) ನಾಸ್ಯಾತಿವಾದಾ ಹೃದಯಂ ತಾಪಯನ್ತಿ ನಾನಧೀತಂ ನಾಹುತಮಗ್ನಿಹೋತ್ರಮ್ ।
ಮನೋ ಬ್ರಾಹ್ಮೀ ಲಘುತಾಮಾದಧೀತ ಪ್ರಜ್ಞಾಂ ಚಾಸ್ಯೈ ನಾಮ ಧೀರಾ ಲಭನ್ತೇ॥
ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥

**ತಸ್ಮಾಚ್ಚ[1] ವಾಯುರಾಯಾತಃ ತಸ್ಮಿಂಶ್ಚ ಪ್ರಲಯಸ್ತಥಾ[2] ।**
**ತಸ್ಮಾದಗ್ನಿಶ್ಚ ಸೋಮಶ್ಚ ತಸ್ಮಾಚ್ಚ ಪ್ರಾಣ ಆಗತಃ[3] ॥ ೧೯ ॥**

೧೯. ಅದರಿಂದಲೇ ವಾಯುವು ಹೊರಬಂದಿರುವನು. ಹಾಗೆಯೇ ಲಯವೂ ಅವನಲ್ಲಿಯೇ ಆಗುವದು. ಅವನಿಂದಲೇ ಅಗ್ನಿಯೂ, ಚಂದ್ರನೂ, ಅವನಿಂದಲೇ ಪ್ರಾಣನೂ ಬಂದಿರುವರು.

**ತತ್ಪ್ರತಿಷ್ಠಾ ತದಮೃತಂ ಲೋಕಾಸ್ತದ್ಬ್ರಹ್ಮ ತದ್ಯಶಃ ।**
**ಭೂತಾನಿ ಜಜ್ಞಿರೇ ತಸ್ಮಾತ್ ಪ್ರಲಯಂ ಯಾನ್ತಿ ತತ್ರ ಚ[4] ॥೨೦॥**

೨೦. ಅದೇ ಆಶ್ರಯವು ; ಅದೇ ಅಮೃತವು. ಅದೇ ಲೋಕಗಳು, ಅದೇ ಬ್ರಹ್ಮವು ; ಅದೇ ಯಶಸ್ಸು ; ಅದರಿಂದಲೇ ಭೂತಗಳು ಹುಟ್ಟಿರುವವು. ಮತ್ತು ಅದರಲ್ಲಿಯೇ ಲಯವಾಗುವವು.

**ಉಭೌ ಚ ದೇವೌ ಪೃಥಿವೀಂ ದಿವಂ ಚ**
**ದಿಶಶ್ಚ ಶುಕ್ರಂ[5] ಭುವನಂ ಬಿಭರ್ತಿ ।**
**ತಸ್ಮಾದ್ದಿಶಃ ಸರಿತಶ್ಚ ಸ್ರವನ್ತಿ**
**ತಸ್ಮಾತ್ ಸಮುದ್ರಾ ವಿಹಿತಾ ಮಹಾನ್ತಃ ॥ ೨೧ ॥**

೨೧. ಇಬ್ಬರು ದೇವರುಗಳೂ[6] ಭೂಮಿಯನ್ನೂ ದ್ಯುಲೋಕವನ್ನೂ ದಿಕ್ಕುಗಳನ್ನೂ ಶುಕ್ರವನ್ನೂ (ತೇಜಸ್ಸನ್ನೂ) ಪ್ರಪಂಚವನ್ನೂ ಧರಿಸಿರುವರು. ಆತನಿಂದಲೇ ದಿಕ್ಕುಗಳೂ (ಬೆಳಗುವವು), ನದಿಗಳೂ ಹರಿಯುವವು. ದೊಡ್ಡ ಸಮುದ್ರಗಳೂ ಅವನಿಂದಲೇ ಮಾಡಲ್ಪಟ್ಟಿರುವವು.

( ಭಾಷ್ಯ )

ಸರ್ವಮಿದಂ ಬ್ರಹ್ಮಣಃ ಸಕಾಶಾದುದ್ಭೂತಂ ತತ್ರೈವ ಲೀಯತೇ ಇತಿ ಶ್ಲೋಕದ್ವಯೇನೋಕ್ತಮ್ । ತದೇವ ವಿವೃಣೋತಿ । ಸ್ಪಷ್ಟಃ ಶ್ಲೋಕಾರ್ಥಃ ॥

---

1. 'ತಸ್ಮಾದ್ ವೈ'   2. 'ಪ್ರಯತಃ ಸದಾ'

3. 'ತಸ್ಮಿಂಶ್ಚ ಪ್ರಾಣ ಆತತಃ' ಎಂದು ಮ॥ಭಾ॥ ಪಾಠ. ಈ ಶ್ಲೋಕದ ಅನಂತರ 'ಸರ್ವಮೇವ ತತೋ ವಿದ್ಯಾತ್ ತತ್ತದ್ವಕ್ತುಂ ನ ಶಕ್ನುಮಃ' ಎಂಬ ಶ್ಲೋಕಾರ್ಧವೂ 'ಯೋಗಿನಸ್ತಂ...' ಎಂಬ ಪಲ್ಲವಿಯೂ ಇದೆ.

4. ಈ ಶ್ಲೋಕವು ಮಹಾಭಾರತದಲ್ಲಿ ಕಂಡುಬಂದಿಲ್ಲ.

5. 'ದಿಶಃ ಶುಕ್ರೋ'   6. ಜೀವೇಶ್ವರರುಗಳಿಬ್ಬರೂ ಎಂಬಭಿಪ್ರಾಯ.

(ಭಾಷ್ಯಾರ್ಥ)

ಇದೆಲ್ಲವೂ ಬ್ರಹ್ಮದಿಂದಲೇ ಹುಟ್ಟುತ್ತದೆ, (ಬ್ರಹ್ಮ)ದಲ್ಲಿಯೇ ಲಯವಾಗುತ್ತದೆ– ಎಂದು (ಹಿಂದಿನ) ಎರಡು ಶ್ಲೋಕಗಳಿಂದ ಹೇಳಿದ್ದಾಗಿದೆ. ಅದನ್ನೇ ಇಲ್ಲಿ ವಿವರಿಸುತ್ತಾರೆ. ಶ್ಲೋಕಾರ್ಥವು ಸ್ಪಷ್ಟವಾಗಿರುವದರಿಂದ (ವ್ಯಾಖ್ಯಾನ ಮಾಡಿರುವದಿಲ್ಲ.)

## ಬ್ರಹ್ಮವು ಅನಂತವು

**ಯಃ ಸಹಸ್ರಂ ಸಹಸ್ರಾಣಾಂ ಪಕ್ಷಾನಾಹೃತ್ಯ[1] ಸಂಪತೇತ್ ।**
**ನಾನ್ತಂ ಗಚ್ಛೇತ್ ಕಾರಣಸ್ಯ ಯದ್ಯಪಿ ಸ್ಯಾನ್ಮನೋಜವಃ[2] ॥**
**ಯೋಗಿನಸ್ತಂ ಪ್ರಪಶ್ಯನ್ತಿ ಭಗವನ್ತಂ ಸನಾತನಮ್ ॥ ೨೨ ॥**

೨೨. ಯಾವನೂ ಸಾವಿರದಸಾವಿರ (ಹತ್ತುಲಕ್ಷ) ರೆಕ್ಕೆಗಳನ್ನು ಮಾಡಿಕೊಂಡು ಮನೋವೇಗದಿಂದ ಕೂಡಿದವನಾಗಿ ಹಾರಿದರೂ (ಸರ್ವ) ಕಾರಣನಾದ ಪರಮಾತ್ಮನ ತುದಿಯನ್ನು ಮುಟ್ಟಲಾರನು. ಸನಾತನನಾದ ಆ ಭಗವಂತನನ್ನು ಯೋಗಿಗಳು ಮಾತ್ರವೇ ಕಾಣುವರು.

(ಭಾಷ್ಯ)

ಇದಾನೀಂ ಬ್ರಹ್ಮಣೋಽನನ್ತತ್ವಂ ಕಥಯತಿ । ಯಃ ಪುರುಷಃ ಸಹಸ್ರಾಣಾಂ ಸಹಸ್ರಂ ಪಕ್ಷಾನಾಹೃತ್ಯ ಆತ್ಮನಃ ಪಕ್ಷಾನ್ ಕೃತ್ವಾ ಸಂಪತೇತ್ ಅನೇಕಶಃ ಕೋಟಿಕಲ್ಪಮಪಿ ಪುರುಷೋ ನಾನ್ತಂ ಗಚ್ಛೇತ್ ಕಾರಣಸ್ಯ ಸರ್ವಕಾರಣಸ್ಯ ಪರಮಾತ್ಮನಃ, ಯದ್ಯಪಿ ಅಸೌ ಮನೋಜವಃ ಸ್ಯಾತ್ ತಥಾಪಿ ತಸ್ಯಾನ್ತಂ ನ ಗಚ್ಛೇತ್ । ಯಸ್ಮಾದನ್ತಂ ನ ಗಚ್ಛೇತ್ ತಸ್ಮಾದನನ್ತಃ ಪರಮಾತ್ಮಾ ಇತ್ಯರ್ಥಃ । ಯೋಽನನ್ತಃ ಪರಮಾತ್ಮಾ, ತಂ ಯೋಗಿನ ಏವ ಪಶ್ಯನ್ತಿ ॥

(ಭಾಷ್ಯಾರ್ಥ)

ಈಗ ಬ್ರಹ್ಮದ ಅನಂತತ್ವವನ್ನು ಹೇಳುತ್ತಾನೆ : ಯಾವ ಮನುಷ್ಯನು ಸಾವಿರದ ಸಾವಿರರೆಕ್ಕೆಗಳನ್ನು ಮಾಡಿಕೊಂಡು– ತನ್ನ ರೆಕ್ಕೆಗಳಾಗಿ ಮಾಡಿಕೊಂಡು ಅನೇಕ(ಕಾಲ) ಎಂದರೆ ಕೋಟಿಕಲ್ಪಗಳ ಕಾಲ ಹಾರುವನೋ ಆ ಪುರುಷನೂ ಕಾರಣನಾದ ಎಂದರೆ ಸರ್ವಕ್ಕೂ ಮೂಲನಾದ ಪರಮಾತ್ಮನ ಕೊನೆಯನ್ನು ಮುಟ್ಟಲಾರನು. ಅವನು ಒಂದುವೇಳೆ ಮನಸ್ಸಿನಷ್ಟು ವೇಗವುಳ್ಳವನಾಗಿರಬಹುದು ; ಆದರೂ ಅದರ ಕೊನೆಯನ್ನು ಹೋಗಲಾರನು (ಮುಟ್ಟಲಾರನು).

1. 'ಪಕ್ಷಾನ್ ಸಂತತ್ಯ'

2. 'ಮಧ್ಯಮೇ ಮಧ್ಯ ಆಗಚ್ಛೇದಪಿ ಚೇತ್ ಸ್ಯಾತ್ ಮನೋಜವಃ' ಎಂದು ಮಹಾಭಾರತದ ಪಾಠಗಳು.

ಯಾವ (ಕಾರಣದಿಂದ) ಕೊನೆಯನ್ನು ಮುಟ್ಟಲಾರನೋ ಆದ್ದರಿಂದಲೇ ಪರಮಾತ್ಮನು ಅನಂತನು ಎಂದಭಿಪ್ರಾಯ. ಯಾವ ಅನಂತನಾದ ಪರಮಾತ್ಮನಿರುವನೋ ಅವನನ್ನು ಯೋಗಿಗಳು ಮಾತ್ರವೇ ಕಾಣುವರು.

**ಅದರ್ಶನೇ[1] ತಿಷ್ಠತಿ ರೂಪಮಸ್ಯ**
**ಪಶ್ಯನ್ತಿ ಚೈನಂ ಸುಸಮಿದ್ಧಸತ್ತ್ವಾಃ[2] ।**
**ಹೀನೋ ಮನೀಷೀ ಮನಸಾಽಭಿಪಶ್ಯೇ-[3]**
**ದ್ಯ ಏನಂ ವಿದು[4]ರಮೃತಾಸ್ತೇ ಭವನ್ತಿ ॥ ೨೩ ॥**

೨೩. ಇವನ ರೂಪವು ದರ್ಶನಯೋಗ್ಯವಾಗಿರುವದಿಲ್ಲ. ಚೆನ್ನಾಗಿ ಚುರುಕಾದ ಅಂತಃಕರಣವುಳ್ಳವರು ಇವನನ್ನು ಕಾಣುವರು. (ರಾಗದ್ವೇಷಾದಿಗಳಿಂದ) ಬಿಡಲ್ಪಟ್ಟವನು ಮನಸ್ಸಿನಿಂದ (ಈ ಆತ್ಮನನ್ನು) ನೋಡಬಲ್ಲನು. ಯಾರು ಇವನನ್ನು ಬಲ್ಲರೋ ಅವರು ಅಮೃತರಾಗುವರು.

(ಭಾಷ್ಯ)

ಕಿಂ ಚ- ಅದರ್ಶನೇ ದರ್ಶನಾಯೋಗ್ಯೇ ವಿಷಯೇ ತಿಷ್ಠತಿ ರೂಪಮಸ್ಯ ಪರಮಾತ್ಮನಃ । ತಥಾ ಚ ಶ್ರುತಿಃ- 'ನ ಸಂದೃಶೇ ತಿಷ್ಠತಿ ರೂಪಮಸ್ಯ' (ಕಾ. ೨ ೩-೯) ಇತಿ । ಪಶ್ಯನ್ತಿ ಚೈನಂ ಸುಸಮಿದ್ಧಸತ್ತ್ವಾಃ ಯದ್ಯಪಿ ದರ್ಶನಾಯೋಗ್ಯೇ ತಿಷ್ಠತಿ, ತಥಾಪಿ ಪರಮಾತ್ಮಾನಂ ಪಶ್ಯನ್ತಿ ತೇ । ಕೇ ? ಸುಸಮಿದ್ಧಸತ್ತ್ವಾಃ ಸುಷ್ಠು ಸಮಿದ್ಧಂ ಸಮ್ಯಗ್ ದೀಪ್ತಂ ಯದನ್ತಃಕರಣಂ ಯಜ್ಞಾದಿಭಿಃ ವಿಮಲೀಕರಣದ್ವಾರೇಣ ಯೇಷಾಮ್, ತೇ ಸುಸಮಿದ್ಧಸತ್ತ್ವಾಃ । ಯಸ್ಮಾದೇವಂ ತಸ್ಮಾತ್ ಹೀನೋ ರಾಗದ್ವೇಷಾದಿಮಲರಹಿತೋ ವಿಶುದ್ಧಸತ್ತ್ವೋ ಮನೀಷೀ ಮನಸಾಽಭಿಪಶ್ಯೇತ್ । ಯೇ ಏನಂ ಪರಮಾತ್ಮಾನಂ ವಿದುಃ ಅಹಮಸ್ಮೀತಿ, ಅಮೃತಾ ಅಮರಣಧರ್ಮಾಣೋ ಭವನ್ತಿ ತೇ ॥

(ಭಾಷ್ಯಾರ್ಥ)

ಮತ್ತು ಅದರ್ಶನದಲ್ಲಿ ಎಂದರೆ ನೋಡಲು ಸಾಧ್ಯವಲ್ಲದ ಸ್ಥಿತಿಯಲ್ಲಿ ಈ ಪರಮಾತ್ಮನ ರೂಪವು ಇದ್ದುಕೊಂಡಿರುವದು. ಶ್ರುತಿಯೂಕೂಡ 'ಇವನ ರೂಪವು ಕಣ್ಣಿಗೆ ಗೋಚರವಲ್ಲ' ಎಂದು ಹೇಳುತ್ತಿದೆ. ಚೆನ್ನಾಗಿ ಚುರುಕಾಗಿರುವ ಅಂತಃಕರಣವುಳ್ಳವರು- ಈ ರೂಪವು ದರ್ಶನಕ್ಕೆ ತಕ್ಕದ್ದಲ್ಲವಾದರೂ- ಕಂಡುಕೊಳ್ಳುವರು- ಎಂದರೆ ಪರಮಾತ್ಮನನ್ನು ನೋಡುವವರಾಗುವರು. ಯಾರು ? ಎಂದರೆ ಸುಷ್ಠು- ಚೆನ್ನಾಗಿ ಇದ್ಧ- ದೀಪ್ತವಾದ, ಯಜ್ಞವೇ ಮುಂತಾದವುಗಳಿಂದ

---

1. 'ನ ದರ್ಶನೇ'
2. 'ಸುವಿಶುದ್ಧ'
3. 'ನ ತಪ್ಯತೇ'
4. 'ಯೇ ಪ್ರವ್ರಜೇಯುಃ'

ವಿಶುದ್ಧವಾಗುವ ಮೂಲಕ (ಪ್ರಕಾಶವಾಗಿರುವ) ಅಂತಃಕರಣವುಳ್ಳವರು ಯಾರೋ ಅವರು ಸುಸಮಿದ್ಧಸತ್ತ್ವರು. ಹೀಗಿರುವದರಿಂದಲೇ ರಾಗದ್ವೇಷಾದಿ(ದೋಷಗಳಿಂದ) ಹೀನನಾದವನು – (ಅವುಗಳು) ಇಲ್ಲದವನು, ವಿಶುದ್ಧಸತ್ತ್ವನಾದ ಮನೀಷಿಯು ಮನಸ್ಸಿನಿಂದ ನೋಡಬಲ್ಲನು. ಯಾರು ಈ ಪರಮಾತ್ಮನನ್ನು ಅವನೇ ನಾನಾಗಿರುತ್ತೇನೆ– ಎಂದು ಬಲ್ಲರೋ ಅವರು ಅಮೃತರಾಗುವರು, ಮರಣಧರ್ಮವಿಲ್ಲದವರಾಗುವರು.

## ಆತ್ಮನನ್ನರಿತವನಿಗೆ ಶೋಕವಿಲ್ಲ

**ಇಮಂ[1] ಯಃ ಸರ್ವಭೂತೇಷು ಆತ್ಮಾನಮನುಪಶ್ಯತಿ ।**
**ಅನ್ಯತ್ರಾನ್ಯತ್ರ ಯುಕ್ತೇಷು ಸ ಕಿಂ ಶೋಚೇತ್ತತಃ ಪರಮ್ ॥೨೪॥**

೨೪. ಯಾವನು ಬೇರೆಬೇರೆಯು (ದೇಹಾದಿಗಳಲ್ಲಿ) ಅಭಿಮಾನಿಗಳಾಗಿರುವ ಎಲ್ಲಾ ಪ್ರಾಣಿಗಳಲ್ಲಿಯೂ ಈ ಆತ್ಮನನ್ನು ಕಂಡುಕೊಳ್ಳುವನೋ ಅವನು ಅನಂತರ ಏತಕ್ಕಾಗಿ ಶೋಕಿಸಿಯಾನು ?

**( ಭಾಷ್ಯ )**

ಇಮಂ ಸರ್ವಾನ್ತರಂ ಸರ್ವಭೂತೇಷು ಸರ್ವಪ್ರಾಣಿಷು ಆತ್ಮಾನಂ ಯಃ ಅನುಪಶ್ಯತಿ । ಕಥಂಭೂತೇಷ್ವನುಪಶ್ಯತಿ ? ಅನ್ಯತ್ರಾನ್ಯತ್ರ ದೇಹೇನ್ದ್ರಿಯಾದಿಯುಕ್ತೇಷು ಶರೀರಾದ್ಯಭಿಮಾನಿಷು । ಸಃ ಕಿಂ ಶೋಚೇತ ತತಃ ಪರಂ ಸರ್ವಭೂತೇಷು ಸ್ವಾತ್ಮಾನಂ ಪಶ್ಯನ್ ತತಃ ಪರಂ ಕಿಮರ್ಥಮನುಶೋಚತಿ ಸರ್ವಭೂತಸ್ಥಮಾತ್ಮಾನಮನುಪಶ್ಯನ್ ಕೃತಾರ್ಥತ್ವಾತ್ ನಾನುಶೋಚತೀತ್ಯರ್ಥಃ । ತಥಾ ಚ ಶ್ರುತಿಃ– 'ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ' (ಈ. ೭) ಇತಿ ॥

**( ಭಾಷ್ಯಾರ್ಥ )**

ಸರ್ವಭೂತಗಳಲ್ಲಿಯೂ ಎಂದರೆ ಸರ್ವಪ್ರಾಣಿಗಳಲ್ಲಿಯೂ ಇರುವ ಸರ್ವವ್ಯಾಪಿಯಾದ ಈ ಆತ್ಮನನ್ನು ಯಾವನು ಕಂಡುಕೊಳ್ಳುವನೋ (ಅವನು ಶೋಕಿಸುವದಿಲ್ಲ.) ಎಂಥ (ಪ್ರಾಣಿಗಳಲ್ಲಿ) ಕಂಡುಕೊಳ್ಳುವನು ? ಎಂದರೆ ಬೇರೆಬೇರೆಯು– ದೇಹ, ಇಂದ್ರಿಯಾದಿಗಳಿಂದ ಕೂಡಿದ ಶರೀರಾದಿಗಳಲ್ಲಿ ಅಭಿಮಾನವುಳ್ಳವರಲ್ಲಿ (ಎಂದಭಿಪ್ರಾಯ.) ಅವನು ಏತಕ್ಕಾಗಿ ಶೋಕವನ್ನು ಮಾಡಿಯಾನು ? ಅನಂತರ ಎಲ್ಲಾ ಪ್ರಾಣಿಗಳಲ್ಲಿಯೂ ತನ್ನ ಆತ್ಮನನ್ನು ಕಂಡುಕೊಂಡವನಾಗಿ ಆಮೇಲೆ ಏತಕ್ಕಾಗಿ ದುಃಖಿಸಿಯಾನು ? ಸರ್ವಭೂತಗಳಲ್ಲಿಯೂ

1 'ಏವಂ' ಪಾ॥

ಅಡಗಿಕೊಂಡಿರುವ ತನ್ನ ಆತ್ಮನನ್ನು ಕಂಡುಕೊಂಡು ಕೃತಾರ್ಥನಾಗಿರುವದರಿಂದ ದುಃಖಪಡುವದಿಲ್ಲ- ಎಂದಭಿಪ್ರಾಯ. ಶ್ರುತಿಯೂಕೂಡ- ' ಏಕತ್ವವನ್ನು ಕಂಡುಕೊಂಡಿರುವವನಿಗೆ ಮೋಹವೆಲ್ಲಿಯದು ? ಶೋಕವೆಲ್ಲಿಯದು ? ಎಂದು ಹೇಳುತ್ತಿದೆ.

**ಯಥೋದಪಾನೇ ಮಹತಿ ಸರ್ವತಃ ಸಂಪ್ಲುತೋದಕೇ ।**
**ಏವಂ ಭೂತೇಷು ಸರ್ವೇಷು ಬ್ರಾಹ್ಮಣಸ್ಯ ವಿಶೇಷತಃ[1] ॥ ೨೫ ॥**

೨೫. ಎಲ್ಲೆಲ್ಲಿಯೂ ನೀರು ತುಂಬಿರುವ ದೊಡ್ಡ ಕೆರೆಯಲ್ಲಿ (ಕೃತ ಕೃತ್ಯನಾದವನಿಗೆ ಪ್ರಯೋಜನವಿರುವದಿಲ್ಲವೋ) ಹಾಗೆಯೇ ಎಲ್ಲಾ ಪ್ರಾಣಿ ಗಳಲ್ಲಿಯೂ ಬ್ರಹ್ಮವನ್ನು ಅರಿತಿರುವವನಿಗೆ ವಿಶೇಷವಾದ (ಪ್ರಯೋಜನವು) ಇರುವದಿಲ್ಲ.

( ಭಾಷ್ಯ )

ತದೇವಾಹ- ಯಥಾ ಸರ್ವತಃ ಸಂಪ್ಲುತೋದಕೇ ಮಹತ್ಯುದಪಾನೇ ಕೃತಕೃತ್ಯಸ್ಯ ಅರ್ಥೋ ನಾಸ್ತಿ, ಏವಂ ಸರ್ವೇಷು ಭೂತೇಷು ಆತ್ಮಾನಂ ಪಶ್ಯತಃ ಬ್ರಾಹ್ಮಣಸ್ಯ ವಿಶೇಷತಃ ನ ಕಿಂಚಿದಪಿ ಪ್ರಯೋಜನಂ ವಿದ್ಯತ ಇತ್ಯರ್ಥಃ । ತಥಾ ಚಾಹ ಭಗವಾನ್ ವಾಸುದೇವಃ- 'ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ' (ಗೀ. ೩-೧೮) ಇತಿ ॥

(ಭಾಷ್ಯಾರ್ಥ)

ಅದನ್ನೇ ಹೇಳುತ್ತಾನೆ- ಹೇಗೆ ಎಲ್ಲೆಲ್ಲಿಯೂ ನೀರುತುಂಬಿರುವ ದೊಡ್ಡ ದಾದ ಕೆರೆಯಲ್ಲಿ ಕೃತಕೃತ್ಯನಾದವನಿಗೆ[2] ಯಾವ ಉಪಯೋಗವೂ ಇರಲಾರದೋ ಹಾಗೆ ಎಲ್ಲಾ ಪ್ರಾಣಿಗಳಲ್ಲಿಯೂ ಆತ್ಮನನ್ನು ಕಂಡುಕೊಂಡಿರುವ ಬ್ರಾಹ್ಮಣನಿಗೆ ವಿಶೇಷವಾಗಿ (ವ್ಯಕ್ತಿಗತವಾಗಿ) ಏನೊಂದು ಪ್ರಯೋಜನವೂ ಇರಲಾರದು- ಎಂದರ್ಥ. ಭಗವಂತನಾದ ವಾಸುದೇವನೂಕೂಡ- 'ಇವನಿಗೆ ಎಲ್ಲಾ ಪ್ರಾಣಿ ಗಳಲ್ಲಿಯೂ ಯಾವದೊಂದರ ಹಂಗೂ ಇರುವದಿಲ್ಲ' ಎಂದು ಹೇಳಿರುತ್ತಾನೆ.

---

1. ' ಏವಂ ಸರ್ವೇಷು ವೇದೇಷು ಆತ್ಮಾನಮನುಜಾನತಃ ' ಎಂದು ಪಾ॥ ಈ ಶ್ಲೋಕವನ್ನು ಭಗವದ್ಗೀತೆಯಲ್ಲಿರುವ 'ಯಾವಾನರ್ಥ....' (೨-೪೬) ಎಂಬುದಕ್ಕೆ ಹೋಲಿಸಿರಿ.

2. ಸ್ನಾನಮಾಡಿ, ಹೊಟ್ಟೆ ತುಂಬಿಕೊಂಡು, ನೀರನ್ನೂ ಕುಡಿದು- ಎಲ್ಲ ಆವಶ್ಯಕತೆ ಗಳನ್ನೂ ಪೂರೈಸಿಕೊಂಡಿರುವವನಿಗೆ.

## ಬ್ರಹ್ಮಾತ್ಮಾನುಭವ

**ಅಹಮೇವಾಸ್ಮಿ ವೋ[1] ಮಾತಾ ಪಿತಾ ಪುತ್ರೋಽಸ್ಮ್ಯಹಂ ಪುನಃ ।**
**ಆತ್ಮಾಹಮಸ್ಮಿ[2] ಸರ್ವಸ್ಯ ಯಚ್ಚ ನಾಸ್ತಿ ಯದಸ್ತಿ ಚ ॥ ೨೬ ॥**

೨೬. ನಿಮ್ಮಗಳಿಗೆ ನಾನೇ ತಾಯಿಯಾಗಿರುತ್ತೇನೆ. ಮತ್ತು ತಂದೆ, ಮಗನೂ ನಾನೇ ಆಗಿರುತ್ತೇನೆ. ಯಾವದು ಇಲ್ಲವೆನಿಸಿರುವದೋ, ಯಾವದು ಇದೆಯೋ ಅದೆಲ್ಲಕ್ಕೂ ನಾನೇ ಆತ್ಮನಾಗಿರುತ್ತೇನೆ.

(ಭಾಷ್ಯ)

ಇದಾನೀಮ್ ಉಕ್ತಸ್ಯಾರ್ಥಸ್ಯ ದ್ರಢಿಮ್ನೇ ವಾಮದೇವಾದಿವತ್ ಸ್ವಾನುಭವಂ ದರ್ಶಯತಿ– ಹೇ ಧೃತರಾಷ್ಟ್ರ, ಅಹಮೇವಾಸ್ಮಿ ವಃ ಯುಷ್ಮಾಕಂ ಮಾತಾ ಜನಯಿತ್ರೀ ಪಿತಾ ಅಪಿ ಅಹಮೇವ । ಯುಷ್ಮಾಕಂ ಪುತ್ರೋಽಸ್ಮಿ ದುರ್ಯೋಧನಾದಿರಹಮಸ್ಮಿ । ಕಿಂ ಬಹುನಾ ? ಆತ್ಮಾಹಮಸ್ಮಿ ಸರ್ವಸ್ಯ ಪ್ರಾಣಿಜಾತಸ್ಯ ಯಚ್ಚ ನಾಸ್ತಿ ಯದಸ್ತಿ ಚ, ತಸ್ಯ ಅಹಮೇವಾತ್ಮಾ ॥

( ಭಾಷ್ಯಾರ್ಥ )

ಈಗ (ಹಿಂದೆ) ಹೇಳಿದ ಅರ್ಥವನ್ನು ಗಟ್ಟಿಗೊಳಿಸುವದಕ್ಕಾಗಿ ವಾಮದೇವಾದಿಗಳಂತೆ[3] ತನ್ನ ಅನುಭವವನ್ನು ತಿಳಿಸುತ್ತಾನೆ :– ಎಲೈ ಧೃತರಾಷ್ಟ್ರನೆ, ನಿಮ್ಮಗಳಿಗೆ ನಾನೇ ತಾಯಿಯಾಗಿರುತ್ತೇನೆ ; ಹಡೆದವಳಾಗಿರುತ್ತೇನೆ. ತಂದೆಯೂ ನಾನೇ. ನಿಮ್ಮ ಮಗನೂ ಎಂದರೆ ದುರ್ಯೋಧನಾದಿಗಳೂ ನಾನೇ ಆಗಿರುತ್ತೇನೆ. ಹೆಚ್ಚು ಹೇಳಿದ್ದರಿಂದೇನು ? ಹುಟ್ಟಿರುವ ಎಲ್ಲಾ ಪ್ರಾಣಿಗಳಿಗೂ ನಾನು ಆತ್ಮನಾಗಿರುತ್ತೇನೆ. ಯಾವದು ಇಲ್ಲವೋ, ಯಾವದು ಇದೆಯೋ ಅದಕ್ಕೆಲ್ಲ ನಾನೇ ಆತ್ಮನು.

**ಪಿತಾಮಹೋಽಸ್ಮಿ ಸ್ಥವಿರಃ ಪಿತಾ ಪುತ್ರಶ್ಚ ಭಾರತ ।**
**ಮಮೈವ ಯೂಯಮಾತ್ಮಸ್ಥಾ ನ ಮೇ ಯೂಯಂ ನ ಚಾಪ್ಯಹಮ್[4] ॥**

೨೭. ಎಲೈ ಭರತವಂಶೋತ್ಪನ್ನನೆ, ಮುದುಕನಾದ ಅಜ್ಜನೂ ನಾನೇ. ತಂದೆಯೂ ಮಗನೂ ನಾನೇ. ಆತ್ಮನಲ್ಲಿರುವ ನೀವೆಲ್ಲರೂ ನನ್ನವರೇ. ನೀವು ನನ್ನವರಲ್ಲ. ನಾನು (ನಿಮ್ಮವನೂ) ಅಲ್ಲ.

---

1. 'ಅಹಮೇವ ಸ್ಮೃತೋ'
2. 'ಅಪಿ' ಎಂದು ಮಹಾಭಾರತದ ಪಾಠ.
3. ಬೃಹ. ೧-೪-೧೦ನ್ನು ನೋಡಿರಿ.
4. 'ನ ವೋ ವಯಮ್' ಎಂದು ಪಾ॥

(ಭಾಷ್ಯ)

ಏವಂ ತಾವದಾಧಿಭೌತಿಕಪಿತ್ರಾದಿಕಂ ದರ್ಶಿತಮ್ । ಅಥೇದಾನೀಮಾಧಿದೈವಿಕಪಿತ್ರಾದಿಭಾವಂ ದರ್ಶಯತಿ– ಪಿತಾಮಹೋಽಸ್ಮಿ ಸ್ಥವಿರಃ ವೃದ್ಧಃ ಇನ್ದ್ರಾದೇಃ ಪಿತಾಮಹಃ ಅನಾದಿಸಿದ್ಧಃ ಪರಮಾತ್ಮಾ ಸೋಽಪ್ಯಹಮೇವ । ಯಃ ಪಿತಾ ಇನ್ದ್ರಾದೇಃ ಹಿರಣ್ಯಗರ್ಭಃ, ಸೋಽಪ್ಯಹಮೇವ । ತಥಾ ಮಯ್ಯೇವ ಯೂಯಮಾತ್ಮಸ್ಥಾಃ । ಏವಂ ಯೂಯಂ ಸರ್ವೇ ಪರಮಾರ್ಥತೋ ನ ಮೇ ಆತ್ಮನಿ ವ್ಯವಸ್ಥಿತಾಃ ; ನ ಚಾಪ್ಯಹಂ ಯುಷ್ಮಾಸು ವ್ಯವಸ್ಥಿತಃ । ತಥಾ ಚಾಹ ಭಗವಾನ್– 'ಮತ್ಸ್ಥಾನಿ ಸರ್ವಭೂತಾನಿ' (ಗೀ. ೯–೪) ಇತಿ ॥

( ಭಾಷ್ಯಾರ್ಥ )

ಈ ರೀತಿಯಾಗಿ ಆಧಿಭೌತಿಕವಾದ ತಂದೆಯೇ ಮುಂತಾದವರು (ತಾನೆಂದು) ತಿಳಿಸಿದ್ದಾಯಿತು. ಈಗ ಆಧಿದೈವಿಕರಾದ ಪಿತೃಗಳೇ ಮೊದಲಾದವರೂ (ತಾನೇ) ಎಂದು ತಿಳಿಸುತ್ತಾನೆ :– ವಯಸ್ಸಾದ ವೃದ್ಧನಾದ, ಇಂದ್ರಾದಿಗಳಿಗೂ ಅಜ್ಜನಾದ ಪಿತಾಮಹನು ನಾನೇ. ಅನಾದಿಸಿದ್ಧನಾದ ಪರಮಾತ್ಮನೆಂಬವನೂ ನಾನೇ ಆಗಿರುವೆನು. ಇಂದ್ರನೇ ಮೊದಲಾದವರಿಗೆ ತಂದೆಯಾದ ಯಾವ ಹಿರಣ್ಯಗರ್ಭನಿರುವನೋ ಅವನೂ ನಾನೇ. ಆತ್ಮನಲ್ಲಿದ್ದುಕೊಂಡಿರುವ ನೀವೆಲ್ಲರೂ ನನ್ನವರೇ. ಹೀಗೆ ನೀವೆಲ್ಲರೂ ಪರಮಾರ್ಥವಾಗಿ (ನೋಡಿದರೆ) ನನ್ನ ಆತ್ಮನಲ್ಲಿದ್ದುಕೊಂಡಿರುವದಿಲ್ಲ. ನಾನೂಕೂಡ ನಿಮ್ಮಗಳಲ್ಲಿ ಇರುವದಿಲ್ಲ. ಭಗವಂತನೂಕೂಡ– 'ಎಲ್ಲಾ ಭೂತಗಳೂ ನನ್ನಲ್ಲಿದ್ದುಕೊಂಡಿವೆ' ಎಂದು ಹೇಳಿರುತ್ತಾನೆ.

ಆತ್ಮೈವ ಸ್ಥಾನಂ ಮಮ ಜನ್ಮ ಚಾತ್ಮಾ
ಓತಪ್ರೋತೋಽಹಮಜರಪ್ರತಿಷ್ಠಃ ।
ಅಜಶ್ಚರೋ ದಿವಾರಾತ್ರಮತನ್ದ್ರಿತೋಽಹಂ
ಮಾಂ ವಿಜ್ಞಾಯ ಕವಿರಾಸ್ತೇ ಪ್ರಸನ್ನಃ ॥ ೨೪ ॥

ಅಣೋರಣೀಯಾನ್ ಸುಮನಾಃ ಸರ್ವಭೂತೇಷ್ವವಸ್ಥಿತಃ[1] ।
ಪಿತರಂ ಸರ್ವಭೂತಾನಾಂ[2] ಪುಷ್ಕರೇ ನಿಹಿತಂ ವಿದುಃ ॥ ೨೯ ॥

೨೮–೨೯. ನನಗೆ ಆತ್ಮನೇ ಸ್ಥಾನವು. ನನ್ನ ಹುಟ್ಟು ಆತ್ಮನೇ. ನಾನು ಹಾಸುಹೊಕ್ಕಾಗಿ ಇದ್ದುಕೊಂಡಿರುವೆನು. ನಾಶವಿಲ್ಲದ ಆಶ್ರಯವಾಗಿರುವೆನು. ಹುಟ್ಟಿಲ್ಲದವನೂ ಚರಾ(ಚರಗಳಿಗೆ ಆಧಾರನೂ) ಹಗಲೂ ರಾತ್ರಿಯೂ ಆಲಸ್ಯವಿಲ್ಲದವನೂ ನಾನಾಗಿರುವೆನು. ನನ್ನನ್ನು ಅರಿತು

1. 'ಸರ್ವಭೂತೇಷು ಜಾಗ್ರತಿ'
2. 'ಸರ್ವಭೂತೇಷು', ಎಂದು ಮಹಾಭಾರತದ ಪಾಠಗಳು.

ಕೊಂಡು (ಸಾಧಕನು) ಕವಿಯೂ ಪ್ರಸನ್ನ(ಚಿತ್ತನೂ) ಆಗುವನು. ಚಿಕ್ಕದರೊಳಗೆಲ್ಲ ಚಿಕ್ಕವನಾಗಿಯೂ ಸುಮನಸ್ಕನಾಗಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಇದ್ದುಕೊಂಡಿರುವವನಾಗಿಯೂ ಎಲ್ಲಾ ಭೂತಗಳಿಗೂ ತಂದೆಯೂ ಆಯಾ ಪ್ರಾಣಿಗಳ (ಹೃದಯ)ವೆಂಬ ಕಮಲದಲ್ಲಿದ್ದುಕೊಂಡಿರುವವನೂ ಆಗಿರುತ್ತೇನೆಂದು (ಬಲ್ಲವರು) ತಿಳಿದಿರುವರು.

(ಭಾಷ್ಯ)

ಯದ್ಯಪಿ ನ ಮಮಾತ್ಮನಿ ಯೂಯಂ ವ್ಯವಸ್ಥಿತಾಃ, ನ ಚಾಪ್ಯಹಂ ಯುಷ್ಮಾಸು ವ್ಯವಸ್ಥಿತಃ, ತಥಾಪಿ– ಆತ್ಮೈವ ಸ್ಥಾನಮ್ ಆತ್ಮೈವಾಶ್ರಯಃ ಜನ್ಮ ಚ ಆತ್ಮಾ ಅಸ್ಮಾದೇವಾತ್ಮನಃ ಸರ್ವಂ ಸಮುತ್ಪನ್ನಮ್ । ತಥಾ ಚ ಶ್ರುತಿಃ– 'ಆತ್ಮೈವೇದಂ ಸರ್ವಮ್' (ಛಾಂ. ೭-೨೫-೨) ಇತಿ । ಓತಪ್ರೋತೋಽಹಮೇವ ಓತಪ್ರೋತರೂಪೇಣ ವ್ಯವಸ್ಥಿತಃ ಜಗದಾತ್ಮಾ ಯುಷ್ಮಾಕಂ ಜನಯಿತಾ ಅಜರಪ್ರತಿಷ್ಠಃ ಅಜರೇ ಜರಾಮರಣವರ್ಜಿತೇ ಸ್ವೇ ಮಹಿಮ್ನಿ ತಿಷ್ಠತೀತ್ಯಜರಪ್ರತಿಷ್ಠಃ । ತಥಾ ಚ ಶ್ರುತಿಃ– 'ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಸ್ವೇ ಮಹಿಮ್ನೀತಿ ಯದಿ ವಾ ನ ಮಹಿಮ್ನಿ' (ಛಾಂ. ೭-೨೪-೧) ಇತಿ ॥

ಅಣೋಃ ಸೂಕ್ಷ್ಮಾತ್ ಅಣೀಯಾನ್ ಸೂಕ್ಷ್ಮತರಃ ಸುಮನಾಃ ಶೋಭನಂ ರಾಗದ್ವೇಷಮದಮಾತ್ಸರ್ಯಶೋಕಮೋಹಾದಿಧರ್ಮವರ್ಜಿತಂ ಕೇವಲಂ ಚಿತ್ಸದಾನನ್ದಾದ್ವಿತೀಯಬ್ರಹ್ಮಾತ್ಮಾಕಾರಂ ಮನೋ ಯಸ್ಯೇತಿ ಸುಮನಾಃ ಸರ್ವಭೂತೇಷು ಸರ್ವೇಷು ಪ್ರಾಣಿಷು ಹೃದಯಕಮಲಮಧ್ಯೇ ಅಹಮೇವ ಅವಸ್ಥಿತಃ ಆತ್ಮತಯಾ ॥

ಏವಂ ತಾವತ್ ಸ್ವಾನುಭವೋ ದರ್ಶಿತಃ । ಇದಾನೀಂ ನ ಕೇವಲಮಸ್ಮಾಕಮನುಭವ ಏವ ಅತ್ರ ಪ್ರಮಾಣಮ್; ಅನ್ಯೇಽಪ್ಯೇವಮೇವಾವಗಚ್ಛನ್ತೀತ್ಯಾಹ– 'ಪಿತರಂ ಸರ್ವಭೂತಾನಾಂ ಪುಷ್ಕರೇ ನಿಹಿತಂ ವಿದುಃ' ಇತಿ । ಯೇಽಪ್ಯನ್ಯೇ ಸನಕಸನಂದನವಾಮದೇವಾದಯೋ ಬ್ರಹ್ಮವಿದಃ ತೇಽಪಿ ಪಿತರಂ ಸರ್ವಭೂತಾನಾಂ ಸರ್ವಪ್ರಾಣಿನಾಂ ಪಿತಾ ಜನಯಿತಾ ಯಃ ಪರಮೇಶ್ವರಃ ತಂ ಪುಷ್ಕರೇ ಹೃತ್ಪುಣ್ಡರೀಕಮಧ್ಯೇ ನಿಹಿತಂ ವಿದುಃ ಪರಮಾತ್ಮಾನಮಾತ್ಮತ್ವೇನಾವಗಚ್ಛನ್ತೀತ್ಯರ್ಥಃ ॥

( ಭಾಷ್ಯಾರ್ಥ )

ನನ್ನ ಆತ್ಮನಲ್ಲಿ ನೀವು ಇದ್ದುಕೊಂಡಿಲ್ಲವೆಂಬುದು (ಸರಿ) ಹಾಗೂ ನಾನೂ ನಿಮ್ಮಗಳಲ್ಲಿ ಇದ್ದುಕೊಂಡಿಲ್ಲ. ಆದರೂ (ಎಲ್ಲರಿಗೂ) ಆತ್ಮನೇ ಸ್ಥಾನವು. ಆತ್ಮನೇ ಆಶ್ರಯವು. ಹುಟ್ಟೂ ಆತ್ಮನೇ. ಈ ಆತ್ಮನಿಂದಲೇ ಎಲ್ಲವೂ ಉಂಟಾಗಿರುತ್ತದೆ. ಶ್ರುತಿಯೂಕೂಡ– 'ಇದೆಲ್ಲವೂ ಆತ್ಮನೇ' ಎಂದು ಹೇಳುತ್ತಿದೆ. ಹಾಸುಹೊಕ್ಕಾಗಿರುವವನೂ ನಾನೇ– ಎಂದರೆ ಹಾಸುಹೊಕ್ಕಾಗಿ ಹೆಣೆದುಕೊಂಡು

ಇದ್ದುಕೊಂಡಿರುವ, ಜಗತ್ತಿಗೆಲ್ಲ ಆತ್ಮನಾಗಿರುವ, ನಿಮ್ಮಗಳನ್ನು ಉಂಟುಮಾಡಿರುವ ಅಜರಪ್ರತಿಷ್ಠನಾದ– ಎಂದರೆ ಮುಪ್ಪುಸಾವುಗಳಿಲ್ಲದ ತನ್ನ ಮಹಿಮೆಯಲ್ಲಿ ನಿಂತಿರುವವನಾದ್ದರಿಂದ ಅಜರಪ್ರತಿಷ್ಠನು. ಶ್ರುತಿಯೂಕೂಡ– 'ಪೂಜ್ಯನೆ, ಆತನು ಏತರಲ್ಲಿ ಪ್ರತಿಷ್ಠಿತನಾಗಿರುವನು ? (ಎಂದದ್ದಕ್ಕೆ) ತನ್ನ ಮಹಿಮೆಯಲ್ಲಿಯೇ, ಅಥವಾ ಮಹಿಮೆಯಲ್ಲಿಯೂ ಅಲ್ಲ' ಎಂದು ಹೇಳಿದೆ.

ಅಣುವಿಗಿಂತ ಎಂದರೆ ಸೂಕ್ಷ್ಮವಾದದ್ದಕ್ಕಿಂತ ಅಣೀಯವಾದ, ಸೂಕ್ಷ್ಮತರನಾದ ಸುಮನನಾದ, ಎಂದರೆ ರಾಗ, ದ್ವೇಷ, ಮದ, ಮಾತ್ಸರ್ಯ, ಶೋಕ, ಮೋಹವೇ ಮುಂತಾದ ಧರ್ಮಗಳಿಲ್ಲದ ಕೇವಲವಾದ, ಚಿತ್ಸದಾನಂದಾದ್ವಿತೀಯ ಬ್ರಹ್ಮಾತ್ಮಾಕಾರವಾದ ಮನಸ್ಸು ಯಾವನಿಗಿದೆಯೋ ಅವನು ಸುಮನನು ; ಎಲ್ಲಾ ಭೂತಗಳಲ್ಲಿಯೂ ಎಂದರೆ ಪ್ರಾಣಿಗಳಲ್ಲಿಯೂ ಹೃದಯಕಮಲಮಧ್ಯದಲ್ಲಿ ಆತ್ಮಸ್ವರೂಪದಿಂದ ನಾನೊಬ್ಬನೇ ಇದ್ದುಕೊಂಡಿರುತ್ತೇನೆ.

ಈ ರೀತಿಯಾಗಿ ತನ್ನ ಅನುಭವವನ್ನು ತಿಳಿಸಿದ್ದಾಯಿತು. ಈಗ ಈ ವಿಷಯದಲ್ಲಿ ನಮ್ಮ ಅನುಭವವೊಂದೇ ಪ್ರಮಾಣವಲ್ಲ. ಉಳಿದವರೂ ಹೀಗೆಯೇ ತಿಳಿದಿರುತ್ತಾರೆ– ಎಂದು 'ಎಲ್ಲಾ ಪ್ರಾಣಿಗಳಿಗೂ ತಂದೆಯಾಗಿ (ಹೃದಯ) ಕಮಲದಲ್ಲಿದ್ದುಕೊಂಡಿರುವನೆಂದು ತಿಳಿದಿರುವರು' ಎಂಬ (ವಾಕ್ಯದಿಂದ) ಹೇಳುತ್ತಾನೆ. ಉಳಿದವರಾದ ಸನಕ, ಸನಂದನ, ವಾಮದೇವನೇ ಮುಂತಾದ ಬ್ರಹ್ಮಜ್ಞಾನಿಗಳಿರುವರಲ್ಲ– ಅವರೂಕೂಡ ಸರ್ವಭೂತಗಳಿಗೂ ಎಂದರೆ ಎಲ್ಲಾ ಪ್ರಾಣಿಗಳಿಗೂ ತಂದೆಯಾದ ಯಾವ ಪರಮೇಶ್ವರನಿರುವನೋ ಅವನನ್ನು ಪುಷ್ಕರದಲ್ಲಿ ಎಂದರೆ ಹೃದಯಪುಂಡರೀಕದ ನಡುವೆ ಇದ್ದುಕೊಂಡಿರುವನೆಂದು ತಿಳಿಯುವರು. ಪರಮಾತ್ಮನನ್ನು ತನ್ನ ಆತ್ಮನೆಂದೇ ಅರಿತುಕೊಳ್ಳುವರು– ಎಂದಭಿಪ್ರಾಯ.

## ಉಪಸಂಹಾರ

(ಭಾಷ್ಯ)

ತಥಾ ಚ ಶ್ರುತಿಃ ತೇಷಾಮನುಭವಂ ದರ್ಶಯತಿ– 'ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇಽಹಂ ಮನುರಭವಂ ಸೂರ್ಯಶ್ಚ' (ಬೃ. ೧–೪–೧೦) ಇತಿ ಬೃಹದಾರಣ್ಯಕೇ । 'ಏತತ್ಸಾಮ ಗಾಯನ್ನಾಸ್ತೇ' (ತೈ. ೩–೧೦) ಇತಿ ತೈತ್ತಿರೀಯಕೇ ಸಾಮಗಾನೇನ ಸ್ವಾನುಭವೋ ದರ್ಶಿತಃ ಆತ್ಮನಃ ಕೃತಾರ್ಥತ್ವದ್ಯೋತನಾರ್ಥಮ್ । ತಥಾ ಛಾನ್ದೋಗ್ಯೇಽಪಿ– 'ತದ್ಧಾಸ್ಯ ವಿಜಜ್ಞೌ' (ಛಾಂ. ೬ ೧೬–೩) ಇತಿ । ತಲವಕಾರೇ ಚ– 'ಅಹಮನ್ನಮ್' (?)[1] ಇತ್ಯಾದಿನಾ ವಿದುಷಃ ಸ್ವಾನುಭವೋ ದರ್ಶಿತಃ । ತತ್ರೈತೇ ಶ್ಲೋಕಾ ಭವನ್ತಿ–

---

1. 'ಅಹಮನ್ನಮ್' ಎಂಬ ಶ್ರುತಿಯು ತೈತ್ತಿರೀಯೋಪನಿಷತ್ತಿನಲ್ಲಿದೆ. ತಲವಕಾರಶಾಖೆಯು ಸಾಮವೇದಕ್ಕೆ ಸೇರಿರುವುದರಿಂದ ಈ ಮಂತ್ರವನ್ನು ಸಾಮವೇದದಲ್ಲಿ ಹುಡುಕಬೇಕು.

ನಿತ್ಯಶುದ್ಧಬುದ್ಧಮುಕ್ತಭಾವಮೀಶಮಾತ್ಮನಾ ।
ಭಾವಯನ್ ಷಡಿನ್ದ್ರಿಯಾಣಿ ಸಂನಿಯಮ್ಯ ನಿಶ್ಚಲಃ ॥ ೧ ॥
ಅಸ್ತಿ ವಸ್ತು ಚಿದ್ಘನಂ ಜಗತ್ಪ್ರಸೂತಿಕಾರಣಮ್ ।
ನ ನಶ್ವರಂ ತದುದ್ಭವಂ ಜಗತ್ತನೋಽನುದಂ ಚ ಯತ್ ॥ ೨ ॥
ತತ್ಪದೈಕವಾಚಕಂ ಸದಾಽಮೃತಂ ನಿರಞ್ಜನಮ್ ।
ಚಿತ್ತವೃತ್ತಿದೃಕ್ಸುಖಂ ತದಸ್ಮ್ಯಹಂ ತದಸ್ಮ್ಯಹಮ್ ॥ ೩ ॥
ಇತಿ ॥

( ಭಾಷ್ಯಾರ್ಥ )

ಶ್ರುತಿಯೂಕೂಡ ಅವರುಗಳ ಅನುಭವವನ್ನು ತಿಳಿಸುತ್ತಿದೆ : 'ಆ ಇದನ್ನು ಕಂಡುಕೊಂಡು ವಾಮದೇವಋಷಿಯು ನಾನು ಮನುವಾಗಿರುವೆನು, ನಾನು ಸೂರ್ಯನೂ ಆಗಿರುವೆನು- ಎಂದು ತಿಳಿದುಕೊಂಡನು' ಎಂದು ಬೃಹದಾರಣ್ಯಕ (ದಲ್ಲಿದೆ). 'ಈ ಸಾಮವನ್ನು ಗಾನಮಾಡುತ್ತಾ ಇದ್ದುಕೊಂಡಿರುವನು' ಎಂದು ತೈತ್ತಿರೀಯದಲ್ಲಿ ತಾನು ಕೃತಾರ್ಥನಾದೆನೆಂದು ತಿಳಿಸುವದಕ್ಕೋಸ್ಕರ ಸಾಮ ಗಾನದಿಂದ ತನ್ನ ಅನುಭವವನ್ನು (ಜ್ಞಾನಿಯು) ತಿಳಿಸಿರುವದನ್ನು ಹೇಳಿದೆ. ಛಾಂದೋಗ್ಯದಲ್ಲಿಯೂ- 'ಅದನ್ನು ಅರಿತುಕೊಂಡನು' ಎಂದು ಹೇಳಿದೆ. ತಲವ ಕಾರದಲ್ಲಿಯೂಕೂಡ- 'ನಾನು ಅನ್ನವು' ಮುಂತಾದ (ವಾಕ್ಯಗಳಿಂದ) ಅನುಭವ ವನ್ನು ಹೇಳಲಾಗಿದೆ. ಆ ವಿಷಯದಲ್ಲಿ ಈ ಕೆಳಗಿನ ಶ್ಲೋಕಗಳಿವೆ[1] :-

"ನಿತ್ಯಶುದ್ಧಬುದ್ಧಮುಕ್ತನಾದ ಪರಮೇಶ್ವರನನ್ನು ತಾನೆಂದು ಭಾವಿಸುತ್ತಾ ಆರು ಇಂದ್ರಿಯಗಳನ್ನೂ ಬಿಗಿಹಿಡಿದುಕೊಂಡು ನಿಶ್ಚಲನಾಗಿ(ರಬೇಕು.) ಜಗತ್ತಿಗೆ ಕಾರಣವಾದ ಚಿದ್ಘನವಾದ ವಸ್ತುವೊಂದಿದೆ ; ಅದು ನಾಶವಾಗುವದಲ್ಲ ; ಜಗತ್ತು ಅದರಿಂದಲೇ ಹುಟ್ಟಿರುತ್ತದೆ. ಅದು ಅಜ್ಞಾನವನ್ನು ಕಳೆಯತಕ್ಕದ್ದೂ ಆಗಿದೆ ; ತತ್- ಎಂಬ ಶಬ್ದದಿಂದ ಮಾತ್ರವೇ ಹೇಳಲ್ಪಡುವದಾಗಿದೆ ; ಯಾವಾಗಲೂ ಅಮೃತಸ್ವರೂಪವಾಗಿರುತ್ತದೆ ; ನಿರಂಜನವಾಗಿದೆ. ಚಿತ್ತವೃತ್ತಿಗಳನ್ನು ನೋಡು ಪವಾಗಿದೆ, ಸುಖರೂಪವಾಗಿದೆ. ನಾನು ಅದೇ ಆಗಿರುವೆನು, ಅದೇ ಆಗಿರುವೆನು."

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಗೋವಿನ್ದಭಗವ
ತ್ಪೂಜ್ಯಪಾದಶಿಷ್ಯಸ್ಯ ಶ್ರೀಮಚ್ಛಙ್ಕರಭಗವತಃ ಕೃತೌ
ಶ್ರೀಮತ್ಸನತ್ಸುಜಾತೀಯಭಾಷ್ಯೇ
ಚತುರ್ಥೋಽಧ್ಯಾಯಃ

॥ ಸನತ್ಸುಜಾತೀಯಭಾಷ್ಯಂ ಸಂಪೂರ್ಣಮ್ ॥

1. ಈ ಶ್ಲೋಕಗಳನ್ನು ಭಾಷ್ಯಕಾರರೇ ಸ್ವಂತವಾಗಿಯೂ ರಚಿಸಿರಬಹುದು.

# ಪರಿಶಿಷ್ಟ

( ಮಹಾಭಾರತ-ಸನತ್ಸುಜಾತಪರ್ವ-೪೫ನೆಯ ಅಧ್ಯಾಯ )

**ಸೂಚನೆ :–** ಈ ಅಧ್ಯಾಯಕ್ಕೆ ಭಾಷ್ಯಕಾರರು ಭಾಷ್ಯವನ್ನು ಬರೆದಿರುವದಿಲ್ಲ. ಸನತ್ಸುಜಾತೀಯಪರ್ವದಂತೆ ಇದು ಐದನೆಯ ಅಧ್ಯಾಯವಾಗುತ್ತದೆ.

ಸನತ್ಸುಜಾತ ಉವಾಚ—

ಶೋಕಃ ಕ್ರೋಧಶ್ಚ ಲೋಭಶ್ಚ ಕಾಮೋ ಮಾನಃ ಪರಾಸುತಾ |
ಈರ್ಷ್ಯಾ ಮೋಹೋ ವಿಧಿತ್ಸಾ ಚ ಕೃಪಾಽಸೂಯಾ ಜುಗುಪ್ಸತಾ ||೧||

ದ್ವಾದಶೈತೇ ಮಹಾದೋಷಾಃ ಮನುಷ್ಯಪ್ರಾಣನಾಶನಾಃ |
ಏಕೈಕಮೇತೇ ರಾಜೇನ್ದ್ರ ಮನುಷ್ಯಾನ್ ಪರ್ಯುಪಾಸತೇ ||೨||

ಯೈರಾವಿಷ್ಟೋ ನರಃ ಪಾಪಂ ಮೂಢಸಂಜ್ಞೋ ವ್ಯವಸ್ಯತಿ |
ಸ್ಪೃಹಯಾಲುರುಗ್ರಃ ಪರುಷೋ ವಾ ವದಾನ್ಯಃ
ಕ್ರೋಧಂ ಬಿಭ್ರನ್ ಮನಸಾ ವೈ ವಿಕತ್ಥೀ |
ನೃಶಂಸಧರ್ಮಾಃ ಷಡಿಮೇ ಜನಾ ವೈ
ಪ್ರಾಪ್ಯಾಪ್ಯರ್ಥಂ ನೋತ ಸಭಾಜಯನ್ತೇ ||೩||

ಸಂಭೋಗಸಂವಿದ್ವಿಷಮೋಽತಿಮಾನೀ
ದತ್ವಾ ವಿಕತ್ಥೀ ಕೃಪಣೋ ದುರ್ಬಲಶ್ಚ |
ಬಹುಪ್ರಶಂಸೀ ವನಿತಾದ್ವಿಟ್ ಸದೈವ
ಸಪ್ತೈವೋಕ್ತಾಃ ಪಾಪಶೀಲಾ ನೃಶಂಸಾಃ ||೪||

ಧರ್ಮಶ್ಚ ಸತ್ಯಂ ಚ ತಪೋ ದಮಶ್ಚ
ಅಮಾತ್ಸರ್ಯಂ ಹ್ರೀಸ್ತಿತಿಕ್ಷಾಽನಸೂಯಾ |
ದಾನಂ ಶ್ರುತಂ ಚೈವ ಧೃತಿಃ ಕ್ಷಮಾ ಚ
ಮಹಾ ವ್ರತಾ ದ್ವಾದಶ ಬ್ರಾಹ್ಮಣಸ್ಯ ||೫||

ಯೋ ನೈತೇಭ್ಯಃ ಪ್ರಚ್ಯವೇದ್ ದ್ವಾದಶಭ್ಯಃ
ಸರ್ವಾಮಪೀಮಾಂ ಪೃಥಿವೀಂ ಸ ಶಿಷ್ಯಾತ್ |
ತ್ರಿಭಿರ್ದ್ವಾಭ್ಯಾಮೇಕತೋ ವಾರ್ಥಿತೋ ಯೋ
ನಾಸ್ಯ ಸ್ವಮಸ್ತೀತಿ ಚ ವೇದಿತವ್ಯಮ್ ||೬||

ದಮಸ್ತ್ಯಾಗೋಽಥಾಪ್ರಮಾದ ಇತ್ಯೇತೇಷ್ವಮೃತಂ ಸ್ಥಿತಮ್ |
ಏತಾನಿ ಬ್ರಹ್ಮಮುಖ್ಯಾನಾಂ ಬ್ರಾಹ್ಮಣಾನಾಂ ಮನೀಷಿಣಾಮ್ ||೭||

ಸದಾಽಸದ್ವಾ ಪರೀವಾದೋ ಬ್ರಾಹ್ಮಣಸ್ಯ ನ ಶಸ್ಯತೇ |
ನರಕಪ್ರತಿಷ್ಠಾಸ್ತೇ ಸ್ಯುರ್ಯ ಏವಂ ಕುರ್ವತೇ ಜನಾಃ || ೮ ||

ಮದೋಽಷಾ ದಶ ದೋಷಃ ಸ್ಯಾತ್ಪುರಾ ಯೋಽಪ್ರಕೀರ್ತಿತಃ |
ಲೋಕದ್ವೇಷ್ಯಂ ಪ್ರಾತಿಕೂಲ್ಯಮಭ್ಯಸೂಯಾ ಮೃಷಾ ವಚಃ || ೯ ||

ಕಾಮಕ್ರೋಧೌ ಪಾರತನ್ತ್ರ್ಯಂ ಪರಿವಾದೋಽಥ ಪೈಶುನಮ್ |
ಅರ್ಥಹಾನಿರ್ವಿವಾದಶ್ಚ ಮಾತ್ಸರ್ಯಂ ಪ್ರಾಣಿಪೀಡನಮ್ || ೧೦ ||

ಈರ್ಷ್ಯಾ ಮೋದೋಽತಿವಾದಶ್ಚ ಸಂಜ್ಞಾನಾಶೋಽಭ್ಯಸೂಯಿತಾ |
ತಸ್ಮಾತ್ ಪ್ರಾಜ್ಞೋ ನ ಮಾದ್ಯೇತ ಸದಾ ಹ್ಯೇತದ್ ವಿಗರ್ಹಿತಮ್ || ೧೧ ||

ಸೌಹೃದೇ ವೈ ಷಡ್ಗುಣಾ ವೇದಿತವ್ಯಾಃ
ಪ್ರಿಯೇ ಹೃಷ್ಯನ್ತ್ಯಪ್ರಿಯೇ ಚ ವ್ಯಥನ್ತೇ |
ಸ್ಯಾದಾತ್ಮನಃ ಸುಚಿರಂ ಯಾಚತೇ ಯೋ
ದದಾತ್ಯಯಾಚ್ಯಮಪಿ ದೇಯಂ ಖಲು ಸ್ಯಾತ್ || ೧೨ ||

ಇಷ್ಟಾನ್ ಪುತ್ರಾನ್ ವಿಭವಾನ್ ಸ್ಯಾಂಶ್ಚ ದಾರಾನ್
ಅಭ್ಯರ್ಥಿತಶ್ಚಾರ್ಹತಿ ಶುದ್ಧಭಾವಃ |
ತ್ಯಕ್ತದ್ರವ್ಯಃ ಸಂವಸೇನ್ನೇಹ ಕಾಮಾದ್
ಭುಙ್ಕ್ತೇ ಕರ್ಮ ಸ್ವಾಶಿಷಂ ಬಾಧತೇ ಚ || ೧೩ ||

ದ್ರವ್ಯವಾನ್ ಗುಣವಾನೇವಂ ತ್ಯಾಗೀ ಭವತಿ ಸಾತ್ತ್ವಿಕಃ |
ಪಂಚಭೂತಾನಿ ಪಂಚಭ್ಯೋ ನಿವರ್ತಯತಿ ತಾದೃಶಃ || ೧೪ ||

ಏತತ್ಸಮೃದ್ಧಮಪ್ಯೂರ್ಧ್ವಂ ತಪೋ ಭವತಿ ಕೇವಲಮ್ |
ಸತ್ತ್ವಾತ್ ಪ್ರಚ್ಯವಮಾನಾನಾಂ ಸಂಕಲ್ಪೇನ ಸಮಾಹಿತಮ್ || ೧೫ ||

ಯತೋ ಯಜ್ಞಾಃ ಪ್ರವರ್ತನ್ತೇ ಸತ್ಯಸ್ಯೈವಾವರೋಧನಾತ್ |
ಮನಸಾಽನ್ಯಸ್ಯ ಭವತಿ ವಾಚಾನ್ಯಸ್ಯಾಥ ಕರ್ಮಣಾ || ೧೬ ||

ಸಂಕಲ್ಪಸಿದ್ಧಂ ಪುರುಷಮಸಂಕಲ್ಪೋಽಧಿತಿಷ್ಠತಿ |
ಬ್ರಾಹ್ಮಣಸ್ಯ ವಿಶೇಷೇಣ ಕಿಂ ಚಾನ್ಯದಪಿ ಮೇ ಶೃಣು || ೧೭ ||

ಅಧ್ಯಾಪಯೇನ್ಮಹದೇತದ್ಯಶಸ್ಯಂ
ವಾಚೋ ವಿಕಾರಾಃ ಕವಯೋ ವದನ್ತಿ |
ಅಸ್ಮಿನ್ ಯೋಗೇ ಸರ್ವಮಿದಂ ಪ್ರತಿಷ್ಠಿತಂ
ಯೇ ತದ್ವಿದುರಮೃತಾಸ್ತೇ ಭವನ್ತಿ || ೧೮ ||

ನ ಕರ್ಮಣಾ ಸುಕೃತೇನೈವ ರಾಜನ್
ಸತ್ಯಂ ಯಜೇಜ್ಜುಹುಯಾದ್ವಾ ಯಜೇದ್ವಾ ।
ನೈತೇನ ಬಾಲೋಽಮೃತ್ಯುಮಭ್ಯೇತಿ ರಾಜನ್
ರತಿಂ ಚಾಸೌ ನ ಲಭತ್ಯನ್ತಕಾಲೇ ॥ ೧೯ ॥

ತೂಷ್ಣೀಮೇಕ ಉಪಾಸೀತ ಚೇಷ್ಟೇತ ಮನಸಾಽಪಿ ನ ।
ತಥಾ ಸಂಸ್ತುತಿನಿನ್ದಾಭ್ಯಾಂ ಪ್ರೀತಿರೋಷೌ ವಿವರ್ಜಯೇತ್ ॥ ೨೦ ॥

ಅತ್ರೈವ ತಿಷ್ಠನ್ ಕ್ಷತ್ರಿಯ ಬ್ರಹ್ಮಾವಿಶತಿ ಪಶ್ಯತಿ ।
ವೇದೇಷು ಚಾನುಪೂರ್ವ್ಯೇಣ ಏತದ್ವಿದ್ವನ್ ಬ್ರವೀಮಿ ತೇ ॥ ೨೧ ॥

ಇತಿ ಸನತ್ಸುಜಾತಪರ್ವಣಿ ಪಂಚಮೋಽಧ್ಯಾಯಃ

# ಶ್ಲೋಕಾನುಕ್ರಮಣಿಕೆ

( ಸೂಚನೆ : ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಪುಟಗಳನ್ನು ಸೂಚಿಸುವವು. )


| | | | |
|---|---|---|---|
| ಅಂಗುಷ್ಠಮಾತ್ರಃ ಪುರುಷೋ | ೨೧೪ | ಇಮಂ ಯಃ ಸರ್ವಭೂತೇಷು | ೨೨೮ |
| ಅಂಗುಷ್ಠಮಾತ್ರಃ ಪುರುಷೋ | ೨೨೪ | ಉಭೇ ಸತ್ಯೇ ಕ್ಷತ್ರಿಯಾದ್ಯ | ೧೨ |
| ಅಣೋರಣೀಯಾನ್ ಸುಮನಾಃ | ೨೩೧ | ಉಭೌ ಚ ದೇವೌ ಪೃಥಿವೀಂ | ೨೨೫ |
| ಅದರ್ಶನೇ ತಿಷ್ಠತಿ ರೂಪಮಸ್ಯ | ೨೨೭ | ಉಭೌ ಲೋಕೌ ವಿದ್ಯಯಾ | ೨೧೯ |
| ಅದರ್ಮವಿದುಷೋ ಮೂಢಾಃ | ೧೦೯ | ಋಚೋ ಯಜೂಂಷ್ಯಧೀತೇ ಯಃ | ೧೧೮ |
| ಅನಾಢ್ಯಾ ಮಾನುಷೇ ವಿತ್ತೇ | ೧೦೬ | ಏಕಂ ಪಾದಂ ನೋತ್ಕ್ಷಿಪತಿ | ೨೧೨ |
| ಅನ್ತವನ್ತಃ ಕ್ಷತ್ರಿಯ ತೇ | ೧೮೮ | ಏಕಸ್ಯ ವೇದಸ್ಯಾಜ್ಞಾನಾತ್ | ೧೫೩ |
| ಅಪಾನಂ ಗಿರತಿ ಪ್ರಾಣಃ | ೨೧೧ | ಏಕೈಕಮೇತೇ ರಾಜೇನ್ದ್ರ | ೧೩೫ |
| ಅಭಿಜಾನಾಮಿ ಬ್ರಾಹ್ಮಣಮ್ | ೧೬೩ | ಏತೇನ ಬ್ರಹ್ಮಚರ್ಯೇಣ | ೧೮೬ |
| ಅಭಿಧ್ಯಾ ವೈ ಪ್ರಥಮಂ | ೪೭ | ಏತೇನೈವ ಸಗನ್ಧರ್ವಾಃ | ೧೮೬ |
| ಅಮನ್ಯಮಾನಃ ಕ್ಷತ್ರಿಯ | ೫೩ | ಏವಂ ದೋಷಾ ದಮಸ್ಯೋಕ್ತಾಃ | ೧೪೮ |
| ಅಮೃತ್ಯುಃ ಕರ್ಮಣಾ ಕೇಚಿತ್ | ೧೦ | ಏವಂ ಮೃತ್ಯುಂ ಜಾಯಮಾನಂ | ೫೪ |
| ಅರ್ಚತೇ ಯಾಚಮಾನಾಯ | ೧೮೪ | ಏವಂ ರೂಪೋ ಮಹಾನಾತ್ಮಾ | ೨೨೦ |
| ಅವಾರಣೀಯಂ ತಮಸಃ | ೧೯೩ | ಏವಂ ಹ್ಯವಿದ್ವಾನ್ ಪರಿಯಾತಿ | ೫೮ |
| ಅಶ್ರಾನ್ತಃ ಸ್ಯಾದನಾದಾತಾ | ೧೦೪ | ಕಥಂ ಸಮೃದ್ಧಮತ್ಯರ್ಥಂ | ೧೩೦ |
| ಅಸಾಧನಾ ವಾಪಿ ಸಸಾಧನಾ | ೨೦೭ | ಕರ್ಮೋದಯೇ ಕರ್ಮಫಲಾ | ೪೩ |
| ಅಸಿದ್ಧಿಃ ಪಾಪಕೃತ್ಯಂ ಚ | ೧೪೧ | ಕಲ್ಮಷಂ ತಪಸೋ ಬ್ರೂಹಿ | ೧೩೧ |
| ಅಸ್ಮಿನ್ ಲೋಕೇ ತಪಸ್ತಪ್ತಂ | ೧೨೮ | ಕಸ್ಯೈಷ ಮೌನಃ | ೧೧೫ |
| ಅಸ್ಮಿನ್ ಲೋಕೇ ವಿಜಯನ್ತೀಹ | ೧೭೭ | ಕಾಮತ್ಯಾಗಶ್ಚ ರಾಜೇನ್ದ್ರ | ೧೪೪ |
| ಅಹಮೇವಾಸ್ಮಿ ವೋ ಮಾತಾ | ೨೩೦ | ಕಾಮಾನುಸಾರೀ ಪುರುಷಃ | ೫೦ |
| ಆಕಾಂಕ್ಷಾರ್ಥಸ್ಯ ಸಂಯೋಗಾತ್ | ೧೮೭ | ಕಾಲೇನ ಪಾದಂ ಲಭತೇ | ೧೮೩ |
| ಆಖ್ಯಾನಪಞ್ಚಮೈರ್ವೇದೈಃ | ೧೫೧ | ಕೋಽಸೌ ನಿಯುಙ್ಕ್ತೇ ತಮಜಂ | ೬೧ |
| ಆಚಾರ್ಯಯೋನಿಮಿಹ | ೧೭೬ | ಕೋ ಹ್ಯೇವಮನ್ತರಾತ್ಮಾನಂ | ೧೦೧ |
| ಆಚಾರ್ಯಾಯ ಪ್ರಿಯಂ ಕುರ್ಯಾತ್ | ೧೮೩ | ಕ್ರೋಧಃ ಕಾಮೋ ಲೋಭಮೋಹೌ | ೧೩೩ |
| ಆಚಾರ್ಯೇಣಾತ್ಮಕೃತಂ | ೧೭೨ | ಕ್ರೋಧಾದಯೋ ದ್ವಾದಶ | ೧೩೨ |
| ಅತ್ರೈವ ಸ್ಥಾನಂ ಮಮ | ೨೩೧ | ಗತೋಽಭಯಂ ಕರ್ಮಣಾ ಭುಜ್ಯತೇ | ೮೮ |
| ಆದ್ಯಾಂ ವಿದ್ಯಾಂ ವದಸಿ | ೧೭೪ | ಗೂಹನ್ತಿ ಸರ್ಪಾ ಇವ | ೨೧೬ |
| ಆಪೋಽಥಾದ್ಭ್ಯಃ ಸಲಿಲಂ | ೨೦೧ | ಚಕ್ರೇ ರಥಸ್ಯ ತಿಷ್ಠನ್ತಂ | ೨೦೩ |
| ಆಭಾತಿ ಶುಕ್ಲಮಿವ | ೧೮೯ | ಛನ್ದಾಂಸಿ ನಾಮ ದ್ವಿಪದಾಂ | ೧೫೮ |
| ಆಸ್ಯಾದೇಷ ನಿಃಸರತೇ | ೩೯ | ಜ್ಞಾನಂ ಚ ಸತ್ಯಂ ಚ ದಮಃ | ೧೩೮ |
| ಇನ್ದ್ರಿಯೇಭ್ಯಶ್ಚ ಪಞ್ಚಭ್ಯಃ | ೧೫೦ | ಜ್ಞಾನಾದಯೋ ದ್ವಾದಶ ಯಸ್ಯ | ೧೮೪ |

| | |
|---|---|
| ಜ್ಞಾನಾದಿಷು ಸ್ಥಿತೋಽಪ್ಯೇವಂ | ೧೭೦ |
| ಜ್ಞಾನೇನ ಚಾತ್ಮಾನಮುಪೈತಿ | ೨೩೭ |
| ತತೋ ರಾಜಾ ಧೃತರಾಷ್ಟ್ರೋ.... | ೭ |
| ತತ್ಪ್ರತಿಷ್ಠಾ ತದಮೃತಂ | ೩೩೫ |
| ತದರ್ಥಮುಕ್ತಂ ತಪ ಏತ... | ೧೩೬ |
| ತದರ್ಧಮಾಸಂ ಪಿಬತಿ | ೩೦೮ |
| ತದೇತದಹ್ನಾ ಸಂಸ್ಥಿತಂ | ೧೯೪ |
| ತದ್ವೈ ಮಹಾಮೋಹನ.... | ೪೫ |
| ತಪೋ ಮೂಲಮಿದಂ ಸರ್ವಂ.... | ೧೪ |
| ತಸ್ಮಾಚ್ಚ ವಾಯುರಾಯಾತಃ | ೩೩೫ |
| ತಸ್ಮಾತ್ ಸದಾ ಸತ್ಕೃತಃ | ೩೩೩ |
| ತಸ್ಮಿನ್ ಸ್ಥಿತೋ ವಾಪ್ಯಭಯಂ | ೮೫ |
| ತಸ್ಯ ಸಮ್ಯಕ್ ಸಮಾಚಾರಮ್ | ೯೪ |
| ತಸ್ಯೈವ ನಾಮಾದಿ ವಿಶೇಷ... | ೨೩೪ |
| ತೂಷ್ಣೀಂ ಭೂತ ಉಪಾಸೀತ | ೧೬೬ |
| ತೇ ಮೋಹಿತಾಸ್ತದ್ವಶೇ | ೪೧ |
| ದಶೋಽಷ್ಟಾದಶ ದೋಷಃ.... | ೧೪೦ |
| ದೇಹೋಽಪ್ರಕಾಶೋ ಭೂತಾನಾಂ | ೫೧ |
| ದೋಷೈರೇತೈರ್ವಿಯುಕ್ತಂ ತು | ೨೫೦ |
| ದೋಷೋ ಮಹಾನತ್ರ ವಿಭೇದ... | ೬೪ |
| ದ್ವಾದಶ ಪೂಗಾಃ ಸರಿತೋ | ೩೦೭ |
| ದ್ವಾರಾಣಿ ಸಮ್ಯಕ್ ಪ್ರವದನ್ತಿ | ೧೧೪ |
| ದ್ವಿವೇದಾಶ್ಚೈಕವೇದಾಶ್ಚ | ೧೫೩ |
| ನ ಚೇದ್ವೇದಾ ವೇದವಿದಂ | ೨೩೦ |
| ನ ಚ್ಛಂದಾಂಸಿ ವೃಜಿನಾತ್ | ೧೧೯ |
| ನ ವೇದಾನಾಂ ವೇದಿತಾ | ೧೫೯ |
| ನ ವೈ ಮಾನಶ್ಚ ಮೌನಂ ಚ | ೧೧೦ |
| ನ ಸಾದೃಶ್ಯೇ ತಿಷ್ಠತಿ | ೩೦೫ |
| ನಾಭಾತಿ ಶುಕ್ಲಮಿವ | ೧೯೦ |
| ನಾಸ್ಯ ಪರ್ಯೇಷಣಂ ಗಚ್ಛೇತ್ | ೧೬೪ |
| ನಿತ್ಯಮಜ್ಞಾತಚರ್ಯಾ ಮೇ | ೯೮ |
| ನಿವೃತ್ತೇನೈವ ದೋಷೇಣ | ೧೪೯ |
| ನಿಷ್ಕಲ್ಮಷಂ ತಪಸ್ತ್ವೇತತ್ | ೧೪೦ |
| ನೈತದ್ ಬ್ರಹ್ಮ ತ್ವರಮಾಣೇನ | ೧೬೪ |
| ನೈನಂ ಸಾಮಾನ್ಯೃಚೋ ವಾಪಿ | ೧೧೮ |
| ನೈವರ್ಕ್ಷು ತನ್ನ ಯಜುಃಷು | ೧೯೩ |
| ಪಿತಾಮಹೋಽಸ್ಮಿ ಸ್ಥವಿರಃ | ೩೪೦ |
| ಪೂರ್ಣಾತ್ ಪೂರ್ಣಮುದ್ಧರನ್ತಿ | ೧೯೮ |
| ಪ್ರತ್ಯಕ್ಷದರ್ಶೀ ಲೋಕಾನಾಂ | ೧೬೯ |
| ಪ್ರಮಾದಾದ್ವಾ ಅಸುರಾಃ | ೧೫ |
| ಬ್ರಹ್ಮಚರ್ಯೇಣ ಯಾ ವಿದ್ಯಾ | ೧೭೫ |
| ಮನೋಽಷ್ಟಾದಶ ದೋಷಃ ಸ್ಯಾತ್ | ೧೪೩ |
| ಮೌನಾದ್ಧಿ ಮುನಿರ್ಭವತಿ | ೧೬೭ |
| ಯಃ ಸಹಸ್ರಂ ಸಹಸ್ರಾಣಾಂ | ೩೩೬ |
| ಯ ಏನಂ ವೇದ ತತ್ಸತ್ಯಂ | ೧೨೫ |
| ಯತೋ ನ ವೇದಾ ಮನಸಾ | ೧ ೬ |
| ಯತ್ತಚ್ಛುಕ್ರಂ ಮಹಜ್ಜ್ಯೋತಿಃ | ೧೯೬ |
| ಯತ್ರ ಮನ್ಯೇತ ಭೂಯಿಷ್ಠಂ | ೯೪ |
| ಯತ್ರಾಕಥಯಮಾನಸ್ಯ | ೯೫ |
| ಯಥಾ ನಿತ್ಯಂ ಗುರೌ ವೃತ್ತಿಃ | ೧೮೧ |
| ಯಥೋದಪಾನೇ ಮಹತಿ | ೩೨೯ |
| ಯದೇತದದ್ಧಾ ಭಗವಾನ್ | ೮೧ |
| ಯನ್ಮಾಂ ಪೃಚ್ಛಸಿ ರಾಜೇನ್ದ್ರ | ೧೫೦ |
| ಯಮಂ ತ್ವೇಕೇ ಮೃತ್ಯುಂ | ೮ |
| ಯಮಪ್ರಯತಮಾನಂ ತು | ೧೦೮ |
| ಯಸ್ತ್ವೇತೇಭೋಽನುಪ್ರವಸೇತ್ | ೧೪೯ |
| ಯಸ್ಮಾದ್ಧರ್ಮಾನಾಚರನ್ತೀಹ.... | ೭೪ |
| ಯಾನೇನಾಹುರಿಜ್ಯಯಾ.... | ೫೬ |
| ಯಾಮಾಂಶಭಾಗಸ್ಯ ತಥಾ ಹಿ | ೧೬೩ |
| ಯೋ ಯಥಾ ವಾಸ್ತಮಶ್ನನ್ತಿ | ೧೧೫ |
| ಯೇಷಾಂ ಧರ್ಮೇ ನ ಚ ಸ್ಪರ್ಧಾ | ೯೦ |
| ಯೇಷಾಂ ಧರ್ಮೇಷು ವಿಸ್ಪರ್ಧಾ | ೯೦ |
| ಯೋಽನ್ಯಥಾ ಸನ್ತಮಾತ್ಮಾನಂ | ೧೧೩ |
| ಯೋಽಭಿಧ್ಯಾಯನ್ ಉತ್ಪತಿಷ್ಣೂನ್ | ೪೯ |
| ಯೋ ವಾಽಕಥಯಮಾನಸ್ಯ | ೯೭ |
| ಯೋ ವೇದ ವೇದಾನ್ ಸ ಚ... | ೧೬೧ |
| ಲೋಕದ್ವೇಷೋಽಭಿಮಾನಶ್ಚ | ೧೪೦ |
| ಲೋಕಸ್ವಭಾವವೃತ್ತಿರ್ಹಿ | ೧೧೯ |
| ವಿದ್ಯಾದ್ ಬಹುಪಠಂ ತಂ ತು | ೧೫೬ |
| ಶರೀರಮೇತೌ ಕುರುತಃ | ೧೭೮ |
| ಶಿಷ್ಯವೃತ್ತಿಕ್ರಮೇಣೈವ | ೧೮೧ |
| ಶುಕ್ರಾದ್ ಬ್ರಹ್ಮ ಪ್ರಭವತಿ | ೧೯೮ |
| ಶ್ರೀಹರಿ ಮಾನಾರ್ಥಸಂವಾದಾದ್ | ೧೧೩ |
| ಶ್ರೇಯಾಂಸ್ತು ಷಡ್ವಿಧಸ್ತ್ಯಾಗಃ | ೧೪೪ |

| | | | |
|---|---|---|---|
| ಸಂಭೋಗಸಂವಿದ್ ವಿಷ... | ೧೩೬ | ಸನತ್ಸುಜಾತ ಯದಿದಂ | ೮ |
| ಸ ಆವೃಣೋತ್ಯನ್ಮೃತಂ | ೧೭೯ | ಸನತ್ಸುಜಾತ ಯದಿ ಮಾಂ | ೧೭೨ |
| ಸತ್ಯಂ ಧ್ಯಾನಂ ಸಮಾಧಾನಂ | ೧೪೬ | ಸರ್ವಾನ್ ಸ್ವಿಷ್ಟಕೃತೋ ದೇವಾನ್ | ೧೦೭ |
| ಸತ್ಯಾತ್ ಪ್ರಚ್ಯವಮಾನಾನಾಂ | ೧೫೫ | ಸರ್ವಾರ್ಥಾನಾಂ ವ್ಯಾಕರಣಾತ್ | ೧೬೮ |
| ಸತ್ಯಾತ್ಮಾ ಭವ ರಾಜೇನ್ದ್ರ | ೧೪೮ | ಹಿರಣ್ಯಪರ್ಣಮಶ್ವತ್ಥಮ್ | ೨೦೯ |


—:—

ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

**7. ಐತರೇಯೋಪನಿಷತ್ತು :** ಪರಮಾತ್ಮನೇ ಈ ಇಡಿಯ ಜಗತ್ತನ್ನು ಸೃಷ್ಟಿಸಿ ಅದರೊಳಗಿನ ಬೇರೆಬೇರೆಯ ಶರೀರಗಳೊಳಗೆ ಹೊಕ್ಕಿರುವ ಪ್ರಜ್ಞಾನ ರೂಪನು. ಅವನೇ ಅಜ್ಞಾನದಿಂದ ಸಂಸಾರಿಯಾಗಿ ಕಾಣುತ್ತಿರುವನು. ಆ ಪರಮಾತ್ಮನ ನಿಜವಾದ ಸ್ವರೂಪವನ್ನು ನಿರ್ಧರಿಸಿಕೊಂಡರೆ ಸದ್ಯೋಮುಕ್ತಿಯಾಗುವದು ಎಂಬುದನ್ನು ವಿವರಿಸುವ ಉಪನಿಷತ್ತು.

**8. ತೈತ್ತಿರೀಯೋಪನಿಷತ್ತು :** ಇದರಲ್ಲಿ ಶೀಕ್ಷಾವಲ್ಲಿ, ಆನಂದವಲ್ಲಿ ಭೃಗುವಲ್ಲಿ ಎಂಬ ಮೂರು ಭಾಗಗಳಿವೆ. ವೇದಾಂತಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. ಮುಖ್ಯವಾಗಿ ಕರ್ಮಗಳಿಗೂ ಜ್ಞಾನಕ್ಕೂ ಇರುವ ಸಂಬಂಧ, ಪರಬ್ರಹ್ಮಪ್ರಾಪ್ತಿಗೂ ಅಪರಬ್ರಹ್ಮಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವದು – ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಆವಿದ್ಯಕವೆಂಬುದು, ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ – ಎಂಬಿವೇ ಮುಂತಾದ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ.

**9. ಛಾಂದೋಗ್ಯೋಪನಿಷತ್ತು :** ಈ ಉಪನಿಷತ್ತು ಸಾಮವೇದಕ್ಕೆ ಸೇರಿದ್ದು. ಇದರಲ್ಲಿ ಮೊದಲನೆಯ ಐದು ಅಧ್ಯಾಯಗಳಲ್ಲಿ ಕ್ರಮವಾಗಿ ಉಪಾಸನೆಗಳ ವಿವರವನ್ನು ವಿಸ್ತಾರವಾಗಿ ತಿಳಿಸಿ ಅನಂತರ ಆರನೆಯ ಅಧ್ಯಾಯದಿಂದ ಮುಂದೆ ಆತ್ಮಜ್ಞಾನವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿರುವ ವಿಷಯವಾಕ್ಯಗಳು ಬ್ರಹ್ಮಸೂತ್ರಭಾಷ್ಯದಲ್ಲಿ ವಿಚಾರಕ್ಕೆ ಬಹಳವಾಗಿ ತೆಗೆದುಕೊಳ್ಳಲ್ಪಟ್ಟಿವೆ. ತತ್ತ್ವಮಸಿ ಮಹಾವಾಕ್ಯದ ವಿಸ್ತಾರವಾದ ವಿವರವು ಇದರಲ್ಲಿಯೇ ಇರುವದು. ಭೂಮವಿದ್ಯೆ, ದಹರವಿದ್ಯೆ–ಮುಂತಾದ ಅನರ್ಘವಿಷಯಗಳೂ ಇದರಲ್ಲಿ ಅಡಕವಾಗಿವೆ. ಶಾಂಕರ ವೇದಾಂತದ ಅಮೋಘವಿಚಾರಗಳ ಮನನಕ್ಕೆ ಅತ್ಯುತ್ತಮಗ್ರಂಥವಿದು.

**10. ಬೃಹದಾರಣ್ಯಕೋಪನಿಷತ್ತು (೧–೨ನೆಯ ಭಾಗಗಳು) :** ಹೆಸರಿಗೆ ತಕ್ಕಂತೆ ಉಪನಿಷತ್ತುಗಳಲ್ಲೆಲ್ಲ ದೊಡ್ಡದಾಗಿರುವ, ಶುಕ್ಲಯಜುರ್ವೇದಕ್ಕೆ ಸೇರಿರುವ ಈ ಉಪನಿಷತ್ತಿಗೆ ಆಚಾರ್ಯರು ವಿಸ್ತಾರವಾಗಿ ಭಾಷ್ಯವನ್ನು ಬರೆದಿರುತ್ತಾರೆ. ಮಧುಕಾಂಡವೆಂದು ಪ್ರಸಿದ್ಧವಾಗಿರುವ ಇದರ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಆಗಮಪ್ರಧಾನವಾಗಿ ತತ್ತ್ವವನ್ನು ತಿಳಿಸಿರುತ್ತದೆ. ಮೂರು-ನಾಲ್ಕನೆಯ ಅಧ್ಯಾಯಗಳು ಮುನಿಕಾಂಡವೆಂಬ ಹೆಸರಿನಿಂದ ತರ್ಕಪ್ರಧಾನವಾಗಿದ್ದು ಆಗಮೋಪಪತ್ತಿಗಳಿಂದ ತತ್ತ್ವವನ್ನು ವಿವರಿಸುತ್ತವೆ. ಕೊನೆಯ ಎರಡು ಅಧ್ಯಾಯಗಳು ಖಿಲಕಾಂಡವೆಂದು ಪ್ರಸಿದ್ಧವಾಗಿದ್ದು ಉಪಾಸನಾಭಾಗವನ್ನು ಒಳಗೊಂಡಿವೆ. ಆತ್ಮಸ್ವರೂಪವನ್ನು ಅವಸ್ಥಾತ್ರಯಪರೀಕ್ಷೆಯಿಂದ ಗೊತ್ತುಪಡಿಸುವ ವಿಚಾರಸರಣಿಯು ಇದರಲ್ಲಿ ಬಹಳ ಸುಂದರವಾಗಿದೆ. ಯಾಜ್ಞವಲ್ಕ್ಯ–ಮೈತ್ರೇಯಿಯ ಸಂವಾದ, ಜನಕ–ಯಾಜ್ಞವಲ್ಕ್ಯ ಸಂವಾದ– ಮುಂತಾದ ಕಥಾರೂಪಗಳಿಂದ ತತ್ತ್ವವನ್ನು ಹೃದಯಂಗಮವಾಗಿ ಪ್ರತಿಪಾದಿಸುವ ಉಪನಿಷತ್ತಿದು.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

# ಕೆಲವು ಪ್ರಕರಣಗ್ರಂಥಗಳು

**೧. ಪ್ರಕರಣಗಳು-೧ನೆಯ ಸಂಪುಟ :** ಇದರಲ್ಲಿ ಉಪದೇಶಸಾಹಸ್ರಿ - ಗದ್ಯಭಾಗ, ಪದ್ಯಭಾಗಗಳು, ಅಪರೋಕ್ಷಾನುಭೂತಿ, ಅದ್ವೈತಾನುಭೂತಿ – ಎಂಬ ನಾಲ್ಕು ಪ್ರಕರಣಗಳಿವೆ. ಉಪದೇಶಸಾಹಸ್ರಿಯು ವಿಚಾರಶೈಲಿಯಲ್ಲಿ ಪ್ರಸ್ಥಾನತ್ರಯಭಾಷ್ಯಗಳಿಗೆ ಸರಿತೂಗುವದು. ವೇದಾಂತವಿಷಯವು ಅಪರೋಕ್ಷವಾಗಿ ಅನುಭವಕ್ಕೆ ಬರುವದೆಂಬುದನ್ನು ಅಪರೋಕ್ಷಾನುಭೂತಿಯು ತಿಳಿಸುತ್ತದೆ. ಅದ್ವೈತಾನುಭೂತಿಯೂ ಅನುಭವಕ್ಕೇ ಪ್ರಾಧಾನ್ಯವನ್ನು ಕೊಟ್ಟಿರುವ ಪ್ರಕರಣ.

**೨. ಪ್ರಕರಣಗಳು-೨ನೆಯ ಸಂಪುಟ :** ಇದರಲ್ಲಿ ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ, ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ – ಈ ಆರು ಪ್ರಕರಣಗಳಿವೆ. ಪ್ರತಿಯೊಂದಕ್ಕೂ ಅರ್ಥ, ಟಿಪ್ಪಣಿ, ವಿಚಾರಪ್ರಚೋದಕವಾದ ಪೀಠಿಕೆ – ಮುಂತಾದವುಗಳಿವೆ.

**೩. ಪ್ರಕರಣಗಳು-೩ನೆಯ ಸಂಪುಟ ಅಥವಾ ವಿವೇಕಚೂಡಾಮಣಿ :** ಶ್ರೀಶಂಕರಾಚಾರ್ಯರಚಿತವೆಂದು ಪ್ರಸಿದ್ಧವಾಗಿರುವ ಈ ಗ್ರಂಥವು ತನ್ನ ಸರಳವಾದ ಶೈಲಿಯಿಂದ ತತ್ತ್ವಪ್ರತಿಪಾದನೆಮಾಡುವದರಿಂದ ಬಹುಜನಪ್ರಿಯವಾಗಿದೆ. ಆದರೆ 'ಇದು ಗೀತಾತಾತ್ಪರ್ಯಬೋಧಿನೀಕರ್ತೃಗಳಾದ ಶಂಕರಾನಂದರ ಕೃತಿ' ಎಂಬುದನ್ನು ಶ್ರೀಶ್ರೀಗಳವರು ಸಾಧಾರವಾಗಿ ಇದರ ಪೀಠಿಕೆಯಲ್ಲಿ ಪ್ರತಿಪಾದಿಸಿದ್ದಾರೆ.

**೪. ಪ್ರಕರಣಗಳು-೪ನೆಯ ಸಂಪುಟ :** ಇದರಲ್ಲಿ ಜೀವನ್ಮುಕ್ತಾನಂದಲಹರಿ ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀಮಾಲೆ, ಅನಾತ್ಮಶ್ರೀವಿಗರ್ಹಣ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನುಸಂಧಾನ, ಮಹಾವಾಕ್ಯದರ್ಪಣ - ಈ ರೀತಿ ಹನ್ನೊಂದು ಪ್ರಕರಣಗಳು ಅರ್ಥಸಮೇತ ಇವೆ.

**೫. ಪ್ರಕರಣಗಳು-೫ನೆಯ ಸಂಪುಟ :** **ಸರ್ವವೇದಾಂತಸಿದ್ಧಾಂತಸಾರಸಂಗ್ರಹ**ವೆಂಬ ಅಪೂರ್ವಪ್ರಕರಣವನ್ನು ಈ ಸಂಪುಟದಲ್ಲಿ ಅಳವಡಿಸಲಾಗಿದೆ. ಅಧ್ಯಾರೋಪಾಪವಾದ, ಅವಸ್ಥಾತಯ (ಪಂಚಕೋಶ) ಪರಿಶೀಲನೆಯಿಂದ ವಿಶ್ವವೈಶ್ವಾನರ, ತೈಜಸಹಿರಣ್ಯಗರ್ಭ, ಪ್ರಾಜ್ಞ-ಈಶ್ವರ ಎಂಬ ಸಮಷ್ಟಿವ್ಯಷ್ಟ್ಯುಪಾಧಿಗಳಿಂದ ಆತ್ಮವಿಭಾಗ ಮತ್ತು ಅದರ ಐಕ್ಯವನ್ನು ಪ್ರತಿಪಾದಿಸಿ ಶ್ರವಣಮನನನಿದಿಧ್ಯಾಸನಗಳನ್ನು ವಾಕ್ಯಾರ್ಥಜ್ಞಾನಕ್ಕೆ ಸಾಧನವಾಗಿ ಹೇಳಿರುವದಲ್ಲದೆ ಸಮಾಧಿಯ ವಿವರಗಳನ್ನೂ ತಿಳಿಸಿದೆ. ವೇದಾಂತವಿಚಾರಪರಿಶೀಲಕರು ಅವಶ್ಯವಾಗಿ ಓದಬೇಕಾದ ಗ್ರಂಥವಿದು.

**೬. ಪ್ರಕರಣಗಳು-೬ನೆಯ ಸಂಪುಟ :** (ವಿಷ್ಣುಸಹಸ್ರನಾಮಭಾಷ್ಯ) ಶ್ರೀಶಂಕರಾರ್ಯವಿರಚಿತವೆಂದು ಪ್ರಸಿದ್ಧವಾಗಿರುವ ವಿಷ್ಣುಸಹಸ್ರನಾಮಭಾಷ್ಯವನ್ನು ಮೂಲ, ಅನುವಾದ, ಟಿಪ್ಪಣಿ- ಇತ್ಯಾದಿಗಳೊಡನೆ ಕೊಡಲಾಗಿದೆ. ಸಹಸ್ರನಾಮಗಳ ಅರ್ಥವನ್ನು ತಿಳಿಸುವ ಅತ್ಯಮೂಲ್ಯಗ್ರಂಥವಿದು.

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

**ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ.**